ಕೊಡವರ ಸಂಸ್ಕಾರಗಳು

ಡಾ. ಕಾವೇರಿ ಪ್ರಕಾಶ್

ಕರ್ನಾಟಕ ಸರ್ಕಾರ

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

ಕೊಡವರ ಸಂಸ್ಕಾರಗಳು

ಡಾ. ಕಾವೇರಿ ಎನ್.ಪಿ.
ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಾಪೋಕ್ಲು
ಕೊಡಗು ಜಿಲ್ಲೆ

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ
ಮಡಿಕೇರಿ

KODAVA SAMSKARAGALU: *Written by Dr. Kaveri N.P., Asst Professor in Kannada, Govt First Grade College, Napoklu, Kodagu District. Published by Kodava Sahithya Academi, Madikeri during - 2016*

Size : $\frac{1}{8}$ *Demmy*

Paper : 70 GSM NS Maplitho
Pages : xx + 360 = 380

ಮೊದಲನೇ ಮುದ್ರಣ : 2016

ಬೊಳಿಪಡ್ತ್‌ನವು : ರಿಜಿಸ್ಟ್ರಾರ್, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಸ್ಕೌಟ್‌ಭವನ, ಮ್ಯಾನ್ಸ್ ಕಾಂಪೌಂಡ್, ಮಡಿಕೇರಿ-571201, ಕೊಡಗು

ದೂರವಾಣಿ : 0872-229074

ಎಲ್ಲಾ ಹಕ್ಕ್‌ನ ಕಾತ್ ಬೆಚ್ಚಿತ್

All Rights reserved

ಪ್ರಕಟಣಾ ಸಮಿತಿ : ಶ್ರೀ ಬಿದ್ದಾಟಂಡ ಎಸ್. ತಮ್ಮಯ್ಯ (ಅಧ್ಯಕ್ಷ)
ಶ್ರೀ ಉಮರಬ್ಬ (ರಿಜಿಸ್ಟ್ರಾರ್)
ಡಾ॥ ಮೇಚಿರಸುಭಾಷ್ ನಾಣಯ್ಯ
ಶ್ರೀ ಪಡಿಞರಂಡ ಜಿ. ಅಯ್ಯಪ್ಪ
ಡಾ. ತೀತಿರ ರೇಖಾ ವಸಂತ್
ಕು. ಚೀರಮ್ಮನ ವಾಣಿ ಚಂಗುಮಯ್ಯ
ಶ್ರೀಮತಿ ಮುಲ್ಲೇಂಗಡ ಬೇಬಿ ಚೋಂದಮ್ಮ
ಶ್ರೀ ಮಾದೇಟಿರ ಬೆಳ್ಳಿಯಪ್ಪ
ಶ್ರೀ ಮದ್ರೀರ ಸಂಜು ಬೆಳ್ಳಿಯಪ್ಪ
ಶ್ರೀ ಕುಡಿಯರ ಬೋಪಯ್ಯ
ಶ್ರೀಮತಿ ಮೂಕೈರಿರ ಲೀಲಾವತಿ
ಶ್ರೀಮತಿ ಮೇದರ ರಾಣಿ
ಶ್ರೀ ಚೋವಂಡ ಎಸ್. ಬೋಪಯ್ಯ
ಶ್ರೀ ಕಾಳಚಂಡ ಜಿ. ಕಾರ್ಯಪ್ಪ
ಶ್ರೀ ಅಣ್ಣೀರ ಹರೀಶ್ ಮಾದಪ್ಪ

ಕ್ರಯ : ₹ 200

ಮುದ್ರಕರು :
ಗುಪ್ತ ಆಫ್‌ಸೆಟ್ ಪ್ರಿಂಟರ್ಸ್
ಎಸ್.ಜೆ.ಹೆಚ್. ರೋಡ್, ವಿದ್ಯಾರಣ್ಯಪುರಂ
ಮೈಸೂರು - 570 008
☎: 0821-2482023

ಅರ್ಪಣೆ

ಕಾವೇರಿ ಮಾತೆಯ ಮಡಿಲಲ್ಲಿ
ಅರ್ಥಪೂರ್ಣ ಬದುಕನ್ನು ರೂಪಿಸಿ
ನನಗೆ ಸ್ಫೂರ್ತಿಯ ಸೆಲೆಯಾದ
ದಿ|| ಶ್ರೀ ಕಾಡ್ಯಮಾಡ ಬೆಳ್ಳಿಯಪ್ಪ ಹಾಗೂ ಸೀತಾ ಬೆಳ್ಳಿಯಪ್ಪ ಅವರ
ಕರಕಮಲಗಳಿಗೆ

ಅಧ್ಯಕ್ಷಂಡ ತಕ್ಕ್

ಡಾ॥ ಕಾವೇರಿ ಪ್ರಕಾಶ್ ಕೊಡ್‌ಗ್‌ಲೇ ಪುಟ್ಟಿತ್, ಕೊಡ್‌ಗ್‌ಲೇ ವಿದ್ಯಾಭ್ಯಾಸ ಮಾಡಿತ್ ಇಕ್ಕ ನಾಪೋಕ್ಲು ಸರ್ಕಾರಿ ಪ್ರಥಮ ದರ್ಜೆ ಕಾಲೇಜ್‌ಲ್ ಪ್ರಾಧ್ಯಾಪಕಿಯಾಯಿತ್ ಏಳ್ ಕಾಲತಿಂಜ ಸೇವೆ ಮಾಡಿಯಂಡುಂಡ್. ಮೈಸೂರು ವಿಶ್ವವಿದ್ಯಾನಿಲಯತ್‌ಲ್ ಸ್ನಾತಕೋತ್ತರ ಪದವಿ ಪಡಂದಿತ್ ರಾಷ್ಟ್ರೀಯ ಅರ್ಹತಾ ಪರೀಕ್ಷೆ (NET) ಪಾಸ್ ಮಾಡಿತ್ ಮೈಸೂರು ವಿಶ್ವವಿದ್ಯಾನಿಲಯತಿಂಜ ಡಾಕ್ಟರೇಟ್ ಪದವಿ ಪಡೆಂದಿತ್.

ಮೂಲತಃ ಸಂಶೋಧಕಿಯಾಯಿತುಳ್ಳ ಇಯಂಗ ಕೊಡವ ಭಾಷೆ, ಸಂಸ್ಕೃತಿ, ಕೊಡಗ್‌ರ ದಶಕತ್‌ರ ಸೃಜನ ಸಾಹಿತ್ಯ, ಮಹಾಚೇತನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಕೊಡಗ್‌ರ ನಮ್ಮೆ ನಾಳ್, ಕೊಡವ ಆಹಾರ ಪದ್ಧತಿ, ಕೊಡವ ಭಾಷೆಯ ಸ್ವರೂಪ, ಕೊಡವ ಮನೆತನ, ಕೊಡಗಿನ ಗೌರಮ್ಮ, ಭಾರತೀಸುತಂಡ ಕಾದಂಬರಿ ಈ ವಿಚಾರಕ್ ಸಂಬಂಧ ಪಟ್ಟಂತ ಪ್ರಬಂಧತ್‌ನೆಲ್ಲಾ ಮಂಡಣೆ ಮಾಡಿತ್, ರಾಜ್ಯ ಮಟ್ಟತ್‌ರ, ರಾಷ್ಟ್ರ ಮಟ್ಟತ್‌ರ ಜರ್ನಲ್‌ಲೆಲ್ಲಾ ಇಯಂಗಡ ಸಂಶೋಧನಾ ಎಳ್ತ್ ಪ್ರಕಟ ಆಯಿತ್. ಇಯಂಗಡ "ಸಾಹಿತ್ಯ ಸವ್ಯಸಾಚಿ ಭಾರತೀಸುತ" ಎಣ್ಣುವ ಕೃತಿ ಕೊಡಗ್‌ಲ್ ನಡ್‌ಂದ 80 ನೇ ಕನ್ನಡ ಸಾಹಿತ್ಯ ಸಮ್ಮೇಳನತ್‌ಲ್ ಪ್ರಕಟ ಆಯಿತ್.

ಇಯಂಗಡ ವಡಿಯಶ್ರೀ ಪ್ರಕಾಶ್ ಕ್ಯಾತನಹಳ್ಳಿ ಓರ್ ವಾಣಿಜ್ಯೋದ್ಯಮಿ ಯಾಯಿತುಂಡ್. ತನ್ಮಯ್‌ಗೌಡ, ಅಕ್ಷಯ್‌ಗೌಡ ಎನ್ನುವ ಮೋನಿಯಂಗಡ ಕೂಡ ರಃ ದಂಪತಿಯ ಮೈಸೂರಲ್ ಸಂಸಾರ ಮಾಡಿಯಂಡುಂಡ್.

ಕೊಡವ ಜನಾಂಗ ಒರ್ ವಿಶಿಷ್ಟ ಜನಾಂಗ . ಡಾ॥ ಕಾವೇರಿ ಪ್ರಕಾಶ್ ಅಯಿಂಗ ಕೊಡವ ಪದ್ಧತಿನ ಬಾರಿ ಚಾಯಿತೆ ಅರ್‌ಂಜಿತ್, ಕ್ಷೇತ್ರಕಾರ್ಯ ಮಾಡಿತ್ ಕೊಡವ ನೆಲೆ, ಆಚಾರ ವಿಚಾರ, ನಡೆನುಡಿ, ಪದ್ಧತಿ ಪರಂಪರೆ, ನಮ್ಮೆನಾಳ್, ಜಾನಪದ ಸಂಸ್ಕೃತಿ, ಕೊಡವ ಸಂಸ್ಕಾರತ್ ಎಲ್ಲಾ ಖನಪಟ್ಟ ವಿಷಯತ್‌ನ ಈ ಕೃತಿಲ್ ಎಳ್‌ದಿತ್ ತಂಗಡ ಮಿಂಞಲ್ ಬೆಚ್ಚಿತ್.

ಇದ್ ಏದೇದ್ ಕಾಲಕೂ ಅಳಿಯತೆ ಉಳಿಯುವಚಿತ ದಾಖಲೆ ಆಯಿತುಂಡ್. ಇಕ್ಕತ್‌ರ ಯುವ ಪೀಳಿಗೆಕ್ ಪಿಂಞ ಮಿಂಞತ್‌ರ ಪೀಳಿಗೆಕೂ ಇಲ್ಲಿ ಎಳ್‌ದ್‌ನ ಪೂರ್ವಾಪರ ವಿಚಾರ ಸ್ಥಿರವಾಯಿತ್ತಿಪ್ಪ.

ಕೊಡಗ್'ರ ಸಂಸ್ಕೃತಿ, ಸಂಸ್ಕಾರ ನಾಶ ಆಕತೆ ಧೀರ್ಘವಾಯಿತಿರೊಂಡು ಎಣ್ಣುವ ಮೂಲ ಉದ್ದೇಶತ್‌ಲ್ 'ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ' ಈ ಕೃತಿನ ಬೊಳಿ ಪಡ್‌ತುವಕ್ ಮಿಂಞಕ್ ಬಂತ್. ಡಾ.ಕಾವೇರಿ ಪ್ರಕಾಶ್ ಅಯಿಂಗ ಇಂಞ ಮಿಂಞಕ್ ನಲ್ಲ ನಲ್ಲ ಮಾದರಿರ ಕೃತಿ ಬೊಳಿ ಪಡ್‌ತಡ್‌ಂದ್ ನಾಡ ಬಯಕೆ. ಈ ಕೃತಿನ ಚಾಯೋಡೆ ಪ್ರಿಂಟ್ ಮಾಡಿತಂದ ಗುಪ್ತ ಆಫ್‌ಸೆಟ್ ಪ್ರಿಂಟರ್ಸ್‌ಕಾರಕೂ ನಾಡ ವಂದನೆ ಎಲ್ಲರೂ ಈಂಡ ಪ್ರಯೋಜನ ಪಡ್‌ಂದವೊಂಡೊಂದ್ ಬಯಂದವಿ.

ಶ್ರೀ ಬಿದ್ದಾಟಂಡ ಎಸ್.ತಮ್ಮಯ್ಯ
ಅಧ್ಯಕ್ಷಂಗ
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ
ಮಡಿಕೇರಿ.

ಜನಾಂಗೀಯ ಅಧ್ಯಯನದ
ಅಚ್ಚುಕಟ್ಟಿನ ಸಾಂಸ್ಕೃತಿಕ ಚಿತ್ತಾರ

ಯಾವುದೇ ಪ್ರಾದೇಶಿಕ ಜನಾಂಗದ ಬದುಕಿನ ಸಮಗ್ರ ಚಿತ್ರಣ ಸಾಂಸ್ಕೃತಿಕ ಅಧ್ಯಯನದ ವಲಯಕ್ಕೆ ಸಲ್ಲುತ್ತದೆ. ಅದರ ವಿವಿಧ ಪಾತಳಿಗಳಲ್ಲಿ, ಭರತ-ಇಳಿತಗಳಲ್ಲಿ ನಾವು ತನ್ಮಯಗೊಂಡಾಗ, ಒಳಹುರುಳು ದಕ್ಕುತ್ತದೆ. ಒಳನೋಟದ ಭಾಷೆ ಉಕ್ಕುತ್ತದೆ. ಅಧ್ಯಯನಕ್ಕೆ ಒಳಗಾದ ಭೌಗೋಳಿಕ ಪರಿಸರ ಹಾಗೂ ಜನಾಂಗದ ನೆಲೆ, ನಿಸರ್ಗದ ಚೆಲುವಿನ ಬೀಡಾಗಿದ್ದರಂತು, ಅದು ಕೇವಲ ಪ್ರೇಕ್ಷಣೀಯ ಸೊಬಗಷ್ಟೇ ಆಗದೆ ಬಾವಣಿಕೆಯ ಬಲವನ್ನು ಮೌಲ್ಯವನ್ನು ಸಹಜವಾಗಿ ತೋರುತ್ತದೆ.

ಕೊಡಗಿನ ವಿಷಯ ಭಾರತದ, ಕರ್ನಾಟಕದ ಅಂದದ ಬೀಡಿನ ವಿಷಯ. ಅಲ್ಲಿನ ಕಾಡು, ಗಿಡ, ಮರ, ತೊರೆ, ಹೊಳೆ, ಬೆಳೆ, ಮಳೆ, ಪ್ರಾಣಿ, ಪಕ್ಷಿ, ಬೆಟ್ಟ, ಗುಡ್ಡ, ಜನ ಯಾವುದೆಲ್ಲವೂ, ವೈವಿಧ್ಯದ ಮೈಸಿರಿ. ಈ ಕಾರಣವೆ ಕೊಡಗಿನದು ಪ್ರಾಕೃತಿಕ ಪ್ರಖರ ಸೌಂದರ್ಯ. ಅಲ್ಲಿನ ಇತಿಹಾಸ, ಪ್ರಾಗಿತಿಹಾಸ ಬಹುಪ್ರಾಚೀನ. ಅಲ್ಲಿ ಅದರ ಮೇಲೆ ಮೂಡಿರುವ ಸಾಹಿತ್ಯ, ಬಾಳಿದವರ ಕುರಿತ ಸಾಹಿತ್ಯ. ಅಕ್ಷರಲೋಕದ ಅಂಗಳದಲ್ಲಿ ವಿಶಿಷ್ಟ ಛಾಪನ್ನು ಮೂಡಿಸಿವೆ. ಅದನ್ನು ಕಣ್ತೆರೆದು ನೋಡಬೇಕು, ಅರಗಿಸಿಕೊಳ್ಳಬೇಕು. ವ್ಯಾಖ್ಯಾನಿಸಬೇಕು. ಅಂತಾಗಿ ಕೊಡಗಿನಲ್ಲಿ ಶಾಸ್ತ್ರಗ್ರಂಥ, ಕಾವ್ಯ, ಕಥೆ, ನಾಟಕ, ಕಾದಂಬರಿ, ಜಾನಪದ, ಇತಿಹಾಸ, ಕ್ಷೇತ್ರಮಹತ್ವ ಕುರಿತೆಲ್ಲ ಕೃತಿಗಳು ಸಾಕಷ್ಟು ಹಳಮೆಯನ್ನು ಹೊಂದಿವೆ. ಹೊಸ ಬೆಳೆಯನ್ನು ಕೊಟ್ಟಿವೆ. ಅವು ಪ್ರಾಚೀನ ಅರ್ವಾಚೀನ ಬೆಡಗಿನವಾಗಿವೆ. ಈ ಬಗೆಗಿನ ಅಧ್ಯಯನ ನಡೆದಿದ್ದರೂ, ನಡೆಯುತ್ತಿದ್ದರೂ ಅದರ ಬಾಹುಳ್ಯವಂತು ವಿಸ್ತಾರವಾಗಿಯೇ ಇದೆ.

ಇಂಥ ಕೊಡಗಿನ ಬದುಕು, ಮಲೆಸೀಮೆಯ ಬದುಕು; ನದಿಗಳು ತುಳುಕಿ ಬಂದು ಹರಿದ ನೆಲೆಯ ಬದುಕು. ಸಹಜವಾಗಿ, ಬುಡಕಟ್ಟಿನ ಮೂಲದ ಬದುಕು; ಸ್ಥಿತ್ಯಂತರಗಳನ್ನು ಹೊಂದಿದ ಬದುಕು ಜೀವನಾನುಭವಗಳು, ಅದರಲ್ಲಿದೆ. ಬುಡಕಟ್ಟಿನ ಮೂಲದಿಂದ ಉದಿಸಿದ ಮೂಲನಿವಾಸಿಗಳಲ್ಲಿ ಕೊಡವರು, ಒಂದು ಪ್ರಮುಖ ಜನಾಂಗವಾಗಿ ತಮ್ಮ ಸಾಂಸ್ಕೃತಿಕ ಹೊಳಪನ್ನು ತೋರಿದ್ದಾರೆ. ಆ ಹೊಳಪಿನ ವಿಸ್ತಾರವನ್ನು, ಸಂಶೋಧಕಿ ಡಾ. ಎನ್.ಪಿ. ಕಾವೇರಿ ಅವರು, 'ಕೊಡವರ ಸಂಸ್ಕಾರಗಳು: ಸಮಾಜೋ-ಸಾಂಸ್ಕೃತಿಕ ಅಧ್ಯಯನ', ಎಂಬ ಶೀರ್ಷಿಕೆಯಡಿ ಸಾಂಸ್ಕೃತಿಕವಾಗಿ ಅಚ್ಚುಕಟ್ಟಾಗಿ ತೋರಿದ್ದಾರೆ. ಈ ಅಧ್ಯಯನಕ್ಕಾಗಿ ಅವರಿಗೆ ಮೈಸೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿಯೂ ಒದಗಿದೆ. ಪಿಎಚ್.ಡಿ. ಪ್ರಬಂಧದ ಶಿಸ್ತಿಗನುಗುಣವಾಗಿ, ಅಧ್ಯಯನ ಕಾರ್ಯಕ್ಷೇತ್ರದ ವಿವರ, ಉದ್ದೇಶ, ಈವರೆಗೆ ಕೊಡಗಿನ ವಿವಿಧ ಮುಖಗಳ ಬಗ್ಗೆ ನಡೆದಿರುವ ಅಧ್ಯಯನ, ಶೋಧಗಳು,. ಪ್ರಕಟಿತ ಬರಹಗಳ ಬಗ್ಗೆ

ನಿರೂಪಿಸಿದ್ದಾರೆ. ಏಳು ಅಧ್ಯಾಯಗಳಲ್ಲಿ ಅನುಬಂಧಗಳೊಡನೆ ತಮ್ಮ ಶೋಧವನ್ನು ಮಂಡಿಸಿದ್ದಾರೆ. ಪ್ರಮುಖವಾಗಿ ಕೊಡವ ಸಮುದಾಯವನ್ನು ಕೇಂದ್ರೀಕರಿಸಿಕೊಂಡು ಆ ಸಮುದಾಯದ ಅನನ್ಯತೆಯನ್ನು ವಿವೇಚಿಸಿದ್ದಾರೆ; ಮೂಲ ಆಕರಗಳು (ಕಡಿುಟಚಿಡಿಥಿ ,ಲಣಾಡಿಛಿಜ), ಅನುಮೂಲ ಆಕರಗಳು (ಖಜಛಿಒಟಿಜಚಿಡಿಥಿ ,ಲಣಾಡಿಛಿಜ) ಹಾಗೂ ಕ್ಷೇತ್ರಕಾರ್ಯದ ಬೆಂಬಲದಿಂದ, ಸಂದರ್ಶನಗಳಿಂದ ಪುಷ್ಟಿಪೂರಣ ಮಾಡಿದ್ದಾರೆ; ತಾಜಾತನ ತೋರಿದ್ದಾರೆ.

ಭೌಗೋಳಿಕ ಹಿನ್ನೆಲೆಯಲ್ಲಿ ಕೊಡಗು ಸ್ಥಳನಾಮವನ್ನು ಈವರೆಗೆ ಇರುವ ಉಕ್ತ ಆಕರಗಳನ್ನು ಬಳಸಿ 'ಒಳಪಶ್ಚಿಮದ ನಾಡು' ಎಂಬ ಅರ್ಥದಲ್ಲಿ ವಿದಿತಗೊಳಿಸಿದ್ದಾರೆ. ಲಭ್ಯ ಆಕರಗಳ ಅಧ್ಯಯನದ ದೃಷ್ಟಿಯಿಂದ ಅದು ಸೂಕ್ತವಾಗಿದೆ. ಪರ್ಯಾಯ ಚಿಂತನೆಗಳು ಪ್ರಕಟವಾದಾಗ, ಹೊಸ ಆಕರಗಳು ಒದಗಿದಾಗ ಹಿಂದಿನ (ತತ್ಕಾಲ!) ತೀರ್ಮಾನವನ್ನು ಪುಷ್ಟೀಕರಿಸಬಹುದು. ಅಥವಾ ಹೊಸ ನಿರೂಪಣೆಯನ್ನು ನೀಡಬಹುದು. ಈ ದೃಷ್ಟಿಯಿಂದ ತೀರ ಈಚೆಗಿನ ಚಿಂತನೆ, ಶೋಧಗಳು 'ಕೊಡಗು' ಹೆಸರನ್ನು ಕಾವೇರಿ ನದಿದಿಶಾ ಹರಿವಿನ ಮೂಲಕ್ಕೆ ಆರೋಪಿಸಿ, 'ಕಾವೇರಿ'ಯ ಕಾರಣ ಆ ಹೆಸರು ಬಂದಿದೆ ಎಂದಿರುವುದುಂಟು. ಕಾವೇರಿಗೆ 7.5 ಮಿಲಿಯನ್ ವರ್ಷಗಳ ಹಿಂದೆ ಪಶ್ಚಿಮಘಟ್ಟಗಳು ಏರೆತ್ತರವಾಗುವ ಮುನ್ನ ಪಶ್ಚಿಮದಿಸೆಯಲ್ಲಿ ಪ್ರಮುಖವಾಗಿ ಎರಡು ಕವಲುಗಳಿದ್ದು, ಒಂದು ಕವಲು ಪೂರ್ವಕ್ಕಿದ್ದು ಒಟ್ಟು ಮೂರು ಕವಲುಗಳನ್ನು ಹೊಂದಿತ್ತು. ಆದರೆ ಪೌರಾಣಿಕವಾಗಿ ಅಗಸ್ತ್ಯನ ಪ್ರಸ್ತಾಪ ಬಂದಾಗ ಕಾವೇರಿ, ಕವೇರ ಪುತ್ರಿ ಎಂಬೆಲ್ಲ ಹೆಸರುಗಳು (ಆಕೆಯ ಉಷ್ಣಪ್ರಕೃತಿಯ ಕಾರಣವೂ ಸೇರಿದಂತೆ) ಕಾಣಬರುತ್ತವೆ. ಆ ಮುನ್ನ ಕಾವೇರಿಗೆ ಇದ್ದ ಹೆಸರೇನು? ಎಂಬುದು ನನ್ನಲ್ಲಿ ಹುಟ್ಟಿದ ಪ್ರಶ್ನೆ. 'ಕುಡ' ಎಂದರೆ ಪಶ್ಚಿಮ. ಪ್ರಮುಖ ಕವಲುಗಳು ಪಶ್ಚಿಮದಲ್ಲಿ ಹರಿಯುತ್ತಿದ್ದ ಕಾರಣ ಕಾವೇರಿಗೆ 'ಕುಡಹೊಳೆ' ಎಂಬ ಹೆಸರಿದ್ದಿರಬೇಕು. ಪಶ್ಚಿಮಘಟ್ಟಗಳ ಏರು ಹೆಚ್ಚಿದಾಗ, ಪಶ್ಚಿಮದ ಕವಲುಗಳ ಪಥವನ್ನು ಬರಹೊಳೆ ಆಕ್ರಮಿಸಿತು (ಡಿುತಜಡಿ ಛಿಚಿಒಣಾಡಿಜ). ಅಂತಾಗಿ 'ಕುಡ'ಹೊಳೆ, 'ಕೊಡಗು' ಎಂಬ ಸ್ಥಳನಾಮಕ್ಕೆ ನಿಸರ್ಗವಾಚಿಯಾಗಿ ಹೆಸರು ಕೊಡಲು ಕಾರಣವಾಯಿತು ಎಂಬುದು ನನ್ನ ಪ್ರತಿಪಾದನೆ. ಇದು ಬುಡಕಟ್ಟು ಮೂಲದ ಕೊಡವ ಮೂಲನಿವಾಸಿಗಳಲ್ಲಿ, ಕಾವೇರಿ 'ಕುಲದೇವತೆ' ಆಗಿರುವ ಕಾರಣದಲ್ಲೂ ಪುಷ್ಟಿಕೊಡುವಂತಿದೆ. ಈ ಅಂಶ ಸದ್ಯದ ಅಧ್ಯಯನದಲ್ಲಿ ಬರದಿರಲು, ಬಹುಶಃ ಸಂಪ್ರಬಂಧಕಾರರಿಗೆ ಅದು ತಲುಪದಿರುವ ಅಥವಾ ಗಮನಕ್ಕೆ ತಾಗದಿರುವುದೆ ಕಾರಣವೆನ್ನಬಹುದು.

ಕೊಡವರ ಜನಸಂಖ್ಯೆ ಕೊಡಗಿನಲ್ಲಿ ಕಡಿಮೆಯಾಗುತ್ತಿರುವುದು. ಹೊರಜಿಲ್ಲೆಗೆ ವಲಸೆ-ವಾಸ್ತವ್ಯ ಒಂದು ಕಾರಣ ಎಂದು ಅವರ ಅಭಿಪ್ರಾಯವಿದೆ. ಗಮನಾರ್ಹವಾಗಿ ಲಿಂಗಾನುಪಾತದಲ್ಲಿ ಹೆಂಗಸರು ಪುರುಷರಿಗಿಂತ ಮುಂದಿರುವುದು ಅವರ ಗಟ್ಟಿತನದ ಲಕ್ಷಣವಿರಬಹುದೆಂಬ ಸೂಚನೆಯೂ

ಇಲ್ಲಿದೆ. ಈ ನಿಟ್ಟಿನಲ್ಲಿ ಹಾಲೇರಿ ವಂಶದ 17ನೇ ಶತಮಾನದ ಆರಂಭದ ದಶಕಗಳಲ್ಲಿ ಆಳಿದ ದೊರೆ ಮುದ್ದುರಾಜನ ಕಾಲದ ಅರಮೇರಿ ಆಳಮಂಡ ದೊಡ್ಡವ್ವನಂಥ ಧೀರ ಹೆಂಗಳೆ ಇದಕ್ಕೆ ಎದ್ದು ಕಾಣುವ ಸಾಕ್ಷಿಯಂತಿದ್ದಾಳೆ. ಇದರ ಜೊತೆಗೆ ಆಯಾ ವ್ಯಕ್ತಿಗಳ ಜೀವನಶೈಲಿಯೂ ಸಾಮಾನ್ಯವಾಗಿ ಅವರ ವ್ಯಕ್ತಿತ್ವದ ಹಾಗೂ ಜೀವಿತಾವಧಿಯ ಸೂಚಕವಾಗಿರುತ್ತದೆನ್ನಬಹುದು. ಇದಲ್ಲದೆ ಇಂದು ಕೊಡವರಲ್ಲಿ ಹೆಣ್ಣಾಗಲಿ, ಗಂಡಾಗಲೀ, ಅವರ ವ್ಯಕ್ತಿನಾಮಗಳು ಆಧುನಿಕಗೊಂಡರೂ ಮನೆತನದ ಓರಿಯುರ ಹೆಸರನ್ನು ತಪ್ಪದೆ ಜೋಡಿಸಿಕೊಂಡಿರುವುದು ವಿಶೇಷ.

ಕೊಡಗಿನ ಜನಸಂಖ್ಯೆ, ನಡೆದು ಬಂದ ಆಡಳಿತದ ಕಛೇರಿ ಸ್ವರೂಪ, ನದಿಗಳ ಉಗಮದ ನೆಲೆ, ಪ್ರೇಕ್ಷಣೀಯ ಸ್ಥಳಗಳು, ರೈಲ್ವೆ ಸಂಪರ್ಕಕ್ಕಿರುವ ಎಡರುತೊಡರು ಕುರಿತೆಲ್ಲ ಆಧುನಿಕ ಸ್ಪರ್ಶವಿಟ್ಟು ತಿಳಿಸಿದ್ದಾರೆ. ಆದರೆ ಪ್ರಸಿದ್ಧ ಪುಷ್ಪಗಿರಿ, ಕೊಂಗಾಳ್ವರ ಸಾವಿರ ವರುಷದಷ್ಟು ಹಳಮೆಯ ಮೊದಲ ಪಟ್ಟಾಭಿಷೇಕದ ರಾಜಧಾನಿ ಮಾಲವ್ವಿ(ಮಾಲಂಬಿ), ಹಾಗೂ ಸನಿಹದ ಪ್ರಸಿದ್ಧ ಕೊಡಗಿನ ಜೈನವಿದ್ವಾಂಸ ಗುಣಸೇನಪಣ್ಡಿತನಿದ್ದ, ವೈಶಿಷ್ಟ್ಯಪೂರ್ಣ ಘನಚತುರ್ವಿಂಶತಿ ತೀರ್ಥಂಕರರ ಶಿಲ್ಪವಿರುವ ಮುಳ್ಳೂರು ಬಸದಿ, ದುಬಾರೆ ಅರಣ್ಯಪ್ರದೇಶ ಇತ್ಯಾದಿಗಳು ಹೇಗೋ ಅವರ ಕಣ್ತಪ್ಪಿ ಹೋಗಿದೆ. ಕೊಡಗಿನ ಯಾವ ಯಾವ ಪ್ರದೇಶದ ವ್ಯಕ್ತಿತ್ವಗಳು, ಸಾಂಸ್ಕೃತಿಕ ಘಟಕಗಳು ಕೊಡವರ ಮೇಲೆ ಪ್ರಭಾವ ಬೀರಿರಬಹುದೇ, ಇಲ್ಲವೇ? ಎಂಬುದರ ಪರಿಶೀಲನೆಗೆ ಇವು ಅವಕಾಶ ಕೊಡುತ್ತವೆ. ಅದಾಗಿ ಇವುಗಳ ಪರಿಚಯದ ಅಗತ್ಯವಿತ್ತೆನಿಸುತ್ತದೆ. ಇರಲಿ ವಿಶೇಷತಃ ಭಾರತದ ಹೆಚ್ಚು ವಾರ್ಷಿಕ ಮಳೆ ಬೀಳುವ 14 ಸ್ಥಳಗಳ ಪೈಕಿ 3 ಸ್ಥಳಗಳಾದ 'ಭಾಗಮಂಡಲ, ಪುಲಿಕೋಟ, ಮಾಕುಟ್ಟ'ದತ್ತ ಗಮನ ಸೆಳೆದು ಇವು ಕೊಡಗಿನವು ಎಂಬ ಸೂಚನೆಯನ್ನು ಪ್ರಬಂಧಕಾರರು ನೀಡಿರುವುದು ಗಮನಾರ್ಹವಾಗಿ ಓದುಗರಿಗೆ ಕುತೂಹಲ ಹುಟ್ಟಿಸುವ ಮಾಹಿತಿಯಾಗಿದೆ. ಇದರ ಜೊತೆಗೆ ಅರಣ್ಯನಾಶದ ಅಪಾಯ, ಬೆಳೆವೈವಿಧ್ಯಗಳ ಬಗ್ಗೆ ಗಮನ ಸೆಳೆದಿದ್ದಾರೆ. ಕೊಡವರ ಬದುಕಿನಲ್ಲಿ 'ದೇವರಕಾಡುಗಳು' ಹೇಗೆ ಮೌಲಿಕ ಎಂಬುದನ್ನು ಬಿಂಬಿಸಿದ್ದಾರೆ. ಪರಿಸರ ನಿರ್ವಹಣೆಗೆ ಕೊಡಗಿನ ಪ್ರತಿ ಗ್ರಾಮದಲ್ಲಿರುವ ದೇವರಕಾಡುಗಳು ಶೇ.30ಕ್ಕೂ ಮೀರಿದ ಪ್ರಮಾಣದಲ್ಲಿ ನೆರವಾಗಿವೆ, ಮಾದರಿಯಾಗಿವೆ. ಇಂಥ ಸಂದರ್ಭದಲ್ಲಿ ಒಂದೆರಡು ಪ್ರಮುಖ ದೇವರಕಾಡುಗಳಲ್ಲಿನ ಆಚರಣೆ, ವಿಸ್ತೀರ್ಣ; ವೈಜ್ಞಾನಿಕ ರಚನಾವ್ಯೂಹದ ಕುರಿತು ಹೇಳಬಹುದಿತ್ತು. ಅಂತು ದೇವರಕಾಡುಗಳಲ್ಲಿರುವ ಮರಗಳ ವಿವಿಧ ಮಾದರಿಗಳನ್ನು ಹೆಸರಿಸಿರುವುದು, ಪನ್ಯಭೂಮಿಗಳು, ವನ್ಯಪ್ರಾಣಿಸಂಪತ್ತು ಕುರಿತ ಸ್ಥೂಲವಾಗಿಯಾಗಿಯಾದರೂ ಪರಿಚಯಿಸಿರುವುದು ಅಪೇಕ್ಷಿತ ಮಾಹಿತಿಹಿತವೆನಿಸಿದೆ.

ಕೊಡಗಿನ ಚರಿತ್ರೆ, ಸಾಹಿತ್ಯ, ಸಂಸ್ಕೃತಿ ಕುರಿತು ಕಾಳಜಿಯುಕ್ತ ಅಧ್ಯಯನ ಈ ಸಂಪ್ರಬಂಧದಲ್ಲಿ ಆಗಿದೆ. ವಿವಿಧ ಉಲ್ಲೇಖಿತ ಆಕರಗಳನ್ನು ಗಮನಿಸಿ

ಅಗಸ್ತ್ಯ 18 ವೆಲೀರರ ಕುಟುಂಬಗಳನ್ನು ಕುರುಬರ ಪೂರ್ವಜರಾದಿ ಅರುವಲರ್‌ಗಳನ್ನು ದಕ್ಷಿಣಭಾರತದ ಪಶ್ಚಿಮಘಟ್ಟಗಳತ್ತ ಕರೆದುಕೊಂಡು ಬಂದ ಬಗ್ಗೆ (ಕೆ.ಮಮ್ಮನ್ ಕೇರಳ ಕಲ್ಚರ್, ಪು.80) ಪ್ರಬಂಧದಲ್ಲಿ ಹೇಳಿರುವುದು ಸರಿ. ಆದರೆ ಎರುಮ್ಮೈ ವೆಳೀರರ ಪೈಕಿಯ 'ನಣ್ಣಣ್' ಕ್ರಿ.ಪೂ.ದಲ್ಲಿಯೆ, ಕೊಡಗನ್ನು ಆಳಿದ ಸಂಗತಿ ಷ. ಶೆಟ್ಟರ್ ಅವರ 'ಶಂಗಂ ತಮಿಳಗಂ ಮತ್ತು ಕನ್ನಡನಾಡು–ನುಡಿ' ಕೃತಿಯ ವಿಚಾರಗಳಿಂದ ಸ್ಥೂಲವಾಗಿ ಸೂಚಿತವಾಗುವ ಸಂಗತಿಯಾಗಿದೆ. ಇದು ಬಹುಶಃ ಪ್ರಬಂಧಕಾರರ ಗಮನಕ್ಕೆ ಬಾರದೆ ನುಸುಳಿಹೋಗಿದೆಯಷ್ಟೆ. ಇನ್ನು 'ಎಲ್ಲಾ ನಾಡಕೊಡಗರು' ಎಂಬ ಶಬ್ದವು ಕ್ರಿ.ಶ.1174ರ ಕಂಪಲಾಪುರದ ಕರ್ಕಂತೇಶ್ವರ ದೇಗುಲ ಶಾಸನದಲ್ಲಿ ಮಾತ್ರ ಬಂದಿದೆ. ಕೊಡಗಿನ ಪಾಲ್ಪರೆಯಲ್ಲಿ ಹೊಯ್ಸಳ ಬೆಟ್ಟರಸ ಹಾಗೂ ಕೊಡಗಿನ ಚಂಗಾಳ್ವ ಪೆಂಮವೀರಪ್ಪನ ನಡುವೆ ಆದ ಯುದ್ಧದ ಸಂದರ್ಭವನ್ನು ಹೇಳುವ ಶಾಸನವದಾಗಿದೆ. ಅದು ಪಾಲ್ಪರೆಯ ಶಾಸನವಲ್ಲ. ಅಂಥ ಶಾಸನ ಅಲ್ಲಿಲ್ಲ. ಅದೇನೇ ಇರಲಿ, 12ನೇ ಶತಮಾನದಷ್ಟು ಪ್ರಾಚೀನವಾದ ಶಾಸನವೊಂದರಲ್ಲಿ ಕೊಡಗಿನವರ ಬಗ್ಗೆ ಐತಿಹಾಸಿಕವಾಗಿ ಬಂದಿರುವ ಉಲ್ಲೇಖದತ್ತ ಡಾ. ಎನ್.ಪಿ. ಕಾವೇರಿ ಅವರು ತಮ್ಮ ಸಂಪ್ರಬಂಧದಲ್ಲಿ ಗಮನ ಸೆಳೆದಿರುವುದು ಸ್ವಾಗತಾರ್ಹ. ಕೊಡಗನ್ನು ಆಳಿದ ಹಾಲೇರಿ ರಾಜವಂಶದ ವಿವರಗಳು, ಕೊಡವ ಭಾಷೆಯ ಸ್ವರೂಪ, ಆ ಬಗ್ಗೆ ನಡೆದಿರುವ ಅಧ್ಯಯನಗಳು ಕುರಿತ ವಿವರಗಳೂ ಸೂಕ್ತವಾಗಿದೆ.

ಕೊಡವರ ಸಾಂಸ್ಕೃತಿಕ ವೈವಿಧ್ಯತೆಗಳನ್ನು ಮಂಡಿಸುತ್ತ, ಅವರಲ್ಲಿಯ ಪ್ರದರ್ಶನ ಕಲೆಗಳು, ಜಾನಪದ ಹಾಡುಗಳು, ಕ್ರೀಡೆಗಳು ಹಾಗೂ ಶೌರ್ಯಪ್ರಧಾನ ಚಟುವಟಿಕೆಗಳು, ಆಧುನಿಕ ಶೂರ ರಾಷ್ಟ್ರೀಯ ವ್ಯಕ್ತಿತ್ವಗಳ ಬಗ್ಗೆ ಸಮುಚಿತವಾಗಿ ಬಿತ್ತರಿಸಿದ್ದಾರೆ. ಹಾಗೇ ನೋಡಿದರೆ 16ನೇ ಶತಮಾನಾಂತ್ಯದ ಹಾಲೇರಿ ವಂಶದ ಮೊದಲ ದೊರೆ ವೀರರಾಜಒಡೆಯನ ಕಾಲದ ಕೊಡವರ ಕಲ್ಯಾಟಂಡ ಮನೆತನದ ಕಲ್ಯಾಟಜ್ಜಪ್ಪನು ಬಹುಶಃ ಮಲೆಯಾಳ ಮೂಲದವನಾದ ಕರ್ಣೇಂಬಾಹುವಿನ ಕಳ್ಳಪಡೆಯನ್ನು ಮಣಿಸಿದ ವೀರ; ಇಡೀ ಕೊಡಗಿನಲ್ಲಿ ಇಂದಿಗೂ ಆರಾಧಿಸಲ್ಪಡುವ ವೀರ.

ಕನ್ನಡ ಮತ್ತು ಕೊಡವ ಭಾಷೆಯ ಸಂಬಂಧವನ್ನು ಹೇಳುತ್ತ, ಹಳಗನ್ನಡದ ಮೂಲರೂಪ ಶಬ್ದಗಳಾದ ಪೂವ್, ಪಾಲ್, ಪುಳು ಇತ್ಯಾದಿ ಶಬ್ದಗಳನ್ನು ಕೊಡವ ಭಾಷೆಯು ಉಳಿಸಿಕೊಂಡು ಬಂದು ಕನ್ನಡದೊಡನೆ ಹೊಂದಿರುವ ಭಾಷಾ ಬಾಂಧವ್ಯ, ಶಬ್ದಸಹಯೋಗವನ್ನು ಎತ್ತಿ ಹೇಳಿರುವುದು ಸಹೃದಯ ಸ್ವೀಕರಣದ ಚಿತ್ರ ನೀಡಿದಂತಾಗಿದೆ. ಕನ್ನಡದಲ್ಲಿ ಆ ಶಬ್ದಪ್ರಯೋಗಗಳು ಇಂದು ನಿಂತುಹೋಗಿದ್ದರೂ ಕೊಡವ ಭಾಷೆ ಅದನ್ನು ಜೀವಂತವಿಟ್ಟಿರುವುದು ಸೌಹಾರ್ದಕ್ಕೆ ಸಾಕ್ಷಿಯಾಗಿದೆ. ಇದಕ್ಕೆ ಪೋಷಕವಾಗಿ ವಿಶೇಷ ಉದಾಹರಣೆಯೊಂದನ್ನು ಹೇಳಬಹುದು. ಕ್ರಿ.ಶ.ಸು. 600ರ ಬಾದಾಮಿ ಚಾಲುಕ್ಯರ ಮಂಗಲೀಶನ ಶಾಸನದಲ್ಲಿಯ ಪೂರ್ವಹಳಗನ್ನಡ ಶಬ್ದವಾದ 'ಅಕುಂ, ಅಕ್ಕುಂ,

ಅಕುಮ್', ಅಕ್ಕುಮ್', ಇಂದಿಗೂ ಕೊಡವ ಭಾಷೆಯಲ್ಲಿ ಅಕ್ಕು(ಹೌದು), ಅಕ್ಕುವಾ(ನಿಜವಾ?) ಎಂಬ ರೂಪದಲ್ಲಿ ಬಳಕೆಯಾಗುತ್ತಿರುವುದು. ಕೊಡವ–ಕನ್ನಡ ನಿಘಂಟಿನಲ್ಲಿರುವುದು ಗಮನಕ್ಕೆ ಬರುವಲ್ಲಿ, ಕೊಡವರು ಕನ್ನಡಕ್ಕೆ ನೀಡಿದ ಪ್ರಾಚೀನತಾ ಗೌರವ ಎನಿಸುತ್ತದೆ. ಮೂಲದ್ರಾವಿಡಭಾಷಾ ಕುಟುಂಬದಲ್ಲಿ ಮೂಲದಕ್ಷಿಣದ್ರಾವಿಡದ ಮೂಲಕನ್ನಡದಿಂದ ಕನ್ನಡ ಮತ್ತು ಕೊಡವ ಭಾಷೆಗಳು ಕುಡಿಯೊಡೆದು ಬಂದವೆಂಬುದರ ಭಾಷಾವಿಜ್ಞಾನ ಸಂಗತಿಗೆ ಕೊಡಗಿನಲ್ಲಿ ದೊರೆತ ಮಾನ್ಯತೆ ಎಂಬುವುದು ಹೀಗೆ ಮೇಲಿನ ಅಂಶಗಳಿಂದ ವಿದಿತವಾಗುತ್ತದೆ.

ಕೊಡವರ ಮೂಲದ ಬಗ್ಗೆ ಆಗಿರುವ ಚರ್ಚೆಗಳ ಬಗ್ಗೆ ಪ್ರಬಂಧಕಾರರು ಗಮನ ಸೆಳೆದಿದ್ದಾರೆ. ಕೌಟುಂಬಿಕವಾಗಿ ಪಿತೃಪ್ರಧಾನ ವ್ಯವಸ್ಥೆ ಎಂದಿದ್ದಾರೆ. ಆ ವ್ಯವಸ್ಥೆಯ ವಿವಿಧ ಅಂಗಗಳನ್ನು ಸಮರ್ಥವಾಗಿ ಮಂಡಿಸಿದ್ದಾರೆ. 'ಕುರು' ವಂಶದ ಕ್ಷತ್ರಿಯ ಪಂಗಡ ದಕ್ಷಿಣಕ್ಕೆ ಬಂದು ಕೊಡವರಾದರು; 'ಕುರ್ದಿ' ಕುಲದ ಮೂಲದವರು ಎಂಬ ಪ್ರಕಟಿತ ವಾದಗಳ ಬಗ್ಗೆಯೂ ಗಮನ ಸೆಳೆಟದ್ದಾರೆ. ಸಮ್ಮತಗೊಂಡಿದ್ದಾರೆ. ಸಿಂಧೂ ಸಂಸ್ಕೃತಿಯ ಸಂಬಂಧದವರು ಎಂಬ ವಾದದ ಬಗ್ಗೆಯೂ ಗಮನ ಸೆಳೆದಿದ್ದಾರೆ. ಒಬ್ಬ ಅಧ್ಯಯನಕಾರರಿಗೆ, ಸಂಪ್ರಬಂಧಕಾರರಿಗೆ ಇರಬೇಕಾದ ಶಿಸ್ತು ಇದು. ಅದನ್ನು ದಕ್ಷವಾಗಿ ಡಾ. ಕಾವೇರಿ ಅವರು ನಿರ್ವಹಿಸಿದ್ದಾರೆ. ಆದರೆ ಈ ದಿಸೆಯಲ್ಲಿ ಮಂಡಿಸಬೇಕಾದ ಚಿಂತನೆ ಎಂದರೆ, ಭಾರತದಾಚೆಗಿನ ಯಾವುದೋ ದೇಶದವರ ಚಹರೆಗಳು ಕೊಡವರಲ್ಲಿದೆ ಎಂದು ಅವರಿಗೆ ವಿದೇಶಿಮೂಲವನ್ನು ಹಚ್ಚುವುದು ಸರಿಯೇ? ಕಾರಣ, ದಕ್ಷಿಣ ಭಾರತದ ಈ ಭಾಗ ಬಹಳ ಪ್ರಾಚೀನವಾದುದು! ಇಲ್ಲಿ ಆಗ ಜನರೇ ಇರಲಿಲ್ಲವೇ? ಇಟಿಣುಡಿಜ ಓಣಟಚಿಟಿ ಡಿಚಿಛಿಜ ಿ ಚಿ ಟುಥಿಣಾಡಿಜ ಎನ್ನುವ ಸಿದ್ಧಾಂತವೂ ಇರುವಲ್ಲಿ ವಿದೇಶವೂಲದ ಪಟ್ಟವನ್ನು ಆರೋಪಿಸುವುದು ಏಕೆ? ಕ್ರಿ.ಶ. ಸುಮಾರು 4ನೇ ಶತಮಾನ ಅಮರಸಿಂಹನ ಅಮರಕೋಶದಲ್ಲಿ, 1398ರ 2ನೇ ಮಂಗರಸನ ನಿಘಂಟಿನಲ್ಲಿ ಕೊಡವರು ದೇಶೀಯ ಬುಡಕಟ್ಟಿನವರೆಂಬ ಸೂಚನೆ ದೊರಕುತ್ತದೆ. ಅದಾಗಿ ಕೊಡವರು ಕೊಡಗಿನ ಒಂದು ಪ್ರಾಚೀನ ಮೂಲನಿವಾಸಿ ಬುಡಕಟ್ಟು ಸಮುದಾಯದವರು ಎಂದು ಹೇಳುವುದು ಸೂಕ್ತವಾಗಬಹುದು. ಅವರಲ್ಲಿ ಬಾಳುಕಾರರು, ಬಾಚಿಕಾರರು, ನಾಯಕರಾಗಿ ಕೊಡಗಿನ ಸಣ್ಣ ಪುಟ್ಟ ಭಾಗಗಳಲ್ಲಿ 16ನೆಯ ಶತಮಾನದಲ್ಲಿದ್ದವರು. ನಂತರ ಹಾಲೇರಿ ಅರಸುವಂಶವು ಕೊಡಗನ್ನು ಸಂಸ್ಥಾನವಾಗಿಸಿ ಆಳಿತು. ಹಾಲೇರಿ ವೀರಶೈವ ರಾಜವಂಶದ ಆಳ್ವಿಕೆಯಲ್ಲೂ ಇದ್ದ ಕೊಡವರು, ವೀರಶೈವ ಗುರುಗಳ ನಿರ್ದೇಶನದಲ್ಲಿ ಧಾರ್ಮಿಕ ಆಸರೆ ಪಡೆಯಲಿಲ್ಲ ಎಂಬ ರಿಕ್ಟರ್‌ನ ಅಭಿಪ್ರಾಯವನ್ನು ತಿಳಿಸಿದ್ದಾರೆ. ಸರಿಯೇ, ಆದರೆ ಅವರ ಪ್ರಭಾವಕ್ಕೆ ಒಳಗಾಗಲಿಲ್ಲ ಎಂಬುದು ಸರಿಯಲ್ಲ. ಕಾರಣ ಹುತ್ತರಿ ಕೋಲಾಟಕ್ಕೆ ಗುರುಗಳು ರಾಜರಂತೆ ಕುಪ್ಪಸ ದಟ್ಟಿ ಧರಿಸಿ ಕೋಲಾಟದ ಮಂದ್‌ನಲ್ಲಿ ಆಶೀರ್ವಾದ ಕೋಲು ಮೊದಲಿಗೆ ಹೊಡೆಯುವುದು ಹಲವಾರು

ಕಡೆ ಇತ್ತು; ಕುಟ್ಟ ಗ್ರಾಮದ ಕರಿಂಗಾಳಿ ಅಮ್ಮೆಯ ಹಬ್ಬದಲ್ಲಿ ತಿರುವಳ (ದೈವಾವೇಶ) ಬಂದವರು 'ನಾಣಚ್ಚಿ ಮಠತ್ತುಳ್ಳ ಗುರುಗಳುಂಡೋ' ಎಂದು ಕೇಳಿ ಗುರುಗಳಿಂದ ಅಪ್ಪಣೆ ಪಡೆದು ಆಚರಣೆಗಳನ್ನು ಆರಂಭಿಸಲು ಅವಕಾಶ ಮಾಡುತ್ತಿದರು. ಅಂದರೆ ಆ ಗ್ರಾಮದೇವತೆಯ ಹಬ್ಬದಲ್ಲಿ ನಾಣಚ್ಚಿ ಮಠದ ಗುರುಗಳು ಬಂದರೇ? ಎಂದು ಮೊದಲಿಗೆ ಕೇಳುವ ಪದ್ಧತಿ ಇತ್ತು. ಕೋತೂರಿನಲ್ಲಿ ಸಮಾಧಿ ಗದ್ದುಗೆಗೆ ವಾರ್ಷಿಕವಾಗಿ ಜಂಗಮರಿಂದ ಸಂಸ್ಕಾರ, ಪುಣ್ಯಾಹ ನೀರು ಹಾಕಿಸಲಾಗುತ್ತಿತ್ತಂತೆ, ಕೆಲವೆಡೆ ಕೊಡವರ ಸಮಾಧಿ ಗದ್ದುಗೆ ಮೇಲೆ 'ಬಸವ'ನನ್ನು ಕೂರಿಸಿರುವ ಉದಾಹರಣೆಗಳಿವೆ. ಹೀಗಾಗಿ ಗುರುಗೌರವ ಕೊಡವರಲ್ಲಿ ನಡೆದು ಬಂದಿದೆ ಎನ್ನಬೇಕು.

ಕೊಡಗಿನ ಸಾಹಿತಿ–ಸಾಹಿತ್ಯ ವಲಯದ ಪ್ರಾಚೀನತೆ, ಕೊಡವಭಾಷಾ ಸಾಹಿತ್ಯದ ಪ್ರಕಾರಗಳು ಆಧುನಿಕವಾಗಿ ಬೆಳೆದಿರುವ ಬಗೆ, ಸಾಧನೆಯ ವೈಖರಿ, ಜಾನಪದ ಸೊಗಡಿನ ಹಾಡುಗಳ ವೈವಿಧ್ಯತೆ ಕುರಿತೆಲ್ಲ ಸುಗಮ ವಿಸ್ತಾರವಾಗಿ ಸಂಪ್ರಬಂಧದಲ್ಲಿ ಪ್ರಬಂಧಕಾರರು ವಿವರಿಸಿದ್ದಾರೆ.

ಅಧ್ಯಾಯ 3, 4, 5, 6ರಲ್ಲಿ ಕೊಡವರ ಸಂಪ್ರದಾಯದ ವಿಶಿಷ್ಟತೆ, ಸಂಸ್ಕಾರ ಪದ್ಧತಿ, ಉಡುಗೆ ತೊಡುಗೆ, ವಿವಾಹದ ವಾಸ್ತವ ನೆಲೆಗಟ್ಟು, ಜನನ, ಮರಣಗಳ ಸಂದರ್ಭದ ಆಚರಣೆಗಳ ಚೌಕಟ್ಟು, ಆಹಾರಪದ್ಧತಿ, ಧಾರ್ಮಿಕ ವ್ಯವಸ್ಥೆಯಲ್ಲಿ, ಹಬ್ಬ, ಜಾತ್ರೆ, ದೇವತಾರಾಧನೆ, ಹಿರಿಯರಾಧನೆ ಅನುಗುಣ ಸಾಂಸ್ಕೃತಿಕ ಚಟುವಟಿಕೆಗಳು, ಪೂರಕ ಜನಪದ ಹಾಡುಗಳು ಇತ್ಯಾದಿಗಳು ಬಹಳ ಆಳವಾದ ಅಧ್ಯಯನದ ಸಾಕ್ಷಿಯಾಗಿ ಅಕ್ಷರಗಣದಲ್ಲಿ ಮೂಡಿಬಂದಿವೆ. ಆಧಾರಗಳು ತುಂಬಿ ತುಳುಕಿವೆ. ಸೋದಾಹರಣೆಗಳು ಸಹಸಂಚಲನದಲ್ಲಿವೆ. ಈ ಸಂದರ್ಭದಲ್ಲಿ ಕೊಡವರ ಬದುಕಿನಲ್ಲಿ ಕೃಷಿಗಾರಿಕೆಯ ಆವರಣ, ಅನುಗುಣ ರಂಜನೀಯ ಚಟುವಟಿಕೆಗಳ ವಿವರಗಳೂ ಇಲ್ಲಿ ಗಮನಕ್ಕೆ ದಟ್ಟವಾಗಿ ತಾಗುತ್ತವೆ.

ಕೊಡಗಿನಲ್ಲಿರುವ ಕೊಡವೇತರ ಮೂಲನಿವಾಸಿ ಸಮುದಾಯಗಳಲ್ಲಿ ಗೌಡ, ಕೆಂಬಟ್ಟಿ ಹಾಗೂ ಇತರ ಸಮುದಾಯಗಳಾದ ಐರಿ, ಪೆಗ್ಗಡೆ(ಹೆಗ್ಗಡೆ) ಇಂದಿನ ಜಮ್ಮಮಾಪಿಳ್ಳೆ, ಅರೆಗೌಡರು, ಕೊಯವ ಇತ್ಯಾದಿ ಹತ್ತಾರು ಜನಾಂಗಗಳೊಡನಿರುವ ಸೌಹಾದ ಸಂಬಂಧಗಳ ಚಿತ್ರಣವನ್ನು ಸಮತೋಲಿತವಾಗಿ ಸಂಪ್ರಬಂಧದಲ್ಲಿ ನೀಡಲಾಗಿದೆ.

ಅನುಬಂಧವಾಗಿ ಕೊಡವರ ಮನೆಪೆದಗಳು, ಕೆಲವಷ್ಟು ಜನಪದ ಹಾಡುಗಳು ಪಾರಿಭಾಷಿಕ ಪದಗಳ ಅರ್ಥ ಹಾಗೂ ಸೂಕ್ತ ಛಾಯಾಚಿತ್ರಗಳನ್ನು ಮಂಡಿಸಿರುವುದು ಓದುಗರಿಗೆ ಅರ್ಥೈಸಿಕೊಳ್ಳಲು ಅನುಕೂಲವಾಗಿದೆ. ಅನುಬಂಧದಲ್ಲಿನ ಹಾಡುಗಳಿಗೆ ಕನ್ನಡಾನುವಾದ ಕೊಟ್ಟಿದ್ದರೆ ಚೆನ್ನೆನಿಸುತ್ತಿತ್ತು. ಆದರೆ ಕೊಡವ ಭಾಷೆಯು ಸಾಮಾನ್ಯವಾಗಿ ಸುಲಭವಾಗಿ ಅರ್ಥವಾಗುವ ಕಾರಣ, ಅನುವಾದದ ಕಾರ್ಯವನ್ನು ಬಿಟ್ಟಿರುವಂತಿದೆ. ಉಳಿದಂತೆ ಸಂಪ್ರಬಂಧದ ಶಿಸ್ತನ್ನು ಅಚ್ಚುಕಟ್ಟಾಗಿ ಪಾಲಿಸಿದ್ದಾರೆ ಎನ್ನಬಹುದು.

ಕೊಡಗಿನಲ್ಲಿ ಸಂಶೋಧನೆಗೆ ಕ್ಷೇತ್ರಕಾರ್ಯಕ್ಕೆ ಹೊರಟೆವೆಂದರೆ ಒಂದು ಕಾಲಕ್ಕೆ ಕಾಲ್ನಡಿಗೆಯ ಅವಲಂಬನೆಯೆ ಹೆಚ್ಚಾಗಿರುತ್ತಿತ್ತು. ಕೊಡಗಿನಲ್ಲಿ ಹಲವಾರು ವರ್ಷ ಇದ್ದಾಗ, ಸಾಹಿತ್ಯ ಬರೆಹ, ಶಿಲಾಶಾಸನಗಳ ಅನ್ವೇಷಣೆ–ಪ್ರಕಟಣೆ, ಸಾಹಿತ್ಯ ಸಂಘಟನೆ, ಸಂಶೋಧನೆ, ವಿದ್ಯಾಬೋಧನೆಯಲ್ಲಿ ತೊಡಗಿ ನನ್ನ ಬದುಕನ್ನು ಕ್ರಿಯಾಶೀಲವಾಗಿ ಮಾಡಿಕೊಂಡ ಹರುಷ ನನ್ನದು. ಅಲ್ಲಿಯ ಎಲ್ಲಾ ಜನಾಂಗದವರ ಪ್ರೀತಿ, ಸ್ನೇಹ, ಆದರ, ಆತಿಥ್ಯ ನಾನು ಪಡೆದು ಕೃತಜ್ಞನಾಗಿದ್ದೇನೆ. ಅಂತಾಗಿ ಅಲ್ಲಿಯ ವನಸಿರಿ, ಜೀವಸಂಕುಲ, ಬೆಟ್ಟಗುಡ್ಡ, ವಾಸ್ತುರಚನೆ, ಇತಿಹಾಸ, ಜಲಸಿರಿ, ಸಾಹಿತ್ಯ, ಶಾಸನ, ಜನಜೀವನ, ಸ್ನೇಹವರ್ತುಲ, ರಂಗಭೂಮಿಯ ಸ್ಪರ್ಶ ಇಂದಿಗೂ ನನ್ನ ಮಾನಸದಲ್ಲಿ ಹಸಿರಿನ ವೈಭವದಲ್ಲಿವೆ. ಅಂತಾಗಿ ಕೊಡಗಿನ ಕುರಿತೇ ನನ್ನ ಅನೇಕ ಕೃತಿಗಳು ಮೂಡಿಬಂದು ಪ್ರಕಟವಾದುವು. ಇಂಥ ಹರುಷದ ಸ್ಮರಣೆಯ ಅಂಗಳದಲ್ಲಿ ಇಂದೂ ಇರುವ ನನಗೆ, ಡಾ. ಎನ್.ಪಿ. ಕಾವೇರಿ ಅವರು ತಮ್ಮ ಸಂಪ್ರಬಂಧಕ್ಕೆ ಮುನ್ನುಡಿಯನ್ನು ಬರೆದುಕೊಡಲು ಕೋರಿದಾಗ ಸಂತೋಷದಿಂದ ಸಮ್ಮತಿಸಿದೆ.

ಇಂದು ಕೊಡಗಿನಲ್ಲಿ ಓಡಾಡಲೂ ಕ್ಷೇತ್ರಕಾರ್ಯ ಮಾಡಲು ಅನುಕೂಲಗಳಿವೆ. ಸಾಹಿತ್ಯವಲಯ, ಸಂಶೋಧನೆ ವಲಯದ ವಿದ್ವಾಂಸರು ಬೆಳಕಿಗೆ ಬಂದಿದ್ದಾರೆ, ಬರುತ್ತಿದ್ದಾರೆ. ಆದರೂ ಹೆಂಗಳೆಯರು ಗೃಹಕೃತ್ಯ, ವೃತ್ತಿನಿಷ್ಠೆಗಳ ಮಧ್ಯೆ ಸಂಶೋಧನಾ ಸಂಪ್ರಬಂಧಗಳನ್ನು ಸಿದ್ಧಗೊಳಿಸಲು ಸಾಕಷ್ಟು ಪರಿಶ್ರಮ ಪಡಬೇಕು. ಈ ನಿಟ್ಟಿನಲ್ಲಿ ಡಾ. ಎನ್.ಪಿ. ಕಾವೇರಿ ಅವರು, ಸಮರ್ಥವಾಗಿ ತಮ್ಮ ಕಾರ್ಯಕೌಶಲ್ಯವನ್ನು ತೋರಿದ್ದಾರೆ. ಪಾರಿಭಾಷಿಕ ಪದಗಳ ಅರ್ಥ ನೀಡಿರುವುದಲ್ಲದೆ ಸಾಂದರ್ಭಿಕವಾಗಿ ಬಳಸಿಕೊಂಡ ಆಕರಗ್ರಂಥಗಳು ಹಾಗೂ ಛಾಯಾಚಿತ್ರಗಳ ಅಡಕವನ್ನು ಸೂಕ್ತವಾಗಿ ಮಾಡಿದ್ದಾರೆ. ಅದರಲ್ಲೂ ಜನಾಂಗೀಯ ಅಧ್ಯಯನದ ಸೂಕ್ಷ್ಮವಿಚಾರಗಳಿಗೆ ಘಾಸಿಯಾಗದಂತೆ ಸಂಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಇದನ್ನು ಸರ್ವಸಂಪೂರ್ಣವೆಂದು ಇತಿಮಿತಿಗಳೇ ಇಲ್ಲವೆಂದು ಹೇಳಲಾಗದಿದ್ದರೂ, ಕೊಡಗಿಗೆ ಸಂಬಂಧಪಟ್ಟಂತೆ ಸಾಕಷ್ಟು ಸಮರ್ಥವಾದ ಆಳವಾದ ಅಚ್ಚುಕಟ್ಟಿನ ಸಾಂಸ್ಕೃತಿಕ ಚಿತ್ತಾರದ ಉತ್ತಮ ಮಾದರಿ ಸಂಪ್ರಬಂಧವೆಂದು ಹೇಳಬೇಕು. ಇಂಥ ಪ್ರಯತ್ನಗಳು ಡಾ. ಕಾವೇರಿ ಅವರಿಂದ ಕೊಡಗಿನ ಕುರಿತಾಗಿ ಮತ್ತಷ್ಟು ಮಗದಷ್ಟು ಆಗಿ ಅವರಿಗೆ ಯಶಸ್ಸು ದೊರಕಲೆಂದು ಹಾರೈಸುತ್ತೇನೆ.

7–3–2016 **ಡಾ. ಎಂ.ಜಿ. ನಾಗರಾಜ್**

ಬೆಂಗಳೂರು

ಶ್ರೀಮನ್ಮಥನಾಮ ಸಂವತ್ಸರ, ಮಾಘಮಾಸ

ಧನಿಷ್ಠ ನಕ್ಷತ್ರ, ತ್ರಯೋದಶಿ, ಸೋಮವಾರ

ಎಳ್ತ್‌ಕರ್ತಿರ ತಕ್ಕ್

ಮನದಾಳದಿಂದ

ದಕ್ಷಿಣ ಕಾಶ್ಮೀರವೆಂದೇ ಪ್ರಸಿದ್ಧಿಯಾಗಿರುವ ಶ್ರೀ ಕಾವೇರಿ ನಾಡು, ಕಲಿಗಳ ಬೀಡು, ಕೊಡಗು ಜಿಲ್ಲೆ ನನ್ನೂರು. ಹುಟ್ಟಿ ಬೆಳೆದು ಬಾಲ್ಯ, ಯೌವನವನ್ನು ಕಳೆದ ತವರೂರು. ಇಲ್ಲಿಯ ಪ್ರಕೃತಿ ಸೌಂದರ್ಯದ ಐಸಿರಿಯನ್ನು ಕಣ್ತುಂಬಿಕೊಂಡು ಬೆಟ್ಟ ಗುಡ್ಡಗಳ ಹಸುರಿನ ನಡುವೆ ಆಸ್ವಾದಿಸಿದ ತಂಪಾದ ಗಾಳಿ, ಮಳೆಯಲ್ಲಿ ಮಿಂದು ಜಾರಿ ಬಿದ್ದಂತಹ ಆ ಕ್ಷಣಗಳು ಮನದಿಂದ ಎಂದಿಗೂ ಮಾಸವು.

ಇಂತಹ ಸುಂದರ ಅನುಭವಕ್ಕೆ ಸಿಲುಕಿದ್ದು ಬಹು ಸಂಸ್ಕೃತಿಗಳ ಬೀಡು ಕೊಡಗು. ಇಲ್ಲಿನ ಸಂಸ್ಕೃತಿ ಸಂಸ್ಕಾರಗಳನ್ನು ತೀರಾ ಹತ್ತಿರದಿಂದ ನೋಡಿದ್ದ ನನಗೆ ಇಲ್ಲಿನ ಮೂಲನಿವಾಸಿಗಳು ಕಟ್ಟಿಕೊಂಡ ಬದುಕು, ಕೊಡವ ಸಮುದಾಯದ ಆಚರಣೆ ಪದ್ಧತಿಗಳು ವಿಶಿಷ್ಟ ಹಾಗೂ ಕುತೂಹಲಕಾರಿಯಾಗಿ ಕಂಡುಬಂದವು.

ಇತಿಹಾಸ ಪೂರ್ವದಿಂದಲೂ ಅಸ್ತಿತ್ವವನ್ನು ಉಳಿಸಿಕೊಂಡು ಸಾಂಸ್ಕೃತಿಕವಾಗಿ, ಜಾನಪದೀಯವಾಗಿ ವಿಶ್ವಮಟ್ಟದಲ್ಲೇ ತನ್ನದೇ ಆದ ಸಂಸ್ಕೃತಿ,ಸಂಸ್ಕಾರಗಳನ್ನು ಉಳಿಸಿಕೊಂಡ ಕೊಡವರನ್ನು ಕುರಿತು ಆಳವಾದ ಅಧ್ಯಯನ ಕೈಗೊಳ್ಳಬೇಕೆಂಬ ಬಯಕೆ ಬಹುಕಾಲದಿಂದಲೇ ನನ್ನಲ್ಲಿ ಮನೆ ಮಾಡಿತ್ತು.

ಆಧುನೀಕರಣ, ಜಾಗತೀಕರಣದ ಪ್ರಭಾವದಿಂದ ಪಾರಂಪರಿಕ ಸಂಸ್ಕೃತಿಗಳು ಅಳಿವಿನ ಅಂಚಿನಲ್ಲಿವೆ. ಅದರಲ್ಲೂ ಕೊಡವರ ಎಲ್ಲಾ ಸಂಸ್ಕಾರಗಳು, ಆಹಾರಪದ್ಧತಿ, ಉಡುಗೆತೊಡುಗೆ, ದೇಶಸೇವೆ, ಅತಿಥಿಸತ್ಕಾರ, ಗುರುತರವಾದದ್ದು. ಅವುಗಳನ್ನು ಕ್ರಮಬದ್ಧವಾಗಿ ದಾಖಲಿಸಿ, ಮುಂದಿನ ಪೀಳಿಗೆಗೆ ಈ ಭವ್ಯ ಸಂಸ್ಕೃತಿಯ ಹಿರಿಮೆಗರಿಮೆಗಳನ್ನು ನೆನಪಿಸುವ ದೃಷ್ಟಿಯಿಂದ ಈ ಕೃತಿ ಮಹತ್ವವನ್ನು ಪಡೆದುಕೊಳ್ಳುತ್ತದೆ. ಆದ್ದರಿಂದ ಇಂತಹ ವಿಶಿಷ್ಟ ಸಂಸ್ಕೃತಿಯನ್ನು ಅಭ್ಯಸಿಸಿ ಪರಿಚಯಿಸುವ ಉದ್ದೇಶದಿಂದಲೇ ಈ ಕೃತಿ ರೂಪುಗೊಂಡಿದೆ.

ಈ ಕೃತಿ ರಚನೆಯಲ್ಲಿ ಅನೇಕ ಮಹನೀಯರು, ಸಂಸ್ಥೆಗಳು, ವಿದ್ವಾಂಸರುಗಳ ಸಹಕಾರವಿದೆ. ಅವರೆಲ್ಲರನ್ನು ಕೃತಜ್ಞತೆಯಿಂದ ನೆನೆಯುವುದು ನನ್ನ ಆದ್ಯ ಕರ್ತವ್ಯ.

ಪ್ರಬಂಧ ರಚನೆಗೆ ಮಾರ್ಗದರ್ಶಕರಾಗಿ ಪ್ರತಿ ಅಧ್ಯಯನಗಳನ್ನು ಪರಿಶೀಲಿಸಿ ಯುಕ್ತ ಸಲಹೆಗಳನ್ನಿತ್ತು, ಮಾರ್ಗದರ್ಶನ ಮಾಡಿದ ಜಾನಪದ ತಜ್ಞರೂ, ಜಾನಪದ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳೂ ಆದ ಪ್ರೊ.ಅಂಬಳಿಕೆ ಹಿರಿಯಣ್ಣನವರಿಗೆ ನಾನು ಚಿರಋಣಿ.

ಈ ನಿಟ್ಟಿನಲ್ಲಿ ಸಹಕಾರ ನೀಡಿದ, ಮೈಸೂರು ವಿದ್ಯಾನಿಲಯದ ಕುಲಪತಿಗಳಾದ ಪ್ರೊ.ಕೆ.ಎಸ್. ರಂಗಪ್ಪರವರಿಗೂ, ವಿಶ್ರಾಂತಕುಲಪತಿಗಳಾದ ಪ್ರೊ.ಹೆಚ್.ಜೆ.ಲಕ್ಕಪ್ಪಗೌಡರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ. ಆರ್. ರಾಮಕೃಷ್ಣ, ಪ್ರೊ.ಎನ್.ಎಮ್. ತಳವಾರ್, ಪ್ರೊ. ಸಿದ್ಧಾಶ್ರಮ, ಡಾ. ಅಕ್ಕಮಹಾದೇವಿ, ಶ್ರೀಮತಿ ವೈ.ಸಿ.ಭಾನುಮತಿ, ಡಾ. ವಿಜಯಕುಮಾರಿ ಕರಿಕಲ್, ಡಾ. ಮಂಜುನಾಥ್ ಎಂ.ಜಿ. ಅವರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಡಾ.ಎಂ.ಜಿ. ನಾಗರಾಜ್‌ರವರು ಕೊಡಗಿನ ಸಂಸ್ಕೃತಿಯನ್ನು ಅರೆದು ಕುಡಿದವರು. ನನ್ನ ಬರವಣಿಗೆಗೆ ಸಲಹೆ ಸೂಚನೆಗಳನ್ನು ನೀಡಿ ಪ್ರೋತ್ಸಾಹಿಸಿ, ಈ ಕೃತಿಗೆ ಪ್ರೀತಿಯಿಂದ ಮುನ್ನುಡಿ ಬರೆದಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ನಮನಗಳು.

ಅರಿವಿನ ಪರಿಧಿಯನ್ನು ವಿಸ್ತರಿಸಿಕೊಳ್ಳಲು ಸಹಕರಿಸಿದ ಭಾವಂದಿರಾದ ಶ್ರೀ ಹೆಚ್.ವರದರಾಜು, ಎಇಇ, ಡಾ. ಹೆಚ್.ರಾಮಚಂದ್ರ, ಮುಖ್ಯ ವೈದ್ಯಾಧಿಕಾರಿಗಳು, ಶ್ರೀ ಹೆಚ್.ನಾಗರಾಜು, ಸಹೋದರರಾದ ಶ್ರೀ ಎಂ. ರವಿಕುಮಾರ್ ಹಾಗೂ ಶ್ರೀ ಎನ್.ಪಿ. ವೀರಭದ್ರ ಆತ್ಮೀಯರಾದ ಡಾ. ಬಿ. ವೆಂಕಟರಾಮಣ್ಣ, ಡಾ. ನಾಗರತ್ನಮ್ಮ, ಡಾ. ಎನ್.ಚಂದ್ರೇಗೌಡ, ಶ್ರೀ ಎ.ಎಲ್.ಸುರೇಶ್‌ಚಂದ್ರ, ಡಾ. ಸಿ.ಡಿ.ಪರಶುರಾಮ್, ಜಿಲ್ಲಾಪಂಚಾಯತ್ ಮಾಜಿ ಸದಸ್ಯರಾದ ಶ್ರೀಮತಿ ಬೊಪ್ಪಂಡ ಬೊಳ್ಳಮ್ಮ ನಾಣಯ್ಯ, ಶ್ರೀಮತಿ ಬೊಪ್ಪಂಡ ಬೇಬಿ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಶ್ರೀ ಟಿ.ಪಿ ರಮೇಶ್, ಕಾರ್ಯದರ್ಶಿಗಳಾದ ಷಂಶುದ್ದೀನ್, ಪ್ರೊ. ಬೆಸೂರು ಮೋಹನ್ ಪಾಳೇಗಾರ್, ಶ್ರೀ ಬಿದ್ದಾಟಂಡ ಬೆಳ್ಳಿಯಪ್ಪ, ಪೆಮ್ಮಂಡ ರಾಣಿ ಚೆಂಗಪ್ಪ, ಎಂ.ಹೆಚ್. ಅಬ್ದುಲ್‌ರೆಹಮಾನ್, ಪ್ರೊ.ಬಶೀರ್‌ಅಹಮದ್, ಬೊಪ್ಪೆರಕಾವೇರಪ್ಪ, ಬಿದ್ದಾಟಂಡ ರಮೇಶ್‌ಚಂಗಪ್ಪ, ಶ್ರೀ ಕಲ್ಯಾಟಂಡ ಪೂಣಚ್ಚ, ಪ್ರೊ. ಸರಸ್ವತಿನಾಣಯ್ಯ, ನಡಿಕೇರಿಯಂಡ ಗಣಪತಿ, ವೈ.ಸಿ. ನಿರ್ಮಲ ಬೆಂಗಳೂರು, ಲತಾ, ಕವಿತ ಇವರೆಲ್ಲರಿಗೂ ನಾನು ಅಭಾರಿಯಾಗಿದ್ದೇನೆ.

ಈ ನೆಲದಲ್ಲಿ ಬದುಕನ್ನು ರೂಪಿಸಿದ ಅಪ್ಪ ಅಮ್ಮ, ನನ್ನ ಏಳಿಗೆಯ ಕನಸು ಹೊತ್ತು ತುಂಬು ಜೀವನ ನಡೆಸಿ ಕಣ್ಮರೆಯಾದ ಅತ್ತೆ--ಮಾವಂದಿರಾದ ಶ್ರೀಮತಿ.ಚಿಕ್ಕಮ್ಮ, ಶ್ರೀಯುತ ಹಾಲೇಗೌಡ, ಮುಂದೆ ಹಲವು ದಿನ ಸಾಕಿ ಸಲಹಿ ನನ್ನ ಕನಸುಗಳಿಗೆ ನೀರುಣಿಸಿ ಬೆಳೆಸಿದ ತಂದೆತಾಯಿ ಸಮಾನರಾದ ಶ್ರೀ ದಿವಂಗತ ಕಾಡ್ಯಮಡ ಬೆಳ್ಳಿಯಪ್ಪ, ಸೀತಮ್ಮ ದಂಪತಿ ಹಾಗೂ ಶ್ರೀ ಕಾಡ್ಯಮಡ ಗಿರೀಶ್‌ಗಣಪತಿ, ಶ್ರೀಮತಿರೀತು, ಶ್ರೀ ಕಾಡ್ಯಮಡ ನವೀನ್ ಮತ್ತು ಪವಿತ್ರ, ಶ್ರೀ ಕಾಡ್ಯಮಡ ಸುಮನ್ ಹಾಗೂ ರೀಟಾರವರಿಗೆ ನನ್ನ ಹೃದಯಪೂರ್ವಕ ವಂದನೆಗಳು.

ಬಹುಮುಖ್ಯವಾಗಿ ಈ ಕೃತಿ ಸಿದ್ಧಗೊಳ್ಳಲೇಬೇಕೆಂದು ಸತತವಾಗಿ ನನ್ನ ಬೆಂಗಾವಲಾಗಿ ನಿಂತು ಪೂರ್ಣ ಸಹಕಾರ ನೀಡಿದ ನನ್ನ ಪತಿ ಕ್ಯಾತನಹಳ್ಳಿ

ಶ್ರೀ ಪ್ರಕಾಶ್ ಹೆಚ್. ಹಾಗೂ ನನ್ನ ಮುದ್ದಿನ ಮಕ್ಕಳಾದ ತನ್ಮಯಗೌಡ, ಆಕ್ಷಯ್‌ಗೌಡ ಹಾಗೂ ಇವರಿಬ್ಬರನ್ನೂ ನೋಡಿಕೊಂಡು ಕೃತಿ ರಚಿಸಲು ನನಗೆ ಅವಕಾಶ ಮಾಡಿಕೊಟ್ಟ ನನ್ನ ಅಜ್ಜಿ ದೇವಿರಮ್ಮ ಇವರುಗಳನ್ನು ಎಷ್ಟು ನೆನೆದರು ಸಾಲದು.

ಈ ಮಹಾಪ್ರಬಂಧವನ್ನು ಕೃತಿ ರೂಪಕ್ಕೆ ತರಲು ಒಪ್ಪಿ ಪ್ರಕಟಿಸುತ್ತಿರುವ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಬಿದ್ದಾಟಂಡ ಎಸ್.ತಮ್ಮಯ್ಯ ಹಾಗೂ ಸಲಹಾ ಸಮಿತಿ ಸದಸ್ಯರುಗಳಿಗೆ ನಾನು ಅಭಾರಿಯಾಗಿದ್ದೇನೆ.

ಈ ಕೃತಿಯನ್ನು ಸಕಾಲಕ್ಕೆ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಮೈಸೂರಿನ ಗುಪ್ತ ಆಫ್‌ಸೆಟ್ ಮುದ್ರಣಾಲಯದ ಮಾಲೀಕರು ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ಮನಪೂರ್ವಕ ವಂದನೆಗಳು. ಈ ಕೃತಿಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪ್ರೋತ್ಸಾಹಿಸಿದ ಎಲ್ಲರನ್ನು ನಾನು ಮನತುಂಬಿ ನೆನೆಯುತ್ತೇನೆ.

೧೨-೦೩-೨೦೧೬

ಡಾ. ಕಾವೇರಿ ಪ್ರಕಾಶ್

ಕೊಡವರ ಸಂಸ್ಕಾರಗಳು



ನಡುಬಾಡೆಯಲ್ಲಿರುವ ತೂಕ್‌ಂಬೊಳ್‌ಚ (ತೂಗುದೀಪ)

ಕೊಡವರ ಮಂಗಳ ಸೂತ್ರ 'ಪತ್ತಾಕ್'

ಕೊಡವರ ಕೈಮಡ

ಐನ್‌ಮನೆ



ಕಕ್ಕಡ ಮಾಸದ ಮದ್ದ್‌ಪಾಯಸ

ಪುತ್ತರಿ ಹಬ್ಬದಲ್ಲಿ ಕದಿರು ತೆಗೆಯುತ್ತಿರುವುದು

ಕೊಡವರ ಕೈಲ್‌ಮುಹೂರ್ತದ ಆಯುಧಪೂಜೆ

ತೆಂಗಿನಕಾಯಿಗೆ ಗುಂಡು ಹೊಡೆಯುತ್ತಿರುವುದು

ಮದುವೆಯ ಶೌರ್ಯದ ಸಂಕೇತ ಬಾಳೆ ಬಿರುದು



ಮದುಮಗನ ಆಭರಣ ತೊಡಂಗ್

ಸಾಂಪ್ರದಾಯಿಕ ಆಭರಣ ಕೊಕ್ಕೆತಾತಿ

ತಲಕಾವೇರಿ ಕ್ಷೇತ್ರ

ಕೊಡವರ ವ್ಯವಸಾಯದ ಪರಿಕರಗಳು



ಗಂಗೆಯನ್ನು ಹೊತ್ತು ತರುತ್ತಿರುವ ನವ ವಧು

ಹುತ್ತರಿ ಕದಿರು ಹಾಕುವ ಕುತ್ತಿ



ಕೊಡವರ ವಿಶಿಷ್ಟ ದುಡಿ

ನಾಲ್ ನಾಡು ಅರಮನೆ

ಬೊಳ್‌ಕಾಟ್

ಹುತ್ತರಿ ಕೋಲಾಟ

ತಲಕಾವೇರಿಗೆ ಬೈವಾಡು ತೆಗೆದುಕೊಂಡು ಹೋಗುವುದು

ಬೈಂಬಳೆ (ಕಣಿಲೆ)

ನರಿ ಮಂಗಲ (ಹುಲಿ ಮದುವೆ)

ಜೇನು ಶೇಖರಿಸುವ ವಿಶಿಷ್ಟ ಸಾಧನ

ಕಡುಂಬುಟ್ಟ್ ಬೇಯಿಸುವ ಸ್ಯಾಕಲ

ಪರಿವಿಡಿ

೧ ಪೀಠಿಕೆ, ಉದ್ದೇಶ, ವ್ಯಾಪ್ತಿ ೧–೧೦

೨ ಅಧ್ಯಾಯ–ಒಂದು ೧೧–೨೮

ಭೌಗೋಳಿಕ ಹಿನ್ನೆಲೆ
ಹವಾಗುಣ ಮತ್ತು ಮಳೆ
ಕೊಡಗಿನ ಅರಣ್ಯಗಳು, ದೇವರ ಕಾಡು, ಪನ್ಯ ಭೂಮಿ
ಜಲಸಂಪನ್ಮೂಲಗಳು
ಪ್ರಾಣಿ ಸಂಪತ್ತು
ರಸ್ತೆ ಸಂಪರ್ಕ
ಕೊಡಗಿನ ಪ್ರಮುಖ ಪ್ರವಾಸಿ ತಾಣಗಳು

೩ ಅಧ್ಯಾಯ – ಎರಡು ೨೯–೭೪

ಕೊಡಗಿನ ಇತಿಹಾಸ, ಸಾಹಿತ್ಯ ಮತ್ತು ಸಂಸ್ಕೃತಿ
ಇತಿಹಾಸ ಪೂರ್ವಕಾಲ (ಶಿಲಾಯುಗ ಕಾಲ)
ಇತಿಹಾಸ ಕಾಲ
ಕೊಡಗಿನಲ್ಲಿ ನಾಯಕರ ಆಳ್ವಿಕೆ
ಹಾಲೇರಿ ರಾಜವಂಶದ ಪರಿಚಯ
ಬ್ರಿಟಿಷರ ಅಧಿಕಾರಾವಧಿ

ಸಾಹಿತ್ಯ
ಶಾಸನ ಕವಿಗಳು
ಪ್ರಾಚೀನ ಕವಿಗಳು
ಕೊಡವ ಸಾಹಿತಿಗಳು
ಕೊಡವೇತರ ಸಾಹಿತಿಗಳು
ಕೊಡವರ ಜನಪದ ಸಾಹಿತ್ಯ
ಕೊಡವ ಗಾದೆ ಒಗಟು

ಕೊಡವರ ಪ್ರದರ್ಶನ ಕಲೆಗಳು
ಧಾರ್ಮಿಕ ಕಲೆಗಳು
ಮನೋರಂಜನಾ ಕಲೆ
ವೀರ ಪ್ರಧಾನ ಕಲೆ
ಕೊಡವ ಜನಪದ ಕ್ರೀಡೆಗಳು

ಕೊಡವ ಭಾಷೆ ಮತ್ತು ಸ್ವರೂಪ
ಕೊಡಗಿನ ಸೇನಾನಾಯಕರು

೪ ಅಧ್ಯಾಯ – ಮೂರು ೭೫–೧೫೪
ಕೊಡವರ ನಂಬಿಕೆ ಮತ್ತು ಸಂಪ್ರದಾಯಗಳು
ಕೊಡವರ ಮೂಲ
ಕೊಡವರ ಸಾಮಾಜಿಕ ಕೌಟುಂಬಿಕ ಪದ್ಧತಿ, ಮಹಿಳಾ ಸ್ಥಾನಮಾನ
ಕೊಡವ ಮನೆತನದ ಹೆಸರುಗಳು
ಕೊಡವರ ಉಡುಗೆ ತೊಡುಗೆ
ಆಹಾರ ಪದ್ಧತಿ
ಅತಿಥಿ ಸತ್ಕಾರ
ಕೊಡವರ ಉಪಜಾತಿ ಮತ್ತು ಬುಡಕಟ್ಟುಗಳು

೫ ಅಧ್ಯಾಯ – ನಾಲ್ಕು ೧೫೫–೨೨೪
ಕೊಡವರ ಸಂಸ್ಕಾರಗಳು
ಜನನ ಸಂಸ್ಕಾರಗಳು
ಪ್ರೌಢ ಸಂಸ್ಕಾರಗಳು

ಕೊಡವ ವಿವಾಹ ಪದ್ಧತಿಯ ಬಗೆಗಳು
ಮದುವೆ
ಕೆಮಿಕುತ್ತಿ ಮಂಗಲ (ಕಿವಿ ಚುಚ್ಚುವ ಮದುವೆ)
ನರಿಮಂಗಲ (ಹುಲಿ ಮದುವೆ)
ಕೂಡಾವಳಿ ಮಂಗಲ (ಕೂಡಾವಳಿ ಮದುವೆ)
ಒಕ್ಕ ಪರಿಜೆ
ಮಕ್ಕ ಪರಿಜೆ
ಕನ್ನಿ ಮಂಗಲ
ದಂಪತಿ ಮುಹೂರ್ತ
ಗದ್ದೆಗೆ ಸಗಣಿ ಹೊತ್ತೊಯ್ಯುವ ಪದ್ಧತಿ
ಮರು ನಾಮಕರಣ ಪದ್ಧತಿ

ಕೊಡವರಲ್ಲಿ ಶವ ಸಂಸ್ಕಾರ
ನೀರ್‌ಕ್ಕಳಿವ (ನೀರಿಗೆ ಇಳಿಯುವುದು)
ಚಾವುಕ್ ಕೈ ಕೊಡ್‌ಮೊ (ಸಾವಿಗೆ ಕೈ ಕೊಡುವುದು)
ಕಾಕಿ ಮೊರಡುವೊ (ಸಂಬಂಧ ಕರೆದು ಅಳುವುದು)
ಕೆಲ್ಲಟಿ

ಶವಕ್ಕೆ ನಮಸ್ಕರಿಸುವುದು
ಅಂಗಕಳಿ (ವಿಶಿಷ್ಟ ಕುಣಿತ)
ಕೇಕಳ (ಸ್ಮಶಾನ)
ಮೇಮಾಡಿ
ಕೊಡಕುಕ್ಕುವೊ
ತಿಥಿ (ಮಾದ), ಚಾತ ಪುಕ್ಕುವೊ, ಪಾರಿಕೋಳಿ ಬುಡುವೊ
ಪೊಲಚಿ ಪಾಟ್ ಪಾಡುವೊ (ಮೃತರ ಗುಣಗಾನದ ಹಾಡು)

೬ ಅಧ್ಯಾಯ – ಐದು ೨೨೫–೨೫೮
ಕೊಡವರ ಧಾರ್ಮಿಕ ವ್ಯವಸ್ಥೆ
ಶ್ರೀ ಕಾವೇರಿ ಮಾತೆಯ ಬಗೆಗಿನ ನಂಬಿಕೆ ಮತ್ತು ಆಚರಣೆಗಳು
ತಲಕಾವೇರಿ ಕ್ಷೇತ್ರ ಮಹಿಮೆ
ಕಾವೇರಿ ಉಗಮ ಸ್ಥಾನ
ಕಾವೇರಿ ಮಾತೆ ಧಾರ್ಮಿಕ ಹಿನ್ನೆಲೆ
ಕಾವೇರಿ ಜಾತ್ರೆ ಉತ್ಸವಗಳು
ಕೊಡವ ಹಬ್ಬಗಳು
ಕೈಲ್ ಮುಹೂರ್ತ
ತುಲಾ ಸಂಕ್ರಮಣ
ಹುತ್ತರಿ ಹಬ್ಬ

ಕೊಡವರ ಇತರ ಹಬ್ಬಗಳು
ಇಗ್ಗುತ್ತಪ್ಪ ದೇವರ ಹಬ್ಬ
ಬೋಡ್‌ನಮ್ಮೆ
ಪನ್ನಂಗಾಲತಮ್ಮೆ
ಮಕ್ಕಿಸಾಥಾವು

೭. ಅಧ್ಯಾಯ – ಆರು ೨೫೯–೨೯೪
ಕೊಡವರ ಸಾಮಾಜಿಕ ವ್ಯವಸ್ಥೆ
ಐನ್‌ಮನೆ
ಕೊಡವರ ಕೈಮಡಗಳು
ಗುರು ಕಾರೋಣ
ಆಧುನಿಕ ಗೃಹ ನಿರ್ಮಾಣ
ಕೊಡವರ ಬೇಟೆ ಪದ್ಧತಿ
ವ್ಯವಸಾಯ
ವೈದ್ಯ ಪದ್ಧತಿ

೮ **ಅಧ್ಯಾಯ–ಏಳು** ೨೯೫–೩೦೪
ಕೊಡವ ಸಂಸ್ಕಾರಗಳ ಅನನ್ಯತೆ
ಅಮ್ಮ ಕೊಡವ
ಐರಿಗಳು
ಪೆಗ್ಗಡೆ
ಕೆಂಬಟ್ಟಿ
ಜಮ್ಮ ಮಾಪಿಳ್ಳೆ
ಅರೆಗೌಡರು ಮತ್ತು ಇತರ ಸಮುದಾಯಗಳು

ಸಮಾರೋಪ

೯ **ಗ್ರಂಥಸೂಚಿ** ೩೦೫–೩೬೦
ಅನುಬಂಧಗಳು
೧. ಕೊಡವ ಮನೆಪೆದ (ಮನೆತನದ) ಹೆಸರುಗಳು.
೨. ಜನಪದ ಹಾಡುಗಳು
೩. ಪಾರಿಭಾಷಿಕ ಪದಗಳು
೪. ವಕ್ತೃಗಳ ಪಟ್ಟಿ
೫. ಕೊಡವ ಮಾಸ, ದಿಕ್ಕು, ವಾರಗಳ ಪಟ್ಟಿ
೬. ಛಾಯಾಚಿತ್ರಗಳು

ಪೀಠಿಕೆ

ಒಂದು ಸಾಂಸ್ಕೃತಿಕ ಅಧ್ಯಯನವೆಂದರೆ ಆಯಾಯ ಸಮುದಾಯಗಳ ಸಾಂಸ್ಕೃತಿಕ ನಂಬಿಕೆಗಳ ಅವಲೋಕನವೆಂದು ಗ್ರಹಿಸಬೇಕಾಗುತ್ತದೆ. ಏಕೆಂದರೆ ಆ ಸಮುದಾಯದ ನಂಬಿಕೆ ಶ್ರದ್ಧೆ, ಕಾರ್ಯಾಚರಣೆಗಳ ಮುಖಾಂತರ ಆ ಸಮುದಾಯದ ಸಾಂಸ್ಕೃತಿಕ ಬೆಳೆವಣಿಗೆಯನ್ನು ಗುರುತಿಸಬಹುದು. ಈ ರೀತಿಯ ನಂಬಿಕೆ ಆಚರಣೆಗಳೆಲ್ಲವೂ ಆ ಜನರ ಉತ್ಪಾದನಾ ವಿಧಿ ವಿಧಾನದೊಂದಿಗೆ ಮಾಡಿಕೊಂಡ ಮಾರ್ಪಾಟು ಮತ್ತು ಅನುಸಂಧಾನಗಳನ್ನು ಅವಲಂಬಿಸಿರುತ್ತವೆ..

ಸಾಂಸ್ಕೃತಿಕ ಜೀವಿಯಾದ ಮನುಷ್ಯನ ವ್ಯಕ್ತಿತ್ವ ಬೆಳೆವಣಿಗೆ ಹೊಂದುವುದು ಒಂದು ಸಾಂಸ್ಕೃತಿಕ ಪರಿಸರದಲ್ಲಿ. ಒಂದು ಸಮುದಾಯದ ಆಂತರಿಕ ಶಕ್ತಿ ಸಾಮರ್ಥ್ಯಗಳು ಬಹಿರಂಗವಾಗಿ ಪ್ರಕಟವಾಗಲು ವೇದಿಕೆಯನ್ನು ನಿರ್ಮಿಸುವ ಆ ಜನಸಮುದಾಯದ ಎಲ್ಲಾ ಬಗೆಯ ಆಚರಣೆಗಳನ್ನು ಒಳಗೊಳ್ಳುವುದು. ಇದು ಮಾನವ ಜೀವನ ವಿಧಾನದ ಪ್ರತೀಕ ಅಥವಾ ಜೀವಿತ ಕ್ರಮದ ಒರೆಗಲ್ಲು. ಸಾಮಾಜಿಕ ಜೀವನದಲ್ಲಿ ಮನುಷ್ಯ ತಾನು ರೂಢಿಸಿಕೊಂಡಿರುವ ರಾಜಕೀಯ ಹಾಗೂ ಆರ್ಥಿಕ ಚಟುವಟಿಕೆಗಳು, ನೈತಿಕತೆಯ ನಡತೆ, ಮೌಲ್ಯಾದರ್ಶಗಳು ಮತ್ತು ರೂಢಿಸಂಪ್ರದಾಯಗಳು ಹೀಗೆ ಎಲ್ಲಾ ಅಂಶಗಳನ್ನು ಸಂಸ್ಕೃತಿ ಒಳಗೊಂಡಿರುವುದು.

'Culture' ಎಂಬ ಶಬ್ಧ ಲ್ಯಾಟಿನ್ನಿನ colere ಎಂಬ ಧಾತುವಿನಿಂದ ಹುಟ್ಟಿ cultura ಎಂಬ ರೂಪ ತಳೆದು, ರೂಪಿಸು, ರೂಢಿಸು ಎಂಬ ಅರ್ಥಪಡೆಯಿತು.[೧] ಇಂಗ್ಲಿಷ್ ಭಾಷೆಯಲ್ಲಿ 'ಕಲ್ಚರ್' ಎಂಬ ಶಬ್ದಕ್ಕೆ ಅರ್ಥಗಳು, ವ್ಯಾಖ್ಯಾನಗಳು ಬದಲಾವಣೆ ಕಂಡುಬಂದವು 'ಹಾಬ್ಸ್' ಎಂಬ ವಿದ್ವಾಂಸನು ದೈಹಿಕ ಮತ್ತು 'ಬೌದ್ಧಿಕ ತರಬೇತಿಗೆ ಇಟ್ಟ ಹೆಸರೇ ಸಂಸ್ಕೃತಿ' ಎಂದಿದ್ದಾನೆ. ಫ್ರೀಮನ್ ೧೮೬೭ ಭಾಷೆ ಮತ್ತು ಸಂಸ್ಕೃತಿಗಳು ಒಂದುಗೂಡಿ ಬೆಳೆಯುವ ಒಂದು ನಿರ್ದಿಷ್ಟ ಬಗೆಯ ಬೌದ್ಧಿಕ ಬೆಳವಣಿಗೆಯೇ ಸಂಸ್ಕೃತಿ' ಎಂದಿದ್ದಾನೆ. ರ್‍ಯಾನ್ಡಂ ಹೌಸ್ ಡಿಕ್ಷನರಿಯಲ್ಲಿ "ಸಂಸ್ಕೃತಿ ಎಂದರೆ ಒಂದು ಜೀವಂತ ಜನತೆಯ ಸಮಷ್ಟಿ ಜೀವನ ಕ್ರಮ ಅದು ಆ ಜನ ಸಮುದಾಯದಿಂದ, ರೂಪಿತವಾಗಿದ್ದು ತಲೆಮಾರಿನಿಂದ ತಲೆಮಾರಿಗೆ ಮುಂದುವರಿಯುತ್ತದೆ".[೨] ಎಂಬ ವ್ಯಾಖ್ಯಾನವಿದೆ.

'ಸಂಸ್ಕೃತಿ' ಎಂಬ ಪದ ಬಳಕೆ ಈಗ ಹೆಚ್ಚು ಚಲಾವಣೆಯಲ್ಲಿದೆ. ಆದರೆ 'ಸಂಸ್ಕಾರ' ಎಂಬ ಇದರ ಇನ್ನೊಂದು ಜ್ಞಾತಿಪ್ರಾಯವಾದ ಪದ ಇದಕ್ಕಿಂತಲೂ ಮೊದಲಿನಿಂದ ಬಳಕೆಯಲ್ಲಿದೆ. ಪೂಜ್ಯತೆಯನ್ನು ಪಡೆದುಕೊಂಡು ಬಂದಿರುವ 'ಸಂಸ್ಕೃತ' ಭಾಷೆಯ ಸಂಪರ್ಕದಿಂದ ಈ ಶಬ್ದ ಹುಟ್ಟಿದಂತಿದೆ. "ಸಂಸ್ಕಾರ ಅಥವಾ ಸಂಸ್ಕರಣ ಎಂದರೆ ಸಮ್ಯಕ್‌ಶರಣ, ಸಮ್ಯಕ್‌ಕೃತಿ,ಸಂಸ್ಕೃತಿ".[೩] ಎಂದು

ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. 'Culture' ಎಂಬ ಸಮನಾರ್ಥಕ ಪದವನ್ನು ಇಂಗ್ಲಿಷನಲ್ಲಿ ಪ್ರಯೋಗಿಸಲಾಗುತ್ತಿದೆ.

ಮಾನವನ ಬೆಳೆವಣಿಗೆಯ ಇತಿಹಾಸದೊಂದಿಗೆ ಸಂಸ್ಕೃತಿಯ ಇತಿಹಾಸವು ಹೊಂದಿಕೊಂಡಿದೆ. ಸಂಸ್ಕೃತಿಯ ಇತಿಹಾಸವನ್ನು ಶಿಲಾಯುಗದೊಂದಿಗೆ, ಕಲ್ಲಿನ ಸಂಸ್ಕೃತಿಯನ್ನು ಲೋಹಯುಗದೊಂದಿಗೆ, ಪಶುಪಾಲನೆ ಮತ್ತು ವ್ಯವಸಾಯ ಸಂಸ್ಕೃತಿಯನ್ನು ಯಂತ್ರಯುಗದೊಂದಿಗೆ ಆತನ ನಾಗರಿಕ ವಿಸ್ತಾರಗಳನ್ನು ಸಂಸ್ಕೃತಿ ಎಂಬ ಪದ ಅರ್ಥೈಸುತ್ತದೆ.

ಸಂಸ್ಕೃತಿಯನ್ನು ಪ್ರಧಾನವಾಗಿ ಎರಡು ರೀತಿಯಾಗಿ ವಿಂಗಡಿಸಬಹುದು ೧. ಅಭೌತಿಕ ಸಂಸ್ಕೃತಿ ೨. ಭೌತಿಕ ಸಂಸ್ಕೃತಿ.

೧. ಅಭೌತ ಸಂಸ್ಕೃತಿ (non material culture)

"ಇದು ಮಾನವನ ಅಭೌತಿಕ ಸಂಪತ್ತನ್ನು ಪ್ರತಿನಿಧಿಸುತ್ತದೆ. ಅಮೂರ್ತ ಸ್ವರೂಪದ ಭಾಷೆ, ನಂಬಿಕೆ, ಆಚರಣೆಗಳು ರೂಢಿ–ಸಂಪ್ರದಾಯಗಳು, ಲೋಕಾಚಾರ, ನೈತಿಕ ನಿಯಮಗಳು, ಮೌಲ್ಯಾದರ್ಶಗಳು, ಸಿದ್ಧಾಂತಗಳು, ಜೀವನ ದರ್ಶನ, ಕಲೆ–ಸಾಹಿತ್ಯ, ನೃತ್ಯ, ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕ ಮುಂತಾದ ಸಂಸ್ಥೆಗಳನ್ನು ಒಳಗೊಂಡಿದೆ."[೪] ಸಾಧ್ಯತೆ, ಶಿಷ್ಟಾಚಾರ ಅಭಿಪ್ರಾಯಗಳು, ಚಿಂತನೆಗಳು, ಮೌಲ್ಯಗಳು, ಆಸಕ್ತಿ, ಅಭಿರುಚಿಗಳು, ಹವ್ಯಾಸಗಳು ಮನೋರಂಜನಾ ವಿಧಾನಗಳು ಮುಂತಾದವುಗಳು ಮಾನವನ ಆಂತರಿಕ ಪ್ರಗತಿಗೆ ಸಂಬಂಧಿಸಿವೆ.

೨. ಭೌತ ಸಂಸ್ಕೃತಿ (material culture)

"ಭೌತ ಸಂಸ್ಕೃತಿಯು ಮಾನವನ ಭೌತಿಕ ಸಂಪತ್ತನ್ನು ಪ್ರತಿನಿಧಿಸಿ, ಮೂರ್ತ ಸ್ವರೂಪದ, ಮಾನವನ ಬಳಕೆಯ ವಸ್ತುಗಳನ್ನು ಪ್ರತಿಬಿಂಬಿಸುತ್ತದೆ. ಮಾನವ ನಿರ್ಮಿತ ವಸ್ತುಗಳಾದ ಉಪಕರಣಗಳು, ಸಾಧನಗಳು ಪೀಠೋಪಕರಣಗಳು, ಯಂತ್ರೋಪಕರಣಗಳು, ವೈಜ್ಞಾನಿಕ ಸಾಧನಗಳು, ಕಟ್ಟಡಗಳು, ಅಣೆಕಟ್ಟುಗಳು, ರಸ್ತೆ–ಸೇತುವೆಗಳು ಮೋಟಾರು ಬಂಡಿ, ಉಗಿಬಂಡಿ, ಮಾನವನ ಅಗತ್ಯ ಪೂರೈಸುವ ಎಲ್ಲಾ ಬಗೆಯ ಪರಿಕರಗಳನ್ನು ಭೌತ ಸಂಸ್ಕೃತಿಯು ಒಳಗೊಂಡಿದೆ".[೫]

"ಸಂಸ್ಕೃತಿಯು ಒಂದು ಕಡೆ ಮಾನವನ ಅಸ್ತಿತ್ವವನ್ನು 'ಇತರರೊಂದಿಗೆ ಸಮೀಕರಿಸುವಂತೆ ಮತ್ತೊಂದು ಕಡೆ ವಿಶ್ವದ ಜನರಿಂದ ಹೇಗೆ ತಾವು ವಿಭಿನ್ನರಾಗಿದ್ದೇವೆ ಎಂಬುದನ್ನು ತೋರ್ಪಡಿಸತಕ್ಕ ಒಂದು ಪ್ರಕ್ರಿಯೆ".[೬] ಮಲಿನೌಸ್ಕಿ ಎಂಬ ಮಾನವಶಾಸ್ತ್ರಜ್ಞನ ಪ್ರಕಾರ, "ಮಾನವ ತನ್ನ ಜೀವಿತದ ಗೊತ್ತು ಗುರಿಯನ್ನು ರೂಪಿಸಿಕೊಳ್ಳಲು ನಿರ್ಮಿಸಿಕೊಂಡ ಸಾಧನವೇ ಸಂಸ್ಕೃತಿ".[೭] ಗ್ರಹಾಂ ವ್ಯಾಲಸ್ ಪ್ರಕಾರ, "ಸಾಂಪ್ರದಾಯಿಕವಾಗಿ ಬಂದ ಪದ್ಧತಿಗಳ, ಜೀವನ ಮೌಲ್ಯಗಳ ಹಾಗೂ ವಸ್ತುಗಳ ಸಂಗ್ರಹವೇ ಸಂಸ್ಕೃತಿ".

ಸಂಸ್ಕೃತಿ ಎಂದರೆ ಅಂತರಂಗದ ಸೊಬಗು, ಬದುಕಿನ ಬಾಹ್ಯಚರ್ಯೆಯಲ್ಲಿ ಪ್ರಕಟವಾಗುವ ರೀತಿ ಎಂಬ ಮಾತುಗಳೂ ಇವೆ. "ಭಾರತದ ಸಾಂಸ್ಕೃತಿಕ

ಇತಿಹಾಸವನ್ನು ಗುರುತಿಸುವಾಗ ಪ್ರಮುಖವಾಗಿ ಶಿಷ್ಟ ಆಕರ ಮತ್ತು ಜಾನಪದ ಆಕರಗಳನ್ನು ಆಧರಿಸಿಕೊಳ್ಳಬೇಕಾಗಿದೆ. ಇವುಗಳಲ್ಲಿ ಯಾವುದೇ ಒಂದು ಆಕರರಹಿತ ಸಾಂಸ್ಕೃತಿಕ ಇತಿಹಾಸ ಭಾರತದ ಸಮಗ್ರ ಇತಿಹಾಸವಾಗದೆ ಕೇವಲ ಪಾರ್ಶ್ವಿಕವಾಗುತ್ತದೆ. ಹಾಗೆಯೇ ಒಂದು ·ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವಾಗ ಅಲ್ಲಿ ಬರುವ ಶಿಷ್ಟ ಆಕರಗಳು ಮತ್ತು ಜಾನಪದ ಆಕರಗಳು ಮುಖ್ಯವಾಗುತ್ತವೆ."೮ ಒಟ್ಟಾರೆ ಇತ್ತೀಚಿಗೆ ಸಂಸ್ಕೃತಿ ಅಧ್ಯಯನವು ಶೋಧನೆಗಳತ್ತ ಧಾವಿಸುತ್ತಿದೆ. ದಕ್ಷಿಣ ಭಾರತದಲ್ಲಿ ಕರ್ನಾಟಕ ರಾಜ್ಯದ ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿರುವ ನಿಸರ್ಗ ರಮಣೀಯವಾದ ಪ್ರದೇಶ ಕೊಡಗು. ಪ್ರಾಕೃತಿಕ ಚೆಲುವಿಗೆ ಅನ್ವರ್ಥವಾಗಿ ಕೊಡಗಿಗೆ 'ದಕ್ಷಿಣ ಕಾಶ್ಮೀರ' ಎಂಬ ಹೆಸರು ಬಂದಿದೆ.

ಭೂ ಸ್ವರೂಪದಲ್ಲೂ ಪರ್ವತ ನದಿ ಕಂದರಗಳ ಮನೋಹರ ದೃಶ್ಯಗಳಲ್ಲೂ ವನ್ಯಮೃಗ ನಿಬಿಡವಾದ ಅರಣ್ಯಗಳಲ್ಲೂ ಕೊಡಗು ಯುರೋಪ್ ಖಂಡದ 'ಸ್ಕಾಟ್‌ಲ್ಯಾಂಡ್' ದೇಶವನ್ನು ಬಹಳವಾಗಿ ಹೋಲುತ್ತದೆಂದು ಹಿಲ್ಟನ್‌ಬ್ರೌನ್ ಎಂಬ ಅಧಿಕಾರಿಯು ಹೊಗಳಿದ್ದಾನೆ. ಕೊಡಗಿನ ಸಾಂಸ್ಕೃತಿಕ ಆರ್ಥಿಕ, ಸಾಮಾಜಿಕ ರಾಜಕೀಯ ಹಾಗೂ ಭೌಗೋಳಿಕ ಅಂಶಗಳು ತಮ್ಮದೇ ಆದ ವಿಶಿಷ್ಟ ಲಕ್ಷಣಗಳಿಂದ ಕೂಡಿದ್ದು, ಅಕ್ಕ ಪಕ್ಕದ ಜಿಲ್ಲೆಗಳಿಗಿಂತ ವೈವಿಧ್ಯಮಯವಾಗಿದೆ.

ಕೊಡಗಿನಲ್ಲಿ ಅನೇಕ ಜಾತಿ, ಜನಾಂಗ ವರ್ಣ, ಬುಡಕಟ್ಟು ಮತ್ತು ವಿಶೇಷ ವರ್ಗದ ಜನರು ನೆಲೆಸಿದ್ದಾರೆ. ಕೊಡವರ ಜೊತೆಗೆ ಮೂಲನಿವಾಸಿಗಳಾದ, ಜೇನುಕುರುಬರು, ಬೆಟ್ಟಕುರುಬರು, ಮಲೆಕುಡಿಯರು, ಬಂಟರು, ಒಕ್ಕಲಿಗರು, ಸಾಮಧಾರಿಗಳು, ಕುರುವಿನಶೆಟ್ಟರು, ಕ್ರಿಶ್ಚಿಯನ್ನರು, ಮುಸ್ಲಿಮರು, ಫಣಿಯರು, ಲಿಂಗಾಯತರು, ಅರೆಗೌಡರು, ಕೇರಳ ಮೂಲದ ಮಾಪಿಳ್ಳೆಗಳು, ತಮಿಳಿಗರು, ಈಡಿಗರು, ಬ್ರಾಹ್ಮಣರು, ನಾಯಕರುಗಳು, ತೀಯರುಗಳು ಮುಂತಾದ ಮತಸ್ಥರಿದ್ದರೂ, ಕೊಡವರು ಇತರ ಕೋಮಿನವರಿಗಿಂತ ಹೆಚ್ಚು ಸಂಖ್ಯೆಯಲ್ಲಿ ನೆಲೆಸಿದ್ದಾರೆ.

ಭಾಷೆ, ಸಾಹಿತ್ಯ, ಕಲೆ, ವಾಸ್ತುಶಿಲ್ಪ, ವಾದ್ಯ, ಸಂಗೀತ ಪದ್ಧತಿ, ರೂಢಿ ಸಂಪ್ರದಾಯ, ನಂಬಿಕೆ, ಗಾದೆ, ಒಗಟು, ಕಥೆ, ನೃತ್ಯ, ನಾಟಕ, ವೇಷಭೂಷಣಗಳು, ಆಭರಣಗಳು, ಪುರಾಣ ಇತಿಹಾಸ ಮುಂತಾದ ಸಾಂಸ್ಕೃತಿಕ ಸಂಪತ್ತು ಹೇರಳವಾಗಿ ಕಂಡುಬರುತ್ತದೆ. ಅಪಾರವಾದ ವನ್ಯ ಸಂಪತ್ತು, ನದಿ ಜಲಪಾತ, ಕಾಡುಗಳು, ಗಿರಿಧಾಮ ಪರ್ವತಗಳಿಂದ ಕೂಡಿದ ಈ ಜಿಲ್ಲೆಯನ್ನು 'ಕಾವೇರಮ್ಮನ ಪವಿತ್ರ ನಾಡೆಂದೂ' ಧಾರ್ಮಿಕವಾಗಿ ಗುರುತಿಸಲಾಗುತ್ತದೆ. ಕೊಡಗಿನ ಇತಿಹಾಸಕ್ಕೆ ಸಂಬಂಧಿಸಿದಂತೆ ಪೌರಾಣಿಕ ಉಲ್ಲೇಖಗಳು ಇತಿಹಾಸ ಪೂರ್ವಕಾಲದ ದಾಖಲೆಗಳು, ಇತಿಹಾಸಕಾಲದ ವಿವರಗಳು ಲಭಿಸುತ್ತವೆ. ಐತಿಹಾಸಿಕ ಮಹತ್ವ ಪಡೆದಿರುವ ಈ ಪ್ರದೇಶವನ್ನು ಗಂಗರು, ಕದಂಬರು ಹೊಯ್ಸಳರು, ಕೊಂಗಾಳ್ವರು, ಚೆಂಗಾಳ್ವರು, ವಿಜಯನಗರದ ಅರಸರು, ಕೊಡಗಿನ ಒಡೆಯರು, ದೊಡ್ಡ ವೀರ ರಾಜೇಂದ್ರ, ಲಿಂಗರಾಜೇಂದ್ರ, ಚಿಕ್ಕ ವೀರ ರಾಜೇಂದ್ರ, ಬ್ರಿಟಿಷರು ಆಳ್ವಿಕೆ ನಡೆಸಿ ತಮ್ಮ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಿದ್ದಾರೆ.

ಕೊಡವರು ಮೂಲತಃ ಬೇಸಾಯಗಾರರು, ಅಷ್ಟೇ ಅಲ್ಲ ಬೇಟೆಗಾರರು ಮತ್ತು ಹೋರಾಟಗಾರರೂ ಹೌದು. ಈ ನೆಲದ ಜನರ ಶಾರೀರಕ ರಚನೆ, ಬಣ್ಣ, ವೇಷಭಾಷೆ, ಉಡುಗೆ ತೊಡುಗೆ, ನಡೆನುಡಿ, ಆಚಾರ ವಿಚಾರ, ಉಟೋಪಚಾರಗಳಲ್ಲಿ ವಿಶಿಷ್ಟ ಜೀವನ ಶೈಲಿಯನ್ನು ರೂಢಿಸಿಕೊಂಡಿದ್ದಾರೆ. ಇವರು ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ತಮ್ಮ ಸ್ವಂತಿಕೆಯನ್ನು ತೋರಿಸಿಕೊಟ್ಟಿದ್ದಾರೆ.

ಉದ್ದೇಶ

ಕೊಡಗಿನ ಪರಿಸರದಲ್ಲಿ ಹುಟ್ಟಿ ಬೆಳೆದ ನನಗೆ ಕೊಡವ ಸಂಸ್ಕೃತಿ ಬಗ್ಗೆ ಮೊದಲಿನಿಂದಲೂ ಕುತೂಹಲವಿತ್ತು. ವೀರರೂ ರಮ್ಯಜೀವಿಗಳಾದ ಇವರು ಇತರರಿಗಿಂತ ಭಿನ್ನವಾಗಿದ್ದಾರೆ. ಕೊಡವರ ಪದ್ಧತಿಗಳು, ಆಚಾರ–ವಿಚಾರಗಳು, ಸಂಪ್ರದಾಯಗಳು, ಸಂಸ್ಕಾರಗಳು ವಿಶಿಷ್ಟವಾದವು ಮಾತ್ರವಲ್ಲ ಆಕರ್ಷಣೀಯವೂ ಆಗಿವೆ. ಕೊಡವರ ಉಡುಪು ಅವರ ಶಾರೀರಿಕ ಲಕ್ಷಣಗಳು ನಯನ ಮನೋಹರವಾಗಿ ಕಂಗೊಳಿಸುತ್ತವೆ. ಮದುವೆ, ಹುಟ್ಟು, ಹಬ್ಬಹರಿದಿನ, ಜಾತ್ರೆ–ಉತ್ಸವ, ಸಾವು, ಈ ಎಲ್ಲಾ ಪಾರಂಪರಿಕ ಪದ್ಧತಿಗಳಲ್ಲೂ ತಮ್ಮತನವನ್ನು ಉಳಿಸಿಕೊಂಡಿದ್ದಾರೆ. ಕೆ.ಎಂ.ಕಾರ್ಯಪ್ಪನವರು ಒಂದೆಡೆ ಹೀಗೆ ಹೇಳುತ್ತಾರೆ. “ನಾವು ಭಾರತದ ಜಾತ್ಯಾತೀತ, ಧರ್ಮಾತೀತ ಸಮಾಜಕ್ಕೆ ಸೇರಿದವರೆಂಬ ಭಾವನೆಯಿಂದ ಕೊಡವ ಜನಾಂಗಕ್ಕೆ ನಾವು ಸಾಂಸ್ಕೃತಿಕ ದೃಷ್ಟಿಯಲ್ಲಿ ಮಾಡಬೇಕಾದ ಕರ್ತವ್ಯವನ್ನು ಕಡೆಗಣಿಸುವುದಾದರೆ, ನಮ್ಮ ಆರ್ಶೆಯ ಪದ್ಧತಿ ಪರಂಪರೆಗಳಿಗನುಸಾರ ವರ್ತಿಸುವುದು ಭಾರತದ ಜನತೆಯ ಐಕ್ಯತೆಯ ಕಾರಣಕ್ಕೆ ಸರಿಹೋಗುವುದಿಲ್ಲವೆಂದು ಭಾವಿಸುವುದಾದರೆ ಅದು ನಮ್ಮ ಮಾತೃಭೂಮಿಯ ಬಹುಶಃ, ಸಾಂಸ್ಕೃತಿಕ ಪ್ರಗತಿ ಹಾಗೂ ಪ್ರವರ್ಧನೆಗೆ ಅತಿ ದುಃಖಕರ ದಿನವಾಗಿ ಪರಿಗಣಿಸುವುದರಲ್ಲಿ ಸಂಶಯವಿಲ್ಲ. ನಾವೆಲ್ಲರೂ 'ರೋಬೋಟ್'ಗಳಂತಾಗುವುದರಲ್ಲೂ ಸಂದೇಹವಿಲ್ಲ. ಈ ಪುರಾತನ ದೇಶದ ಐನೂರು ವಲಯ ಜನತೆಯು ಯಂತ್ರ ತಯಾರಿತ ವಸ್ತುಗಳಂತೆ ಒಂದೇ ರೀತಿಯ ಜೀವನ ಎಂದೂ ನಡೆಸಲಾರರು. ಅದೂ ಅಸಾಧ್ಯವಾದ ವಿಚಾರ ಮಾತ್ರವಲ್ಲ, ಖಂಡಿತವಾಗಿಯೂ ಅವಶ್ಯಕವಾದ ವಿಚಾರವೂ ಅಲ್ಲ. ಎಂದೂ “ಭಾರತೀಯ ಹಿರಿಯ ಸಂಸ್ಕೃತಿಯು ಘನ ಗಂಭೀರತೆಯಿಂದ ಉಳಿಯಬೇಕಾದರೆ ಭಾರತೀಯ ಪ್ರತಿಯೊಂದು ಜನಾಂಗವೂ ತನ್ನ ಪದ್ಧತಿ, ಪರಂಪರೆ, ಉಡುಪು, ನೃತ್ಯ, ಸಂಗೀತ, ಹಬ್ಬ, ಉತ್ಸವ ಹಾಗೂ ಸಾಮಾಜಿಕ ಆಚರಣೆಗಳನ್ನು ಪವಿತ್ರವಾಗಿ ಉಳಿಸಿಕೊಂಡು ಸದಾಕಾಲವು ನೂರಕ್ಕೆ ನೂರರಷ್ಟು ಭಾರತೀಯರಾಗಿ ಉಳಿಯಲು ಪ್ರಯತ್ನಿಸಬೇಕು” (ಬಿ.ಡಿ.ಗಣಪತಿಯವರ 'ಕೊಡವರು' ಮುನ್ನುಡಿಯಿಂದ) ಎಂಬ ಮಾತುಗಳು ಸಹ ಈ ಅಧ್ಯಯನವು ಕೊಡಗಿನ ಸಾಂಸ್ಕೃತಿಕ ಅಧ್ಯಯನದ ಮಹತ್ವವನ್ನು ಪುಷ್ಟೀಕರಿಸುತ್ತದೆ.

ಕೊಡವರ ಆಚಾರ ವಿಚಾರ, ನಡೆ, ನುಡಿ, ಸಂಸ್ಕೃತಿಯು ಇತರ ಹಿಂದೂ ಸಂಸ್ಕೃತಿಯ ಸಮುದಾಯದವರಿಗಿಂತಲೂ ಭಿನ್ನವಾಗಿವೆ. ಈ ಕೊಡವರು ಯಾರು?

ಇವರು ಎಲ್ಲಿಂದ ಬಂದರು?ಇವರು ಕೊಡಗಿನ ನಿವಾಸಿಗಳೆ? ಭಾರತದ ಇತರೆಡೆಗಳಿಂದ ಬಂದವರೆ? ಅಥವಾ ಭಾರತದ ಹೊರಗಿನಿಂದ ಬಂದವರೇ? ಎಂಬ ಜಿಜ್ಞಾಸೆ ಮೂಡುತ್ತದೆ. ಕೊಡವರ ಭಾಷೆ ಪದ್ಧತಿಗಳೆಲ್ಲಾ, ಸಾಮಾನ್ಯತಹ ದಕ್ಷಿಣಭಾರತದ್ದೇ ಆದರೂ ಅವರ ವಿಶೇಷ ಶಾರೀರಿಕ ರಚನೆ, ಮದುವೆ, ಶವಸಂಸ್ಕಾರ ಮುಂತಾದ ಪದ್ಧತಿಗಳಲ್ಲಿನ ವೈಶಿಷ್ಟ್ಯಗಳು ಕುತೂಹಲ ಕೆರಳಿಸುತ್ತವೆ. ಈ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುವ ಸಂದರ್ಭದಲ್ಲಿ ಈಗಾಗಲೇ ಈ ಕುರಿತು ಆಗಿರುವ ಅಧ್ಯಯನಗಳು ಪ್ರಕಟಗೊಂಡ ಕೃತಿಗಳು ಲೇಖನಗಳು, ಸರ್ಕಾರಿ ದಾಖಲೆಗಳು ಇತ್ಯಾದಿಗಳನ್ನು ಆಕರಗಳಾಗಿ ಅಧ್ಯಯನ ಮಾಡಿದಾಗ ಇದರಿಂದ ಮತ್ತಷ್ಟು ಕುತೂಹಲ ಹೆಚ್ಚಾಗಿ ಕೆಲವು ಸಂದೇಹಗಳು ಹಾಗೆಯೇ ಉಳಿದವು. ಅವುಗಳ ಪರಿಹಾರಕ್ಕಾಗಿ ಕೊಡಗಿನಲ್ಲಿ ವಾಸಮಾಡುವ ಹಳೇ ತಲೆಮಾರಿನ ಕೆಲವರನ್ನು ಸಂದರ್ಶಿಸಿ ಹಲವು ಕುತೂಹಲ ವಿಚಾರಗಳನ್ನು ದಾಖಲಿಸಿಕೊಳ್ಳಲಾಯಿತು. ಕೆಲವು ವಿಚಾರಗಳು ಗ್ರಂಥಗಳಲ್ಲಿ ಈಗಾಗಲೇ ದಾಖಲಾಗಿರುವ ವಿಚಾರಗಳಿಗೆ ಹತ್ತಿರವಾಗಿ ಕಂಡುಬಂದರೆ, ಇನ್ನು ಕೆಲವು ವಿಚಾರಗಳು ದಾಖಲಾಗಿಲ್ಲ ಎನಿಸಿತ್ತು, ಅವೆಲ್ಲವನ್ನು ಒಂದು ಕಡೆ ಕಲೆಹಾಕಿ ಕೊಡವರ ಸಮಗ್ರ ಸಂಸ್ಕೃತಿಯನ್ನು ಕಟ್ಟಿ ಕೊಡುವ ಉದ್ದೇಶದಿಂದ ಸಂಶೋಧನೆಯನ್ನು ಕೈಗೊಂಡು ಈ ಕೃತಿಯಲ್ಲಿ ಅವುಗಳನ್ನು ಕ್ರಮಬದ್ಧವಾದ, ಅಧ್ಯಯನಗಳಿಗನುಗುಣವಾಗಿ ಚರ್ಚಿಸಲಾಗಿದೆ.

ಇತ್ತೀಚಿನ ಸಂಶೋಧನಾ ವಿಧಿ ವಿಧಾನಗಳಲ್ಲಿ ಆಗಿರುವ ಮಾರ್ಪಾಡುಗಳನ್ನು ಗಮನದಲ್ಲಿಟ್ಟುಕೊಂಡು ಸೈದ್ಧಾಂತಿಕ ಸಿದ್ಧಾಂತದ ಹಿನ್ನೆಲೆಯಲ್ಲಿ ಜಾನಪದ ಸಂಶೋಧನಾ ಮಾರ್ಗವನ್ನು ಲಕ್ಷಿಸಿ ಈ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಕೊಡವ ಭಾಷೆಯನ್ನಾಡುವ ವಿಶೇಷ ಮನೆತನದ ಹೆಸರಿನಿಂದ ಕುಟುಂಬಗಳ ಆಚಾರ ವಿಚಾರಗಳನ್ನು ಎತ್ತಿಹಿಡಿದು, ಕೃಷಿಯನ್ನು ಪ್ರಮುಖ ಕಸುಬಾಗಿ ಸ್ವೀಕರಿಸಿದ ಕೊಡವರ ಸಮಾಜೋ-ಸಾಂಸ್ಕೃತಿಕ ಅಧ್ಯಯನದಲ್ಲಿ ಕೊಡವರ ಸಾಮಾಜಿಕ ಸಾಂಸ್ಕೃತಿಕ ಜೀವನ ಪದ್ಧತಿಗಳ ಸ್ಥಾನಮಾನಗಳನ್ನು ಕೊಡಗಿನ ಇತರ ಪ್ರಮುಖ ಸಮುದಾಯಗಳೊಡನೆ ತೌಲನಿಕ ಅಧ್ಯಯನದ ಮೂಲಕ ಅನನ್ಯತೆಯ ನೆಲೆಯನ್ನು ಶೋಧಿಸುವ ನಿಟ್ಟಿನಲ್ಲಿ ಪ್ರಸ್ತುತ ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಐತಿಚಂಡ ರಮೇಶ್ ಉತ್ತಪ್ಪ ಅವರು ತಮ್ಮ 'ಕೊಡವ ಸಾಂಸ್ಕೃತಿಕ ಅಧ್ಯಯನ' ಎಂಬ ಕೃತಿಯಲ್ಲಿ ಕೊಡವರ ಪದ್ಧತಿ, ಆಚರಣೆಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ಕೊಡವರ ಕುರಿತು ನಡಿಕೇರಿಯಂಡ ಚಿಣ್ಣಪ್ಪ ಅವರು ೧೯೨೪ ರಲ್ಲಿ ರಚಿಸಿರುವ 'ಪಟ್ಟೋಲೆ ಪಳಮೆ' ದಕ್ಷಿಣ ಭಾರತದ ಮೊದಲ ಜಾನಪದ ಕೃತಿಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕೊಡವ ಜಾನಪದ ಹಾಗೂ ಸಂಸ್ಕೃತಿ ಕುರಿತು ಅಧ್ಯಯನ ನಡೆಸುವವರಿಗೆ ಇದು ಆಧಾರಗ್ರಂಥವಾಗಿದೆ ಹಾಗೂ ಕೊಡವ ಸಂಸ್ಕೃತಿಯನ್ನು ಸಂಗ್ರಹಿಸುವ ದಾಖಲಿಸುವ ಕಾರ್ಯಕ್ಕೆ ಯಾರೇ ಕೈ ಹಾಕಿದರೂ ಅವುಗಳಲ್ಲಿ ಪಟ್ಟೋಲೆ ಪಳಮೆಯ ನೆರಳು ಕಾಣಿಸಿಕೊಳ್ಳುತ್ತದೆ ಎಂದು ಹೇಳಿರುವುದು ಅಕ್ಷರ ಸಹ ವಾಸ್ತವವಾದ ಸಂಗತಿ. ಚಿಣ್ಣಪ್ಪ ಮತ್ತು ಇತರರು ಕೊಡವ ಸಂಸ್ಕೃತಿ

ಮತ್ತು ಜಾನಪದವನ್ನು ಸಂಗ್ರಹಿಸುವುದರಲ್ಲೇ ತೃಪ್ತಿ ಕಂಡಂತೆ ಕಾಣುತ್ತದೆ. ಆದರೆ ವಿವಿಧ ಆಯಾಮಗಳ ವಿಶ್ಲೇಷಿಸುವ ಕಾರ್ಯ ಇದುವರೆಗೂ ತೃಪ್ತಿಕರವಾಗಿ ನಡೆದಿಲ್ಲ. ಅದಕ್ಕೂ ಮುನ್ನ ಕೊರವಂಡ ಅಪ್ಪಯ್ಯ ಅವರ ಕೊಡವ ಕುಲಾಚಾರದಿ ತತ್ತ್ವೋಜ್ಜೀವಿನಿ ಕೃತಿಯನ್ನು ಗಮನಿಸಬೇಕಾಗುತ್ತದೆ. ಹಾಗೆಯೇ ಐತಿಚಂಡ ರಮೇಶ ಉತ್ತಪ್ಪರವರ ಕೊಡವ ಸಾಂಸ್ಕೃತಿಕ ಅಧ್ಯಯನವು ಇತ್ತೀಚಿನ ಮಹತ್ವದ ಕೃತಿಗಳಲ್ಲೊಂದಾಗಿದ್ದು, ಕೊಡವ ಸಾಂಸ್ಕೃತಿಕ ಅಧ್ಯಯನಕ್ಕೆ ಒಂದು ಆಕರ ಗ್ರಂಥವಾಗಿ ಹೊರಹೊಮ್ಮಿದೆ. ಆದರೆ ಈ ಕೃತಿಯಲ್ಲಿ ಅವರೇ ತಿಳಿಸಿರುವ ಹಾಗೆ ಕೊಡವರ ಸಂಸ್ಕೃತಿಯನ್ನು ಕುರಿತಂತೆ ಜನನದಿಂದ (ಮೂಲ) ವಿವಾಹದವರೆಗೆ ಮಾತ್ರ ಕಟ್ಟಿಕೊಟ್ಟಿರುವುದು ಕಂಡುಬರುತ್ತದೆ.

ಒಟ್ಟಿನಲ್ಲಿ ಕೊಡವರ ಸಂಸ್ಕಾರಗಳ ಸಮಾಜೋ ಸಾಂಸ್ಕೃತಿಕ ಅಧ್ಯಯನವನ್ನು ಕುರಿತಂತೆ ಸಮಗ್ರ ಅಧ್ಯಯನ ನಡೆದಿಲ್ಲವೆಂದೇ ಹೇಳಬಹುದು. ಕೊಡವರ ಇತಿಹಾಸ, ಭಾಷೆ ವೇಷ ಭೂಷಣಗಳು, ಆಚಾರ ವಿಚಾರಗಳು, ಸಂಪ್ರದಾಯ ನಂಬಿಕೆ ಈ ಎಲ್ಲವೂ ಕೂಡ ಇತರೆ ಯಾವುದೇ ಸಮುದಾಯಕ್ಕಿಂತ ಭಿನ್ನವಾಗಿ ನಿಲ್ಲುವಂತಹವು. ಪ್ರಸ್ತುತ ಸಂದರ್ಭದಲ್ಲಿ ಇಡೀ ಸಾಮಾಜಿಕ ವ್ಯವಸ್ಥೆಯೇ ಹದಗೆಟ್ಟು ಹೋಗುತ್ತಿದೆ. ಮೂಲಸಂಸ್ಕೃತಿಯನ್ನು ಉಳಿಸಿಕೊಳ್ಳಲಾಗದ ಕ್ಲಿಷ್ಟ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಆಧುನಿಕ ಸಮಾಜದ ಆಗುಹೋಗುಗಳಿಗೆ ಸ್ಪಂದಿಸಲೇ ಬೇಕಾದ ಅನಿವಾರ್ಯ ಎದುರಾಗಿದೆ. ನಾಲ್ಕು-ಐದು ದಿವಸ ನಡೆಯುತ್ತಿದ್ದ ಮದುವೆ ಒಂದೇ ದಿನ ಅಥವಾ ಕೆಲವು ಗಂಟೆಗಳಲ್ಲಿ ಯಾಂತ್ರಿಕವಾಗಿ ನಡೆಯುತ್ತಿದೆ. ಶಾಸ್ತ್ರ ಸಂಪ್ರದಾಯಗಳ ಅನುಸರಣೆಗೆ ಅವಕಾಶವಿಲ್ಲದಾಗಿದೆ. ಆದರೆ ಭಾರತೀಯ ಸಂಸ್ಕೃತಿಯ ಮೂಲ ವಾದ 'ಅನೇಕತೆಯಲ್ಲಿ ಏಕತೆ' ಎಂಬ ತತ್ವ ಇಡೀ ವಿಶ್ವಕ್ಕೆ ಮಾದರಿಯಾದುದು. ಭಾರತೀಯ ಸಂಸ್ಕೃತಿಯಲ್ಲಿ ತನ್ನದೇ ಆದ ಸಂಸ್ಕಾರಯುಕ್ತ ಸನ್ಮಾರ್ಗವಿದೆ. ಅಂತಹ ಅಮೂಲ್ಯವಾದ ಸಂಸ್ಕೃತಿಯ ಮೂಲ ಸೆಲೆಯನ್ನು ಎಲ್ಲಾ ಮಜಲುಗಳಿಂದ ಹುಡುಕಿ ಸಂಗ್ರಹಿಸಿ, ಸಂಶ್ಲೇಷಿಸಿ ದಾಖಲಿಸುವ ಅಗತ್ಯ ಇಂದು ನಮ್ಮದಾಗಿದೆ. ಒಂದೊಂದು ಜನ-ಸಮುದಾಯದಲ್ಲೂ, ಒಂದೊಂದು ಪ್ರದೇಶದಲ್ಲೂ, ತನ್ನದೇ ಆದ ಸಂಸ್ಕಾರಯುತ ಸಂಸ್ಕೃತಿ ನೆಲೆ ನಿಂತು ನೆರಳಾಗಿ ಕಾಪಾಡಿರುತ್ತದೆ. ಅಂತಹ ಸಂಸ್ಕೃತಿಯನ್ನು ತಲಸ್ಪರ್ಶಿ ಅಧ್ಯಯನದಿಂದ ಮತ್ತು ಕೆಳಸ್ತರದ ಅಧ್ಯಯನದಿಂದ (ಸೂಕ್ಷ್ಮತರ) ಮಾತ್ರ ಕಟ್ಟಿಕೊಡಲು ಸಾಧ್ಯ. ಈ ಹಿನ್ನೆಲೆಯಲ್ಲಿ ಕೊಡಗಿನ ಪ್ರದೇಶದಲ್ಲಿ ನೆಲೆಸಿರುವ ಕೊಡವರ ಸಂಸ್ಕಾರಗಳನ್ನು ಸಮಾಜೋ-ಸಾಂಸ್ಕೃತಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಪ್ರಯತ್ನದ ಫಲವಾಗಿ ಪ್ರಸ್ತುತ ಈ ಕೃತಿ ರೂಪುಗೊಂಡಿದೆ.

ಕೊಡಗಿನಲ್ಲಿ ಇಪ್ಪತ್ಮೂರು ಕೊಡವ ಭಾಷೆಯನ್ನಾಡುವ ಉಪಸಮುದಾಯ ಗಳಿದ್ದರೂ, ಸಂಪ್ರದಾಯ ಆಚರಣೆಯಲ್ಲಿ ಕೊಡವರು ಹೇಗೆ ಭಿನ್ನವಾಗಿದ್ದಾರೆ, ಇವರ ಸಂಸ್ಕಾರಗಳು ಹೇಗೆ ಅನನ್ಯತೆಯನ್ನು ಉಳಿಸಿಕೊಂಡಿವೆ ಎಂಬುದನ್ನು ಗುರುತಿಸುವುದು ಸಂಶೋಧನಾ ಕೃತಿಯ ಉದ್ದೇಶವಾಗಿದೆ.

ಕೊಡವ ಸಮುದಾಯದ ಬಗ್ಗೆ ಇದುವರೆಗೆ ದೊರೆಕಿರುವ ಸಾಹಿತ್ಯಾಧಾರಗಳು

ಮೊದಲಿಗೆ ಕೊಡಗಿನ ಜನಪದ ಗೀತೆಗಳ ಸಂಗ್ರಹಣೆ ನಡೆದದ್ದು ಜರ್ಮನ್ ಮಿಷನರಿಗಳಾದ ಗ್ರೇಟರ್ ಮತ್ತು ಜಾರ್ಜ್ ರಿಕ್ಟರ್ ಅವರ ಮೂಲಕ ಎನ್ನಬಹುದು. ಧರ್ಮ ಪ್ರಚಾರಕ್ಕಾಗಿ ಕೊಡಗಿಗೆ ಬಂದ ರಿಕ್ಟರ್ ಮಡಿಕೇರಿಯಲ್ಲಿ ಮುಖ್ಯೋಪಾಧ್ಯಾಯರಾಗಿ, ಇನ್ಸ್‌ಪೆಕ್ಟರ್ ಆಗಿ ಕೆಲವು ದಿವಸ ಕೆಲಸ ಮಾಡಿದರು. ಈ ಸಂದರ್ಭದಲ್ಲಿ ಕೊಡಗು ಜಿಲ್ಲಾ ಗೆಜೆಟಿಯರ್ ಅನ್ನು ರಚಿಸಿಕೊಟ್ಟರು.

ಗೋವರ್ ಎಂಬುವರು The folksongs of Southern India, ೧೮೭೧ ಎಂಬ ಸಂಕಲನದಲ್ಲಿ ಗ್ರೇಟರ್ ಮತ್ತು ರಿಕ್ಟರ್‌ರವರು ಸಂಗ್ರಹಿಸಿದ ಶಿಶುಪ್ರಾಸಗಳಲ್ಲಿ ಹುತ್ತರಿ ಹಾಡುಗಳನ್ನು ದಾಖಲಿಸಿದ್ದಾರೆ. ಸ್ವತಃ ಇವರು ಕೊಡಗಿನ ವಿಶಿಷ್ಟ ಹಬ್ಬವಾದ ಹುತ್ತರಿ ಹಬ್ಬ ಮತ್ತು ಕೆಲವು ವಿವರಗಳನ್ನು ಈ ಕೃತಿಯಲ್ಲಿ ನೀಡಿದ್ದಾರೆ.

ಬಿ.ಎಲ್.ರೈಸ್ ಅವರು ಮೈಸೂರು ಗೆಜೆಟಿಯರ್ ಮತ್ತು ಕೊಡಗು ಜಿಲ್ಲಾ ಗೆಜೆಟಿಯರ್ ಅನಂತ ಕೃಷ್ಣ ಅಯ್ಯರ್ ಮತ್ತು ಹೆಚ್.ವಿ.ನಂಜುಂಡಯ್ಯನವರ 'The Mysore Caste and Tribe' ಗ್ರಂಥಗಳಲ್ಲೂ ಕೂಡ ಕೊಡವರ ಪ್ರಸ್ತಾಪವಿದೆ. ಕೊಡಗಿನವರೇ ಆದ ಐ.ಮಾ.ಮುತ್ತಣ್ಣನವರ 'Coorg Memories' ಶ್ರೀ ಪೆರಿಯಂಡ ಚಂಗಪ್ಪ ಅವರು 'ಕೊಡವರ ಅಂದೋಳತ್ ಪಾಟ್'ನಲ್ಲಿ ಕೊಡಗಿನ ಬಗ್ಗೆ ವಿವರಗಳಿವೆ. ೧೮೮೬ ರಲ್ಲಿ ಜೆ.ಎಫ್.ವೈಲ್ 'ಕೊಡವ ಪಡಿಮೆ' (A Selection of Coorg Proverbs) ಎಂಬ ಕೃತಿಯನ್ನು ಪ್ರಕಟಿಸಿದರು. ಇದು ಕೊಡವ ಜಾನಪದ ಕುರಿತ ಮೊದಲ ಪ್ರಕಟಿತ ಕೃತಿ. ನಡಿಕೇರಿಯಂಡ ಚಿಣ್ಣಪ್ಪನವರು (೧೯೨೪ ರಲ್ಲಿ) 'ಪಟ್ಟೋಲೆ ಪಳಮೆ' ಎಂಬ ಕೃತಿಯನ್ನು ಸಂಗ್ರಹಿಸಿದರು. ಇದರಲ್ಲಿ ಕೊಡವರ ಲಾವಣಿಗಳು, ಜನಪದ ಕತೆಗಳು, ಗಾದೆಗಳು ಒಗಟುಗಳು ಇತಿಹಾಸ ಪರಂಪರೆ ಮುಂತಾದ ಮಹತ್ವ ವಿಚಾರಗಳು ದಾಖಲಾಗಿವೆ. ಬಿ.ಡಿ. ಗಣಪತಿಯವರ ಕೊಡಗು ಮತ್ತು ಕೊಡವರು ಕೃತಿ ಕೊಡವರ ಬಗ್ಗೆ ವಿಶೇಷವಾದ ಮಾಹಿತಿಯನ್ನು ಒದಗಿಸುವಂತದ್ದು. ಇದರಲ್ಲಿ ಕೊಡವರ ಜೀವನ ನಂಬಿಕೆ, ಸಂಪ್ರದಾಯ, ಆಚರಣೆ ಹಬ್ಬ ಹಾಗೂ ಹಾಡು, ನಾಣ್ನುಡಿ ಇತ್ಯಾದಿಗಳ ಬೃಹತ್ ಭಂಡಾರವೇ ಅಡಗಿದೆ. ಅವರ ಮತ್ತೊಂದು ಕೃತಿ 'Kodava's Comprehensive Study' ಇದು ಕೊಡವ ಸಾಹಿತ್ಯ ಮತ್ತು ನೃತ್ಯಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ. ಡಿ.ಎನ್.ಕೃಷ್ಣಯ್ಯನವರ ಕೊಡಗಿನ ಇತಿಹಾಸ, ಎಂ.ಪಿ. ಕಾರ್ಯಪ್ಪ ಅವರ Coorg and their origins, ಒ.ಓ. ಶ್ರೀನಿವಾಸ್‌ರವರ Religion and Society among the Coorg of South India ಐ.ಮಾ. ಮುತ್ತಣ್ಣನವರ Coorg memorie, ಕೆ.ಪಿ. ಮುತ್ತಣ್ಣನವರ ಜಗತ್ತಿಗೊಂದೇ ಕೊಡಗು, ಇವೆಲ್ಲಾ ಕೃತಿಗಳು ಕೊಡಗಿನ ಸಾಂಸ್ಕೃತಿಕ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ.

ಶ್ರೀನಿವಾಸ್ ಅಯ್ಯಂಗಾರ್‌ರವರು 'ಕಾವೇರಿ ಪುರಾಣ'ವನ್ನು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಆನಂತರ ಅದು ಕೊಡವ ಭಾಷೆಗೂ ಭಾಷಾಂತರ ಗೊಂಡಿದೆ. ಶ್ರೀ ವಿ.ಎಸ್.ರಾಮಕೃಷ್ಣರವರೂ 'ಕಾವೇರಿ'ಯನ್ನು ಕುರಿತು ಕೊಡವ

ಭಾಷೆಯಲ್ಲಿ ಕಾವ್ಯ ಬರೆದಿದ್ದಾರೆ. ಮಂಡೀರ ಜಯ ಅಪ್ಪಣ್ಣ ಅವರು 'ಜಯ ಭಾರತ' ಕೊಡವ ಭಾಷಿಕ ಮಹಾಭಾರತವನ್ನು ರಚಿಸಿದ್ದಾರೆ.

ಟಿ.ಎಸ್. ರಾಜಪ್ಪ ಅವರು 'ಕೆರೆಹೊನ್ನಮ್ಮ ಮತ್ತು ಇತರ ಲಾವಣಿಗಳು', ಡಾ.ಜಿ.ಶಂ.ಪರಮಶಿವಯ್ಯನವರು "ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು" ಎಂಬುದನ್ನು ಹೊರತಂದಿದ್ದಾರೆ. ಇದರಲ್ಲಿ ಪಿರಿಯಾಪಟ್ಟಣ ಕಾಳಗದ ಘಟನೆಯನ್ನು ಚಿತ್ರಿಸುವ ಜನಪದ ಹಾಡಿನೊಡನೆ ಕೊಡಗಿನ ಹಾವೇರಿ ಅರಸರಿಗೆ ಸಂಬಂಧಿಸಿದ ಲಿಂಗರಾಜನ ಕಥೆಯನ್ನು ಪ್ರಸ್ತಾಪಿಸಿದ್ದಾರೆ. ಹಾಗೂ ಲಿಂಗರಾಜಮ್ಮನಿಗೆ ಸಂಬಂಧಿಸಿದ ಲಾವಣಿಯಲ್ಲಿ ಜನಪದ ವೀರ ಕಾವ್ಯಗಳು ಎಂಬ ಸಂಗ್ರಹದಲ್ಲಿ ಪ್ರಕಟಿಸಿದ್ದಾರೆ.

ಸ್ವಾಮಿಗೌಡ ಅವರು ತಮ್ಮ 'ಜನಪದ ಕಥನಗೀತೆಗಳು' ಎಂಬ ಸಂಗ್ರಹದಲ್ಲಿ ಲಿಂಗರಾಜನನ್ನು ಕುರಿತ ಕಾವ್ಯವನ್ನು ಸಂಗ್ರಹಿಸಿದ್ದಾರೆ. ಕೊಡಗಿನ ನಿಂಗವ್ವಳನ್ನು ಕುರಿತು ಅಂಬಳಿಕೆ ಹಿರಿಯಣ್ಣನವರು ತಮ್ಮ 'ತಂಬೂರಿ ಸಂಪ್ರದಾಯದ ಕಾವ್ಯಗಳು' ಎಂಬ ಕೃತಿಯಲ್ಲಿ ಬೆಳಕಿಗೆ ತಂದಿದ್ದಾರೆ. ಹಾಗೆಯೇ ಪುಗ್ಗೆರ ಕರುಂಬಯ್ಯನವರು ಉಮ್ಮತಾಟ್ ಪಾಟ್‌ನ್ನು ಪ್ರಕಟಿಸಿದರೆ, ಹುತ್ತರಿಹಾಡನ್ನು ಚೋಕಂಡ ಅಪ್ಪಯ್ಯ ಅವರು ರಚಿಸಿದ್ದಾರೆ.

ಕೊಡಗಿನ ದೇಶಿಯ ಕಥೆಗಳು ಮತ್ತು ಕಥನಕಾವ್ಯಗಳನ್ನು ಕುರಿತು ಬಿ.ಎಸ್. ಕುಶಾಲಪ್ಪನವರು ಬೆಳಕು ಚೆಲ್ಲಿದರೆ, ಬಿ.ಡಿ. ಸುಬ್ಬಯ್ಯನವರು (ಕಾಕೆಮಾನಿ) ಕೆಲವು ಚಾರಿತ್ರಿಕ ವ್ಯಕ್ತಿಗಳು ಮತ್ತು ಘಟನೆಗಳನ್ನು ಕುರಿತು ತಮ್ಮ "ಕೊಡಗಿನ ಇತಿಹಾಸ ಪುಟಗಳಿಂದ" ಎಂಬ ಗ್ರಂಥದಲ್ಲಿ ನಿರೂಪಿಸಿದ್ದಾರೆ. ಕರ್ನಾಟಕದ ಜನಪದ ಕಥೆಗಳು ಸಂಕಲನದಲ್ಲಿ ಹೆಚ್.ಎಲ್. ನಾಗೇಗೌಡರು ಕೊಡಗಿನ ಕೆಲವು ವ್ಯಕ್ತಿಗಳನ್ನು ಕುರಿತು ಕಥೆಗಳನ್ನು ಸಂಗ್ರಹಿಸಿದ್ದಾರೆ. ಎಂ.ಜಿ.ನಾಗರಾಜ್‌ರವರ ಕೊಡಗಿನ ಕೈಮಡ, ಕೊಡಗಿನ ಕೋಲೆ ಕಲ್ಲುಗಳು, ಇತಿಹಾಸ ದರ್ಶನದ ಸಂಪುಟಗಳಲ್ಲಿ ಕೊಡಗಿನ ಶಾಸನವು ಹಬ್ಬಗಳು, ಜನಪದ ಆಚರಣೆಗಳು, ವೀರಶೈವ ಮಠಗಳು, ಕೃಷಿ ದೇವ ನೆಲೆಗಳು, ಪನ್ಯಜಮೀನುಗಳು, ದೇವರ ಕಾಡುಗಳು, ಸ್ಥಳನಾಮಗಳು, ಜೈನ ಮತ್ತು ಬೌದ್ಧಶಿಲ್ಪಗಳು, ರಾಜವಂಶಗಳು, ಪ್ರಾಚೀನ ಪಟ್ಟಣಗಳು, ಸುಗ್ಗಿ ಕಟ್ಟೆಗಳು, ಹುತ್ತರಿ, ಕೈಲ್‌ಪೊಳ್ದ್ ಇತ್ಯಾದಿ ಕೊಡಗಿನ ಸಾಂಸ್ಕೃತಿಕ ವಲಯದ ವಿವಿಧ ಮುಖಗಳನ್ನು ಸಂಶೋಧನಾತ್ಮಕವಾಗಿ ಪರಿಚಯಿಸಿದ್ದಾರೆ. ಸೂರ್ಯನಾಥಯು. ಕಾಮತ್‌ರವರ ಭಾರತದ ಗ್ಯಾಸೆಟಿಯರ್ ನಲ್ಲೂ ಕೊಡಗಿನ ವಿವರಗಳಿವೆ.

ಇಂತಹ ಹಲವಾರು ವೈಶಿಷ್ಟ್ಯಪೂರ್ಣವಾದ ಸಂಸ್ಕಾರಕ್ಕೆ ಸಂಬಂಧಿಸಿದ ವಿಚಾರಗಳನ್ನು ಕುರಿತು ಅಲ್ಲಿ-ಇಲ್ಲಿ ಕೆಲವು ಬಿಡಿ ಲೇಖನಗಳು, ಪುಸ್ತಕಗಳು, ಕೈಪಿಡಿಗಳು ಬಂದಿವೆಯಾದರೂ ಕೊಡವರನ್ನೇ ಕುರಿತು ಪ್ರತ್ಯೇಕವಾದ ಮತ್ತು ವಿಸ್ತೃತವಾದ ಸಮಾಜೋ-ಸಾಂಸ್ಕೃತಿಕ ದೃಷ್ಟಿಯಿಂದ ಒಂದು ಸಮುದಾಯದ ವೈಶಿಷ್ಟ್ಯತೆಯನ್ನು ಸಾರುವ ಸಂಸ್ಕಾರಗಳನ್ನು ಕುರಿತ ಅಧ್ಯಯನಗಳು ಸಮಗ್ರವಾಗಿ ಒಂದೆಡೆ ದೊರೆಯದ ಕಾರಣ ದಕ್ಷಿಣ ಭಾರತದಲ್ಲೇ ವಿಶೇಷವೆನ್ನಬಹುದಾದ ಇವರ ಸಂಸ್ಕಾರಗಳನ್ನು ಕುರಿತು ಸಂಶೋಧನೆ ನಡೆಸಬೇಕೆನಿಸಿತು.

ಸಾಂಸ್ಕೃತಿಕ ವ್ಯವಸ್ಥೆಯ ಪ್ರಮುಖ ಭಾಗವಾದ ಪಾರಂಪರಿಕ ಸಂಸ್ಕಾರಗಳನ್ನು ಕುರಿತು ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಒಂದೆಡೆ ದಾಖಲಿಸುವ ಸದುದ್ದೇಶದಿಂದ ಈ ಕೃತಿಯ ಸಂಶೋಧನಾತ್ಮಕ ವಿಷಯವನ್ನು ಆಯ್ಕೆಮಾಡಿ ಕೊಳ್ಳಲಾಗಿದೆ.

ವ್ಯಾಪ್ತಿ

ಈ ಕೃತಿಯು ಕೊಡಗು ಜಿಲ್ಲೆಯ ಮೂರು ತಾಲೂಕುಗಳಾದ ವಿರಾಜಪೇಟೆ, ಮಡಿಕೇರಿ, ಸೋಮವಾರಪೇಟೆಯ ಭೌಗೋಳಿಕ ವ್ಯಾಪ್ತಿಗೆ ಒಳಪಟ್ಟಿದ್ದು, ಇಲ್ಲಿ ವಾಸಿಸುತ್ತಿರುವ ಕೊಡವ ಸಮುದಾಯವನ್ನು ಪ್ರಧಾನವಾಗಿಯೂ ಇತರ ಉಪ ಪಂಗಡಗಳನ್ನು ಆನುಷಂಗಿಕವಾಗಿಯೂ ಎಂದರೆ ಅವರ ಆಚಾರ, ವಿಚಾರ, ನಂಬಿಕೆ, ರೂಢಿ, ಸಂಪ್ರದಾಯ ಉಡುಗೆ, ತೊಡುಗೆ ಆಹಾರ ಪದ್ಧತಿ, ಕೃಷಿವ್ಯವಸ್ಥೆ, ಉಟೋಪಚಾರಗಳು, ಕ್ರೀಡೆ, ಬೇಟೆ ಜನಪದ ಸಾಹಿತ್ಯ ಪ್ರದರ್ಶನ ಕಲೆಗಳನ್ನು ಕ್ಷೇತ್ರ ಕಾರ್ಯ, ಛಾಯಾಗ್ರಹಣ, ಸಂದರ್ಶನ, ಆಡಿಯೋ ಕ್ಯಾಸೆಟ್, ಮುಂತಾದ ಮಾಧ್ಯಮಗಳ ಆಧಾರದಿಂದ ಕೊಡವರ ಮೂಲ ಅನನ್ಯತೆಯನ್ನು ತೌಲನಿಕವಾಗಿ ಪರಿಶೀಲಿಸಿ ವಿಶ್ಲೇಷಿಸಲಾಗಿದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಈ ಕೃತಿಯನ್ನು ಏಳು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ.

ಅಧ್ಯಾಯ–ಒಂದು : ಭೌಗೋಳಿಕ ಹಿನ್ನೆಲೆ

ಮೊದಲನೆಯ ಅಧ್ಯಾಯವು ಸ್ವರೂಪ, ಉದ್ದೇಶ, ವ್ಯಾಪ್ತಿಯನ್ನು ಪರಿಶೀಲಿಸುವುದರ ಜೊತೆಗೆ ಭೌಗೋಳಿಕ ಪರಿಸರ, ವಿಸ್ತೀರ್ಣ, ಅರಣ್ಯಗಳು, ನದಿಗಳು ಮುಂತಾದ ವಿವರಗಳನ್ನು ಒಳಗೊಂಡಿದೆ.

ಅಧ್ಯಾಯ–ಎರಡು : ಕೊಡಗಿನ ಇತಿಹಾಸ, ಸಾಹಿತ್ಯ ಮತ್ತು ಸಂಸ್ಕೃತಿ

ಈ ಭಾಗದಲ್ಲಿ ಪೌರಾಣಿಕ, ಇತಿಹಾಸಪೂರ್ವ ಮತ್ತು ಇತಿಹಾಸಕಾಲ ಎಂದು ವಿಭಾಗಿಸಲಾಗಿದೆ. ಇತಿಹಾಸ ಕಾಲದಲ್ಲಿ ಗಂಗರು, ಚೋಳರು, ಚೆಂಗಾಳ್ವರು, ಕೊಂಗಾಳ್ವರು ಮೈಸೂರಿನ ಅರಸರು, ಬ್ರಿಟಿಷರ ಆಳ್ವಿಕೆವರೆಗಿನ ಇತಿಹಾಸವನ್ನು ಪರಿಚಯಿಸಲಾಗಿದೆ. ಜೊತೆಗೆ ಕೊಡವ ಮತ್ತು ಕೊಡವೇತರ ಸಾಹಿತ್ಯ, ಹಾಗೂ ಸಾಂಸ್ಕೃತಿಕ ಕೊಡುಗೆಗಳಾದ ಜನಪದ ಕಲೆ, ಗಾದೆ, ಒಗಟು, ಕ್ರೀಡೆಗಳನ್ನು ಸ್ಥೂಲವಾಗಿ ವಿವರಿಸಲಾಗಿದೆ.

ಅಧ್ಯಾಯ–ಮೂರು : ಕೊಡವರ ಸಂಪ್ರದಾಯ ಮತ್ತು ನಂಬಿಕೆಗಳು

ಇಲ್ಲಿ ಕೊಡವರ ಕೌಟುಂಬಿಕ ವ್ಯವಸ್ಥೆ, ಮಹಿಳೆಯರ ಸ್ಥಾನಮಾನ, ಮನೆತನಗಳು, ಉಡುಗೆ ತೊಡುಗೆ, ಭಾಷೆ, ಆಹಾರ ಪದ್ಧತಿ, ಉಪಜಾತಿ ಮತ್ತು ಬುಡಕಟ್ಟುಗಳು, ಅತಿಥಿ ಸತ್ಕಾರ, ಹಾಗೂ ಸಂಪ್ರದಾಯ ಮತ್ತು ನಂಬಿಕೆಗಳನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ-ನಾಲ್ಕು : ಕೊಡವರ ಸಂಸ್ಕಾರಗಳು

ನಾಲ್ಕನೆಯ ಅಧ್ಯಾಯದಲ್ಲಿ ಈ ಕೃತಿಯ ಮೂಲ ಉದ್ದೇಶವಾದ ಕೊಡವರ ಸಂಸ್ಕಾರಗಳನ್ನು ಕುರಿತಂತೆ ವಿಸ್ತೃತವಾಗಿ ಚರ್ಚಿಸಲಾಗುವುದು. ಇಲ್ಲಿ ಜನನ, ಪ್ರೌಢಸಂಸ್ಕಾರ, ಮದುವೆ, ಮರಣ, ಸೂತಕ, ತಿಥಿ, ಮುಂತಾದ ಎಲ್ಲಾ ವಿಷಯಗಳನ್ನು ಸವಿವರವಾಗಿ ನಿರೂಪಿಸಲಾಗಿದೆ.

ಅಧ್ಯಾಯ-ಐದು : ಕೊಡವರ ಧಾರ್ಮಿಕ ವ್ಯವಸ್ಥೆ

ಈ ಅಧ್ಯಾಯದಲ್ಲಿ ಕುಲದೇವತೆ ಕಾವೇರಿ ಮಾತೆಯ ಬಗೆಗಿನ ನಂಬಿಕೆಗಳು, ಆಚರಣೆಗಳು, ಸ್ಥಳೀಯವಾಗಿ ಆಚರಿಸುವ ಕಾವೇರಿ ಸಂಕ್ರಮಣ, ಕೈಲ್‌ಮುಹೂರ್ತ, ಹುತ್ತರಿಹಬ್ಬಗಳ ಮಹತ್ವ, ಗ್ರಾಮದೇವತೆ ಹಬ್ಬಗಳು ಹಾಗೂ ನಂಬಿಕೆಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ-ಆರು : ಕೊಡವರ ಸಾಮಾಜಿಕ ವ್ಯವಸ್ಥೆ

ಆರನೆಯ ಅಧ್ಯಾಯವು ಬೇಟೆಪದ್ಧತಿ, ವ್ಯವಸಾಯ, ವ್ಯವಸಾಯ ಸಂಬಂಧವಾದ ನಂಬಿಕೆ ಆಚರಣೆಗಳು, ಬೇಟೆಯಾಡುವ ಪದ್ಧತಿ, ಜನಪದ ವೈದ್ಯಪದ್ಧತಿ, ಐನ್‌ಮನೆ, ಕೈಮಡ, ಆಧುನಿಕ ಗೃಹ ನಿರ್ಮಾಣ ಇತ್ಯಾದಿಗಳನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ-ಏಳು : ಕೊಡವ ಸಂಸ್ಕಾರಗಳ ಅನನ್ಯತೆ

ಅಧ್ಯಾಯ ಏಳರಲ್ಲಿ ಕೊಡವರು, ಕೊಡವ ಭಾಷಿಕ ಮೂಲನಿವಾಸಿಗಳಾದ ಅಮ್ಮ ಕೊಡವರು, ಐರಿಗಳು, ಪೆಗ್ಗಡೆ, ಕೆಂಬಟ್ಟಿ, ಜಮ್ಮಮಾಪಿಳ್ಳೆ, ಅರೆಗೌಡರು, ಮತ್ತು ಇತರ ಸಮುದಾಯಗಳ ಸಂಸ್ಕಾರಗಳ ಅನನ್ಯತೆಯನ್ನು ಕುರಿತು ವಿಸ್ತೃತವಾಗಿ ಚರ್ಚಿಸಲಾಗಿದೆ.

ಅಧ್ಯಾಯ-ಎಂಟು : ಸಮಾರೋಪ

ಈ ಭಾಗದಲ್ಲಿ ಒಟ್ಟು ಸಂಶೋಧನಾತ್ಮಕ ಕೃತಿಯ ಫಲಿತಗಳನ್ನು ಅನುಕ್ರಮವಾಗಿ ನೀಡಲಾಗಿದೆ ಅನುಬಂಧದಲ್ಲಿ ಹಾಡುಗಳು, ಮನೆತನದ ಹೆಸರುಗಳು, ಕೊಡವ ಮಾಸದ ಪಟ್ಟಿ, ಛಾಯಾ ಚಿತ್ರಗಳು, ವಕ್ತೃಗಳ ಪಟ್ಟಿ, ಪಾರಿಭಾಷಿಕ ಪದಸೂಚಿ ಮತ್ತು ಗ್ರಂಥಋಣವನ್ನು ನೀಡಲಾಗಿದೆ.

೧ | ಅಧ್ಯಾಯ

ಭೌಗೋಳಿಕ ಹಿನ್ನೆಲೆ

ನಿಸರ್ಗ ಸಿರಿಯ ತವರಾಗಿ 'ದಕ್ಷಿಣ ಕಾಶಿ' ಭಾರತದ 'ಸ್ವಿಜರ್‌ಲ್ಯಾಂಡ್' ಎಂದೇ ಹೆಸರು ಪಡೆದಿರುವ ಕೊಡಗು ಜಿಲ್ಲೆ ಪ್ರಕೃತಿ ಸೌಂದರ್ಯದ ಖನಿ. ಭೂರಮೆಯು ದೇವರ ಸನ್ನಿಧಿಯನ್ನು ಬಯಸಿ ನಿಂದ ತಾಣವಾಗಿ ಕಾಫಿ, ಏಲಕ್ಕಿ, ಮೆಣಸು, ಕಿತ್ತಳೆ ತೋಟಗಳ ನಡುವೆ, ಹಸಿರು ಕಾಡುಗಳ ಚೆಲುವಿನಿಂದ ಸದಾ ಕಣ್ಮನ ಸೆಳೆಯುತ್ತದೆ. ನಕ್ಷೆಯಲ್ಲಿ ಕಿರಿಯದಾದರೂ ತನ್ನದೇ ಆದ ಕಲೆ, ಸಂಸ್ಕೃತಿ, ಸಾಹಿತ್ಯ ಭಾಷೆ, ಮುಂತಾದ ಹಲವು ವೈಶಿಷ್ಟ್ಯಗಳೊಂದಿಗೆ ಶೌರ್ಯ, ಸಾಹಸಗಳನ್ನು ತಯಾರಿಸಿಕೊಂಡು ಭೌಗೋಳಿಕವಾಗಿ ಕನ್ನಡ ನಾಡು ನುಡಿಗಳೊಂದಿಗೆ ಬೆಸೆದುಕೊಂಡಿದೆ.

'ಕರ್ನಾಟಕ ನೈರುತ್ಯ ದಿಕ್ಕಿನಲ್ಲಿರುವ ಕೊಡಗಿಗೆ ತಮಿಳು ಸಂಗಂ ಸಾಹಿತ್ಯದಲ್ಲಿ 'ಕುಡುಕಂ'ಎಂಬ ಹೆಸರಿದೆ. 'ಕುಡು' ಶಬ್ದದಿಂದ 'ಕುಡುಮಲೆನಾಡು' ಎಂಬ ಹೆಸರು ಬಂದಿರಬಹುದಾಗಿ ಹೇಳಲಾಗಿದೆ. ಐತಿಹ್ಯದಂತೆ ಉಗುರುಗಳಿಂದ ಬೆಟ್ಟಗಳನ್ನು ಬಯಲು ಮಾಡಿಕೊಂಡ ಕಾರಣ 'ಕ್ರೋಢದೇಶ'ವೆಂದೂ, ಪೌರಾಣಿಕವಾಗಿ 'ಬ್ರಹ್ಮದೇಶ', 'ಮತ್ಸ್ಯದೇಶ'ವೆಂದೂ ಕರೆಯಲಾಗಿದೆ."[೯]

"ಕೊಡಗು ಅಂದರೆ ಕೋಡುಗಲ್ಲುಗಳುಳ್ಳದ್ದು. ಇದು ಕಾವೇರಿ ನದಿಯ ಉಗಮ ಸ್ಥಾನ. ಕೆಲವರು 'ಕೊಡಗು' ಎಂಬ ಶಬ್ದವು 'ಕುಡು' ಎಂದರೆ ಕಡಿದಾದ ಬೆಟ್ಟಗಳುಳ್ಳದ್ದು, ಎಂಬ ಶಬ್ದದಿಂದ ಬಂತೆಂದೂ 'ಕ್ರೋಡ' ಅಂದರೆ ಉಗುರುಗಳಿಂದ ಹಂದಿಗಳಂತೆ ಗುಡ್ಡ ಬೆಟ್ಟಗಳನ್ನು ಬಯಲು ಮಾಡಿದ್ದರಿಂದ ಬಂತೆಂದೂ 'ಕೊಡುಮಲೆ' ಅಂದರೆ ತುದಿಯಲ್ಲಿರುವ ಮಲೆ ಎಂಬುದರಿಂದ ಬಂತೆಂದೂ ಕೆಲವು ಇತಿಹಾಸ ತಜ್ಞರ ಅಭಿಪ್ರಾಯ".[೧೦]

"ಹೆಸರಿನ ದೃಷ್ಟಿಯಿಂದ ಕುಡ (ಪಶ್ಚಿಮ) ಕೊಡಗು ಎಂಬ ವಿಕಾಸ ಕ್ರಮದಿಂದಾಗಿ ಪಶ್ಚಿಮಕ್ಕೆ ಇರುವುದು ಕೊಡಗು ಎನ್ನುವ ಅರ್ಥವಾಗುತ್ತದೆ. ಇದು ಯಾವುದರ ಪಶ್ಚಿಮಕ್ಕೆ ಎಂಬುದು ಸ್ಪಷ್ಟವಿಲ್ಲ ಎನ್ನುವ ಅಭಿಪ್ರಾಯವಿದೆ."[೧೧] ತಮಿಳಿನ 'ಶಿಲಪ್ಪದಿಕಾರಂ' ಕೃತಿ ಸೂಚಿಸಿರುವ 'ಕುಡುಮಲ್ಯ ಕುಡಕಂ' ಕೊಡಗಿಗೆ ಅನ್ವಯವಾದ ಪದವಾಗಿದೆ. 'ತಮಿಳಿನ ರೀತಿಯಂತೆ 'ಕೊಡಗು' ಎಂಬ ಶಬ್ದದ ನಿಷ್ಪತ್ತಿ ಹೀಗಿದೆ. ಕುಡ(ಮ್) : ಪಶ್ಚಿಮ+ಅಕಂ: ಒಳಗೆ>ಕುಡುಕಂ> ಕೊಡಕು> ಕೊಡಗಂ>ಕೊಡಗ>ಕೊಡಗಿ> ಅಂದರೆ ಪಶ್ಚಿಮದೊಳಗೆ ಅಥವಾ ಒಳ ಪಶ್ಚಿಮದಲ್ಲಿ ಎಂಬ ಅರ್ಥ ಒದಗಿಸುತ್ತದೆ.[೧೨]

ಭೌಗೋಳಿಕ ಲಕ್ಷಣ

ವೀರಯೋಧರ ನಾಡೆಂಬ ಕೀರ್ತಿಗೆ ಪಾತ್ರವಾಗಿರುವ ಕೊಡಗು ಜಿಲ್ಲೆ ಪ್ರಕೃತಿ ಸೌಂದರ್ಯದ ತವರು, ಬೌಗೋಳಿಕ ವಿಸ್ತೀರ್ಣದಲ್ಲಿ ರಾಜ್ಯದಲ್ಲಿ ೬ನೇ ಸಣ್ಣ ಜಿಲ್ಲೆಯಾಗಿದ್ದು 'ಕೂರ್ಗ್'ಎಂದೂ ಕರೆಯಲ್ಪಡುತಿದ್ದ ಈ ಜಿಲ್ಲೆಗೆ ೧೯೭೭ರಲ್ಲಿ 'ಕೊಡಗು ಜಿಲ್ಲೆ'ಎಂದು ಪುನರ್ ನಾಮಕರಣ ಮಾಡಲಾಯಿತು. (ಮಡಿಕೇರಿ, ವಿರಾಜಪೇಟೆ ಮತ್ತು ಸೋಮವಾರಪೇಟೆ ಎಂಬ ಮೂರು ತಾಲೂಕುಗಳ ನ್ನೊಳಗೊಂಡಿರುವ ಈ ಜಿಲ್ಲೆ, ಒಟ್ಟು ೪,೧೦೨ ಚದರ ಕ.ಮೀ. ವಿಸ್ತೀರ್ಣವನ್ನು ಹೊಂದಿದೆ. ಉತ್ತರದಿಂದ ದಕ್ಷಿಣಕ್ಕೆ ೯೬ ಕಿ.ಮೀ ಪೂರ್ವದಿಂದ ಪಶ್ಚಿಮಕ್ಕೆ ೬೪ಕಿ.ಮೀ ವಿಸ್ತಾರದಲ್ಲಿ ಹರಡಿಕೊಂಡಿದೆ. ಉತ್ತರಕ್ಕೆ ಹಾಸನ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು, ಪೂರ್ವಕ್ಕೆ ಮೈಸೂರು ಜಿಲ್ಲೆ, ಪಶ್ಚಿಮ ಮತ್ತು ದಕ್ಷಿಣಕ್ಕೆ ಕೇರಳ ರಾಜ್ಯವಿದೆ.

ಮಡಿಕೇರಿ ಕೊಡಗಿನ ಮುಖ್ಯ ಆಡಳಿತ ಕೇಂದ್ರವಾಗಿದ್ದು, ೨೦೧೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಒಟ್ಟು ೫,೫೪,೭೬೩ ಜನಸಂಖ್ಯೆ ಇದ್ದು ತಾಲೂಕುವಾರು ಜನಗಣತಿಯ ಚಿತ್ರಣ ಕೆಳಗಿನಂತಿದೆ.

ತಾಲ್ಲೂಕು	ಗಂಡಸರು	ಹೆಂಗಸರು	ಒಟ್ಟು	ಕೊಡವರು
ಮಡಿಕೇರಿ	೭೩,೦೦೫	೭೩,೬೭೬	೧,೪೬,೬೮೪	೬೦,೦೦೦
ವಿರಾಜಪೇಟೆ	೯೯,೭೪೧	೧,೦೧,೬೯೫	೨,೦೧,೪೩೮	೭೦,೦೦೦
ಸೋಮವಾರಪೇಟೆ	೧,೦೧೯೭೨	೧,೦೪೬೬೬	೨,೦೬,೬೪೦	೩೦,೦೦೦

"೨೦೧೧ರ ಜನಗಣತಿಯ ಒಟ್ಟು ಜನಗಣತಿಯಲ್ಲಿ ಕೊಡವರು ಮಡಿಕೇರಿ ತಾಲ್ಲೂಕಿನಲ್ಲಿ ೬೦,೦೦೦, ವಿರಾಜಪೇಟೆ ತಾಲ್ಲೂಕಿನಲ್ಲಿ ೭೦,೦೦೦, ಸೋಮವಾರಪೇಟೆ ತಾಲ್ಲೂಕಿನಲ್ಲಿ ೩೦,೦೦೦ ರಷ್ಟಿದ್ದು ಹೊರ ಜಿಲ್ಲೆಯಲ್ಲಿ ಕೊಡವರ ಸಂಖ್ಯೆ ಅಧಿಕವಾಗಿರುವ ಕಾರಣ ಕೊಡಗಿನಲ್ಲಿ ಕೊಡವರ ಸಂಖ್ಯೆ ಕ್ಷೀಣಿಸುತ್ತಿದೆ. ಜಿಲ್ಲೆಯಲ್ಲಿ ೫,೩೧೯ ಮಹಿಳೆಯರಿದ್ದು ಪುರುಷರಿಗಿಂತ ಮಹಿಳೆಯರು ಅಧಿಕವಾಗಿದ್ದಾರೆ."[೧೩]

ಜಿಲ್ಲೆಯಲ್ಲಿ ತಾಲ್ಲೂಕಿಗೆ ತಲಾ ಎರಡರಂತೆ ಒಟ್ಟು ೦೬ ನಾಡ ಕಛೇರಿಗಳಿದ್ದು ೧೬ ಹೋಬಳಿಗಳಿವೆ. ೯೮ ಗ್ರಾಮ ಪಂಚಾಯತ್‌ಗಳನ್ನು ಹೊಂದಿರುವ ಈ ಜಿಲ್ಲೆಯಲ್ಲಿ ೨೯೧ ಗ್ರಾಮಗಳಿವೆ. ೧ ನಗರಸಭೆ (ಮಡಿಕೇರಿ) ಮೂರು ಪಟ್ಟಣ ಪಂಚಾಯತಿ (ವಿರಾಜಪೇಟೆ, ಸೋಮವಾರಪೇಟೆ, ಕುಶಾಲನಗರ) ಮೂರು ತಾಲೂಕುಗಳಿವೆ.

ಕೊಡಗು ಜಿಲ್ಲಾ ಪಂಚಾಯತ್‌ನಲ್ಲಿ ೩೩ ಪೋಲಿಸ್ ಠಾಣೆಗಳು, ೦೨ ಜೈಲು, ೧೦೪ ರಾಷ್ಟ್ರೀಕೃತ ಬ್ಯಾಂಕ್‌ಗಳಿವೆ. ಕೊಡಗು ಜಿಲ್ಲೆಯಲ್ಲಿ ಸಾಕ್ಷರತಾ ಪ್ರಮಾಣ ಅಧಿಕವಾಗಿದೆ. ಒಟ್ಟು ೧೩೮ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು, ೨೧೪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು, ೪೭ ಸರ್ಕಾರಿ ಪ್ರೌಢ ಶಾಲೆಗಳು, ೫೪ ಪದವಿ ಪೂರ್ವ ಕಾಲೇಜುಗಳು, ೧೪ ಪದವಿ ಕಾಲೇಜುಗಳಿವೆ. ೧ ದಂತ ವೈದ್ಯಕೀಯ ಕಾಲೇಜು ವಿರಾಜಪೇಟೆಯಲ್ಲಿದೆ

ಈ ಜಿಲ್ಲೆಯ ಮೂರು ತಾಲ್ಲೂಕು ಪಂಚಾಯತ್‌ಗಳಲ್ಲಿ ೪೯ ಸದಸ್ಯರಿದ್ದು, ೯೮ ಗ್ರಾಮ ಪಂಚಾಯತ್‌ಗಳಲ್ಲಿ ೭೬೬ ಸದಸ್ಯರುಗಳಿದ್ದಾರೆ. ಕೊಡಗು ಜಿಲ್ಲಾ ಪಂಚಾಯ್ತಿಯಲ್ಲಿ ೩೧ ಸದಸ್ಯರಿದ್ದು, ಮೂರು ಪಟ್ಟಣ ಪಂಚಾಯತ್‌ಗಳಲ್ಲಿ ೪೦ ಸದಸ್ಯರುಗಳು ಸೇರಿದಂತೆ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ಒಟ್ಟು ೧೩೮೬ ಜನ ಪ್ರತಿನಿಧಿಗಳಿದ್ದಾರೆ. ಎರಡು ವಿಧಾನಸಭಾ ಕ್ಷೇತ್ರಗಳಿದ್ದು, ವಿಧಾನ ಪರಿಷತ್ ಸದಸ್ಯರು ಸೇರಿದಂತೆ ಮೂವರು ಶಾಸಕರು, ಓರ್ವ ಸಂಸದರಿದ್ದಾರೆ.

ಕೊಡಗು ಜಿಲ್ಲೆಯು ಸಮುದ್ರ ಮಟ್ಟದಿಂದ ೪,೦೦೦ ಅಡಿಗಳಷ್ಟು ಎತ್ತರದಲ್ಲಿದೆ. ತಡಿಯಂಡಮೋಳ್, ಬ್ರಹ್ಮಗಿರಿ, ಪುಷ್ಪಗಿರಿ ಮತ್ತು ಮಾಲಂಬಿ ಬೆಟ್ಟ ಎಂಬ ೦೪ ಪ್ರಮುಖ ಶಿಖರಗಳಿವೆ. ಕರ್ನಾಟಕದ ಪವಿತ್ರ ನದಿ 'ಕಾವೇರಿ'ಯು ಕೊಡಗಿನ 'ಬ್ರಹ್ಮಗಿರಿ' ತಪ್ಪಲಿನ 'ತಲಕಾವೇರಿ' ಉಗಮವಾಗಿ, ಕನ್ನಿಕೆ, ಹಾರಂಗಿ, ಹಟ್ಟಿಹೊಳೆ, ಚಿಕ್ಲಿಹೊಳೆ ಮತ್ತು ಲಕ್ಷ್ಮಣ ತೀರ್ಥ ಮುಂತಾದ ಉಪನದಿಗಳನ್ನು ಹೊಂದಿದೆ.

ಮಡಿಕೇರಿಯಲ್ಲಿ ರಾಜರ ಅರಮನೆಯಿದ್ದು, (ಕೋಟೆ) ರಾಜಾಸೀಟ್, ಉದ್ಯಾನವನ, ಪ್ರಾಚ್ಯ ವಸ್ತು ಸಂಗ್ರಹಾಲಯ, ರಾಜರ ಗದ್ದುಗೆ, ಗಾಂಧಿ ಮಂಟಪ, ಶ್ರೀ ಓಂಕಾರೇಶ್ವರ ದೇವಸ್ಥಾನ, ಅಬ್ಬಿ ಜಲಪಾತ, ೩೪ ಕಿ.ಮೀ. ದೂರದಲ್ಲಿ ಶ್ರೀ. ಪಾಡಿ ಇಗ್ಗುತಪ್ಪ ದೇಗುಲ, ಎಮ್ಮೆಮಾಡು ಸೂಫಿ ಶಹೀದ್ ದರ್ಗ, ನಿಸರ್ಗಧಾಮ, ಹಾರಂಗಿ ಜಲಾಶಯ, ದುಬಾರೆ ಅರಣ್ಯ, ರಮಣೀಯ ಮಾಂದಲ್ ಪಟ್ಟಿ, ಮಲ್ಲಳ್ಳಿ ಜಲಪಾತ ದಕ್ಷಿಣ ಬಾಗದಲ್ಲಿ ಇರ್ಪು ಫಾಲ್ಸ್, ಶ್ರೀ ರಾಜೇಶ್ವರಿ ದೇಗುಲ, ನಾಗರಹೊಳೆ ಅಭಯಾರಣ್ಯವಿದೆ. ಜಿಲ್ಲಾ ಕೇಂದ್ರ ಮಡಿಕೇರಿಯಿಂದ ವೀರಾಜಪೇಟೆ ೩೨ಕಿ.ಮೀ ದೂರವಿದ್ದು, ವೀರಾಜಪೇಟೆಯಿಂದ ಸೋಮವಾರಪೇಟೆಗೆ ೭೨ಕಿ.ಮೀ , ಸೋಮವಾರಪೇಟೆಯಿಂದ ಮಡಿಕೇರಿಗೆ ೪೦ ಕಿ.ಮೀ ದೂರವಿದೆ.

ರಸ್ತೆ ಸಂಪರ್ಕ: ಕೊಡಗು ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಇಲ್ಲ. ರಾಜ್ಯ ಹೆದ್ದಾರಿ ೫೩೭.೯೭ ರಲ್ಲಿ ರಸ್ತೆ ೮೫೨.೭೦ ಮೈಸೂರು ಪಂಚಾಯತ್ ಗ್ರಾಮೀಣ ರಸ್ತೆ ೪,೭೬೪,೯೩ ಕಿ.ಮೀ ಪಿ.ಡಬ್ಲ್ಯು.ಡಿ ಬರುವಂತೆ ೧೦,೩೯೦,೬೭ ಕಿ.ಮೀ ಗಳಿವೆ. ರೈಲ್ವೆ ಸಂಪರ್ಕ ಕೊಡಗಿಗೆ ಇರುವುದಿಲ್ಲ. ಕುಶಾಲನಗರದವರೆಗೆ ರೈಲ್ವೆ ಸಂಪರ್ಕದ ಯೋಜನೆಯ ಕುರಿತು ಚರ್ಚಿಸಲಾಗಿದೆ. ಅಲ್ಲಿಂದ ಮುಂದೆ ಕಡಿದಾದ ಬೆಟ್ಟ ಗುಡ್ಡಗಳಿರುವ ಕಾರಣ ರೈಲ್ವೆ ಸಂಪರ್ಕ ಕೊಡಗಿಗೆ ಕನಸಿನ ಮಾತಾಗಿದೆ.

ವಾಯುಗುಣ ಮತ್ತು ಮಳೆ

ವಾಯುಗುಣ : ಸಾಮಾನ್ಯವಾಗಿ ಕೊಡಗು ಜಿಲ್ಲೆಯ ವಾಯುಗುಣ ಹಿತಕರವಾಗಿರುತ್ತದೆ. ಹೆಚ್ಚಿನ ಆರ್ದ್ರತೆಯಿಂದ ಕೂಡಿದ, ಒಂದೇ ಸಮನಾಗಿರುವ ಶೀತಲ ಮತ್ತು ಆಹ್ಲಾದಕರವಾದ ವಾಯುಗುಣವು ಕೊಡಗಿನ ಹವಾಮಾನದ ವೈಶಿಷ್ಟ್ಯಗಳಾಗಿವೆ. ಜಿಲ್ಲೆಯ ಮಲೆನಾಡಿನ ಪಶ್ಚಿಮ ಘಟ್ಟಗಳ ಪ್ರದೇಶಗಳಲ್ಲಿ

ಅತೀ ಹೆಚ್ಚು ಮಳೆಯಾಗುತ್ತದೆ. ಮಧ್ಯ ಭಾಗದಲ್ಲಿ ಸಾಧಾರಣ ಮಳೆಯಾಗುವುದು. ೫೦೦೦ ಮೀ.ಮೀಗಳಿಂತಲೂ ಹೆಚ್ಚು ವಾರ್ಷಿಕ ಮಳೆ ಬೀಳುವ ಭಾರತದ ೧೪ ಸ್ಥಳಗಳಲ್ಲಿ ನಾಲ್ಕು ಸ್ಥಳಗಳು ಕರ್ನಾಟಕದಲ್ಲಿವೆ. ಇವುಗಳಲ್ಲಿ ಶಿವಮೊಗ್ಗ ಜಿಲ್ಲೆಯ ಆಗುಂಬೆಯನ್ನು ಹೊರತುಪಡಿಸಿ, ಉಳಿದ ಮೂರು ಸ್ಥಳಗಳು ಅಂದರೆ ಭಾಗಮಂಡಲ, (೬೦೩೨ಮಿ.ಮೀ) 'ಪುಲಿಕೋಟ್' (೫,೯೪೧ಮಿ.ಮೀ) ಮತ್ತು 'ಮಾಕುಟ್ಟ' (೫೦೫೪ಮಿ.ಮೀ) ಸ್ಥಳಗಳು ಕೊಡಗು ಜಿಲ್ಲೆಯಲ್ಲಿವೆ. ಸಮುದ್ರದಿಂದ ಇರುವ ದೂರ, ಮಳೆ ಮಾರುತಗಳು ಮತ್ತು ಪ್ರಾಕೃತಿಕ ಲಕ್ಷಣಗಳು ಜಿಲ್ಲೆಯ ವಾಯುಗುಣವನ್ನು ರೂಪಿಸುತ್ತವೆ. ನೈರುತ್ಯ ಮಳೆ ಮಾರುತಗಳಿಗೆ ಅಡ್ಡಲಾಗಿ ಉತ್ತರ–ದಕ್ಷಿಣ ದಿಕ್ಕಿನಲ್ಲಿ ಹಬ್ಬಿಕೊಂಡಿರುವ ಪಶ್ಚಿಮ ಘಟ್ಟಗಳು ಜಿಲ್ಲೆಯಲ್ಲಿ ಭಾರೀ ಮಳೆಗೆ ಪ್ರಮುಖ ಕಾರಣವಾಗಿವೆ.

ಕೊಡಗು ಜಿಲ್ಲೆಯ ಉತ್ತರ ಅಕ್ಷಾಂಶ ೧೧.೫೬ ರಿಂದ ೧೨.೫೨ ರವರೆಗೆ ಮತ್ತು ಪೂರ್ವ ರೇಖಾಂಶ ೭೫ ೨೨ ರಿಂದ ೭೬ ೧೨ ರವರೆಗೆ ಇರುವ ಪ್ರದೇಶದಲ್ಲಿ ವಿಸ್ತರಿಸಿದೆ. ದಕ್ಷಿಣೋತ್ತರವಾಗಿ (ಬ್ರಹ್ಮಗಿರಿ ಬೆಟ್ಟದಿಂದ ಹೇಮಾವತಿ ನದಿಯವರೆಗೆ) ಜಿಲ್ಲೆಯ ಗರಿಷ್ಠ ಉದ್ದವೂ ೯೬ ಕಿ.ಮೀ ಮತ್ತು ಪೂರ್ವ ಪಶ್ಚಿಮವಾಗಿ (ಕುಶಾಲನಗರದಿಂದ ಸಂಪಾಜೆಯವರೆಗೆ) ಜಿಲ್ಲೆಯ ಗರಿಷ್ಠ ಅಗಲವೂ ೬೪ ಕಿ.ಮೀ ಇರುತ್ತದೆ. ಕೊಡಗು ಜಿಲ್ಲೆಯ ಉತ್ತರಕ್ಕೆ ಹಾಸನ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು, ಪೂರ್ವಕ್ಕೆ ಮೈಸೂರು ಮತ್ತು ಹಾಸನ ಜಿಲ್ಲೆಗಳನ್ನು, ಪಶ್ಚಿಮಕ್ಕೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೇರಳ ರಾಜ್ಯವನ್ನು ಎಲ್ಲೆಯಾಗಿ ಪಡೆದಿದೆ. ಜಿಲ್ಲೆಯ ಉತ್ತರದ ಕಿರಿದಾದ ಭೂ ಪಟ್ಟಿಯು (ಸುಮಾರು ೨೦ ಕಿ.ಮೀ ಉದ್ದ ೧೦ ಕಿ.ಮೀ ಅಗಲ) ಹಾಸನ ಜಿಲ್ಲೆಯ ಒಳಕ್ಕೆ ಚಾಚಿಕೊಂಡಿದೆ. ಕೊಡಗು ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೪.೧೦೨ ಚ.ಕಿ.ಮೀ ಆಗಿದ್ದು, ಬೆಂಗಳೂರು (ನಗರ) ಜಿಲ್ಲೆಯ ನಂತರ ಇದು ಕರ್ನಾಟಕ ರಾಜ್ಯದ ವಿಸ್ತೀರ್ಣವಾದ ೧,೯೧,೭೯೧. ಚ.ಕಿ.ಮೀ ನಲ್ಲಿ ಶೇ ೨.೧೪ ಆಗಿರುತ್ತದೆ.

ಕೊಡಗು ಜಿಲ್ಲೆಯು ತಂಪಾದ ಹಿತಕರ ಹವಾಗುಣವನ್ನೊಂದಿದ್ದು, ಗರಿಷ್ಟ ೩೦° ಉಷ್ಣಾಂಶ ಹೊಂದಿರುತ್ತದೆ. ಜೂನ್‌ನಿಂದ ಆಕ್ಟೋಬರ್‌ವರೆಗೆ ಮಳೆಗಾಲ, ಆಕ್ಟೋಬರ್‌ನಿಂದ ನವೆಂಬರ್‌ವರೆಗೆ ಹಿಂಗಾರು ಮಳೆಯಾಗುತ್ತದೆ. ಡಿಸೆಂಬರ್‌ನಿಂದ ಫೆಬ್ರವರಿವರೆಗೆ ಚಳಿಗಾಲ, ಮಾರ್ಚ್‌ನಿಂದ ಮೇ ತಿಂಗಳವರೆಗೆ ಬೇಸಿಗೆ ಕಾಲವಿರುತ್ತದೆ. ಕೊಡಗಿನಲ್ಲಿ ಮುಂಗಾರು ಮಳೆಯು ಬಹಳ ಬಿರುಸಿನಿಂದ ಕೂಡಿದ್ದು, ನಂತರ ಆಟಿ ಮಾಸದಲ್ಲಿ ಧಾರಾಕಾರವಾದ ಮಳೆ ಸುರಿಯುತ್ತದೆ. ಒಟ್ಟು ಸರಾಸರಿ ಮಳೆಯ ಪ್ರಮಾಣ ೨೦೧೩ರಲ್ಲಿ ೨೦೦ ಇಂಚುಗಳು ಅಧಿಕವಾಗಿರುತ್ತದೆ. ವಾಡಿಕೆಯಂತೆ ೧೧೨ ಇಂಚುಗಳು ಮಳೆಯ ಸಾಧ್ಯತೆ ಇದ್ದರೂ ಆಗಾಗ ಬದಲಾವಣೆ ಆಗುತ್ತಿರುತ್ತದೆ.

ಕೊಡಗಿನಲ್ಲಿ ಮಳೆಯ ಸರಾಸರಿ

ಕಳೆದ ೧೦ ವರ್ಷಗಳ ಸರಾಸರಿ ಮಳೆಯನ್ನು ತೆಗೆದುಕೊಂಡರೆ ಈಗಲೂ ೧೦೦ ವರ್ಷಗಳ ಹಿಂದೆ ಎಷ್ಟು ಮಳೆ ಬೀಳುತ್ತಿತ್ತೊ ಅಷ್ಟೆ ಮಳೆ ಬೀಳುತ್ತಿದೆ. ೧೯೧೦ ರ ರೆವಿನ್ಯೂ ಸೆಟಲ್‌ಮೆಂಟ್ ಆಫ್ ಕೂರ್ಗ್ ಇದರಲ್ಲಿರುವ ಮಾಹಿತಿಯಂತೆ ಜಿಲ್ಲೆಯ ಕೆಲವು ಪ್ರದೇಶಗಳ ಸರಾಸರಿ ಮಳೆ ಹೀಗಿದೆ (ಇಂಚುಗಳಲ್ಲಿ).

೧. ಭಾಗಮಂಡಲ	–	೨೦೮.೬೯
೨. ಮಡಿಕೇರಿ	–	೧೨೧.೭೨
೩. ನಾಪೋಕ್ಲು	–	೧೧೯.೯೫
೪. ವಿರಾಜಪೇಟೆ	–	೧೦೫.೮೯
೫. ಗೋಣಿಕೊಪ್ಪ	–	೮೪.೩೩
೬. ಸೋಮವಾರಪೇಟೆ	–	೮೩.೨೫
೭. ಶನಿವಾರಸಂತೆ	–	೬೭.೬೬
೮. ಕುಶಾಲನಗರ	–	೪೨.೩೦

ಅರಣ್ಯನಾಶದಿಂದ ಈಗ ಮಳೆ ಕಡಿಮೆಯಾಗಿ ನೀರಿನ ಅಭಾವ ಉಂಟಾಗುತ್ತಿದೆ. ಅರಣ್ಯನಾಶದಿಂದಾಗಿ ಭೂಮಿಯೊಳಗೆ ಇಂಗುವ ನೀರಿನ ಪ್ರಮಾಣ ಕಡಿಮೆ ಆಗಿದೆ. ಮರಗಿಡಗಳ ಸಂಖ್ಯೆ ಕಡಿಮೆ ಆಗಿರುವ ಕಾರಣ ಭೂಮಿಗೆ ಹಿಂದೆ ಇದ್ದಂತೆ ಮಳೆ ನೀರನ್ನು ಹಿಡಿದಿಟ್ಟುಕೊಳ್ಳುವ ಶಕ್ತಿ ಕಡಿಮೆ ಆಗುತ್ತಿದೆ. ಮರಗಿಡಗಳಿದ್ದಲ್ಲಿ (ಕಾಡು ಇದ್ದಲ್ಲಿ) ಮಳೆಗಾಲದಲ್ಲಿ ಮಳೆಯ ಜೊತೆ ಬರುವ ಗಾಳಿಯ ರಭಸಕ್ಕೆ ಮರಗಿಡಗಳು ಜೋಲಾಡುವ ಕಾರಣ ಅವುಗಳ ಬಡುದಲ್ಲಿನ ಭೂಮಿ ಸ್ವಲ್ಪಮಟ್ಟಿಗೆ ಸಡಿಲವಾಗಿ ಮಳೆ ನೀರು ಭೂಮಿಯೊಳಗೆ ಇಂಗಲು ಸಹಕಾರಿ ಆಗುತ್ತದೆ. ಭತ್ತದ ಗದ್ದೆಗಳಲ್ಲಿ ವ್ಯವಾಸಯ ಮಾಡುವಾಗ ೪–೫ ತಿಂಗಳು ನೀರು ನಿಂತಿರುತ್ತಿದ್ದ ಕಾರಣ ಸಾಕಷ್ಟು ಪ್ರಮಾಣದ ನೀರು ಭೂಮಿಯೊಳಗೆ ಇಂಗಿ ಹೋಗುತ್ತಿತ್ತು. ಈಗ ಶೇಕಡ ೨೫ ರಿಂದ ೩೦ ರಷ್ಟು ಗದ್ದೆಗಳನ್ನು ಪಾಳು ಬಿಡಲಾಗಿದೆ. ಅನೇಕ ಹಳ್ಳ ಕೊಳ್ಳಗಳು, ನೀರು ಇಂಗುತ್ತಿದ್ದ ಗುಂಡಿಗಳು ಇಂದು ವಾಣಿಜ್ಯ ಬೆಳೆಗೆ ಒಳಪಟ್ಟಿವೆ. ನದಿಗಳಿಂದ, ತೋಡುಗಳಿಂದ ನಿರಂತರ ಮರಳು ತೆಗೆಯುತ್ತಿರುವ ಕಾರಣದಿಂದಾಗಿ ನೀರಿನ ಇಂಗುವಿಕೆ ಪ್ರಮಾಣ ಹಾಗೂ ಹರಿಯುವಿಕೆಯ ಪ್ರಮಾಣ ಕಡಿಮೆಯಾಗಿದೆ. ಇವುಗಳಿಂದಾಗಿ ವರ್ಷಪೂರ್ತಿ ನೀರಿರುತ್ತಿದ್ದ ಬಾವಿಗಳಲ್ಲಿ, ತೋಡುಗಳಲ್ಲಿ, ಹಳ್ಳಗಳಲ್ಲಿ ನೀರು ಬತ್ತಿ ನೀರಿನ ಅಭಾವ ಕಾಣಿಸಿಕೊಂಡಿದೆ.

ಕೊಡಗು, ಮಲಯಾಳ ಮತ್ತು ವಯನಾಡು ಸಹಮಲೆ ಪ್ರದೇಶವಾಗಿರುವುದರಿಂದ 'ಕೊಡುಮಲೆ' ಅಥವಾ ಕೊಡಗು ಮಲೆಯೇ ತುದಿಯಲ್ಲಿರುವ ಮಲೆ ಎಂದು ಮಲಯಾಳವೇ ಆಳದಲ್ಲಿ ಅಂದರೆ ತಗ್ಗಿನಲ್ಲಿರುವ ಮಲೆ ಎಂದೂ,

ವಯನಾಡೇ ಬಯಲಾಗಿರುವ ನಾಡೆಂದೂ ಆಯಾಯ ಸ್ಥಳಗಳ ಸಹಜ ಸ್ಥಿತಿಯಿಂದ ಆಯಾಯ ಹೆಸರು ಬಂತೆಂದು ಹೇಳುವುದು ಸರಿಯಾಗಿ ಕಾಣುತ್ತದೆ.

ಸ್ವಾಭಾವಿಕ ಲಕ್ಷಣಗಳು

ಕೊಡಗು ಜಿಲ್ಲೆಯು ಸುಂದರ ಅರಣ್ಯಗಳು ಸಸ್ಯವರ್ಗಗಳಿಂದ ಕೂಡಿದ ಕಣಿವೆಗಳ ಸಂಪತ್‌ಭರಿತ ನೆಲ. ಆಕಾಶದೆತ್ತರ ತಲೆಯೆತ್ತಿ ನಿಂತಿರುವಂತೆ ಕಾಣುವ ಬೆಟ್ಟ ಗುಡ್ಡಗಳ ಸಾಲುಗಳುಳ್ಳ ಪ್ರದೇಶಗಳು ಎತ್ತ ನೋಡಿದರೂ ಕಡಿದಾದ ಬೆಟ್ಟಗಳ ನಡುವೆ ಆಳವಾದ ಕಣಿವೆಗಳಲ್ಲಿ ಹಸುರು ಬಯಲು ಮತ್ತು ಹುಲ್ಲುಗಾವಲುಗಳು ಕಂಡು ಬರುತ್ತವೆ. ಪರ್ವತ ಶಿಖರಗಳು ಹುಲ್ಲಿನಿಂದಲೂ, ಕಣಿವೆಗಳು ಮತ್ತು ಬೆಟ್ಟದ ಇಳಿಜಾರುಗಳು ನಿತ್ಯ ಹರಿದ್ವರ್ಣ ಕಾಡುಗಳಿಂದಲೂ ಕೂಡಿ ಕೊಡಗು ನಿಸರ್ಗ ಸಿರಿಯ ತವರೆನಿಸಿದೆ.

ಕೊಡಗು ಅನೇಕ ಬೆಟ್ಟ ಸಾಲುಗಳಿಂದ, ಅರಣ್ಯಗಳಿಂದ ಕೂಡಿದ ಅತೀ ಹೆಚ್ಚು ಮಳೆ ಬೀಳುವ ಪ್ರದೇಶವಾಗಿದೆ. ಈಶಾನ್ಯ ಮತ್ತು ಪೂರ್ವ ಭಾಗದ ಪ್ರದೇಶಗಳುಳ್ಳ ಭೂ ಸ್ವರೂಪವು ನೆರೆಯ ಮೈಸೂರು ಜಿಲ್ಲೆಯ ಭೂಸ್ವರೂಪವನ್ನು ಹೋಲುತ್ತದೆ. ಪಶ್ಚಿಮ ಘಟ್ಟಗಳ ಮುಖ್ಯ ಶ್ರೇಣಿಯ ವಾಯುವ್ಯದಿಂದ ದಕ್ಷಿಣಕ್ಕೆ ಸುಬ್ರಹ್ಮಣ್ಯ ಬೆಟ್ಟದಿಂದ ಬ್ರಹ್ಮಗಿರಿಯ ಪಶ್ಚಿಮ ತುದಿಯವರೆಗೆ ಹಬ್ಬಿದೆ.

ಜಿಲ್ಲೆಯ ಭೌಗೋಳಿಕ ಲಕ್ಷಣಗಳಲ್ಲಿ ಗಣನೀಯವಾದ ವ್ಯತ್ಯಾಸವನ್ನು ಗುರುತಿಸಬಹುದು, ಸೋಮವಾರಪೇಟೆ ತಾಲ್ಲೂಕಿನಲ್ಲಿ ಘಟ್ಟಪ್ರದೇಶ ಮತ್ತು ಬಯಲು ಸೀಮೆಗಳ ಲಕ್ಷಣಗಳನ್ನು ಗುರುತಿಸಬಹುದು. ಕುಶಾಲನಗರವನ್ನು ಹೊರತುಪಡಿಸಿ ಬಹುತೇಕ ಈ ತಾಲ್ಲೂಕಿನ ಉಳಿದೆಲ್ಲಾ ಪ್ರದೇಶಗಳು ತಗ್ಗುದಿಣ್ಣೆಗಳಿಂದ ಕೂಡಿವೆ. ನಡುವೆ ಬೆಟ್ಟಗಳ ಸಾಲುಗಳಿದ್ದು, ಸುತ್ತಲೂ ಇಳಿಜಾರಾಗಿರುವ ಮಡಿಕೇರಿ ಜಿಲ್ಲೆಯ ಮಧ್ಯಭಾಗದಲ್ಲಿದೆ.

ಮಡಿಕೇರಿಯ ದಕ್ಷಿಣಕ್ಕೆ ವೀರರಾಜೇಂದ್ರ ಪೇಟೆ ಕಡೆಗೆ ಏರುಪೇರುಗಳು ಮಿತವಾಗಿರುವ ಬಯಲು ಪ್ರದೇಶವನ್ನು ಅತೀ ಎತ್ತರದ್ದಲ್ಲದೆ ಮತ್ತು ದಟ್ಟದ್ದಲ್ಲದ ಅರಣ್ಯ ವೃಕ್ಷಗಳ ಸಮೂಹಗಳನ್ನು ಕಾಣಬಹುದಾಗಿದೆ. ಜಿಲ್ಲೆಯ ಪೂರ್ವ ಭಾಗದಲ್ಲಿ ಕಾವೇರಿ ಮತ್ತು ಲಕ್ಷ್ಮಣತೀರ್ಥ ನದಿಗಳ ನಡುವೆ ಇರುವ ಪ್ರದೇಶದಲ್ಲಿ ಅಭಯಾರಣ್ಯಗಳನ್ನು ಗುರುತಿಸಬಹುದು. ಅಲ್ಲೇ ಹೆಚ್ಚು ಬಿದಿರು ಮೆಳೆಗಳಿಂದ ಕೂಡಿದ್ದ ಈ ಜಿಲ್ಲೆಯನ್ನು 'ಬಿದಿರು ಜಿಲ್ಲೆ'ಯೆಂದು ಗುರುತಿಸುತ್ತಿದ್ದರು. ಎತ್ತರದ ಪ್ರದೇಶದಲ್ಲಿ ನಿಂತು ಜಿಲ್ಲೆಯನ್ನು ವೀಕ್ಷಿಸಿದರೆ ಜಿಲ್ಲೆಯು ಬಹುತೇಕ ದಕ್ಷಿಣದ ಸರಹದ್ದು ದೊಡ್ಡ ಅರಣ್ಯಗಳಿಂದ ಆವೃತ್ತವಾಗಿದ್ದು, ಮಧ್ಯೆ ಇರುವ ಕಣಿವೆಗಳಲ್ಲಿ ಆಗಸ್ಟ್ ತಿಂಗಳಿನ ನಂತರ ಭತ್ತದ ಬೆಳೆಯಿಂದಾಗಿ ಹಸಿರು ತುಂಬಿರುವುದನ್ನು ಗಮನಿಸಬಹುದು. ಉತ್ತರ ಕೊಡಗಿನ ಪೂರ್ವಭಾಗದಲ್ಲಿ ವ್ಯಾಪಕ ವೀಕ್ಷಣೆಗೆ ಅವಕಾಶ ಇರುವ ಬಯಲು ಪ್ರದೇಶವನ್ನು, ಪಶ್ಚಿಮ ಮತ್ತು ಉತ್ತರಭಾಗಗಳಲ್ಲಿ ತಲೆಯೆತ್ತಿದ ಕಡಿದಾದ

ಶಿಖರಗಳನ್ನು ಸಮುದ್ರ ಮಟ್ಟದಿಂದ ಸುಮಾರು ೧,೩೪೦ ಮೀಗಳಿಂದ ೧೭೧೪ ಮೀಟರ್‌ಗಳವರೆಗೆ ಕಾಣಬಹುದು.

ಒಟ್ಟಿನಲ್ಲಿ ಪರ್ವತ ಶಿಖರಗಳು ಹುಲ್ಲಿನಿಂದಲೂ, ಕಣಿವೆಗಳು ಹಾಗೂ ಪರ್ವತ ಸಾಲು ಪ್ರದೇಶದ ತೆರವಾದ ಸ್ಥಳಗಳು ನಿತ್ಯ ಹಸಿರು ಕಾಡುಗಳಿಂದಲೂ ಕೂಡಿವೆ. ಇಡೀ ಕೊಡಗು ಹರಿದ್ವರ್ಣದಿಂದ ಕೂಡಿದ್ದು, ಇಲ್ಲಿ ನೈಸರ್ಗಿಕವಾಗಿ ಸಸ್ಯಗಳು ಹೇರಳವಾಗಿವೆ ಕಣಿವೆಯ ಮೇಲ್ಭಾಗ ಮತ್ತು ಬೆಟ್ಟಗಳ ಇಳಿಜಾರಿನ ಪ್ರದೇಶದಲ್ಲಿ ವಾಣಿಜ್ಯ ಬೆಳೆಗಳಾದ ಕಾಫಿ, ಏಲಕ್ಕಿ, ಕರಿಮೆಣಸು ಮತ್ತು ಕಿತ್ತಳೆ ಬೆಳೆಯಲಾಗುತ್ತದೆ.

ಕೊಡಗಿನ ಅರಣ್ಯ ಮತ್ತು ದೇವರಕಾಡು, ಪನ್ಯಭೂಮಿ

ಮಾನವನ ಉಳಿವಿಗೆ ಪರಿಸರ ಹಾಗೂ ಅರಣ್ಯ ಅತ್ಯವಶ್ಯಕ. ಕಾಡುಗಳನ್ನು ದೇವರೆಂದು ಪೂಜಿಸುವ ಧರ್ಮ ಹಿರಿಯರ ಆಶಯ. ಇದು ಪರಿಸರ ಪ್ರಜ್ಞೆಯ ಪ್ರತೀಕವಾಗಿದೆ. ಪ್ರಾಣಿಸಂಕುಲ, ಅರಣ್ಯ, ಪರಿಸರವನ್ನು ಸಂರಕ್ಷಿಸದಿದ್ದಲ್ಲಿ ಮುಂದೊಂದು ದಿನ ಅದರ ಭೀಕರ ಪರಿಣಾಮವನ್ನು ಎದುರು ನೋಡಬೇಕಾಗುತ್ತದೆ. ಇಂದು ಮಾನವ ಜಗತ್ತು ನಿಸರ್ಗದೊಡನೆ ಪೈಪೋಟಿಗೆ ನಿಂತು ನೈಸರ್ಗಿಕ ಸಂಪತ್ತನ್ನು ತನ್ನ ಅನುಕೂಲಕ್ಕಾಗಿ ಬಳಸಿಕೊಳ್ಳುತ್ತಾ, ಕಾಡುಗಳೆಲ್ಲಾ ನಾಡಾಗಿ ಪರಿವರ್ತಿತವಾದ ಕಾರಣ ಅರಣ್ಯಸಂಪತ್ತು ಹಾಗೂ ಎಲ್ಲಾ ಪ್ರಾಣಿವರ್ಗಗಳು ನಾಶಹೊಂದುತ್ತಿವೆ. ಈ ವನ್ಯಮೃಗಗಳ ಸಂರಕ್ಷಣೆಗಾಗಿ ಸರ್ಕಾರವು ಅಭಯಾರಣ್ಯಗಳನ್ನು ನಿರ್ಮಿಸಿ, ಕೆಲವು ಕಾನೂನು ಜಾರಿಗೊಳಿಸಿದೆ. ಆದರೂ ಆನೆಯ ದಂತ, ಹುಲಿಯ ಚರ್ಮ, ಸಾರಂಗಗಳ ಕೊಂಬಿಗಾಗಿ, ಜಿಂಕೆಯ ಮಾಂಸಕ್ಕಾಗಿ ಇಂದಿಗೂ ವನ್ಯಮೃಗಗಳಿಗೆ ರಕ್ಷಣೆ ಇಲ್ಲದಂತಾಗಿದೆ.

ಕೊಡಗಿನ ಒಟ್ಟು ಅರಣ್ಯ ಕ್ಷೇತ್ರ ೧,೨೫೯,೫೨ ಚದರ ಕಿ.ಮಿ. ಕೊಡಗು ಜಿಲ್ಲೆಯು ಶೇಕಡವಾರು ಅರಣ್ಯ ಪ್ರದೇಶದಲ್ಲಿ ಐದನೇ ಸ್ಥಾನ ಪಡೆದಿದೆ. ೧,೧೩೬,೪೬ ಚ.ಕಿ.ಮೀ. ಕಾಯ್ದಿರಿಸಿದ ೨೭.೧೪ ಚ.ಕಿ.ಮೀ ಸಂರಕ್ಷಿತ ಮತ್ತು ೯೫.೯೨ ಚ.ಕಿ.ಮೀ. ವರ್ಗಿಕರಿಸದ ಅರಣ್ಯ ಪ್ರದೇಶಗಳಿವೆ. ರಾಜ್ಯದ ಒಂಭತ್ತು ಅರಣ್ಯ ವೃತ್ತಗಳಲ್ಲಿ ಕೊಡಗು ಸೇರಿದ್ದು ನಾಲ್ಕು ಅರಣ್ಯ ವಿಭಾಗಗಳನ್ನು ಒಳಗೊಂಡಿದೆ. ಮಡಿಕೇರಿ ವಿಭಾಗದಲ್ಲಿ ೮೫೮.೧೬ ಚ.ಕಿ.ಮೀ.ಅರಣ್ಯ ಪ್ರದೇಶವಿದ್ದು ಜಿಲ್ಲೆಯ ಉಳಿದ ಅರಣ್ಯ ಪ್ರದೇಶ ಹುಣಸೂರು ವಿಭಾಗದಲ್ಲಿದೆ. ಕೊಡಗಿನ ಅರಣ್ಯದಲ್ಲಿ ನಿತ್ಯಹರಿದ್ವರ್ಣ ಅರಣ್ಯಗಳು, ಉದುರೆಲೆ ಅರಣ್ಯಗಳು, ಕುರುಚಲು ಗಿಡ ಮತ್ತು ಮುಳ್ಳಿನ ಗಿಡಗಳು ಹೇರಳವಾಗಿವೆ.

ದೇವರ ಕಾಡು

ವಿವಿಧ ದೇವರ ಹೆಸರಿನಲ್ಲಿ ರಕ್ಷಿಸಿ ಪೂಜಿಸಲಾಗುವ ಕಾಡುಗಳನ್ನು ದೇವರ ಕಾಡುಗಳೆಂದು ಕರೆಯುತ್ತಾರೆ. ಎಲ್ಲಾ ಪ್ರದೇಶಗಳಲ್ಲಿ ಈ ಕಾಡುಗಳನ್ನು ನೋಡಬಹುದು. ಭಾರತದಲ್ಲಿರುವ ದೇವರಕಾಡುಗಳನ್ನು ಬಂಗಾಳ, ಬಿಹಾರದಲ್ಲಿ

'ಸರಣ'ಗಳೆಂದು ರಾಜಸ್ಥಾನದಲ್ಲಿ 'ವರಣ', ಮಹಾರಾಷ್ಟ್ರದಲ್ಲಿ 'ದೇವರಿ', ಕೇರಳದಲ್ಲಿ 'ಕಾವು', ಕರ್ನಾಟಕದ ಕೊಡಗೇತರ ಪ್ರದೇಶಗಳಲ್ಲಿ 'ಪವಿತ್ರವನ', ಕೊಡಗಿನಲ್ಲಿ 'ದೇವರಕಾಡು' ಎಂದು ಕರೆಯುವರು. ವಿಶೇಷ ನಂಬಿಕೆಗಳು, ಆಚರಣೆ, ದೈವಿಕ ಪೂಜೆಗಳನ್ನು ಆಚರಿಸಿಕೊಂಡು ಬರುತ್ತಿರುವ ಇಲ್ಲಿ ದೇವರ ನೆಲೆ, ಕೆರೆ, ಕಾಡುಗಳಿಂದ ಕೂಡಿರುವ ದೇವರ ಕಾಡಿನಲ್ಲಿ ತ್ರಿಶೂಲ, ಕಂಬ, ವಿಗ್ರಹಗಳು, ಮುಖವಾಡಗಳು ಕಂಡುಬರುತ್ತವೆ. ಗಂಡು ಹೆಣ್ಣು ದೇವರ ಹೆಸರಿನಲ್ಲಿರುವ ಈ ಕಾಡಿನಲ್ಲಿ ಎಲ್ಲಾ ಸಮುದಾಯದವರು ಪೂಜೆ ಮಾಡುತ್ತಾರೆ. ಪ್ರತಿ ಗ್ರಾಮದಲ್ಲೂ ಕಂಡುಬರುವ ಈ ಕಾಡು ಸುಮಾರು ೧ ಎಕರೆಯಿಂದ ೧೨೦ ಎಕರೆಯವರೆಗೆ ವಿಸ್ತೀರ್ಣ ಹೊಂದಿದೆ. ದೇವರ ಕಾಡಿನಲ್ಲಿ ಹನ್ನೊಂದು ವಿಧದ ಕಾಡುಗಳನ್ನು ಕಾಣಬಹುದಾಗಿದೆ. ಅಯ್ಯಪ್ಪಸ್ವಾಮಿಯ ದೇವರ ಕಾಡಿನಲ್ಲಿ ಪುರುಷರಿಗೆ ಮಾತ್ರ ಪ್ರವೇಶವಿರುತ್ತದೆ. ಕೆಲವು ದೇವರ ಕಾಡಿನಲ್ಲಿ ಹಂದಿ, ಕೋಳಿಯ ಬಲಿಯೂ ಕಂಡುಬರುತ್ತದೆ. ಕಾವೇರಮ್ಮ, ಸಪ್ತಮಾತೃಕೆ, ಪಾರ್ವತಿ, ಸುಗ್ಗಿದೇವತೆ, ಮಾರಮ್ಮ, ಭದ್ರಕಾಳಿ, ಭಗವತಿ, ಚಾಪಮ್ಮ, ದುರ್ಗಿ, ಪನ್ನಂಗಾಲತಮ್ಮೆ, ಮಂದತಮ್ಮೆ, ನೀಲಮ್ಮ ಮುಂತಾದ ಹೆಣ್ಣು ದೇವರ ಹೆಸರಿನ ಕಾಡುಗಳನ್ನು, ಇಗ್ಗುತಪ್ಪ, ಮಾದೇವ, ಕೃಷ್ಣದೇವ, ಬಸವಣ್ಣ, ರಾಮೇಶ್ವರ ಆಯ್ಯಪ್ಪ, ಚಿನ್ನತಪ್ಪ, ಬೀರದೇವ, ಭೂತದೇವ, ಗುಳಿಯ, ಅಂಬಲ, ಅಯ್ಯಪ್ಪ, ಮುತ್ತಪ್ಪ, ಕಮ್ಮಾರಟಪ್ಪ ಮುಂತಾದ ಗಂಡು ದೇವರ ಹೆಸರಿನಲ್ಲಿರುವ ಕಾಡುಗಳಿವೆ. ಮನೆತನದ ಮೂಲಪುರುಷನಾದ ಗುರುಕಾರೂಣನ ಹೆಸರಿನಲ್ಲಿಯೂ 'ಕಾರೂಣಕಾಡು' ಇದ್ದು ದೇವರ ಕಾಡಿನ ವರ್ಗಕ್ಕೆ ಸೇರಿದೆ.

ಶ್ರೀಗಂಧ, ಅತ್ತಿಮರ, ಬೀಟೆ, ಹೊನ್ನೆ, ಮಾವು, ಬೂರಗ, ಚೈನೆ, ಚಪ್ಪೆಮರ, ಗೇರ್‌ಬೀಜದ ಮರ, ಅರಳಿಮರ, ನೇರಳೆಮರ, ಅಮ್ಮೆಹಣ್ಣಿನ ಮರ ಮುಂತಾದ ಅನೇಕ ಮರಗಳು ಈ ಕಾಡಿನಲ್ಲಿ ಹೇರಳವಾಗಿವೆ. ಈ ಕಾಡಿನಲ್ಲಿರುವ ಮರವನ್ನು ಯಾವ ಕಾರಣಕ್ಕೂ ಕಡಿಯಬಾರದೆಂಬ ನಿಯಮವೊಂದಿದೆ. ಕಾವೇರಿ ಸಂಕ್ರಮಣದ ಸಮಯದಲ್ಲಿನ ಬೊತ್ತ್ (ಬಿದಿರನ್ನು x ಆಕಾರದಲ್ಲಿ ನೆಟ್ಟು ಬೊತ್ತ್ ಬಳ್ಳಿ ಸುತ್ತುವುದು) ಬೊತ್ತ್ ಹಾಗೂ ಪುತ್ತರಿ ಕದಿರನ್ನು ಅರ್ಪಿಸುತ್ತಾರೆ. ಕೊಡವ ದೇವಸ್ಥಾನದ ಮುಖ್ಯಸ್ಥರು ಈ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಸರ್ಕಾರದ ಪೈಸಾರಿ ಕಾಡುಗಳು, ದಲಿತರ ಹೊಲೆಯ ದೇವರ ಕಾಡು, ಹಿರಿಯರ ಕೈಮಡ, ಕಾರೋಣ ಕಾಡು, ಮಾಚಂಗಡ ಮನೆತನದ ಮಾಸ್ತಿ ಕಾಡುಗಳು, ತಾಕೇರಿಯ ಮಾಸ್ತಿಕೊಂಡದ ಕೂರ ದೇವರ ಕಾಡಿನ ಜೊತೆಗೆ ಜಮ್ಮಮಾಪಿಳ್ಳೆಗಳ ಮಸೀದಿಗೆ ಸೇರಿದ ಪಳ್ಳಿಕಾಡ್ ಪ್ರದೇಶವನ್ನು "ದೊಡ್ಡವೀರರಾಜೇಂದ್ರನು ಮೈತಾಡಿಯ ಚಾಮಿಯಾಲ್ ಪ್ರದೇಶದಲ್ಲಿ ದಾನವಾಗಿ ಕೊಟ್ಟನೆಂದು ಇತಿಹಾಸದಲ್ಲಿ ಹೇಳಲಾಗಿದೆ". ಇತ್ತೀಚೆಗೆ ದೇವರಕಾಡುಗಳ ಅತಿಕ್ರಮಣದಿಂದಾಗಿ ನಿರಂತರ ವಿನಾಶಕ್ಕೊಳಗಾಗುತ್ತಿವೆ. ಕಾಡುಗಳೆಲ್ಲಾ ನಾಡಾಗಿ ವನ್ಯ ಪ್ರಾಣಿಗಳಿಗೆ ರಕ್ಷಣೆ ಇಲ್ಲದೆ ಪ್ರಾಣಿಸಂಕುಲವು ಅವನತಿ ಹೊಂದುತ್ತಿದೆ. ಅರಣ್ಯ ಇಲಾಖೆ ಸಂರಕ್ಷಿಸುವ

ಕಾರ್ಯವನ್ನು ಕೈಗೊಂಡಿದೆಯಾದರೂ ನಮ್ಮೆಲ್ಲರ ಆಸಕ್ತಿ, ಧ್ಯೇಯದಿಂದ ಅರಣ್ಯ ರಕ್ಷಣೆ ಅತ್ಯವಶ್ಯಕವಾಗಿದೆ.

ದೇವರ ಕಾಡುಗಳು ಅರಣ್ಯ ಮತ್ತು ಕಂದಾಯ ಇಲಾಖೆಗಳ ಮೇಲ್ವಿಚಾರಣೆಗೆ ಒಳಪಟ್ಟಿದ್ದು, ಅವುಗಳನ್ನು ಒಂದು ನಿರ್ದಿಷ್ಟ ದೇವರು ಅಥವಾ ದೇವಸ್ಥಾನಕ್ಕೆ ವಹಿಸಲಾಗಿರುತ್ತದೆ. ದೇವರಕಾಡುಗಳು ನೀರಿನ ಮೂಲಗಳಾದ ಹೊಳೆ ಮತ್ತು ಜರಿಗಳನ್ನು ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸುತ್ತ ಮುತ್ತಲಿನ ಪ್ರದೇಶಕ್ಕೆ ಸಾರ್ವಕಾಲಿಕ ನೀರು ಸಿಗುವಂತೆ ಮಾಡುವಲ್ಲಿ ಸಹಕಾರಿಯಾಗಿವೆ. ಕೊಡಗಿನ ಪರಿಸರ ರಕ್ಷಣೆ ಮತ್ತು ಸಂಸ್ಕೃತಿ ಪರಂಪರೆಯನ್ನು ಉಳಿಸುವಲ್ಲಿ ದೇವರ ಕಾಡುಗಳ ಪಾತ್ರ ಪ್ರಮುಖವಾಗಿವೆ.

ಪನ್ಯಭೂಮಿ

'ಪನ್ಯ' ಎಂದರೆ ಹಾಲೇರಿ ರಾಜರ ಕಾಲದ ಸ್ವಂತ ಭೂಮಿ. ಫಲವತ್ತಾದ ವಿಶಾಲವಾದ ಖಾಸಗಿ ಕೃಷಿ ಜಮೀನು. ರಾಜರ ವಶದಲ್ಲಿದ್ದ ಈ ಭೂಮಿಯನ್ನು ಬ್ರಿಟಿಷ್ ಆಡಳಿತದಲ್ಲಿ ಹೀಗೆ ವಿವರಿಸಿದ್ದಾರೆ. "Panya is a term applied to crown lands, formerly held by the Rajas, given out for cultivation on condition that they should be resignated wherenver required by the Government" ಈ ಭೂಮಿಯಲ್ಲಿ ರಾಜರಿಗೆ ಬೇಕಾದ ಬೆಳೆಗಳನ್ನು ಬೆಳೆಯಲಾಗುತ್ತಿತ್ತು. ಸೈನಿಕರಿಗೆ ಬೇಕಾದ ಭತ್ತ, ಅವಲಕ್ಕಿಯನ್ನು ಈ ಪನ್ಯ ಭೂಮಿಯಿಂದ ಹಾಲೇರಿ ಅರಸರು ಪಡೆಯುತ್ತಿದ್ದರು.

ರಾಜರಿಗೆ ಪನ್ಯಭೂಮಿ ಇರುವ ಕಾರಣ ಕೊಡವರಿಗೆ ರಾಜರು 'ಜಮ್ಮಭೂಮಿ'ಯನ್ನು ವಂಶಪಾರಂಪರ್ಯವಾಗಿ ಅನುಭವಿಸಲು ನೀಡಿರುತ್ತಾರೆ. ಈ ಜಮ್ಮವನ್ನು ಬೇರೆಯವರಿಗೆ ವರ್ಗಾವಣೆ ಮಾಡಲು ಆಗುವುದಿಲ್ಲ.

ಫಲವತ್ತಾದ ಮಣ್ಣು, ನೀರಾವರಿ ಸೌಕರ್ಯವಿರುವ ಈ ಭೂಮಿ ಹಾಲೇರಿ ರಾಜರ ಕಾಲದಲ್ಲಿ ಪನ್ಯಭೂಮಿಯು ಕೊಡಗಿನ ಅರಮೇರಿ, ಅಪ್ಪಂಗಳ, ಕುಟ್ಟ, ನಾಗರಹೊಳೆ, ಕುಂತೂರು, ಬೆಸಗೂರು, ಕೈಕೇರಿ, ವೀರಾಜಪೇಟೆ, ಅಮ್ಮತ್ತಿ, ಕಳತ್‌ಮಾಡ್, ಬೇತ್ರಿ, ಗಾಳಿಬೀಡು, ಗರ್ವಾಲೆ, ಮಾದಾಪುರ, ಬಿಳಿಗೇರಿ, ಸಿರಂಗಾಲ, ನಾಕೂರ್, ಬೆಟ್ಟಗೇರಿ, ನಂಜರಾಯಪಟ್ಟಣ ಇನ್ನು ಅನೇಕ ಕಡೆ ಕಂಡುಬರುತ್ತದೆ.

ಈ ಪನ್ಯಭೂಮಿಯನ್ನು ಶೌರ್ಯ ಸಾಹಸ ಸಾಧನೆ ಮಾಡಿದವರಿಗೆ ಹಾಗೂ 'ದಾಸೋಹ' ನಡೆಸುವ ಮಠಗಳಿಗೆ ದಾನರೂಪದಲ್ಲಿ ರಾಜರು ಕೊಡುತ್ತಿದ್ದರು. (ಕ್ಷೇತ್ರಕಾರ್ಯದಿಂದ ತಿಳಿದ ಬಂದ ಮಾಹಿತಿ-ಬೊಪ್ಪೇರ ಕಾವೇರಪ್ಪ, ೮೫ ವರ್ಷ). ಹಾಲೇರಿ ಅರಸರ ಕಾಲದಲ್ಲಿ ಶುರುಪನ್ಯ (ಅಪ್ಪಂಗಳ), ನಡುಪನ್ಯ, (ಅರಮೇರಿ), ಕೊನೆಪನ್ಯ (ಕುರ್ಚಿ ಗ್ರಾಮ) ಎಂಬ ಪ್ರಮುಖ ವಿಂಗಡಣೆಯ ಪನ್ಯಗಳಿದ್ದವು.

ಬಾಣೆಗಳು (ಗೋಮಾಳ) : ಜಾನುವಾರುಗಳನ್ನು ಮೇಯಿಸಲು ಬೇಕಾಗುವ ಮೈದಾನವನ್ನು 'ಬಾಣೆ' ಎಂದು ಗುರುತಿಸಲಾಗಿದೆ. 'ಪೈಸಾರಿ'ಯೆಂದು ಸರ್ಕಾರದ ವಶದಲ್ಲಿರುವ ಬಂಜರುಭೂಮಿಗಳು ಕೊಡಗಿನ ಅಲ್ಲಲ್ಲಿ ಇಂದಿಗೂ ಕಂಡುಬರುತ್ತಿವೆ.

ಜಲ ಸಂಪನ್ಮೂಲಗಳು

ಕೊಡಗಿನ ಮುಖ್ಯ ನದಿ ಕಾವೇರಿ. ಹೇಮಾವತಿ ಲಕ್ಷ್ಮಣತೀರ್ಥ, ಹಾರಂಗಿ, ಬರಪೊಳೆ ಇವು ಜಿಲ್ಲೆಯ ಇತರ ಮುಖ್ಯ ನದಿಗಳಾಗಿವೆ. ಕನ್ನಿಕೆ, ಕಕ್ಕಬ್ಬೆ, ಕಾಡನೂರು ಹೊಳೆ, ಚಿಕ್ಲಿಹೊಳೆ, ಹಟ್ಟಿಹೊಳೆ ಇವೇ ಮೊದಲಾದ ಉಪನದಿಗಳು ಅನೇಕ ಹೊಳೆಗಳು ಜಿಲ್ಲೆಯಲ್ಲಿ ಹರಿಯುತ್ತವೆ.

ಕಾವೇರಿ ನದಿ

ಕೊಡಗು ಜಿಲ್ಲೆಯಲ್ಲಿ ಭಾಗಮಂಡಲದ ಸಮೀಪ ಪಶ್ಚಿಮ ಘಟ್ಟಗಳ ಬ್ರಹ್ಮಗಿರಿ ಬೆಟ್ಟದಲ್ಲಿ ಕಾವೇರಿ ಉಗಮಿಸುತ್ತದೆ. ಇದರ ಉಗಮ ಸ್ಥಾನಕ್ಕೆ ತಲಕಾವೇರಿಯೆಂದು ಹೆಸರು. ಉಗಮಸ್ಥಾನದಿಂದ ಸಿದ್ಧಾಪುರದವರೆಗೆ ಆಗ್ನೇಯ ಮುಖವಾಗಿ ಹರಿಯುತ್ತಾ ಅಲ್ಲಿಂದ ಈಶಾನ್ಯ ದಿಕ್ಕಿನಲ್ಲಿ ಹರಿಯುವ ಕಾವೇರಿ ಅನೇಕ ಉಪನದಿಗಳನ್ನು ತನ್ನಲ್ಲಿ ಸೇರಿಸಿಕೊಳ್ಳುತ್ತದೆ. ೧೩೪೧ ಮೀ. ಎತ್ತರದಲ್ಲಿ ಬ್ರಹ್ಮಗಿರಿ ಶ್ರೇಣಿಯಲ್ಲಿ ಕಾವೇರಿ ಮೈದಳೆದಿರುತ್ತದೆ. ಭಾಗಮಂಡಲದಿಂದ ಎಂಟು ಕಿ.ಮೀ. ದೂರದಲ್ಲಿ ಈ ಶ್ರೇಣಿಯಲ್ಲಿನ ತಲಕಾವೇರಿಯಲ್ಲಿ ಈ ಪವಿತ್ರ ನದಿ ಚಿಮ್ಮುತ್ತದೆ. ೭೬೫ ಕಿ.ಮೀ. ದೂರ ತಲಕಾವೇರಿಯಿಂದ ಚಿಮ್ಮಿ ಹರಿದು ಕೊನೆಗೆ ತಮಿಳುನಾಡಿನ ಪೊಂಪಟ್ಟಣದ ಬಳಿ ಬಂಗಾಳ ಕೊಲ್ಲಿಯನ್ನು ಸೇರುತ್ತದೆ.

ಭಾಗಮಂಡಲದಲ್ಲಿ ಸುಜ್ಯೋತಿ ಎಂಬ ನದಿ ಅಂತರ್ವಾಹಿನಿಯಾಗಿ ಹರಿದು ಕನ್ನಿಕಾ–ಕಾವೇರಿ ಸಂಗಮ ಸ್ಥಳದಲ್ಲಿ ಕಾವೇರಿಯೊಡನೆ ಕೂಡುತ್ತದೆಂಬ ಪ್ರತೀತಿ ಇದೆ. ಆದ್ದರಿಂದ ಭಾಗಮಂಡಲವು 'ತ್ರಿವೇಣಿ ಸಂಗಮ ಕ್ಷೇತ್ರ' ಎಂದು ಕರೆಯಲ್ಪಡುತ್ತದೆ.

ಹಾರಂಗಿ

ಮಡಿಕೇರಿ ಪೀಠಭೂಮಿಯಿಂದ ಹರಿದು ಬರುವ ಹಟ್ಟಿ (ಹುತ್ತೆ) ಹೊಳೆಯು ಕೋಟೆಯ ಬೆಟ್ಟದಿಂದ ಹರಿದು ಬರುವ ಮಾದಾಪುರದ ಹೊಳೆಯು ಮಾದಾಪುರದ ಪೂರ್ವದಲ್ಲಿರುವ ಗರಗಂದೂರು ಎಂಬಲ್ಲಿ ಸಂಗಮಿಸಿ ಹಾರಂಗಿ ಎಂಬ ದೊಡ್ಡ ಹೊಳೆಯಾಗುತ್ತದೆ. ಈ ಹೊಳೆಗೆ ಶಾಂತಳ್ಳಿಯ ಕಳಕಂದೂರು ಗುಡ್ಡದ ಬದಿಯಿಂದಿಳಿದು ಬರುವ ಚೋರನ ಹೊಳೆಯು ಸೋಮವಾರಪೇಟೆ ಬೆಟ್ಟಗಳಿಂದ ಹರಿದು ಬರುವ ಕಕ್ಕೆ ಹೊಳೆಯನ್ನು ಕೂಡುತ್ತದೆ. ಮಡಿಕೇರಿ ತಾಲ್ಲೂಕಿನ ಬೋರೊ ಬೆಟ್ಟದಲ್ಲಿ ಉಗಮ ಹೊಂದಿ ಆಗ್ನೇಯ ಮುಖವಾಗಿ ಹರಿಯುವ ಹಾರಂಗಿ ನದಿಯು ಮೆಗ್ಗತ್ತೂರು ಎಂಬಲ್ಲಿ ದಕ್ಷಿಣಕ್ಕೆ ತಿರುಗಿ ಸ್ವಲ್ಪ

ದೂರ ಪ್ರವೇಶಿಸಿ ಅನಂತರ ಪೂರ್ವಕ್ಕೆ ತಿರುಗಿ ಮತ್ತೆ ಉತ್ತರಾಭಿಮುಖವಾಗಿ ಹರಿದು ಪುನಃ ಪೂರ್ವಾಭಿಮುಖವಾಗಿ ಸಾಗಿ ಕುಶಾಲನಗರದ ಉತ್ತರದಲ್ಲಿ 'ಕೂಡಿಗೆ' ಎಂಬಲ್ಲಿ ಕಾವೇರಿಯನ್ನು ಕೂಡಿಕೊಳ್ಳುತ್ತದೆ. ಕಾವೇರಿ ಮತ್ತು ಹಾರಂಗಿ ನದಿಗಳು ಕೂಡಿಗೆಯಲ್ಲಿ ಸಂಗಮಿಸುವುದರಿಂದ ಆ ಸ್ಥಳಕ್ಕೆ ಕೂಡಿಗೆ ಎಂಬ ಹೆಸರು ಬಂದಿದೆ. ಹಾರಂಗಿ ಎಂಬಲ್ಲಿಯವರೆಗಿನ ಈ ನದಿಯ ಮೊದಲ ಹರಿವನ್ನು ಹಟ್ಟಿ ಹೊಳೆಯೆಂದು ಅನಂತರ ಹಾರಂಗಿ ಎಂದು ಕರೆಯಲಾಗುತ್ತದೆ.

ಹಾರಂಗಿ ನದಿಯನ್ನು ಕಕ್ಕೆ ಹೊಳೆ ನದಿಯು ಸೇರುವ ಮುನ್ನ ಹುದಗೂರು ಎಂಬಲ್ಲಿ ಅಡ್ಡಗಟ್ಟಿ ಹಾರಂಗಿ ಜಲಾಶಯ ನಿರ್ಮಿಸಲಾಗಿದೆ. ಕೊಡಗಿನ ಪ್ರದೇಶದಲ್ಲಿ ಸಣ್ಣ ನದಿಯಾಗಿ ಉಗಮ ಹೊಂದಿ ತಾರುಣ್ಯದ ಆರಂಭದಿಂದಲೇ ಸುತ್ತಲ ಸೀಮೆಯ ಸಂಪತ್ತಿಗೆ ಕಾರಣವಾಗಿ ಶಿವನ ಸಮುದ್ರದಲ್ಲಿ ಪರಿಧಿಯನ್ನು ಲಂಘಿಸುವಾಗ ವಿದ್ಯುತ್ತನ್ನು ಹರಿಸಿ ತಮಿಳುನಾಡಿನತ್ತ ಸಾಗುತ್ತದೆ.

ಹೇಮಾವತಿ

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಬಲ್ಲಾಳರಾಯನ 'ದುರ್ಗನ ಜಾವಳಿ'ಯ ಬಳಿ ಹುಟ್ಟಿ ಹರಿಯುವ ಹೇಮಾವತಿ ಅಥವಾ ಎಣ್ಣೆ ಹೊಳೆಯು ಹಾಸನ ಜಿಲ್ಲೆಯಲ್ಲಿ ಬಳಿಕ ಸ್ವಲ್ಪದೂರ ಉತ್ತರ ಕೊಡಗಿನ ಗಡಿಯಾಗಿ ಹರಿಯುತ್ತದೆ. ಮುಂದೆ ಈ ನದಿ ಮಂಡ್ಯ ಜಿಲ್ಲೆಯ ಕೃಷ್ಣರಾಜ ಸಾಗರದ ನೈರುತ್ಯದಲ್ಲಿ ಕಾವೇರಿಯನ್ನು ಸೇರಿಕೊಳ್ಳುವುದು. ಕೊಡಗು ಜಿಲ್ಲೆಯ ಗಡಿಯಲ್ಲಿ ಹರಿಯುವಾಗ ಈ ನದಿಗೆ ಐಗೂರು ನದಿ ಮತ್ತು ಕಟ್ಟೆಹಳ್ಳ ದಕ್ಷಿಣದಿಂದ ಸೇರಿಕೊಳ್ಳುತ್ತದೆ. ಹೇಮಾವತಿಯು ಸೋಮವಾರಪೇಟೆ ತಾಲ್ಲೂಕಿನ ಉತ್ತರ ಗಡಿಯ ಅಂಚಿನಲ್ಲಿ ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಹರಿಯುತ್ತದೆ.

ಲಕ್ಷ್ಮಣತೀರ್ಥ

ಕಾವೇರಿ ನದಿಗೆ ಅದರ ಬಲದಂಡೆಯಲ್ಲಿ ಬಂದು ಸೇರುವ ಉಪನದಿಗಳಲ್ಲಿ ಪ್ರಮುಖವಾದದ್ದು ಲಕ್ಷ್ಮಣತೀರ್ಥ. ಇದು ಕೊಡಗಿನ ದಕ್ಷಿಣ ಭಾಗದಲ್ಲಿರುವ ಬ್ರಹ್ಮಗಿರಿಯ ದೇವವಾಸಿ ಬೆಟ್ಟದಲ್ಲಿ, ಮುನಿಕಾಡು ಅರಣ್ಯ ಪ್ರದೇಶದಲ್ಲಿ ಉಗಮಿಸುತ್ತದೆ. ಲಕ್ಷ್ಮಣತೀರ್ಥ ಹಾಗೂ ಇದರೊಡನೆ ಸಂಗಮಿಸುವ ರಾಮತೀರ್ಥ ಮತ್ತು ಕೆರೆಹೊಳೆ ನದಿಗಳು ಕೊಡಗು ಜಿಲ್ಲೆಯ ವೀರರಾಜಪೇಟೆ ತಾಲ್ಲೂಕಿನ ಆಗ್ನೇಯ ಭಾಗಕ್ಕೆ ನೀರಾವರಿ ಸೌಲಭ್ಯಗಳನ್ನು ಒದಗಿಸುತ್ತದೆ. ಈ ಭಾಗದ ಇರ್ಪು ಎಂಬ ಸ್ಥಳದಲ್ಲಿ ಲಕ್ಷ್ಮಣತೀರ್ಥದ ಒಂದು ಜಲಪಾತವಿದೆ. ಇದರ ಇಕ್ಕೆಲಗಳಲ್ಲಿ ದಟ್ಟವಾದ ಅರಣ್ಯ ಕಂಡುಬರುತ್ತದೆ.

ಲಕ್ಷ್ಮಣ ತೀರ್ಥ ಮುಂದೆ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನಲ್ಲಿ ಹರಿದು ಕೃಷ್ಣರಾಜ ಸಾಗರವನ್ನು ಪ್ರವೇಶಿಸಿ ಸಾಗರಕಟ್ಟೆ ಬಳಿ ಕಾವೇರಿ ನದಿಯೊಡನೆ

ಸಂಗಮಿಸುತ್ತದೆ. ಇರ್ಪುವಿನಲ್ಲಿ ಶ್ರೀರಾಮ ಸ್ಥಾಪಿತವೆಂದು ಹೇಳುವ ಶಿವ ದೇವಾಲಯವಿದೆ.

ಬರಪೊಳೆ

ಇದು ಕೊಡಗಿನ ಪಶ್ಚಿಮಕ್ಕೆ ಹರಿಯುವ ಪ್ರಮುಖ ನದಿ ಬ್ರಹ್ಮಗಿರಿ ಬೆಟ್ಟಗಳ ತಪ್ಪಲಿನಲ್ಲಿ ಹುಟ್ಟುವ ಈ ನದಿಯು 'ಕೆಂಗನ್‌ಹೊಳೆ' ಮತ್ತು 'ಕಕ್ಕಟ್ಟು ಹೊಳೆ' ಎಂಬ ಎರಡು ಸಣ್ಣ ತೊರೆಗಳನ್ನು ಕೂಡಿಕೊಂಡು ಬೆಟ್ಟಗಳ ಕಣಿವೆಯ ನಡುವೆ ಪಶ್ಚಿಮಾಭಿಮುಖವಾಗಿ ಹರಿಯುತ್ತದೆ. ಇದು ಮಲೆನಾಡು, ಬಾಡಗಕೇರಿ ಬಳಿ ತುಂಬಿ ಮಲೆಯ ಶಿಖರದಲ್ಲಿ (ಬ್ರಹ್ಮಗಿರಿ ಶ್ರೇಣಿ) ಹುಟ್ಟುತ್ತದೆ. ಕುಟ್ಟಂದಿ ಗ್ರಾಮದ ಬಳಿ ಹುಟ್ಟಿಬರುವ 'ಸಾರತ್' ನದಿ ೪೩೪ ಅಡಿ ಎತ್ತರದಿಂದ ಧುಮುಕಿ ಬರಪೊಳೆಗೆ ಸೇರುತ್ತದೆ. ಇಲ್ಲಿ ದೊಡ್ಡ ಬಂಡೆಯೊಂದರ ಮೇಲೆ ಧುಮುಕಿ ೧೩೪ ಮೀ ಆಳದ ಸುಂದರ ಜಲಪಾತವನ್ನು ನಿರ್ಮಿಸಿದೆ. ಇದನ್ನು ಸಾರತ್ ಅಬ್ಬಿ ಎನ್ನುತ್ತಾರೆ. ಅನಂತರ ಕೇರಳ ರಾಜ್ಯದತ್ತ ಸಾಗುವ ಬರಪೊಳೆ ನದಿ ಗಡಿಯ ಸಮೀಪದಲ್ಲಿ ಇನ್ನೊಂದು ಜಲಪಾತವನ್ನು ನಿರ್ಮಿಸಿದೆ. ಇಲ್ಲಿಂದ ಮುಂದೆ ಈ ನದಿ ಕೇರಳ–ಕೊಡಗು ಗಡಿಯಲ್ಲಿ ಹರಿದು ಉತ್ತರದ ಹೆಗ್ಗಳ ಕಣಿವೆಯಿಂದ ಬರುವ ಕಲ್ಲು ಹೊಳೆಯನ್ನು ಕೂಡಿಕೊಂಡು ಕೇರಳ ಪ್ರವೇಶಿಸುತ್ತದೆ.

ಕುಮಾರ ಧಾರಾ

ಸುಬ್ರಹ್ಮಣ್ಯ ಬೆಟ್ಟಸಾಲಿನಲ್ಲಿ ಹುಟ್ಟಿ ಹಾಸನ ಜಿಲ್ಲೆಯ ಮಂಜರಾಬಾದು (ಸಕಲೇಶಪುರ) ತಾಲ್ಲೂಕಿಗೂ ಕೊಡಗಿಗೂ ನಡುವೆ ಕೊಡಗಿನ ಉತ್ತರ ಮೇರೆಯಾಗಿ ಹರಿದು 'ಬಿಸಿಲೆಘಾಟಿ'ನ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರವೇಶಿಸಿ ಉಪ್ಪಿನಂಗಡಿ ಎಂಬ ಊರಲ್ಲಿ ಕುಮಾರಧಾರಾ ನದಿಯು ನೇತ್ರಾವತಿ ನದಿಯನ್ನು ಸೇರುತ್ತದೆ. ಬರಪೊಳೆ, ನೊಜೆಕಲ್ಲು ಹೊಳೆ ಮತ್ತು ಕುಮಾರಧಾರಾ ಹೊಳೆಗಳು ಕೊಡಗಿನಲ್ಲಿ ಉಗಮಿಸಿ ಪಶ್ಚಿಮಕ್ಕೆ ಹರಿದು ಅರಬ್ಬಿ ಸಮುದ್ರಕ್ಕೆ ಸೇರುತ್ತದೆ. ಕೊಡಗು ಜಿಲ್ಲೆಯಲ್ಲಿ ಜನಿಸಿದ ಸಂಪತ್ತುಗಳು ಕಡಿಮೆ. ಇಲ್ಲಿನ ಮುಖ್ಯ ಖನಿಜಗಳು ಕೊರಂಡಂ (ಕುರಂದ), ಗಾರ್ನೆಟ್, ಮಾಗ್ನಸೈಟ್ ಹಾಗೂ ಆರ್ಭಕ ಇವು ಮುಖ್ಯವಾಗಿ ಕಂಡುಬರುತ್ತದೆ.

ಸಸ್ಯ ಸಂಪತ್ತು : ಕೊಡಗಿನ ಸಸ್ಯರಾಶಿ ಅತ್ಯಂತ ವೈವಿಧ್ಯಮಯ ಹಾಗೂ ಸಂಪದ್ಭರಿತ, ಜಿಲ್ಲೆಯ ಸಸ್ಯರಾಶಿಯನ್ನು ೪ ಭಾಗಗಳಾಗಿ ವಿಂಗಡಿಸಬಹುದು.

೧) ಕುರುಚಲು ಮತ್ತು ಮುಳ್ಳು ಕಂಟಿಗಳು (scrub type)

೨) ತೇವಾಂಶ ಭರಿತ ಉದುರೆಲೆ ಅರಣ್ಯ (most deciduoustype)

೩) ನಿತ್ಯ ಹರಿದ್ವರ್ಣ ಮತ್ತು ಭಾಗಶಃ ನಿತ್ಯಹರಿದ್ವರ್ಣ ಅರಣ್ಯಗಳು (every green and semi ever green)

೪) ಷೋಲಾಗಳು ಮತ್ತು ಹುಲ್ಲು ಗಾವಲುಗಳು (Sholus and grass land type)

ವನ್ಯ ಪ್ರಾಣಿ ಸಂಪತ್ತು

ಕೊಡಗು ಜಿಲ್ಲೆಯು ಸಮೃದ್ಧ ಹಾಗೂ ವರ್ಣರಂಜಿತವಾದ ವನ್ಯಜೀವಿ ಸಂಪತ್ತನ್ನು ಹೊಂದಿದೆ. ಕೊಡಗು ಜಿಲ್ಲೆಯಲ್ಲಿ ಅತೀ ಹೆಚ್ಚು ಮಳೆ ಬೀಳುವ ಸಂದರ್ಭದಲ್ಲಿ, ಪ್ರಾಣಿಗಳು ಕಡಿಮೆ ಮಳೆ ಬೀಳುವ ಪಕ್ಕದ ಜಿಲ್ಲೆಯ ಕಾಡುಗಳಿಗೆ ವಲಸೆ ಹೋಗಿ ನಂತರ ವಾಪಾಸು ಬರುವುದು ಕಂಡು ಬರುತ್ತದೆ. ಜಿಲ್ಲೆಯ ಉತ್ತರದ, ಪೂರ್ವದ ಮತ್ತು ದಕ್ಷಿಣಭಾಗದಲ್ಲಿ ಹೆಚ್ಚು ಪ್ರಾಣಿಗಳು ಕಂಡು ಬರುತ್ತವೆ.

ನಾಯಿ ಜಾತಿ ಪ್ರಾಣಿಗಳಲ್ಲಿ ಸೀಳುನಾಯಿ ಅಥವಾ ಕಾಡುನಾಯಿಯನ್ನು ಸ್ಥಳೀಯವಾಗಿ 'ಕೆನ್ನಾಯಿ' ಎಂದು ಕರೆಯುತ್ತಾರೆ. ಇವು ಕಾಡಿನಲ್ಲಿ ವಾಸಿಸುತ್ತವೆ. ತೋಳಗಳಂತೆ ಇವು ಸಂಘಜೀವಿಗಳು ಮುಂಗೋಲಿ (ಮುಂಗುಸಿ) ಗಳು ಇವು ಮಾಂಸಾಹಾರಿಗಳಾದರೂ ಹಣ್ಣು ಹಂಪಲು ತರಕಾರಿಗಳನ್ನು ತಿನ್ನುತ್ತವೆ. ಇಲಿ ಹೆಗ್ಗಣ ಹಾಗೂ ಓತಿಕ್ಯಾತ ಕಪ್ಪೆ ಕ್ರಿಮಿ ಕೀಟಗಳನ್ನು ತಿನ್ನುತ್ತವೆ.

ಉರಗಗಳ ವರ್ಗಗಳಲ್ಲಿ ಮೊಸಳೆಗಳು, ಹಾವುಗಳು, ಆಮೆಗಳು ಮುಂತಾದ ಪ್ರಾಣಿಗಳು ಈ ಭಾಗದಲ್ಲಿ ಕಂಡುಬರುತ್ತವೆ. ಆಕ್ರಮಣಕಾರಿ ಮಾಂಸಾಹಾರಿಗಳಾದ ಹುಲಿ, ಚಿರತೆ, ಮತ್ತು ಕಾಡು ಮಾಂಸಗಳು ನಿತ್ಯ ಹರಿದ್ವರ್ಣದ ಕಾಡುಗಳಲ್ಲಿ ಹೇರಳವಾಗಿ ಕಂಡು ಬರುತ್ತವೆ. ಜಿಲ್ಲೆಯ ಪುಷ್ಪಗಿರಿ, ಸುಬ್ರಹ್ಮಣ್ಯ, ಸಂಪಾಜೆ, ಬ್ರಹ್ಮಗಿರಿ ಮಾಕುಟ್ಟ, ಭಾಗಮಂಡಲ, ನಾಗರಹೊಳೆ, ತಿತಿಮತಿ, ಕಲ್ಲಹಳ್ಳಿ ಮಾರ್ಷಲ್ಲ್ ಪ್ರದೇಶಗಳಲ್ಲಿ ಆನೆಗಳು ಕಂಡುಬರುತ್ತವೆ.

ರಬ್ಬರ್ ತೋಪುಗಳು

ರಬ್ಬರ್ ತೋಪುಗಳು ಈ ಭಾಗದಲ್ಲಿ ಇದ್ದು, ನಿಲುವಂಗಿ ತಯಾರಿಕೆಯಲ್ಲಿ ರಬ್ಬರ್ ಕೊಳವೆಗಳು, ಟೈರು ಮತ್ತು ಟ್ಯೂಬುಗಳು, ವಿದ್ಯುತ್‌ನಿರೋಧಕ ಕೇಬಲ್‌ಗಳು ಇತ್ಯಾದಿ ನಾನಾ ಬಗೆಯ ವಸ್ತುಗಳನ್ನು ನಿರ್ಮಿಸಲು ಉಪಯೋಗಿಸುತ್ತಾರೆ. ರಬ್ಬರ್ ನಿಯಂತ್ರಣಕ್ಕೆ ಒಳಪಟ್ಟ ಸಾಮಗ್ರಿಯಾಗಿದ್ದು, ಇದನ್ನು ಬೆಳೆಯಲು ಉತ್ಪಾದಿಸಲು ಮತ್ತು ಮಾರಲು ರಬ್ಬರ್ ಮಂಡಳಿಯಿಂದ ಪರವಾನಿಗೆಯನ್ನು ಪಡೆಯಬೇಕಾಗುತ್ತದೆ.

ಅನೇಕ ಕಾರಣಗಳಿಂದಾಗಿ ನಮ್ಮ ಅರಣ್ಯಗಳು ನಶಿಸುತ್ತಿವೆ. ಸ್ಥಳಾಂತರ ಬೇಸಾಯ, ಜಾನುವಾರುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಮೇಯಿಸುವುದು, ಅರಣ್ಯಕ್ಕೆ ಬೆಂಕಿ ತಗಲುವುದು ಹಾಗೂ ಬೇಸಾಯಕ್ಕೆಂದು ಅರಣ್ಯಭೂಮಿಯನ್ನು ಪರಿವರ್ತಿಸುವುದು, ಇದೇ ಕಾರಣಗಳಿಂದಾಗಿ ಅರಣ್ಯದ ವಿಸ್ತೀರ್ಣ ಕಡಿಮೆಯಾಗುತ್ತಾ ಹೋಗುತ್ತಿದೆ.

ಕೊಡಗಿನಲ್ಲಿ ವಿಪುಲವಾಗಿ ದೊರಕುವ. ಶ್ರೀಗಂಧದ ಮರ, ತೇಗ, ಬೀಟೆ, ನಂದಿಮರ, ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಉತ್ತೇಜಿಸಲು ಮೃದು ಮರವು ದೊಡ್ಡ ಪ್ರಮಾಣದಲ್ಲಿ ದೊರೆಯುವಂತೆ ಮಾಡಲಾಗಿದೆ. ಪದರು ಹಲಗೆ ಕೈಗಾರಿಕೆಗಳಿಗೆ

ಹಂಚಿಕೊಡಲ್ಪಟ್ಟ ಬನಾಟಾ ಮರವು ಇಲಾಖೆಯಿಂದ ಸಂಗ್ರಹಿಸಲ್ಪಡುತ್ತದೆ. ಮತ್ತು ಅದನ್ನು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಪೂರೈಸಲಾಗುತ್ತದೆ.

ಕೊಡಗಿನ ಸೌಂದರ್ಯವನ್ನು ಹಲವಾರು ಕವಿಗಳು ಅವರವರ ದೃಷ್ಟಿಯಲ್ಲಿ ವರ್ಣಿಸಿದ್ದಾರೆ ೧೯೬೬ ರಲ್ಲಿ ವಿದೇಶಿ ವಿದ್ವಾಂಸರಾದ ಗ್ರೇಟರ್‌ರವರು ಕೊಡಗಿನ ಭೌಗೋಳಿಕ ಪರಿಸರವನ್ನು ವರ್ಣಿಸಿದ್ದು ಹೀಗೆ.

"ಕೊಡಗು ಸ್ವದೇಶವು । ಎಷ್ಟೋ ಚೆಂದವಾದುದು।
ಬೆಟ್ಟ ಬೆಟ್ಟ ತುದಿಯೇ । ಮಲೆನಾಡ ತೀರವೇ ।
ನೀಲ ಬಣ್ಣ ಕಡಲು । ಮತ್ತೂ ಮತ್ತೂ ಕಾಣ್ಬುದು ।
ಬೆಳ್ಳಿ ಧಾರೆ ಜಲವು । ಬೆಟ್ಟದಿಂದಿಲಿದು ।
ಕಾಡುತೋಟ ಗದ್ದೆ । ಊರು ಗ್ರಾಮ ದಾಟುವ ।
ಮೀನು ತುಂಬ ನದಿಯು । ಕಡಲಲ್ಲಿ ಸೇರೋದು ।
ನದಿ ಮರಳೋಲಿಗೆ । ನೆಲ್ಲು ಗದ್ದೆಯಲ್ಲದೇ ಗಂಧ ಕಾಫಿಯಾಲಕೆ ।
ಬಾಳೆ ಕಿತ್ತೆ ಬಗಿನಿ । ಬೆಟ್ಟದಲ್ಲಿ ಹುಟ್ಟೋದು ।
ಜೇನು ತುಪ್ಪ ಒಲವು । ಬೆಟ್ಟ ಕಾಡಿನೊಳಗೆ
ಆನೆ ಕಾಟಿ ಕಡವೆ । ನರಿ ಪುಲಿಕರಡಿ
ಕಾಡು ಪಂದಿ ಕುರೆಂಗಿ । ಮನೆಕೊಟ್ಟೆ ಹತ್ತಿರ । ಕರುದನ ಪುಷ್ಕಲ"[೧೪]

ಇಂತಹ ವಿಶೇಷ ಭೌಗೋಳಿಕ ಪರಿಸರದ ನಡುವೆ ಬದುಕನ್ನು ಸಾಗಿಸುತ್ತಿರುವ ಕೊಡವರ ಬದುಕು ಈ ಮಾತನ್ನು ಪುಷ್ಟೀಕರಿಸುತ್ತದೆ.

ಕೊಡಗಿನ ಪ್ರಮುಖ ಪ್ರವಾಸಿ ತಾಣಗಳು

ಕೊಡಗಿನ ಪ್ರಾಕೃತಿಕ ಸೌಂದರ್ಯದ ಭಾಗವಾಗಿ ಇಲ್ಲಿನ ಕೆಲವು ತಾಣಗಳನ್ನು ನೋಡಬಹುದು. ಇವುಗಳು ಕೊಡಗಿನ ಸಾಂಸ್ಕೃತಿಕ ಸೊಬಗನ್ನು ಶ್ರೀಮಂತ ಗೊಳಿಸುವಲ್ಲಿ ಇಲ್ಲಿನ ಜಲಪಾತಗಳು ಬೆಟ್ಟಗುಡ್ಡಗಳು, ಇತಿಹಾಸ ಪ್ರಸಿದ್ಧ ಸ್ಥಳಗಳು ತಮ್ಮದೇ ಆದ ಕೊಡುಗೆಯನ್ನು ನೀಡಿವೆ.

ರಾಜಾಸೀಟ್: ಪ್ರವಾಸಿ ತಾಣವಾಗಿರುವ ಮಂಜಿನ ನಗರಿಯ ಪ್ರಮುಖ ಆಕರ್ಷಣೆ 'ರಾಜಾಸೀಟ್'. ನಗರದ ಹೃದಯ ಭಾಗದಲ್ಲಿ ಎತ್ತರದ ಪ್ರದೇಶದಲ್ಲಿರುವ ಈ ಸುಂದರ ತಾಣ ಉದ್ಯಾನವನದಿಂದ ಕೂಡಿದ್ದು, ಆಕರ್ಷಣೀಯವಾಗಿದೆ. ಇಲ್ಲೊಂದು ಮಂಟಪವಿದ್ದು, ಹಿಂದೆ ಕೊಡಗಿನ ರಾಜ – ರಾಣಿಯರು ಈ ಮಂಟಪದಲ್ಲಿ ಕುಳಿತು ಪ್ರಕೃತಿಯ ಸೌಂದರ್ಯವನ್ನು ಆಹ್ಲಾದಿಸುತ್ತಾ ಕಾಲ ಕಳೆಯುವ ತಾಣವಾದ್ದರಿಂದ ಇದಕ್ಕೆ 'ರಾಜಾಸೀಟ್' ಎಂಬ ಹೆಸರು ಬಂದಿದೆ. ಪ್ರಸ್ತುತ ಸಂಗೀತ ನೃತ್ಯ ಕಾರಂಜಿ ಇಲ್ಲಿನ ಇನ್ನೊಂದು ಆಕರ್ಷಣೆ. ಜೊತೆಗೆ ಪಕ್ಕದ ಉದ್ಯಾನದಲ್ಲಿನ ಪುಟಾಣಿ ರೈಲು ವಿಹಾರ ಮತ್ತಷ್ಟು ಸಂತೋಷ ನೀಡುತ್ತದೆ.

ಅಬ್ಬಿಫಾಲ್ಸ್: ಕೊಡಗಿನ ಜಲಪಾತಗಳಲ್ಲಿಯೇ ಅಗ್ರವಾಗಿರುವುದು ಅಬ್ಬಿಫಾಲ್ಸ್. ರಾಜ್ಯ ಪ್ರಮುಖ ಜಲಪಾತಗಳಲ್ಲಿ ಒಂದಾಗಿರುವ ಅಬ್ಬಿ ಹಲವು ದಶಕಗಳಿಂದ ನೋಡುಗರ ಮನಸೆಳೆಯುತ್ತಲೇ ಬಂದಿದೆ. ಮಡಿಕೇರಿಯಿಂದ ೬ ಕಿ.ಮೀ. ದೂರದಲ್ಲಿ ಸುಮಾರು ೮೦ ಅಡಿ ಎತ್ತರದಿಂದ ಧುಮ್ಮಿಕ್ಕುವ ಅಬ್ಬಿ ಕರಿಬಂಡೆಗಳ ಮೇಲೆ ಭೋರ್ಗರೆದು ಬೆಳ್ನೊರೆಯಾಗಿ ಧುಮ್ಮಿಕ್ಕುತ್ತದೆ. ಅಬ್ಬಿ ಬೆಡಗನ್ನು ಜಲಧಾರೆಯನ್ನು ತೂಗುಸೇತುವೆ ಮೇಲೆ ನಿಂತು ನೋಡುವಾಗ ಅಬ್ಬಿಯ ಭೋರ್ಗರೆತದಿಂದಾಗಿ ಚಿಮ್ಮು ನೀರಹನಿಗಳ ಸಿಂಚನ ಮೈಮನವನ್ನು ಮತ್ತಷ್ಟು ತಣಿಸುತ್ತದೆ.

ಕೋಟೆ: ಮಡಿಕೇರಿಯ ಹೃದಯಭಾಗದಲ್ಲಿದ್ದು, ರಾಜರ ಅರಮನೆಯನ್ನು ಹೊಂದಿರುವ ಕೋಟೆ ಮತ್ತೊಂದು ಪ್ರಮುಖ ಆಕರ್ಷಣೆ. ಪ್ರಸ್ತುತ ಜಿಲ್ಲಾಡಳಿತದ ಕಛೇರಿಗಳಿರುವ ಈ ಅರಮನೆ ಪಕ್ಕದಲ್ಲೇ ಎರಡು ಕಲ್ಲಿನ ಆನೆಗಳಿದ್ದು, ಆನೆಗಳು ನೋಡುಗರ ಗಮನಸೆಳೆಯುತ್ತದೆ.

ವಸ್ತು ಸಂಗ್ರಹಾಲಯ : ಮಡಿಕೇರಿ ಕೋಟೆ ಆವರಣದಲ್ಲಿ ಪ್ರಾಚೀನ ವಸ್ತು ಸಂಗ್ರಹಾಲಯವಿದೆ. ಕ್ರಿ.ಶ. ೧೮೫೫ ಬ್ರಿಟಿಷ್ ಆಡಳಿತವಿದ್ದ ಸಂದರ್ಭ ರೆ|| ಎ. ಫೆನೆಟ್ ಎಂಬ ಪಾದ್ರಿಯು ಸರ್ಕಾರದ ನೆರವಿನಿಂದ ಆ್ಯಂಗ್ಲಿಕನ್ ಚರ್ಚ್ ಒಂದನ್ನು ನಿರ್ಮಿಸಿದನು. ಆಂಗ್ಲರ ನಿರ್ಮಾಣದ ಈ ಕಟ್ಟಡ ಕೋನಾಕಾರದ ಗಾಥಿಕ್ ಶೈಲಿಯ ಗೋಪುರಗಳನ್ನು ಹೊಂದಿದ್ದು, ಆಕರ್ಷಕವಾಗಿದೆ. ಪ್ರಸ್ತುತ ಕಟ್ಟಡವನ್ನು ಪ್ರಾಚೀನ ವಸ್ತು ಸಂಗ್ರಹಾಲಯವನ್ನಾಗಿ ನಿರ್ವಹಣೆ ಮಾಡಲಾಗುತ್ತಿದೆ. ಅನೇಕ ವೀರಗಲ್ಲುಗಳು, ಪ್ರಾಚೀನ ವಸ್ತುಗಳು, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅವರಿಗೆ ಸೇರಿದ ಹಲವಾರು ವಸ್ತುಗಳು, ದಾಖಲೆ ಪತ್ರಗಳು, ರಾಜರ ಉಡುಪುಗಳು, ಇನ್ನಿತರ ಪುರಾತನ ವಸ್ತುಗಳಿವೆ.

ರಾಜರ ಗದ್ದುಗೆ: ಮಡಿಕೇರಿ ಪಟ್ಟಣದ ಒಂದು ಕೊನೆಯಲ್ಲಿ ಅಂದರೆ ಮಹದೇವಪೇಟೆ ಬಳಿಯ ಎತ್ತರದ ಗುಡ್ಡದಲ್ಲಿ ರಾಜರ ಗದ್ದುಗೆಗಳಿವೆ. ವೀರರಾಜೇಂದ್ರ ಹಾಗೂ ಆತನ ಪತ್ನಿ ಮತ್ತು ಲಿಂಗರಾಜೇಂದ್ರ ಗದ್ದುಗೆಗಳು ಇಲ್ಲಿವೆ. ಇದನ್ನು ಕ್ರಿ.ಶ. ೧೮೨೦ ರಲ್ಲಿ ಲಿಂಗರಾಜೇಂದ್ರರ ಪುತ್ರ ಚಿಕ್ಕ ವೀರರಾಜ ಕಟ್ಟಿಸಿದರು. ಈ ಗದ್ದುಗೆಗಳು ಕೂಡಾ ಇಂಡೋ ಸಾರ್ಸನಿಕ್ ಶೈಲಿಯಲ್ಲಿದೆ.

ಮಾಂದಲಪಟ್ಟಿ : ಮಡಿಕೇರಿಯಿಂದ ೧೮ ಕಿ.ಮೀ. ದೂರದ ಈ ಗಿರಿಶಿಖರ ಇತ್ತೀಚಿನ ವರ್ಷಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಇಲ್ಲಿ ಕಣ್ಣು ಹಾಯಿಸಿದಲ್ಲೆಲ್ಲಾ ಹಸಿರಿನ ಹಾಸು ಕಂಗೊಳಿಸುತ್ತದೆ. ಬೀಸಿ ಬರುವ ತಂಗಾಳಿ, ಮಂಜು ಮುಸುಕಿದ ವಾತಾವರಣ ಮಾಂದಲಪಟ್ಟಿಯ ವಿಶೇಷ.

ಮಕ್ಕಳ ಗುಡಿ ಬೆಟ್ಟ : ನಿಸರ್ಗ ರಮಣೀಯ ಸೊಬಗನ್ನು ಒಳಗೊಂಡಿರುವ, ಕಣ್ಣು ಹಾಯಿಸಿದಷ್ಟೂ ಪ್ರಕೃತಿ ಸೌಂದರ್ಯ ಕಾಣಸಿಗುವ ಮಕ್ಕಳ ಗುಡಿ ಬೆಟ್ಟ ಜಿಲ್ಲೆಯ ಪ್ರವಾಸಿ ತಾಣಗಳಲ್ಲೊಂದು. ಮಡಿಕೇರಿ – ಸೋಮವಾರಪೇಟೆ ಮಾರ್ಗದ ನಡುವೆ ಇರುವ ಕುಂಬೂರು ಜಂಕ್ಷನ್‌ನಿಂದ ೫ ಕಿ.ಮೀ. ಒಳರಸ್ತೆಯಲ್ಲಿ ತೆರಳಿದರೆ

ಬಿಳಿಗೇರಿ ಗ್ರಾಮ ಎದುರಾಗುತ್ತದೆ. ಮಕ್ಕಳ ಗುಡಿ ಬೆಟ್ಟದ ತುದಿಗೆ ತಲುಪಿದರೆ ಪ್ರಕೃತಿ ಸೌಂದರ್ಯ ವಿಸ್ಮಯಲೋಕ ಕಾಣಸಿಗುತ್ತದೆ. ಸೋಮವಾರಪೇಟೆ ನಗರ ಸೇರಿದಂತೆ ಬಜೆಗುಂಡಿ ಗ್ರಾಮ, ಕೋಟೆ ಬೆಟ್ಟ, ಚೌಡ್ಲು ಬೆಟ್ಟ, ಹಾರಂಗಿ ಜಲಾಶಯದ ಹಿನ್ನೀರು ಪ್ರದೇಶ ಸೇರಿದಂತೆ ಬೆಟ್ಟಗುಡ್ಡಗಳ ಶ್ರೇಣಿ ಕಾಣಸಿಗುತ್ತದೆ.

ನಾಲ್ಕುನಾಡು ಅರಮನೆ: ಕೊಡಗು ಜಿಲ್ಲೆಯ ಮಹತ್ವದ ಕೆಲವೇ ಕೆಲವು ಸ್ಮಾರಕಗಳು ನಾಲ್ಕುನಾಡು ಅರಮನೆಯೂ ಒಂದು. ಎರಡು ಶತಮಾನಗಳಷ್ಟು ಪ್ರಾಚೀನ ಇತಿಹಾಸವನ್ನು ಹೊಂದಿರುವ ಈ ಅರಮನೆ ತನ್ನ ಅಪೂರ್ವ ವಾಸ್ತುವಿನ್ಯಾಸ, ಚಿತ್ರಕಲಾ ವೈಭವ ಮನಸೂರೆಗಳ್ಳುತ್ತದೆ. ಈ ಅರಮನೆ ಮಡಿಕೇರಿಯಿಂದ ಸುಮಾರು ೪೦ ಕಿ.ಮೀ. ದೂರದಲ್ಲಿದೆ. ಬಹುತೇಕ ಮರದಿಂದಲೇ ನಿರ್ಮಿತವಾಗಿರುವ ಅರಮನೆಗೆ ಐತಿಹಾಸಿಕ ಮಹತ್ವವಿದೆ.

ತಡಿಯಂಡಮೋಳ್ ಬೆಟ್ಟ: ಕೊಡಗಿನ ಅತ್ಯಂತ ಎತ್ತರವಾದ ತಡಿಯಂಡಮೋಳ್ ಶಿಖರ ನಿಸರ್ಗ ಸೌಂದರ್ಯಕ್ಕೆ, ಚಾರಣದ ಸವಾಲುಗಳಿಗೆ ಪ್ರಸಿದ್ಧವಾದುದು. ಈ ಶಿಖರವು ಮಡಿಕೇರಿಯಿಂದ ೪೮ ಕಿ.ಮೀ. ದೂರದಲ್ಲಿ. ಶಿಖರದ ಎತ್ತರ ೧೭೧೭ ಮೀ.

ನಾಗರಹೊಳೆ ರಾಜೀವ ಗಾಂಧಿ ರಾಷ್ಟ್ರೀಯ ಉದ್ಯಾನವನ: ಮಡಿಕೇರಿಯಿಂದ ೯೫ಕಿ.ಮೀ. ದೂರದಲ್ಲಿರುವ ವಿಶ್ವವಿಖ್ಯಾತ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ನೀಲಗಿರಿ ಜೈವಿಕ ವಲಯದ ವ್ಯಾಪ್ತಿಗೆ ಒಳಪಡುತ್ತದೆ. ನಾಗರಹೊಳೆ ಇದೀಗ ವಿಶ್ವಮಾನ್ಯತೆ ಪಡೆದುಕೊಂಡಿದೆ. ಕಾಡಾನೆ, ಕಡವೆ, ಕಾಡುಕೋಣ, ಜಿಂಕೆ, ಕಾಡುಕುರಿ ಮುಂತಾದ ಸಸ್ಯಾಹಾರಿ ಪ್ರಾಣಿಗಳಲ್ಲದೆ, ಹುಲಿ, ಚಿರತೆ, ಕಾಡುನಾಯಿಯಂತಹ ಮಾಂಸಾಹಾರಿ ಪ್ರಾಣಿಗಳೂ ಅಧಿಕವಾಗಿ ಕಂಡುಬರುತ್ತವೆ. ಸಿಂಗಳೀಕ, ಕಾಮನ್‌ಲಂಗೂರ್, ಕಾಡುಹಂದಿ, ಕರಡಿ, ನವಿಲು, ಕಾಡುಕೋಳಿ, ಹೆಬ್ಬಾವು ಇತ್ಯಾದಿ ಪ್ರಾಣಿಗಳೂ ನಾಗರಹೊಳೆಯಲ್ಲಿ ಅಧಿಕವಾಗಿ ಕಂಡುಬರುತ್ತದೆ.

ಇರ್ಪು ಜಲಧಾರೆ: ಇರ್ಪು ಜಲಧಾರೆ ಕೊಡಗಿನ ಮತ್ತೊಂದು ಸೊಬಗಿನ ಜಲಪಾತ. ವೀರಾಜಪೇಟೆ ತಾಲೂಕಿನಲ್ಲಿರುವ ಇದು ರಾಜ್ಯದ ಪ್ರಮುಖ ಜಲಧಾರೆಯಲ್ಲೊಂದು. ನಾಗರಹೊಳೆ ರಾಷ್ಟ್ರೀಯ ಉದ್ಯಾನವನಕ್ಕೆ ಹೊಂದಿ ಕೊಂಡಂತೆ ಇರುವ ಕುಟ್ಟ ಗ್ರಾಮದಿಂದ ೫ ಕಿ.ಮೀ. ಅಂತರದಲ್ಲಿದೆ. ಇರ್ಪು ಜಲಪಾತ ಬ್ರಹ್ಮಗಿರಿ ಬೆಟ್ಟದಿಂದ ೧೭೦ ಅಡಿಗಳ ಎತ್ತರದಿಂದ ಭೋರ್ಗರೆದು ನಾಲ್ಕು ಹಂತಗಳಲ್ಲಿ ಧುಮ್ಮಿಕ್ಕುತ್ತದೆ. ಇರ್ಪುವಿನಲ್ಲಿರುವ ಐತಿಹಾಸಿಕ ಶ್ರೀ ರಾಮಲಿಂಗೇಶ್ವರ ದೇವಾಲಯದಿಂದ ೧ ಕಿ.ಮೀ. ದೂರದಲ್ಲಿ ಪ್ರಕೃತಿ ಸೌಂದರ್ಯವನ್ನು ನೋಡಲು ಸಾಗಿದಾಗ ಕರಿಕಲ್ಲುಗಳ ಮಧ್ಯೆ ಧುಮ್ಮಿಕ್ಕುವ ಇರ್ಪುವನ್ನು ಕಾಣಬಹುದು.

ಕಾವೇರಿ ನಿಸರ್ಗ ಧಾಮ: ಮಡಿಕೇರಿ ಕುಶಾಲನಗರ ಮಧ್ಯದಲ್ಲಿ ಎಡಭಾಗಕ್ಕೆ ಕುಶಾಲನಗರ ೨.೫೦ ಕಿ.ಮೀ. ದೂರ ಇರುವಂತೆ ಈ ನಿಸರ್ಗಧಾಮ ಸಿಗುತ್ತದೆ.

ಕಾವೇರಿ ನದಿಗೆ ಅಡ್ಡಲಾಗಿ ತೂಗುಸೇತುವೆಯಿಂದ ಹಾದು ಒಳಹೊಕ್ಕರೆ ಸುಮಾರು ೬.೫ ಎಕರೆ ವ್ಯಾಪ್ತಿಯಲ್ಲಿ ಹಚ್ಚಹಸಿರಿನ ವನಸಿರಿ ಮಧ್ಯೆ ಜಿಂಕೆ ವನ, ಆನೆ ಸಫಾರಿ ಮತ್ತು ಅಲ್ಲಲ್ಲಿ ಪ್ರವಾಸಿಗರು ಕೂತು ದಣಿವಾರಿಸಿಕೊಳ್ಳಲು ಇರುವ ಪ್ಯಾರಬೋಲೊಗಳ ರಮಣೀಯ ತಾಣ ಈ ನಿಸರ್ಗಧಾಮ. ಕಾವೇರಿ ನದಿ ಕವಲಾಗಿ ಒಡೆದು ನಿರ್ಮಾಣವಾಗಿರುವ ಈ ದ್ವೀಪದಲ್ಲಿ ಬೋಟಿಂಗ್ ವ್ಯವಸ್ಥೆ ಇದೆ. ಇದರ ಪಕ್ಕದಲ್ಲಿ ಕಾಡಾನೆ ಪಳಗಿಸುವ ದುಬಾರೆ ಅರಣ್ಯ ಪ್ರದೇಶವಿದೆ.

ಹಾರಂಗಿ ಜಲಾಶಯ: ಹಾರಂಗಿ ನದಿಗೆ ಅಡ್ಡಲಾಗಿ ಹುಲಗುಂದ ಗ್ರಾಮದ ಬಳಿ ೧೯೮೨ ರಲ್ಲಿ ನಿರ್ಮಾಣವಾಗಿರುವ ೮.೫೦ ಟಿ.ಎಂ.ಸಿ. ಸಾಮರ್ಥ್ಯವುಳ್ಳ ಈ ಜಲಾಶಯ ಮೈಸೂರು ಹಾಸನ ಮತ್ತು ಕೊಡಗು ಜಿಲ್ಲೆಯ ೧ ಲಕ್ಷ ಎಕರೆಗಳಿಗೂ ಹೆಚ್ಚು ನೀರಾವರಿಗೆ ಬಳಕೆಯಾಗುತ್ತಿದೆ. ಈ ಜಲಾಶಯವನ್ನು ಅವಲಂಬಿಸಿ ಖಾಸಗಿ ವಿದ್ಯುತ್ ಸ್ಥಾವರ ಘಟಕ (ಇ.ಡಿ.ಸಿ.ಎಲ್.) ಸುಮಾರು ೧೫ ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿ ಕುಶಾಲನಗರದ ವಿದ್ಯುತ್ ಕೋಶಕ್ಕೆ ಒದಗಿಸುತ್ತಿದೆ.

ಯಾವುದೇ ರಾಜ್ಯದ ಯಾವುದೇ ಪ್ರದೇಶದ ಜನರ ಜೀವನ ಕ್ರಮ ಅದರ ಭೌಗೋಳಿಕ ಹಿನ್ನೆಲೆಯನ್ನು ಒಳಗೊಂಡಿರುತ್ತದೆ. ಕರ್ನಾಟಕ ರಾಜ್ಯದ ಭೌಗೋಳಿಕ ಪ್ರದೇಶವನ್ನು ನೋಡುವುದಾದರೆ, ನಿತ್ಯಹರಿದ್ವರ್ಣ ಕಾಡುಗಳು, ಬೆಟ್ಟಗುಡ್ಡಗಳು, ಬಯಲು ಪ್ರದೇಶ ಹೀಗೆ ವೈವಿಧ್ಯಮಯವಾದ ಪ್ರಾಕೃತಿಕ ವ್ಯವಸ್ಥೆಯನ್ನು ಕಾಣುತ್ತೇವೆ. ಇಂತಹ ವಿಭಾಗಗಳಲ್ಲಿ ಕೊಡಗು ಜಿಲ್ಲೆಯು ಒಂದು ಕರ್ನಾಟಕದ ಕಾಶ್ಮೀರವೆಂದೇ ಪ್ರಖ್ಯಾತಿಯನ್ನು ಪಡೆದಿರುವ ಇದರ ಭೌಗೋಳಿಕ ಹಿನ್ನೆಲೆಯು ಅಷ್ಟೇ ವಿಶಿಷ್ಟವಾದದ್ದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಕೃತಿಗೆ ಪೂರಕವಾಗಿ ಮೇಲ್ಕಂಡಂತೆ ಭೌಗೋಳಿಕ ವೈವಿಧ್ಯತೆಯನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ನಂ. ತಪಸ್ವಿಕುಮಾರ್, **ಸಂಸ್ಕೃತಿ ವಿಕಾಸ,** ಭಾರತಿ ಪ್ರಕಾಶನ, ೧೯೯೫, ಪು. ೪೨.

೨. ಡಿ.ಬಿ. ನಾಯಕ್, **ಜ್ಞಾನಗಂಗಾ,** ಗುಲ್ಬರ್ಗ ವಿಶ್ವವಿದ್ಯಾನಿಲಯ, ೨೦೦೫, ಪು. ೫

೩. ಅದೇ.

೪. ಅದೇ.

೫. ಅದೇ.

೬. ಅದೇ.

೭. ಅದೇ.

೮. ಕೋರನ ಸರಸ್ವತಿ, **ಕೊಡಗು ಗೌಡ ಸಮುದಾಯ,** ಮುದ್ದುಶ್ರೀ ಗ್ರಂಥಮಾಲೆ, ೨೦೧೦, ಪು. ೩.

೯. ಎಂ.ಜಿ. ನಾಗರಾಜ್, **ಕೆಂಬಟ್ಟಿ ಹೊಲೆಯರ ಸಂಸ್ಕೃತಿ,** ಕರ್ನಾಟಕ ಸಾಹಿತ್ಯ ಅಕಾಡಮಿ, ೧೯೯೩, ಪು.೨೭

೧೦. ನಡಿಕೇರಿಯಂಡ ಚಿಣ್ಣಪ್ಪ, **ಪಟ್ಟೋಲೆ ಪಳಮೆ,** ಕರ್ನಾಟಕ ಕೊಡವ ಸಾಹಿತ್ಯ ಅಕಾಡಮಿ ೧೯೭೫, ಪು.೧

೧೧. ಎಂ.ಜಿ. ನಾಗರಾಜ್, **ಕೆಂಬಟ್ಟಿ ಹೊಲೆಯರ ಸಂಸ್ಕೃತಿ,** ಕರ್ನಾಟಕ ಸಾಹಿತ್ಯ ಅಕಾಡಮಿ, ೧೯೯೩, ಪುಟ ೨೭.

೧೨. ಅದೇ, ಪು.೨೮.

೧೩. **ಶಕ್ತಿ ದಿನಪತ್ರಿಕೆ,** ದಿನಾಂಕ ೧೨/೦೭/೨೦೧೩, ಕೊಡಗು ಜಿಲ್ಲೆ.

೧೪. ಶ್ರೀನಿವಾಸ್ ಹಾವನೂರ, **ಹೊಸಗನ್ನಡ ಅರುಣೋದಯ,** ಮೈಸೂರು ವಿಶ್ವವಿದ್ಯಾನಿಲಯ, ೧೯೭೪, ಪು.೩೮೫.

೨ | ಅಧ್ಯಾಯ

ಕೊಡಗಿನ ಇತಿಹಾಸ, ಸಾಹಿತ್ಯ ಮತ್ತು ಸಂಸ್ಕೃತಿ

ಇತಿಹಾಸವನ್ನು ಅರಿಯಲು ಯಾವುದೇ ವ್ಯಕ್ತಿ ಅಥವಾ ಪ್ರದೇಶದ ಸ್ಪಷ್ಟ ಉಲ್ಲೇಖಗಳು ದೊರೆಯುವವರೆಗೆ ಆ ವ್ಯಕ್ತಿ ಅಥವಾ ಆ ಭಾಗದ ಬಗ್ಗೆ ಇರುವ ಪುರಾಣಗಳು ಒಂದು ಮಾಧ್ಯಮವಷ್ಟೆ. ಜೊತೆಗೆ ಲಭ್ಯ ಅವಶೇಷಗಳು ಆಕರಗಳಾಗಬಲ್ಲವು. ಈ ದೃಷ್ಟಿಯಿಂದ ಕೊಡಗಿನ ಇತಿಹಾಸದ ಪ್ರಾಚೀನತೆಯನ್ನು ದಾಖಲಿಸುವ ಮೊದಲು ಆ ಭಾಗದಲ್ಲಿ ಪ್ರಚಲಿತವಿರುವ ಪುರಾಣ, ದಂತಕಥೆಗಳನ್ನು ವಿಶ್ಲೇಷಿಸಲೇಬೇಕಾಗುತ್ತದೆ. ಕೊಡಗಿಗೆ ಸಂಬಂಧಿಸಿದಂತೆ, ಇತಿಹಾಸ ಪೂರ್ವಕಾಲದ ಘಟನೆಗಳು ಹಾಗೂ ಸಂಬಂಧಿಸಿದ ಪುರಾಣ ಕಾಲದ ಮಾಹಿತಿಯನ್ನು ಗಮನಿಸಿದಾಗ 'ಕಾವೇರಿ ಮಹಾತ್ಮ್ಯೆ'ಯಲ್ಲಿ ಕೊಡಗಿಗೆ ಸಂಬಂಧಿಸಿದ ಕೆಲವು ಪುರಾಣಗಳು, ಐತಿಹ್ಯಗಳು ದೊರೆಯುತ್ತವೆ. ಹಾಗೂ ಪಶ್ಚಿಮ ಘಟ್ಟಗಳಿಗೆ ಕ್ರಿ.ಪೂ. ೧೦೭೫ರ ಅಗಸ್ತ್ಯ ಕರೆತಂದ ವೇಳಿರರು ಹಾಗೂ ಕುರುಬರ ಮೂಲಪುರುಷರೆನ್ನುವ 'ಅರುವಲ್ಲರ್'ಗಳನ್ನು ಕರೆತಂದ ಬಗೆ ಹಾಗೂ ಈ ವೇಳಿರರ ಪೈಕಿಯ 'ನಣ್ಣನ್' ಕೊಡಗನ್ನು ಆಳಿದ ಸಂಗತಿಯು ಶಂಗ ಸಾಹಿತ್ಯದಿಂದ ತಿಳಿಯುತ್ತದೆ. (ಕೆ. ಮಮ್ಮನ್, ಕೇರಳ ಕಲ್ಚರ್ ೧೯೪೨, ಪು. ೮೦) ಕಾವೇರಿ ನದಿಯ ಉಗಮ ಕೊಡಗಿನ ಮೂಲ, ಕೊಡಗಿನ ಮೂಲನಿವಾಸಿಗಳಾದ ಕೊಡವರು ಹಾಗೂ ದಲಿತ ಕೆಂಬಟ್ಟಿಗಳ ಕುರಿತಾಗಿ ಬಗ್ಗೆ, ಇದರಲ್ಲಿ ವಿಪುಲ ಮಾಹಿತಿ ದೊರೆಯುತ್ತದೆ. ಕೊಡಗಿಗೆ 'ಬ್ರಹ್ಮಕ್ಷೇತ್ರ', 'ಮತ್ಸ್ಯದೇಶ' ಮತ್ತು 'ಕ್ರೋಢದೇಶ' ಎಂಬ ಹೆಸರುಗಳು ಇದ್ದದ್ದು ಕೂಡ ತಿಳಿದುಬರುತ್ತದೆ. ಕ್ರಿ.ಪೂ. ೩ ರಿಂದ ಕ್ರಿ.ಶ. ೩ನೇ ಶತಮಾನದವರೆಗೆ ಶಂಗ ಸಾಹಿತ್ಯದಲ್ಲಿ ಕುಡುನಾಡುವಿನ (ಕೊಡಗು) ಅಸ್ತಿತ್ವವನ್ನು ಸೂಚಿಸಿದೆ. ಭೂ ವಿಜ್ಞಾನದ ಆಧಾರದಲ್ಲಿ ಅದರ ಅಸ್ತಿತ್ವ ೭.೫ ಮಿಲಿಯನ್ ವರ್ಷದ ಅಸ್ತಿತ್ವವೆಂದು, ಪುರಾಣಗಳು ಹುಟ್ಟಿಕೊಂಡ ಮೇಲೆ ಬ್ರಹ್ಮಕ್ಷೇತ್ರ, ಮತ್ಸ್ಯದೇಶ, ಕ್ರೋಢದೇಶ ಎಂದು ಹೆಸರು ಬಂದಿರಬಹುದಾಗಿದೆ.

ಕಾವೇರಿ ಪುರಾಣದಲ್ಲಿ ಉಲ್ಲೇಖವಾಗಿರುವಂತೆ ಚಂದ್ರವರ್ಮನು ಕೊಡವರ ಮೂಲ ಪುರುಷ. ರಾಜಕುಮಾರನಾದ ಈತನು ಒಮ್ಮೆ ತೀರ್ಥಯಾತ್ರೆಯ ನೆಪದಿಂದ ಕೊಡಗಿನ ಪರಿಸರದಲ್ಲಿರುವ ಬ್ರಹ್ಮಗಿರಿ ಬೆಟ್ಟಕ್ಕೆ ಬಂದು ಪಾರ್ವತಿಯನ್ನು ಕುರಿತು ತಪಸ್ಸು ಮಾಡಿದನು. ಇವನ ಕಠಿಣ ತಪಸ್ಸಿಗೆ ಮೆಚ್ಚಿದ ಪಾರ್ವತಿ ಒಂದು ಸುಂದರ ಸ್ತ್ರೀಯನ್ನು, ಶತ್ರು ನಿಗ್ರಹ ಖಡ್ಗವನ್ನು ಅನುಗ್ರಹಿಸಿದಳು. ಚಂದ್ರವರ್ಮನು ಸತೀ ಸಮೇತನಾಗಿ ವೈಭವದಿಂದ ರಾಜ್ಯವಾಳಿದನು. ಇವನಿಗೆ

ದೇವಕಾಂತನನ್ನು ಒಳಗೊಂಡಂತೆ ಹನ್ನೊಂದು ವೀರ ಕ್ಷತ್ರಿಯ ಕುಮಾರರನು ಜನಿಸಿದರು. ಇವರಿಗೆ ವಿದರ್ಭ ದೇಶದ ನೂರು ಮಂದಿ ರಾಜಕುಮಾರಿಯರನ್ನು ತಂದು ವಿವಾಹ ಮಾಡಲಾಯಿತು. ಅನಂತರ ಹಿರಿಯನಾದ ದೇವಕಾಂತನಿಗೆ ಪಟ್ಟಕಟ್ಟಿ ತಾನು ತಪಸ್ಸಿಗೆ ಹೊರಟನು. ಇವರಿಗೆ ಹುಟ್ಟಿದ ನೂರು ಜನ ಮಕ್ಕಳಿಗೆ ವಾಸಿಸಲು ಜಾಗವಿಲ್ಲವಾಗಿ ಮತ್ತು ಕೃಷಿ ಮಾಡಲು ಭೂಮಿ ಸಾಲದಾದುದರಿಂದ ತಮ್ಮ ಉಗುರುಗಳನ್ನೇ ಆಯುಧಗಳನ್ನಾಗಿ ಮಾಡಿ ಬೆಟ್ಟಗುಡ್ಡಗಳ ಕೃಷಿ ಭೂಮಿಯನ್ನಾಗಿ ಪರಿವರ್ತಿಸಿದರು. ಈ ಪ್ರದೇಶ ಮುಂದೆ 'ಕ್ರೋಡ' ದೇಶವೆಂದು ಹೆಸರು ಪಡೆದು ಕ್ರಮೇಣ 'ಕೊಡಗು' ಎಂದೆನಿಸಿತು.

ಬೃಹತ್ ಶಿಲಾಯುಗ ಕಾಲ

ಕೊಡಗಿನಲ್ಲಿ ಬೃಹತ್ ಶಿಲಾಯುಗದ ಕೆಲವು ಜನವಸತಿಗಳಿದ್ದುದು ಕಂಡುಬರುತ್ತದೆ. ಕಲ್ಲು ಚಪ್ಪಡಿಗಳಿಂದ ನಿರ್ಮಿಸಿದ 'ಡಾಲ್ಮೆನ್'ಗಳೆಂದು ಕರೆಯಲ್ಪಡುವ ಪಾಂಡವಪಾರೆ, ಪಾಂಡವರ ಮನೆಗಳೆಂದು ಗುರುತಿಸಲ್ಪಡುವ ಸ್ಮಾರಕಗಳು ಅಲ್ಲಲ್ಲಿ ದೊರೆತಿವೆ. ಡಾ.ಮೊಗ್ಲಿಂಗ್ ಎಂಬುವರು ಇವುಗಳನ್ನು ಮೊದಲಿಗೆ (೧೮೫೬ ರಲ್ಲಿ) ವಿರಾಜಪೇಟೆ ತಾಲ್ಲೂಕಿನಲ್ಲಿ ಪತ್ತೆ ಹಚ್ಚಿದರು. ಕಲ್ಲು ಗೋರಿಗಳೆಂದು ಇವುಗಳನ್ನು ಗುರುತಿಸಲಾಗಿದೆ. ಅನಂತರ 'ಕರ್ನಲ್ ಮೆಕೆಂಜಿ' ಸಹ ಕೆಲವು ಗೋರಿಗಳನ್ನು ಪತ್ತೆ ಹಚ್ಚಿದನು. ೧೮೬೮ ರಲ್ಲಿ ಕ್ಯಾಪ್ಟನ್ ಕೋಲ್ ಇದೇ ಭಾಗದಲ್ಲಿ ಭೂಮಿಯಲ್ಲಿ ಹೂತು ಹೋಗಿದ್ದ ಕೆಲವು 'ಕಲ್ಲುಗೋರಿ'ಗಳನ್ನು ಬೆಳಕಿಗೆ ತಂದನು.

ಕೆ.ಕೆ.ಸುಬ್ಬಯ್ಯ ಅವರು "ಈ ಯುಗದ ಜನ ಕೃಷಿಕರಾಗಿದ್ದು ನೀರಾವರಿ ಅವರಿಗೆ ತಿಳಿದಿತ್ತು. ಮೋರಿ ಬೆಟ್ಟದ ಕೆಳಗಿನ ಬಯಲಲ್ಲಿ ಅವರು ಕೃಷಿ ಮಾಡುತ್ತಿದ್ದರು. ಅಲ್ಲಿ ಈಗಲೂ ಒಂದು ಜಲಾಶಯವಿದೆ. ಇತಿಹಾಸ ಪ್ರಸಿದ್ಧ ಹೊನ್ನಮ್ಮನ ಕೆರೆಯ ಪ್ರದೇಶದಲ್ಲಿ ಅವರು ರಾಗಿ, ಬತ್ತ ಬೆಳೆದು ಮಣ್ಣಿನ ಮಡಕೆಗಳಲ್ಲಿ ಸಂಗ್ರಹಿಸಿ ಕಲ್ಲುಗೋರಿಗಳಲ್ಲಿ ಇಡುತ್ತಿದ್ದರು. ಸುಮಾರು ಕ್ರಿಪೂ. ೧೦೦೦ ರಿಂದ ಕ್ರಿ.ಶ. ೨-೩ ನೆಯ ಶತಮಾನದವರೆಗಿನ ಕಾಲದಲ್ಲಿ ಮೆರೆದ ಈ ಸಂಸ್ಕೃತಿಯ ಜನ ಕುರುಬ ವರ್ಗದವರಿರಬೇಕು. ದುರ್ಗಮವಾದ ಈ ಪ್ರದೇಶಕ್ಕೆ ಅವರು ವೈನಾಡು (ಕೇರಳದ) ಕಡೆಯಿಂದ ಹೆಗ್ಗಳ ಕಣಿವೆ (ವಿರಾಜಪೇಟೆಯ ಸಮೀಪ)ಯ ಮೂಲಕ ಬಂದಿರಬೇಕೆಂದು ಅಭಿಪ್ರಾಯ ಪಡುತ್ತಾರೆ."[೧]

ಎಂ.ಜಿ. ನಾಗರಾಜ್ ಅವರು ಕೈಕೇರಿ ಬಳಿ ಕೊಳತ್ತೋಡು ಬೈಗೋಡ ಗ್ರಾಮದಲ್ಲಿ ಬೃಹತ್ ಶಿಲಾಯುಗದ ಮೆನ್‌ಹಿರ್ (ನಿಲುವುಗಲು)ಗಳನ್ನು, ಕಿಂಡಿಕೋಣೆ ಗೋರಿಯನ್ನು ಹಾಗೂ ನೂತನ ಶಿಲಾಯುಗದ ಕಿರು ಕೈಕೊಡಲಿಯನ್ನು ಕಂಡುಹಿಡಿದಿದ್ದಾರೆ ಹಾಗೂ ಅಲ್ಲಿನ ತೋಡು, ದೇವರಕಾಡು (ಬುಡಕಟ್ಟು ದೇವರಕಾಡು) ಇದ್ದ ಬಗ್ಗೆ ಸೂಚಿಸಿದ್ದಾರೆ. "ಕೊಡಗಿನ ಕೊಂಗಾಳ್ವರ ರಾಜಧಾನಿ ಮಾಲಂಬಿ ಮತ್ತು ಮಾದ್ರೆಯ ಹೊಸ ವೀರಶಾಸನಗಳು" ಕುರಿತು ಇತಿಹಾಸ

ದರ್ಶನ (ಸಂಪುಟ ೨೬/೨೦೧೦, ೪೬ ಪುಟ ೧೬೭-೧೭೯)ದಲ್ಲಿ ಬರೆದಿರುವ ಪ್ರಬಂಧದಲ್ಲಿ ಚೋಳರು, ಗಂಗರು, ಕದಂಬರು, ಹೊಯ್ಸಳರು, ಕೊಡಗಿನ ಕೆಲವೊಂದು ಪ್ರದೇಶದ ಮೇಲೆ ಪ್ರಭುತ್ವ ಹೊಂದಿದ್ದರು ಎಂಬ ವಿಚಾರವನ್ನು ಕುರಿತು ಸಂಶೋಧನೆ ನಡೆಸಿದ್ದಾರೆ. ಕೊಡಗಿನ 'ಪನ್ಯಜಮೀನುಗಳು' ಎಂಬ ಕೃತಿಯಲ್ಲಿ ('ಪನ್ಯ' ಎಂದರೆ ಹಾಲೇರಿ ಅರಸರ ಖಾಸಗಿ ಕೃಷಿ ಭೂಮಿ) ರಾಜರ ಕಾಲದಲ್ಲಿ ಕೊಡವರು, ಗೌಡರು, ದಲಿತರು ಸೇರಿದಂತೆ ಎಲ್ಲಾ ವರ್ಗದವರು ಹಾಲೇರಿ ವಂಶದ ಖಾಸಗಿ ಕೃಷಿ ಜಮೀನಿನಲ್ಲಿ ದುಡಿಯುತ್ತಿದ್ದ ಕಾರಣ ಜಾತಿಭೇದದ ಕಲ್ಪನೆಗೆ ಅವಕಾಶವಿರಲಿಲ್ಲ ಎಂಬ ಅಂಶವನ್ನು ತಿಳಿಸುತ್ತಾರೆ.

ಇತಿಹಾಸ ಕಾಲ

"ಕೊಡಗಿನ ಇತಿಹಾಸವು ಕ್ರಿ.ಶ.೩-೪ನೇ ಶತಮಾನದಲ್ಲಿ ಅಂದಿನ ಕೊಡಗಿಗೆ ಸೇರಿದ್ದ ವೈನಾಡಿನ ಎಡಕಲ್ಲುಗುಡ್ಡದ ಶಾಸನಗಳ ದೃಷ್ಟಿಯಿಂದ ಕದಂಬ ಅರಸರ ಕಾಲದಿಂದ ಆರಂಭವಾಗುತ್ತದೆ. ಆದರೆ ಪೌರಾಣಿಕವಾಗಿ 'ಚಂದ್ರವರ್ಮ'ನನ್ನು ಕೊಡವರ ಮೂಲ ಪುರುಷನೆಂದು ಹೇಳಲಾಗಿದೆ. ಕದಂಬ ವಂಶದ ಅನೇಕ ಅರಸರಿಗೆ ಇವನ ಹೆಸರು ಇದೆಯೆಂದು ಚರಿತ್ರಕಾರರು ಅಭಿಪ್ರಾಯ ಪಡುತ್ತಾರೆ. ಪಾಂಡ್ಯ ರಾಜವಂಶದವನೆನಿಸಿದ ನೆಡುಂಜಲಿಯನ್ (ಕ್ರಿ.ಶ. ೨ನೇ ಶತಮಾನ) ಅರಸನು ಚೋಳ ಮತ್ತು ಕೇರಳದ ರಾಜರುಗಳನ್ನು ಸೋಲಿಸಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದನು."[೨]

ಕೊಡಗಿನ ಐತಿಹಾಸಿಕ ವಿಚಾರಗಳ ಮೇಲೆ ಮೊದಲಿಗೆ ಬೆಳಕು ಚೆಲ್ಲಿದವರು ನಾಗರಾಜ್.ಎಂ.ಜಿ. ಅವರು ಇವರು ಹುದಿಕೇರಿ ಸಮೀಪದ ಹೈಸೊಡ್ಲೂರಿನಲ್ಲಿ ಕೊಡಗಿಗೆ ಸಂಬಂಧಿಸಿದಂತೆ ಮೊತ್ತ ಮೊದಲ ಕನ್ನಡ ಶಾಸನವನ್ನು ಪತ್ತೆ ಹಚ್ಚಿದರು. ಕರ್ನಾಟಕದ ಮೊತ್ತ ಮೊದಲ ಅಗ್ನಿ ಪ್ರವೇಶದ (ಕ್ರಿ.ಶ. ೯೧೧) 'ವೇಳೆವಾಳಿ' ಶಾಸನವನ್ನು ಸೋಮವಾರ ಪೇಟೆ ಸಮೀಪದ ಬೇಳೂರಿನ ಬಳಿಯ ಬುಡಗೂರಿನಲ್ಲಿ ಪತ್ತೆ ಹಚ್ಚಿದ್ದಾರೆ.

ಕ್ರಿ.ಶ. ಆರನೆಯ ಶತಮಾನದಲ್ಲಿ ಕದಂಬರು ಚಾಲುಕ್ಯರಿಗೆ ಸೋತು ಅವರ ಮಾಂಡಲೀಕರಾದ ಸಂದರ್ಭದಲ್ಲಿ ಕದಂಬ ರಾಜ್ಯವು ಒಡೆದು ಅವರ ವಂಶದವರಿಂದಲೇ ಆಳ್ವಿಕೆಗೊಳಗಾಯಿತು. ಹಾನುಗಲ್ ಕದಂಬರಂಥ ಚಿಕ್ಕ ಚಿಕ್ಕ ರಾಜ್ಯಗಳ ಅಸ್ತಿತ್ವಕ್ಕೆ ಬಂದಾಗ ಈ ತಾಲೂಕಿನ ಭೂ ಪ್ರದೇಶವು ಕೂಡ ಹಾನುಗಲ್ ಕದಂಬರ ಶಾಖೆಯಾದ ಕೊಡಗಿನ ಕದಂಬರ ಆಡಳಿತಕ್ಕೆ (ಕ್ರಿ.ಶ. ೧೧ನೆಯ ಶತಮಾನದಲ್ಲಿ) ಒಳಪಟ್ಟಿತ್ತೆಂಬ ಐತಿಹಾಸಿಕ ವಿವರಗಳೂ ೪೭

ಶಾಸನಗಳಲ್ಲಿ ಕಂಡುಬರುತ್ತವೆ. ಅಲ್ಲದೆ ಸುಮಾರು ೪ನೇ ಶತಮಾನದಿಂದ ೧೧ನೇ ಶತಮಾನದವರೆಗೆ ಕೊಡಗಿನ ಕಿಗ್ಗಟ್ಟು ನಾಡಿನವರೆಗೆ ವ್ಯಾಪಿಸಿತ್ತು ಎಂದೂ ಹೇಳಿದ್ದಾರೆ. (ಡಿ.ಎನ್. ಕೃಷ್ಣಯ್ಯ, ಕೊಡಗಿನ ಇತಿಹಾಸ, ಪು. ೩೭-೩೮).

ಹಾನುಗಲ್ "ಕದಂಬ ವಂಶದ ಅರಸರ ಒಂದು ಶಾಸನವು ಈ ತಾಲ್ಲೂಕಿನ 'ಯಡೂರಿನ' ಸುಗ್ಗಿದೇವರ ಗುಡಿಯಲ್ಲಿದೆ. ಇದು ಹಾನುಗಲ್‌ಕದಂಬ 'ದುದ್ದರಸ'ನ

ನೆನಪಿಗಾಗಿ ಅವನ ತಮ್ಮ 'ಜೂಜರಸ'ನಿಂದ ಇಡಲ್ಪಟ್ಟ ವೀರಶಾಸನ. ಇವರ ಕಾಲ ಕ್ರಿ.ಶ. ೧೯೫೫. ಈ ಶಾಸನದಲ್ಲಿ 'ದುದ್ದರಸ'ನ ಅನೇಕ ಬಿರುದುಗಳಲ್ಲಿ 'ಮಲೆಪರ ನಂದನವನ' ಎಂಬ ಬಿರುದು ಕಂಡು ಬರುತ್ತದೆ. ಮಲೆಪರ ನಂದನವನ ಎಂದರೆ 'ಮಲೆನಾಡುಗಳ ಪತಿ' ಎಂಬ ಅರ್ಥವನ್ನು ಮಾಡಬಹುದು ಎಂಬ ಕೃಷ್ಣಯ್ಯನವರ ಮಾತಿಗೆ ಪುಷ್ಟಿ ನೀಡುವಂತೆ ಈ ತಾಲೂಕಿನ ದಕ್ಷಿಣದ ಸರಹದ್ದಿನಲ್ಲಿ ಮಲೆನಾಡು ಬೆಟ್ಟಶ್ರೇಣಿ ಹಾಗೂ ದಟ್ಟ ಅರಣ್ಯ ಪ್ರದೇಶವಿದೆ. ಇದರಿಂದ ಕ್ರಿ.ಶ. ೧೯೫೫ರಲ್ಲಿ ಈ ತಾಲೂಕಿನ ಕೆಲವು ಪ್ರದೇಶಗಳಲ್ಲಿ 'ಕದಂಬ' ವಂಶದವರ ಆಳ್ವಿಕೆ ಇತ್ತೆಂಬ ಅಂಶ ನಮ್ಮ ಗಮನಕ್ಕೆ ಬರುತ್ತದೆ"[೩]

"ಕೊಡಗಿನ ಉತ್ತರ ಭಾಗವನ್ನು ಕದಂಬರು ಆಳುತ್ತಿದ್ದಾಗ ದಕ್ಷಿಣದಲ್ಲಿ ಗಂಗರು ಆಳುತ್ತಿದ್ದರೆಂದು ತಿಳಿದುಬರುತ್ತದೆ. ಕ್ರಿ.ಶ. ೮೮ ರ ಒಂದು ದಾನ ಶಾಸನದಲ್ಲಿ "ಗಂಗ ವಂಶದ ರಾಜರು ದಕ್ಷಿಣ ಕೊಡಗಿನಲ್ಲಿ ಪ್ರಭುತ್ವವನ್ನು ನಡೆಸುತ್ತಿದ್ದರು. ಅವರ ರಾಜಧಾನಿ ಮೈಸೂರಿನ ತಲಕಾಡು ಆಗಿತ್ತು. ಕೊಡಗಿನಲ್ಲಿ ಗಂಗರಸನಾದ ಸತ್ಯವಾಕ್ಯ ಕೊಂಗುಣಿವರ್ಮನು ಜೈನ ಬಸದಿಗೆ ಲಕ್ಷ್ಮಣತೀರ್ಥ ಸಮೀಪ ೧೨ ಅಗ್ರಹಾರಗಳನ್ನು ದಾನವಾಗಿ ಬಿಟ್ಟುಕೊಟ್ಟನೆಂದು ಕಿಗ್ಗಟ್ಟು ನಾಡಿನ ಬಿಳೂರು ಗ್ರಾಮದ ಶಿಲಾ ಶಾಸನದಿಂದ ತಿಳಿದುಬರುತ್ತದೆ. ಪಿರಿಯಾಪಟ್ಟಣ ತಾಲ್ಲೂಕು ಕಂಪಲಾಪುರ ಶಾಸನದಲ್ಲಿ ಕ್ರಿ.ಶ. ೧೧೭೪ರಲ್ಲಿ ಪಾಲ್ಪರೆಯಲ್ಲಿ ನಡೆದ ಯುದ್ಧದ ಬಗ್ಗೆ ಹೇಳುವಲ್ಲಿ ಎಲ್ಲಾ ನಾಡ ಕೊಡಗರು ಎಂದೇ ಕೊಡಗಿನ ವೀರರ ಶೌರ್ಯ ಸಾಹಸಗಳ ಉಲ್ಲೇಖವಿದೆ."[೪]

"ಗಂಗರ ಆಡಳಿತ ಈ ಪ್ರದೇಶದಲ್ಲಿತ್ತು ಎಂಬುದಕ್ಕೆ ಶಾಸನಗಳ ಪುರಾವೆ ಇದೆ. ಹಾಗೆಯೇ ನಾಲ್ಕನೆಯ ಶತಮಾನದ ಗಂಗರಿಗಿಂತ ಮೊದಲು ದ್ರಾವಿಡ ಬುಡಕಟ್ಟಿಗೆ ಸೇರಿದ ಜನರ ಸಣ್ಣ ಪುಟ್ಟ ಗುಂಪುಗಳು ಇದ್ದವೆಂಬ ಅಭಿಪ್ರಾಯಕ್ಕೆ ಈ ತಾಲೂಕಿನ ಅನೇಕ ಊರುಗಳಲ್ಲಿ ಕಂಡು ಬರುವ 'ಪಾಂಡ ಪಾರೆ' ಗಳೆಂದು ಕರೆಯುವ ಕಲ್ಲು ಚಪ್ಪಡಿಗಳು, ಮೆನ್‌ಹಿರ್ (ನಿಲುವುಗಲ್ಲುಗಳು) ಸಾಕ್ಷಿಯಾಗುತ್ತವೆ. ವಿರಾಜಪೇಟೆ ತಾಲೂಕಿನ 'ಅರಮೇರಿ' ಗ್ರಾಮದ 'ಅಳಮಂಡ' ಮನೆಯ ಹತ್ತಿರ ಇಂತಹ ಪಾಂಡವ ಪಾರೆಗಳು ಗೋಚರವಾಗಿವೆ. ಈ ಕಲ್ಲು ಚಪ್ಪಡಿಯನ್ನು ಕೊಡವರು 'ಪಾರೆ' ಎಂದು ಕರೆಯುತ್ತಾರೆ."[೫]

ಎಂ.ಜಿ. ನಾಗರಾಜ್‌ರವರು ಪತ್ತೆಹಚ್ಚಿರುವ ಹೈಸೊಡ್ಲೂರಿನ 'ದೇವರ ಕೆರೆ'ಯ ಬಳಿಯ ತುಂಡು ಶಾಸನದಲ್ಲಿ ಸುಮಾರು ಒಂದೂವರೆ ಅಡಿ ಎತ್ತರ ೨ ಅಡಿ ಅಗಲದ ಭಾಗದಲ್ಲಿ ೭ ಸಾಲುಗಳಿದ್ದು ಅರ್ಧ ಭಾಗ ಮಾತ್ರ ಕಾಣಿಸುತ್ತಿದ್ದು ಕೆಲವೆಡೆ ಅಕ್ಷರಗಳು ಅಸ್ಪಷ್ಟವಾಗಿವೆಯೆಂದು ಹೇಳಿ ಈ ಶಾಸನದ ಸಾರಾಂಶವನ್ನು ಈ ರೀತಿ ವಿವರಿಸಿದ್ದಾರೆ.

ಬಸದಿಯೊಂದಕ್ಕೆ ದಾನ ನೀಡಿದ ಸಂಗತಿ ಇಲ್ಲಿ ಬಂದಿದೆ. ಅಕ್ಷರ ಬಹಳ ಸುಂದರವಾಗಿದ್ದು, ಪೆಗ್ಗೂರಿನ ರಕ್ಕಸ ಗಂಗನ ಶಾಸನಕ್ಕೆ ಹೋಲಿಸಿದರೆ ಈ ಶಾಸನ ಅದಕ್ಕೂ ಹಿಂದಿನ ಶಾಸನಗಳ ಲಿಪಿಯನ್ನು ಹೋಲುತ್ತದೆ. ಈ ಶಾಸನದಲ್ಲಿ ಬರುವ 'ಪುದುಕೇಱರಿ' ಎಂಬ ಊರಿನ ಹೆಸರು ಇಂದಿನ 'ಹುದಿಕೇರಿ'

ಗ್ರಾಮವಾಗಿದೆ. ಗ್ರಾಮಗಳನ್ನು ಕೂಡಿಸುವ ನೆಲೆ ಎಂಬ ಅರ್ಥವು ಈ ಪ್ರಾಚೀನ ಸ್ಥಳ ನಾಮದಲ್ಲಿದೆ. ೮ಃ ಭಾಗದ ಮೊಟ್ಟ ಮೊದಲ ಕನ್ನಡ ಶಾಸನವಾಗಿದೆ.

"ಮಾದೆಯ ನಾಯಕನೆಂಬವನಿಗೆ ಕುಪ್ಪನಾಡೊಳಗೆ ಭೂಮಿಯನ್ನು, ಅದಕ್ಕೆ ಸಲ್ಲಿಸಬೇಕಾದ ಕಂದಾಯದ ವಿನಾಯಿತಿಯನ್ನು ಹೊಯ್ಸಳ ರಾಜನು ಕರುಣಿಸಿ ಬೆಟ್ಟರಸ ದಂಡನಾಯಕನನ್ನು ಪಾಲ್ಪರೆಗೆ ಹೋಗಿ ಚೆಂಗಾಳ್ವ ಮಹಾದೇವನನ್ನು ಕೊಂದು ಪಾಲ್ಪರೆ ಪಟ್ಟಣವನ್ನು ಕಟ್ಟಿ ಅಲ್ಲಿ ಮನೆಯನ್ನು ಸ್ಥಾಪಿಸಿ ಇರುತ್ತಿದ್ದಾಗ .... ಎಲ್ಲಾ ನಾಡ ಕೊಡಗರು ಬೆಟ್ಟರಸನೊಡನೆ ಯುದ್ಧ ಮಾಡಿದುದರ ಪರಿಣಾಮವಾಗಿ ಆ ದೊಡ್ಡ ಪಾಲ್ಪರೆಯ ಯುದ್ಧದಲ್ಲಿ ಪಾಲ್ಪರೆಯ ಒಂದು ಹಳ್ಳಿಯನ್ನು ಬೆಟ್ಟರಸನು ಸೂರ್ಯ ಚಂದ್ರರಿರುವವರೆಗೂ ನೆತ್ತರು ಕೊಡಿಗೆಯಾಗಿ ಎಂದರೆ ಯುದ್ಧದಲ್ಲಿ ರಕ್ತ ಸುರಿಸಿ ಹೋರಾಡಿದವರಿಗೆ ಬಹುಮಾನವಾಗಿ ಕೊಡುವ ಭೂಮಿಯಾಗಿ ಕೊಟ್ಟನು ಎಂಬ ವಿಚಾರವನ್ನು ಡಿ.ಎನ್. ಕೃಷ್ಣಯ್ಯನವರು ತಮ್ಮ ಕೃತಿಯಲ್ಲಿ ತಿಳಿಸಿದ್ದಾರೆ."

ಕೊಡಗಿನ ಮಾಲಂಬಿ ಶಾಸನ (ಸೋಮವಾರಪೇಟೆ ತಾ.)

"ಕ್ರಿ.ಶ. ೧೧ನೆಯ ಶತಮಾನದಲ್ಲಿ ಚೆಂಗಾಳ್ವರು ಮತ್ತು ಕೊಂಗಾಳ್ವರು ಕೊಡಗನ್ನು ಆಳುತ್ತಿದ್ದರು. ಗಂಗರಾಜರು ಚೋಳರಿಂದ ಪರಾಭವಗೊಂಡ ಮೇಲೆ ಚೆಂಗಾಳ್ವರೂ ಚೋಳರಿಗೆ ಮಾಂಡಲೀಕರಾದರು. ಪನಸೋಗೆಯಲ್ಲಿ ಆಗ ನಡೆದ ಯುದ್ಧದಲ್ಲಿ ಕೊಂಗಾಳ್ವರ 'ಮನಿಜ' ನೆಂಬವನು ವಿಶೇಷ ಪರಾಕ್ರಮವನ್ನು ಮೆರೆದು ಚೋಳರಿಗೆ ಜಯವನ್ನು ತಂದುಕೊಟ್ಟನು. ಆತನಿಗೆ ಚೋಳರಾಜನು 'ಕ್ಷತ್ರಿಯ ಶಿಖಾಮಣಿ ಕೊಂಗಾಳ್ವ'ನೆಂಬ ಬಿರುದನ್ನು ಕೊಟ್ಟು ಕೊಡಗಿನ ಮಾಲವ್ವಿಯನ್ನೂ ನಿರ್ವಹಿಸಲು ಪಂಚವನ್‌ಮಹಾರಾಯ (ರಾಜೇಂದ್ರ ಚೋಳ) ನಾಡನ್ನು ಕೊಡುಗೆಯಾಗಿ ನೀಡಿದ. (ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೧, ಕೊಡಗು ಜಿಲ್ಲೆ, ೬೫, ಮಾಲಂಬಿ ೧೧ನೇ ಶತಮಾನ).

೧೦೫೮ ರ ಶಾಸನವು ಮುಳ್ಳೂರು ಬಸದಿಯ ರಾಜೇಂದ್ರಚೋಳ-ಖಬ (ರಾಜೇಂದ್ರ ಕೊಂಗಾಳ್ವ) ಆ ಬಸದಿಗೆ ಕೆಲವು ಹಳ್ಳಿಗಳನ್ನು ದಾನವಾಗಿ ಕೊಟ್ಟನೆಂದು ತಿಳಿಸುತ್ತದೆ. (ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೧, ಕೊಡಗು, ೭೨, ಮುಳ್ಳೂರು ಕ್ರಿ.ಶ. ೧೦೫೮). ಕ್ರಿ.ಶ. ೧೫೦೨-೩ರ ಚೆಂಗ್ವಾಳರ ನಂಜರಾಜನು ತನ್ನ ಹೆಸರಿನಲ್ಲಿ (ಕುಶಾಲನಗರದ ಹತ್ತಿರ) ನಂಜರಾಯಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುತ್ತಮುತ್ತಲ ಪ್ರದೇಶವನ್ನು ಆಳ ತೊಡಗಿದ. ಕ್ರಿ.ಶ. ೧೧೭೧ ರ ಕಾಲಕ್ಕೆ ಹೊಯ್ಸಳ ರಾಜ ಒಂದನೇ ನರಸಿಂಹನ ಮಗ ಬಲ್ಲಾಳನಿಗೆ ಚೆಂಗಾಳ್ವರು, ಕೊಂಗಾಳ್ವರು ಕಪ್ಪ ಕಾಣಿಕೆ ಕೊಟ್ಟು ಗೌರವಿಸಿದಂತೆ ತಿಳಿದುಬರುತ್ತದೆ. ಬಲ್ಲಾಳನು ಚೆಂಗಾಳ್ವರನ್ನು ಸೋಲಿಸಲು ಪಣತೊಟ್ಟು ಸೈನ್ಯ ಸಮೇತನಾಗಿ ದಂಡನಾಯಕ ಬೆಟ್ಟರಸನನ್ನು ಕಳುಹಿಸುತ್ತಾನೆ. ಅವನು ಕೊಡಗಿನ 'ಪಾಲ್ಪರೆ' ಎಂಬ ಸ್ಥಳದಲ್ಲಿ ಚೆಂಗಾಳ್ವರ ಮಹದೇವನ ಮಗನಾದ ಪೆಮ್ಮವೀರಪ್ಪನು 'ಎಲ್ಲಾ ನಾಡ ಕೊಡಗರ' ಸಹಾಯ ಪಡೆದು ಹೊಯ್ಸಳರೆದುರು ಕ್ರಿ.ಶ. ೧೧೭೪ರಲ್ಲಿ

ಯುದ್ಧವನ್ನು ಹೂಡಿ ಕೊನೆಗೆ ಸೋಲನ್ನಪ್ಪಿದನು. ಈ ಮುನ್ನವೂ ನಾಗಮಂಗಲ ತಾಲೂಕಿನ ಶಾಸನವೊಂದರಲ್ಲೂ ೧೧೪೫ರಲ್ಲಿ ಯುವರಾಜನಾದ ವೀರನರಸಿಂಹನು ಚಂಗಾಳ್ವ ದೊರೆಯನ್ನು ಕೊಂದನೆಂಬ ವಿಚಾರ ಬರುತ್ತದೆ. ಹೊಯ್ಸಳ ಸೇನಾನಿ 'ಚೋೞಿಮಯ್ಯ'ನು ಚೆಂಗಾಳ್ವರ ರಾಜ್ಯವನ್ನು ಗೆದ್ದನೆಂದು ೧೧೫೫ ರ ಶಾಸನ ಹೇಳುತ್ತದೆ."[೭]

"ಇವರಿಂದ ಚೆಂಗಾಳ್ವರು ತಮ್ಮ ರಾಜಧಾನಿಯನ್ನು ಪಶ್ಚಿಮಕ್ಕೆ ಮಲೆನಾಡಿನ ಪಾಲ್ಪರೆಗೆ ಒಯ್ದರು. ಮುಂದೆ ವಿಷ್ಣುವರ್ಧನನ ಮಗ ನರಸಿಂಹನ ಕಾಲದಲ್ಲಿ (೧೧೫೨–೧೧೭೩) ಹೊಯ್ಸಳರ ಆಡಳಿತ ದುರ್ಬಲವಾಗಲು, ರಾಜ್ಯದ ಅಪದೆಸೆಯನ್ನು ಕಂಡು ತಂದೆಯ ವಿರುದ್ಧ ಬಂಡೆದ್ದ ನರಸಿಂಹನ ಪುತ್ರ ವೀರಬಲ್ಲಾಳ (ಬಲ್ಲಾಳ II ೧೧೭೩–೧೨೨೩) ನಿಗೆ ಚಂಗಾಳ್ವರೂ ಕೊಂಗಾಳ್ವರೂ ನೆರವಾದಂತೆ ಹೊಯ್ಸಳ ಶಾಸನಗಳಿಂದ ತಿಳಿಯುತ್ತದೆ. ಹಾಗಿದ್ದರೂ ನರಸಿಂಹನ ಕೊನೆಗಾಲದಲ್ಲಿ ಕೂಡ (೧೧೬೯ ರಲ್ಲಿ) ಹುಲಿಯೂರಿನ ಗೋವಿದೇವ ಹಾಗೂ (೧೧೭೧ ರಲ್ಲಿ) ಕದಂಬ ಸೋವಿದೇವ ಮುಂತಾದ ಸೇನಾನಿಗಳು ಚಂಗಾಳ್ವರನ್ನು ಸೋಲಿಸಿದರು. ಪಟ್ಟಬಂಧವಾದ ತಕ್ಷಣ ವೀರಬಲ್ಲಾಳನು ಚಂಗಾಳ್ವರ ವಿರುದ್ಧ ಮತ್ತೆ ಸಾಗಲು, ಹೊಯ್ಸಳ ಸೇನಾನಿ ಬೆಟ್ಟರಸನು ಚಂಗಾಳ್ವ ಮಹದೇವನನ್ನು ಕೊಂದು ರಾಜಧಾನಿ ಪಾಲ್ಪರೆಯನ್ನು ಗೆದ್ದನು. ಮುಂದೆ ಕ್ರಿ.ಶ. ೧೧೭೪ ರಲ್ಲಿ ಚೆಂಗಾಳ್ವ ದೊರೆ ಪೆಮ್ಮವೀರರಸನು ಪಾಲ್ಪರೆ ಯುದ್ಧದಲ್ಲಿ ಮೊದಲು ಗೆದ್ದು ನಂತರ ಸೋತು ಮರಳಿಗೆದ್ದರೂ ಹೊಯ್ಸಳರ ಅಧಿರಾಜತ್ವದಿಂದ ಬಿಡುಗಡೆ ಹೊಂದಲಿಲ್ಲ. ಕೊಂಗಾಳ್ವರ ಹಂದಿಗುಂದದ ೧೧೭೫ ರ ಶಾಸನದಲ್ಲಿ ಉಲ್ಲೇಖವಾಗಿರುವ ವೀರ ಚೋಳ ಕೊಂಗಾಳ್ವನ ಜೊತೆ ಉಲ್ಲೇಖಿತರಾದ 'ತಾಯಿ ಪದುಮಲದೇವಿ'ಯು ಬಲ್ಲಾಳನ ರಾಣಿ ಹಾಗೂ ಸೋಮಲ ದೇವಿಯು ಬಲ್ಲಾಳನ ಪುತ್ರಿ ಎಂದು ಭಾವಿಸಲಾಗಿದೆ. ಮುಳ್ಳುನಾಡ ಪ್ರತಿನಿಧಿಗಳಾದ 'ಎಪ್ಪತ್ತು' (೭೦ಗಣ್ಯರು) ಇವರಿಗೆ ಈ ಮಹಿಳೆಯರು ನೀಡಿದ ಕೆಲವು ತೆರಿಗೆ ರಿಯಾಯಿತಿಗಳ ವಿಚಾರವನ್ನು ಈ ಶಾಸನ ತಿಳಿಸುತ್ತದೆ. ವೀರ ಬಲ್ಲಾಳನ ಸಿರಹ (ಸಿರಿವುದ) ಶಾಸನದಲ್ಲಿ ಆತನ ಅಧೀನನಾಗಿ ಬಿಳುಹು (ಈಗಿನ ಬಿಲಹ) ನಾಡಿನಲ್ಲಿ ಆಳುತ್ತಿದ್ದ ಒಬ್ಬ ಅಧಿಕಾರಿಯ ಉಲ್ಲೇಖವಿದ್ದು ಸಿರಹದ ಮಲ್ಲಿಕಾರ್ಜುನ ದೇವಾಲಯಕ್ಕೆ ನೀಡಿದ ದಾನದ ಬಗ್ಗೆ ಉಲ್ಲೇಖವಿದೆ.

ಒಟ್ಟಿನಲ್ಲಿ ಎರಡನೆಯ ಬಲ್ಲಾಳನು ಕೊಂಗಾಳ್ವರ ಕೊಡಗಿನಲ್ಲಿಯ ಆಡಳಿತವನ್ನು ತನ್ನ ಕಾಲದಲ್ಲಿ ಕೊನೆಗೊಳಿಸಿದನು. ಕೊಡಗಿನಲ್ಲಿ ತಾನು ಆಳುತ್ತಿದ್ದ ಪ್ರದೇಶದಲ್ಲಿಯ ಕೆಲವು ಸ್ಥಳಗಳನ್ನು ತನ್ನ ವಶದಲ್ಲಿ ಇಟ್ಟುಕೊಂಡು ಹೆಚ್ಚಿನ ಭಾಗವನ್ನು ಚಂಗಾಳ್ವರಿಗೆ ಆಡಳಿತ ನಡೆಸಲು ಎರಡನೆಯ ಬಲ್ಲಾಳನು ಬಿಟ್ಟು ಕೊಟ್ಟನು. ಮುಂದೆ ಹೊಯ್ಸಳರ ಯಾವುದೇ ಶಾಸನ ಕೊಡಗಿನಲ್ಲಿ ಕೆಲವು ದಶಕಗಳ ಕಾಲ ಸಿಕ್ಕಿಲ್ಲವಾದರೂ ಚಂಗಾಳ್ವರು ಹೊಯ್ಸಳರ ಮಾಂಡಲಿಕರಾಗಿದ್ದ ವಿಚಾರ ಅನೇಕ ಶಾಸನಗಳಿಂದ ತಿಳಿದು ಬರುತ್ತದೆ. ಸೋಮೇಶ್ವರ (೧೨೩೫–ರಿಂದ ಮುಂದೆ) ನ ಕಾಲದಲ್ಲಿ ಚಂಗಾಳ್ವ ರಾಜಕುಮಾರರಾದ ಸೋಮದೇವ ಹಾಗೂ ಬೊಪ್ಪದೇವರು

ರಾಮನಾಥಪುರದಲ್ಲಿ ಸೋಮೇಶ್ವರನನ್ನು ಗೌರವಾದರಗಳನ್ನು ವ್ಯಕ್ತ ಪಡಿಸಿದುದು ಮತ್ತು ಕಂಡು ರಾಮನಾಥಪುರ ದೇವಾಲಯಕ್ಕೆ ದಾನ ನೀಡಿದ ವಿಚಾರ ಶಾಸನಗಳಿಂದ ತಿಳಿಯುತ್ತದೆ."[೮] ಹಾಗೂ ಕೊಡಗು ಶ್ರೀರಂಗಪಟ್ಟಣದ ಆಡಳಿತಕ್ಕೆ ಆ ರಾಜಕುಮಾರರನನ್ನು ಹೊಯ್ಸಳ ಸೋಮೇಶ್ವರ ನಿಯುಕ್ತಿ ಮಾಡಿದ.

ಮುಂದೆ ಸೋಮೇಶ್ವರನ ಮಗ ಮೂರನೇ ನರಸಿಂಹನ ಕಾಲದ ಎರಡು ವೀರಗಲ್ಲುಗಳು ಕೊಡಗಿನಲ್ಲಿ ದೊರೆತಿವೆ. ಇವುಗಳಲ್ಲಿ ಒಂದು ನಿಡುತ ಶಾಸನವು ಕ್ರಿ.ಶ. ೧೨೫೫ ನೆಯ ವರ್ಷದ್ದಾಗಿದ್ದು (ಕೊಡಗು ೮೫, ನಿಡುತ, ಸೋಮವಾರಪೇಟೆ ತಾ., ೧೨೫೫, ಎ.ಡಿ.) ಆದರೆ ಚಂಗಾಳ್ವ ಮಲ್ಲಿದೇವ ಹಾಗೂ ಹರಿಹರ ಇವರಿಬ್ಬರೂ ಹೊಯ್ಸಳರ ವಿರುದ್ಧ ನಿಂತಿರಬೇಕೆಂದು ಭಾವಿಸಬಹುದಾಗಿದೆ. ಒಟ್ಟಿನಲ್ಲಿ ೧೩೦೦ರ ಸುಮಾರಿಗೆ ಎಂದರೆ ಹೊಯ್ಸಳರ ಮೂರನೇ ಬಲ್ಲಾಳ (೧೨೯೨-೧೩೪೩) ನ ಕಾಲಕ್ಕೆ ಚಂಗಾಳ್ವರ ಆಳ್ವಿಕೆ ಕೊನೆಗೊಂಡು ಇಡೀ ಕೊಡಗು ಹೊಯ್ಸಳರ

ವಶವಾಯಿತೆಂದು ಭಾವಿಸಬಹುದು. ಆದರೆ ೧೨೯೬ ರವರೆಗಿನ ಶಾಸನಗಳ ನಡುವಿನ ಸುಮಾರು ಒಂದು ಶತಮಾನದ ಅವಧಿಯಲ್ಲಿ ಕೊಡಗಿನ ರಾಜಕೀಯ ಸ್ಥಿತಿ ತಿಳಿಯಲು ಒಂದೇ ಒಂದು ಶಾಸನ ಅಥವಾ ಅನ್ಯದಾಖಲೆ ಸಿಕ್ಕಿಲ್ಲ ಎಂಬ ಮಾತಿದೆ. ಆದರೆ ಅರಕಲಗೂಡು ತಾಲೂಕು ೧೩ನೇ ಶತಮಾನದ ಶಾಸನವು ಮೊದಲ ಚಂಗಾಳ್ವರ ಪೈಕಿಯ ಬೊಪ್ಪದೇವ ಮತ್ತು ಸೋಮದೇವರು ನಂತರ ೧ನೇ ಶತಮಾನದಲ್ಲಿ ಹಿರೇಮಳಲಿ ಶಾಸನವು ಚಂಗಾಳ್ವ ವಂಶದ ಚಂಗಾಳ್ವ ನಾಗರಾಜ, ರಂಗರಾಜರು ಕೊಡಗು ಶ್ರೀರಂಗಪಟ್ಟಣ (ಈಗಿನ ನಂಜರಾಯಪಟ್ಟಣ ಮಾಲ್ದಾರೆ, ದುಬಾರೆ ಅರಣ್ಯ ಪ್ರದೇಶವನ್ನೊಳಗೊಂಡಿದ್ದ)ವನ್ನು ಆಳುತ್ತಿದ್ದ ಬಗ್ಗೆ ಹೇಳಿವೆ. ಕೊಡಗು ಶ್ರೀರಂಗಪಟ್ಟಣವು ಕೊಂಗಾಳ್ವರ ಕಾಲಕ್ಕೆ (ಕ್ರಿ.ಶ. ೧೧ನೇ ಶತಮಾನ) ರೂಪುಗೊಂಡಿದ್ದು ಮುಂದೆ ಚಂಗಾಳ್ವರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದನ್ನು ಈಚಿನ ಶೋಧದಲ್ಲಿ ಎಂ.ಜಿ. ನಾಗರಾಜ್ ಅವರು ತೋರಿಸಿಕೊಟ್ಟಿದ್ದಾರೆ. (ಇತಿಹಾಸದ ದರ್ಶನದ ಲೇಖನಗಳಲ್ಲಿ).

ಈ ಮೊದಲೇ ನೋಡಿದಂತೆ, ಚಂಗಾಳ್ವರ ಅಸ್ತಿತ್ವವನ್ನು ಸೂಚಿಸುವ ಯಾವುದೇ ದಾಖಲೆ ೧೫೦೩-೦೪ ಕ್ಕೆ ಪೂರ್ವದಲ್ಲಿ ಇಲ್ಲ."[೯] ಹೊಯ್ಸಳರ ಆಡಳಿತದ ನೇರ ಪರಿಣಾಮ ಕೊಡಗಿನಲ್ಲಿ ಈಗ ಏನೂ ಕಾಣಿಸದು. ಈಗಿನ ನಂಜರಾಯ ಪಟ್ಟಣದಲ್ಲಿನ ವೀರಭದ್ರ ದೇವಾಲಯವು ದುಸ್ಥಿತಿಯಲ್ಲಿ ಇದ್ದರೂ ಜಿಲ್ಲೆಯಲ್ಲಿರುವ ಹೊಯ್ಸಳ ಶೈಲಿಯ ಏಕಮಾತ್ರ ದೇವಾಲಯವಾಗಿದೆ.

ವಿಜಯನಗರದ ಅರಸರಿಗೆ ಸಂಬಂಧಿಸಿದ ಶಾಸನಗಳು ಈ ಭಾಗದಲ್ಲಿ ಕಂಡುಬಂದಿಲ್ಲವಾದರೂ ಕೊಡಗು ಜಿಲ್ಲೆಯು ಅವರ ಅಧಿಕಾರ ಮತ್ತು ಪ್ರಭಾವಕ್ಕೊಳಪಟ್ಟಿತೆಂಬುದು ಸ್ಪಷ್ಟವಾಗಿದೆ. ಮೂಳ್ಳೂರಿನ ಬಸದಿಗಳ ಆವರಣದಲ್ಲಿರುವ ಕ್ರಿ.ಶ ೧೩೯೦ ರ ಶಾಸನವು ರಾಜಾಧಿರಾಜ ಕೊಂಗಾಳ್ವನು ತನ್ನ ತಾಯಿ ಪೋಚಬ್ಬರಸಿಯ ಪುಣ್ಯಾರ್ಥವಾಗಿ ನೀಡಿದ ದತ್ತಿಯ ವಿಷಯವನ್ನು ತಿಳಿಸುತ್ತದೆ. ಗೊಂಖಾರೆಡ್ಡಿ ನಾಯಕನೆಂಬ ಅಧಿಕಾರಿಯ ಧೈರ್ಯ, ಸಾಹಸಗಳನ್ನು ಗುಂಡಪ್ಪ

ದಂಡನಾಯಕನಿಂದ ತಿಳಿದ ದೊರೆಯು ಮೆಚ್ಚುಗೆಯಾಗಿ ಅವನಿಗೆ ಮುಳ್ಳೂರು ನಾಡನ್ನು ನೀಡಿದನು. ಇದೇ ಶಾಸನದಲ್ಲಿ ಕುಮಾರನಹಳ್ಳಿ ಮತ್ತು ಕಾರಗೋಡು ಗ್ರಾಮಗಳನ್ನು ಕ್ರಮವಾಗಿ ಭೀಮಾಪುರ ಮತ್ತು ಅಣ್ಣಾಂಗಪುರಗಳೆಂದು ನಾಮಕಾರಣ ಮಾಡಿ ಪಾರ್ಶ್ವನಾಥ ದೇವರಿಗೆ ದಾನಮಾಡಿದ ವಿವರಗಳನ್ನೊಳಗೊಂಡಿದೆ.

ಕೊಡಗಿನಲ್ಲಿ ನಾಯಕರ ಆಳ್ವಿಕೆ

ನಂಜರಾಯಪಟ್ಟಣದ ಚೆಂಗಾಳ್ವರು ಕೊಡಗಿನ ಪೂರ್ವದ ಗಡಿಸೀಮೆಯನ್ನು, ಪಿರಿಯಾಪಟ್ಟಣ ಸೀಮೆಯನ್ನು ಆಳುತ್ತಿದ್ದಾಗ ಕೊಡಗಿನ ಉತ್ತರ ಭಾಗವನ್ನು ಉಳಿದು ಇತರ ಎಲ್ಲಾ ನಾಡುಗಳನ್ನು ನಾಯಕರು ಆಳುತ್ತಿದ್ದರು. "ದಖನ್ನಿನ ಚರಿತ್ರಕಾರನಾದ 'ಫೆರಿಸ್ಟನು' ಹದಿನಾರನೆಯ ಶತಮಾನದ ಕೊನೆಯಲ್ಲಿ ಕೊಡಗನ್ನು ನಾಯಕರು ಆಳುತ್ತಿದ್ದರೆಂದು ಈ ನಾಯಕರು ವಿಜಯನಗರದ ಅಧಿರಾಜತ್ವವನ್ನು ಒಪ್ಪಿಕೊಂಡಿದ್ದಾರೆಂದೇ ಬರೆಯುತ್ತಾನೆ".[೧೦]

ಕೊಡಗಿನ ನಾಯಕರ ಆಳ್ವಿಕೆಯು ಪ್ರಾರಂಭದಲ್ಲಿ ಕೆಲವು ಗ್ರಾಮಗಳಲ್ಲಿ ಮಾತ್ರ ಅಸ್ತಿತ್ವದಲ್ಲಿದ್ದು, ನಿಧಾನವಾಗಿ ಸುತ್ತಲಿನ ನಾಡುಗಳಿಗೆ ವಿಸ್ತರಿಸಿದ್ದಿರಬಹುದು. ಕೊಂಬುಗಳು ಮೇರೆಗಳಾಗಿ ಆಳವಾದ ಮತ್ತು ಅಗಲವಾದ ಕಡಂಗಗಳಿದ್ದವು. ಈ ನಾಯಕರ ಅನಂತರ ಆಳಿದ ಹಾಲೇರಿ ಅರಸರು ಸಹ ಈ ಕಡಂಗಗಳನ್ನು ಅಚ್ಚುಕಟ್ಟಾಗಿ ಇಟ್ಟುಕೊಂಡಿದ್ದರು. ಈಗಲೂ ಕೊಡಗಿನ ಅನೇಕ ಭಾಗಗಳಲ್ಲಿ ಈ ಕಡಂಗಗಳು ಕಂಡುಬರುತ್ತವೆ. ಕೊಂಬುಗಳ ಮಧ್ಯೆ ಕೆಲವೆಡೆಗಳಲ್ಲಿ ದೊಡ್ಡದಾದ ಕಾಡುಗಳಿದ್ದು ಆ ಕಾಡುಗಳು ಕೊಂಬುಗಳ ಮೇರೆಯಾಗಿರುತ್ತಿದ್ದವು.

"ಕೊಡಗಿನಲ್ಲಿ ಆಳಿದ ನಾಯಕರಲ್ಲಿ ಕೆಲವರ ಹೆಸರುಗಳು ಮಾತ್ರ ಜನರ ನೆನಪಿನಲ್ಲಿ ಉಳಿದಿದ್ದು-ಅನಂತರ ಬರೆಯಲ್ಪಟ್ಟ ಚರಿತ್ರೆಯಲ್ಲಿ ಉಲ್ಲೇಖವಾಗಿವೆ. ಹೀಗೆ ಜನರ ನೆನಪಿನಲ್ಲಿ ಉಳಿದಿರುವಲ್ಲಿ ಕಿಗ್ಗನಾಡಿನ ಅಂಜಿಗೇರಿ ನಾಡಿನ ಅಚ್ಚುನಾಯಕನು, ತಾವೂ ನಾಡಿನ ಕರ್ಣಂಬಾಹು ಪ್ರಸಿದ್ಧರಾಗಿದ್ದರು. ಬೆಪ್ಪು ನಾಡಿನಲ್ಲಿಯೂ ಆಗ ನಾಯಕರಿದ್ದರು. ಈ ನಾಯಕನ ಸಂತತಿ ಅದನ್ನು ಹಾಲೇರಿ ದೊಡ್ಡವೀರಪ್ಪನ ಕಾಲದಲ್ಲಿ (ಹದಿನೇಳನೆಯ ಶತಮಾನದ ಅಂತ್ಯದಲ್ಲಿ) ದೊಡ್ಡವೀರಪ್ಪನ ವಿರೋಧವಾಗಿ ಮಲೆಯಾಳದ ಕೋಟಂಗಡಿ ವೀರವರ್ಮರಾಜನು ಕೊಡಗಿಗೆ ದಂಡೆತ್ತಿ ಬರುವಂತೆ ಉತ್ತನಾಯಕನು ಪ್ರೋತ್ಸಾಹಿಸಿದನು. ಈ ಸಂತತಿಯವರೇ ಈಗಿನ 'ನಾಯಕಂಡ' ಮನೆಯವರು ಎನ್ನುತ್ತಾರೆ. ಆದರೆ ಉತ್ತು ನಾಯಕನು ಚನ್ನಬಸಪ್ಪ ಎಂಬ ಹೆಸರು ಪಡೆದು ವೀರಶೇಷನಾಗಿ ಹಾವೇರಿ ಇನೇ ಅರಸ ಮುದ್ದು ರಾಜನ ಮಗಳು ನೀಲಮ್ಮಾಜಿಯನ್ನು ಮದುವೆಯಾಗಿದ್ದ. ಆಕೆಯ ಕೈಮಡ ಅರಮೇರಿಯಲ್ಲಿಯೇ ಇದೆ. ನಾಯಕಂಡ ಮನೆಯುವರು ಈ ಕೈಮಡದಲ್ಲಿ ಪೂಜಿಸುತ್ತಾರೆ. ಕಿಗ್ಗಟ್ಟುನಾಡಿನಲ್ಲಿ ಅಚ್ಚುನಾಯಕನಿಗೆ ಹಿಂದೆ ತಾವಳಗೇರಿಯಲ್ಲಿ ಕೈಬಿಲಿರ ಮನೆಯವರೂ ಹತ್ತುಗಟ್ಟುನಾಡಿನಲ್ಲಿಯ 'ಮಾಚಂಗಡ' ಮನೆಯವರು, ಮತ್ತೂರಿನಲ್ಲಿ ಮುಕ್ಕಾಟಿರಾ ಮನೆಯವರು ಒಡೆಯರಾಗಿದ್ದರೆಂಬ ದಂತ ಕತೆ ಇದೆ."[೧೧]

ಬೇಲೂರು ನಾಯಕರ ಪ್ರಭುತ್ವ

ನಂಜರಾಜ ಪಟ್ಟಣದ ಚೆಂಗಾಳ್ವರು ಕೊಡಗಿನ ಪೂರ್ವದ ಗಡಿ ಸೀಮೆಯನ್ನು ಕೊಡಗಿನ ನಾಯಕರು ಕೊಡಗಿನ ಪಶ್ಚಿಮ ಮತ್ತು ದಕ್ಷಿಣದ ನಾಡುಗಳನ್ನು ಆಳುತ್ತಿದ್ದ ಸಮಯದಲ್ಲಿ, ಕೊಡಗಿನ ಉತ್ತರಭಾಗದ 'ಬಲಹ' 'ನಿಡತ' ಮತ್ತು 'ಕೊಡಲಿ' ಹೋಬಳಿಗಳು ಹಾಸನ ಜಿಲ್ಲೆಯ ಐಗೂರಿನಲ್ಲಿ ಆಳುತ್ತಿದ್ದ 'ಬಲಂ' ಪ್ರಾಂತ್ಯದ ನಾಯಕರ ಅಧೀನದಲ್ಲಿದ್ದವು. ಹೀಗೆ ಮುಂದುವರೆದ ನಾಯಕರ ಪ್ರಭುತ್ವ ೧೬೫೭ ರವರೆಗೆ ಅಸ್ತಿತ್ವದಲ್ಲಿದ್ದು, ಅನಂತರ ಇಕ್ಕೇರಿ ಅಥವಾ ಬಿದನೂರಿನ ಶಿವಪ್ಪನಾಯಕನ ವಶಕ್ಕೆ ಸೇರುತ್ತದೆ. ೧೬೭೪ ರಲ್ಲಿ ಇಕ್ಕೇರಿ ನಾಯಕರಿಗೂ ಮೈಸೂರು ಒಡೆಯರಿಗೂ ಬೇಲೂರು ಸೀಮೆಯ ಒಡೆತನಕ್ಕಾಗಿ ನಡೆದ ಯುದ್ಧ ಕೊನೆಗೊಂಡು ಶಾಂತಿ, ಒಪ್ಪಂದವಾಯಿತು. ಬಲಂ ಪ್ರಾಂತ್ಯದ ನಾಯಕರಿಗೆ ಬೇಲೂರು ನಾಯಕರೆಂದೂ ಹೆಸರಿದೆ. ಈ ನಾಯಕರೆಗೆ ಸಂಬಂಧಿಸಿದ ಕೆಲವು ಶಾಸನಗಳು ಈ ವಲಯದಲ್ಲಿ ದೊರತಿದ್ದು, ಇವರ ಇತಿಹಾಸಕ್ಕೆ ಸಂಬಂಧಿಸಿದ ವಿಪುಲ ಮಾಹಿತಿಗಳನ್ನು ಒದಗಿಸುತ್ತವೆ.

ಹಾಲೇರಿ ರಾಜವಂಶದ ಸ್ಥೂಲ ಪರಿಚಯ

ಕೊಡಗು ಜಿಲ್ಲೆಯ ಪ್ರದೇಶ ಕ್ರಿ.ಶ. ೧೯೫೬ನೇ ನವೆಂಬರ್ ೧ರ ಮೊದಲು ಎಂದರೆ ಭಾರತದ ರಾಜ್ಯ ಪುನರ್ವಿಂಗಡನೆಗೆ ಮೊದಲು ಚೀಫ್ ಕಮೀಷನರ್ ಎಂಬ ಅಧಿಕಾರಿಯ ಆಡಳಿತಕ್ಕೆ ಒಳಪಟ್ಟ 'ಸಿ' ರಾಜ್ಯವಾಗಿತ್ತು. ಆಗ ಹಳೆಯ ಮೈಸೂರು ರಾಜ ಮನೆತನದ ಮಹಾರಾಜರ ಅಧಿಪತ್ಯದಲ್ಲಿ 'ಬಿ' ರಾಜ್ಯ ಎನಿಸಿಕೊಂಡಿತ್ತು. ೧೮೩೪ರಲ್ಲಿ ಕೊಡಗು ಹಾಲೇರಿ ವಂಶದ ರಾಜನಾದ ಚಿಕ್ಕವೀರರಾಜೇಂದ್ರ ಒಡೆಯ ಕೈತಪ್ಪಿ, ಬ್ರಿಟಿಷರ ಆಳ್ವಿಕೆಗೆ ಬಂತು. ಆಗಿನ ಕಮಿಷನರ್ ಕೊಡಗಿನ ರಾಜ್ಯಾಡಳಿತವನ್ನು ಭಾರತ ಸ್ವತಂತ್ರವಾಗುವವರೆಗೆ (೧೫-೮-೧೯೪೭) ನಡೆಸಿದನು.

"ಈ ಚಿಕ್ಕವೀರರಾಜನು ಹಾಲೇರಿ ವಂಶಕ್ಕೆ ಸೇರಿದ ರಾಜನಾಗಿದ್ದನು. ರಃ ವಂಶದವರು ಕ್ರಿ.ಶ. ೧೫೮೯ ರಿಂದ ೧೮೩೪ ರವರೆಗೆ ರಾಜ್ಯವಾಳಿದರು. ಈ ಮನೆತನದವರು ಮೂಲತಃ ಕೊಡಗಿನವರಲ್ಲ. ಈ ಮನೆತನಕ್ಕೆ ಮೊದಲು, ಕೊಡವರು ಕೊಡಗು ರಾಜ್ಯವನ್ನು ಒಟ್ಟಾಗಿ ಆಳಿದ ದಾಖಲೆಯಿಲ್ಲ. ಕೊಡಗಿನ ಒಡೆಯರಿಗೆ ಮೊದಲು ಆ ರಾಜ್ಯವು ಹನ್ನೆರಡು ಕೊಂಬುಗಳಾಗಿಯೂ ಮೂವತ್ತೈದು ನಾಡುಗಳಾಗಿತ್ತು. ಒಂದೊಂದು ನಾಯಕರು ಪಾಳೆಯಗಾರರ ಹಾಗೆ ಆಡಳಿತ ನಡೆಸುತ್ತಿದ್ದರು."[೧.೨]

ವಿಜಯನಗರ ಚಕ್ರಾಧಿಪತ್ಯವು ನಶಿಸಿದಾಗ ಆ ಸಾಮ್ರಾಜ್ಯದ ಆಶ್ರಿತ ರಾಜರೆಲ್ಲಾ ಸ್ವಾತಂತ್ರ್ಯವನ್ನು ಸಾರಿದಂತೆ ಕೊಡಗಿನ ನಾಯಕರು ಪ್ರತಿಯೊಬ್ಬರೂ ಸ್ವಾತಂತ್ರ್ಯವನ್ನು ಘೋಷಿಸಿದರು. ಪ್ರಬಲರಾದವರು ದುರ್ಬಲನಾಯಕರ ಮೇಲೆ ಬಿದ್ದು ಅವರ ಪಾಳ್ಯಗಳನ್ನು ಆಕ್ರಮಿಸಿಕೊಂಡರು. ಇವರ ಪೈಕಿ ಕಿಗ್ಗಟ್ಟುನಾಡಿನ ಅಚ್ಚುನಾಯಕನೂ, ಬೆಪ್ಪುನಾಡಿನ ಉತ್ತನಾಯಕನೂ, ಪಾಡಿನಾಲ್ಕುನಾಡಿನ ಕರ್ಣಂಬಾಹುವೂ

ಪ್ರಬಲರಾಗಿದ್ದರು. ಸುಮಾರು ಅದೇ ಕಾಲಕ್ಕೆ, ಮೈಸೂರು ದೇಶಕ್ಕೆ ವಾಯುವ್ಯ ಭಾಗದಲ್ಲಿರುವ ಇಕ್ಕೇರಿ ಅಥವಾ ಬಿದನೂರು ಪ್ರಾಂತ್ಯದ ರಾಜಕುಮಾರನು ಜಂಗಮನಂತೆ ವೇಷಧರಿಸಿ ಮಡಿಕೇರಿಗೆ ಏಳು ಮೈಲಿ ದೂರದಲ್ಲಿರುವ ಹಾಲೇರಿ ಎಂಬಲ್ಲಿಗೆ ಬಂದು ನೆಲೆಸಿದನು. ಮಕ್ಕಳಿಗೆ ಪಾಠ ಹೇಳುತ್ತ ಜನಪ್ರಿಯನಾಗಿದ್ದನು. ನ್ಯಾಯತೀರ್ಮಾನ ಕಟ್ಟೆಯಲ್ಲಿ ಮುಖ್ಯನಾಗಿದ್ದು ಆ ಪ್ರದೇಶದ ಜನರ ಆಸರೆಯಲ್ಲಿ ಸುತ್ತಮುತ್ತ ಸುತ್ತಾಡುತ್ತ ಒಂದು ಸಣ್ಣ ಸೈನ್ಯವನ್ನು ಕಟ್ಟಿಕೊಂಡು ಸಮೀಪದ ಪ್ರದೇಶವನ್ನು ಆಕ್ರಮಿಸಿ, ಪ್ರಬಲನಾಗಿ, ಕೊನೆಗೆ ಕೊಡಗಿಗೆಲ್ಲ ತಾನೇ ಒಡೆಯನಾದನು. ಅವನು ತನ್ನ ಶಕ್ತಿಯನ್ನು ಪ್ರದರ್ಶಿಸಿದ್ದರಿಂದ ಕೊಡವ ವೀರ ಕಲ್ಯಾಟಜಪ್ಪನು ನೆರವಾಗಿ ಕರ್ಣೆಂಬಾಹುವನ್ನು ಮಣಿಸಿದ. ಕೊಡಗಿನ ನಾಯಕರೆಲ್ಲಾ ಅವನ ದೊರೆತನವನ್ನು ಒಪ್ಪಿಕೊಳ್ಳಬೇಕಾಯಿತು. ಹೀಗೆ, ಕೊಡಗಿನ ಹಾಲೇರಿ ವಂಶದ ಒಡೆಯರಲ್ಲಿ ಮೊದಲಿಗನೇ ವೀರರಾಜ ಒಡೆಯ. ಇವನು ಕೊಡಗು ಪಾಳೆಯಗಾರರು ಒಬ್ಬೊಬ್ಬನನ್ನೇ ಗೆದ್ದು, ಕೊನೆಯವರೆಗೂ ಕೊಡಗಿಗೆಲ್ಲಾ ತಾನೇ ರಾಜನಾದನು. ವೀರರಾಜನ ಮಗ ಅಪ್ಪಾಜಿರಾಜ ಹಾಗೂ ನಂಜುಂಡರಸನು ಇವನ ಮಗ ಮುದ್ದು ರಾಜ, ಇವನವರೆಗೆ ಆಡಳಿತ ಬೆಳೆಯುತ್ತ ಬಂತು. ಮುದ್ದು ರಾಜನ ಕಾಲದಲ್ಲಿ ಅವನು ಈಗಿನ ಜಿಲ್ಲಾ ಮುಖ್ಯ ಪಟ್ಟಣವಾದ ಮಡಿಕೇರಿಯನ್ನು ಕಟ್ಟಿಸಿದನು. ಇದು ನಡೆದದ್ದು ಕ್ರಿ.ಶ. ೧೬೮೧ರಲ್ಲಿ. ಇವನು ಹಾಲೇರಿಯಲ್ಲಿ ೧೬೩೩ರಿಂದ ೧೬೮೧ ರವರೆಗೆ ರಾಜ್ಯಭಾರ ಮಾಡಿದನು.

ಹೀಗೆ ಕೊಡಗನ್ನು ಎರಡು ಶತಮಾನಗಳವರೆಗೆ ಆಳಿದ ಅರಸರ ಚರಿತ್ರೆಯಲ್ಲಿ ಬಹುಭಾಗವನ್ನು ಎಂದರೆ ೧೬೩೩ರಿಂದ ೧೮೦೮ರ ವರೆಗಿನದನ್ನು, ೧೭೮೯ರಿಂದ ೧೮೦೯ರ ವರೆಗೆ ರಾಜ್ಯವಾಳಿದ ದೊಡ್ಡ ವೀರರಾಜೇಂದ್ರ ಒಡೆಯನು 'ರಾಜೇಂದ್ರನಾಮೆ' ಎಂಬ ಹೆಸರಿನ ಪುಸ್ತಕದಲ್ಲಿ ಬರೆಸಿಟ್ಟಿದ್ದಾನೆ. ಈ ಪುಸ್ತಕದಲ್ಲಿರುವ ಎಲ್ಲಾ ವಿಷಯಗಳು ಸುಸಂಗತವಾಗಿವೆಯೆಂದು ನಂಬುವುದಕ್ಕಾಗದು. ಆದರೂ ಕೊಡಗಿನ ರಾಜರ ಕಾಲದ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಇದು ಬಹುಮಟ್ಟಿಗೆ ಸಹಾಯ ಮಾಡುವುದು. ಕೊಡಗಿನ ರಾಜರೂ ಮೈಸೂರು ರಾಜರೂ ಒಡೆಯರೆಂಬ ಬಿರುದನ್ನೇ ಇಟ್ಟುಕೊಂಡಿದ್ದರೂ ಅವರಿಗೆ ಯಾವ ರಕ್ತಸಂಬಂಧ ಇಲ್ಲ. ಈಗಂತೂ ಕೊಡಗು ಸಂಪೂರ್ಣ ಮೈಸೂರಿನ ಭಾಗವೇ ಆಗಿಹೋಗಿದೆ.

ದಕ್ಷಿಣದ ಅಂಜಿಗೇರಿ ನಾಡಿನಲ್ಲಿ ಚಟ್ಟಪ್ಪನಾಯಕನು ಆಳುತ್ತಿದ್ದ ಸಮಯದಲ್ಲಿ ಭಾಗಮಂಡಲನಾಡು ಅಥವಾ ತಾವು ನಾಡಿನಲ್ಲಿ 'ಕರ್ಣೆಂಬಾಹು'ವೆಂಬನಾಯಕನು ಆಳುತ್ತಿದ್ದನು. ಇವನು 'ತಾವೂನಾಡಿ'ನಲ್ಲಿ ಆಳುತ್ತಿದ್ದಾಗ ಕೊಡಗಿನ ಸಿದ್ದಾಪುರದಲ್ಲಿ ಚನ್ನಯ್ಯನಾಯಕನು ಆಳುತ್ತಿದ್ದನು. ಕ್ರಿ.ಶ ಹದಿನೈದನೆಯ ಶತಮಾನದಿಂದ ಹದಿನೇಳನೆಯ ಶತಮಾನದ ಮಧ್ಯಭಾಗದವರೆಗೆ ಪಿರಿಯಾಪಟ್ಟಣದಲ್ಲಿ ಆಳಿದ ಚಂಗಾಳ್ವರು ಕೊಡಗಿನ ಹಾಲೇರಿ ರಾಜ ಕುಟುಂಬದ ಬಂಧುಗಳೂ ದಾಯಾದಿಗಳೂ ಆಗಿದ್ದರೆಂದು ಕೊಡಗಿನ ರಾಜ ಚರಿತ್ರೆಯಿಂದ ತಿಳಿಯುತ್ತದೆ. ಒಟ್ಟಿನಲ್ಲಿ ಅನಂತರ ಇಡೀ ಕೊಡಗು ಸೀಮೆ ಹಾಲೇರಿ ಅರಸನ ಆಡಳಿತಕ್ಕೆ ಬಂದಿತು. ಅಂದಿನಿಂದ ಕ್ರಿ.ಶ ೧೮೩೪ರವರೆಗೆ ಕೊಡಗಿನಲ್ಲಿ ಈ ವಂಶ

ಮುಂದುವರೆಯಿತು. ಆಗಿನ ಕಾಲದಲ್ಲೇ ಕೊಡಗು ನೆರೆಹೊರೆ ಪ್ರದೇಶವನ್ನೊಳಗೊಂಡು ಹೆಚ್ಚು ವಿಸ್ತಾರವಾಗಿದ್ದಿತು. ಕನ್ನಡ ಆಡಳಿತ ಭಾಷೆಯಾಗಿದ್ದಿತು.

ಅಪ್ಪಾಜಿರಾಜ: ವೀರರಾಜನ ಮಗನಾದ ಅಪ್ಪಾಜಿರಾಜ ಕ್ರಿ.ಶ ೧೬೦೦ರಲ್ಲಿ ಅಧಿಕಾರ ಸ್ವೀಕರಿಸಿದನು. ಕೆಳದಿಯ ಆಕರಗಳಿಂದ ತಿಳಿದು ಬರುವಂತೆ "ಕೆಳದಿಯ ಪ್ರಬಲ ಹಾಗೂ ವಿಸ್ತರಣಾವಾದಿ ಅರಸು ವೆಂಕಟಪ್ಪನಾಯಕನು ಕೇರಳದ ಉತ್ತರದ ಭಾಗದವರೆಗೂ ದಂಡೆತ್ತಿ ಬಂದು ಕರಾವಳಿಯ ಎಲ್ಲಾ ಅರಸರನ್ನು ಮಣಿಸಿ ಕೊಡಗಿಗೆ ತನ್ನ ಸೈನ್ಯವನ್ನು ಕಳುಹಿಸಲು ಕೊಡಗಿನ ಒಡೆಯನು ಕೆಳದಿಯ ಅರಸರಿಗೆ ಕಪ್ಪಕಾಣಿಕೆ ಕೊಡಬೇಕಾಯಿತು".[೧೩]

ಮುದ್ದು ರಾಜ: (೧೭೬೬-೧೭೭೦) ಮುದ್ದುರಾಜನು ೧೬೩೩ ರಲ್ಲಿ ಹಾಲೇರಿಯಲ್ಲಿ ಪಟ್ಟಕ್ಕೆ ಬಂದನು. ಇವನ ಚಿಕ್ಕಪ್ಪನಾದ ನಂಜುಂಡರಸನು ಪಿರಿಯಾಪಟ್ಟಣದಲ್ಲಿ ದತ್ತು ಹೋಗಿ ರಾಜ್ಯಭಾರಮಾಡಿಕೊಂಡಿದ್ದರು. ಮುದ್ದುರಾಜನ ಮತ್ತು ದೇವಮ್ಮಾಜಿಯ ಮಗನಾಗಿ ೧೬೫೭ ರಲ್ಲಿ ದೊಡ್ಡವೀರಪ್ಪನು ಜನಿಸಿದನು. ದೊಡ್ಡ ವೀರಪ್ಪನಿಗೆ ಮುದ್ದಮ್ಮಾಜಿ ಮತ್ತು ದೇವಮ್ಮಾಜಿ ಎಂಬ ಇಬ್ಬರು ಪತ್ನಿಯರಿದ್ದರು.

ಮುದ್ದುರಾಜನ ಸಾಧನೆಗಳು: ಮುದ್ದುರಾಜನು ಆಧುನಿಕ ಮಡಿಕೇರಿಯನ್ನು ಸ್ಥಾಪಿಸಿದ ನಾಯಕ ಈ ಭೂಮಿ, ಕೋಟೆ ಮತ್ತು ಅರಮನೆಗಳ ನಿರ್ಮಾಣಕ್ಕೆ ತಕ್ಕುದೆಂದು ಭಾವಿಸಿದ ಮುದ್ದುರಾಜನು ಗುಡ್ಡಬೆಟ್ಟಗಳನ್ನು ಸಮತಟ್ಟುಮಾಡಿ ಮಣ್ಣಿನ ಕೋಟೆಯನ್ನು ನಿರ್ಮಿಸಿ ಕೋಟೆಯ ಸುತ್ತ ಕಂದಕವನ್ನು ತೋಡಿಸಿ ಮಧ್ಯೆ ಅರಮನೆಯನ್ನು ಕಟ್ಟಿದನು. ಮಡಿಕೇರಿಯನ್ನು ರಾಜಧಾನಿಯನ್ನಾಗಿ ಪರಿವರ್ತಿಸಿಕೊಂಡ ಮೇಲೆ ಈ ಸ್ಥಳಕ್ಕೆ 'ಮುದ್ದುರಾಜನ ಕೇರಿ' ಎಂದು ಹೆಸರಾಗಿ ಕ್ರಮೇಣ ಮಡಿಕೇರಿ ಎಂದು ಹೆಸರು ಪಡೆಯಿತು. ಮುದ್ದುರಾಜನ ಚಾವಡಿಕಾರರು ಅರಮನೆಯ ಉದ್ಯೋಗಸ್ಥರು, ಪರವಾರದವರು ಹಾಲೇರಿಯಿಂದ ಸ್ಥಳ ಬದಲಾಯಿಸಿ ಮಡಿಕೇರಿಗೆ ಬಂದು ನೆಲೆಸಿದರು. ನಂಜರಾಜನಿಗೆ ಹೊರಮಲೆನಾಡನ್ನು ಜಹಗೀರು ಕೊಟ್ಟು ಕ್ರಿ.ಶ.೧೬೮೭ ರಲ್ಲಿ ಮುದ್ದುರಾಜನು ಮರಣ ಹೊಂದಿದನು.

ಸಿರಿಬಾಯಿ ದೊಡ್ಡವೀರಪ್ಪ: (೧೭೮೧-೧೮೦೯) ಮುದ್ದುರಾಜನು ಸತ್ತಮೇಲೆ ದೊಡ್ಡವೀರಪ್ಪನು ಪಟ್ಟಕ್ಕೆ ಬಂದನು. ಇವನ ಮಗನಾಗಿ ಅಪ್ಪಾಜಿರಾಜನು ಜನಿಸಿದನು. ಅಪ್ಪಾಜಿ ರಾಜನ ಮಗ ಚಿಕ್ಕವೀರಪ್ಪ, ದೊಡ್ಡವೀರಪ್ಪನ ತಮ್ಮನಾದ ಅಪ್ಪಾಜಿ ರಾಜನಿಗೆ ಮುದ್ದುರಾಜ ಮತ್ತು ಲಿಂಗರಾಜ ಎಂಬ ಇಬ್ಬರು ಮಕ್ಕಳಿದ್ದು ಇವರಿಗೆ ಅಪ್ಪಾಜಿರಾಜ ಮತ್ತು ವೀರರಾಜೇಂದ್ರ ಒಡೆಯರೆಂಬ ಇಬ್ಬರು ಮಕ್ಕಳು ಹುಟ್ಟಿದರು.

ದೊಡ್ಡವೀರಪ್ಪನು ಕೊಡಗಿನಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ಮೈಸೂರಿನಲ್ಲಿ ಚಿಕ್ಕ ದೇವರಾಜ ಒಡೆಯನು, ಇಕ್ಕೇರಿ ಸಂಸ್ಥಾನದಲ್ಲಿ ಸೋಮಶೇಖರನು, ಸೋದೆ ಸಂಸ್ಥಾನದಲ್ಲಿ ದೊಡ್ಡ ಸದಾಶಿವರಾಜನು, ಬೇಲೂರು ಸಂಸ್ಥಾನದಲ್ಲಿ ವೆಂಕಟಾದ್ರಿ ನಾಯಕನು ಮತ್ತು ಚರಕಲ ಸಂಸ್ಥಾನದಲ್ಲಿ ರವಿವರ್ಮನು ರಾಜ್ಯಭಾರ ಮಾಡುತ್ತಿದ್ದರು.

೨ನೇ ಲಿಂಗರಾಜ ಒಡೆಯರು

ಲಿಂಗರಾಜನು ೧೮೧೧ ರಿಂದ ೧೮೨೦ ರವರೆಗೆ ಆಡಳಿತವನ್ನು ನಡೆಸಿದನು. ರಾಜ್ಯವನ್ನು ತಾಲ್ಲೂಕುಗಳಾಗಿ ವಿಭಾಗಿಸಿ ಸುಬೇಧಾರರುಗಳನ್ನು ನೇಮಿಸಿ ಆಡಳಿತದಲ್ಲಿ ಸುಧಾರಣೆ ತಂದನು. ತನ್ನ ಆಡಳಿತದ ವಿವರಗಳನ್ನು ೫೪ 'ಹುಕುಂ'ಗಳುಳ್ಳ 'ಹುಕುಂನಾಮೆ' ಎಂಬ ಪುಸ್ತಕದಲ್ಲಿ ಪ್ರಚುರಪಡಿಸಿದನು. ಇವನ ಕಾಲದಲ್ಲಿ ಕಟ್ಟಿಸಿದ ದೇವಾಲಯ ಮತ್ತು ಕೊಳ ಅವನು ಮಾಡಿದ ಮಹತ್ಕಾರ್ಯಗಳ ಒಂದು. ಮಡಿಕೇರಿಯಲ್ಲಿ ೧೮೨೦ ರಲ್ಲಿ 'ಶ್ರೀ ಓಂಕಾರೇಶ್ವರ' ದೇವಾಲಯವನ್ನು ಕಟ್ಟಿಸಿದನು. ಅರ್ಧದಲ್ಲಿ ನಿಂತಿದ್ದ ಮಡಿಕೇರಿ ಅರಮನೆ ಯನ್ನು ಪುನಃ ಕಟ್ಟಿ ಮುಗಿಸಿದನು. (೧೮೧೨). ಲಿಂಗರಾಜನು ದಕ್ಷ ಆಡಳಿತಗಾರನಾಗಿ ಕೆಲಸ ನಿರ್ವಹಿಸದನು. ಮಡಿಕೇರಿಯ ರಾಜರ ಗದ್ದುಗೆಗಳಲ್ಲಿ ಈತನ ಸಮಾಧಿ ಇದೆ.

ಚಿಕ್ಕವೀರರಾಜೇಂದ್ರ

ಲಿಂಗರಾಜನ ಮೃತ್ಯುವಿನ ಆನಂತರ ಆತನ ಮಗನಾದ ಚಿಕ್ಕವೀರರಾಜೇಂದ್ರ ಒಡೆಯ ೧೮೨೦ರಲ್ಲಿ ಪಟ್ಟಕ್ಕೇರಿದನು. ಇವನು ದುರಾಚಾರಿ, ಕ್ರೂರಿಯಾಗಿದ್ದು ಕುಂಟ ಬಸವನೆಂಬ ಸಹಾಯಕನ ಜೊತೆಗೂಡಿ ಕೊಲೆ, ಸುಲಿಗೆಯನ್ನು ಮಾಡುತ್ತಿದ್ದನು. ಈತನ ಕಾಲದಲ್ಲಿ ಇಂಗ್ಲಿಷರಿಗೂ ಹಾಲೇರಿ ವಂಶದ ರಾಜರಿಗೂ ವಿರಸ ಉಂಟಾಗಿ ಇಂಗ್ಲಿಷರು ಕೊಡಗನ್ನು ಮುತ್ತಿ ವೀರರಾಜನನ್ನು ಬೆನ್ನಟ್ಟಿದರು. ತಲೆಮರೆಸಿಕೊಂಡ ರಾಜ 'ನಾಲ್ಕುನಾಡು' ಅರಮನೆಯಲ್ಲಿ ವಾಸವಿದ್ದನು. ದಿವಾನರುಗಳಾದ ಅಪ್ಪಾರಂಡ ಬೋಪಣ್ಣ ಮತ್ತು ಚೆಪ್ಪುಡಿರ ಪೊನ್ನಪ್ಪ ಈ ವೇಳೆಯನ್ನು ಉಪಯೋಗಿಸಿಕೊಂಡು ಕಂಪೆನಿ ಸರ್ಕಾರಕ್ಕೆ ರಾಜಧಾನಿಯನ್ನು ಒಪ್ಪಿಸಿದರು ಎಂಬ ಅಭಿಪ್ರಾಯಗಳಿವೆ. ಪ್ರೇಜರ್‌ನ ಆಶಯದಂತೆ ಚಿಕ್ಕವೀರರಾಜ ಬ್ರಿಟೀಷರಿಗೆ ಶರಣಾದನು. ಕೊಡಗು ೧೪-೦೪-೧೯೩೪ ರಂದು ಬ್ರಿಟೀಷರ ವಶವಾಯಿತು. ಕರ್ನಲ್ ಫ್ರೇಜರ್ ಮೊದಲ ಕಮೀಷನರ್ ಆದನು.

೧೮೨೪ನೇ ಏಪ್ರಿಲ್ ತಿಂಗಳಿನಲ್ಲಿ ಕೊಡಗಿನ ಒಡೆಯರ ರಾಜ್ಯಭಾರ ಕೊನೆಗೊಂಡಿತು. ಕರ್ನಲ್ ಪ್ರೇಜರ್‌ನ ಜ್ಞಾಪಕಾರ್ಥವಾಗಿ ಕುಶಾಲನಗರವನ್ನು 'ಫ್ರೇಜರ್ ಪೇಟೆ' ಎಂದು ಕರೆಯಲಾಯಿತು. ವೀರರಾಜೇಂದ್ರನು ಕುಟುಂಬ ಸಮೇತ ಕಾಶಿಯಲ್ಲಿ ನೆಲೆಸಿದನು. ಅನಂತರ ಬ್ರಿಟಿಷ್ ಸರ್ಕಾರದ ರಾಜಧನವನ್ನು ಕೊಟ್ಟ ಕಾರಣ ೧೮೫೨ ರಲ್ಲಿ ಮಗಳಾದ ಗೌರಮ್ಮಳ ಜೊತೆ ಇಂಗ್ಲೆಂಡಿಗೆ ಹೋಗಿ ನೆಲೆಸಿದನು. ಗೌರಮ್ಮ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡು ಬ್ರಿಟಿಷ್‌ನನ್ನು ವರಿಸಿ 'ವಿಕ್ಟೋರಿಯಾ ರಾಣಿ ಗೌರಮ್ಮ' ಎಂಬ ಹೊಸ ನಾಮಕರಣದೊಂದಿಗೆ ಹೊಸ ಜೀವನ ಸಾಗಿಸಿದಳು. ವೀರರಾಜನು ಲಂಡನ್ ಪಟ್ಟಣದಲ್ಲೇ ಮರಣ ಹೊಂದಿದನು. 'ವಿಲಿಯಂ ಜಫರ್‌ಸನ್' ಎಂಬವನು ಬರೆದು ೧೮೫೫ ರಲ್ಲಿ ಪ್ರಕಟಿಸಿದ್ದ ಪುಸ್ತಕ ಚಿಕ್ಕವೀರರಾಜನ ಒಳ್ಳೆಯ ಗುಣಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ.

"ರಾಜನು ತನ್ನ ರೈತರಿಗೆ ತನ್ನನ್ನು ಕಾಣುವ ಸೌಲಭ್ಯವನ್ನು ಒದಗಿಸಿದ್ದನು. ಅವರ ಕುಂದು ಕೊರತೆಗಳ ವಿಷಯದಲ್ಲಿ ಅವರ ಹೇಳಿಕೆಗೆ ಸಮಾಧಾನವಾಗಿ ಕಿವಿಗೊಡುತ್ತಿದ್ದನು. ಅಲ್ಲದೆ ಅವುಗಳನ್ನು ವಿಚಾರಿಸಿ ಕೊರತೆಗಳನ್ನು ಪರಿಹರಿಸುತ್ತದ್ದನು. ಪ್ರಜೆಗಳಿಗೆ ತಮ್ಮ ರಾಜನ ವಿಷಯದಲ್ಲಿ ಅಚಲವಾದ ವಿಶ್ವಾಸವಿತ್ತು. ಇದಕ್ಕೆ ಸಾಕ್ಷಿಯಾಗಿ, ನಾವು ರಾಜನ ಜೊತೆಯಲ್ಲಿ ಹೋದಲೆಲ್ಲಾ ನೂರಾರು ಮಂದಿ ಗಂಡಸರೂ, ಹೆಂಗಸರೂ, ಮಕ್ಕಳೂ ನಮ್ಮ ಹಿಂದೆ ಬರುತ್ತಿದ್ದರು. ರಾಜನಿಗೆ ತಮ್ಮ ಗೌರವವನ್ನು ಅರ್ಪಿಸುತ್ತಿದ್ದರು. ನಾನು ಈ ಮಾತುಗಳನ್ನು ಅತ್ಯಂತ ತೃಪ್ತಿಗೊಂಡು ಹೇಳುತ್ತಿದ್ದೇನೆ, ಏಕೆಂದರೆ, ರಾಜನ ವಿಷಯದಲ್ಲಿ, ಸ್ವಂತ ಲಾಭಕ್ಕಾಗಿ ಅನೇಕರು ಒಡಕು ಮಾತುಗಳನ್ನಾಡುತ್ತಾರೆ".[೧೪]

ಹಾಲೇರಿ ಅರಸರ ವಂಶವೃಕ್ಷ

೧. ವೀರರಾಜ (ಸು. ೧೬೦೦)

೨. ಅಪ್ಪಾಜಿರಾಜ (ಸು. ೧೬೨೦)

೩. ಮುದ್ದುರಾಜ (೧೬೩೩ – ೮೭)



ಆಧಾರ: ಎಂ.ಜಿ.ನಾಗರಾಜ್ 'ಕೊಡಗಿನ ಹಾಲೇರಿ ರಾಜ ವಂಶವು' ಪುಟ ೯೮–೯೯.

ಬ್ರಿಟಿಷರ ಅಧಿಕಾರಾವಧಿ

ಕೊಡಗಿನಲ್ಲಿ ಬ್ರಿಟಿಷರ ಆಳ್ವಿಕೆ ಆರಂಭವಾದಂತೆ ೧೮೩೫ ಮತ್ತು ೧೮೩೭ ರಲ್ಲಿ ಬ್ರಿಟಿಷ್ ವಿರೋಧಿ ಬಂಡಾಯಗಳು ನಡೆದವು. ೨ನೇ ಬಂಡಾಯವು ೧೮೩೭ ರಲ್ಲಿ ನಡೆದು ಕೊಡಗಿನಲ್ಲೂ ಸುಳ್ಯ ಪ್ರದೇಶದಲ್ಲೂ ಅದು ಉಗ್ರವಾಗಿತ್ತು. ಈ ಸಮಯದಲ್ಲಿ ಗುಡ್ಡೆರ ಅಪ್ಪಯ್ಯ, ಕೆದಂಬಾಡಿ ರಾಮಯ್ಯಗೌಡ, ಮಂಡೀರ ಉತ್ತು, ಚೆಟ್ಟಿಕುಡಿಯ, ಕುರ್ತಕುಡಿಯ ಮುಂತಾದ ದೇಶಭಕ್ತ ಸ್ವಾತಂತ್ರ್ಯ ಹೋರಾಟಗಾರರು ಕೊಡಗಿನ ಕಲಿಗಳಾಗಿದ್ದರು.

ಒಟ್ಟಿನಲ್ಲಿ ಈ ಕಾಲಘಟ್ಟದಲ್ಲಿ ಒಂದು ಕಡೆ ಬ್ರಿಟಿಷರು ಮತ್ತೊಂದು ಕಡೆ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಹಾಗೂ ಸ್ಥಳೀಯ ನಾಯಕರುಗಳು ಕೊಡಗು ಸಂಸ್ಥಾನದ ಉಳಿವಿಗಾಗಿ ಮತ್ತು ಗೆಲುವಿಗಾಗಿ ಪರಸ್ಪರ ದಂಗೆ ಎದ್ದಿರುವುದನ್ನು ಕಾಣಬಹುದು. ಇಂಗ್ಲಿಷರು ಕೆಲವೊಮ್ಮೆ ಕೊಡಗಿನ ರಾಜರ ಪರವಾಗಿಯೂ ಕಪಟ ನಾಟಕವನ್ನು ತೋರಿ ಪರಸ್ಪರ ವೈರತ್ವವನ್ನು ಸೃಷ್ಟಿಸುವಲ್ಲಿ ತಮ್ಮ ಕೈ ಚಳಕವನ್ನು ತೋರುತ್ತಿದ್ದರು. ಆದರೆ ಸ್ವಾತಂತ್ರ್ಯೋತ್ತರ ಕಾಲದಲ್ಲಿಯ ಕೊಡಗಿನವರು ತೋರಿದ ಅಪ್ರತಿಮ ದೇಶಭಕ್ತಿ ಇತರರಿಗೆ ಮಾದರಿಯಾಗಬಲ್ಲದು. ಅಷ್ಟೇ ಅಲ್ಲ ಕೊಡಗಿನವರು ಇಂದಿಗೂ ತಮ್ಮ ಕೆಚ್ಚೆದೆಯ ಕಿಚ್ಚನ್ನು ತೋರುತ್ತಿರುವುದನ್ನು ನೋಡಬಹುದು. ಹೀಗೆ ಬ್ರಿಟೀಷರೊಡನೆ ತೋರಿದ ವೀರತನದ ಗುಣಗಳೇ ಇಂದೂ ಅವರ ನರನಾಡಿಗಳಲ್ಲಿ ಹರಿಯುತ್ತಿದ್ದು, ನಾಡೆಂದರೆ ತಮ್ಮ ಪ್ರಾಣವನ್ನು ಲೆಕ್ಕಿಸದೆ ನಿರ್ಭಯದಿಂದ ದೇಶಕ್ಕಾಗಿ ತನುಮನವನ್ನು ಕೊಡಲು ಸದಾ ಸಿದ್ಧರಾಗಿರುವವರು ಕೊಡಗಿನವರು. ಹೀಗೆ ವೈವಿಧ್ಯಮಯ ಇತಿಹಾಸವನ್ನುಳ್ಳ ಕೊಡಗಿನ ಸಾಹಿತ್ಯ, ಸಂಸ್ಕೃತಿ ಕೂಡ ಅಷ್ಟೇ ಶ್ರೀಮಂತವಾದುದು. ಈ ನಿಟ್ಟಿನಲ್ಲಿ ಕೊಡಂದೆರ ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಜನರಲ್ ತಿಮ್ಮಯ್ಯ ಮುಂತಾದವರು ರಾಷ್ಟ್ರದ ಹೆಮ್ಮೆಯ ವೀರಪುತ್ರರಾಗಿದ್ದಾರೆ.

ಸಾಹಿತ್ಯ

ಕೊಡವರಿಗೆ ತಮ್ಮದೇ ಆದ ಲಿಪಿ ಇಲ್ಲದಿದ್ದರೂ ಸೃಜನಶೀಲ ಮನಸ್ಸುಗಳು ಕನ್ನಡ ಲಿಪಿಯನ್ನೇ ಬಳಸಿ ಸಾಕಷ್ಟು ಸಾಹಿತ್ಯ ಕೃಷಿ ಮಾಡಿವೆ. ಶಿಷ್ಟ ಸಾಹಿತ್ಯಕ್ಕೆ ಮೊದಲು ಜಾನಪದ ಸಾಹಿತ್ಯವೇ ಇವರ ಅಭಿವ್ಯಕ್ತಿ ಮಾಧ್ಯಮವಾಗಿತ್ತು. 'ನಡೆದು ನೋಡಾ ಕೊಡಗಿನ ಬೆಡಗ' ಎಂಬ ಡಿ.ವಿ.ಜಿಯವರ ವಾಣಿಯಂತೆ ಕೊಡಗಿನ ಭೌಗೋಳಿಕ ಸೌಂದರ್ಯದ ವರ್ಣನೆಯನ್ನು, ಸಂಸ್ಕೃತಿ, ಸಂಸ್ಕಾರಗಳನ್ನು ಕೊಡವ ಸಾಹಿತಿಗಳು, ಕೊಡವೇತರ ಸಾಹಿತಿಗಳು ವರ್ಣಿಸಿದ್ದಾರೆ.

ಕೊಡಗಿನ ಸಾಹಿತ್ಯವನ್ನು ಎರಡು ರೀತಿ ವಿಭಾಗಿಸಬಹುದು.

೧. ಕೊಡವರಿಂದ ಕೊಡವ ಭಾಷೆಯಲ್ಲಿ ರಚಿತವಾದ ಸಾಹಿತ್ಯ

೨. ಕೊಡವೇತರರಿಂದ ರಚಿತವಾದ ಸಾಹಿತ್ಯ

ಎರಡೂ ಸಾಹಿತ್ಯ ಕೃತಿಗಳಲ್ಲೂ ಕೊಡಗಿನ ಸಂಸ್ಕೃತಿಯನ್ನು ಕುರಿತು ವಿಪುಲ ಮಾಹಿತಿ ದೊರೆಯುತ್ತದೆ. ಇವಲ್ಲದೆ, ನಿಯತಕಾಲಿಕೆಗಳು, ದಿನಪತ್ರಿಕೆಗಳಲ್ಲೂ

ಸ್ಮರಣ ಸಂಚಿಕೆಗಳಲ್ಲೂ ಅನುಷಂಗಿಕವಾಗಿ ಕೊಡಗಿನ ಸಾಹಿತ್ಯ ಸಂಸ್ಕೃತಿಯ ಪ್ರಸ್ತಾಪಗಳು ಬರುತ್ತವೆ. ಪ್ರತಿಯೊಂದು ಕೃತಿಯೂ ಒಂದೊಂದು ಉದ್ದೇಶದ ಹಿನ್ನೆಲೆಯಲ್ಲಿ ರಚನೆಗೊಂಡಿದ್ದು, ತನ್ನ ಸೀಮಿತ ವಲಯದಲ್ಲಿ ಸಾಂಸ್ಕೃತಿಕ ವಿಚಾರಗಳನ್ನು ಕಟ್ಟಿಕೊಡುತ್ತವೆ.

ಶಾಸನ ಕವಿಗಳು

ಕೊಡಗು ಜಿಲ್ಲೆಯ ಸಾಹಿತ್ಯದ ಮೂಲ ಆಕರಗಳಲ್ಲಿ ಶಾಸನಗಳು ಪ್ರಥಮ ಸ್ಥಾನವಾಗಿ ಕಂಡುಬರುತ್ತವೆ. ಅಂಜನಾಗಿರಿಯ 'ಜೈನಬಸದಿ'ಯಲ್ಲಿರುವ ಶಿಲಾಶಾಸನದಲ್ಲಿ ಪಂಡಿತದೇವನೆಂಬ ಜೈನಯತಿಯ ಪ್ರಸ್ತಾಪವಿದೆ. "ಮತ್ತೊಂದು ಶಾಸನವು ಇಮ್ಮಡಿ ವೀರರಾಜೇಂದ್ರನ ಕಾಲದಲ್ಲಿ ರಚಿತವಾಗಿದ್ದು, ಮದೋನ್ಮತ್ತ ಆನೆಗಳ ಸಮೂಹದಿಂದ ಕೂಡಿದ ಅರಣ್ಯವನ್ನು ಹೊಕ್ಕ ವೀರರಾಜೇಂದ್ರನು ತಮ್ಮ ಪರಾಕ್ರಮದಿಂದ ಅವುಗಳ ಉಪಟಳವನ್ನು ತಡೆದ ವಿಚಾರ ದಾಖಲಾಗಿದೆ. ೧೮ನೆ ಶತಮಾನದ "ಹಾಲೇರಿ ಅರಸರ ಕಾಲದ ಖಾಸಾ ರಹಸ್ಯದ ಶಂಭೈಯ ಸಂಬಂಧಿಸಿದ ತಾಮ್ರ ಶಾಸನದಲ್ಲಿಯ ಕೆಲವು ಸಂಸ್ಕೃತ ಶ್ಲೋಕಗಳನ್ನು, ಶಾಸನ ಪದ್ಯಗಳನ್ನು ರಚಿಸಿರುವನು."[೧೪]

ಪ್ರಾಚೀನ ಕವಿಗಳು

ಹತ್ತನೇ ಶತಮಾನದಿಂದಲೂ ಕೊಡಗಿನಲ್ಲಿ ಶ್ರೇಷ್ಠ ಕವಿ ಪರಂಪರೆ ಇತ್ತೆಂದು ತಿಳಿದುಬರುತ್ತದೆ. "ಕನ್ನಡ ನಾಡಿನ ಪ್ರಾಚೀನ ಕವಿಗಳಲ್ಲಿ ಒಬ್ಬನಾದ ನಾಗವರ್ಮನು ಈ ಪ್ರದೇಶದವನು. ಕೊಡಗಿನ ದಕ್ಷಿಣ ಭಾಗದಲ್ಲಿರುವ ಲಕ್ಷ್ಮಣತೀರ್ಥ ನದಿಯ ಪ್ರಾಂತ್ಯದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಗಂಗರಸ (ರಕ್ಕಸಗಂಗ) ಈತನ ಆಶ್ರಯದಾತನಾಗಿದ್ದನೆಂದು ತಿಳಿಯುತ್ತದೆ. 'ಛಂದೋಬುದಿ' ಗ್ರಂಥ ರಚಿಸಿದ ಈ ನಾಗವರ್ಮನೇ ಕೊಡಗಿನ ಪ್ರಥಮ ಸಾಹಿತ್ಯಕಾರನೆಂದೂ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ."[೧೫]

"ಕೊಂಗಾಳ್ವ ಅರಸರ ರಾಧಾನಿಯಾಗಿದ್ದ ಮುಳ್ಳೂರಿನಲ್ಲಿ ವಾಸವಾಗಿದ್ದ ಗುಣಸೇನ ಪಂಡಿತನೆಂಬುವನು ಸನಾತನ ಧರ್ಮದ ಷಡ್ದರ್ಶನಗಳ ಪಾರಂಗತನಾಗಿದ್ದನು. 'ದ್ರಮಿಳ ನಂದಿ ಸಂಘ' ದ ಸದಸ್ಯನಾದ ಇವನ ಕಾಲ ಹನ್ನೊಂದನೆ ಶತಮಾನವೆಂದು ತಿಳಿದುಬರುತ್ತದೆ."[೧೬]

"ಶುಭಚಂದ್ರನೆಂಬ ಪಂಡಿತನು ಅವನ ಶಿಷ್ಯ ಪ್ರಭಾಚಂದ್ರನು ಕೊಡಗಿನಲ್ಲಿ ಈ ಅವಧಿಯಲ್ಲಿ ವಾಸವಾಗಿದ್ದರು"[೧೭]

ಕದಂಬರ ಕಾಲದಲ್ಲಿಯೂ ಆ ವಂಶಕ್ಕೆ ಸೇರಿದ ದಯಾಸಿಂಹನು ಕವಿ ಕಾವ್ಯ ವಿಮರ್ಶಕ, ವೈಯ್ಯಾಕರಣಿ, ಚಿತ್ರಗಾರ ಮತ್ತು ಸಂಗೀತ ತಜ್ಞನೆಂದು ಪ್ರಸಿದ್ಧಿ ಹೊಂದಿದ್ದನು."[೧೮]

ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯ'ವು ಕೊಡಗಿನ ಕೆಲವು ಪ್ರಮುಖ ಸಂಗತಿಗಳನ್ನು ತಿಳಿಸುತ್ತದೆ. ಇದು ಕೊಡಗನ್ನು ಸ್ಪಷ್ಟವಾಗಿ ಪರಿಚಯಿಸುವ ಪ್ರಥಮ ಕನ್ನಡ ಕಾವ್ಯವೆನಿಸಿದೆ. ಇದರಲ್ಲಿ ಕಾವೇರಿ ನದಿಯ ವರ್ಣನೆ, ಪಾಲ್ಪರೆ ಕೋಟೆಯ ವರ್ಣನೆ, ಕೊಡಗಿನ ದಟ್ಟ ಕಾಡಿನ ಚಿತ್ರಣ, ಕೊಡವರ ಪರಿವಾರದ

ವರ್ಣನೆ, ಇತರ ಕೆಲವು ವಿಚಾರಗಳು ಬರುತ್ತವೆ. "ದೊಡ್ಡ ವೀರರಾಜೇಂದ್ರನು ತನ್ನ ಆಡಳಿತ ಮತ್ತು ರಾಜಕೀಯ ವಿಚಾರಗಳಿಗೆ ಸಂಬಂಧಿಸಿದ 'ರಾಜೇಂದ್ರನಾಮೆ" ಎಂಬ ದಾಖಲೆಯನ್ನು ಕನ್ನಡದಲ್ಲಿ ಬರೆಸಿದ್ದಾನೆ. ಇದನ್ನು ಲೆಫ್ಟಿನೆಂಟ್ 'ರಾಬರ್ಟ್ ಅಬರ್‌ಕ್ರಾಂಬಿ'ಯು ಇಂಗ್ಲೀಷ್ ಭಾಷೆಗೆ ಅನುವಾದಿಸಿದನು."[೨೦]

ಎರಡನೆಯ ಲಿಂಗರಾಜೇಂದ್ರ ಒಡೆಯ(ಕ್ರಿ.ಶ. ೧೮೧೧-೧೮೨೦) ನು ಸ್ವತಃ ಕವಿಯೂ ಗ್ರಂಥಕರ್ತನೂ ಆಗಿದ್ದು, ತನ್ನ ಆಡಳಿತಾವಧಿಯಲ್ಲಿ ಬರೆಸಿದ ದಾಖಲೆಗಳನ್ನು ಲಿಂಗರಾಜನ ಶಿಸ್ತು ಎಂದು ಕರೆಯಲಾಗಿದೆ.

ಕೊಡವ ಮತ್ತು ಕೊಡವೇತರ ಸಾಹಿತಿಗಳು

೧೯೦೨ರಲ್ಲಿ 'ಕೊರವಂಡ ಅಪ್ಪಯ್ಯ'ನವರು ಕನ್ನಡದ ಲಿಪಿ ಬಳಸಿ ಕೊಡವ ಭಾಷೆಯಲ್ಲಿ ಸಾಹಿತ್ಯ ರಚನೆಯನ್ನು ಪ್ರಾರಂಭಿಸುವುದರ ಜೊತೆಗೆ ಕೊಡವ ಭಾಷಾ ಲಿಪಿಯನ್ನು ರಚಿಸಿದರು. ಕೊಡವ ಭಾಷೆಗಾಗಿ ಲಿಪಿ ತಂದ ಕೀರ್ತಿ ಇವರಿಗೆ ಸಲ್ಲುತ್ತಾದಾದರೂ ಆ ಲಿಪಿ ಮುಂದುವರಿಯಲಿಲ್ಲ. 'ಜಲರತ್ನಾಕರ', 'ಗೋರಕ್ಷಣೆ' 'ಕೊಡವರ ಕುಲಾಚಾರಾದಿ ತತ್ವೋಜ್ಜೀವಿನಿ, ವ್ಯವಸಾಯ ಬೋಧಿನಿ, ಭಗವತ್ಗೀತೆ ಕೃತಿಗಳನ್ನು ರಚಿಸಿ ಕೊಡವ ಸಾಹಿತ್ಯ ಮತ್ತು ಸಂಸ್ಕೃತಿಗೆ ತಮ್ಮದೇ ಆದ ಕಾಣಿಕೆಯನ್ನು ನೀಡಿದ್ದಾರೆ.

ಕೊಡಗಿನ ಆದಿಕವಿ, ಶೇಕ್ಸ್‌ಪೀಯರ್ ಎಂದು ಪ್ರಖ್ಯಾತಿಗೊಂಡ 'ಅಪ್ಪನೆರವಂಡ ಅಪ್ಪಚ್ಚಕವಿ' ನಾಲ್ಕು ಮಹಾನಾಟಕಗಳಾದ, ಕಾವೇರಿ ನಾಟಕ, ಯಯಾತಿರಾಜ ನಾಟಕ, ಸುಬ್ರಹ್ಮಣ್ಯ ನಾಟಕ ಮತ್ತು ಸಾವಿತ್ರಿ ನಾಟಕಗಳನ್ನು, ಕೊಡವ ಭಾಷೆಯಲ್ಲೂ 'ಚಂದ್ರಹಾಸ ಕಥಾ' ಎಂಬ ಕನ್ನಡ ನಾಟಕವನ್ನು ಹಾಗೂ ಕೊಡವ ಹಾಡುಗಳನ್ನು ರಚಿಸಿ ಸಂಸ್ಕೃತಿಯನ್ನು ಮೆರೆದಿದ್ದಾರೆ. 'ಕಾವೇರಿ ನಾಟಕ' ಮಹಾಕೃತಿಯ ಮೂಲ ಕಥನವಸ್ತು 'ಶ್ರೀ ಕಾವೇರಿ' ಪುರಾಣವಾಗಿದೆ. ಸಮುದ್ರ ಮಥನ ಕಾಲದಲ್ಲಿ ಮಹಾವಿಷ್ಣುವು ಮೋಹಿನಿಯ ಅವತಾರ ತಾಳಿದಾಗ, ಆದಿ ಶಕ್ತಿಯೂ ಅವತಾರ ತಾಳಲು ಬಯಸಿ ಬ್ರಹ್ಮಮಾನಸ ಪುತ್ರಿ ಲೋಪಾಮುದ್ರೆಯಾಗಿ ಜನ್ಮ ತಾಳುತ್ತಾಳೆ. ಆಕೆಯನ್ನು ಬ್ರಹ್ಮಗಿರಿಯಲ್ಲಿ ತಪಸ್ಸು ಮಾಡುತ್ತಿದ್ದ ಶ್ರೀ ಕವೇರ ಮುನಿಯು ಸಾಕುಮಗಳಾಗಿ ಪಡೆಯುತ್ತಾನೆ. ಸೌಂದರ್ಯದ ಖನಿಯಾದ ಕವೇರ ಪುತ್ರಿ ಕಾವೇರಿಯನ್ನು ಅಗಸ್ತ್ಯಋಷಿಯು ಮೋಹಿಸಿ ವಿವಾಹವಾದರೂ ತೀರ್ಥ ರೂಪಿನಿಂದ ಬ್ರಹ್ಮಕುಂಡಿಕೆಯಲ್ಲಿ ಸುಪ್ತ ಚೈತನ್ಯವಾಗಿ ನೆಲೆಸಿದ್ದ ಶ್ರೀ ಕಾವೇರಿಯು ಸಂದರ್ಭ ಸಿಕ್ಕಿದ ಕೂಡಲೇ ಚೈತನ್ಯ ಶಕ್ತಿಯಾಗಿ ನದೀ ರೂಪದಲ್ಲಿ ಹೊರಹೊಮ್ಮಿ ಲೋಕ ಕಲ್ಯಾಣವೆಸಗುತ್ತಾಳೆ. ಇದು ಶ್ರೀಕಾವೇರಿ ಪುರಾಣದ ವಸ್ತು.

ಕೊಡವ ಭಾಷೆಯಲ್ಲಿ ಕಂದ ಪದ್ಯಗಳನ್ನು ರಚನೆ ಮಾಡಿದ 'ಅಪ್ಪಚ್ಚು ಕವಿ'ಯ ಒಂದು ಸ್ತೋತ್ರ ಈ ಕೆಳಗಿನಂತಿದೆ.

ಕಮಲೆಯೇ ಕಪಿಲೆ ಕಲ್ಯಾಣಿಯೇ ।
ಕುಮುದಾ ದೇವಿ ಕೌಬೇರಿ ಕಾವೇರಿಯೆ ।
ವಿಮಲೆಯೆ ವಿಶ್ವೇಶ್ವರಿಯೆ ।
ಭ್ರಮರಾಂಬಿಕೆ ಪೊಲತ್ ಈ ಜಗತ್‌ನ ಸುಗತ್ ॥

೧೯೨೪ ರಲ್ಲಿ ನಡಿಕೇರಿಯಂಡ ಚಿಣ್ಣಪ್ಪನವರು ಕೊಡಗಿನ ಜನಪದ, ಸಂಸ್ಕೃತಿ, ಸಾಮಾಜಿಕ ಜೀವನ, ಇತಿಹಾಸವನ್ನು ಒಳಗೊಂಡ 'ಪಟ್ಟೋಲೆ ಪಳಮೆ' ಎಂಬ ಜಾನಪದ ಕೃತಿ ಪ್ರಕಟಿಸಿದ್ದು, ಈ ಕೃತಿ ಕೊಡವ ಜಾನಪದದ ಪ್ರಥಮ ಗ್ರಂಥವಾಗಿ ಹೊರಹೊಮ್ಮಿದೆ. ಇದು ಕೊಡವ ಭಾಷೆಯಲ್ಲಿ ರಚನೆಗೊಂಡಿದ್ದು ಕೊಡಗಿನ ಜಾನಪದ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಲು ಪ್ರವೇಶ ಮಾಡುವವರಿಗೆ ಪ್ರಥಮವೂ ಅತ್ಯಂತ ಅಮೂಲ್ಯವೂ ಆದ ಆಕರ. ಇದರಲ್ಲಿ ಬರುವ ಕೊಡಗು ವಿವರಣೆ, ಕೊಡಗರ ಪದ್ಧತಿ, ದೇವತೆಯ ಪಾಟ್, ಕೇಳಿಪೋನೆಯಂಡ ಪಾಟ್, ಮೃಗಗಳ ಮತ್ತು ಪಕ್ಷಿಗಳ ಕೂಗುಗಳಿಗೆ ಇರುವ ಹೆಸರುಗಳು ಇತ್ಯಾದಿಗಳೆಲ್ಲವೂ ಕೊಡಗು ಭಾಷೆಯಲ್ಲಿದ್ದು, ತನಗೆ ಲಭ್ಯವಾದಷ್ಟು ಮಾಹಿತಿಯನ್ನು ಮಾತ್ರ ಒಳಗೊಂಡಿದೆ. ಅಷ್ಟೇ ಅಲ್ಲದೆ ಅಲ್ಲಿಯ ಆಡಳಿತ ಭಾಷೆಯಾದ ಕನ್ನಡ ಹೆಚ್ಚು ಜನರ ವ್ಯವಹಾರಿಕ ಭಾಷೆಯಾಗಿದ್ದು, ಈ ಕೃತಿ ಕನ್ನಡ ಲಿಪಿಯಲ್ಲಿದ್ದರೂ ವಿಷಯಗಳು ಹೆಚ್ಚಾಗಿ ಕೊಡವ ಭಾಷೆಯಲ್ಲಿರುವುದರಿಂದ ಓದಬಹುದಷ್ಟೇ ಹೊರತು ಹೆಚ್ಚು ಜನರಿಗೆ ಎಟುಕುವುದಿಲ್ಲ.

ಬಿ.ಡಿ. ಗಣಪತಿಯ ಅವರ 'ಕೊಡವರು' ಕೃತಿಯಲ್ಲಿ ಕೊಡವರು–ಅವರ ಸಂಸ್ಕೃತಿ, ಪದ್ಧತಿಗಳನ್ನು ಕುರಿತು ವಿಚಾರಗಳು ಬರುತ್ತವೆ. ಈ ಪುಸ್ತಕವು ಕೊಡವ ಸಮುದಾಯಕ್ಕೆ ಒಂದು ಕೈಪಿಡಿಯಂತಿದೆ. ಒಂದು ಸಮಾಜವನ್ನು ಕಟ್ಟಿಬೆಳೆಸಲು ನಮ್ಮ ಹಿರಿಯರು ತೆಗೆದಕೊಂಡ ಶ್ರಮವನ್ನು ನೆನೆದು ಆ ಪರಂಪರೆಗೆ ನಾವು ಸೇರಿದವರು ಎಂಬ ಹೆಮ್ಮೆಯನ್ನು ತಳೆದು ಅವರು ಬಿಟ್ಟುಹೋದ ವಿಶಿಷ್ಟ ಪರಂಪರೆಗೆ ನಾವು ಅರ್ಹರೆಂಬುವುದನ್ನು ಕಾರ್ಯತಹ ತೋರಿಸಿ, ನಮಗೆ ಬಳುವಳಿಯಾಗಿ ಬಂದಿರುವ ಆ ಘನ ಸಂಪ್ರದಾಯ ಸಂಸ್ಕೃತಿಗಳಿಗೆ ಕಳಂಕ ಹಚ್ಚದೆ ಅದೇ ಪವಿತ್ರ ರೂಪದಲ್ಲಿ ನಮ್ಮ ಮುಂದಿನ ಪೀಳಿಗೆಗೆ ಉಳಿಸಿಕೊಡುವುದು ಅವಶ್ಯಕ ಮಾತ್ರವಲ್ಲ. ಅದು ನಮ್ಮ ಆದ್ಯಕರ್ತವ್ಯವೆಂದು ತಿಳಿಯಬೇಕೆಂದು ಈ ಕೃತಿಯನ್ನೋದಿದ ಯಾರಿಗಾದರೂ ಅನಿಸದೆ ಇರಲಾರದು.

ಎಂ.ಜಿ. ನಾಗರಾಜ್‌ರವರು ಕೊಡಗಿನ ಭೌಗೋಳಿಕ ಪರಿಸರದಲ್ಲಿ ನೆಲೆಸಿದ್ದ ಮೂಲ ನಿವಾಸಿಗಳಲ್ಲಿ ಒಬ್ಬರಾದ 'ಕೆಂಬಟ್ಟಿ ಹೊಲೆಯರ ಸಂಸ್ಕೃತಿ'ಯನ್ನು ಕುರಿತು ಬರೆದಿರುವ ಕೃತಿಯನ್ನು ಕನ್ನಡ ಸಾಹಿತ್ಯ ಅಕಾಡೆಮಿಯ ಆಶಯದಂತೆ ಹೊರತಂದಿರುವ ಉಪಸಂಸ್ಕೃತಿ ಅಧ್ಯಯನ ಮಾಲೆಗೆ ರಚಿಸಿಕೊಟ್ಟಿದ್ದಾರೆ. ಇದರಲ್ಲಿ ಕೊಡವರ ಸಂಸ್ಕೃತಿಯ ದಟ್ಟ ಪ್ರಭಾವವು ಕೆಂಬಟ್ಟಿಗಳ ಮೇಲೆ ಆಗಿರುವುದನ್ನು ಸ್ಪಷ್ಟಪಡಿಸಿದ್ದಾರೆ. ಇದೆಯಾದರೂ ಪರಿಪೂರ್ಣ ಕೊಡವ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದಿಲ್ಲ. ಮದುವೆ, ಹಬ್ಬ, ಜನನ, ಮರಣ ಇತ್ಯಾದಿ ಎಲ್ಲಾ ಆಚರಣೆಗಳಲ್ಲಿ ಕೊಡವ ಸಂಸ್ಕೃತಿಯ ದಟ್ಟ ಪ್ರಭಾವ ಕೆಂಬಟ್ಟಿ ಹೊಲೆಯರ ಸಂಸ್ಕೃತಿಯಲ್ಲಿ ಮಿಲನವಾಗಿರುವುದು ಕಂಡುಬರುತ್ತದೆ.

ಕೋರನ ಸರಸ್ವತಿಪ್ರಕಾಶ್ 'ಕೊಡಗು ಗೌಡ ಸಮುದಾಯ' ಕುರಿತು ಸಂಶೋಧನೆ ನಡೆಸಿ ಒಂದು ಉತ್ತಮ ಕೃತಿಯನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಗೌಡ ಸಮುದಾಯದ ಭೌಗೋಳಿಕ ನೆಲೆಯನ್ನು ಗುರುತಿಸುವುದರೊಂದಿಗೆ ಸಮುದಾಯದ ಜೀವನಾವರ್ತನ

ಮತ್ತು ವಾರ್ಷಿಕಾವರ್ತನದ ಕ್ರಿಯೆಗಳ ಅಧ್ಯಯನ ನಡೆಸಿದ್ದಾರೆ. ಜಾನಪದಕ್ಕೆ ಪೂರಕ ಮಾಹಿತಿಗಳನ್ನು ಶೋಧಿಸಿದ್ದಾರೆ. ಕೊಡಗಿನ ಸಾಂಸ್ಕೃತಿಕ ಸಂದರ್ಭದಲ್ಲಿ ಗೌಡ ಸಮುದಾಯದೊಂದಿಗೆ ಇತರ ಪ್ರಮುಖ ಸಮುದಾಯಗಳ ಪರಸ್ಪರ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಗುರುತಿಸಿದ್ದಾರೆ.

ಎಂ.ಪಿ.ರೇಖಾ ಅವರು 'ಆಧುನಿಕ ಕೊಡವ ಸಾಹಿತ್ಯ' ಎಂಬ ವಿಷಯವನ್ನು ಕುರಿತು ಸಂಶೋಧನೆ ನಡೆಸಿ, ಪುಸ್ತಕ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಆಧುನಿಕ ಕೊಡವ ಸಾಹಿತ್ಯದ ಜೊತೆಗೆ ಅವರ ಸಾಮಾಜಿಕ ಬದಲಾವಣೆಯನ್ನು ಗಮನಿಸಿ ಸಾಂಸ್ಕೃತಿಕ ವ್ಯವಸ್ಥೆಯನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಕೊಡವರ ಪಾಟ್ (ಹಾಡು) ಕಥೆ, ಕಾದಂಬರಿ, ನಾಟಕ ಮುಂತಾದ ಪ್ರಕಾರಗಳಲ್ಲಿ ಬಂದಿರುವ ಸಾಹಿತ್ಯವನ್ನು ಅಧ್ಯಯನ ಮಾಡಿ ಅದರಲ್ಲಿ ಕೊಡವ ಆಧುನಿಕ ಸಮಾಜದ ತಲ್ಲಣಗಳು, ಕನ್ನಡ ಸಾಹಿತ್ಯದಲ್ಲಿ ಕಾವೇರಿ ನಾಡನ್ನು ಕುರಿತು ವಿವೇಚನೆಯ ವಿಶ್ಲೇಷಣೆ ಇದೆ.

ಪಿ.ಎನ್.ಹರೀಶ್‌ರವರ ಕೊಡಗಿನ ಎರವರ ಸಂಸ್ಕೃತಿಯಲ್ಲಿ ಹಾಗೂ ಡಿ.ಬಿ.ರಾಮಚಂದ್ರಾಚಾರ್‌ರವರ ಕುಡಿಯರ ಸಂಸ್ಕೃತಿಯಲ್ಲಿಯೂ ಕೊಡಗಿನ ಸಾಂಸ್ಕೃತಿಕ ನೆಲೆಗಳು ರೂಪುಗೊಂಡಿವೆ.

ಇತರ ಕೆಲವು ಕೃತಿಗಳಲ್ಲೂ ಕೊಡವರ ಸಂಸ್ಕೃತಿ ಕುರಿತ ವಿವರಗಳು ಬರುತ್ತವೆ. ಪಳಂಗಂಡ ಚೆಂಗಪ್ಪನವರು 'ಕೊಡವ ಪದ್ಧತಿ' ಕೃತಿಯಲ್ಲಿ ಮಂಗಲ-ಚಾವು ಪದ್ಧತಿ (ಸಾವು ಪದ್ಧತಿ), ನಮ್ಮೆನಾಳ್(ಹಬ್ಬಹರಿದಿನ) ನಡ್‌ಪು ಇತ್ಯಾದಿಗಳನ್ನು ಚರ್ಚಿಸಿದ್ದಾರೆ. ಇದು ಕೊಡವ ಭಾಷೆಯಲ್ಲಿ ರಚನೆಗೊಂಡಿದ್ದು ಕೊಡಗು ಸಂಸ್ಕೃತಿಯನ್ನು ಕುರಿತು ಪರಿಚಯ ಮಾಡುತ್ತದೆ. ಐತಿಚೆಂಡ ರಮೇಶ್ ಉತ್ತಪ್ಪ ಅವರ 'ಕೊಡವ ಸಾಂಸ್ಕೃತಿಕ ಅಧ್ಯಯನ' ಕೃತಿಯು ಮೂಲಕೊಡವ ಆಚಾರ ಸಂಪ್ರದಾಯಗಳ ಮೇಲೆ ಬೆಳಕು ಚೆಲ್ಲುವಂತಿದ್ದು, ಜನನದಿಂದ ವಿವಾಹದವರೆಗಿನ ಸಂಪ್ರದಾಯಗಳನ್ನಷ್ಟೇ ದಾಖಲಿಸಲಾಗಿದೆ.

ಕೊಡಗಿನ ಸಾಹಿತ್ಯಕ್ಕೆ ಐ.ಮಾ. ಮುತ್ತಣ್ಣನವರ ಕೊಡುಗೆ ಅಪಾರವಾದದ್ದು. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳೆರಡರಲ್ಲಿಯೂ ಸಾಹಿತ್ಯ ಕೃಷಿಯನ್ನು ಮಾಡಿದ ಮುತ್ತಣ್ಣನವರು ಕೊಡವ ಸಮುದಾಯದ ಪ್ರತಿಭಾವಂತ ಲೇಖಕರು. 'A tiny model state of south india' 'A history of Karnataka' ಕೊಡವ ಭಾಷೆಯ 'ಪೂಮಾಲೆ' ಕೃತಿಗಳು ಪ್ರಸಿದ್ಧವಾಗಿವೆ. "Tippu sultan X-rayed" ಮಣಿಮಾಲೆ, 'Coorg memojr' ಕೊಡವ-ಕನ್ನಡ ನಿಘಂಟನ್ನು ರಚಿಸಿದ್ದಾರೆ. ಇವರ "ಕೊಂಕು ಬೊಮ್ಮನ ಸಗ್ಗ" ಕವನದ ತುಣುಕು ಈ ರೀತಿ ಇದೆ. '

"ತಾನ್ ಪೊತ್ತ ಮುತ್ತು ನುಡಿಗಳ ಚಿತ್ತದೆದಿಂದೆತ್ತಿ
ಮುತ್ತಣ್ಣ ನದನಿತ್ತ ಹೋ ಕೊಂಕು ಬೊಮ್ಮ!"

ಕೊಡವರ ಬಗ್ಗೆ ವಿಶೇಷ ಅಧ್ಯಯನ ನಡೆಸಿರುವ ಬಿ.ಡಿ. ಗಣಪತಿಯವರು ಕೊಡವ ಭಾಷೆಯ ಹಾಡುಗಳು, ನಾಟಕ, ಪ್ರಬಂಧಗಳ ಸಂಗ್ರಹವಾದ 'ಕುತ್ತಂಬೊಳಿಚ'ಎಂಬ ಗ್ರಂಥವನ್ನು 'ನಂಗಕೊಡವ' 'ಕೊಡವ-ಒರ್ ಚಿತ್ರಕತೆ',

'ಕೊಡಗು ಮತ್ತು ಕೊಡವರು 'Kodavas : their customs and culture' ಮುಂತಾದ ಕೃತಿಗಳಲ್ಲಿ ಕೊಡವ ಸಮುದಾಯದ ಸಾಂಸ್ಕೃತಿಕ ಜೀವನವನ್ನು ಪರಿಚಯಿಸಿದ್ದಾರೆ. ಎಂ.ಪಿ.ಕಾರ್ಯಪ್ಪನವರು 'Coorg and their origins', ಕೆ.ಪಿ.ಮುತ್ತಣ್ಣನವರ 'ಜಗತ್ತಿಗೊಂದೇ ಕೊಡಗು' ಎಂಬ ಕೃತಿಗಳು ಕೊಡಗಿನ ಬಗ್ಗೆ ಬೆಳಕು ಚೆಲ್ಲುತ್ತವೆ.

ಚೇಂದಂಡ ದೇಚಮ್ಮಕರುಂಬಯ್ಯನವರು 'ಕೊಡವ ಗಾದೆ ಪಿಂಞ ಪಳಂಜೊಲ್ಲ್' ಕೃತಿ, ಪುಗ್ಗೆರ ಕರುಂಬಯ್ಯನವರ 'ಉಮ್ಮತಾಟ್ ಪಾಟ್' ಚೊಕಂಡ ಅಪ್ಪಯ್ಯನವರ 'ಹುತ್ತರಿಹಾಡು' ಕೊಡಗಿನ ಸಂಸ್ಕೃತಿ, ಆಚಾರ ವಿಚಾರದ ಮೇಲೆ ಬೆಳಕು ಚೆಲ್ಲುವ ಕೃತಿಗಳಾಗಿವೆ. ಶ್ರೀ ಯು.ಎಂ.ಪೂವಯ್ಯನವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿರುವ 'ಬ್ರಹ್ಮಗಿರಿ ವಾರಪತ್ರಿಕೆ' ಹಲವಾರು ಬರಹಗಾರರನ್ನು ಸೃಷ್ಟಿಸಿದೆ. ಪೂಮಾಲೆ, ತೂಕ್‌ಬೊಳಕ್, ವಾರಪತ್ರಿಕೆಗಳು, ದೂರದರ್ಶನದಲ್ಲಿ ಪ್ರಸಾರವಾಗುವ ಐನ್‌ಮನೆ, ಜಮ್ಮಭೂಮಿ ಎಂಬ ಸಾಹಿತ್ಯಾತ್ಮಕ ಧಾರವಾಹಿಗಳು, ಮಡಿಕೇರಿಯ ಆಕಾಶವಾಣಿಯಲ್ಲಿ ಪ್ರಸಾರವಾಗುವ 'ಸುದ್ದಿಸಮಾಚಾರ, 'ಕೊಡವ ಸಂಸ್ಕೃತಿ' ಎಂಬ ಕಾರ್ಯಕ್ರಮಗಳು ಕೊಡವರ ಆಚಾರವಿಚಾರಗಳನ್ನು ಕುರಿತು ಪರಿಚಯಿಸುವಲ್ಲಿ ಸಫಲವಾಗಿವೆ.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಶ್ರೀ ಅಡ್ಡಂಡ ಸಿ. ಕಾರ್ಯಪ್ಪನವರು ನಾಟಕ ಕ್ಷೇತ್ರಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ. 'ಚೌರೀರ ಅಪ್ಪಂಡಸುತ್ತ', 'ದಿವಾನ್ ಬೊಪಣ್ಣ', ಮಿಲ್ಟ್ರಿಕಾರ','ಅಮರ ಕವಿ ಅಪ್ಪಚ್ಚ', 'ಸೊಪನ'(ಕನಸು)ಮುಂತಾದ ನಾಟಕಗಳನ್ನು ಪ್ರಕಟಿಸಿದ್ದಾರೆ. ಉಳ್ಳಿಯಡ ಡಾಟಿ ಪೂವಯ್ಯನವರ 'ಮರ್‌ಪು', 'ಜೈಹಿಂದ್', ಮಂಡಿರ ಜಯ ಅಪ್ಪಣನವರ 'ಮೂಂದ್ ಚಾಲ್', 'ಪೊಗೆ', 'ಕಲ್ಯಾಟಜ್ಜಪ್ಪ', 'ನಾಗೇಶ್ ಕಾಲೂರ್' ಅವರ 'ಬಾಳು ಬಂಡಾಟ', 'ಮೂಡಿ ಬೋಂಡು ಮೂಡಿ' ಬಿದ್ದಂಡ ಎಸ್ ಚಟ್ಟಿಯಪ್ಪನವರ 'ಬಲ್ಯರಿಕೆ', 'ಉಪ್ಪುತಿಂದವ ನೀರ್ ಕುಡಿಪ', 'ಜೇಡಭಲೆ' ಮುಂತಾದ ನಾಟಕಗಳಲ್ಲದೆ ಇನ್ನೂ ಹಲವಾರು ಕೊಡಗಿನ ಸಮಾಜ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ನಾಟಕಗಳನ್ನು ರಚಿಸಿದ್ದಾರೆ.

ಉಳ್ಳಿಯಡ ಡಾಟಿ ಪೂವಯ್ಯನವರ 'ತೇಂದುಳಿ', 'ಕವನಪೊಳದ್', ಅಜ್ಜಿನಿಕಂಡ ಮಹೇಶ ನಾಚಯ್ಯನವರ 'ಏಳೆಸಳ್'. ಪ್ರವೀಣ್ ಚಂಗಪ್ಪನವರ 'ಪುಣ್ಯ ಕೊಡಗ್'. ಬಾಚರಣಿಯಂಡ ಅಪ್ಪಣ್ಣ, ರಾಣು ಅಪ್ಪಣ್ಣನವರ 'ಪಾಂಗೋಳ', ರೇಖಾ ಪ್ರಕಾಶ್‌ರವರ 'ಚಿಗರ್' ಮುಂತಾದ ಕೊಡವ ಕವನ ಸಂಕಲನಗಳು ಪ್ರಕಟಗೊಂಡಿವೆ. ವಿ.ಎಸ್.ರಾವಂಂಕಂಞಷಂಗ ಅವರು ಕೊಡವ ಭಾಷೆಯಲ್ಲಿ ಕಾವೇರಿ ಮಹಾತ್ಮ್ಯೆ' ಎಂಬ ಷಟ್ಪದಿ ಕಾವ್ಯ ಬರೆದಿದ್ದಾರೆ. ಕೊಡಗಿನ ಕೊಲೆಕಲ್ಲುಗಳು, ದೇವರಕಾಡು, ಪನ್ಯಭೂಮಿ ಕೃತಿಗಳನ್ನು ಎಂ.ಜಿ.ನಾಗರಾಜ್ ಅವರು ಕೊಡವ ಭಾಷೆಗೆ ಅನುವಾದಿಸಿ, ಬ್ರಹ್ಮಗಿರಿ ಹಾಗೂ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯಿಂದ ಪ್ರಕಟಿಸಿದ್ದಾರೆ.

ಕೊಡವರ ಪ್ರಮುಖ ಕಥಾಸಂಕಲನಗಳು : ಕೂತಂಡ ಪಾರ್ವತಿಯವರ 'ಕೊಡಗಿನ ಕಥೆ', 'ವಿಧಿವಿಲಾಸ', 'ಬುಗಿಲುಗೊಂಡವರು', ಐತಿಚಂಡ ರಮೇಶ್ ಉತ್ತಪ್ಪನವರ 'ಉಮ್ಮತ್‌ಪೂವ್', ಸವಿತ ಪೆಮ್ಮಯ್ಯನವರ 'ಚುಪ್ಪಿಕೋರ್‌ಪೆಪ್ಪಿ', 'ಕಥೆಪೋಳಿಯ', ಬಾಚರಣಿಯಂಡ ಅಪ್ಪಣ್ಣನವರ 'ಕಯಿಪ್ ಮೊವ್‌ಪ್', ಬೆಂಜಾಂಡ ತಂಗಚ್ಚಿ ಕಾರ್ಯನಪ್ಪನವರ 'ತಂಗಚ್ಚೆರ ಕಥೆಗೂಡ್', ಮುಂಡೇಪಂಡ ಗೀತಾ ಮಂದಣ್ಣನವರ 'ಪುಳಿಚೊಳೆ', ಮಡೆಯಂಡ ರವಿ ಸೋಮಯ್ಯನವರ 'ತೆಳ್‌ನೀರ್'ಮುಂತಾದವು ಕೊಡವ ಸಾಹಿತ್ಯದ ಪ್ರಮುಖ ಕಥಾ ಸಂಕಲನಗಳಾಗಿ ಹೊರಹೊಮ್ಮಿವೆ.

ಅಪ್ಪುಮಣಿಯಂಡ ತುಳಸಿ ಕಾರ್ಯಪ್ಪನವರ 'ಕನ್ನಿಕಂಬ', ಡಾಟಿಪೂವಯ್ಯನವರ 'ಒಯಿಪತ್ ಮಲ್ಲಿಗೆ', 'ಜೆಳ್ಳ', 'ನಾಡ್‌ಲ್ ನಾಳ್', 'ಭಾಷೆತಾ', ಕಾಡ್ಯಮಾಡಾ ರೀಟಾ ಬೋಪಯ್ಯನವರ 'ಬಾಡ್‌ನಪೂವ್', 'ಒರ್ ಕೊಲೆರಸುತ್ತ್', ಕುಪದಿರ ಸುಂದರಿ ಮಾಚಯ್ಯನವರ 'ಅತ್ತಿಪಣ್ಣ್', 'ಅಮ್ಮವ್ವ ತಾಯಿ', ಅವಮಾಡ್‌ನದ್‌ಸೆರಿಯಾ', ಇನ್ನೂ ಮುಂತಾದ ಗ್ರಂಥಗಳು ಕೊಡವ ಭಾಷೆಯಲ್ಲಿ ಪ್ರಕಟಗೊಂಡಿವೆ.

ಹೀಗೆ ಕೊಡವ ಸಾಹಿತ್ಯ ಹಲವು ಪ್ರಕಾರಗಳಲ್ಲಿ ಪ್ರಕಟಗೊಂಡಿದ್ದು, ಅಲ್ಲಿಯ ಆಚಾರವಿಚಾರಗಳನ್ನು ಕಟ್ಟಿಕೊಡುವಲ್ಲಿ ಸಫಲವಾಗಿವೆ ಎನಿಸಿದರೂ ಕೊಡಗಿನದೇ ಆದ ಸಂಸ್ಕಾರದ ವೈವಿಧ್ಯತೆಗಳನ್ನು, ಆಳ ಅಗಲಗಳನ್ನು, ಅಲ್ಲಿಯ ಮಹತ್ವಗಳನ್ನು, ಸಮಗ್ರವಾಗಿ ಕಟ್ಟಿಕೊಡುವಲ್ಲಿ ಈ ಕೃತಿಗಳು ಪರಿಪೂರ್ಣತೆಯನ್ನು ಸಾಧಿಸಿಲ್ಲವೆಂದೇ ಹೇಳಬಹುದು. ಈ ಸಾಹಿತಿಗಳ ಉದ್ದೇಶವು ಅದಾಗಿರದೆ ಆ ಕುರಿತು ಆನುಷಂಗಿಕವಾಗಿ ಬಂದಿರಬಹುದು. ಆದರೂ ಈ ಸಾಹಿತ್ಯವು ಕೊಡವ ಸಮುದಾಯದ ಕೌಟುಂಬಿಕ ಸಮಸ್ಯೆಯನ್ನು, ಸಾಮಾಜಿಕ ಸಮಸ್ಯೆಗಳನ್ನು, ಆಧುನಿಕತೆಯ ಬದಲಾವಣೆಗಳನ್ನು, ನಾಡುನುಡಿಗಳ ಸಂಬಂಧಗಳನ್ನು, ಗಟ್ಟಿಗೊಳಿಸಲು ಸಹಕಾರಿಯಾಗಿ ಕೊಡವರಿಗೆ ನ್ಯಾಯ ದೊರೆಕಿಸುವತ್ತ ಸಾಗಿದೆ.

ಕೊಡವ ಭಾಷೆ ಮತ್ತು ಕನ್ನಡ ಭಾಷೆಗೆ ಅನ್ಯೋನ್ಯ ಸಂಬಂಧವಿದೆ. ಕೊಡವರ ವ್ಯಾವಹಾರಿಕ ಭಾಷೆ ಕನ್ನಡವಾಗಿದೆ. ಗಂಗರಸರು, ಕೊಂಗಳ್ವರು, ಚೆಂಗಾಳ್ವರು ಹಾಲೇರಿ ಅರಸರು ಕನ್ನಡವನ್ನೇ ಬಳಸುತ್ತಿದ್ದರು. ಚೆಂಗಾಳ್ವರ ನಂಜರಾಜರ ಮಗನ ಆಳ್ವಿಕೆಯಲ್ಲಿ ದೇವಪ್ಪನೆಂಬ ಕವಿ 'ರಾಮವಿಜಯ'ವೆಂಬ ಕಾವ್ಯ ರಚಿಸಿದ್ದಾನೆ. ದೊಡ್ಡವೀರರಾಜೇಂದ್ರನು ೧೮೦೭ರಲ್ಲಿ 'ಕೊಡಗು ರಾಜೇಂದ್ರ ನಾಮೆ'ಯನ್ನು ಬರೆಸಿದ್ದಾನೆ.

ಎದುರ್ಕಳ ಶಂಕರನಾರಾಯಣಭಟ್ಟರ 'ಶ್ರೀಕಾವೇರಿ ವೈಭವ' ಮಹಾಕೃತಿಯು ಮಹಾಮಹಿಮಳಾಗಿ ಹರಿಯುವ ಕಾವೇರಿ ಉಗಮವನ್ನು, ಸಂಗಮವನ್ನು ಪುರಾಣದ ಕಥೆಯನ್ನು ವಿಶ್ವ ಸಾಹಿತ್ಯಕ್ಕೆ ಅರ್ಪಿಸಿದ್ದಾರೆ. ಈ ಕೃತಿಯಲ್ಲಿ ಕಾವೇರಿ ತೀರದಲ್ಲಿ ಬೆಳದು ಬಂದ ನಾಗರೀಕತೆ ಮತ್ತು ಆ ಸ್ಥಳದ ವೈಶಿಷ್ಟ್ಯತೆಯನ್ನು ನಿರೂಪಿಸಿದ್ದಾರೆ.

ಟಿ.ಪಿ.ನಾರಾಯಣಚಾರ್ಯರವರು ಸಂಸ್ಕೃತದ 'ಶ್ರೀ ಸ್ಕಂದ ಪುರಾಣಾಂತರ್ಗತ' ಎಂಬ ಕೃತಿಯನ್ನು ಕನ್ನಡದಲ್ಲಿ 'ಶ್ರೀಕಾವೇರಿ ಮಹಾತ್ಮೆ' ಎಂಬ ಹೆಸರಿನಲ್ಲಿ

ಪ್ರಕಟಿಸಿದ್ದಾರೆ. ಈ ಪ್ರಬಂಧದ ಐದನೆಯ ಅಧ್ಯಾಯದಲ್ಲಿ ಕಾವೇರಿ ಮಹಾತ್ಮೆ ಕಥೆಯ ಆಶಯವನ್ನು ನೀಡಲಾಗಿದೆ.

ಡಿ.ಎನ್.ಕೃಷ್ಣಯ್ಯನವರು 'ಕೊಡಗಿನ ಇತಿಹಾಸ' ಎಂಬ ಗ್ರಂಥದಲ್ಲಿ ಕೊಡಗಿನ ಚರಿತ್ರೆಯನ್ನು ರಾಜಕೀಯವಾಗಿ ಸಾಂಸ್ಕೃತಿಕವಾಗಿ ಸಂಶೋಧನಾತ್ಮಕವಾಗಿ ದಾಖಲಿಸಿದ್ದಾರೆ. 'ಪೊಮ್ಮಾಲೆ ಕೊಡುಮಲೆ'ಗ್ರಂಥದಲ್ಲಿ ಕೊಡಗಿನ ಭೂ ಸ್ವರೂಪವನ್ನು 'ಚಿನ್ನದಹಾರ'ದಂತಿದೆ ಎಂದು ಬಣ್ಣಿಸಿದ್ದಾರೆ. ವೀರರಾಜೇಂದ್ರನು ಬರೆಸಿದ 'ರಾಜೇಂದ್ರನಾಮೆ' ಗ್ರಂಥವನ್ನು ಡಿ.ಎನ್.ಕೃಷ್ಣಯ್ಯ ಮತ್ತು ಎಂ.ಎಸ್ ಸುಬ್ಬರಾಯರು ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ. ಕೃಷ್ಣಯ್ಯನವರು 'ಸುಂದರನಾಡು' ಕೊಡಗು ಎಂಬ ಕೃತಿಯಲ್ಲಿ ಕೊಡಗಿನ ರಮಣೀಯತೆಯನ್ನು ಪರಿಚಯಿಸಿದ್ದಾರೆ.

ಪಿ.ಎಸ್.ರಾಮಾನುಜಂರವರು 'ಕೊಡವರು' ಎಂಬ ಕೃತಿಯಲ್ಲಿ ಕೊಡವರ ಮೂಲದ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ. ಶ್ರೀ.ಕೆ.ಎನ್ ಸಚ್ಚಿದಾನಂದಯ್ಯನವರು 'ಕೊಡಗ ನಾನು ಕೊಡಗನಾಡು'ಎಂಬ ಕೃತಿಯನ್ನು ವಿ.ಎಸ್.ರಾಮಕೃಷ್ಣ ಅವರು 'ಬೆಡಗಿನ ಕೊಡಗು' ಎಂಬ ಕೊಡಗು ಕೃತಿಯನ್ನು ಬಿ.ಜಿ. ಕಂಠಿಯವರು ಕೊಡಗು ಮತ್ತು ಹಾಲೇರಿ ಅರಸರನ್ನು ಕುರಿತು 'ದಿ ಕೂರ್ಗ್ ಇಟ್ಸ್ ರೂಲರ್ಸ್' ಎಂಬ ಕೃತಿಯನ್ನು ಎಂ.ಎನ್.ಶ್ರೀನಿವಾಸ ಅವರು 'ರಿಲಿಜಿಯನ್ ಅಂಡ್ ಸೊಸೈಟಿ ಅಮಾಂಗ್ ದಿ ಕೂರ್ಗ್ ಆಫ್ ಸೌತ್ ಇಂಡಿಯಾ' ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ತಂಬಂಡ ವಿಜಯ್‌ಪೂಣಚ್ಚರವರು 'ಕೊಡಗು ವಿವರಣೆ' 'ಪಳಮೆ' ಯನ್ನು ರೇಖಾ ವಸಂತ 'ಕೊಡವ ಆಧುನಿಕ ಸಾಹಿತ್ಯ', 'ಕೊಡವ ರಂಗ ಭೂಮಿ' ಕೃತಿಗಳನ್ನು ಪ್ರಕಟಿಸಿದ್ದಾರೆ. ಭಾರತೀಸುತ ಕೊಡಗಿನಗೌರಮ್ಮರಂತಹ ಸಾಹಿತಿಗಳು ಕೊಡಗಿನ ಪ್ರಾದೇಶಿಕ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ರಚಿಸಿ ಕೊಡಗಿನ ಕೀರ್ತಿ ಬೆಳಗಿದ್ದಾರೆ. ವಿದೇಶಿ ವಿದ್ವಾಂಸರಾದ ರಾಬರ್ಟ್ ಕಾಲ್ಡ್‌ವೆಲ್, ಲೀವಿಸ್ ರೈಸ್, ಜಾರ್ಜ ರಿಕ್ಟರ್, ರೆವರೆಂಡ್ ಗ್ರೇಟರ್, ಮೋಗ್ಲಿಂಗ್, ಕಿಟ್ಟೆಲ್, ರಾಬರ್ಟ್ ಕೂಲ್ ಮೊದಲಾದವರು ಕೊಡವ ಭಾಷೆಯ ಬಗ್ಗೆ ಕ್ಷೇತ್ರ ಕಾರ್ಯಮಾಡಿ ಸಾಹಿತ್ಯವನ್ನು ರಚಿಸಿ ವಿಶ್ವಮಟ್ಟದಲ್ಲಿ ಗುರುತಿಸುವಂತೆ ಮಾಡಿದ್ದಾರೆ.

ಕೊಡಗಿನ ನಿಸರ್ಗ ರಮಣೀಯತೆ ಕವಿಯ ಪ್ರೇರಕ ವಸ್ತು. ಕವಿ ಶಿಷ್ಯ ಪಂಜೆ ಮಂಗೇಶರಾಯರು 'ಹುತ್ತರಿ ಹಾಡಿ' ನಲ್ಲಿ ಕಾವೇರಿಯನ್ನು ಮಿಂಚು ಹೊಳೆಯುವಂತೆ ಹೊಳೆಯುತ್ತಾಳೆಂದು ವರ್ಣಿಸಿದ್ದಾರೆ.

"ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೋ,
ಎಲ್ಲಿ ಮೋಹನ ಗಿರಿಯ ಬೆಡಗಿನ ರೂಪಿನಿಂದಲಿ ನಿಂದಳೋ
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆವಳೊ
ಎಲ್ಲಿ ನೆಲವನ್ನು ತಣಿಸಿ, ಜನಮನ ಹೊಲದ ಕಳೆ ಕಳೆವಳೋ,
ಸವೆದು ಮೆದ್ದರು ಯಾರು ಪೂರ್ವದಿ ಹುಲಿಯ ಹಾಲಿನ ಮೇವನು,
ಕವಣೆ ತರಿಕಲ್ಲಾಟಕೆ ಸೆಳೆದರೋ ಹೆಬ್ಬಾವನು............
ಅಲ್ಲಿ ಆ ಕಡೆ ನೋಡಲಾ!

ಅಲ್ಲಿ ಕೊಡಗರ ನಾಡಲಾ!
ಅಲ್ಲಿ ಕೊಡವರ ಬೀಡಲಾ!
ನಮ್ಮ ಕೊಡಗಿದು ಜಮ್ಮದು
ನಮ್ಮ ಕೊಡಗಿದು ನಮ್ಮದು
ನಮ್ಮೊಡಲ್ ಬಿಡಲಮ್ಮದು

ಕನ್ನಡ ನಾಡಿನ ದಾರ್ಶನಿಕ ಕವಿಯಾಗಿರುವ **ಡಾ.ಡಿ.ವಿ.ಜಿಯವರು** ತಮ್ಮ 'ನಿವೇದನ' ಎಂಬ ಕವನದಲ್ಲಿ ಕಾವೇರಿಯು ಶಿವನಸಮುದ್ರ ರೂಪುಗೊಳ್ಳಲು ಹೇಗೆ ಕಾರಣಳಾಗಿದ್ದಾಳೆಂದು ಮನೋಹರವಾಗಿ ವರ್ಣಿಸಿದ್ದಾರೆ.

ತಿರುಗುಲ್ಮಾವೃತ ಶೈಲಮೆ ।
ಮರಕತ ಶಿವಲಿಂಗಮೆನುತೆ ಕಾವೇರಿಯಂದಂ ॥
ಪರಿಚರಿಸಿ ಲೋಕಕೆಲ್ಲಂ ।
ದೊರೆಯಿಪ ತೀರ್ಥಾಂಬುವೆತ್ತೆ ಶಿವನ ಸಮುದ್ರಂ ॥

ಎಂದು ಕಾವೇರಿಯನ್ನು ಬಲಪ್ರದರ್ಶಿನಿ, ಮಹದೇವಿ, ರಾಜೇಶ್ವರಿ ಎಂದು ಹೊಗಳಿದ್ದಾರೆ.

ರಾಷ್ಟ್ರ ಕವಿ ಕುವೆಂಪು ಅವರು ತಮ್ಮ ಪೂವಮ್ಮ ಪದ್ಯದಲ್ಲಿ ಕೊಡಗಿನ ಚೆಲುವನ್ನು ಈ ರೀತಿ ಹೊಗಳಿದ್ದಾರೆ.

"ತುಂಬಿದ ಮೊಗ ಮೈ, ತುಳುಕುವ ಕಣ್ಣು
ಕೆನ್ನೆಗಳೆರಡೂ ಕಿತ್ತಳೆ ಹಣ್ಣು
ಕೊಡಗಿಗೆ ಕನ್ನಡಿ ನಿನ್ನಯ ಕೆನ್ನೆ
ದಿಟ ವೈಸಲೆ ಚೆನ್ನ"

ಕನ್ನಡ ಕಾವ್ಯ ಪ್ರಪಂಚಕ್ಕೆ ಹೊಸತನವನ್ನು ತಂದು ಕೊಟ್ಟ **ಜಿ.ಪಿ.ರಾಜರತ್ನಂ** ಅವರು

"ಭೂಮಿನ್ ತಬ್ಬಿದ್ ಮೋಡ್ ಇದ್ದಂಗೆ
ಬೆಳ್ಳಿ ಬಳಿದಿದ್ ರೋಡ್ ಇದ್ದಂಗೆ
ಲಂಗರ್ ಬಿದ್ದಿದ್ ಅಡಗಿದ್ದಂಗೆ

ಮಡಿಕೇರಿನ ಎದೆಗೊತ್ಕೊಂಡಂಗೆ ಎಂದು ಮಂಜಿನನಗರಿ ಮಡಿಕೇರಿಯನ್ನು ವರ್ಣಿಸಿದ್ದಾರೆ.

ಡಾ ಜಿ.ಎಸ್ ಶಿವರುದ್ರಪ್ಪನವರು

"ಕ್ರಿಸ್ತ ಬುದ್ಧರ ಕರುಣೆ ಎತ್ತಲೂ ಸುರಿದಂತೆ ಹೊಂಬಿಸಿಲು
ಗಾಂಧೀಜಿಯ ಪ್ರಾರ್ಥನೆಯ ಗಾಂಭೀರ್ಯ ಹೊಮ್ಮಲು ಘನಮೌನ
ಕಾವೇರಿ ಯುದ್ಧಕ್ಕೂ ದಿವ್ಯ ಶಕ್ತಿಯ ತವರು
ಈ ಬ್ರಹ್ಮಗಿರಿ ನೋಡು ಸಗ್ಗ ವೀಯೆಡೆ ಚೂರು"

ಎಂದು ತಮ್ಮ ಬ್ರಹ್ಮಗಿರಿ ಕವನದಲ್ಲಿ ಆಧ್ಯಾತ್ಮಿಕವಾಗಿ ಬಣ್ಣಿಸಿದ್ದಾರೆ.

ಕೊಡಗಿನ ಹಸುರಿನ ಸಿರಿಯು ನಿರಂತರವಾಗಿ ಬರಹಗಾರರ ಭಾವನೆಯಲ್ಲಿ, ಕಲ್ಪನೆಯಲ್ಲಿ ಮೂಡಿಬಂದಿರುವ ಪರಿ ಓದುಗರನ್ನು ಮಂತ್ರಮುಗ್ಧರನ್ನಾಗಿಸಿ ಕೊಡಗನ್ನು ಜೀವನದಲ್ಲಿ ಒಮ್ಮೆಯಾದರೂ ಸುತ್ತಬೇಕೆಂಬ ಹಂಬಲವನ್ನು ಹುಟ್ಟುಹಾಕುತ್ತಾ ಹೊಸ ಸಾಹಿತ್ಯ ರಚನೆಗೂ ಸ್ಫೂರ್ತಿಯಾಗಿದೆಯೆಂದರೆ ಅತಿಶಯೋಕ್ತಿಯೆನಲ್ಲ.

ಕೊಡವರ ಜನಪದ ಸಾಹಿತ್ಯ

ಕೊಡವರ ಜನಪದ ಹಾಡುಗಳು ವೈವಿಧ್ಯಮಯವಾಗಿವೆ. ಅವುಗಳಲ್ಲಿ ಕಾವೇರಿ ಮಹಾತ್ಮೆ, ಇಕ್ಕೇರಿ ಅರಸು ಮನೆತನ ಕುರಿತ ಹಾಡುಗಳು, ಆಂಗ್ಲರ ಆಳ್ವಿಕೆಯನ್ನು ಕುರಿತ ಪದಗಳು, ಲಾಲಿ ಪದಗಳು, ಹುತ್ತರಿ ಹಾಡುಗಳು, ಬೇಸಾಯದ ಹಾಡುಗಳು, ಸ್ಥಳೀಯ ದೇವತೆಗಳನ್ನು ಕುರಿತ ಹಾಡುಗಳು, ಕೊಡವ ಮನೆತನದ ಮೂಲಪುರುಷರ ಹಾಡುಗಳು ಮುಖ್ಯವಾದವು.

ಕೊಡವ ಜಾನಪದ ಕ್ಷೇತ್ರ ಬಹಳ ಶ್ರೀಮಂತವಾಗಿದೆ. ಕೊಡವರ ಜನಪದ ಕಲೆಗಳು ವಿಶ್ವಮಟ್ಟದಲ್ಲಿ ಪ್ರದರ್ಶನಗೊಂಡು ಪ್ರಖ್ಯಾತಿ ಪಡೆದಿವೆ. ಕೊಡವ ಸಂಸ್ಕೃತಿಯು ಜನಪದ ನೃತ್ಯ, ಹಾಡು, ಉಡುಪು, ಹಾವಭಾವಗಳು ವಿಶಿಷ್ಟತೆಯಿಂದ ಕೂಡಿರುತ್ತವೆ. ಜಾನಪದದ ಪ್ರಮುಖ ನೃತ್ಯಗಳಲ್ಲಿ ಬೊಳ್‌ಕಾಟ್, ಕೊಂಬಾಟ್, ಪೀಲಿಯಾಟ್, ಕೋಲಾಟ್, ಮತ್ತಾಟ್, ವಾಲಗತ್ತಾಟ್, ಕಪ್ಪೆಯಾಟ್, ಬೋಡಾಟ್, ಪರೆಯಕಳಿ ಪಡೆಕಳಿ ಮೊದಲಾದವು. ಹಾಡು, ನೃತ್ಯ, ಸಂಗೀತದ ದೃಷ್ಟಿಯಿಂದ ಮತ್ತು ಸಮುದಾಯದ ಒಗ್ಗಟನ್ನು ಗಟ್ಟಿಗೊಳಿಸಲು ಸಹಾಯಕವಾಗಿವೆ.

ಕೊಡವರ ಜನಪದ ಹಾಡುಗಳಾದ ದೇಶಕಟ್ಟ್‌ಪಾಟ್, ಬಾಳೋಪಾಟ್, ಪೋಲಚಿಪಾಟ್, ದೇವತೆಯುಡ ಪಾಟ್, ಪುತ್ತರಿಪಾಟ್, ಮನೆಪಾಟ್, ಮಂಗಲಪಾಟ್ ವೀರಂಗಡಪಾಟ್, ಮಕ್ಕಡಪಾಟ್, ತಮಾಷಿರ ಪಾಟ್ ಇವೆಲ್ಲವೂ ಅರ್ಥಪೂರ್ಣವಾದ ಸಾಹಿತ್ಯವನ್ನು ಹೊಂದಿವೆ. ಕೊಡವರ 'ಚಾವುಪಾಟ್'ನ್ನು ಕುರಿತು, ಜಾರ್ಜ್ ರಿಕ್ಟರ್ ಈ ರೀತಿ ಹೇಳಿದ್ದಾರೆ, "The Coorg Funeral Song is the most pathetic and touches a kindred cohered in every sorrowing heart"[೧೨] ಇಂತಹ ವಿಶೇಷ ಜಾನಪದ ಸಂಸ್ಕೃತಿ, ಸಂಸ್ಕಾರಗಳನ್ನು ಕೊಡವರು ಇಂದಿಗೂ ಉಳಿಸಿ, ಬೆಳೆಸಿ ಕಾಪಾಡಿಕೊಂಡು ಬರುತ್ತಿದ್ದಾರೆ.

ಕೊಡವರ ಪ್ರಮುಖ ಹಬ್ಬಗಳಾದ 'ಕೈಲ್‌ಪೊಳ್ದ್' 'ಕಾವೇರಿ ಸಂಕ್ರಮಣ' ಹಾಗೂ ಹುತ್ತರಿ ಹಬ್ಬಗಳ ಸಂದರ್ಭದಲ್ಲಿ ಕೆಲವು ಪ್ರಮುಖ ಹಾಡುಗಳನ್ನು ಹಾಡುತ್ತಾರೆ. ಬೇಸಾಯದ ಹಾಡುಗಳು, ಮದುವೆ ಹಾಡುಗಳು, ಕೊಡವ ಮೂಲ ಪುರುಷರ ಪದಗಳು, 'ಕಚ್ಚಿದುಡಿ' ಎಂಬ ಡೋಲು ಬಾರಿಸುವ ಹಾಡು, ವಿವಾಹಕ್ಕೆ ಸಂಬಂಧಿಸಿದ 'ಬಟ್ಟೆಪಾಟ್'ಗಳಲ್ಲಿ ಮದುವೆ ವಿವರಣೆಗಳನ್ನು ಚಿತ್ರಿಸಲಾಗಿದೆ. ವಾಲಗತ್ತಾಟಿನಲ್ಲಿ ಮದುವೆ ಸಮಾರಂಭದಲ್ಲಿ ಗಂಡು ಹೆಣ್ಣಿನ ಬೇಧವಿಲ್ಲದೆ ವಾಲಗದ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುವ ಈ ನೃತ್ಯ ಸಂತೋಷವನ್ನು ಕೊಡುತ್ತದೆ.

ಕೊಡವರ ಜನಪದ ನೃತ್ಯಗಳು ಪ್ರಮುಖವಾಗಿ ಸಾಮಾಜಿಕ, ಧಾರ್ಮಿಕ ಅಂಶಗಳನ್ನು ಪ್ರಕಟಪಡಿಸಿದರೂ ಶೌರ್ಯವನ್ನು ಎತ್ತಿ ಹಿಡಿಯುತ್ತವೆ. ಉಮ್ಮತಾಟ,

ಕೋಲಾಟ್, ಬೊಳ್‌ಕಾಟ್, ಪರೆಯಕಳಿ ಮುಂತಾದವು ಕೊಡವ ಭಾಷೆಯ ಜನಪದ ಗೀತೆಗಳನ್ನು ಸಂಗ್ರಹಿಸಿದ ಮೊಟ್ಟ ಮೊದಲ ವಿದ್ವಾಂಸರು ಶ್ರೀ ನಡಿಕೇರಿಯಂಡ ಚಿಣ್ಣಪ್ಪ ಇವರ 'ಪಟ್ಟೋಲೆಪಳಮೆ' ಕೊಡವರ ಮೊದಲ ಜಾನಪದ ಕೃತಿಯಾಗಿದೆ. ಡಾ.ಐ.ಮಾ ಮುತ್ತಣ್ಣವರು ಕೊಡವ ಜನಪದ ಗೀತೆಗಳನ್ನು "Kodava's and their gala-leela" ಎಂದು ಇಂಗ್ಲಿಷ್‌ನಲ್ಲಿ ಪ್ರಕಟಿಸಿದ್ದಾರೆ. ಪೇರಿಯಂಡ ಚಂಗಪ್ಪನವರು 'ಕೊಡವರ ಆಂದೋಳತ್‌ಪಾಟ್' ಎಂಬ ಪುಸ್ತಕ ಪ್ರಕಟಿಸಿದ್ದಾರೆ. ಬಿ.ಡಿ.ಗಣಪತಿ ಅವರು 'ಕೊಡವರು' ಎಂಬ ಪುಸ್ತಕದಲ್ಲಿ ಕೊಡವರ ಸಂಸ್ಕೃತಿಯನ್ನು ಅನಾವರಣ ಮಾಡುವ ಪ್ರಯತ್ನವಿದೆ.

ಬಿ.ಡಿ. ಗಣಪತಿಯವರ 'Kodava's a Comprehensive Study' ಕೃತಿಯಲ್ಲಿ ಜನಪದ ನೃತ್ಯಗಳನ್ನು ಕುರಿತು ಬರೆಯಲಾಗಿದೆ. ಹಾಗೂ ಡಿ.ಎನ್. ಕೃಷ್ಣಯ್ಯನವರ 'ಕೊಡಗಿನ ಇತಿಹಾಸ' ಎಂ.ಎನ್. ಶ್ರೀನಿವಾಸ್ ಅವರ "Religion and society among the coorgs of south India" ಹಾಗೂ ಐ.ಮಾ. ಮುತ್ತಣ್ಣನವರ 'coorg memoirs' ಕೆ.ಪಿ. ಮುತ್ತಣ್ಣನವರ ಕೃತಿಯಾದ 'ಜಗತ್ತಿಗೊಂದೇ ಕೊಡಗು' ಕೃತಿಯಲ್ಲಿ ಸ್ವಲ್ಪ ಮಟ್ಟಿಗೆ ಕೊಡವರ ಜಾನಪದವನ್ನು ಗುರುತಿಸಬಹುದು. ಕೊಡವರ ಜಾನಪದಕ್ಕೆ ಸಂಬಂಧಿಸಿದಂತೆ ಸಮಗ್ರ ಅಧ್ಯಯನ ನಡೆಯಬೇಕಾಗಿದೆ.

ಜನಪದ ಸಾಹಿತ್ಯ ಮನಸ್ಸಿಗೆ ಉಲ್ಲಾಸವನ್ನು, ಬುದ್ಧಿಗೆ ವಿಮರ್ಶಾತ್ಮಕ ವಿಷಯಗಳನ್ನು ಕೊಡುವುದರ ಜೊತೆಗೆ ಜೀವನದ ತತ್ವ ಮೌಲ್ಯವನ್ನು ಬೋಧಿಸುತ್ತದೆ. ಜನರ ಬಾಯಿಂದ ಬಾಯಿಗೆ ಹರಿದು ಬಂದ ಈ ಸಾಹಿತ್ಯವನ್ನು ಸಂಗ್ರಹಿಸಿ ಬೆಳೆಸುವ ಕಾರ್ಯವನ್ನು ಇತ್ತೀಚಿಗೆ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಮಾಡುತ್ತಿದೆ.

ಕೊಡವ ಜಾನಪದಲ್ಲಿ ವೀರತನ ಶೂರತನದ ಸಂಕೇತವಿದೆ. ಇಲ್ಲಿ ನಮ್ರತೆ, ನಿರ್ಭಯತೆ ಇದೆ. ಹುಟ್ಟಿನಿಂದ ಅಂತ್ಯದವರೆಗಿನ ರಸ, ತಾಳ, ಭಾವನೆಗಳಿವೆ.

ಬಾಳೋ । ಬಾಳೋ । ನಂಗಡ ॥ ದೇವ । ಬಾಳೋ।
ಮಾದೇವ ॥ ದೇವಿ । ಬಾಳೋ । ಮಾದೇವಿ।
ದೈಯೋ । ಬಾಳೋ । ಪೆಮ್ಮಯ್ಯ ॥ ಬಾಳೋ
ಬಾಳೋ । ಎಂಣ್ಣಕ್ಕ ॥ ಎನ್ನತ್ತಾಂಡ । ಬಾಳಾಪ॥

ಹೀಗೆ ಹಾಡಿನ ರೂಪದಲ್ಲಿ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳಿರುತ್ತವೆ. ಕೆಂದಾವರೆ ಬಾಳಲ್ಲ, ಚಂದ್ರಾಯುದ್ಧ ಬಾಳಲ್ಲ ಎಂಬುದಾಗಿ ವರ್ಣಿಸುತ್ತಾ ಹೃದಯದಲ್ಲಿ ಆತ್ಮ ಪರಮಾತ್ಮರೊಡನೆ ಒಂದು ಗೂಡುವುದೇ ಬಾಳು, ಎಂದು ತಿರ್ಮಾನಿಸುತ್ತಾರೆ.

ಜನಪದ ನೃತ್ಯ

ಬೊಳ್‌ಕಾಟ್, ಪೀಲಿಯಾಟ್, ಕೊಂಬಾಟ್ ಹೀಗೆ ಅನೇಕ ತರದ ನೃತ್ಯವಿರುತ್ತದೆ. 'ಬೊಳಕು' ಎಂದರೆ ಬೆಳಕು ಪರಮಾತ್ಮನ ಬೆಳಕಿನ ದರ್ಶನಕ್ಕಾಗಿ ಹಾವಭಾವಗಳಿಂದ ಪದ ಕುಣಿತಗಳು ದೇವಸ್ಥಾನದ ಮುಂದೆ ನಡೆಯುತ್ತವೆ.

ಒಂದೊಂದು ನೃತ್ಯಕ್ಕೂ ಅನೇಕ ತರದ ಭಂಗಿಗಳಿವೆ. ಚೌರಿ, ಚಾಮರ, ಆಯುಧಗಳನ್ನು ಬಳಸಿ, ಹೆಜ್ಜೆ ಹಾಕುತ್ತಾ ಹಾಡಿಗೆ ತಕ್ಕಂತೆ ನರ್ತಿಸುತ್ತಾರೆ.

ಉದಾ: ದುಂಬಾದೇವಿ। ದೇವಿತಾ॥
ಓ ಹ್ರೀಂ ಓಂ ॥ ಜಿಗ್ಗರಿ ಬೊಗ್ಗರಿ । ಬೊಗ್ಗರಿ ಹೋ ॥
ಹೋ ಹೇ ಹೀ ಹೋ ॥

ಯಾವುದೇ ಜನಪದ ನೃತ್ಯವಾಗಲಿ ಕೊಡವರು ತಮ್ಮ ಸಾಂಪ್ರದಾಯಿಕ ಕುಪ್ಯ, ದಟ್ಟಿ, ರುಮಾಲು, ಕತ್ತಿಯನ್ನು ಗಂಡಸರು ಧರಿಸಿದರೆ, ಸ್ತ್ರೀಯರು ಹಿಂದಕ್ಕೆ ನೆರಿಗೆಯುಳ್ಳ ಸೀರೆ, ತೋಳುದ್ದವಿರುವ ರವಿಕೆ, ತಲೆಗೆ ವಸ್ತ್ರ, ಜೋಮಾಲೆ, ಕೊಕ್ಕೆತಾತಿ, ಕಡಗವನ್ನು ಧರಿಸಿ ನರ್ತನವನ್ನು ಮಾಡುತ್ತಾರೆ.

ಚಾವುಪಾಟ್ (ಸಾವು ಪದ)

ಮೃತವ್ಯಕ್ತಿಯ ಜೀವಮಾನದ ಸಾಧನೆ, ಸಂಸಾರದ ದುಃಖ, ಸ್ವರ್ಗದ ವಿಚಾರ, ಶಕುನ ಎಲ್ಲವನ್ನು ಹಾಡಿ ಹೊಗಳುವುದೇ 'ಚಾವುಪಾಟ್' ಮನಕಲಕುವ ಸಾವಿನ ಪದ ಈ ಕೆಳಗಿನಂತಿದೆ.

ಕೆಟ್ಟಿರೋ ಅಜ್ಜಯ್ಯ ನಿಂಗ । ಕೆಟ್ಟನನ್ನಕ್ಕೆ ಕೆಟ್ಟಲೇ ಅಜ್ಜಯ್ಯೋ।
ಬಂದಿರೋ ಅಜ್ಜಯ್ಯ ನಿಂಗ। ಬಂದನ್ನಕ್ಕೆ ಬಾಂದ್‌ಲೇ ಅಜ್ಜಯ್ಯೋ
ಕೈಲುಳ್ಳ ಕನ್ನಡಿ ಅಜ್ಜಯ್ಯ। ಬುದ್ದೊಡಂದ್ ಪೋನೋಲೇ ಅಜ್ಜಯ್ಯ।
ನಿಂಗೊಡಂದ್ ಪೊಯಿರೋ ಅಜ್ಜಯ್ಯ॥
(ಮುಂದುವರೆದ ಹಾಡನ್ನು ಅನುಬಂಧದಲ್ಲಿ ನೀಡಲಾಗಿದೆ).

ಪೊಲಚಿ ಪಾಟ್ (ಹೊಲೆಯರ ಹಾಡು)

ಕೊಡವರು ತಿಥಿ ಕರ್ಮಾಂತರ ಮಾಡುವ ದಿನ ಸತ್ತವರ ಗುಣಗಾನ ಮಾಡಿಕೊಂಡು ದುಃಖದಿಂದ ಪೊಲಚಿಪಾಟ್ ಹಾಡುತ್ತ ಸ್ವರ್ಗಕ್ಕೆ ಸೇರಿಸುತ್ತಾರೆ. ಈ ಹಾಡಿನಲ್ಲಿ ಆಧ್ಯಾತ್ಮಿಕ ತತ್ವ ಬೋಧನೆ, ಬಾಳಿ ಬದುಕಿದ ಜೀವನದ ವರ್ಣನೆ, ಜೀವಾತ್ಮ ಪರಮಾತ್ಮನ ವಿಚಾರವನ್ನು ಜನಪದ ಗೀತೆಯ ಮೂಲಕ ವ್ಯಕ್ತಪಡಿಸುತ್ತಾರೆ. ('ಪೊಲಚಿಪಾಟ್' ಗೀತೆಯನ್ನು ಅನುಬಂಧ-೦೨ರಲ್ಲಿ ನೀಡಲಾಗಿದೆ.)

ಬೋಡ್‌ಪಾಟ್

ವಿಶೇಷ ವೇಷಭೂಷಣ ಧರಿಸಿ ಧೂಳನ್ನು ಎಬ್ಬಿಸುತ್ತಾ ಕುಣಿಯುತ್ತಾ ಕೈಯಲ್ಲಿ ಕೋಲು ಹಿಡಿದು ಹಾಡುತ್ತಾರೆ. ದೇವರಕಥೆ, ದೇವರ ಮಹಿಮೆ, ನೀತಿ ನಡತೆಯ ವಿಚಾರಗಳು, ಸುಖಮಯ ಜೀವನವನ್ನು, ಜೀವನದ ಜಂಜಾಟದಲ್ಲಿ ಧೈರ್ಯದ ಅವಶ್ಯಕತೆಯನ್ನು ಕುರಿತು ವರ್ಣಿಸುತ್ತಾರೆ.

ಪುತ್ತರಿಪಾಟ್ (ಹುತ್ತರಿ ಹಾಡು)

ಸುಗ್ಗಿಕಾಲದಲ್ಲಿ ಊರಿನ ದೇವಾಲಯ 'ಮಂದ್'ನಲ್ಲಿ ಕೋಲಾಟವಿರುತ್ತದೆ. ಕೋಲು ಹೊಡೆದು ಕುಣಿಯುತ್ತಾ, ಹಾಡುತ್ತಾ ನರ್ತಿಸುತ್ತಾರೆ.

"ದೇವರ ತೊತ್ತಿತ್ ಕೋಲ್ಕ್‌ಕಳೆಂಜ । ಪೊಯಿಲೇ ಪೊಯಿಲೇ॥
ಕೋಲಾಟ ಕೊಪ್ಪಲ್। ಎನ್ನ ಪುದುಮೆ॥ ಪೊಯಿಲೇ ಪೊಯಿಲೇ ॥
ಕೋಲಾಟ ಕೊಪ್ಪಲ್ ಕೋಟ್ ಮರ್‌ಂಜ॥ ಪೊಯಿಲೇ ॥
ಆಡುವ ಬಾಲಂಡ । ಅರಕಟ್ಟ್ ಬೋಜ । ಪೊಯಿಲೇ ಪೊಯಿಲೇ।"

ಈ ಹಾಡಿನಲ್ಲಿ ಹಬ್ಬದ ಸಂತೋಷ, ಸುಂದರ ಭಾವಗಳು ಉಕ್ಕುತ್ತವೆ. ದುಡಿಯನ್ನು ಬಾರಿಸುತ್ತಾ, ಹುಟ್ಟಿದ ನೆಲದ ಋಣವನ್ನು ತೀರಿಸುವ ದೇವರ ಆಚಾರದಂತೆ, ರಾಜ ನೀಡಿದ ಜಮ್ಮ ಭೂಮಿ ಮತ್ತು ಅನಂತರದ ಕಿರುಭೂಮಿಯನ್ನು ಕುರಿತಂತೆ.

"ಬಾಳ್ ಬಾಳೆನ್ನಡ ಜಬ್ಬೂಮಿ ಬಾಳೋ ಜಬ್ಬೂಮಿ ।
ಮೀದಲ್ ಪೊಮಂದ್ ಬಾಳೋ ಪೂಮಂದ್ ಮೀದಲ್ ದೇವಯ್ಯ ಬಾಳೋ ।
ದೇವಂಗೊತ್ತಾಚಾರ ಪಾಡಿಚೋ ನಂಗ
ಆಚಾರ ಪಾಡಿತ್ ಪಾಟ್ ಬೆಕ್ಕನ ಎಂಗ ।
ಲೇಲಾಲೇ ಲಾಲೇ ಲ ಲೇ ಲೇ ಲೇ ಲೇಲೋ."
ಎಂದು ಹಾಡುತ್ತಾರೆ.

ಬದುಕಿನ ಸಂಗತಿಗಳನ್ನು ಸಂತೋಷವಾಗಿ ಹಾಡಿ ಕುಣಿಯಲು ಸಂದರ್ಭ ಒದಗಿಸಿದ ಹುತ್ತರಿಯನ್ನು ನಿರಂತರವಾಗಿ ತಮ್ಮ ಒಡನಾಡಿಯಾಗಿರಬೇಕೆಂದು ಪ್ರಾರ್ಥಿಸುವ ಹಾಡು ಕೆಳಗಿನಂತಿದೆ.

"ಒಕ್ಕ್ ಪುತ್ತರಿ ಒಮ್ಮತೆ ಬಾತ್ ಪೊಯಿಲೆ ಪೊಯಿಲೇ
ಬಪ್ಪಕ ಪುತ್ತರಿ ಬಣ್ಣತೆ ಬಾತ್, ಪೊಯಿಲೇ ಪೊಯಿಲೇ
ಪೊಪಕ ಪುತ್ತರಿ ಎಣ್ಣತೆ ಪೋಚಿ, ಪೊಯಿಲೇ ಪೊಯಿಲೇ
ದಮ್ಮಯ್ಯ ಪುತ್ತರಿ ಒಮ್ಮಲೂ ಪೋತೆ, ಪೊಯಿಲೇ ಪೊಯಿಲೇ"

ಬರುವಾಗ ಹುತ್ತರಿ ಹಬ್ಬವು ತಿಳಿಯದೇ ಬಂದುಬಿಡುತ್ತದೆ. ಹೋಗುವಾಗ ಹುತ್ತರಿ ಹಬ್ಬವು ಹೇಳದೆ ಗಡಿಬಿಡಿಯಲ್ಲಿ ಹೊರಟುಹೋಗುತ್ತದೆ ಎಂದು ವರ್ಷಕ್ಕೊಮ್ಮೆ ಬರುವ ಹುತ್ತರಿ ಹಬ್ಬವೇ ನಮ್ಮನ್ನಗಲಿ ಹೋಗಬೇಡ ಎಂದು ದಮ್ಮಯ್ಯ ಹಾಕಿ ಬೇಡುತ್ತಾರೆ.

ತಪ್ಪಡಕ (ತಪ್ಪುಕಾಣಿಕೆ)

ಒಬ್ಬ ವ್ಯಕ್ತಿ, ಕುಟುಂಬ, ಮಾಡಿದ ತಪ್ಪಿಗಾಗಿ ಅಕ್ಕಿಯನ್ನು, ಹಣವನ್ನು, ತಪ್ಪು ಕೊಡುವ ಪದ್ಧತಿಯೇ 'ತಪ್ಪಡಕ. ಈ ಹಾಡಿನಲ್ಲಿ ಊರಿನ ಪಾರಂಪರಿಕ ಹದ್ದು ಬಸ್ತು, ಒಗ್ಗಟ್ಟು ಪ್ರೀತಿವಿಶ್ವಾಸ, ಪರಸ್ಪರ ಸಹಾಯ ಮುಂತಾದ ವಿವರಗಳಿವೆ.

"ಇಲ್ಲಿಂಜ ತೊಟ್ಟಕ............ ಎಂದು ಊರಿನ ಹದ್ದು ಬಸ್ತುಗಳವರೆಗೆ ಹೇಳಿ ಈ ಕೆಟ್ಟ್‌ರೊಳಲ್ ಕಿರಿಯು ಪಾಂಬು ಒಂದಾಯಿ ನಲಿಯಡ್'
ನರಿಯು ನಾಯಿಯು ಒಂದಾಗಿ ನಲಿಯಡ್ । ಕೋಳಿಯು
ಕುರುಕನು ಒಂದಾಯಿ ನಲಿಯೆ । ಶತ್ರು ಮಿತ್ರರು ಒಂದಾಯಿ ನಲಿಯಡ್॥
ಎಂದು ಊರಿನ ಒಗ್ಗಟ್ಟನ್ನು ಕುರಿತು ಹಾಡುತ್ತಾರೆ."

ಕೊಡವರ ಗಾದೆ ಮತ್ತು ಒಗಟುಗಳು

ಗಾದೆ: ಕೊಡವರ ಗಾದೆಗಳು ಪ್ರಾದೇಶಿಕ ಕ್ರಿಯಾಶೀಲ ಅಭಿವ್ಯಕ್ತಿಯ ರೂಪವಾಗಿದೆ. ಕೊಡವರು ತಮ್ಮ ಬದುಕಿನ ಸಂದರ್ಭಗಳನ್ನು ಗಾದೆ, ಒಗಟುಗಳಲ್ಲಿ ಬಿಂಬಿಸಿದ್ದಾರೆ. ಇವರ ಗಾದೆಗಳಲ್ಲಿ ಆದರ್ಶ, ಸ್ತ್ರೀಯರ ಹಿರಿಮೆ, ಪ್ರೀತಿ–ಗೌರವಗಳು, ಆಶಯಗಳು ಪ್ರಮುಖವಾಗಿವೆ. ಕೆಲವು ಗಾದೆಗಳು ಮನುಷ್ಯನ ಸಂಬಂಧ. ದೇವರ ಪರಿಕಲ್ಪನೆ, ಸಂಸ್ಕೃತಿ ಸಂಸ್ಕಾರಗಳನ್ನು ಎತ್ತಿಹಿಡಿಯುತ್ತವೆ.

೧) ನೇರ ಆನಲ್ಲಿ ನೆರ್‌ಂದಿಯಾ ಮೊಳೆ
ಸಮಯ ಆದಲ್ಲಿ ಮೈನೆರೆದಿದ್ದೀಯಾ ಮಗಳೆ

೨) ಧರ್ಮಕ್ ಕೆರೆ ಎಡ್‌ತಿತ್ ಕರ್ಮಕ್ ಮೊಸಳೆ ಬುಟ್ಟಿಯೆ
ಧರ್ಮಕ್ಕೆ ಕೆರೆ ತೆಗೆದು ಕರ್ಮಕ್ಕೆ ಮೊಸಳೆ ಬಿಟ್ಟ ಹಾಗೆ

೩) ಊರ್‌ಕ್ ಉಪಕಾರಿ ಮನೆಕ್ ಮಾರಿ
ಊರಿಗೆ ಉಪಕಾರಿ ಮನೆಗೆ ಮಾರಿ

೪) ಉಪ್ಪಾನ ಬುಟ್ಟಿತ್ ನೆಂಡ್ ಪುಡ್‌ಚತಲೊ
ಉಳುವುದನ್ನು ಬಿಟ್ಟಿ ನಳ್ಳಿ ಹಿಡಿದ ಹಾಗೆ

೫) ಚತ್ತ ಕೂಳಿಕ್ ಚಾಚೆ ಇಲ್ಲೆ.
ಸತ್ತ ಆತ್ಮಕ್ಕೆ ಸಂಬಂಧವಿಲ್ಲ

೬) ಅಲಂದ ನಾಯಿಕ್ ಪೊವುಂದ ತೋಲ್
ಹಸಿದ ನಾಯಿಗೆ ಮೆತ್ತಗಿನ ಸಿಪ್ಪೆ

೭) ಅಲೆ ಕಂಡವನೇ ಅಂಬಲತ್ ಅಳ್‌ಪ
ಆಳುವವನೆ ಅರಸ

೮) ಅವರೆ ಪೊದರಣೆ ಕಡು ಚೆಡಿಯು
ಅವರೆ ನೆನೆಯುವವರೆಗೆ ಸಾಸುವೆ ಸಿಡಿಯುತ್ತದೆ.

೯) ಅವ್ವಂಡ ಒಟ್ಟಿಕ್ ನೆಯ್ ಬುದ್ಧತ್
ತಾಯಿಯ ಆಸೆಯಂತೆ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತೆ

೧೦) ಭಾಗ್ಯ ಬಪ್ಪಕ ಬಗ್ಗಿ ನಡಕಂಡು
ಭಾಗ್ಯ ಬಂದಾಗ ತಗ್ಗಿ ಬಗ್ಗಿ ನಡೆ

೧೧) ಬೆತ್ತಲೆ ಬುದ್ದವಂಡ ಬರಿಲ್ ಬುದ್ದಂಡನ್ನಕೆ
ಬೆತ್ತಲೆ ಮಲಗಿದವನ ಜೊತೆಯಲ್ಲಿ ಮಲಗಿದಂತೆ

೧೨) ಬೊತ್ತನವಂಗ್ ಬೋಟಿಯೇ ಕೂಳಿ
ಹೆದರಿದವನಿಗೆ ಕಂಬವೇ ಪಿಶಾಚಿ

೧೩) ಮರನೋಟಿತ್ ಕೊಡಿ ಬೆಕ್ಕಂಡು, ಆಳು ನೋಟಿತ್ ಪೊಣ್ಣ್ ಕೊಡ್‌ಕೊಂಡು
ಮರ ನೋಡಿ ಬಳ್ಳಿ ನೆಡಬೇಕು, ಗಂಡು ನೋಡಿ ಹೆಣ್ಣು ಕೊಡಬೇಕು

೧೪) ಬೊಳ್‌ತದೆಲ್ಲಾ ಪಾಲಲ್ಲಾ ಕಂಡಿಯಾ
ಬೆಳ್ಳಗಿರುವುದೆಲ್ಲಾ ಹಾಲಲ್ಲ

೧೫) ತಾಂಗ್ ತಾನಾಂಡ್, ತಂಬುಟ್ಟುಕ್ ತೇನಾಂಡ್
ನಮಗೆ ನಾವೇ ಆಗಬೇಕು ತಂಬಿಟ್ಟಿಗೆ ಜೇನಾಗಬೇಕು

೧೬) ಆರ್ ಪೆತ್ತವ ಮೂಂದ್ ಪೆತ್ತವಡ ಬೇರ್ ಕೇಟನಕೆ
ಆರು ಹೆತ್ತವಳು ಮೂರು ಹೆತ್ತವಳ ಬೇರು ಕೇಳುವ ಹಾಗೆ

೧೭) ಮಾಮೆರುನ ಕೂಡಿ ಅಳ್‌ಕಲು, ಸಮುದ್ರತರ ಆಳಕಂಡ್ ಪುಡಿಕೊಲ್
ಆಚೆಂಗಿ ಪೊಂಗಡ ಮನಸು ಕಂಡ್ ಪುಡಿತ ಕಯಿಲೆ ಕಂಡಿಯಾ
ಪರ್ವತದ ಎತ್ತರ ಕಂಡು ಹಿಡಿಯಬಹುದು, ಸಮುದ್ರದ ತಳ ಕಂಡುಹಿಡಿ ಯಬಹುದು ಆದರೆ ಹೆಣ್ಣಿನ ಮನಸು ಕಂಡು ಹಿಡಿಯಲು ಸಾಧ್ಯವಿಲ್ಲ.

೧೮) ಮಿನ್ನೊದೆಲ್ಲಾ ಪೊನ್ನಲ್ಲ ಕ್‌ಟೀಯಾ
ಹೊಳೆಯುವುದೆಲ್ಲಾ ಚಿನ್ನವಲ್ಲ

೧೯) ಪೊಲಾಕ ಬಂದ ಮಳೆ ಇರ, ಬೈಟು ಬಂದ ಬೆಂದು ಪೊಗ
ಬೆಳಿಗ್ಗೆ ಬಂದ ಮಳೆ ಇರುವುದಿಲ್ಲ, ರಾತ್ರಿ ಬಂದ ನಂಟ ಹೋಗುವುದಿಲ್ಲ

೨೦) ಆಗತ ಮುಂಡೆರ ನೆರಿ ಕಂಡಕಾಗ
ಆಗದಿರುವವರ ನೆರಿಗೆ ಕಂಡರೆ ಆಗದು

೨೧) ಆಗತ ಮುಂಡೆರ ಮೋರ್‌ಲ್ ಕಲ್ಲ್
ಆಗದಿರುವ ಮುಂಡೆಯ ಮೊಸರಿನಲ್ಲಿ ಕಲ್ಲು

೨೨) ಆಡ್ ಪೋನ ಕಾಡ್ ಪಾಳ್, ಕೊಂಕಣಿ ಪೋನ ಊರ್ ಪಾಳ್
ಆಡು ಹೋದ ಕಾಡು ಹಾಳು, ಕೊಂಕಣಿ ಹೋದ ಊರು ಹಾಳು

೨೩) ಆಣ್ ಕಟ್ಟಿಕ ಅರಮನೆ, ಪೊಣ್ಣ್ ಕಟ್ಟಿಕ್ ತಾಮನೆ
ಗಂಡು ಕಟ್ಟಿದರೆ ಅರಮನೆ, ಹೆಣ್ಣು ಕಟ್ಟಿದರೆ ತವರು ಮನೆ

೨೪) ಕೊಡವರ ನಲ್ಲಾಂಗ್ ಕೆಟ್ಟಾಂಗ್ ಅಡಿಯ ಕುಡಿಯನೆ ಮಿಂಞ
ಕೊಡವರ ಕಾರುಬಾರುಗಳಿಗೆ ಅಡಿಯ ಕುಡಿಯರೇ ಮುಂದು

೨೫) ಬಡವಂಡಲ್ಲಿಂಜಿ ಪೊಣ್ಣಕೊಂಡ ಬಕ್ಕಂಡು, ಬಲ್ಯವಂಡ ಒಕ್ಕಕ್ ಪೊಣ್ಣ್‌ಕೊಡ್‌ಕೊಂಡು
ಬಡವರ ಮನೆಯಿಂದ ಹೆಣ್ಣು ತರಬೇಕು, ಶ್ರೀಮಂತರ ಕುಟುಂಬಕ್ಕೆ ಹೆಣ್ಣು ಕೊಡಬೇಕು

೨೬) ಅವ್ವ ಚತ್ತಕ ಅಪ್ಪ ಚಿಕ್ಕಪ್ಪ
ತಾಯಿ ಸತ್ತು ಹೋದರೆ ಅಪ್ಪ ಚಿಕ್ಕಪ್ಪನಾಗುತ್ತಾನೆ

೨೭) ಅವ್ವಎರಂದ್ ಚಾಕು ಅಪ್ಪ ಕೆಟ್ಟಿ ಮಾರು
ತಾಯಿ ಭಿಕ್ಷೆ ಬೇಡಿ ಮಕ್ಕಳನ್ನು ಸಾಕುತ್ತಾಳೆ, ತಂದೆ ಮಕ್ಕಳನ್ನು ಕಂಡವರಿಗೆ ಮಾರುತ್ತಾನೆ.

೨೮) ಅವ್ವಂಡ ಮೊಲೆಕುಡಿಚಿತ್ತ ದುಂಬತ ಕೆಲ ಅಪ್ಪಂಡ ಬೆರ ಊತಿತ್ ದುಂಬುವಾ
ತಾಯಿಯ ಮೊಲೆ ಹಾಲಿನಿಂದ ಭರ್ತಿ ಆಗದ ಹೊಟ್ಟೆ, ತಂದೆಯ ಬೆರಳನ್ನು ಚೀಪಿದರೆ ಭರ್ತಿ ಆಗುತ್ತದೆಯೇ?

೨೯) ಪೊಣ್ಣಾಳ್‌ಕ್ ಮೊಳೆವಾಡಿಲ್ಲೆ ಪಳ್ಳೆನಾಯಿಕ್ ಬಟ್ಟಿಲ್ಲೆ

ಹೆಂಗಸರಿಗೆ ದಂಡ ಶುಲ್ಕವಿಲ್ಲ, ಬೇಟೆಯಲ್ಲಿ ಭಾಗವಹಿಸಿದ ಹೆಣ್ಣು ನಾಯಿಗೆ ಸಿಕ್ಕಿದ ಬೇಟೆಯಲ್ಲಿ ಪಾಲಿಲ್ಲ.

೩೦) ಅವ್ವನಿಲ್ಲತ ಕುಞಯೂ ಮಳೆ ಇಲ್ಲತ ಬೊಳೆಯೂ ಒಂದೆ
ತಾಯಿ ಇಲ್ಲದ ಕಂದನೂ ಮಳೆ ಇಲ್ಲದ ಬೆಳೆಯೂ ಎರಡೂ ಒಂದೇ

ಒಗಟುಗಳು : ಕೊಡವರು ಒಗಟುಗಳು ವೈವಿಧ್ಯತೆಯಿಂದ ಕೂಡಿವೆ. ನಿತ್ಯಬದುಕಿನ ಘಟನೆಗಳು, ದುಡಿಮೆ, ಮಳೆಗಾಲದ ಜಿಗಣೆ, ಶೌರ್ಯದ ಕತೆ, ಒಳಮನಸ್ಸಿನ ಆಸೆ ಆಕಾಂಕ್ಷೆಗಳು, ಯಜಮಾನ ಮತ್ತು ಆಳಿನ ನಡುವಿನ ಸಂಬಂಧಗಳು, ಹಾಸ್ಯ, ಸ್ಥಳನಾಮಗಳು, ದೇವರ ಮೌಲ್ಯ ಮುಂತಾದ ಹಲವಾರು ವಿಚಾರಗಳು ಬುದ್ಧಿವಂತಿಕೆಯ ಸವಾಲಾಗಿ ಕಂಡುಬರುತ್ತದೆ. ಇವರ ಗಾದೆಗಳಲ್ಲಿ ಜನಪದ ಮಾನವೀಯ ತುಡಿತಗಳನ್ನು ನೋಡಬಹುದು.

೧) ಅಲ್ಲಿ ತುಳ್ಳಿ ಇಲ್ಲಿ ತುಳ್ಳಿ ಮೂಲೆ ತುಳ್ಳಿ – ಚೀಪೆ (ಪೊರಕೆ)

೨) ಕಣ್ಣ್ ಕಾಂಗತ ಅಜ್ಜಿ ಪಾಲ ದಾಟೋ – ಜಿಗಣೆ (ಉಂಬುಳು)

೩) ನಟ್ಟಕ ಪುಟ್ಟುಲೇ ಬೆಚ್ಚಕ ಬಾಡುಲೆ – ಕೂದಲು (ತಳ್‌ಮಿ)

೪) ಅವ್ವ ಕರಿತಿತೇ ಮೋವ ಬೊಳ್‌ತಿತೇ, ಮೋವಡ ಮೋವ ಪೋನ್ದೇವಿ – ಕಾಡ್ ಮೂ

೫) ಆಳ್ ನೋಟುವಕಾ ಕೇಂಬುರ ತಾಳ್‌ರ ಪೋಲೆ, ಕೊತ್ ನೋಟುವಕ ಕುಂದುರ ಮೇಲೆ ಪೋಪನ್ನಕೆ – ಬಂದೂಕು, ಕೋವಿ

೬) ಎತ್ತ ಬುದ್ದಂಡ್ ಕೇರ್ ಮೇಂಜಂಡ್ – ಕುಂಬಳ ಬಳ್ಳಿ

೭) ಮಣ್ಣ್ ರಡಿಲ್ ಪೊನ್ನ್‌ರ ಚಟ್ಟುವಾ – ಅರಿಶಿನ (ಮಂಜ)

೮) ಮುಳ್ಳ್ ಮುಳ್ಳ್ ಮರತ್‌ಲ್ ಮುತ್ತು ಮುತ್ತು ಪಣ್ಣ್ – ಚೋರಂಗೆ (ನಿಂಬೆಹಣ್ಣು)

೯) ಅಟ್ಟತ್ತ್‌ಲ್ ಒರ್ ಅಜ್ಜಿ ಅಟ್ಟತಿಂಜಿ ಕೀದಕ್ ಕಾಲ್ ನೀಟಿ ಅಳ್‌ತಿತ್–ಏಣಿ

೧೦) ಒರ್ ಕುಪ್ಪಿಲ್ ದಂಡ್ ತರ ಎಣ್ಣೆ – ಮೊಟ್ಟೆ

ಕೊಡವ ಭಾಷೆ ಮತ್ತು ಸ್ವರೂಪ

ಕೊಡವ ಭಾಷೆ ಅಲ್ಲಿಯ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಭಾಷೆಯ ವೈಶಿಷ್ಟ್ಯತೆ ಜೊತೆಗೆ ಕೊಡಗಿನ ಸಂಸ್ಕೃತಿಯನ್ನು ಕ್ರಮವಾಗಿ ಜನಪದ ಕಲೆ, ಕ್ರೀಡೆ ವೀರಸೇನಾನಿಗಳನ್ನು ಕುರಿತು ಕುಲಂಕಷವಾಗಿ ಇಲ್ಲಿ ವಿಶ್ಲೇಷಿಸಲಾಗಿದೆ.

"ಯಾವುದೇ ಭಾಷೆಯ ಉಗಮವನ್ನು ನಿರ್ಧರಿಸುವಾಗ ಭಾಷೆಯ ಇತಿಹಾಸದ, ಮೂಲವನ್ನು ಗುರುತಿಸುವುದು ತುಂಬಾ ಪ್ರಯೋಜನಕಾರಿ". ಎಂದು ಯೆಸ್ಪರ್ಸನ್ ಅಭಿಪ್ರಾಯ ಪಡುತ್ತಾರೆ. ಕೊಡಗಿನವರ ಪ್ರಾಚೀನತೆಯನ್ನು ಕ್ರಿ.ಶ. ೧೧೭೪ರ ಪಿರಿಯಾಪಟ್ಟಣ ತಾಲೂಕು ಕಂಪಲಾಪುರ ಶಾಸನದಲ್ಲಿರುವ 'ಎಲ್ಲಾ ನಾಡ ಕೊಡಗರು ಕೂಡಿ' ಎಂಬ ಸಾಲು ಉಲ್ಲೇಖಿಸುತ್ತದೆ. ಇದರಿಂದ ೧೨ನೇಯ ಶತಮಾನದಲ್ಲಿದ್ದ ಕೊಡಗಿನವರೊಂದಿಗೆ ಕೊಡವ ಭಾಷೆಯು ಬಳಕೆಯಲ್ಲಿತ್ತು ಎನಿಸುತ್ತದೆ. ೨೦ನೆಯ ಶತಮಾನದ ಆರಂಭದಲ್ಲಿ ಇಂಗ್ಲಿಷ್ ವಿಧ್ಯಾಭ್ಯಾಸದಿಂದ ಪ್ರಭಾವಿತರಾಗಿ ಪ್ರೇರಣೆ ಪಡೆದ ಕೆಲವರು, ಕನ್ನಡ ಲಿಪಿ ಬಳಸಿ ಕೊಡವ ಭಾಷೆಯಲ್ಲಿ ಸಾಹಿತ್ಯ ರಚನೆ

ಆರಂಭಿಸಿದರು. ಕನ್ನಡ ಸಾಹಿತ್ಯದ ಮೇಲೆ ಪಾಶ್ಚಾತ್ಯ ಪ್ರಭಾವವಾದಂತೆ ಕೊಡವ ಸಾಹಿತ್ಯದ ಮೇಲೂ ಕೂಡ ಪ್ರಭಾವ ಬೀರಿದ ಪರಿಣಾಮವಾಗಿ ಕೊಡವ ಭಾಷೆಯಲ್ಲಿ ಹಲವು ಪ್ರಕಾರಗಳಲ್ಲಿ ಸಾಹಿತ್ಯ ಸೃಷ್ಟಿಯಾಯಿತು. ಕೊಡವರು ಕನ್ನಡ, ತುಳು, ಮಲಯಾಳಂ, ಇಂಗ್ಲಿಷ್ ಸಾಹಿತ್ಯ ಮತ್ತು ಸಂಸ್ಕೃತಿಯ ಜೊತೆಗೆ ನಿಕಟವಾದ ಸಂಪರ್ಕವಿಟ್ಟುಕೊಂಡಿದ್ದರು. ಅದು ಭಾಷೆ, ಮತ್ತು ಆಚರಣೆಗಳಲ್ಲಿ ತನ್ನ ಸಂಸ್ಕೃತಿಯನ್ನು ಮತ್ತು ಅನನ್ಯತೆಯನ್ನು ಕಾಯ್ದುಕೊಂಡು ಬಂದಿದೆ.

ಕೊಡವ ಭಾಷೆಯನ್ನು ಮೊದಲಿಗೆ ಅಧ್ಯಯಿಸಿದವರು 'ರಾಬರ್ಟ್‌ಕಾಲ್ಡ್‌ವೆಲ್' ಮತ್ತು 'ಗ್ರೇಟರ್' ಎಂಬ ವಿದ್ವಾಂಸರು. ಈ ಭಾಷೆಗೆ ಮೊದಲು ವ್ಯಾಕರಣ ರಚಿಸಿದವರು ಮೇಜರ್ ಆರ್.ಎ. ಕೋಲ್ ಎಂಬ ಪಾಶ್ಚಾತ್ಯ ವಿದ್ವಾಂಸರು. ವ್ಯಾಕರಣದ ಹೆಸರು (Coorg Grammer:- Major R.A.Cole Banglore ೧೮೬೭).

ಕೊಡವ ಭಾಷೆಯು ಕನ್ನಡದ ಉಪಭಾಷೆಯಾಗಿದೆ. ದ್ರಾವಿಡ ಭಾಷೆಯ ಮುಖ್ಯ ಭಾಷೆಯಾದ ಕನ್ನಡದ ಹೆಚ್ಚು ಪದಗಳನ್ನು ಕೊಡವ ಭಾಷೆಯಲ್ಲಿ ನೋಡಬಹುದು. ಕೊಡವ ಭಾಷೆ ಸೀಮಿತ ವಲಯಕ್ಕೆ ಸೇರಿದ ಪ್ರಾದೇಶಿಕ ಭಾಷೆಯಾದರೂ, ಇಲ್ಲಿನ ಪದಸಂಪತ್ತಿನಲ್ಲಿ ಶೇಕಡ ೪೦ರಷ್ಟು ಕನ್ನಡ, ಶೇ ೧೫ ರಷ್ಟು ತಮಿಳು, ಶೇ ೫ರಷ್ಟು ಮಲೆಯಾಳ, ತುಳು ಪದಗಳು ಸೇರಿದ್ದು, ಕೆಲವು ಪದಗಳು ಕೊಡವ ಭಾಷೆಯ ಪದಗಳಾಗಿವೆ. ಗ್ರೇಟರ್ ಎಂಬ ಪಾಶ್ಚಾತ್ಯ ವಿದ್ವಾಂಸರು Coorg songs with outline of coorg grammer, Rev.A.Grater manglore–೧೮೭೦ ಎಂಬ ವ್ಯಾಕರಣ ಮತ್ತು ಹಾಡಿನ ಪುಸ್ತಕ ರಚಿಸಿದ್ದಾನೆ, ಕ್ರಿ.ಶ. ೧೯೯೮ ರಲ್ಲಿ ಕೊಡವ ಭಾಷೆಯು ಉಪಭಾಷೆಯಾಗಿ, ಸೇರಿಸಲ್ಪಟ್ಟಿದೆ.

ಕೊಡವ ಭಾಷೆಯು ದಕ್ಷಿಣ ದ್ರಾವಿಡ ಭಾಷೆಯ ಗುಂಪಿನದಾಗಿದ್ದು, ಇದು ೨೩ ಸಮುದಾಯಗಳ ಮಾತೃಭಾಷೆಯಾಗಿದೆ ಎಂದು ೧೮೧೨ ರಲ್ಲಿ ರಚಿಸಿದ ಲಿಂಗರಾಜನ 'ಹುಕುಂನಾಮೆ' ಯಲ್ಲಿ ತಿಳಿಸಲಾಗಿದೆ. ೧೮೫೫ ರಲ್ಲಿ ಪ್ರಕಟವಾದ ಮೋಗ್ಲಿಂಗ್‌ನ 'ಕೂರ್ಗ್ ಮೆಮೊಯರ್ಸ್' ಗ್ರಂಥದಲ್ಲಿ ಕೊಡವ ಭಾಷೆಯನ್ನು ೧೩ ಸಮುದಾಯದ ಮಾತೃಭಾಷೆ ಎಂದಿದ್ದಾನೆ. ೧೮೭೧ ರಲ್ಲಿ ರಿಕ್ಟರನು ೧೫ ಸಮುದಾಯದ ಭಾಷೆ ಎಂದಿದ್ದಾನೆ. ೧೮೮೭ ರಲ್ಲಿ ಕೊರವಂಡ ಅಪ್ಪಯ್ಯನವರು ಕೊಡಗು ಭಾಷೆಗೆ ಪ್ರತ್ಯೇಕ ಲಿಪಿ ಸೃಷ್ಟಿಸಿದರು. ಆದರೆ ಅದು ಚಲಾವಣೆಗೆ ಬರಲಿಲ್ಲ. ಅನಂತರ ಐ.ಮಾ.ಮುತ್ತಣ್ಣನವರು ಕೊಡವ ಭಾಷೆಯ ಲಿಪಿಯನ್ನು ಹುಡುಕಲು ಪ್ರಯತ್ನಿಸಿದರೂ ಫಲ ದೊರಕಲಿಲ್ಲ ಹಾಗಾಗಿ ಕೊಡವರು ಕನ್ನಡ ಲಿಪಿಯನ್ನು ಬಳಸಿಕೊಂಡು ವ್ಯವಹಾರವನ್ನು, ಬರವಣಿಗೆಯನ್ನು ಮುಂದುವರೆಸಿದರು.

ಕೊಡಗಿನಲ್ಲಿ ಕೊಡವ ಭಾಷೆಯನ್ನಾಡುವ ಕೊಡವೇತರ ಮೂಲ ನಿವಾಸಿಗಳೂ ಇದ್ದು ಅವರಲ್ಲಿ ಪ್ರಮುಖವಾಗಿ ೨೩ ಸಮುದಾಯಗಳನ್ನು ಗುರುತಿಸಲಾಗಿದೆ.

"೧) ಕೊಡವ, ೨) ಅಮ್ಮ ಕೊಡವ ೩) ಪೆಗ್ಗಡೆ, ೪) ಭೂಣೆಪಟ್ಟಮ ೫) ಮುಕ್ಕಾಟಿ, ೬) ಕುಂಬಾರ, ೭) ಉಪ್ಪಾರ (ಕೊಯವ) ೮) ಅಗಸ, ೯) ಐರಿ, ೧೦) ಅಕ್ಕಸಾಲೆ, ೧೧) ದೇವಾಂಗ, ೧೨) ಕೊತ್ತೇರು, ೧೩) ಕಟ್ಟಿಗ, ೧೪) ವಡ್ಡ, ೧೫) ಕಣಿಯ, ೧೬) ದಾಸ, ೧೭) ಕ್ಷೌರಿಕ, ೧೮) ಮೇದ,

೧೯) ಬಡಗ, ೨೦) ಹೊಲೆಯ, ೨೧) ಕೆಂಬಟ್ಟಿ, ೨೨) ಮಾರಂಗಿ, ೨೩) ಮಲೆಯಮಾರಿಹೊಲೆಯ"[೨೨] ಮುಂತಾದವು.

ಕೊಡವ ಭಾಷೆಯು ತಮಿಳು-ಮಲಯಾಳಂ ಭಾಷೆಗಳ ಹತ್ತಿರದಲ್ಲಿದೆಯೆಂದು ಜರ್ಮನ್ ವ್ಯಾಕರಣಕಾರ ಮೋಗ್ಲಿಂಗ್ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. "ಕೊಡವ ಭಾಷೆಯು ತುಳು ಹಾಗೂ ಹಳಗನ್ನಡದ ನಡುವಿನದ್ದೆಂದು ರಾಬರ್ಟ್ ಕಾಲ್ಡ್‌ವೆಲ್ ಅಭಿಪ್ರಾಯ ಪಟ್ಟಿದ್ದಾರೆ"[೨೩] ಬುಡಕಟ್ಟು ಸಮುದಾಯದ ಭಾಷೆ ಹಾಗೂ ಮಲಯಾಳಂ ಭಾಷೆಯ ಸಮ್ಮಿಶ್ರಣದಿಂದ ಕೊಡವ ಭಾಷೆ ಸೃಷ್ಟಿಯಾಗಿದೆಯೆಂದು ಸಂಶೋಧಕರಾದ ಪ್ರಭಾಕರ್‌ಶಿಶಿಲರ ಅಭಿಪ್ರಾಯವಾಗಿದೆ. ಆದರೆ ಕೊಡಗನ್ನು ಕನ್ನಡ ಭಾಷಾ ಪ್ರದೇಶಗಳೇ ಸುತ್ತುವರಿದಿರುವ ಕಾರಣ ಕನ್ನಡದ ಪ್ರಭಾವ ಹೆಚ್ಚಾಗಿರಬಹುದು, ಇತ್ತೀಚೆಗೆ ಕೊಡವ ಭಾಷೆಯಲ್ಲಿ ಪಾರಸೀ, ಅರಬ್ಬಿ, ಉರ್ದು ಹೀಗೆ ಅನ್ಯ ದೇಶಿಯ ಪದಗಳು ಸೇರಿಕೊಂಡಿವೆ.

ಬರೆಹ ರೂಪದಲ್ಲಿ ಪ್ರಾಚೀನ ದಾಖಲೆಗಳು ಇಲ್ಲದಿರುವುದರಿಂದ ಈ ಭಾಷೆಯ ಆರಂಭದ ರೂಪವನ್ನು ತಿಳಿಸುವುದು ಕಷ್ಟವಾಗುತ್ತದೆ. ಕೊಡವ ಭಾಷೆಯಲ್ಲಿ ಒಟ್ಟು ೩೨ ಧ್ವನಿಮಾಗಳಿವೆ. ಇವುಗಳಲ್ಲಿ ೧೨ ಸ್ವರಗಳು ಹಾಗೂ ೨೦ ವ್ಯಂಜನಗಳು.

ಸ್ವರಾಕ್ಷರಗಳು:- "ಅ ಆ ಇ ಈ ಉ ಊ ಎ ಏ ಐ ಒ ಓ ಔ

ವ್ಯಂಜನಾಕ್ಷರಗಳು:- ಕ ಗ ಙ, ಚ ಜ ಞ, ತ ದ ನ, ಪ ಬ ಮ, ಯ ರ ಲ ವ ಬಿಂದು/ಅನುಸ್ವಾರ//[೨೪] ಕೊಡವಭಾಷೆಯಲ್ಲಿ ಮಹಾಪ್ರಾಣಾಕ್ಷರಗಳಿಲ್ಲ. ಪದದ ಆರಂಭದಲ್ಲೂ ಪರಭಾಷೆಗಳಿಂದ ಬಂದ ಪದಗಳಲ್ಲಿ ಮಾತ್ರ ಸಂಯುಕ್ತ ವ್ಯಂಜನ ಬರುತ್ತದೆ. ಉದಾ ಬ್ರಹ್ಮ, ತ್ಯಾಗ, ದ್ವೇಷ, ಇತ್ಯಾದಿ.ಕೊಡವ ಭಾಷೆಯಲ್ಲಿ ವ್ಯಂಜನಾಂತ ಶಬ್ದಗಳೇ ಹೆಚ್ಚು ಉಪಯೋಗದಲ್ಲಿವೆ. ಉದಾ ಎನ್ನಂಗ್, ಎಲ್ಲಿಕ್, ಯಕ್ಕಕ್ ಇತ್ಯಾದಿ. ಕೆಲವು ಪದಗಳ ಕೊನೆಯಲ್ಲಿ ಅನುನಾಸಿಕ ಉಚ್ಚಾರಣೆಯು ಬರುತ್ತದೆ.

ಮೃದು ಮತ್ತು ಕಠಿಣ ವ್ಯಂಜನಾಕ್ಷರಗಳು ಅನೇಕ ವೇಳೆ ಅದಲು ಬದಲು ಮಾಡಲ್ಪಡುತ್ತವೆ. ಉಂಟು ಎಂಬುವುದು ಉಂಡ್ ಆಗುತ್ತದೆ. ಕೊಡವ ಭಾಷೆಯ ಕ್ರಿಯಾರೂಪಗಳಲ್ಲಿ ಹಳಗನ್ನಡದ ಪ್ರಯೋಗಗಳನ್ನು ಕಾಣಬಹುದು. ಪೊ, ಬಾ,ನಿಲ್, ಚುಡ್, ಕುನ್ನಿ, ಮುಂತಾದವನ್ನು ಕೆಲವು ಹಿಂದುಸ್ತಾನಿ ಭಾಷೆಯ ಪದಗಳನ್ನು ಕೊಡವ ಭಾಷೆಯಲ್ಲಿ ಕಾಣಬಹುದು. ಉದಾ: ಕೋಂಬರೆ, ಕೂಲಿ, ಕಾರ್‌ಬಾರ್, ಕೂವ, ಮುಂತಾದವು. ಕೊಡಗು ಜಿಲ್ಲೆಯ ಗಡಿ ಭಾಗವು ಕೇರಳ ಪ್ರಾಂತ್ಯದ ಭಾಗವಾಗಿರುವ ಕಾರಣ ಹೆಚ್ಚು ಹೆಚ್ಚು ಮಲೆಯಾಳ ಪದಗಳನ್ನು ಕೊಡವ ಭಾಷೆಯಲ್ಲಿ ನೋಡಬಹುದು. ಉದಾ:-ಕುಜ್ಞಿ, ಪಣಿ, ಪಿಲ್ಲ್, ಪಾಲ್, ಬಿತ್ತ್, ಮೋರ್, ಮುಂತಾದವುಗಳು. ತಮಿಳು ದ್ರಾವಿಡ ಭಾಷೆಗಳಲ್ಲಿ ಒಂದಾಗಿರುವ ಕಾರಣ ಆಚಿ, ಪೋಚಿ, ಮೂಕ್, ನೀನ್, ಪಾಲ್, ಮೋರ್ ಮುಂತಾದ ತಮಿಳು ಪದಗಳು ಕೊಡವ ಭಾಷೆಯಲ್ಲಿವೆ.

ಕೊಡವ ಭಾಷೆಯಲ್ಲಿ ದ್ರಾವಿಡ ಭಾಷೆಗಳಲ್ಲಿರುವಂತೆ ವ್ಯಂಜನಾಂತ ಪದಗಳು ಹೆಚ್ಚು ಬಳಕೆಯಲ್ಲಿವೆ. ಅನುನಾಸಿಕದಲ್ಲಿ ಅಂತ್ಯಗೊಳ್ಳುವ ಕೆಲವು ಪದಗಳು

ಇವೆ. ಕನ್ನಡದಲ್ಲಿ ಕ>ಚ ಆಗಿ, ಪ>ಹ ಆಗಿ, ಚ>ಸ ಕಾರವಾಗಿ ಬದಲಾವಣೆಯಾಗಿರುವಂತೆ ಕೊಡವ ಭಾಷೆಯಲ್ಲಿ ಬದಲಾವಣೆ ಆಗಿಲ್ಲ. ಉದಾ: ಹೂವು (ಕನ್ನಡ), ಪೂವ್ (ಕೊಡವ), ಹಾಲು (ಕ)>ಪಾಲ್ (ಕೊಡವ), ಹುಳು (ಕನ್ನಡ) ಪುಳು (ಕೊಡವ) ಮುಂತಾದ ಹಳಗನ್ನಡದ ಮೂಲ ಪದಗಳು ಕೊಡವ ಭಾಷೆಯಲ್ಲಿ ಹಾಗೆಯೆ ಉಳಿದುಕೊಂಡು ಬಂದಿವೆ.

ಕೊಡವ ಭಾಷೆಯಲ್ಲಿ ಪುಲ್ಲಿಂಗ ಸ್ತ್ರೀಲಿಂಗ, ನಪುಂಸಕಲಿಂಗವೆಂಬ ಲಿಂಗ ಪ್ರಭೇದ ಏಕವಚನದಲ್ಲೂ ಪ್ರಥಮ ಪುರುಷ ಸರ್ವನಾಮದಲ್ಲೂ ಇದೆ.

ಬಹುವಚನದಲ್ಲಿ ಸ್ತ್ರೀಲಿಂಗ – ಪುಲ್ಲಿಂಗಕ್ಕಾಗಿ ಒಂದು ರೂಪ ಮಾತ್ರ ಇದೆ. ಉದಾ ಅಂವೊ (ಪು.ಅವನು) ಅವ (ಸ್ತ್ರೀ.ಅವಳು) ಅವು (ಅವರು–ಸ್ತ್ರೀ– ಪು ಬಹುವಚನ) ಪೂರ್ಣ ಕ್ರಿಯಾ ಪದದಲ್ಲಿ ಮಾತ್ರ ವಚನ ವ್ಯತ್ಯಾಸವಿದೆ.

ಉದಾ–ಬಂದೆ, ಬಾತ್, ಬಂದಿತ್, ಬಂದ್‌ರಿ ಪದಗಳು

ನಾನ್: ಬಂದೆ: (ನಾನು ಬಂದೆ)

ಬಾತ್ : ನಂಗ ಬಾತ್ (ನಾವು ಬಂದೆವು)

ಬಂದಿತ್ : ನೀನ್ ಬಂದಿಯಾ (ನೀನು ಬಂದೆ)

ಬಂದ್‌ರಿ : ನಿಂಗ ಬಂದ್‌ರಿ (ನೀವು ಬನ್ನಿ) ಎಂದಾಗುತ್ತವೆ.

ಬಾತ್ ಅಂವೊ, ಅವ, ಅವ್, ಅದ್, ಅಯಿಂಗ ಹೀಗೆ ಲಿಂಗ ವಚನ ವ್ಯತ್ಯಾಸವನ್ನು ವಾಕ್ಯದಲ್ಲಿ ಸರ್ವನಾಮ ಇದ್ದಾಗ ಮಾತ್ರ ಇಲ್ಲಿ ಗುರುತಿಸಲು ಸಾಧ್ಯ. ಕನ್ನಡ ಭಾಷೆಯ ಮೇಲೆ ಪ್ರಭಾವ ಬೀರಿದ ಸಂಸ್ಕೃತ ಭಾಷೆಯು ಕೊಡವ ಭಾಷೆಯ ಮೇಲೂ ಪಾಂಡಿತ್ಯವನ್ನು ಬೀರಿದೆ. ಕೊಡವ ಭಾಷೆಯ ನಾಟಕಗಳಲ್ಲಿ ಸಂಸ್ಕೃತ ಶಬ್ದಗಳ ಕಾಣಸಿಗುತ್ತದೆ. ಆದರೆ ಕನ್ನಡ ಭಾಷೆಗೆ ಹೋಲಿಸಿದರೆ ಕೊಡವ ಭಾಷೆಯಲ್ಲಿ ಬೆರೆತ ಸಂಸ್ಕೃತ ಪದಗಳ ಪ್ರಮಾಣ ತೀರ ಕಡಿಮೆ ಎನ್ನಬಹುದು.ಉದಾಹರಣೆಗೆ ದಿ॥ ಅಪ್ಪಚ್ಚ ಕವಿಯ ಯಯಾತಿರಾಜ ನಾಟಕದ ಒಂದು ತುಣುಕನ್ನು ಇಲ್ಲಿ ನೋಡಬಹುದು.

"ಆಹ! ಮೋಳೆ, ಒಂದಿಂಜ ನೀಡ ಮೂಡ್ ನೋಟಿಯೆಂಡ್ ದೇವಿಯೂ ನಾನೂ ಸಂತೋಷತಿಂಜತ್, ಇಸ್ನತ ನಿನ್ನ ಬುಟ್ಟಿತ್ ಏದ್ ಭಾಗ್ಯಕಾಯಿತ್ ಬದ್ಕುವ ಎಣ್ಣ್? ನಾಡ ಅವ್ವ ಅರಿಂಜಕ್ಕ, ಅವ ಜೀವ ಬೆಚ್ಚುವ ದುಂಡೋ? ಆಹ! ಕಷ್ಟ (ಗೇನ ಮಾಡಿತ್) ಮೋಳೆ, ವ್ಯಸನಪಟ್ಟಿತ್ ಪ್ರಯೋಜನ ಇಲ್ಲೆ, ನೀನ್ ಪೋ, ನೀಕ್ ಪೋಪಲ್ಲಿ, ಬಪ್ಪಲ್ಲಿ, ಇಪ್ಪಲ್ಲಿ, ಬಟ್ಟೆಲೂ, ಬೈಲೂನೀಡ ಜೀವಕ್ಕೂ ಎಕ್ಕಲೂ ದೇವ ಸುಗ ತರಡ್. ಪೋ"

ಕೊಡವರು ಉದ್ಯೋಗದ ನಿಮಿತ್ತ ಹೊರ ದೇಶ, ಹೊರರಾಜ್ಯಗಳಲ್ಲಿ ಬಹುದೂರ ಹೋಗಿ ನೆಲೆಸಲು ಪ್ರಾರಂಭಿಸಿದ್ದಾರೆ. ಆಧುನಿಕತೆಂಯು ಸ್ಥಿತ್ಯಂತರಕ್ಕೊಳಪಟ್ಟರೂ ಇತರ ಭಾಷೆಯ ವ್ಯಾಮೋಹಕ್ಕೆ ಒಳಗಾಗದೆ, ಕೊಡವ ಭಾಷೆಯ ಸಂಸ್ಕೃತಿಯನ್ನು ಪರಿಚಯಿಸಿ ಬೆಳೆಸುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸಬೇಕು. ಕೊಡವ ಭಾಷೆಯ ಸಮುದಾಯದವರಿಂದ ಮಾತ್ರ ಮಾತೃಭಾಷೆ ಉಳಿಯುತ್ತದೆ. ಇದರಲ್ಲಿ–ದೇವಿ, ಸಂತೋಷ, ಭಾಗ್ಯ, ಜೀವ, ಕಷ್ಟ, ವ್ಯಸನ, ಪ್ರಯೋಜನ,

ದೇವ ಎಂಬ ಎಂಟು ಪದಗಳು ಸಂಸ್ಕೃತ ಪದಗಳಾಗಿವೆ. ಗೇನ, ಸುಗ ಎಂಬೆರಡು ತದ್ಭವ ಪದಗಳಾಗಿವೆ. ಉಳಿದವುಗಳೆಲ್ಲ ಕೊಡವ ಭಾಷೆಯವು.

ಕೊಡವ ಭಾಷೆ ಸಂಸ್ಕೃತ ಪದಗಳನ್ನು ಎರಡು ರೀತಿಯಲ್ಲಿ ಸ್ವೀಕರಿಸಿದೆ. ಕನ್ನಡದ ಮೂಲಕ ಸ್ಥಾನವನ್ನು ಪಡೆದ ಶಬ್ದಗಳು, ನೇರವಾಗಿ ಬಂದ ಪದಗಳು. ಕೊಡಗನ್ನು ಆಳಿದ ರಾಜರ ಆಡಳಿತ ಭಾಷೆ ಕನ್ನಡವಾದ ಕಾರಣ ಕನ್ನಡ ಭಾಷೆಯ ಪ್ರಾಬಲ್ಯ ಹೆಚ್ಚಾಗಿ ಕನ್ನಡದಲ್ಲಿ ಪ್ರಚಲಿತವಾಗಿರುವ ಸಂಸ್ಕೃತ ಪದಗಳು ಕೊಡವ ಭಾಷೆಗೆ ಸೇರಿಕೊಂಡವು ಎನಿಸುತ್ತದೆ.

ಕೊಡಗಿನಲ್ಲಿ ವೈದಿಕ ಸಂಪ್ರದಾಯದ ರೂಢಿಯಿದ್ದುದರಿಂದ ಮಂತ್ರ ತಂತ್ರಗಳಲ್ಲಿ ಬರುವ ಬಳಕೆಯ ಕೆಲವು ಶಬ್ದಗಳು, ಸಂಸ್ಕೃತ ಪುರಾಣ, ಕಾವೇರಿಪುರಾಣ ಪಠನದಿಂದ ಬಂದ ದೇಶ, ರೂಪ, ಲೋಕ, ನಂದಾದೀಪ, ದೇವ, ನೀತಿ, ನಯ, ಭೀತಿ, ರೀತಿ ಮುಂತಾದ ಸಂಸ್ಕೃತ ಪದಗಳು ಕೊಡವ ಭಾಷೆಯ ಶಬ್ದಕೋಶವನ್ನು ಶ್ರೀಮಂತಗೊಳಿಸಿವೆ.

ಇತ್ತೀಚೆಗೆ ಕೊಡವ ಭಾಷೆಯನ್ನು ೮ನೇ ಪರಿಚ್ಛೇದಕ್ಕೆ ಸೇರಿಸಲು ಚಿಂತನೆ ನಡೆದಿದೆ. ಕೊಡವ ಅಕಾಡೆಮಿ ಸ್ಥಾಪನೆ, ಕೊಡವ ಪಠ್ಯವನ್ನು ಪ್ರಾಥಮಿಕ ಹಂತದಲ್ಲಿ ಸೇರಿಸಲು ಹೋರಾಟ ನಡೆಯುತ್ತಿದೆ. ಕೊಡವ ಸಾಹಿತ್ಯದ ಬೆಳೆವಣಿಗೆಯ ಹಾದಿಯಲ್ಲಿ ಕೊಡವ ಸಾಹಿತ್ಯ ಅಕಾಡೆಮಿಯು ಹಲವಾರು ಸಾಹಿತ್ಯ ಕೃತಿಗಳನ್ನು ಪ್ರಕಟಿಸಿ ಬರಹಗಾರರಿಗೆ ಪ್ರೋತ್ಸಾಹ ನೀಡುತ್ತಿದೆ. ಎಲ್ಲಾ ತಾಲ್ಲೂಕುಗಳಲ್ಲಿ 'ಕೊಡವ ನಮ್ಮೆ' (ಹಬ್ಬ) ಎಂಬ ಸಂಸ್ಕೃತಿ, ಸಂಪ್ರದಾಯಕಲೆಯನ್ನು, ಜನಪದ ಕುಣಿತಗಳನ್ನು ನೀಡಿ ಪ್ರೋತ್ಸಾಹಿಸುತ್ತಿದ್ದಾರೆ. ಕೊಡವ ಸಮಾಜಗಳು, ಕೊಡವ ಭಾಷಾ ಬರಹಗಾರರ ಒಕ್ಕೂಟ, ಆಕಾಶವಾಣಿ, ಮತ್ತು ಪತ್ರಿಕಾ ಮಾಧ್ಯಮಗಳು ಕೊಡವ ಸಂಸ್ಕೃತಿ, ಸಾಹಿತ್ಯ ಭಾಷಾ ಬೆಳೆವಣಿಗೆಗೆ ಸಹಕಾರ ನೀಡುತ್ತಿವೆ.

ಕೊಡವರ ಸಾಂಸ್ಕೃತಿಕ ವೈವಿಧ್ಯತೆ

ಕೊಡವರ ಇತಿಹಾಸ, ಸಾಹಿತ್ಯದ ಹಾಗೆ ಅವರ ಸಾಂಸ್ಕೃತಿ ಶ್ರೀಮಂತಿಕೆಯು ವೈವಿಧ್ಯಮಯವಾದದ್ದು. ಇಡೀ ಮಹಾಪ್ರಬಂಧದಲ್ಲಿ ಸಾಂಸ್ಕೃತಿಕ ವಿಚಾರಗಳು ಒಂದಲ್ಲಾ ಒಂದು ರೀತಿಯಲ್ಲಿ ಪ್ರಸ್ತಾಪವಾಗುತ್ತಲೇ ಇರುತ್ತವೆ. ಹಾಗೆ ನೋಡಿದರೆ ಈ ಸಂಶೋಧನೆಯ ಮೂಲ ಉದ್ದೇಶ ಕೊಡವರ ಸಮಾಜೋ ಸಾಂಸ್ಕೃತಿಕ ಸಂಸ್ಕಾರಗಳನ್ನು ಕುರಿತು ಅಧ್ಯಯನ ಮಾಡುವುದೇ ಆಗಿದೆ. ಈ ಅಧ್ಯಾಯದಲ್ಲಿ ಸಾಂಸ್ಕೃತಿಕ ವೈವಿಧ್ಯತೆಯ ಒಂದು ಭಾಗವಾಗಿ ಪ್ರದರ್ಶನಾತ್ಮಕ ಕಲೆಗಳು ಮತ್ತು ಈ ಭಾಗದ ಸಾಂಸ್ಕೃತಿಕ ಶ್ರೀಮಂತಿಕೆಯ ಪ್ರತಿನಿಧಿಗಳಾಗಿ ಕಂಡುಬರುವ ಗಣ್ಯವ್ಯಕ್ತಿಗಳ ಸಂಕ್ಷಿಪ್ತ ಪರಿಚಯದ ಅನಾವರಣವಿದೆ.

ಅತ್ಯಂತ ಪ್ರಾಚೀನವಾದ ಜನಪದ ಕಲೆಗಳು ಜನರ ದಿನನಿತ್ಯ ಜೀವನದ ಅಂಗವಾಗಿವೆ. ಕಲಾತ್ಮಕವು ವೈವಿಧ್ಯಮಯವು, ವಿಶಾಲವು ಆದ ಈ ಕಲೆಯನ್ನು ಸಂಸ್ಕೃತಿ, ಪದ್ಧತಿ, ನಡತೆ, ನಿಯಮ ಮುಂತಾದ ನಿರ್ದಿಷ್ಟವಾದ ಚೌಕಟ್ಟಿನೊಳಗೆ ಹಿಡಿದಿಡಲು ಸಾಧ್ಯವಾಗುವುದಿಲ್ಲ. ಜನಪದರ ಬದುಕೇ ಕಲೆಯಾಗಿರುವುದರಿಂದ

ಅದು ಆಯಾಯ ಸಮುದಾಯದ ಜನರ ಸಂಸ್ಕೃತಿಯನ್ನು ಒಳಗೊಂಡಿದ್ದು, ಅವರ ಅಂತರಂಗವನ್ನು ವ್ಯಕ್ತಪಡಿಸುವಂಥದ್ದಾಗಿರುತ್ತದೆ.

ಪ್ರಾಚೀನಕಾಲದಲ್ಲಿ ಮನುಷ್ಯ ಭಾಷೆಯ ಮೂಲಕ ಭಾವನೆಗಳನ್ನು ವ್ಯಕ್ತಪಡಿಸುವ ಮೊದಲು, ತನ್ನ ಅನುಭವಗಳನ್ನು ತುಡಿತ ಮಿಡಿತಗಳನ್ನು, ಹಾವಭಾವಗಳನ್ನು, ಆಸೆ ಆಕಾಂಕ್ಷೆಗಳನ್ನು ಅಭಿನಯದ ಮೂಲಕ ಅಭಿವ್ಯಕ್ತಪಡಿಸುತ್ತಿದ್ದನು. ಮೊದಲು ಸಾಂಕೇತಿಕವಾಗಿ ಮೂಡಿಬಂದ ಆಂಗಿಕ ಚಲನವಲನಗಳು, ಕ್ರಮೇಣ ಕುಣಿತಗಳು, ಆಟಗಳು ಆದವು. ಮನುಷ್ಯ ತನ್ನ ಜೀವನದಲ್ಲಿ ಆನಂದವನ್ನು, ನೆಮ್ಮದಿಯನ್ನು ಕಾಣಲು ದೇವರನ್ನು ನಂಬಿದ. ಪೂಜೆಯನ್ನು ಮಾಡುವಾಗ ಹಾಡಿ ಕುಣಿಯಲು ಪ್ರಾರಂಭಿಸಿದ. ಆಮೂಲಕ ತನ್ನ ಅಂತರಂಗದ ಆಯಾಸವನ್ನು ಕಳೆಯಲು ತನ್ನದೇ ಆದ ದಾರಿ ಕಂಡುಕೊಂಡ.

ಜನಪದ ಪ್ರದರ್ಶನಾತ್ಮಕ ಕಲೆ ಆಯಾ ಜನಾಂಗದ ಜೀವನಾಡಿ. ಅವು ಆ ಸಮುದಾಯದ ಭಾವನೆ, ನಂಬಿಕೆ ಹಾಗೂ ಆಶೋತ್ತರಗಳು ಅವರ ಕಲೆಗಳ ಮುಖಾಂತರ ಅಭಿವ್ಯಕ್ತಗೊಳ್ಳುತ್ತವೆ. ಸಾಂಸ್ಕೃತಿಕ ಸಂಸ್ಕಾರಗಳನ್ನು ಮೆರೆಯುವಲ್ಲಿ ಜನಪದ ಕಲೆಗಳು ಪ್ರಮುಖ ಆಧಾರಗಳಾಗಿವೆ.

ಕಲೆಗಳು ಆಯಾ ಸಮುದಾಯದ ಸಂಪ್ರದಾಯ, ಸಂಸ್ಕಾರಗಳ ಆರಾಧನೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿವೆ. ಮದುವೆ, ಹಬ್ಬ–ಹರಿದಿನ, ಹುಟ್ಟು, ಸಾವುಗಳಲ್ಲಿ ಕಲೆಗಳು ಕಾಣಿಸಿಕೊಳ್ಳುತ್ತವೆ.

ಪ್ರತಿಯೊಂದು ಸಮಾಜವು ಜನಪದ ಕಲೆಗಳನ್ನು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಪೋಷಿಸಿಕೊಂಡು ಬರುತ್ತದೆ. ಕೆಲವರು ಧಾರ್ಮಿಕ ಹಿನ್ನೆಲೆಯಲ್ಲಿ, ಮನರಂಜನೆಯ ಹಿನ್ನೆಲೆಯಲ್ಲಿ, ಇನ್ನು ಕೆಲವರು ಜೀವನೋಪಾಯದ ಹಾದಿಯಲ್ಲಿ ಪೋಷಿಸುತ್ತಿದ್ದಾರೆ. ಜನಪದ ಕಲೆಗಳನ್ನು ವಿಶ್ವಮಟ್ಟದಲ್ಲಿ ಉಳಿಸಿ ಕಲೆಹಾಕುವ ನಿಟ್ಟಿನಲ್ಲಿ ಇಂದು ಕರ್ನಾಟಕ 'ಜಾನಪದ ವಿಶ್ವವಿದ್ಯಾಲಯ'ವು ಮಹತ್ತರ ಕೆಲಸ ಮಾಡುತ್ತಿದೆ. ಎಲ್ಲಾ ಪ್ರದೇಶಗಳ ಜಾನಪದದ ಸಂಪತ್ತನ್ನು ಅಧ್ಯಯನಕ್ಕೊಳಪಡಿಸುತ್ತಿರುವುದು ಆಶಾದಾಯಕವೂ, ಅನಿವಾರ್ಯವೂ ಆಗಿದೆ.

ಕೊಡವರು ಕಲೆಗಳಲ್ಲಿ ಶೌರ್ಯ, ಸಾಹಸ, ವೀರತ್ವವನ್ನು ಕಾಣುತ್ತಿದ್ದಾರೆ. ಅವರ ಜನಪದ ಕಲೆಗಳಿಗೆ ಅಲ್ಲಿಯ ನಿಸರ್ಗವೇ ಪ್ರಾದೇಶಿಕ ನೆಲೆಯಾಗಿದೆ.. ಕೊಡಗು ಜಿಲ್ಲೆಯಲ್ಲಿ ಕಂಡು ಬರುವ ಹೆಚ್ಚಿನ ಜನಪದ ಕಲೆಗಳು ಪುರುಷ ಪ್ರಧಾನವಾದವು ಮತ್ತು ವೀರರಸ ಪ್ರಧಾನವಾದವು. ಬೇಟೆಯ ಸಾಹಸದಿಂದ ಹಿಡಿದು ವ್ಯವಸಾಯ, ದಿನನಿತ್ಯದ ಚಟುವಟಿಕೆಗಳ ಸುತ್ತ ಜನಪದ ಕಲೆ ಹುಟ್ಟಿ ಬೆಳೆದಿವೆ.

ಕೆಲಸ ಮುಗಿಸಿದ ರೈತನಿಗೆ ವಿಶ್ರಾಂತಿಯ ಅವಶ್ಯಕತೆ ಇರುತ್ತದೆ. ಕೊಡವರು ಅದಕ್ಕೆ ಪರಿಹಾರವಾಗಿ 'ಕೈಲ್‌ಪೊಳ್ದು' ಎಂಬ ಹೆಸರಿನಲ್ಲಿ ಭಾರಗುಂಡು ಎಸೆತ, ತೆಂಗಿನಕಾಯಿಗೆ ಕಲ್ಲು ಒಡೆಯುವುದು, ನಾಟಿಗದ್ದೆಯ ಓಟ ಹಾಗೂ ತಮ್ಮ ಬಲಾಬಲ ಪ್ರದರ್ಶನ ಮಾಡುವಂತಹ ಹಗ್ಗಜಗ್ಗಾಟ ಮುಂತಾದ ಜನಪದ ಕ್ರೀಡಾ ಕಲೆಗಳಲ್ಲಿ ಮನರಂಜನೆ ಕಂಡುಕೊಂಡರು. ಆನಂತರ ವರ್ಷದ ಅನ್ನಕ್ಕೆ ಧಾನ್ಯಲಕ್ಷ್ಮಿಯ ಹೆಸರಿಟ್ಟು ಪೂಜಿಸಿ ತಮ್ಮ ಸಂತಸ ಮತ್ತು ನೆಮ್ಮದಿಗಾಗಿ 'ಹುತ್ತರಿ' ಹಬ್ಬವನ್ನು ಆಚರಿಸತೊಡಗಿದರು.

ಕೊಡವರ ಪ್ರದರ್ಶನಾತ್ಮಕ ಕಲೆಗಳು

ಕೊಡವರ ಪ್ರದರ್ಶನಾತ್ಮಕ ಕಲೆಗಳು ಪ್ರಕೃತಿಯ ಪರಿಸರದಲ್ಲಿ ಉಗಮವಾಗಿ ಕುಲದೇವತೆಗಳನ್ನು ನಂಬಿ ಆಚರಿಸಿ, ಆರಾಧಿಸುವ ಸಂಪ್ರದಾಯವನ್ನು ಹೊಂದಿರುತ್ತವೆ. ಕೊಡವರ ಕಲೆಗಳಲ್ಲಿ ಈ ಅಂಶಗಳನ್ನು ನೋಡಬಹುದು. ಕೊಡವರ ಪ್ರಮುಖ ಕಲೆಗಳನ್ನು ಅಧ್ಯಯನದ ದೃಷ್ಟಿಯಿಂದ ಧಾರ್ಮಿಕ ಕಲೆ, ಮನೋರಂಜನಾ ಕಲೆ, ವೀರಪ್ರಧಾನ ಕಲೆಗಳೆಂದು ವಿಂಗಡಿಸಿ ವಿಶ್ಲೇಷಿಸಲಾಗಿದೆ.

೧. ಧಾರ್ಮಿಕ ಕಲೆ

ಕೊಂಬಾಟ್ : ಕೊಡವರ ಪ್ರಮುಖ ಕಲೆಗಳಲ್ಲೊಂದಾದ ಕೊಂಬಾಟ್ ಶೌರ್ಯ, ವೀರರಸ ಪ್ರಧಾನವಾಗಿದೆ. ಜಿಂಕೆಯ ಕೊಂಬನ್ನು ಕೈಯಲ್ಲಿ ಹಿಡಿದು ಭರ್ಜಿಯಂತೆ ಉಪಯೋಗಿಸಿ ವಿವಿಧ ರೀತಿಯಲ್ಲಿ ತಿವಿಯುವಂತೆ ನಟಿಸಿ ಕುಣಿಯುತ್ತಾರೆ. ಇತ್ತೀಚೆಗೆ ಜಿಂಕೆ ಕೊಂಬುಗಳ ಬದಲಾಗಿ ಬೀಟೆ ಅಥವಾ ಪಡಚಿ ಮರದಿಂದ ತಯಾರಿಸಿದ ಕೊಂಬುಗಳನ್ನು ಉಪಯೋಗಿಸುತ್ತಿದ್ದಾರೆ. (ವನ್ಯಜೀವಿ ರಕ್ಷಣಾ ಕಾಯಿದೆ ಬಂದಿರುವುದರಿಂದ)

ಭಸ್ಮಾಸುರನ ಸಂಹಾರ ಕಾಲದಲ್ಲಿ ಮೋಹಿನಿ ಪ್ರದರ್ಶಿಸಿದ ಎರಡು ವಿಶೇಷ ನೃತ್ಯಗಳು ಪೌರಾಣಿಕ ಕತೆಗಳಲ್ಲಿ ಪ್ರಚಲಿತದಲ್ಲಿವೆ. ಕೊಂಬುಗಳನ್ನು ಹಿಡಿದು ವೃತ್ತಾಕಾರವಾಗಿ ಮೇದರು ಪರೆಗೆ ತಕ್ಕಂತೆ ಕುಣಿಯುತ್ತಾರೆ. ಕೊಂಬುಗಳನ್ನು ಕೈಯ್ಯಲ್ಲಿ ಹಿಡಿದು ಅಂಗಾತ ಮಲಗಿ ಅಡ್ಡಲಾಗಿ ಹಿಡಿದು ನರ್ತಿಸುವರು. ಮೊಣಕಾಲನ್ನು ತಗ್ಗಿಸಿ, ನೆಗೆಯುತ್ತಾ, ಕೈಗಳಿಂದ ಕೊಂಬುಗಳನ್ನು ಹಿಡಿದು ನರ್ತಿಸುವ ಈ ಕಲೆ ರೋಮಾಂಚನಕಾರಿಯಾಗಿದೆ. ನವೆಂಬರ್ ಇಪ್ಪತ್ನಾಲ್ಕರಿಂದ ಪ್ರಾರಂಭಗೊಂಡು ಡಿಸೆಂಬರ್ ಹದಿನಾಲ್ಕರವರೆಗೆ ಈ ಪ್ರದರ್ಶನವಿರುತ್ತದೆ. ಕೊಡವ ಸಮುದಾಯದ ಮಚ್ಚಂಡ, ಮೂಡೇರ, ಬಿದ್ದಂಡ, ಪೆಮ್ಮಂಡ ಕುಟುಂಬದವರು ಕೊಂಬು ಕಡಿಯುವ ಸಂಪ್ರಾದಯವನ್ನು ಪಾಲಿಸಿಕೊಂಡು ಬಂದಿದ್ದಾರೆ.

ನಾಡು, ಕೇರಿ ಮತ್ತು ಊರುಗಳಲ್ಲಿ ನೆಲೆನಿಂತ ದೈವಗಳ ಆರಾಧನೆಯಲ್ಲಿ ಕೊಂಬಾಟವನ್ನು ಪ್ರದರ್ಶಿಸುತ್ತಾರೆ. ಆಯಾಯ ನಾಡಿನ ತಕ್ಕ (ಮುಖ್ಯಸ್ಥ) ಹಾಗೂ ಮುಕ್ಕಾಟೆ (ಪ್ರಮುಖ ವ್ಯಕ್ತಿ)ಯ ಸಮ್ಮುಖದಲ್ಲಿ ಈ ಪ್ರದರ್ಶನ ನಡೆಯುತ್ತದೆ. ಈ ಹಬ್ಬದ ಪ್ರಾರಂಭದ ದಿನದಿಂದ ಮುಕ್ತಾಯ ಆಗುವವರೆಗೂ ಮದ್ಯ ಮತ್ತು ಮಾಂಸ ಸೇವನೆ ನಿಷಿದ್ಧ. ಈ ಕಲೆಯನ್ನು ಹಗಲು ಹೊತ್ತಿನಲ್ಲಿ ಪ್ರದರ್ಶಿಸುತ್ತಾರೆ.

ಪೀಲಿಯಾಟ್ : ಕೊಡವರ ಧಾರ್ಮಿಕ ಕಲೆಯಾದ ಪೀಲಿಯಾಟ್ ಹಗಲು ಹೊತ್ತಿನಲ್ಲಿ ಪ್ರದರ್ಶಿಸುವ ಕಲೆ. ಕೈಯಲ್ಲಿ ನವಿಲುಗರಿ ಹಿಡಿದು ಕಲಾವಿದರು ಬಿಳಿಕುಪ್ಪಸವನ್ನು ನಡುವಿನವರೆಗೆ ತೊಟ್ಟು, ರೇಷ್ಮೆ ದಟ್ಟಿಯನ್ನು ಸುತ್ತಿ, ತಲೆಗೆ ಜರಿ ರುಮಾಲನ್ನು ಧರಿಸಿ ಸುಮಾರು ಒಂದು ಒಂದೂವರೆ ಅಡಿಯಷ್ಟು ಅಂತರದಲ್ಲಿ ಸುತ್ತುವರಿದು ಈ ನೃತ್ಯವನ್ನು ಪ್ರದರ್ಶಿಸುತ್ತಾರೆ. ಕೊಡಗಿನಾದ್ಯಂತ ಇದನ್ನು ಪ್ರಾದೇಶಿಕವಾಗಿ ಬೇರೆ ಬೇರೆ ದಿನ, ಕಾಲ, ದೈವ ಹಾಗೂ ಸ್ಥಳಗಳಲ್ಲಿ ಪ್ರದರ್ಶಿಸುತ್ತಾರೆ. ಊರಿನ ನಾಡು, ಕೇರಿಗಳಲ್ಲಿ ಸುಮಾರು ಹದಿನೈದು ದಿನಗಳವರೆಗೆ ಪ್ರದರ್ಶಿಸುತ್ತಾರೆ. ಪೀಲಿಯಾಟ್‌ನಲ್ಲಿ ಭಾಗವಹಿಸುವ ಕಲಾವಿದರು ಊಟೋಪಚಾರ

ಗಳಲ್ಲಿ ಮೈಲಿಗೆಯಾಗದಂತೆ ಎಲ್ಲಾ ವಿಷಯಗಳಲ್ಲೂ ಶುದ್ಧತೆಯನ್ನು ಕಾಪಾಡಿ ಕೊಳ್ಳುತ್ತಾರೆ.

ಪೀಲಿಯಾಟ್ ಪ್ರಾರಂಭವಾಗುವ ಮೊದಲು ಒಬ್ಬ ಹಿರಿಯ ವ್ಯಕ್ತಿ ತಣ್ಣೀರಿನಲ್ಲಿ ಸ್ನಾನ ಮಾಡಬೇಕು. ಆ ವ್ಯಕ್ತಿ ಯಾರ ಜೊತೆಯಲ್ಲೂ ಮಾತನಾಡುವಹಾಗಿಲ್ಲ. ಯಾರನ್ನೂ ಮುಟ್ಟುವ ಹಾಗಿಲ್ಲ. ಹಾಗೇನಾದರೂ ಮುಟ್ಟಿದರೆ ಪುನಃ ಸ್ನಾನ ಮಾಡಿ ಪೀಲಿಯನ್ನು ತೆಗೆಯುವುದು ಪದ್ಧತಿ. ಅಲ್ಲಿಂದ ದೇವಸ್ಥಾನಕ್ಕೆ ಬಂದು ಪೂಜೆ ಮಾಡಿ. ಅನಂತರ ಪೀಲಿ ಹಿಡಿದು ಕುಣಿಯುತ್ತಾರೆ. ಕುಣಿತದ ಜೊತೆ ಮೇದ ಪರೆ ಮತ್ತು ಜಾಗಟೆಗಳನ್ನು ಬಾರಿಸುತ್ತಾರೆ. ಸುಮಾರು ಹದಿನೈದು ದಿನಗಳು ನಡೆಯುವ ಪೀಲಿಯಾಟ್ ಸಂದರ್ಭದಲ್ಲಿ ಕೈತಲೆ ಆಟ್, ಬೊಳಕಾಟ್, ಕಾಳೆ ಓಡಿಸುವುದು, ಕೋಡಿ ಆಡುವುದು, ಬೇಡ್ ಮತ್ತು ಕುದುರೆಯಾಟ್ ಕಲೆಗಳನ್ನು ಪ್ರದರ್ಶಿಸುತ್ತಾರೆ. ಈ ಎಲ್ಲಾ ಕಲೆಗಳ ಆಚರಣೆ, ಪದ್ಧತಿ, ನಂಬಿಕೆ, ರೂಢಿ, ಪೂಜಾ ವಿಧಿವಿಧಾನಗಳು ಸಾಮಾನ್ಯ ರೀತಿಯದ್ದಾಗಿರುತ್ತದೆ.

ಬೊಳಕಾಟ್ : ಬೊಳಕು ಎಂದರೆ ಬೆಳಕು. 'ಕುತ್ತುಂಬೊಳುಚದ' (ಉರಿಯುವ ದೀಪಸ್ಥಂಭ) ಸುತ್ತಲೂ ಕುಣಿಯುವ ಆಟ ವಿಷ್ಣು ಭಸ್ಮಾಸುರನನ್ನು ಸಂಹಾರ ಮಾಡಿದ ಸಮಯದಲ್ಲಿ ಮೂವತ್ತೆರಡು ಬಗೆಯ ನೃತ್ಯಗಳನ್ನು ಪ್ರದರ್ಶಸಿದನಂತೆ, ಅದರ ಪ್ರತಿರೂಪವೇ ಬೊಳಕಾಟ್ ಎಂಬುದು ಅದರ ಬಗ್ಗೆ ಇರುವ ಐತಿಹ್ಯ. ಕೊಡವರ ವೀರ ನೃತ್ಯಗಳಲ್ಲಿ ಇದು ಪ್ರಮುಖವಾದುದು. ಇದರಲ್ಲಿ ಹದಿನೈದರಿಂದ ಇಪ್ಪತ್ತರ ತನಕ ಕಲಾವಿದರು ಭಾಗವಹಿಸುತ್ತಾರೆ.

ಕಲಾವಿದರು ಕೊಡವರ ವಿಶೇಷ ದಿನದ ಉಡುಪನ್ನು ಧರಿಸಿ ಸೊಂಟದಲ್ಲಿ ಪೀಚೆ ಕತ್ತಿಯನ್ನು ಸಿಕ್ಕಿಸಿ, ಎಡಕೈಯಲ್ಲಿ ಚಾಮರ, ಬಲಕೈಯಲ್ಲಿ ಅಗಲವಾದ ವಡಿಕತ್ತಿಯನ್ನು ಹಿಡಿದು ರಂಗಕ್ಕೆ ಇಳಿಯುತ್ತಾರೆ. ಎಲ್ಲರೂ ಬೊಳಕ್ ಸುತ್ತ ವೃತ್ತಾಕಾರದಲ್ಲಿ ನಿಲ್ಲುತ್ತಾರೆ. ತಂಡದ ನಾಯಕ

'ಉಮ್ಮದೇವಿ ದೇವಿತಾ ಓ ಹೈ ಓ,
ಈ ಗಿರಿ ಭೋಗಿರಿ ಓ ಗಿರಿತಾ ಓ ಹೈ ಓ,
ಕಾವೇರಮ್ಮ ದೇವಿತಾ ಓ ಹೈ ಓ,
ಇಗ್ಗುತಪ್ಪ ದೇವಂಡ ಹೋ ಹೈ ಓ ಹೈ,
ತುಂಬೆ ಮಾತೆ ದೇವಂಡ ಓ ಹೈ ಓ ಹೈ'

ಎಂಬ ಹಾಡಿನೊಂದಿಗೆ ನೃತ್ಯವನ್ನು ಪ್ರಾರಂಭಿಸುತ್ತಾನೆ. ಆಗ ಎಲ್ಲರೂ ಚಾಮರಗಳನ್ನು ಬೀಸುತ್ತಾ ನಾಯಕನನ್ನು ಅನುಸರಿಸುತ್ತಾರೆ. ಕೊಡವರ ವೀರಸಾಹಸಗಳನ್ನು ಕುರಿತು ಅಥವಾ ಕೊಡವರ ಪ್ರಸಿದ್ಧ ಮನೆತನಗಳ ಇತಿಹಾಸವನ್ನು ಹಾಡಾಗಿ ಹಾಡುತ್ತಾರೆ. ಮೇಳನಾಯಕ ಕೇಂದ್ರದಲ್ಲಿದ್ದು ಕುಣಿತವನ್ನು ನಿರ್ದೇಶಿಸುತ್ತಾನೆ. ಕುಣಿತಕ್ಕೆ ಸಾಂಪ್ರದಾಯಕ 'ದುಡಿ' ಹಿಮ್ಮೇಳವನ್ನು ಒದಗಿಸುತ್ತದೆ.

ಉಮ್ಮತ್ತಾಟ್ : ಕೊಡವರ ಕಲೆಗಳಲ್ಲೇ ವಿಶಿಷ್ಟವಾದ, ವಂಶಪಾರಂಪರಿಕವಾದ ಈ ಕಲೆ ಸ್ತ್ರೀ ಪ್ರಧಾನವಾದುದಾಗಿದೆ. ದೇವತೆಯರು ದೇವಲೋಕದಿಂದ ಭೂಲೋಕದ ಕೊಡಗಿಗೆ ಬಂದು ಅಲ್ಲಿಯ ಪ್ರಕೃತಿ ಸೌಂದರ್ಯಕ್ಕೆ ಆಕರ್ಷಿತರಾಗಿ

ಆ ಸ್ಥಳದಲ್ಲಿ ತಂಗಿದ್ದು, ಮಧ್ಯರಾತ್ರಿಯ ಸಮಯದಲ್ಲಿ ತಂಪಾದ ಗಾಳಿ, ಚಂದ್ರನ ತಿಳಿಬೆಳಕಿನಿಂದ ಹರ್ಷಿತರಾಗಿ ಈ ನೃತ್ಯವನ್ನು ಮಾಡಿದ್ದರೆಂಬ ನಂಬಿಕೆಯಿದೆ. ಹೆಣ್ಣುಮಕ್ಕಳು ಕೆಂಪು ಜರಿ ಸೀರೆಯನ್ನು ಕೊಡವ ಪದ್ಧತಿಯಂತೆ ಉಟ್ಟು ಚಿನ್ನದ ಜೋಮಾಲೆಯನ್ನು ಧರಿಸಿ ಹಣೆಗೆ ಕುಂಕುಮವಿಟ್ಟು, ಕೆಂಪು ವಸ್ತ್ರದಿಂದ ತಲೆಗೆ ಕಟ್ಟಿ ಕಂಚಿನ ತಾಳಗಳನ್ನು ಹಿಡಿದು, ಬಳೆಯ ಝೇಂಕಾರಕ್ಕೆ ತಾಳದ ಶಬ್ದದ ಹೊಂದಾಣಿಕೆಯೊಂದಿಗೆ ವೃತ್ತಾಕಾರದಲ್ಲಿ ಗೆಜ್ಜೆಯ ನಾದದೊಡನೆ ಹೆಜ್ಜೆ ಇಡುತ್ತಾ ಈ ನೃತ್ಯವನ್ನು ಪ್ರದರ್ಶಿಸುತ್ತಾರೆ.

'ಕಾವೇರಮ್ಮೆ ದೇವಿ ತಾಯಿ ಕಾಪಾಡೆಂಗಳಾ' ಎಂಬ ಪ್ರಾರ್ಥನೆಯೊಡನೆ ಪ್ರಾರಂಭವಾಗುವ ನೃತ್ಯಗೀತೆ, 'ಬಂದೀರಾ ಬೆಂದ್ ಕೆಲ್ಲಾ' ಎಂದು ಅತಿಥಿ ಸತ್ಕಾರವನ್ನು ಕುರಿತು 'ಲೇ ಲೋ ಲೇ ಲೋ ಲೆಲ್ಲಾಲ್ಲಾ' ಎಂದು 'ತೇನಾ ತೇನಾ ತೇನುಂಡಾ ತೇನ' ಎಂಬುದಾಗಿ ಪ್ರಕೃತಿಯನ್ನು ಕುರಿತು ಮುಂದುವರಿದು 'ನಮೋ ನಮೋ ನಮಸ್ತೆ ನಮೋ ನಮೋ' ಎಂದು ವೀಕ್ಷಕರಿಗೆ ವಂದನೆ ಸಲ್ಲಿಸಿ ಕಡೆಗೆ 'ಮಂಗಳಂ ಜಯ ಮಂಗಳಂ' ಎಂಬುದಾಗಿ ಕಾವೇರಿ ಮಾತೆಯ ಮಂಗಳಸ್ತುತಿಯೊಡನೆ ಮುಕ್ತಾಯಗೊಳ್ಳುತ್ತದೆ.

೨. ಮನೋರಂಜನಾ ಕಲೆ

ಹುತ್ತರಿ ಕುಣಿತ : ಹುತ್ತರಿ ಹಬ್ಬದ ಅಂಗವಾಗಿ ಊರಿನ ದೇವಸ್ಥಾನದ ಮಂದ್‌ನಲ್ಲಿ ಒಂದು ವಾರ ಕೋಲಾಟ ನಡೆಯುತ್ತಿತ್ತು. ಹಬ್ಬಕ್ಕೆ ನಾಲ್ಕೈದು ದಿನಗಳ ಮೊದಲು ಗ್ರಾಮದ ಯುವಕರು, ಹಿರಿಯರು ಗ್ರಾಮದ ಮಂದ್‌ನಲ್ಲಿ ಸೇರಿ ಕೋಲಾಟದ ಅಭ್ಯಾಸವನ್ನು ನಡೆಸುತ್ತಾರೆ. ಇದಕ್ಕೆ 'ಈಡ್' ಎಂದು ಹೆಸರು. ಕಲೆಗಾರರು ವಾದ್ಯಗಾರರೊಂದಿಗೆ 'ಈಡ್'ಗೆ ಬಂದಾಗ 'ಬಾಳ್ ಬಾಳೆನ್ನಡ ಜಬ್ಬೂಮಿ ಬಾಳೋ, ಜಬ್ಬೂಮಿ ಮೀದಲ್ ಪೂಮಂದ್ ಬಾಳೋ, ಪೂಮಂದ್ ಮೀದಲ್ ದೇವಯ್ಯ ಬಾಳೋ, ದೇವಂಗೊತ್ತಾಚಾರ ಪಾಡಿಚೊ ನಂಗ, ಆಚಾರ ಪಾಡಿತ್ ಪಾವ್ ಬೆಕ್ಕನ ಎಂಗ' (ಒಳ್ಳೆಯ ಭೂಮಿಯ ಮೇಲೆ ಒಳ್ಳೆಯ ಜೀವನ ಮಾಡು, ಒಳ್ಳೆಯ ಭೂಮಿಯ ಮೇಲೆ ದೇವಯ್ಯ ನೀನು ಬಾಳು. ದೇವರಿಗೆ ಒಪ್ಪುವಂಥ ಆಚಾರ ವಿಚಾರಗಳನ್ನು ನಾವು ಹಾಡುವೆವು) ಎಂದು ಹಾಡಿ ನಿಲ್ಲಿಸುತ್ತಾರೆ. ಕೊಡವರ ಕುಣಿತಗಳಲ್ಲಿ ಹುತ್ತರಿ ಕುಣಿತವು ಅತ್ಯಂತ ಸುಂದರವಾಗಿದ್ದು, ಶಿಷ್ಟ ಹಾಗೂ ಜನಪದದ ಸಮ್ಮಿಲನವಿರುತ್ತದೆ.

ಕೊಡವ ವಾಲಗತ್ತಾಟ್ : ಮನರಂಜನೆಯೇ ಪ್ರಧಾನವಾಗಿರುವ, ಕೊಡವರ ಅತಿ ಸಂತೋಷದ ಸಮಯದಲ್ಲಿ ಪುರುಷರು ವಾಲಗದ ಜೊತೆ ಹೆಜ್ಜೆಯಿಟ್ಟು ಕುಣಿಯುವುದನ್ನು ವಾಲಗತ್ತಾಟ್ ಎನ್ನುತ್ತಾರೆ. ಓಲಗ, ಮೋರಿ, ದೋಳು, ಫರೆ, ಒಂದು ಜೊತೆ ತಾಳ ಹಾಗೂ ಒಂದು ಜೊತೆ ಕೊಂಬುಗಳನ್ನು ಒಳಗೊಂಡಿರುತ್ತದೆ. ಪುರುಷ ಪ್ರಧಾನ ಕಲೆಯಾದ ಈ ವಾಲಗತ್ತಾಟಿನಲ್ಲಿ ಇತ್ತೀಚೆಗೆ ಸ್ತ್ರೀಯರೂ ಭಾಗವಹಿಸುತ್ತಿದ್ದಾರೆ. ಮದುವೆ, ಹಬ್ಬ ಹಾಗೂ ಗ್ರಾಮದೇವತೆ ಹಬ್ಬಗಳಲ್ಲಿ ಈ ಕಲೆಯನ್ನು ಪ್ರದರ್ಶಿಸುತ್ತಾರೆ.

ಜೋಯಿಪಾಟ್ : ಕೊಡವ ಭಾಷೆಯಲ್ಲಿ ಜೋಯಿಪಾಟ್ ಎಂದರೆ ಜ್ಯೋತಿಷ್ಯದ ಹಾಡು. ವಂಶಪಾರಂಪರ್ಯವಾಗಿ ನಡೆದು ಬಂದ ಈ ಕಲೆ

ಮನೋರಂಜನೆಗಾಗಿ ಪ್ರದರ್ಶಿತವಾಗುತ್ತದೆ. ಮುಂದೆ ಆಗುವ ಹಿಂದೆ ಘಟಿಸಿ ಹೋದ ಘಟನೆಗಳನ್ನು ವಿವರಿಸುತ್ತಾ ಎರಡರಿಂದ ಹತ್ತು ಕಲಾವಿದರು ದುಡಿಯನ್ನು ಬಾರಿಸುತ್ತಾ ಸಾಂಪ್ರದಾಯಿಕ ವೇಷಭೂಷಣಗಳೊಂದಿಗೆ ಕುಣಿಯುತ್ತಾರೆ. ಹುತ್ತರಿಯ ಮಾರನೆ ದಿನ ಊರಮಂದ್‌ನಲ್ಲಿ ಬೆಳಗ್ಗೆಯಿಂದ ಸಂಜೆಯವರೆಗೆ ಈ ಕಲೆಯು ಪ್ರದರ್ಶಿತವಾಗುತ್ತದೆ. ಇಲ್ಲಿ ಹಾಡು ಪ್ರಧಾನ.

'ಲೆಲೆಯ್ಯಾ ಲೆಲೆಯ್ಯಾ ಲೆಲೆಯ್ಯಾ ಲೇಲಾ,
ಲೆಲೈಯ್ಯ ದೆಂಣ್ವೆದ್ ಎನ್ನುತ ಮಾತೋ,
ಲೆಲೆಯ್ಯ ದೆಂಣ್ವದ್ ಜೋಗಿರ ಮಾತೋ,
ಕಸಿಪಿಸಿ ದೆಂಣ್ವದ್ ತುರುಕಂಡ ಮಾತೋ,
ಎಂದಿನ್ ಎಂಣ್ವದ್ ತುಳುವಡ ಮಾತೋ,
ಚಾಂದೇಗ್ ದೆಂಣ್ವದ್ ಪಾಲೆಯಡ ಮಾತೋ,

ಯಾಕರ್ ಎಂಣ್ವದ್ ಕುರುಬಡ ಮಾತೋ... (ಮುಂದುವರಿದ ಹಾಡನ್ನು ಅನುಬಂಧದಲ್ಲಿ ಹೇಳಲಾಗಿದೆ) ಎಂದು ಜೋಗಿಯನ್ನು ಕುರಿತು ಹೇಳುತ್ತಾರೆ.

೩. ವೀರಪ್ರಧಾನ ಕಲೆ

ಜಮ್ಮ ಕೊಡವರ ನೃತ್ಯ : ಕೊಡಗಿನಲ್ಲಿ ಜಮ್ಮ ಕೊಡವರು ಎಂದು ಗುರುತಿಸಲ್ಪಡುವ ಇವರು ಏಳು ಸಾವಿರ ಸೀಮೆಯ (ಶನಿವಾರ ಸಂತೆ) ನಿವಾಸಿಗಳು. ಹುತ್ತರಿಯ ಅನಂತರ ಹತ್ತು-ಹದಿನೈದು ಜನ ಎರಡೂ ಕೈಗಳಲ್ಲೂ ಬಿಚ್ಚುಗತ್ತಿ (ಬಾಳಗತ್ತಿ)ಗಳನ್ನು ಹಿಡಿದು ವೈವಿಧ್ಯಮಯವಾಗಿ ತಿರುಗಿಸುತ್ತಾ ಹಿಮ್ಮೇಳದ ಡೋಲಿನ ತಾಳಕ್ಕೆ ಅನುಸಾರವಾಗಿ ನೃತ್ಯ ಮಾಡುತ್ತಾರೆ. ಇದರಲ್ಲಿ ಸುಮಾರು ಆರು ರೀತಿಯ ಒಳಪ್ರಭೇದಗಳನ್ನು ಗಮನಿಸಬಹುದು. ಇದನ್ನು ಅವರು ಸುಗ್ಗಿಯ ಕುಣಿತವೆನ್ನುತ್ತಾರೆ. ಆದರೆ ಇದರಲ್ಲಿ ಪ್ರಾಚೀನ ಯುದ್ಧದ ವೀರಶೌರ್ಯಗಳು ಹಾಗೂ ಕತ್ತಿಯ ವರಸೆಗಳು ಪ್ರತಿಬಿಂಬಿತವಾಗಿರುತ್ತವೆ.

ಮಾಪಿಳ್ಳೆಯಾಟ್ : ಕೊಡವ ಮಾಪಿಳ್ಳೆಯವರು ತಮ್ಮ ದೇವತಾರಾಧನೆಯ ಅಂಗವಾಗಿ, ಕಂಜರವನ್ನು ಹೋಲುವ 'ದಪ್ಪು'ವೆನ್ನುವ ಚರ್ಮದ ವಾದ್ಯವನ್ನು ಕೈಯಲ್ಲಿ ತಟ್ಟುತ್ತಾ ಕುಣಿಯುವುದನ್ನು ಮಾಪಿಳ್ಳೆಯಾಟ್ ಎನ್ನುತ್ತಾರೆ. ಜನಪದ ವಾದ್ಯಗಳ ರಾಗ, ಧ್ವನಿಗಳಿಗೆ ಕೈಯಾಡಿಸಿಕೊಂಡು ಬಡಿಯುವ ಲಯಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ಈ ಕಲೆಯನ್ನು ಪ್ರದರ್ಶಿಸುತ್ತಾರೆ.

ಪರೆಯಕಳಿ : ವರ್ಷಕ್ಕೊಂದು ಬಾರಿ ಊರ ಮಧ್ಯದಲ್ಲಿ ಯುದ್ಧದ ಸಂಕೇತವಾಗಿ ಪ್ರದರ್ಶಿಸುವ ಈ 'ಪರೆಯಕಳಿ' ಕೊಡಗಿನ ವೀರಪ್ರಧಾನ ಕಲೆಯಾಗಿದೆ. ಕಲಾವಿದರು ಪರಿಯ ಮತ್ತು ಕೋಲನ್ನು ಕೈಯಲ್ಲಿ ಹಿಡಿದುಕೊಂಡು ಹೊಡೆದಾಡುವುದೇ ಪರಿಯ ಕಳಿ. ಎರಡು ಕೈಗಳಲ್ಲೂ ಐದಾರು ಅಡಿಗಳ ಬೆತ್ತವನ್ನು ಹಿಡಿದು ಒಂದನ್ನು ಹೊಡೆಯಲು ಮತ್ತೊಂದನ್ನು ಎದುರಾಳಿಯ ಹೊಡೆತವನ್ನು ತಡೆಯಲು ಬಳಸುತ್ತಾರೆ. ಇದು ಸಮೂಹನೃತ್ಯ. ಕುಣಿತ ನಿಲ್ಲತಕ್ಕದೆಂದು ಗೊತ್ತಾದಾಗ ಮೇದ 'ಪರೆ' ಹೊಡೆಯುತ್ತಾನೆ.

"ತಟ್ಟೆ ಪರೆಯಕಳಿಯಲ್ಲಿ ಇಬ್ಬರು ಮಾತ್ರ ಭಾಗವಹಿಸುತ್ತಾರೆ. ಹೊಡೆತವನ್ನು ತಡೆಯಲು ಕೋಲಿನ ಬದಲು ಬಿದಿರಿನ ಗುರಾಣಿಯನ್ನು ಬಳಸುತ್ತಾರೆ. ಉಳಿದಂತೆ ಪರಿಯಕಳಿಯ ಎಲ್ಲಾ ನಿಯಮಗಳೂ ಇದಕ್ಕೂ ಅನ್ವಯವಾಗುತ್ತದೆ. ಯಾರಿಗೆ ತಟ್ಟೆ ಪರಿಯಕಳಿಗೆ ಭಾಗವಹಿಸಲು ಇಷ್ಟ, ಧೈರ್ಯ, ಶಕ್ತಿ ಇದೆಯೋ ಆತ 'ನಾ ಬಾಳ, ನೀ ಬಾಳ್ ಏಡಕೋಡೆ ಇಳಿವ ಚಂಜ್ಞಾದಿಬಾಳ್, ಇಗ್ಗುತಪ್ಪ ಬಾಳ್, ಬಯತೂರಪ್ಪ ಬಾಳ್, ಬಾಳ್ ಬಾಳಿರೆ ಬಾಳ್' ಎಂದು ಪ್ರತಿಸ್ಪರ್ಧಿಯನ್ನು ಆಹ್ವಾನಿಸುತ್ತಾರೆ."

ಪ್ರಾದೇಶಿಕತೆಗನುಸಾರವಾಗಿ ನೆಲೆ ನಿಂತ ಅನೇಕ ದೈವಗಳಾದ ಭಗವತಿ, ಭದ್ರಕಾಳಿ, ಈಶ್ವರ, ಪಾಲೂರಪ್ಪ, ಕಾಲಭೈರವ ಮುಂತಾದವರ ಹೆಸರಿನಲ್ಲಿ ಪರೆಯಕಳಿಯನ್ನು ಪ್ರದರ್ಶಿಸಲಾಗುವುದು. ಇದರಲ್ಲಿ ಮುಖ್ಯವಾಗಿ ಗಮನಿಸ ಬೇಕಾಗಿರುವ ಅಂಶವೆಂದರೆ ಆರಂಭದಲ್ಲಿಯೇ ಪರೆಯಕಳಿಯನ್ನು ಆಡುವುದಿಲ್ಲ. ಮೊದಲು ಹುತ್ತರಿ ಕೋಲಾಟವನ್ನು ಪ್ರದರ್ಶಿಸಿ ಅನಂತರದಲ್ಲಿ ಪರೆಯಕಳಿ ಯನ್ನು ಆಡುತ್ತಾರೆ. ಹಿರಿಯ ವ್ಯಕ್ತಿ ಜ್ಯೋತಿ ಹತ್ತಿಸಿ ಪೂಜೆ ಮಾಡುತ್ತಾನೆ. ಇದರ ಪಕ್ಕದಲ್ಲಿ ಅವರು ತಂದಿದ್ದ ದುಡಿ, ಕೋಲಾಟಕ್ಕೆ ಬಳಸುವಂಥ ಕೋಲುಗಳು ಮತ್ತು ಬೆತ್ತದಿಂದ ಮಾಡಿದ ಪರಿಯ ತಟ್ಟೆಯನ್ನು ಇಟ್ಟಿರಲಾಗುತ್ತದೆ. ಅನಂತರ ಇಟ್ಟಿರಲಾದಂಥ ಕೋಲುಗಳನ್ನು ಕಲಾವಿದರು ತೆಗೆದುಕೊಂಡು ಪ್ರಾರಂಭದಲ್ಲಿ ಕೋಲಾಟವನ್ನು ಪ್ರದರ್ಶಿಸುತ್ತಾರೆ. ಅನಂತರ ಪರೆಯಕಳಿ ಪ್ರಾರಂಭವಾಗುತ್ತದೆ.

ನರಿಮಂಗಲ : ವೀರ, ಸಾಹಸ ಮತ್ತು ಧೈರ್ಯದ ಅಂಶಗಳನ್ನೊಳಗೊಂಡ 'ನರಿಮಂಗಲ'ವನ್ನು ಹುಲಿ ಕೊಂದ ವೀರನಿಗೆ ಮಾಡುತ್ತಾರೆ. ಈತನಿಗೆ ಮದುಮಗನಂತೆ (ಕ್ಷೌರ ಮಾಡಿ) ಸ್ನಾನ ಮಾಡಿಸಿ ಕೊಡವರ ಕನ್ನಿಮಂಗಲದ ಸಂಪ್ರಾದಯ ಉಡುಗೆಗಳನ್ನು ತೊಡಿಸಿ ಊರಿನಲ್ಲಿ ವಾದ್ಯದ ಸಮೇತ ಮೆರವಣಿಗೆ ಮಾಡಿ ಬಂದೂಕನ್ನು ಹಿಡಿಸಿ, ಬಂದೂಕಿಗೆ ಕೆಂಪು ರೇಷ್ಮೆ ವಸ್ತ್ರವನ್ನು ಹೊದಿಸಿ ಹೆಣ್ಣಿನ ಬದಲಿಗೆ ಸತ್ತ ಹುಲಿಯ ರೂಪವನ್ನು ವೀರನ ಪಕ್ಕದಲ್ಲಿರಿಸಿ ಧಾರೆಯನ್ನು ಎರೆಯುತ್ತಾರೆ. ಮದುಮಗನು ವೀರತ್ವದಿಂದ 'ನಾಡುಮಂದ್'ನಲ್ಲಿ ಸಂತೋಷದಿಂದ ಸಾಂಪ್ರದಾಯಿಕ ಕುಣಿತದಲ್ಲಿ ಭಾಗವಹಿಸುತ್ತಾರೆ. ಅಂದಿನಿಂದ ಆತನಿಗೆ ಹುಲಿ ಕೊಂದ ವೀರನೆಂದು ಬಿರುದು ನೀಡಲಾಗುತ್ತದೆ. ಪ್ರತಿ ಬುಧವಾರ ಮತ್ತು ಶನಿವಾರದಂದು ಅಯ್ಯಪ್ಪ ದೇವರು ಕೆನ್ನಾಯಿಗಳನ್ನು ಜೊತೆಗೂಡಿಸಿ ಬೇಟೆಯಾಡುತ್ತಾನೆಂಬ ನಂಬಿಕೆ ಕೊಡವರಲ್ಲಿರುವ ಕಾರಣ ಆ ದಿನಗಳಲ್ಲಿ ಬೇಟೆಯಾಡುವುದಿಲ್ಲ.

ಹೀಗೆ ಕೆಲವು ವೈಶಿಷ್ಟ್ಯಪೂರ್ಣ ಜನಪದ ಕಲೆಗಳನ್ನು ಇಂದಿಗೂ ಆಚರಿಸಿ ಪೋಷಿಸುತ್ತಿರುವ ಕೊಡವರು ಇತರರಿಗೆ ಮಾದರಿಯಾಗಿದ್ದಾರೆ.

ಕೊಡವ ಜನಪದ ಕ್ರೀಡೆಗಳು

ಕೊಡವರ ಜನಪದ ಕ್ರೀಡೆಗಳು ವೈವಿಧ್ಯಮಯವಾಗಿದ್ದು, ಪ್ರತಿ ಆಟಗಳಲ್ಲಿ ಗಂಡು ಮಕ್ಕಳಂತೆ ಹೆಣ್ಣು ಮಕ್ಕಳಿಗೂ ಸಮಾನ ಅವಕಾಶ ನೀಡುತ್ತಾರೆ. ಕೃಷಿ ಪ್ರಧಾನತೆಯಿರುವ ಇವರ ಆಟಗಳಲ್ಲಿ ಅತಿ ಹೆಚ್ಚು ವ್ಯವಸಾಯ ಸಂಬಂಧದ ಆಟಗಳನ್ನು ಕಾಣಬಹುದು. ಕೆಸರುಗದ್ದೆ ಓಟ, ನಾಟಿ ಓಟ, ಹಗ್ಗಜಗ್ಗಾಟ

ಮುಂತಾದವು ಹಾಸ್ಯದ ಜೊತೆಗೆ ಕೃಷಿ ಸಂಸ್ಕಾರಗಳನ್ನು ಎತ್ತಿಹಿಡಿಯುತ್ತವೆ. ಪ್ರಸ್ತುತ ಕೊಡವರ ಜನಪದ ಕ್ರೀಡೆಗಳನ್ನು ಈ ರೀತಿ ವಿವರಿಸಲಾಗಿದೆ.

ಕೆತ್ತೆಲೇಲ್ ಓಟ (ಕೆಸರು ಗದ್ದೆ ಓಟ)

ಮಳೆಗಾಲದಲ್ಲಿ ನಾಟಿ ಗದ್ದೆಯನ್ನು ಉತ್ತು ಅಣಿಗೊಳಿಸಿದ ಅನಂತರ ಪುರುಷರು ಮನರಂಜನೆಗಾಗಿ ಈ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿ ತಮ್ಮ ಶೌರ್ಯವನ್ನು ಪ್ರದರ್ಶಿಸುತ್ತಾರೆ. ನಾಟಿ ನೆಡಲು ಸಿದ್ಧಗೊಳಿಸಿದ ಕೆಸರು ಗದ್ದೆಯ ಓಟದಲ್ಲಿ ಮೊದಲಿಗರು ಬಹುಮಾನ ಪಡೆಯುತ್ತಾರೆ. ಅದೇ ರೀತಿ ನಾಟಿ ನೆಟ್ಟಿರುವ ಗದ್ದೆಯಲ್ಲಿ ಓಡುವುದನ್ನು 'ನಾಟಿ ಓಟ್' ಎನ್ನುತ್ತಾರೆ.

ಅಗೆ ಗದ್ದೆಯಲ್ಲಿ ಓಡುವ ಈ ಆಟಕ್ಕೆ 'ಆರನಾಟಿ ಓಟ' ಎಂದು ಹೆಸರು. ಕೆಸರುಗದ್ದೆ ಓಟದ ಸಂದರ್ಭದಲ್ಲಿ ಅಗೆಗದ್ದೆಗೆ ತೆಂಗಿನಕಾಯಿಯನ್ನು ಒಡೆದು ಗಣಪತಿಗೆ ಪೂಜೆ ಮಾಡುತ್ತಾರೆ. ಇದನ್ನು 'ಗಣೋದಿ ಆಕ' ಎನ್ನುತ್ತಾರೆ. 'ಓಟ್ ಆಕ'ವೆಂದರೆ ಕೆಸರು ಗದ್ದೆಯ ಓಟವನ್ನು ಏರ್ಪಡಿಸುವ ಅಗೆಗದ್ದೆ. ಈ ಕ್ರೀಡೆ ಪುರುಷ ಪ್ರಧಾನವಾಗಿದ್ದು, ಪ್ರತಿ ಕುಟುಂಬದ ಗಂಡುಮಕ್ಕಳು ಶೌರ್ಯ ಪ್ರದರ್ಶನ ಮಾಡುತ್ತಾರೆ.

ಹಗ್ಗ ಜಗ್ಗಾಟ (ಕೇರ್ ಬಲಿಪೊ ಕಳಿ)

ಈ ಆಟವನ್ನು ಎಲ್ಲಾ ಸಮುದಾಯದವರು ಮನರಂಜನೆಗಾಗಿ ಆಡುತ್ತಾರೆ. ಕೊಡಗಿನಲ್ಲಿ ಮಹಿಳೆ, ಪುರುಷ, ಮಕ್ಕಳೆಂಬ ಭೇದವಿಲ್ಲದೆ ಹಗ್ಗ ಜಗ್ಗಾಟ ಕ್ರೀಡೆ ನಡೆಯುತ್ತದೆ.

ಈ ಆಟದಲ್ಲಿ ಎರಡು ಗುಂಪಿನವರು ಒಂದೇ ಹಗ್ಗವನ್ನು ಎರಡು ಕಡೆ ಜಗ್ಗುತ್ತಾರೆ. ಹಗ್ಗವನ್ನು ಮತ್ತೊಂದು ಕಡೆಯವರು ಸಂಪೂರ್ಣ ತಮ್ಮ ಕಡೆಗೆ ಸೆಳೆದುಕೊಂಡಾಗ ಗೆಲುವು ಪಡೆಯುತ್ತಾರೆ. ಈ ಆಟದಲ್ಲಿ ಶಕ್ತಿ ಪ್ರದರ್ಶನಕ್ಕೆ ಅವಕಾಶವಿರುತ್ತದೆ. ಮಳೆಗಾಲದಲ್ಲಿ ಕೆಸರು ಗದ್ದೆಗಳ ಮಧ್ಯೆ ಈ ಹಗ್ಗ ಜಗ್ಗಾಟ ಆಡಿ ಸಂತೋಷಪಡುತ್ತಾರೆ.

ತೆಂಗೆಪೋರ್

ಒಬ್ಬ ವ್ಯಕ್ತಿ ತೆಂಗಿನಕಾಯಿಯೊಂದನ್ನು ತನ್ನೆರಡು ಕೈಗಳಲ್ಲಿ ಬಿಗಿಯಾಗಿ ಹಿಡಿದಿರುತ್ತಾನೆ. ಇತರ ಏಳೆಂಟು ಮಂದಿ ಜೊತೆ ಸೇರಿ ಅವನ ಕೈ ಮುಷ್ಟಿಯಿಂದ ಅದನ್ನು ಕಸಿದುಕೊಳ್ಳಲು ಪ್ರಯತ್ನಿಸುತ್ತಾರೆ. ಯಾರು ಬಲಶಾಲಿಯಾಗಿರುತ್ತಾರೋ ಅವರು ಆ ತೆಂಗಿನಕಾಯಿ ಕಸಿದುಕೊಳ್ಳುವುದನ್ನು "ತೆಂಗೆಪೋರ್" ಎನ್ನುವರು.

ತೆಂಗೆಬೊಡಿ (ತೆಂಗಿನಕಾಯಿಗೆ ಗುಂಡು ಹೊಡೆಯುವುದು)

ಒಂದು ಮರದ ಎತ್ತರದ ಕೊಂಬೆ, ರೆಂಬೆಗಳನ್ನೆಲ್ಲಾ ಕಡಿದು ಹಾಕಿ, ಶಿಲುಬೆಯಾಕಾರದಲ್ಲಿ ಮೂರಡಿ ಉದ್ದಗಲದ ಎರಡು ಕೋಲುಗಳನ್ನು ಕಟ್ಟಿ ಅದರ ತಲೆಯ ಭಾಗವನ್ನು ಚೂಪಾಗಿ ಮಾಡಿ ಒಂದು ತೆಂಗಿನಕಾಯಿಯನ್ನು ಅದಕ್ಕೆ ಚುಚ್ಚುತ್ತಾರೆ. ಅಡ್ಡಲಾಗಿ ಕಟ್ಟಿದ ಕೋಲಿಗೆ ಎರಡು ತೆಂಗಿನಕಾಯಿಗಳನ್ನು ಚುಚ್ಚಿ, ಒಬ್ಬನನ್ನು ಎತ್ತರದ ಮರಕ್ಕೆ ಹತ್ತಿಸಿ ಅವನ ಕೈಯಲ್ಲಿ ತೆಂಗಿನ ಕಾಯಿಯ

ಶಿಲುಬೆಯನ್ನು ಮರದ ರೆಂಬೆ ಸವರಿದ ಕೊಂಬೆಗೆ ಕಟ್ಟಿಸಿ ಗುಂಡು ಹಾರಿಸುತ್ತಾರೆ. ಮೊದಲು ಕಾಯಿ ಒಡೆದವನು ಪ್ರಥಮ ಬಹುಮಾನ ಪಡೆಯುತ್ತಾನೆ. ಇದನ್ನು ಕೊಡವರು 'ತೆಂಗೆ ಬೊಡಿ' ಅಂದರೆ ತೆಂಗಿನಕಾಯಿಗೆ ಗುಂಡು ಹಾರಿಸುವುದು ಎಂದು ಕರೆಯುತ್ತಾರೆ.

ಓಟ್ ಬೊಡಿ (ಓಟದ ಗುಂಡೇಟು)

ಒಂದು ಎತ್ತರದ ಸ್ಥಳದಲ್ಲಿ ಮೂರು ತೆಂಗಿನಕಾಯಿಗಳನ್ನು ಸಾಲಾಗಿಟ್ಟು, ಬಂದೂಕು ಹಿಡಿದವರು ನಿರ್ದಿಷ್ಟ ಅಂತರದಲ್ಲಿ ನಿಂತಿದ್ದು, ಮಧ್ಯೆ ಇರುವ ತೆಂಗಿನಕಾಯಿಗೆ ಓಡುತ್ತಾ ಹೋಗಿ ಗುಂಡು ಬಡೆಯುವುದನ್ನು 'ಓಟ್ ಬೊಡಿ' ಎನ್ನುತ್ತಾರೆ.

ಕುದುರೆ ಓಟ್ (ಕುದುರೆ ಓಟ)

ಕುದುರೆಯಾಕಾರದಲ್ಲಿ ಬುಟ್ಟಿ ಹೆಣೆಯುವಂತೆ ಬೆತ್ತದ ಕುದುರೆ ತಯಾರಿಸಿ, ಅದರ ಬೆನ್ನು ಮತ್ತು ಹೊಟ್ಟೆಯ ಭಾಗದಿಂದ ಒಬ್ಬಾತ ತೂರಿಕೊಂಡರೆ, ಎರಡೂ ಪಕ್ಕೆಗಳನ್ನು ಹಿಡಿದುಕೊಂಡು ಕೆಲವರು ನಿಂತಿರುತ್ತಾರೆ. ಹಬ್ಬದ ದಿನ ವಿಶಾಲವಾದ ದೇವಸ್ಥಾನದ ಅಂಗಳದಲ್ಲಿ ಒಬ್ಬರು ಅಥವಾ ಇಬ್ಬರಂತೆ ಎದುರು ಬದುರು ಓಡಿ ಪ್ರದಕ್ಷಿಣೆ ಹಾಕಿ ಅದೇ ಜಾಗದಲ್ಲಿ ನಿಲ್ಲುತ್ತಾರೆ. ಯಾರು ಮೊದಲು ಆ ಸ್ಥಳ ತಲುಪುವರೋ ಅವರಿಗೆ ಪ್ರಥಮ ಬಹುಮಾನ ಕೊಡಲಾಗುತ್ತದೆ. ಇದೇ ಕುದುರೆ ಓಟ.

'ನಾಟಿ ಓಟ್'(ನಾಟಿ ಓಟ)

ಮಳೆಗಾಲದಲ್ಲಿ ಉತ್ತು ನಾಟಿ ಮಾಡಿದ ಗದ್ದೆಯಲ್ಲಿ ಕೆಲವು ಭೂ ಮಾಲೀಕರು ವಿಶಾಲವಾದ ಗದ್ದೆಯಲ್ಲಿ 'ನಾಟಿ ಓಟದ ಸ್ಪರ್ಧೆ'ಯನ್ನು ಏರ್ಪಡಿಸುತ್ತಾರೆ. ಈ ಗದ್ದೆಯ ಮಧ್ಯಭಾಗ ಸುಮಾರು ಹತ್ತು ಅಡಿ ಅಗಲ ನಾಟಿ ನೆಡದೆ ಖಾಲಿ ಜಾಗ ಬಿಟ್ಟಿರುತ್ತಾರೆ. ಗದ್ದೆಯ ಒಂದು ಏರಿಯ ತುದಿಯಲ್ಲಿ ಕೆಸರುಗದ್ದೆ ಓಟದಲ್ಲಿ ಐದರಿಂದ ಆರು ಜನರು ಭಾಗವಹಿಸುತ್ತಾರೆ. ಒಂದು ಗದ್ದೆಯ ಏರಿಯ ತುದಿಯಿಂದ ಇನ್ನೊಂದು ಗದ್ದೆಯ ಕೊನೆಯ ಏರಿಯವರೆಗೆ ಕೆಸರಿನಲ್ಲಿ ಓಡಿ ಬಂದ ಮೊದಲಿಗನು ಜಯಶಾಲಿಯಾಗುತ್ತಾನೆ. ಈ ಓಟದ ಬಳಿಕ ಎಲ್ಲರೂ ಸೇರಿ ಖಾಲಿ ಬಿಟ್ಟ ಗದ್ದೆಯ ನಾಟಿ ನೆಟ್ಟು ಪೂರ್ಣಗೊಳಿಸಿ ಫಲಾಹಾರ ಸೇವಿಸಿ ಹಿಂದಿರುಗುತ್ತಾರೆ.

ಬೋಟೆಕಾರ ಅಯ್ಯಪ್ಪ (ಬೇಟೆಕಾರ ಅಯ್ಯಪ್ಪ)

ಅಗ್ನಿದೇವತೆ, ಜಲದೇವತೆ, ವಾಯುದೇವತೆಯಂತೆ ಬೇಟೆಯಾಡುವ ದೇವತೆಯನ್ನು ಕೊಡವರು 'ಬೇಟೆಕಾರ ಅಯ್ಯಪ್ಪ' ಅಥವಾ 'ಸಾರ್ಥಾವು' ಎನ್ನುತ್ತಾರೆ. ಬೇಟೆಯಾಡುವುದರಲ್ಲಿ 'ಊರ್ ಬೇಟೆ' ಮತ್ತು 'ನಾಡ್ ಬೋಟೆ' ಎಂಬೆರಡು ಪದ್ಧತಿಗಳಿವೆ. ಬೇಟೆಗೆ ತೆರಳುವಾಗ ತರಬೇತಿ ಕೊಟ್ಟಿರುವ ನಾಯಿಯನ್ನು ಕರೆದೊಯ್ಯುತ್ತಾರೆ. ಹೋಗುವ ಮುನ್ನ ಬೇಟೆಗಾರ ಅಯ್ಯಪ್ಪ ದೇವರಿಗೆ ಪ್ರಾರ್ಥನೆ

ಸಲ್ಲಿಸುತ್ತಾರೆ. ಬೇಟೆಯಾಡುವಾಗ ಮೊದಲು ಗುಂಡು ಹಾರಿಸಿದವನಿಗೆ ಕೊಂದ ಪ್ರಾಣಿಯ ತೊಡೆ ಮತ್ತು ತಲೆ ಭಾಗ ಸಿಗುತ್ತದೆ. ಹಾಗೂ ಗುಂಡೇಟಿನಿಂದ ಪ್ರಾಣಿ ದೂರ ಬಿದ್ದಿದ್ದರೆ ಯಾರು ಮೊದಲು ನೋಡುತ್ತಾರೋ ಅವರಿಗೆ ಬೆನ್ನಿನ ಹುರಿಯ ಮಾಂಸ (ಬೀವು) ಸಿಗುತ್ತದೆ.

ಬಾಳೇ ಬೇಂಗೊ (ಬಾಳೆ ಕಡಿಯುವುದು)

ನಾಲ್ಕೈದು ಬಾಳೆಯ ಮರಗಳನ್ನು ಕಡಿದು, ನಾಲ್ಕು ಅಡಿಗಳಷ್ಟು ಉದ್ದುದ್ದ ಕತ್ತರಿಸಿ ಅವುಗಳನ್ನು ಸಾಲಾಗಿ ಎರಡು ಅಡಿ ಅಂತರದಲ್ಲಿ ಉದ್ದವಿರುವ ಗೂಟಕ್ಕೆ ಚುಚ್ಚಿ ನಿಲ್ಲಿಸುತ್ತಾರೆ. "ಒಡಿಕತ್ತಿ" ಎಂಬ ಕೊಡವರ ಪಾರಂಪರಿಕ ಕತ್ತಿಯಿಂದ ಒಂದೊಂದೇ ಹೊಡೆತಕ್ಕೆ ಆ ಬಾಳೆಯ ಕಂಬಗಳನ್ನು ಕತ್ತರಿಸಿ ಹಾಕುವುದರ ಮೂಲಕ ತೋಳ್ಬಲವನ್ನು ಪ್ರದರ್ಶಿಸುತ್ತಾರೆ. ಒಬ್ಬ ವ್ಯಕ್ತಿ ಒಂದೇ ಬಾರಿ ಒಂಬತ್ತು ಬಾಳೆಕಂಬಗಳನ್ನು ಕತ್ತರಿಸಿದರೆ ಮಾತ್ರ ಬಹುಮಾನಕ್ಕೆ ಅರ್ಹನಾಗುತ್ತಾನೆ.ಕೊಡವರ ಮದುವೆಯಲ್ಲಿ ದಿಬ್ಬಣ ಬರುವಾಗ ಇದೇ ರೀತಿ ಬಾಳೆ ಕಡಿಯುವ ಸಂಪ್ರದಾಯವಿದ್ದು, ಇದು ಶೂರತನ ಮತ್ತು ಶಕ್ತಿಯ ಸಂಕೇತವಾಗಿರುತ್ತದೆ.

ಬೂಜ್ ಕಲ್ಲ್

ಕೆಲವು ಉತ್ಸವಗಳಲ್ಲಿ ಭಾರವಾದ ಕಬ್ಬಿಣದ ದಪ್ಪನೆಯ ಕಲ್ಲುಗುಂಡುಗಳಿರುತ್ತವೆ. ಕಬ್ಬಿಣದ ತುಂಡಿನೊಳಗೆ ಬಲಗೈ ಹೆಬ್ಬೆರಳು ಮತ್ತು ತೋರುಬೆರಳನ್ನು ತೂರಿಸಿ ಎಡಗೈಯನ್ನು ಬೆನ್ನ ಹಿಂಭಾಗಕ್ಕೆ ಅಡ್ಡಲಾಗಿಟ್ಟುಕೊಂಡು ಕುಕ್ಕರಗಾಲಿನಲ್ಲಿ ಕುಳಿತು ಕಲ್ಲನ್ನು ಎತ್ತಿನಿಲ್ಲಬೇಕು. ಶಕ್ತಿ ಇಲ್ಲದಿದ್ದರೆ ಸೊಂಟದ ಭಾಗವು ಉಳುಕುವ ಸಾಧ್ಯತೆ ಇರುತ್ತದೆ. ನಿರಾಯಾಸವಾಗಿ ಎರಡು ಬೆರಳುಗಳಲ್ಲಿ ಎತ್ತಿ ತಲೆಯೆತ್ತರಕ್ಕೆ ತಂದು ನೆಟ್ಟಗೆ ನಿಂತಾಗ ಆತ ಸಮರ್ಥ ವ್ಯಕ್ತಿ ಎನಿಸಿಕೊಳ್ಳುತ್ತಾನೆ.

'ಕೈಲುಮುಹೂರ್ತ'ಹಬ್ಬದಲ್ಲಿ ಆಯುಧ ಪೂಜೆಯ ದಿನ ಮತ್ತು ಕೆಲವು ಗ್ರಾಮದೇವತೆ ಹಬ್ಬಗಳಲ್ಲಿ ತೆಂಗಿನಕಾಯಿಗೆ ಕಲ್ಲು ಒಡೆಯುವ ಜಾನಪದ ಕ್ರೀಡೆಗಳು. ಇವೆಲ್ಲವೂ ಪುರುಷರ ಕ್ರೀಡೆಗಳು. ತಲೆತಲಾಂತರದಿಂದ ನಡೆದು ಬಂದ ಇಂತಹ ವೈಶಿಷ್ಟ್ಯಪೂರ್ಣ ಆಚರಣೆಗಳು ಬದುಕಿಗೆ ಅರ್ಥವನ್ನು ಕೊಡುತ್ತದೆ.

ಜನಪದ ಕ್ರೀಡೆಗಳಲ್ಲಿ, ಮಕ್ಕಳ ಆಟಗಳಾದ ಗೋಲಿ ಆಟ, ಬುಗುರಿ, ಕಬಡ್ಡಿ, ಕಣ್ಣಾಮುಚ್ಚಾಲೆ, ಕೋಟೆ ಆಟ, ಹಗ್ಗ ಜಿಗಿತದಾಟ, ಬಸ್ ಆಟ, ಚಿಣ್ಣಿದಾಂಡು (ತಾರ್‌ಕೋಲ್‌ಕಳಿ) ಲಗ್ಗೆಕಳಿ (ಲಗೋರಿಆಟ), ಮದುವೆ ಆಟ (ಮಂಗಲಕಳಿ)ಗಳು, ಹೆಣ್ಣುಮಕ್ಕಳ ಆಟಗಳಾದ ಕೊತ್ತಿಪರ್‌ಕಳಿ (ಕಲ್ಲಾಟ, ಕುಂಟಾಟ್ ಚಿಲ್‌ಕಿ(ಕುಂಟೆಬಿಲ್ಲೆ), ಬಳೆಚೂರಿನಾಟ, ಕವುಡಿ ಆಟ ಟೀಚರ್ ಆಟಗಳು. ಗಂಡುಮಕ್ಕಳ ಪ್ರಮುಖ ಆಟಗಳಾದ ಕೊಡಮರಿಕಳಿ (ಪಲ್ಪಿ ಹೊಡೆಯುವಿಕೆ), ನೀತ ಬಡಿಪೋ (ಈಜಾಟ), ಕೋವಿಆಟಗಳು ವಯಸ್ಕರ ಆಟಗಳಾದ ಕಟ್ಟೆಕಳಿ (ಚೌಕಾಬಾರ), ಕೊತ್ತಿಪರ ಕಳಿ (ಕಲ್ಲಾಟ), ಸ್ವರ್ಗಕ್ ಪೋಪಕಳಿ (ಸ್ವರ್ಗಾರೋಹಣ) ಮುಂತಾದ ಜನಪದ ಕ್ರೀಡೆಗಳು ಬದುಕಿನ ಪ್ರತಿ ಹಂತದಲ್ಲೂ ಸಂತೋಷ ನೀಡುತ್ತವೆ. ದೈಹಿಕ ವ್ಯಾಯಾಮದ ಜೊತೆಗೆ ಮಾನಸಿಕ ಆರೋಗ್ಯವು ಈ

ಕ್ರೀಡೆಗಳಲ್ಲಿದೆ. ಕ್ರೀಡೆಗಳಿಗೆ ವಿಶಿಷ್ಟ ಸ್ಥಾನ ಕೊಟ್ಟಿರುವ ಕೊಡಗಿನಲ್ಲಿ ಇತ್ತೀಚೆಗೆ ಸಮಯದ ಅಭಾವ ಟಿ.ವಿ, ಕ್ರಿಕೆಟ್, ಹಾಕಿ, ಫುಟ್ ಬಾಲ್, ಬ್ಯಾಡ್‌ಮೆಂಟಿನ್ ಮುಂತಾದ ಆಧುನಿಕ ಕ್ರೀಡೆಗಳ ಪ್ರಭಾವದಿಂದಾಗಿ ಜನಪದ ಕ್ರೀಡೆಗಳು ನಶಿಸುತ್ತಿವೆಯಾದರೂ ಕೊಡವರು ಕೆಲವು ಪ್ರಮುಖ ಕ್ರೀಡೆಗಳನ್ನು ಇಂದಿಗೂ ಮುಂದುವರೆಸಿಕೊಂಡು ಬರುತ್ತಿರುವುದು ಆಶಾದಾಯಕ. ಕೊಡಗಿನಲ್ಲಿ ಹಾಕಿ ಆಟವು ಪ್ರಾಮುಖ್ಯತೆ ಪಡೆದಿದ್ದು ದೇಶದ ಒಲಂಪಿಕ್ಸ್‌ನಲ್ಲಿ ಚಿನ್ನವನ್ನು ಗೆದ್ದು, ಕೊಡಗಿನ ಕೀರ್ತಿಯನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಿದ್ದಾರೆ.

ಕೊಡಗಿನ ವೀರ ಸೇನಾ ನಾಯಕರು

ಹುಟ್ಟಿನಿಂದಲೇ ಶೌರ್ಯ, ವೀರತನ, ಸಾಹಸಕ್ಕೆ ಪ್ರಸಿದ್ಧಿ ಪಡೆದ ಕೊಡವರು ಬಹಳ ಹಿಂದಿನಿಂದಲೂ ನೆರೆಹೊರೆಯ ರಾಜರೊಡನೆ ಹೋರಾಡಿ ತಮ್ಮ ಶೌರ್ಯವನ್ನು ಮೆರೆದಿದ್ದಾರೆ. ಭಾರತದ ಭೂಸೈನ್ಯ, ವಾಯುದಳ ಹಾಗೂ ನೌಕಾಪಡೆಗಳಲ್ಲಿ ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ, ಜನರಲ್ ತಿಮ್ಮಯ್ಯ, ಅಪ್ಪಾರಂಡ ಅಯ್ಯಪ್ಪ ಇವರ ಸೇವೆ ಭಾರತಕ್ಕೆ ಮಾದರಿ. ಆ ಕುರಿತು ಸಂಕ್ಷಿಪ್ತ ಪರಿಚಯ ಇಲ್ಲಿದೆ. ಇದು ಕೊಡವರ ಶಿಸ್ತು ಸಂಯಮ ದೇಶಭಕ್ತಿಯನ್ನು ಅವರ ಸಂಸ್ಕಾರಗಳ ಅನನ್ಯತೆಯನ್ನು ತಿಳಿಯಲು ನಮಗೆ ಸಹಕಾರಿಯಾಗುತ್ತದೆ.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ

೧೯೦೦ ಜನವರಿ ೨೮ರಂದು ಶನಿವಾರ ಸಂತೆಯ ಕೊಡಂದೆರ ಮಾದಪ್ಪ ದಂಪತಿಗಳಿಗೆ ಜನಿಸಿದ ಜನರಲ್ ಕಾರ್ಯಪ್ಪನವರು ಒಬ್ಬ ಕ್ರೀಯಾಶೀಲ ವ್ಯಕ್ತಿಯಾಗಿ, ಶಿಸ್ತು, ಪ್ರಾಮಾಣಿಕತೆಯ ಮೂರ್ತಿ ಅಮರರಾಗಿದ್ದಾರೆ. ೧೯೧೯ರಲ್ಲಿ ಸೈನ್ಯದಲ್ಲಿ ಉದ್ಯೋಗಕ್ಕೆ ಆಯ್ಕೆಗೊಂಡು ೧೯ನೇ ವಯಸ್ಸಿನಲ್ಲಿ ಭಾರತದ ಭೂ ಸೈನ್ಯದಲ್ಲಿ ಲೆಫ್ಟಿನೆಂಟ್ ಪದವೀಧರರಾದರು. ಬ್ರಿಟನ್, ಫ್ರಾನ್ಸ್, ಅಮೆರಿಕಾ, ಕೆನಡಾ, ಚೀನ, ಜಪಾನ್‌ಗೆ ಭೇಟಿ ನೀಡಿದುದರ ಜೊತೆಗೆ ಇರಾಕ್, ಇರಾನ್, ಸಿರಿಯಾ, ಅರಕಾನ್ ದೇಶಗಳಲ್ಲಿ ಕೆಲಸ ಮಾಡಿದ್ದಾರೆ. ೧೯೩೩ರಲ್ಲಿ ಅವರು 'ಕ್ವೆಟ್ಟಾ'ದಲ್ಲಿ ಸ್ಟಾಫ್ ಕಾಲೇಜಿನ ಪ್ರಥಮ ಭಾರತೀಯ ಸೈನ್ಯಾಧಿಕಾರಿಯಾಗಿ ನೇಮಕಗೊಂಡರು. 'ಜನರಲ್ ಕರ್ನಲ್' ಆಗಿ ಬಡ್ತಿ ಪಡೆದ ಮೊದಲಿಗರಾದರು. ೧೯೪೮ರ ಡಿಸೆಂಬರ್‌ನಲ್ಲಿ ಇವರನ್ನು ಭೂ ಸೈನ್ಯದ ಪ್ರಥಮ ಭಾರತೀಯ ಮಹಾದಂಡ ನಾಯಕರನ್ನಾಗಿ ನೇಮಿಸಲಾಯಿತು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪನವರು ರಾಷ್ಟ್ರಗೀತೆಯನ್ನು ಯಾವಾಗಲೂ ಕೇಳುತ್ತಿದ್ದರು, ಅದನ್ನು ಕೇಳಿದಾಗಲೆಲ್ಲಾ ಅವರ ಕಣ್ಣಲ್ಲಿ ನೀರು ಧಾರಾಕಾರವಾಗಿ ಸುರಿಯುತ್ತಿತ್ತು. ಅವರ ಮನದಲ್ಲಿ ದೇಶ ಸ್ವತಂತ್ರಗೊಂಡಾಗಿನ ಚಿತ್ರ ಮೂಡುತ್ತಿತ್ತು. ಅವರು ಬಂಗಾಳದಲ್ಲಿದ್ದ ದಿನಗಳಲ್ಲಿ ಪ್ರತಿದಿನ ಶಾಲೆಗೆ ಹೋಗುತ್ತಿದ್ದ ಮಕ್ಕಳನ್ನು ಕರೆದು ಅವರಿಂದ ರಾಷ್ಟ್ರಗೀತೆ ಹಾಡಿಸಿ ಸಿಹಿ ಹಂಚುತ್ತಿದ್ದರು.

ಮಡಿಕೇರಿಯ 'ರೋಷನಾರ'ದ ಅವರ ಬಂಗಲೆಗೆ ಅತಿಥಿಗಳು ಬಂದಾಗ ಅವರೇ ಸ್ವಾಗತಿಸುತ್ತಿದ್ದರು. ಮನೆ ಬಿಡುವ ಮುನ್ನ ಎಲ್ಲರೂ ರಾಷ್ಟ್ರಗೀತೆ ಹಾಡಲೇಬೇಕಾಗಿತ್ತು. ಇವರೊಬ್ಬ ಅಪ್ಪಟ ದೇಶಾಭಿಮಾನಿಯಾಗಿದ್ದರು. ಅವರನ್ನೊಮ್ಮೆ

ಅತಿಥಿಗಳು 'ತಾವು ದಕ್ಷಿಣ ಭಾರತೀಯ ಹಾಗೂ ಕೊಡಗಿನವರವಲ್ಲವೇ?' ಎಂದು ಪ್ರಶ್ನಿಸಿದಾಗ 'ನಾನೊಬ್ಬ ಭಾರತೀಯ' ಎಂದು ಉತ್ತರ ನೀಡಿದ್ದರು.

ನಿವೃತ್ತಿಯ ಅನಂತರ ಕೊಡಗಿನ ಮಡಿಕೇರಿಯ 'ರೋಷನಾರ' ನಲ್ಲಿ ನೆಲೆಸಿದ್ದ ಕಾರ್ಯಪ್ಪನವರು ದೇಶದ ರಕ್ಷಣೆಗೆ ಎಲ್ಲೆಂದರಲ್ಲಿಗೆ ತಲುಪುತ್ತಿದ್ದರು. ಇವರ ರಕ್ಷಣಾ ಸೇವೆಯನ್ನು ಮೆಚ್ಚಿದ ಆಗಿನ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿಯವರು ೧೯೮೬ ಏಪ್ರಿಲ್ ೨೮ ರಂದು 'ಫೀಲ್ಡ್ ಮಾರ್ಷಲ್' ಬಿರುದು ನೀಡಿ ಸನ್ಮಾನಿಸಿದರು.

ಮೂರು ಪಡೆ ಧ್ವಜ ಕೊಡೆಯ ತ್ರಿವಿಕ್ರಮನು ನೀನು॥
ಭಾರತಾಂಬೆಯ ಪುತ್ರ । ದಂಡನಾಯಕ ನೀನು।
ಕಾರ್ಯದಲಿ ಕಾರ್ಯಪ್ಪ । ನಾಮಧರಿಸಿದ ಧೀರ।
ಮರಳಿ ತವರಲಿ । ಮಿಂಚಿತಾ ರೋಷನಾರ॥

ಪುಟ್ಟ ಜಿಲ್ಲೆಯಲ್ಲಿ ಹುಟ್ಟಿ ವಿಶ್ವದಾದ್ಯಂತ ದೊಡ್ಡ ವ್ಯಕ್ತಿಯಾಗಿ ಬೆಳೆದು ಭಾರತದ ಧವಳ ಕೀರ್ತಿಯನ್ನು ಮೆರೆಸಿದ ಶ್ರೇಷ್ಠ ಮಹಾ ದಂಡನಾಯಕರಾದ ಕಾರ್ಯಪ್ಪನವರಿಗೆ ತಮ್ಮ ಹುಟ್ಟೂರಿನ ಬಗ್ಗೆ ಅಪಾರ ಅಭಿಮಾನ.

ನಿವೃತ್ತಿ ಜೀವನವನ್ನು ತಮ್ಮ 'ರೋಷನಾರ'ದಲ್ಲಿ ಕಳೆಯಲಿಚ್ಚಿಸಿದ ಕಾರ್ಯಪ್ಪನವರು 'ಆತ್ಯಾಧುನಿಕ ಸೌಲಭ್ಯಗಳಿಂದ ದೂರವಾಗಿರುವ ಮಡಿಕೇರಿಯಂತಹ ಸಣ್ಣ ಪಟ್ಟಣದಲ್ಲಿ ಮಹಾದಂಡನಾಯಕರಾಗಿದ್ದ ತಾವು ನೆಲೆಸಿದ್ದೇಕೆ' ಎಂದು ಕೇಳಿದವರಿಗೆ ಕಾರ್ಯಪ್ಪನವರು ಉತ್ತರಿಸಿದ ರೀತಿ ಇದು 'ನನ್ನ ಮಟ್ಟಿಗೆ ಇಡೀ ಜಗತ್ತಿನಲ್ಲಿ, ಮಡಿಕೇರಿಯಂತಹ ಸ್ಥಳ ಇನ್ನೊಂದಿಲ್ಲ, ಕಾವೇರಿ ಮಾತೆಯ ಮಡಿಲು, ನನಗೆ ಎಲ್ಲ ಸ್ಥಳಗಳಿಗಿಂತಲೂ ಶ್ರೇಷ್ಠ. ಇದು ನನ್ನ ಬಾಲ್ಯದ ತೊಟ್ಟಿಲು ನನ್ನ ತಾರುಣ್ಯದ ಬೃಂದಾವನ, ನನ್ನ ವೃದ್ಧಾಪ್ಯದ ವಾರಣಾಸಿ ಇಲ್ಲಿ ಪ್ರಕೃತಿ ಮಾತೆಯು ಔದಾರ್ಯದಿಂದ ಆರ್ಶೀರ್ವದಿಸಿದ್ದಾಳೆ. ಹಸುರು ಹುಲ್ಲಿನ ಮೇಲೆ ಮಂಜಿನ ಮಣಿಗಳು ಮಿಂಚುತ್ತವೆ. ಹಕ್ಕಿಗಳ ಇಂಚರ ಸಂಚಾರ ಮೂಡಿಸುತ್ತದೆ. ಇಂತಹ ಸೌಭಾಗ್ಯ ಇನ್ನೆಲ್ಲಿದೆ?" ಎಂದರು. ಕಾರ್ಯಪ್ಪನವರು ೯೩ ವರ್ಷದವರೆಗೆ ಬದುಕಿ ೧೯೯೩ ಮೇ ೧೫ ರಂದು ಕೊನೆಯುಸಿರೆಳೆದರು. ಕೊಡಗಿನ ಜೀವಂತ ಚೇತನವಾಗಿರುವ ಇವರ ಕೀರ್ತಿ ಎಂದೆಂದಿಗೂ ಅಮರ.

ಕೆ.ಎಸ್.ಜನರಲ್ ತಿಮ್ಮಯ್ಯ

೧೯೦೬ರಲ್ಲಿ ಕೊಡಗಿನಲ್ಲಿ ತಿಮ್ಮಯ್ಯ, ಸೀತಮ್ಮ ದಂಪತಿಗಳ ಮಗನಾಗಿ ಜನಿಸಿದ ಜನರಲ್ ತಿಮ್ಮಯ್ಯನವರು, ೧೯೨೫ರಲ್ಲಿ ಇಂಗ್ಲೆಂಡಿನ ಸ್ಯಾಂಡ್‌ಹರ್ಸ್ ಕಾಲೇಜಿನಲ್ಲಿ ತರಬೇತಿ ಪಡೆದರು. ಎರಡನೇ ಮಹಾಯುದ್ಧದಲ್ಲಿ ಅವರು ಇರಾಕ್, ಮಲೇಶಿಯಾ, ಅರಕಾನ್ ಮೊದಲಾದ ಸ್ಥಳಗಳಲ್ಲಿ ಕೆಲಸಮಾಡಿ, ಬ್ರಿಟಿಷ್ ಸರ್ಕಾರದಿಂದ ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡರು. ೧೯೪೫ರಲ್ಲಿ ಬ್ರಿಗೇಡಿಯರಾಗಿ ಮಿಲಿಟರಿ ಕಾರ್ಯಾಚರಣೆಯನ್ನು ಪ್ರಾರಂಭಿಸಿದರು. ೧೯೪೮ರಲ್ಲಿ ಅವರು ಪಾಕಿಸ್ತಾನ ಧಾಳಿಯನ್ನು ಎದುರಿಸಿದ ಪರಿಣಾಮವಾಗಿ ಅವರನ್ನು 'ಮೇಜರ್ ಜನರಲ್' ಹುದ್ದೆಗೇರಿಸಲಾಯಿತು. ೧೯೫೩ರಲ್ಲಿ ಪಶ್ಚಿಮ ಕಮಾಂಡಿನ

ದಂಡನಾಯಕರಾದರು. ೧೯೫೬ರಲ್ಲಿ ತಿಮ್ಮಯ್ಯನವರಿಗೆ ಜನರಲ್ ಪದವಿ ದೊರಕಿತು. ೧೯೬೧ರಲ್ಲಿ ರಾಷ್ಟ್ರಪತಿಯವರಿಂದ ರಾಯಭಾರಿಯ ಬಿರುದಿನ ಜೊತೆಗೆ ಪದ್ಮಭೂಷಣ ಪ್ರಶಸ್ತಿ ಪಡೆದರು.ವಿಶ್ವ ಸಂಸ್ಥೆಯ ಪ್ರತಿನಿಧಿಯಾಗಿದ್ದ ಇವರು ೧೮.೧೨.೧೯೬೫ರಲ್ಲಿ ಸ್ವರ್ಗಸ್ತರಾದರು. ಕೊಡಗಿನ ಕೀರ್ತಿ ಪತಾಕೆಯನ್ನು ವಿಶ್ವ ಮಟ್ಟದಲ್ಲಿ ಬೆಳಗಿದ ಅಮರಜ್ಯೋತಿ.

ಲೆಫ್ಟಿನೆಂಟ್ ಜನರಲ್ ಅಪ್ಪಾರಂಡ ಅಯ್ಯಪ್ಪ

೧೯೧೩ರ ಸೆಪ್ಟಂಬರ್ ೨ ರಂದು ದಿವಾನ್ ಮನೆತನದಲ್ಲಿ ಅಯ್ಯಪ್ಪನವರು ಜನಿಸಿದರು. ೧೯೩೩ರಲ್ಲಿ ಡೆಹರಾಡೂನಿನ ಇಂಡಿಯನ್ ಮಿಲಿಟರಿ ಅಕಾಡೆಮಿಗೆ ಸೇರಿ ೧೯೩೫ರಲ್ಲಿ ಕಮಿಷನರ್ ಹುದ್ದೆ ಪಡೆದು ರಜಪೂತ ಬೆಟಾಲಿಯನ್‌ನಲ್ಲಿ ಸೇವೆ ಸಲ್ಲಿಸಿದರು. ಇಂಡಿಯನ್ ಸಿಗ್ನಲ್ ಕೋರ್‌ಗೆ ಉಪನಾಯಕರಾಗಿ ಸೇವೆ ಬಡ್ತಿ ಪಡೆದರು. ೧೯೪೫ರಲ್ಲಿ ಭಾರತಕ್ಕೆ ಹಿಂದಿರುಗಿ ಕೈದಿಗಳನ್ನು ನೋಡಿಕೊಳ್ಳುವ ಕಾರ್ಯಕ್ಕಾಗಿ ಯು.ಬಿ.ಇ ಪ್ರಶಸ್ತಿಯನ್ನು ಗಳಿಸಿದರು.

ಇಂಡಿಯನ್ ಮಿಲಿಟರಿ ಅಕಾಡೆಮಿಯ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಇವರು ೧೯೪೭ರಲ್ಲಿ ರಾಂಚಿಯ ಸಿಗ್ನಲ್ ೫೬ನೇ ದಳದ ವಿಭಾಗಕ್ಕೆ ಸೇರಿ ಮುಖ್ಯಾಧಿಕಾರಿಗಳಾದರು. ೧೯೪೮ರಲ್ಲಿ ಬ್ರಿಗೇಡಿಯರ್ ಪದವಿ ಜೊತೆಗೆ ೧೯೫೨ರಲ್ಲಿ ಪಶ್ಚಿಮ ವಿಭಾಗದ ಸಿಗ್ನಲ್ ಅಧಿಕಾರಿಯಾಗಿ ನೇಮಿಸಲ್ಪಟ್ಟರು. ೧೯೬೦ರಲ್ಲಿ ಮೇಜರ್ ಜನರಲ್ ಆಗಿ ೧೯೬೨ರಲ್ಲಿ ಬಡ್ತಿ ಹೊಂದಿ ಜನರಲ್ ಮಟ್ಟಕ್ಕೆ ಏರಿದರು. ಹೀಗೆ ಹಲವಾರು ಕೊಡಗಿನ ವೀರ ಯೋಧರು ಸೈನ್ಯಕ್ಕೆ ಸೇರಿ, ಸೆಣಸಿ, ಭಾರತ ದೇಶವನ್ನು ರಕ್ಷಿಸಿದ್ದಾರೆ. ಕೊಡಗಿನ ಕೀರ್ತಿಯನ್ನು ಬೆಳಗಿದ್ದಾರೆ.

ಒಟ್ಟಾರೆಯಾಗಿ ಈ ಅಧ್ಯಾಯದಲ್ಲಿ ಕೊಡವರ ಇತಿಹಾಸದ ಪ್ರಾಚೀನತೆಯನ್ನು ಕುರಿತಂತೆ ಪೌರಾಣಿಕವಾಗಿ ಲಭ್ಯವಿರುವ ಮಾಹಿತಿಗಳು, ಶಿಲಾಯುಗದ ಅವಶೇಷಗಳು ಮತ್ತು ಇತಿಹಾಸದ ಆರಂಭದ ಕಾಲದಿಂದ ಅಂದರೆ ಕದಂಬರ ಆಳ್ವಿಕೆಯ ಕಾಲದಿಂದ ಹೊಯ್ಸಳ, ವಿಜಯನಗರ, ಟಿಪ್ಪುಸುಲ್ತಾನ ಮತ್ತು ಅನಂತರದಲ್ಲಿ ಕೊಡಗಿನಲ್ಲಿ ರಾಜ್ಯವಾಳಿದ ಸ್ಥಳೀಯ ನಾಯಕರ ಕಾಲದವರೆಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಸಾಹಿತ್ಯಿಕವಾಗಿ ಪ್ರಾಚೀನ ಶಾಸನ ಕವಿಗಳಿಂದ ಹಿಡಿದು ಕೊಡಗು ಭಾಷೆಯಲ್ಲಿ ಸಾಹಿತ್ಯ ರಚಿಸಿದ ಕವಿಗಳು ಕೊಡವೇತರ ಭಾಷೆಯ ಕವಿಗಳು, ವಿದೇಶಿ ದಾಖಲೆಗಳು, ಮತ್ತಿತರ ಮೂಲಗಳಿಂದ ದೊರೆಯುವ ಮಾಹಿತಿಯನ್ನು ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ. ಸಾಂಸ್ಕೃತಿಕವಾಗಿ ಪ್ರಮುಖವೆನಿಸುವ ಪ್ರದರ್ಶನಾತ್ಮಕ ಕಲೆಗಳು, ಕೊಡಗು ಭಾಷಾ ಸ್ವರೂಪ, ಗಣ್ಯವ್ಯಕ್ತಿಗಳ ಕೊಡುಗೆ ಇತ್ಯಾದಿ ಹಲವು ಮಹತ್ವದ ಅಂಶಗಳತ್ತ ಬೆಳಕು ಚೆಲ್ಲಲಾಗಿದೆ.

ಕೊಡವರ ಸಾಂಸ್ಕೃತಿಕ ಇತಿಹಾಸವನ್ನು ಅರಿಯಲು ಈ ಭಾಗದ ಭೌಗೋಳಿಕ ಪರಿಸರ ಎಷ್ಟು ಮುಖ್ಯವೋ ಇಲ್ಲಿಯ ಇತಿಹಾಸ, ಸಾಹಿತ್ಯ, ಭಾಷೆ, ಕಲೆ ಮುಂತಾದ ಪ್ರತಿಯೊಂದು ಅಂಶವೂ ಸಹಾಯಕವಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಭಾಗದಲ್ಲಿ ಮೇಲ್ಕಂಡ ವಿಚಾರಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಎಂ.ಪಿ.ರೇಖಾ, **ಆಧುನಿಕ ಕೊಡವ ಸಾಹಿತ್ಯ**, ಸಿಂಚು ಮಲ್ಟಿಗ್ರಾಫ್, ಮೈಸೂರು, ೨೦೧೦, ಪು.೧೫.

೨. ಅದೇ, ಪು.೧೬.

೩. ಲಲಿತ ಕೆ.ಪಿ., **ವಿರಾಜಪೇಟೆ ತಾಲ್ಲೂಕಿನ ಸ್ಥಳನಾಮಗಳ ಅಧ್ಯಯನ**, ಮೈಸೂರು ವಿಶ್ವವಿದ್ಯಾನಿಲಯ, ೨೦೧೩, ಪು.೪೦.

೪. ವಿ.ಎಸ್.ರಾಮಕೃಷ್ಣ, **ಬೆಡಗಿನ ಕೊಡಗು**, ೧೯೮೧, ಪು.೫.

೫. ಲಲಿತ.ಕೆ.ಪಿ, **ವಿರಾಜಪೇಟೆ ತಾಲೂಕಿನ ಸ್ಥಳನಾಮಗಳ ಅಧ್ಯಯನ**, ೨೦೧೩, ಪು.೩೬.

೬. ಡಿ.ಎನ್.ಕೃಷ್ಣಯ್ಯ, **ಕೊಡಗಿನ ಇತಿಹಾಸ**, ಪ್ರಸಾರಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೭೪, ಪು.೨೪.

೭. ಅದೇ, ಪು.೨೫.

೮. ಅದೇ, ಪು.೪೧.

೯. ಸೂರ್ಯನಾಥ್ ಯು, **ಕಾಮತ್, ಭಾರತದ ಗೆಜೆಟಿಯರ್**, ಕೊಡಗು ಜಿಲ್ಲೆ, ೧೯೯೨, ಪು.೨೩೦.

೧೦. ಡಿ.ಎನ್. ಕೃಷ್ಣಯ್ಯ, **ಕೊಡಗಿನ ಇತಿಹಾಸ, ಪ್ರಸಾರಂಗ**, ಮೈಸೂರು ವಿ.ವಿ., ಪು.೯೩.

೧೧. ಅದೇ, ಪು.೬೭-೬೮.

೧೨. ಶ್ರೀಧರ್ ಹೆಗ್ಗಡೆ, **ಕೊಡಗಿನ ಸ್ವಾತಂತ್ರ್ಯ ಹೋರಾಟಗಾರರು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೪, ಪು.೪೩.

೧೩. ಸೂರ್ಯನಾಥ್ ಯು, **ಕಾಮತ್, ಭಾರತದ ಗ್ಯಾಸೆಟಿಯರ್**, ಕೊಡಗು ಜಿಲ್ಲೆ, ೧೯೯೨, ಪು.೨೩೩.

೧೪. ಶ್ರೀಧರ್ ಹೆಗ್ಗಡೆ, **ಕೊಡಗಿನಲ್ಲಿ ಸ್ವಾತಂತ್ರ್ಯ ಹೋರಾಟಗಾರರು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೪, ಪು.೪೫.

೧೫. ಡಿ.ಎನ್.ಕೃಷ್ಣಯ್ಯ, **ಕೊಡಗಿನ ಇತಿಹಾಸ**, ಪ್ರಸಾರಂಗ, ಮೈಸೂರು ವಿ.ವಿ, ೧೯೭೪, ಪು.೨೪.

೧೬. ಸೂರ್ಯನಾಥ್ ಯು, **ಕಾಮತ್, ಕೊಡಗು ಜಿಲ್ಲಾ ಗ್ಯಾಸೆಟಿಯರ್**, ೧೯೯೨, ಪು.೬೯೫.

೧೭. ಬಿ.ಎನ್.ಕೃಷ್ಣಮೂರ್ತಿ, **ಗುಣಸೇನಾಪಂಡಿತ** (ಪತ್ರಿಕೆ), ಕನ್ನಡ ಸಾಹಿತ್ಯ ಪರಿಷತ್ತು, ೧೯೨೨, ಪು.೨೮೦-೨೮೨.

೧೮. ಸೂರ್ಯನಾಥ್ ಯು, **ಕಾಮತ್, ಕೊಡಗು ಜಿಲ್ಲಾ ಗ್ಯಾಸೆಟಿಯರ್**, ೧೯೯೨, ಪು.೬೯೫.

೧೯. ಅದೇ, ಪು.೬೯೬.

೨೦. ಡಿ.ಎನ್.ಕೃಷ್ಣಯ್ಯ, **ಕೊಡಗಿನ ಇತಿಹಾಸ**, ಪ್ರಸಾರಂಗ, ಮೈಸೂರು ವಿ.ವಿ, ೧೯೭೪, ಪು.೩೯೦.

೨೧. ಎಂ.ಪಿ.ರೇಖಾ, **ಅರಿಕಟ್ಟು**, ಕಿಕ್ಕೇರಿ ಪಬ್ಲಿಕೇಷನ್, ಬೆಂಗಳೂರು, ೨೦೧೦, ಪು.೩.

೨೨. ಕೆ.ಪಿ.ಮುತ್ತಣ್ಣ, **ಜಗತ್ತಿಗೊಂದೇ ಕೊಡಗು**, ಪ್ರೀಮಿಯರ್ ಪ್ರೆಸ್, ಬೆಂಗಳೂರು, ೧೯೬೯, ಪು.೨೧೨.

೨೩. ಅದೇ, ಪು.೨೧೩.

೨೪. ಡಿ.ಬಿ.ರಾಮಚಂದ್ರಚಾರ್, ಸುನಂದ ಪ್ರಕಾಶನ, ವಿರಾಜಪೇಟೆ, **ಕೊಡಗು**, ೧೯೮೨, ಪು.೧೧೧.

೩ | ಅಧ್ಯಾಯ

ಕೊಡವರ ನಂಬಿಕೆ ಮತ್ತು ಸಂಪ್ರದಾಯಗಳು

ಕೊಡವರ ಮೂಲ

ಕೊಡವ ಎಂಬ ಪದ 'ಕುರು' ಎಂಬ ಪದದಿಂದ ಬಂದಿದೆ. ಕುರು ಎಂಬುವುದು ಒಂದು ಕ್ಷತ್ರಿಯ ಪಂಗಡವಾದ್ದರಿಂದ ಈ ಕುರು ಜನಾಂಗ ಅಥವಾ ಕುರು ಪಂಗಡ ಉತ್ತರ ಭಾರತದಿಂದ ದಕ್ಷಿಣಕ್ಕೆ ಬಂದು ನೆಲಸಿರಬಹುದೆಂಬ ಅಭಿಪ್ರಾಯ ಬಲವಾಗುತ್ತದೆ. ಈ ಬಗ್ಗೆ ಸ್ಕಂದ ಪುರಾಣದಲ್ಲಿ ವಿವರಗಳಿವೆ. ಕೊಡವರ ಆಚಾರ ವಿಚಾರಗಳು ಮತ್ತು ಶರೀರ ರಚನೆಯು ಉತ್ತರ ಭಾರತದ ಜನಾಂಗಕ್ಕೆ ಹೋಲಿಕೆಯಾಗುವುದರಿಂದ ಕ್ಷತ್ರಿಯ ಪಂಗಡ ಇಲ್ಲಿಗೆ ವಲಸೆ ಬಂದಿರಬಹುದೆಂಬ ವಾದಕ್ಕೆ ಸಮರ್ಥನೆ ಸಿಗುತ್ತದೆ. ಈ ಪಂಗಡ ಕುರುಕ್ಷತ್ರಿಯ ಪಂಗಡವಾಗಿರಬಹುದೆಂದು, ಕೊಡವ 'ಕುಡುಮಲೆನಾಡ' ಮುಂತಾದ ಹೆಸರಿನಿಂದ ಪ್ರಚಲಿತವಾಗಿದೆ.

"ಸ್ಕಂದ ಪುರಾಣದ ಪ್ರಕಾರ "ಕೊಡವರು, ಚಂದ್ರವರ್ಮನೆಂಬ ರಾಜಕುಮಾರನ ಸಂತತಿಯವರು,ಅವರಿಗೆ ಕ್ರೋಡರೆಂದು ಹೆಸರಿದ್ದು ಅವರೇ ಕೊಡವರಾದರು, ಕೊಡವರು ಚಂದ್ರವರ್ಮನ ಸಂತತಿಯವರೆಂಬುದನ್ನು ರಾಜ್‌ಕೋಲ್ ಎಂಬುವವರು ಸಮರ್ಥಿಸಿದ್ದಾರೆ".[೧] ಕಾವೇರಿ ಪುರಾಣದಲ್ಲೂ ಕೊಡವರು ಕದಂಬ ವಂಶದ ದೊರೆ ಚಂದ್ರವರ್ಮನ ಸಂತತಿಯೆಂದು ಹೇಳಿದೆ.

"ಕರ್ನಲ್ ವಿಲ್ಕ್ಸ್ ಅವರು ತಮ್ಮ ಕೃತಿ ಮೈಸೂರಿನ ಚರಿತ್ರೆಯಲ್ಲಿ ಕೊಡವರು ಈ ಭೂಭಾಗವನ್ನು ಜಯಿಸಿದ ಕದಂಬ ಯೋಧರ ವಂಶಸ್ಥರು ಎಂದಿದ್ದಾರೆ".[೨] ಇದೂ ಕೂಡ ಊಹೆಯ ಮೇಲೆ ಆಧಾರಿತವಾಗಿದೆ. ಆದರೆ ಕದಂಬರ ಪ್ರಭಾವ ಕೊಡಗಿನಲ್ಲಿ ಇದ್ದದ್ದು ನಿಜ.

"ಕೊಡವರು ಸಿಂಧೂ ನದಿ ತಟದ ಮೆಹೆಂಜೊದಾರೊ ನಾಗರಿಕತೆಯ ಕಾಲದಲ್ಲಿ ಸಿಂಧೂ ಬಯಲಲ್ಲಿದ್ದವರೆಂದು ಹೇಳಲಾಗಿದೆ".[೩] "ಮೆಹೆಂಜೊದಾರೊ ಸಂಶೋಧನೆಯ ಕಾಲದಲ್ಲಿ ದೊರೆತ ಕೆಲವು ಉಲ್ಲೇಖಗಳಲ್ಲಿ ಕೊಡವರ ಹೆಸರು ಬಂದಿದೆಯೆಂದೂ ಆದ್ದರಿಂದ ಕೊಡವರು ಅಲ್ಲಿಂದ ದಕ್ಷಿಣಕ್ಕೆ ಬಂದು ನೆಲೆಸಿರಬೇಕೆಂದೂ ಫಾದರ್ ಹೆನ್ರಿ ಹೆರಾಸ್ ಅವರ ಊಹೆ".[೪] "ಸರ್ ಥಾಮಸ್ ಹಾಲೆಂಡ್ ಅವರು ಕೊಡವರು ದಕ್ಷಿಣಭಾರತದ ಜನಾಂಗಗಳಲ್ಲೇ ಅತ್ಯುತ್ತಮವಾದ ಜನಾಂಗ ಎಂದಿದ್ದಾರೆ."[೫]

"ಕೊಡವರಿಗೂ ದಕ್ಷಿಣ ಭಾರತದ ಬೇರೆ ಯಾವ ಜನಾಂಗಕ್ಕೂ ಹೋಲಿಕೆ ಇಲ್ಲವೆಂದೂ ತಾನು ಭಾರತದಲ್ಲಿ ನೋಡಿದ ಜನಾಂಗಗಳಲ್ಲಿ ಅವರದು ಸ್ವತಂತ್ರ

ನಿಲುವಿಕೆಯಲ್ಲಿ ಸ್ಫುರದ್ರೂಪಿನಲ್ಲಿ ಮೇಲ್ತರಗತಿಯ ಇತರ ಎಲ್ಲಾ ಹೋಲಿಕೆಗಳಲ್ಲಿ ಅತ್ಯುತ್ತಮವೆಂದೂ ಸರ್ ಎರೆಸ್ಕಿನ್‌ಪೆರಿಯವರು ಅಭಿಪ್ರಾಯ ಪಟ್ಟಿದ್ದಾರೆ".[೬] ಮತ್ತೊಂದು ಅಭಿಪ್ರಾಯದ ಪ್ರಕಾರ "ಕೊಡವರು ಮೂಲತಃ ಸಿಥಿಯನ್ನರು ಮೆಸಿಡೋನಿಯಾದ ಫಿಲಿಪ್ ದೊರೆಯ ಮಗ ಅಲೆಗ್ಸಾಂಡರ್‌ನ ದಂಡಯಾತ್ರೆಯ ಸಮಯದಲ್ಲಿ ಅವನ ಸೇನೆಯ ಸಿಂಧಿಯನ್ನರು ಕೆಲವರು ಉತ್ತರ ಭಾರತಲ್ಲುಳಿದು ಅಲ್ಲಿಂದ ಅವರು ದಕ್ಷಿಣಕ್ಕೆ ಬಂದು ನೆಲಸಿದರೆಂದೂ ಹೇಳುತ್ತಾರೆ".[೭] ದಕ್ಷಿಣ ಭಾರತದಲ್ಲಿ ಅರಬ್ಬರ ಸಂಪರ್ಕದಿಂದ ಅವರ ಉಡುಗೆ ತೊಡುಗೆಗಳನ್ನು ಅನುಸರಿಸಿರುವ ಕಾರಣ ಅವರ ಸಂಸ್ಕೃತಿಯು ಮೇಲೆ ಪ್ರಭಾವ ಬೀರಿರಬೇಕೆನಿಸುತ್ತದೆ.

ಶ್ರೀ ಕೃಷ್ಣ ಅಯ್ಯರ್‌ಅವರು "ಕೊಡವರ ಶಾರೀರಿಕ ರಚನೆ, ಮೈಕಟ್ಟು, ಮೂಗಿನ ರಚನೆ ಇತ್ಯಾದಿಗಳ ತುಲನೆಯಿಂದ ಅವರಿಗೆ ದಕ್ಷಿಣ ಭಾರತದ ಬೇರೆ ಯಾವುದೇ ಜನಾಂಗದ ಹೋಲಿಕೆ ಇಲ್ಲವೆಂದು ಹೇಳಿದ್ದಾರೆ".[೮] ಶ್ರೀ ಬಿ.ಡಿ ಗಣಪತಿಯವರು ಮೇಲಿನ ಹೇಳಿಕೆಯನ್ನೇ ಸಮರ್ಥಿಸುತ್ತಾ "ಕೊಡವರಿಗೆ, ದಕ್ಷಿಣ ಭಾರತದ ಯಾವುದೇ ಜನಾಂಗದ ಹೋಲಿಕೆ ಇಲ್ಲ. ಮೈಕಟ್ಟಿನಲ್ಲಿ ಮುಖ ಮೂಗು ಇತ್ಯಾದಿಗಳ ರಚನೆಯಲ್ಲಿ ಅವರು ಪ್ರತ್ಯೇಕ ಜನಾಂಗವೇ ಆಗಿದ್ದಾರೆ. ಅವರು ದಕ್ಷಿಣ ಭಾರತ ಜನಾಂಗಗಳ ಗುಂಪಿಗೆ ಸೇರಿಲ್ಲವೆಂಬುವುದರ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ ಎಂದಿದ್ದಾರೆ".[೯]

ಬಿ.ಎಲ್. ರೈಸ್ ಅವರು "ಕೊಡವರನ್ನು ಸಿಥೊದ್ರಾವಿಡ ಪಂಗಡಕ್ಕೆ ಸೇರಿದವರೆಂದು ಅಭಿಪ್ರಾಯ ಪಡುತ್ತಾರೆ. ಕೆಲವರು ಕೊಡವರು ಇಂಡೋ ಆರ್ಯನ್ ಜನಾಂಗವೆಂದೂ ಕೆಲವರು ಕ್ಷತ್ರಿಯರೆಂದೂ, ಪಾಂಡವರ ವಂಶಸ್ಥರೆಂದೂ ಹೇಳಿಕೊಳ್ಳುತ್ತಾರೆ".[೧೦]

"ತೀರ ಇತ್ತೀಚಿನ ವಾದವೆಂದರೆ ಕೊಡವರು ಅರಬ್ಬೀ ದೇಶದಿಂದ ಓಡಿಬಂದ ಕುರ್ದಿ ಜನಾಂಗದವರೆಂಬುದು".[೧೧] ಹಿಂದೆ ಅಸ್ತಿತ್ವದಲ್ಲಿದ್ದ ಕುರ್ದಿಸ್ಥಾನದಲ್ಲಿ ಕುರ್ದಿಗಳೆಂಬ ಜನರಿದ್ದರು. ಅವರು ಅರಬ್ಬರೊಡನೆ ಹೊಡೆದಾಡಿ ಕೊನೆಗೆ ಅಲ್ಲಿರುವ ಮಲಬಾರಿನ ಮೂಲಕ ಓಡಿಬಂದು ಕೊಡಗಿನಲ್ಲಿ ನೆಲೆಸಿರಬೇಕೆಂದೂ ಕುರ್ದಿಗಳಿಗೂ ಮತ್ತು ಕೊಡವರಿಗೂ ಎಷ್ಟೋ ಸಾಂಸ್ಕೃತಿಕ ಸಾದೃಶ್ಯವಿದೆಯೆಂದೂ ಈ ವಾದ ಸಮರ್ಥಿಸುತ್ತದೆ. ಕೆಲವರು ಕೊಡವರನ್ನು ದ್ರಾವಿಡರೆಂದಿದ್ದಾರೆ. ಅವರ ಭಾಷೆ ನಡೆನುಡಿಗಳೆಲ್ಲಾ ದ್ರಾವಿಡರದೇ ಆಗಿದೆ. ಕೊಡವರಲ್ಲಿ ಈಗಿನ ಬೇರೆ ಯಾವ ಜನಾಂಗದಲ್ಲೂ ಕಾಣದ ಒಂದು ವಿಶಿಷ್ಟತೆ ಇದೆ. "ಇವರು ನೀಳವಾದ ಒಂದು ನಿಲುವಂಗಿಯನ್ನು ತೊಡುತ್ತಾರೆ. ಇದಕ್ಕೆ ಕುಪ್ಪಸವೆಂದು ಕರೆಯುತ್ತಾರೆ ಇದರ ಅರ್ಧತೋಳು ಕುತ್ತಿಗೆಯು 'ಗಿ'ಆಕಾರದಲ್ಲಿರುತ್ತದೆ".[೧೨] ಇದು ಮೊಳಕಾಲಿನವರೆಗೆ ಇದ್ದು ಸಾಮಾನ್ಯವಾಗಿ ಕುರಿ ಉಣ್ಣೆಯ ಬಟ್ಟೆಯಿಂದ ಮಾಡಲ್ಪಟ್ಟಿರುತ್ತದೆ.

ಆದರೆ ಮದುವಣಿಗನು ಮಾತ್ರ ಉದ್ದ ಕೈಯ ಬಿಳಿ ಕುಪ್ಪಸವನ್ನೇ ತೊಡುತ್ತಾನೆ. "ನಡುವಿಗೆ ಕುಪ್ಪಸವನ್ನು ಬಿಗಿಯಾಗಿ ಜೋಡಿಸಿ ಕಟ್ಟಲು ಒಂದು ಚೇಲೆ ಉಪಯೋಗಿಸುತ್ತಾರೆ. ಇದಕ್ಕೆ ಕೆಲವು ರೇಷ್ಮೆಯ ನಡುಪಟ್ಟಿಗೆ 'ಪೀಚಕತ್ತಿ'

ಕಟ್ಟುತ್ತಾರೆ. ಒಂದು ಸಣ್ಣದಾದ ಪರಂಪರಾಗತವಾದ 'ಧುರಿಕೆ'. ತಲೆಗೆ ಒಂದು ರುಮಾಲು ಇದ್ದು ಇದನ್ನು 'ಪಾನಿ ಮಂಡೆ ತುಣಿ' ಎಂದು ಹೆಸರು."[೧೩] ಇದು ಕೊಡವರ ಸಾಂಪ್ರದಾಯಿಕವಾದ ಉಡುಗೆ. ಹಿಂದಿನ ಕಾಲದಲ್ಲಿ ತಮ್ಮ ಕೆಲಸ ಕಾರ್ಯಗಳಿಗೂ ಕೊಡವರು ಇದೇ ಉಡುಪನ್ನೇ ಉಪಯೋಗಿಸುತ್ತಿದ್ದರಂತೆ. ಆದರೆ ಈಚೆಗೆ ಇದೆಲ್ಲಾ ಬಿಟ್ಟು ಹೋಗಿ ಕೇವಲ ಮದುವೆ ಸಂದರ್ಭಗಳಲ್ಲಿ ಮಾತ್ರ ಇವುಗಳನ್ನು ಧರಿಸಿಕೊಳ್ಳುತ್ತಾರೆ. ಆಂಗ್ಲರ ಆಗಮನದಿಂದ ಇತರ ಕಡೆಗಳಲ್ಲಿ ಭಾರತೀಯ ಉಡುಪು ವ್ಯತ್ಯಾಸವಾಗಿರುವಂತೆ ಇಲ್ಲೂ ಆಗಿದೆ. ಕೊಡವರು ಮುಖ್ಯವಾಗಿ ವ್ಯವಸಾಯವನ್ನೇ ವೃತ್ತಿಯಾಗಿ ಉಳ್ಳವರಾದರೂ ಸ್ವಭಾವತಃ ಕ್ಷೇತ್ರ ಪ್ರವೃತ್ತಿಯುಳ್ಳವರು. ಇವರಲ್ಲಿ ಪ್ರತಿ ಮನೆಗೊಬ್ಬರಂತೆ ಸೈನ್ಯದಲ್ಲಿ ಸೇವೆ ಸಲ್ಲಿಸುವುದುಂಟು ಹಿಂದೂ ಧರ್ಮದ ಮೇಲೆ, ದೇಶದ ಮೇಲೆ, ಇವರಿಗೆ ಅಪಾರ ನಿಷ್ಠೆ. ಅವರಲ್ಲಿ ಮಗು ಹುಟ್ಟಿದೊಡನೆಯೇ ಒಂದು ಗುಂಡನ್ನು ಹಾರಿಸಿ ಮಗು ಜನಿಸಿತೆಂಬುದನ್ನು ತಿಳಿಸುತ್ತಾರೆ. ಇದು ಕ್ಷತ್ರಿಯ ಪದ್ಧತಿಯಾಗಿದೆ. ಶೌರ್ಯದ ಸಂಕೇತವಾಗಿದೆ.

ಕೊಡವರನ್ನು ಕುರುಗಳೆಂದೂ, ಅಂದರೆ ಕುರುವಂಶದ ಕ್ಷತ್ರಿಯ ಪಂಗಡವೇ ಕೊಡಗಿನಲ್ಲಿ ಬಂದು ನೆಲಸಿ ಕೊಡವರಾಗಿರಬಹುದು ಕೇವಲ 'ಕುರು' ಎಂಬ ಹೆಸರಿನ ಸಾದೃಶ್ಯ 'ಕುಡು' ಎಂದಾಗಿದೆಯೆಂದೂ ಹೇಳಲಾಗಿದೆ. ಈ ವಾದಕ್ಕೆ ಆಧಾರಗಳು ಸಾಕಷ್ಟಿದ್ದು ಬಲವಾಗಿ ಪುಷ್ಟೀಕರಿಸುತ್ತವೆ. ಅಂದರೆ ಕುರು ವಂಶದವರು ದಕ್ಷಿಣಕ್ಕೆ ಬಂದು ಕೊಡವರಾದರೆಂಬ ವಾದವು ಸ್ಥಿರಗೊಳ್ಳುತ್ತವೆ.

ಕೊಡವರು ಕ್ಷತ್ರಿಯ ಪರಂಪರೆಯವರೆಂದು ಹೇಳಲು ಸಾಕಷ್ಟು ಆಧಾರಗಳಿವೆ. ಅವರ ನಡೆನುಡಿಗಳಲ್ಲಿ ಇದು ಪ್ರತಿಫಲಿತವಾಗುತ್ತದೆ. ಅವರ ಜೀವನ ಕ್ರಮದಲ್ಲಿ ಕ್ಷತ್ರಿಯ ಅಂಶವು ಹಾಸುಹೊಕ್ಕಾಗಿ ಸೇರಿದೆ. "ಹಿಂದಿನಿಂದಲೂ ಅವರು ಯೋಧರಾಗಿಯೇ ಪ್ರಖ್ಯಾತರಾಗಿದ್ದಾರೆ. ಮಗು ಜನಿಸಿದ ಸಂಧರ್ಭದಲ್ಲೇ ಬಿಲ್ಲು ಬಾಣದ ಪರಿಚಯ ಮಾಡಲಾಗುತ್ತದೆ".[೧೪]

ಕೊಡವರ ಸಾಂಪ್ರದಾಯಿಕ ಉಡುಗೆಯಲ್ಲೂ ಪೀಚೆಕತ್ತಿಗೆ ಗೌರವಸ್ಥಾನ. ಅವರ ಸಾಂಪ್ರದಾಯಿಕ 'ಪಡೆಕಳಿ' ಎಂಬ ಸ್ಪರ್ಧೆ ಅವರ ಕ್ಷೇತ್ರಕ್ಕೇ ದ್ಯೋತಕವಾಗಿ ನಡೆದು ಬಂದಿತ್ತು. ಈಗ 'ಪಡೆಕಳಿ' ಎಂಬುದು ಒಂದು ಅಣಕು ಯುದ್ಧವಾಗಿದೆ. ಹಿಂದೆ ಗ್ರಾಮದ ಜನರು ಎರಡು ವಿಭಾಗಗಳಾಗಿ ಹಲವು ಕ್ರೀಡಾನಿಯಮಗಳನ್ನು ಅನುಸರಿಸಿ ಹೋರಾಟ ನಡೆಸುತ್ತಿದ್ದರು. ಆದರೆ ಕ್ರಮೇಣ ವಿರಸಕ್ಕೆ ಕಾರಣವಾದ್ದರಿಂದ ಇದನ್ನು ಬಿಟ್ಟು 'ಪರಿಯ ಕಳಿ' ಎಂದು ನಡೆಸುತ್ತಾರೆ. ಇದು ಇಬ್ಬರು ಯುವಕರ ಪರಾಕ್ರಮ ಪ್ರದರ್ಶನ. ಹೀಗೆ ಯುದ್ಧವನ್ನೇ ಕ್ರೀಡೆಯಾಗಿ ಇಟ್ಟುಕೊಂಡಿರುವ ಕ್ಷತ್ರಿಯ ಪಂಗಡ ಕೊಡವರದು.

ಶ್ರೀನಿವಾಸರವರು 'ಕೊಡವರ ಧಾರ್ಮಿಕ ಮತ್ತು ಸಾಮಾಜಿಕ ಜೀವನವೆಂಬ' ತಮ್ಮ ಕೃತಿಯಲ್ಲಿ ಈ ರೀತಿ ಬರೆದಿದ್ದಾರೆ. "ಲಿಂಗಾಯಿತ ರಾಜರ ಆಳ್ವಿಕೆ ಕಾಲದಲ್ಲಿ ಕೊಡವರು ಬಹು ಮುಂದುವರೆದ ಕೋಮು ಆಗಿದ್ದರು. ಅರಸರ ದಿವಾನರುಗಳು, ಸಲಹೆಗಾರರು ಅವರೇ ಆಗಿದ್ದರು. ಆಡಳಿತದಲ್ಲಿಯ ಪ್ರಮುಖ

ಹುದ್ದೆಗಳೆಲ್ಲಾ ಅವರದ್ದೇ ಆಗಿತ್ತು. ಸೈನ್ಯ ಮತ್ತು ಪೋಲೀಸ್ ಖಾತೆ ಅವರಿಂದಲೇ ರಚಿತವಾಗಿತ್ತು. ಅವರಲ್ಲಿ ಸಂಪತ್ತು ಮತ್ತು ಅಧಿಕಾರ ಎರಡೇ ಇತ್ತು. ಕಟ್ಟು ನಿಟ್ಟಿನ ಜನರಾಗಿದ್ದು, ಶಾರೀರಕ, ಶೌರ್ಯ, ಚತುರತೆಗಳಲ್ಲಿ ಆಸಕ್ತರಾಗಿದ್ದುದರಿಂದ ಶಾರೀರಿಕ ಸೌಷ್ಠವ ಹಾಗೂ ಸಾಹಸ ಪ್ರದರ್ಶನ, ಆಟೋಟ, ಕುಣಿತ, ನೃತ್ಯ, ಬೇಟೆ ಇತ್ಯಾದಿಗಳು ಅವರ ಒಲವಿನ ಕಾರ್ಯಕ್ರಮಗಳಾಗಿದ್ದವು. ವೈದಿಕ ಕ್ಷತ್ರಿಯರಿಗೂ ಕೊಡವರಿಗೂ ಎಲ್ಲಾ ರೀತಿಯಲ್ಲೂ ಸಾಮ್ಯತೆ ಗಾಢವಾಗಿರುವುದರಿಂದ ಅವರು ಕ್ಷತ್ರಿಯರೆಂದು ಸ್ವಾಭಾವಿಕವಾಗಿ ಗುರುತಿಸಬಹುದಾಗಿದೆ" ಎಂದು ಕೊಡವರ ಜೀವನ ವಿಧಾನವನ್ನು ಅರ್ಥಪೂರ್ಣವಾಗಿ ಕಟ್ಟಿಕೊಡುತ್ತಾರೆ..[೧೫]

ಕೊಡವರಲ್ಲಿ ಗಂಡಸಿಗೆ ಕೋವಿ ಕತ್ತಿಗಳೇ ಆಭರಣವಾಗಿದ್ದವು. ಈಗಲೂ ಈ ಜನಾಂಗಕ್ಕೆ ಪ್ರಮಾಣ ಪತ್ರವಿಲ್ಲದೆ ಕೋವಿಗಳನ್ನು ಹೊಂದುವ (ಇತ್ತೀಚೆಗೆ) ಅಧಿಕಾರವಿದೆ. ವಿನಾಯಿತಿ ಪತ್ರವನ್ನು ಹೊಂದಿರಬೇಕೆಂದು ಮಾಡಿದ್ದಾರೆ. ಇವರ 'ನಾಲ್‌ಕಟ್ಟ್ ಮನೆ' ಅದನ್ನು ಬೇರ್ಪಡಿಸುವ ಕಡಂಗಗಳು ಇವೆಲ್ಲಾ ಕೋಟೆ ಕೊತ್ತಳಗಳಂತೆ ಇವೆ. ಇವೆಲ್ಲಾ ವಿಶೇಷಗಳನ್ನು ನೋಡಿದರೆ ಕೊಡವರು ಹಿಂದೂ ಸಮಾಜದ ಕ್ಷತ್ರಿಯರು ಕ್ಷಾತ್ರ ಜೀವನವನ್ನು ನಡೆಸುತ್ತಿದ್ದವರು ಎಂಬ ಮಾತಿಗೆ ಪುಷ್ಟಿ ದೊರೆಯುತ್ತದೆ.

ಕೊಡವರ ಯುದ್ಧ ಪ್ರಿಯತೆ ಸಾಹಸಗಳ ಬಗ್ಗೆ ಲೂಯಿಸ್ ರೈಸ್‌ರವರು ಈ ರೀತಿ ಹೇಳಿದ್ದಾರೆ. "ಬೆಟ್ಟ ಪ್ರದೇಶವಾದ ಕೊಡಗಿನ ನಿವಾಸಿಗಳಾದ ಕೊಡವರು ಹೋರಾಟದಲ್ಲಿ ಅಜೇಯರು. ಯುದ್ಧರಂಗದ ಸಹನೆ ಚತುರತೆಗಳಲ್ಲಿ ನಿಸ್ಸೀಮರು/ ವಿವಿಧ ಯುದ್ಧ ಕಲೆಗಳಲ್ಲೂ ಅವರು ಪ್ರವೀಣರು/ಆಧುನಿಕ ಗೆರಿಲ್ಲಾ ಯುದ್ಧ ಕ್ರಮ ಅವರಿಗೆಂದೋ ತಿಳಿದಿತ್ತು. ಶತ್ರುವಿಗೆ ಆಹಾರ ಸರಬರಾಜು ಸಾಧನ ಸಾಹಿತ್ಯಗಳು ದೊರೆಯದಂತೆ ಮಾಡಿ ಆತನನ್ನು ಹದಕ್ಕೆ ತರುವ ಕಲೆ ಅವರಿಗೆ ಜನ್ಮ ಸಿದ್ಧವಾದುದಾಗಿತು".[೧೬]

ಕೊಡವರ ವೀರತ್ವ ಗುಣಗಳ ಬಗ್ಗೆ ಬರೆಯುತ್ತಾ ಕೆ.ಪಿ. ಮುತ್ತಣ್ಣನವರು "ಭುಜಪರಾಕ್ರಮಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದ್ದರು ಯುದ್ಧದಲ್ಲಿ ಧೀರರಾಗಿದ್ದರು. ಆದರಿಂದ ಒಂದು ನಾಡಿನ ಶೂರನು ಇನ್ನೊಂದು ನಾಡಿನ ಶೂರನೊಂದಿಗೆ "ಬತ್ತೆ ಪೊಯಿತ್" ಎಂಬ ದ್ವಂದ್ವ ಯುದ್ಧದಲ್ಲಿ ಆಸಕ್ತನಾಗಿ ಗೆದ್ದವನಿಗೆ ಸೋತವನು ಶರಣಾಗತನಾಗುತ್ತಿದ್ದನು".[೧೭] ಎಂಬುದನ್ನು ಗುರುತಿಸಿದ್ದಾರೆ.

ಕೊಡವರ ಸಾಮಾಜಿಕ ಕೌಟುಂಬಿಕ ಪದ್ಧತಿ

ಪಟ್ಟೋಲೆಪಳಮೆ ಹೇಳಿರುವಂತೆ ಕೊಡಗಿನಲ್ಲಿ ಹಿಂದೆ ಹಾಲೇರಿ ಅರಸರ ಕಾಲದಲ್ಲಿ ಇದ್ದ ೧೨ ಕೊಂಬುಗಳನ್ನು ೩೫ ನಾಡುಗಳನ್ನಾಗಿ ವಿಂಗಡಿಸಲ್ಪಟ್ಟಿತ್ತು. ಪಾಡಿನಾಲ್‌ನಾಡ್, ಎಡೆನಾಲ್‌ನಾಡ್, ಕಿಗ್ಗಟ್ಟ್‌ನಾಡ್ ಮುಂತಾದ ಹೆಸರುಗಳು ನಾಡುಗಳಾಗಿ ವಿಭಾಗಿಸಲ್ಪಟ್ಟಿತ್ತು. ಕೊಡವರಲ್ಲಿ ಅವಿಭಕ್ತ ಕುಟುಂಬವು ಅಸ್ತಿತ್ವದಲ್ಲಿದ್ದು ಚರ ಹಾಗೂ ಸ್ಥಿರಾಸ್ತಿಗಳನ್ನು ಸ್ವಂತವಾಗಿ ಪಡೆಯುವ ಹಕ್ಕಿರಲಿಲ್ಲ. ಅಲ್ಲದೆ ಅವಿಭಕ್ತ ಕುಟುಂಬದ ಸದಸ್ಯರು ವೈಯಕ್ತಿಕವಾಗಿ ಸಂಪಾದಿಸಿದ ಆದಾಯ

ಮತ್ತು ಇನ್ನಿತರ ಲಾಭಗಳು ಕುಟುಂಬದ ಪ್ರತಿಯೊಬ್ಬರಲ್ಲಿಯೂ ಸಲ್ಲುತ್ತದೆ. (ಬಿ.ಎಲ್.ರೈಸ್ ೧೮೭೦:೨೫-೩೦)

ಕೊಡವರ ಅವಿಭಕ್ತ ಕುಟುಂಬದಲ್ಲಿ ಪಿತೃಪ್ರಧಾನ ವ್ಯವಸ್ಥೆಯಿದ್ದು, ತಂದೆ ಕುಟುಂಬದ ಮೇಲ್ವಿಚಾರಣೆಯನ್ನು ನಿರ್ವಹಿಸುತ್ತಿದ್ದನು. ಅವನ ಆದೇಶದಂತೆ ಕೆಲಸ ಕಾರ್ಯಗಳು ಸಾಗುತ್ತಿದ್ದು ಅವನ ಮಾತೇ ಅಂತಿಮ ತೀರ್ಮಾನವಾಗಿರುತ್ತದೆ. ಇತ್ತೀಚೆಗೆ ಕೊಡವರಲ್ಲಿ ಅವಿಭಕ್ತ ಕುಟುಂಬ ಪದ್ಧತಿ ಕಣ್ಮರೆಯಾಗುತ್ತಿದ್ದು, ಇವರ ಮೂಲ ವಂಶಿಕರು ಐನ್ಮನೆಯಲ್ಲಿ ವಾಸಮಾಡುತ್ತಿರುವುದನ್ನು ಕಾಣಬಹುದಾಗಿದೆ.

ಕೊಡವರ ಪಿತೃ ಪ್ರಧಾನ ವ್ಯವಸ್ಥೆಯ ಮೂಲಸ್ಥಾಪಕರನ್ನು 'ಒಕ್ಕ' ಎನ್ನುತ್ತಾರೆ. ಈತನು ಪ್ರಥಮ ವ್ಯಕ್ತಿಯಾಗಿರುತ್ತಾನೆ. ಅವಿವಾಹಿತ ಕೊಡವತಿ ಒಕ್ಕದ ಕುಟುಂಬದ ಸದಸ್ಯತ್ವ ಹೊಂದಿರುತ್ತಾಳೆ. ಒಂದು ಕುಟುಂಬದ ಒಕ್ಕದ ಸದಸ್ಯರು ಬೇರೊಂದು ಕುಟುಂಬದ ಒಕ್ಕದ ಸದಸ್ಯರ ಜೊತೆ ಸ್ನೇಹ ಸಂಬಂಧ ಬೆಳೆಸಿ ಆ ಕುಟುಂಬದ ಸದಸ್ಯನನ್ನು ಅರುವ (ಗೆಳೆಯ)ನನ್ನಾಗಿ ಮಾಡಿಕೊಳ್ಳುತ್ತಾರೆ. ಅರುವ ಅಥವಾ ಗೆಳೆಯನು ಆ ಕುಟುಂಬದ ಮುಖ್ಯ ವ್ಯಕ್ತಿ. ಒಕ್ಕದ ಕುಟುಂಬ ಮತ್ತು ಅರುವ ಕುಟುಂಬ ಮದುವೆ, ಸಾವು-ನೋವುಗಳಲ್ಲಿ ಪರಸ್ಪರ ಭಾಗಿಗಳಾಗುತ್ತಾರೆ. ಪ್ರತೀ ಕೊಡವ ಕುಟುಂಬಕ್ಕೆ 'ಅರುವ' ಕುಟುಂಬವು ಅತ್ಯವಶ್ಯಕವಾಗಿದೆ. ಅರುವನು ಆಯಾಯ ಕುಟುಂಬದ ಎಲ್ಲಾ ಜವಾಬ್ದಾರಿಯನ್ನು ವಹಿಸಿಕೊಂಡು ಕುಟುಂಬದ ಗೆಳೆತನ ಕಾಪಾಡಿಕೊಂಡು ಬರುವ ಈ ವ್ಯವಸ್ಥೆ ಕೊಡವರಲ್ಲಿ ಇಂದಿಗೂ ಉಳಿದುಕೊಂಡಿದೆ. ಇವರಲ್ಲಿ 'ಕೊರವುಕಾರ' ಎಂಬ ವ್ಯಕ್ತಿಯು ಕುಟುಂಬದ ಮುಂದಾಳತ್ವ ವಹಿಸಿ ಗ್ರಾಮದ ಏಳಿಗೆಗಾಗಿ ಯೋಗ್ಯರಾದ ಹಿರಿಯ ವ್ಯಕ್ತಿಯನ್ನು 'ತಕ್ಕ' (ಮುಂದಾಳತ್ವ ವಹಿಸಿರುವ ಮುಖ್ಯಸ್ಥ) ನನ್ನು ಆರಿಸುತ್ತಾನೆ.

ಈ 'ತಕ್ಕ'ನೆಂಬ ಹುದ್ದೆ ವಂಶಪಾರಂಪರ್ಯವಾಗಿ ಬಂದಿದ್ದು, ಈತನು ಅಭಿವೃದ್ಧಿ ಕಾರ್ಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಜೀವನದ ಮುಂದಾಳತ್ವ ವಹಿಸುತ್ತಾನೆ. ಕುಟುಂಬಗಳಲ್ಲಿ ಘರ್ಷಣೆಗಳಾದಾಗ ಗ್ರಾಮದ 'ಮಂದ್' (ಮೈದಾನ)ನಲ್ಲಿ ಸಭೆ ಸೇರಿ ವಿಚಾರಣೆ ನಡೆಸುತ್ತಿದ್ದರು. ಕಾನೂನಿಗೆ ವಿರುದ್ಧ ನಡೆದುಕೊಂಡವರಿಗೆ ದಂಡ ವಿಧಿಸುತ್ತಿದ್ದರು. ಕಟ್ಟುಕಟ್ಟಳೆ ವ್ಯವಹಾರದ ಕಾರ್ಯ ನಿರ್ವಹಿಸುವವನಿಗೆ (ಪೊಲೆವಾಡು) ತಕ್ಕ ಎನ್ನುತ್ತಾರೆ. ತಪ್ಪು ಮಾಡಿದರೆ ಗ್ರಾಮಸ್ಥರೇ ಸೇರಿ ಶಿಕ್ಷೆ ನೀಡುತ್ತಿದ್ದರು. ಶಿಕ್ಷೆಯಿಂದ ಬಂದ ದಂಡದ ಹಣವನ್ನು ಅಥವಾ ಧಾನ್ಯವನ್ನು ಊರಿನ ಗ್ರಾಮದೇವತೆಯ ಭಂಡಾರದ ಸ್ವತ್ತಾಗಿ ಊರಿನ ಅಭಿವೃದ್ಧಿಗೆ ಬಳಸುತ್ತಿದ್ದರು.

ಕೊಡವರಲ್ಲಿ ಇಂದಿಗೂ 'ತಕ್ಕ'ನು ಧಾರ್ಮಿಕ, ಸಾಂಪ್ರದಾಯಿಕ ಆಚರಣೆ ಪದ್ಧತಿಗಳನ್ನು ನಡೆಸಿಕೊಂಡು ಬರುತ್ತಿದ್ದಾನೆ. ಈತನ ನಿರ್ಣಯವೇ ಅಂತಿಮವಾಗಿ ರುತ್ತದೆ. ಕೊಡವರ 'ಊರೊರ್ಮೆ' ಪದ್ಧತಿಯು ಗ್ರಾಮದ ಜನರ ಅನ್ಯೋನ್ಯತೆಗೆ ಸಹಾಯಕವಾಗಿದೆ. ಗ್ರಾಮದ 'ಮಂದ್'ಗಳಲ್ಲಿ ಹಬ್ಬದ ಆಚರಣೆ, ಹುತ್ತರಿ ಕುಣಿತವನ್ನು ಕಡ್ಡಾಯವಾಗಿ ಆಚರಿಸುತ್ತಾರೆ. ಗ್ರಾಮಸ್ತರೆಲ್ಲರೂ ಕೂಡಿ ಪ್ರತಿ ಮನೆಯಿಂದ ಖಾದ್ಯ

ಪದಾರ್ಥಗಳನ್ನು ತಂದು ಸಹಭೋಜನವನ್ನು ಗ್ರಾಮದ 'ಮಂದ್'ನಲ್ಲಿ ಮಾಡುವ ವಿಶೇಷ ನಡವಳಿಕೆಗಳು ಇಂದಿಗೂ ಉಳಿದುಕೊಂಡು ಬಂದಿವೆ.

ಕೊಡಗಿನ ಮೂಲ ಜನಾಂಗದವರು ಭೂಪದ್ಧತಿಯನ್ನು 'ಜಮ್ಮ' ಎನ್ನುತ್ತಾರೆ. ಜಮ್ಮ ಹಿಡುವಳಿಯನ್ನು ಹೊಂದಿದವರು ಕಂದಾಯದಲ್ಲಿ ವಿಶೇಷ ರಿಯಾಯಿತಿ ಪಡೆಯುತ್ತಾರೆ. ಬ್ರಿಟಿಷ್ ಸರ್ಕಾರವು ಹಿಂದೆ ಕೊಡವರಿಗೆ 'ಜಹಗೀರ್' ಮತ್ತು 'ಉಂಬಳಿ'ಯನ್ನು ನೀಡಿದೆ. ವೀರ, ಶೌರ್ಯಕ್ಕಾಗಿ ಇವರ ವೀರ ಪರಂಪರೆ ಸಂಸ್ಕಾರ ರೂಪದಲ್ಲಿ 'ಬಾಳೆ ಬಿರುದು', 'ಪರೆಯಕಳಿ', 'ಕತ್ತಿಯಾಟ್' ಮುಂತಾದ ರೂಪದಲ್ಲಿ ಕಂಡುಬರುತ್ತದೆ. ಪ್ರತಿಯೊಬ್ಬರೂ ಕೋವಿ, ಕತ್ತಿಯನ್ನು ಬಳಸುತ್ತಾರೆ. ಈ ಆಯುಧಗಳನ್ನೇ ಇವರ ಆಭರಣಗಳನ್ನಾಗಿ ಬಳಸುವ ಈ ಆಯುಧ ಪ್ರೀತಿ ಇವರ ಶೌರ್ಯಕ್ಕೆ ಸಾಕ್ಷಿಯಾಗಿದೆ.

ಕೊಡವ ವಂಶ ಪರಂಪರೆ

ಹೊಸ ತಲೆಮಾರು ಬಂದಂತೆ ಇತ್ತೀಚೆಗೆ ಕೆಲವು ಬದಲಾವಣೆಗಳಾಗಿವೆ

ಕ್ರ.ಸಂ.	ಕೊಡವ ಸಮುದಾಯ	ಜನಾಂಗ	
೧	ಮನೆ	ಮನೆರ ಯಜಮಾನ	ಒರ್ ಮನೆ
೨	ಒಕ್ಕ	ಕೊರವುಕಾರ	ಒರ್ ಕುಳ
೩	ಊರ್	ಊರ್ ತಕ್ಕ	ಕುಳ ಸಮೂಹ (ಊರ್)
೪	ನಾಡ್	ನಾಡ್ ತಕ್ಕ	ಊರ್ ಕೂಟ್ (ನಾಡ್)
೫	ಸೀಮೆ	ಸೀಮೆ ತಕ್ಕ	ನಾಡ ಕೂಟ್ (ಸೀಮೆ)

ಮಹಿಳಾ ಸ್ಥಾನಮಾನ

ಕೊಡವ ಕುಟುಂಬದಲ್ಲಿ ಮಹಿಳೆಗೆ ಪ್ರಾಶಸ್ತ್ಯ ಉಂಟು. ಈಕೆ ಮನೆಯ ಜವಾಬ್ದಾರಿಯ ಜೊತೆಗೆ ಜೀವನ ನಿರ್ವಹಣೆಗಾಗಿ ಕೋಳಿ, ಹಂದಿ ಸಾಕಾಣಿಕೆ ಯನ್ನು ಮಾಡುತ್ತಾಳೆ. ಹಸುಗಳನ್ನು ಪೋಷಿಸಿ ಹಾಲು ಉತ್ಪಾದನೆ, ತೋಟ, ಗದ್ದೆಗಳಲ್ಲಿ ಕೆಲಸ ಮಾಡಿ ಸಾವಯವ ಕೃಷಿಗೂ ಸಹಾಯ ಮಾಡುತ್ತಾಳೆ.

ಕೊಡವ ಸ್ತ್ರೀಯು ಗಂಡನ ಮನೆ ಪ್ರವೇಶಿಸಿದ ಕೂಡಲೆ ನಡುಬಾಡೆಯಲ್ಲಿದ್ದ ದೀಪಕ್ಕೆ ನಮಸ್ಕರಿಸಿ, ಹಿರಿಯರ ಕಾಲಿಗೆ ಬಿದ್ದು ಆಶೀರ್ವಾದ ಪಡೆಯುತ್ತಾಳೆ. ಆನಂತರ ಐನ್‌ಮನೆಯ 'ಐಮರ'ದ ಮೇಲೆ ವಿಶ್ರಮಿಸಿ, ಬಾವಿಯಿಂದ ನೀರು ತಂದು, ಗದ್ದೆಗೆ ಸಗಣಿ ಹೊರುವ ಮೂಲಕ ಹೊಸಮನೆಯ ಕುಟುಂಬದಲ್ಲಿ ತನ್ನ ಪಾಲುದಾರಿಕೆಯನ್ನು ಪ್ರದರ್ಶಿಸುತ್ತಾಳೆ. ಇವರ ಮತ್ತೊಂದು ವಿಶೇಷವೆಂದರೆ ಮಹಿಳೆಯು ಮದುವೆಯಾದ ತಕ್ಷಣ ಹೊಸ ಮನೆತನದ ಹೊಸ ಹೆಸರಿನೊಂದಿಗೆ ತನ್ನ ಗಂಡನ ಹೆಸರನ್ನು ತನ್ನ ಹೆಸರಿನ ಮುಂದೆ ಸೇರಿಸಿಕೊಳ್ಳುತ್ತಾಳೆ.

ಕೊಡವ ಮಹಿಳೆ ಸಂಪ್ರದಾಯವನ್ನು ಮೀರದೆ ಎಲ್ಲಾ ಕಟ್ಟು ಕಟ್ಟಳೆಗಳನ್ನು ಪಾಲಿಸುತ್ತಾಳೆ. ತಾಯ್ತನಕ್ಕೆ ಮಹತ್ವ ನೀಡುತ್ತಾಳೆ. ಹತ್ತು ಮಕ್ಕಳನ್ನು ಪಡೆದ ಕೊಡವ ಮಹಿಳೆಗೆ 'ಪೈತಾಂಡೆಕಳೆಪ ಮಂಗಲ' ಹಕ್ಕಿದೆ. ಇಂತಹ ಮಹಿಳೆಯನ್ನು 'ವೀರವನಿತೆ'ಯೆಂದು ಗೌರವಿಸುತ್ತಾರೆ. ವಿಶಿಷ್ಟ ರೀತಿಯಲ್ಲಿ ಮತ್ತೊಮ್ಮೆ ಆ ದಂಪತಿಗಳನ್ನು ಗೌರವಿಸುವ ಮದುವೆ ಆಚರಣೆ ನಡೆಯುತ್ತದೆ. "ಆಣ್ ಪಡೆಲ್ ಚಾವಂಡು ; ಪೊಣ್ ಪೆತ್ತಿತ್ ಚಾವಂಡು" (ಗಂಡು ಹೋರಾಡಿ ಸಾಯಬೇಕು, ಹೆಣ್ಣು ಮಗು ಹೆತ್ತು ಸಾಯಬೇಕು) ಎಂಬ ಮಾತು ಕೊಡವರ ವಂಶಾಭಿವೃದ್ಧಿಯ ಕುರಿತು ಪುಷ್ಟೀಕರಿಸುತ್ತದೆ.

ಕೊಡವರಲ್ಲಿ ವಿಧವಾ ವಿವಾಹಕ್ಕೆ ಪ್ರಾಶಸ್ತ್ಯವಿದೆ. ವಿಧವೆ ತನ್ನ ಪತಿಯ ಸಹೋದರನನ್ನು ಅಥವಾ ಇತರ ದಾಯಾದಿ ಕುಟುಂಬದ ಹೊರಗಿನವರನ್ನು ವಿವಾಹ ಮಾಡಿಕೊಂಡು ಹೊಸ ಬದುಕನ್ನು ನಡೆಸುವ ಸ್ವಾತಂತ್ರ್ಯವಿದೆ. ಹಿಂದೆ ಶ್ವೇತವರ್ಣದ ಉಡುಪನ್ನು ಮಾತ್ರ ಧರಿಸುತ್ತಿದ್ದ ವಿಧವೆ ಇತ್ತೀಚೆಗೆ ಎಲ್ಲರಂತೆ ಬಣ್ಣದ ಉಡುಪನ್ನು ಧರಿಸುತ್ತಾಳೆ. ಮರುವಿವಾಹವಾಗಿ ಬೇರೆ ಕುಟಂಬಕ್ಕೆ ಹೋಗಿದ್ದರೂ ಆಕೆ ಗೌರವಾದರಗಳಿಗೆ ಅರ್ಹಳಾಗಿರುತ್ತಾಳೆ.

ಕೊಡವ ಮಹಿಳೆಯು ಹಬ್ಬ ಹರಿದಿನಗಳಲ್ಲಿ ವಿಶೇಷ ಸ್ಥಾನ ವಹಿಸುತ್ತಾಳೆ. ಕಾವೇರಿ ಸಂಕ್ರಮಣದಲ್ಲಿ 'ಕಣಿಪೂಜೆ' ಮಾಡುವುದರಿಂದ ಪ್ರಾರಂಭಗೊಂಡು ಸಭೆ ಸಮಾರಂಭದಲ್ಲಿ ಕೊರವುಕಾರ್ತಿ, ಬೋಜಕಾರ್ತಿ ಎಂಬ ವಿಶೇಷ ಜವಾಬ್ದಾರಿ ಸ್ಥಾನಗಳನ್ನು ಹೊರುತ್ತಾಳೆ. ಸ್ವಾತಂತ್ರ್ಯ ಗೌರವ ಸಮಾನತೆಯನ್ನು ಪಡೆದ ಕೊಡವ ತಾಯಿಗೆ ವಿಶೇಷ ಸ್ಥಾನವಿದೆ. ಮದುವೆಯಲ್ಲಿ ತಾಯಿ ವಧುವಿಗೆ 'ಪತ್ತಾಕ್', 'ಪೊಮ್ಮಾಲೆ', 'ಪೊಂಬಣ' ಕಟ್ಟುವ ಸಂದರ್ಭದಲ್ಲಿ ಮಹತ್ವದ ಸ್ಥಾನವನ್ನು ವಹಿಸುತ್ತಾಳೆ. ಅಲ್ಲದೆ ವರನು ದೇವರನ್ನು ನೆನೆದ ನಂತರ ಮೊದಲು ತನ್ನ ತಾಯಿಯ ಪಾದಗಳಿಗೆ ನಮಸ್ಕರಿಸಿ ಅಂಶವಿರುವ ಗೀತೆ ಇಂತಿದೆ.

"ಕಾರಣೋರ ತೊತ್ತಿತ್
ತನ್ನ ಪೆತ್ತ ಅವ್ವಂಡ
ಕಾತೊಟ್ಟ್ ತಲೆಬೆಚ್ಚ"

ಬಾಲ್ಯವಿವಾಹ ಪದ್ಧತಿ, ವರದಕ್ಷಿಣೆ ಪಿಡುಗಿನಿಂದ ದೂರ ಉಳಿದಿರುವ ಕೊಡವ ಮಹಿಳೆಯರು ಪರಿಸರದ ಹಿನ್ನೆಲೆಯ ಚೌಕಟ್ಟಿನೊಳಗೆ ಮುಕ್ತ ಬದುಕು ನಡೆಸಿ ಸಮಾಜದಲ್ಲಿ ಇತರರಿಗೆ ಮಾದರಿಯಾಗುವಂತೆ ಬದುಕುತ್ತಿದ್ದಾರೆ.

ಕೊಡವ ಮನೆಪೆದ(ಮನೆತನ)

ಕೊಡವರಲ್ಲಿ ಮನೆತನದ ಹೆಸರು ವಂಶದ ವ್ಯಕ್ತಿತ್ವದ ಸಂಕೇತವಾಗಿದೆ. ಕೊಡವರಲ್ಲಿ ಕಂಡುಬರುವ ಮನೆತನದ ಹೆಸರನ್ನು 'ಮನೆಪೆದ' ಎನ್ನುತ್ತಾರೆ. ಈ ವಂಶದ ಮೂಲ ಪುರುಷನನ್ನು ಅಥವಾ ವಂಶಕ್ಕೆ ಹೆಸರು ತಂದುಕೊಟ್ಟವನನ್ನು 'ಗುರುಕಾರೊಣಪುರುಷ' ಎನ್ನುತ್ತಾರೆ. ಹಾಗೆಯೇ ಗುರುಕಾರೊಣ ಪುರುಷೆ(ಕಾರೊಣಸ್ತ್ರೀ)ಯರೂ ಉಂಟು. ಕುಟುಂಬಕ್ಕೆ ಗೌರವ ತಂದು ಕೊಡುವ

ಮನೆಪೆದ, ಒಂದು ರೀತಿಯಲ್ಲಿ ಗೋತ್ರ, ಬಳಿ, ಬೆಡಗು ಎಂಬಂಥ ಮೌಲ್ಯ ಪರಂಪರೆಯನ್ನು ಹೊಂದಿದೆ. "Gotra (lineage)- it is said the latest ancestor or one of the latest ancestors of a person by whose name his family has been known for generations Gotra really means 'hard ' of family or clan"*೧೮

ಕೊಡವರಲ್ಲಿ 'ಮನೆಪೆದ' (ಮನೆತನದ ಹೆಸರು) ಎಂಬ ಶಬ್ದಕ್ಕೆ ವಿಶೇಷ ಮಹತ್ವವಿದೆ. 'ನಿಂಗ ದಾಡ' ಅಂದರೆ ನೀವು ಯಾರ ಮನೆಯವರು. ಈ ಪದಕ್ಕೆ ಭಾವನಾತ್ಮಕ ಸಂಬಂಧವಿರುತ್ತದೆ. ಸ್ಥಳೀಯ ಸಂಸ್ಕೃತಿಯೊಂದರ ಸಂಕೇತ ಅದು. ಮನೆತನವನ್ನು ಎತ್ತಿ ನಿಲ್ಲಿಸಿದವರ ಹೆಸರಿನಲ್ಲಿಯೋ ಪ್ರಸಿದ್ಧಿ ತಂದು ಕೊಟ್ಟವರ ಹೆಸರಿನಲ್ಲಿಯೋ, ಪ್ರಸಿದ್ಧರಾದವರ ಹೆಸರಿನಲ್ಲಿಯೋ ಈ ಮನೆಪೆದವಿರುತ್ತದೆ.

ಮನೆತನಗಳ ಹೆಸರನ್ನು ಗ್ರಾಮನಾಮವಾಚಿ, ವೃತ್ತಿನಾಮವಾಚಿ, ವಸ್ತುನಾಮವಾಚಿ ಎಂದು ಸ್ಥೂಲ ವಿಂಗಡನೆ ಮಾಡಿರುವುದುಂಟು. ಆದರೆ ವ್ಯಕ್ತಿನಾಮವಾಚಿ, ಘಟನಾನಾಮವಾಚಿ, ವಲಸೆನಾಮವಾಚಿ, ಶೌರ್ಯನಾಮವಾಚಿ, ಭೂಹಿಡುವಳಿ ನಾಮವಾಚಿ ಇತ್ಯಾದಿ ಸೂಕ್ಷ್ಮ ನೆಲೆಯಲ್ಲಿಯೂ ಮನೆಪೆದಗಳನ್ನು ವಿವೇಚಿಸಲೇ ಬೇಕಾಗುತ್ತದೆ. ಉದಾ– ಅಜ್ಜಿಕುಟ್ಟಿರ, ಮಾದಂಡ, ಕೊಲ್ಲೀರ, ಮದಿಯೊಕ್ಕಡ, ಅಡ್ಡಂಡ, ದೇಚಕುಟ್ಟಡ, ಕೈಬಿಲಿರ, ಕಲ್ಯಾಟಂಡಕುಡಿ, ಕಲ್ಯಾಟಂಡ ಇತ್ಯಾದಿ ಮನೆಪೆದಗಳ ಹೆಸರು ಪರ್ಯಾಯವಾಗಿ ಪ್ರಧಾನ ಎನ್ನುವಂತಿಲ್ಲ. ವ್ಯಕ್ತಿಯ ಹೆಸರಿನಷ್ಟೇ ಮುಖ್ಯವಾದ ಅಥವಾ ಅದನ್ನು ಮೀರಿಯೋ ಇರುವಂಥ ಮುಖ್ಯ ಅಡ್ಡ ಹೆಸರು ಎನ್ನಲಾಗದೆ ಮನೆತನದ ಹೆಸರೂ ಪ್ರಮುಖವಾಗಿ ಕಾಣುತ್ತದೆ.

ಕೆಲವು ಸಂದರ್ಭಗಳಲ್ಲಿ ಆಧುನಿಕ ಹೆಸರುಗಳು ಸಂಕ್ಷೇಪಗೊಂಡು ಸಂಕೇತಸೂಚಿಯಾಗಿ ಕುಟುಂಬ ಹಾಗೂ ಪಿತೃನಾಮಗಳಿಗಿದ್ದು, ವ್ಯಕ್ತಿಯ ಹೆಸರು ಪ್ರಧಾನವಾಗಿ ವರ್ತಮಾನದಲ್ಲಿ ಕಾಣಬರುವುದುಂಟು. ಆದರೆ ವಂಶನಾಮವನ್ನು ಬಳಸಿಯೇ ಹೇಳಿಕೊಳ್ಳುವುದು ಇಂದಿಗೂ ಬಹಳ ಬಳಕೆಯಲ್ಲಿದೆ.

ಕೊಡಗಿನಲ್ಲಿ ವೃತ್ತಿವಾಚಿಯಾಗಿ ಅಥವಾ ಜಾತಿವಾಚಿಯಾಗಿ ಮಡಿವಾಳ, ಐರಿರ (ಬಡಗಿ), ಕೊಯವ, (ಕುಂಬಾರಿಕೆ), ಹರಿಜನ, ಕೆಂಬಟ್ಟಿಯಡ (ದಲಿತ), ಮೇದ ಎಂದೆಲ್ಲ ಜನಾಂಗವಾಚಿಯಾಗಿ ಹೇಳಿದರೂ ಪ್ರತ್ಯೇಕ ಮನೆಪೆದಗಳು ಆಯಾ ಸಮುದಾಯದ ಘಟಕಗಳಾಗಿ ಕಂಡುಬರುತ್ತವೆ. ಕೊಡವ ಮಡಿವಾಳ, ಕೊಡವನಾಯಿಂದ, ಕೊಯವ ಮುಂತಾದವರಿಗೆ ಮನೆಪೆದಗಳಿವೆ. ಕೊಡವ, ಗೌಡ, ಹೆಗ್ಗಡೆ ಮುಂತಾದ ಸಮುದಾಯದವರಲ್ಲಿ ಜಾತಿ ಸೂಚಕತೆ ಅಷ್ಟಾಗಿ ಎದ್ದು ತೋರುವುದಿಲ್ಲ. ವಸ್ತುನಾಮವಾಚಿಯಲ್ಲಿ ಯಾವುದೇ ಕುಟುಂಬ ಸಂಬಂಧದ ವಸ್ತುವೊಂದರ ಪ್ರಾಧಾನ್ಯಕ್ಕನುಸಾರವಾಗಿ ಮನೆತನದ ಹೆಸರಿನ್ನಿಡುತ್ತಾರೆ. ವ್ಯಕ್ತಿಗಳ ರೂಪ, ಗುಣ ಆಧಾರಿತ ಮನೆತನಗಳೂ ಪ್ರಾಚೀನ ಶಾಸನಗಳಲ್ಲಿ ಕಂಡುಬರುತ್ತವೆ.

ಮೇವುಂಡಿ ಮಲ್ಲಾರಿ ಅವರು ಕ್ರಿ.ಶ ೧೧೯೧ ರ ಮಾನಗೊಳ ಶಾಸನದಲ್ಲಿಯ 'ಹುಲ್ವಿನವರು' ಎಂಬ ಪದವನ್ನು ಮನೆತನದ ಸೂಚಿ ಎಂದಿದ್ದಾರೆ.

"ಕೊಡಗಿನಲ್ಲಿ ಅಚ್ಚಿಯಂಡ್ರ, ಅಪ್ಪಚ್ಚಿರ ಎಂಬ ಮನೆಪೆದಗಳು ಸ್ತ್ರೀ, ಪುರುಷ ಮೂಲ ವ್ಯಕ್ತಿಯಾಗಿದೆ; ಆದೇಂಗಡ ಮನೆತನ ಸುಂದರ ರೂಪಿನವರ ಮನೆತನದ್ದಾಗಿದೆ, ಹಾಗೂ ಪ್ರಾಚೀನ ಎಂಬ ಸಂಕೇತವೂ ಇದೆ. ಅಡ್ಡಂಡ ಮನೆಯಪ್ಪಂಡ, ಕೊಡಂದೇರ ಮನೆಪೆದಗಳು ಈ ಮನೆತನದವರ ದಾನ, ಆಶ್ರಯ ನೀಡಿಕೆ ಇತ್ಯಾದಿ ಗುಣ ಸೂಚಿಸುವಂಥದ್ದಾಗಿದೆ."[೧೯]

ಕೊಡಗಿನ ಕೆಲವು ಮನೆತನದ ಹೆಸರಿಗೆ ಪ್ರಾಚೀನತೆಯ ನಿದರ್ಶನವಿದೆ. ಕೆಲವು ಪ್ರಮುಖ ಶಾಸನಗಳಲ್ಲಿ ಇದನ್ನು ಗುರುತಿಸಬಹುದಾಗಿದೆ. ಗಂಗರ ಕೂಟಶಾಸನವೆನ್ನಲಾದ ಮಡಿಕೇರಿಯ ಕ್ರಿ.ಶ.೪೬೬ರ ತಾಮ್ರಪಟವು ೯ನೇ ಶತಮಾನದ ಲಿಪಿಯಲ್ಲಿದ್ದು 'ಕೊಟ್ಟಗರ್ ಬದಣಗುಪ್ಪೆ' ಎಂಬ ಶಬ್ದವನ್ನು ಹೊಂದಿದೆ. ಇಲ್ಲಿ ಸ್ಥಳನಾಮಕ್ಕೆ ಅಂಟಿಬಂದ ವಂಶ ಅಥವಾ ಮನೆತನದ ಕಸುಬು ಮೂಲದ ಹೆಸರು ತಾಗಿರುವಂತಿದೆ.

ಕ್ರಿ.ಶ ೮೮೮ ರ ಕೋತೂರು ಶಾಸನ (೯೭) ದಲ್ಲಿ 'ಜಡಗ ಎಚೆಯಂಗ ಗಾವುಣ್ಡ' ಎಂದಿದೆ. ಬಹುಶಃ ಜೌಗು ಅಥವಾ ತೀರ ಶೀತಲ ನೆಲೆಯೊಂದನ್ನು ಸೂಚಿಸುವ ನಿಸರ್ಗವಾಚಿ ಶಬ್ದವಾಗಿ, ಮನೆತನಕ್ಕೆ ಆ ಶಬ್ದ ಅಂಟಿರಬಹುದು; ಜಡಲಗ್ರಾಮದವ ಎಂದಾಗಬಹುದು; ಗ್ರಾಮನಾಮವಾಚಿಯಾಗಿ ಮನೆತನಕ್ಕೆ ಈ ಹೆಸರು ನಿಂತಿರಬಹುದು.

"೧೧ ನೇ ಶತಮಾನದ ನಲ್ಲೂರು ಶಾಸನದಲ್ಲಿ ಯಮುಚ್ಚರಿ ಜಕ್ಕಿಯಬ್ಬೆ, ದದ್ದರ ಮಂತ್ರಕಿ ಜಕ್ಕಿಯಬ್ಬೆ, ಶ್ರಾವರೆ ತನ್ವಿಯಬ್ಬೆ ಗಾವುಂಡಿ ಇತ್ಯಾದಿ ಹೆಸರುಗಳಲ್ಲಿಯ ಉಪಾಧಿಗಳು, ಗುಣವಾಚಕತ್ವ, ಧಾರ್ಮಿಕ ಆಚಾರ ಹಾಗೂ ವೃತ್ತಿಪ್ರಾಮುಖ್ಯದ ಹಿನ್ನೆಲೆಯಲ್ಲಿದ್ದು ಮನೆಪೆದಗಳಿಗೆ ಪ್ರೇರಕ ಶಬ್ದಗಳಂತೆ ಗೋಚರಿಸುತ್ತವೆ. ಕ್ರಿ.ಶ. ೧೧೭೫ ರ ನಂದಿಗುಂದಶಾಸನದಲ್ಲಿ (೮೭) 'ಬಲ್ಲೆಯ ಡಣಾಯಕ ಹಡಿಯಚಿ ಕಿರಕಣ ಯಿಂತ್ತಿನಿಬರು' ಎಂದಿದೆ. ಇಲ್ಲಿ ಗ್ರಾಮನಾಮ ಅಥವಾ ಶೌರ್ಯಸೂಚಕ ಅಥವಾ ವ್ಯಕ್ತಿನಾಮಸೂಚಕ ಹೆಸರುಗಳಂತಿದೆ. ಕ್ರಿ.ಶ. ೧೨೫೫ ರ ನಿಡುತ ಶಾಸನದಲ್ಲಿ ಕಹಿಗೋಡಿನ ಬೀರಗಉಡ, ೧೨೭೮ರ ಇನ್ನೊಂದು ಶಾಸನದಲ್ಲಿ ಕೊಜಿಕಡಹು ಹರಿಯಂಣ, ಕೊಜಿಕಡಹು ವೀರಣ್ಣ ಎಂಬ ಹೆಸರಿನಲ್ಲಿಯ ಉಪಾಧಿಗಳು ಬಹುಶಃ ಗ್ರಾಮನಾಮವಾಚಿ ಎನಿಸಿದರೆ, ೧೨ನೇ ಶತಕದ ಮಡಿಕೇರಿ ಶಾಸನದಲ್ಲಿ ಹರಿಯಣ್ಣ ಹೆಗ್ಗಡೆ ಎಂದು ಜನಾಂಗವಾಚಿ ಉಪಾಧಿ ಕಂಡುಬರುತ್ತದೆ".[೨೦] ಇವೆಲ್ಲವೂ ಮನೆಪೆದಗಳಿಗೆ ಪ್ರೇರಕವೆನ್ನಬಹುದು.

ಕ್ರಿ.ಶ. ೧೨೯೬ರ ಮುಳ್ಳೂರು ಶಾಸನದಲ್ಲಿ (೮೦) ಬೊಪ್ಪಗೌಡಿಯ ಮಲ್ಲೆಯದುದ್ದೈಯ ಎಂಬಲ್ಲಿಯ ಮಾತೃ ಪ್ರಧಾನ ಸ್ತ್ರೀವಾಚಿ ವಂಶನಾಮ ಪುರುಷರಿಗೆ ಅಂಟಿರುವುದು ಕಾಣುವಂತಿದೆ. ಚಿಕ್ಕ ಮಂಡೂರಿನಚಿ ಕ್ರಿ.ಶ. ಸು.೧೬೪೦ ರ ಸುಮಾರಿನ ಅಚ್ಚುನಾಯಕನ ಸಾಕುತಾಯಿಯ ಹೆಸರು ಮೇದಮಾಡ ಅಯ್ಯವ್ವಗೌಡಿ ಎಂದಾಗಿದ್ದು, ಮನೆಪೆದವೂ ಇದೆ. ಆದರೆ

'ಬೊಪ್ಪ ಗೌಡಿಯ' ಎನ್ನುವಾಗ ಆಕೆಯ ವಂಶದವರು ಎಂಬ ಶಕ್ತಿಯುತ ಮನೆಹೆಸರಿನಂತೆಯೆ ಇಲ್ಲಿಯೂ ಕಾಣುತ್ತದೆ. 'ಬೊಪ್ಪಗೌಡಿಯ' ಕೇವಲ ಗೌಡಳಿಕೆಯ ಸ್ಥಾನಮಾನ ಸೂಚನೆಯಲ್ಲದೆ ವಂಶನಾಮಸೂಚಿಯಾಗಿ ಬಳಸಿರುವಂತಿದೆ.

೧೪ನೇ ಶತಮಾನದ ಕೋಡು ಶಾಸನದ ಪ್ರಕಾರ "ಕ್ರಿ.ಶ.೧೩೫೯ ರ ಹುಲುಕೋಡು ಶಾಸನದಲ್ಲಿ 'ತ್ರಿನಮೇರ ದೇವಣ್ಣ' ಹುಲುಕೋಡ ಚಿಕ್ಕಣ್ಣಯ ಬೆಂಮ್ಮಗೌಡಯ ಬೀರಗಳು' ಎಂದಿದೆ. 'ತ್ರಿನಮೇರ' ಎಂಬ ಮನೆತನ ಹೆಸರು ಮಡಿಕೇರಿ–ಹಾಲೇರಿ ಹಾದಿಯ ಮಕ್ಕಂದೂರು ಸಮೀಪದಲ್ಲಿ ಇತ್ತೆಂದು ಅಲ್ಲಿನ ಹಿರಿಯರು ಹೇಳುತ್ತಾರೆ. ಹಾಗಿದ್ದಲ್ಲಿ, ಶಾಸನೋಕ್ತ ಖಚಿತ ಮನೆಪೆದವಾಗಿ ೧೪ನೇ ಶತಮಾನದ ಇತಿಹಾಸದ ಪುರಾವೆ ಸಿಕ್ಕಿದಂತಾಗುತ್ತದೆ. 'ತ್ರಿನಮ'(ತಿರುನಮ) ಎಂಬ ದೇವವಾಚಿ ಶಬ್ದಕ್ಕೆ 'ಏರ' ಎಂಬ ಗೌರವ ಸೂಚಕ ಪ್ರತ್ಯಯ ಸೇರಿ ಆಗಿದ್ದರೆ ನಾಮದ ಮನೆಯವರು ಎಂದಾಗಬಹುದು. ಆಗ ಅದು ದಾಸಪ್ಪ ಪರಂಪರೆಯ 'ಗೌಡ' ಜನಾಂಗದ ಮನೆಪೆದವಾಗಬಹುದು. ಅಥವಾ ಮೂರು ನಮೇರುಪುಷ್ಪಗಳ (ಸುರಗಿಹೂ), ಗಿಡಗಳ ಮನೆಯವರು ಎಂಬ ವೃಕ್ಷವಾಚಿ ಮನೆಪೆದವಾಗಿರಬಹುದು." (ಮಾಹಿತಿ ಎಂ.ಜಿ.ನಾಗರಾಜ್, ಕೊಡಗಿನ ಕೈಮಡಗಳು ಪು.೧೩೩)

ಮಡಿಕೇರಿಯ ಕ್ರಿ.ಶ. ೧೮೦೭ ರ ಶಾಸನದಲ್ಲಿನ (೧೭) 'ಬಿದ್ದಂಡರ ಬೋಪು' ಎಂಬ ಪದಗಳಲ್ಲಿ ಬಿದ್ದಂಡ್ರ (ಬಿದ್ದಂಡ) ಎಂಬ ಕೊಡವ ಮನೆಪೆದವನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ. ಇಲ್ಲಿ 'ಬಿದ್ದ' ಎಂಬ ಕನ್ನಡ ಅರ್ಥ ಅಥವಾ ಬಿತ್ತ್>ಬಿದ್ದ್, ವಿಧಿ>ಬಿದಿ (ಬಿದ್ದಪ್ಪ, ಬಿದ್ದಯ್ಯ) ಅಥವಾ ಬಿತ್ತಂಡ>ಬಿದ್ದಂಡ (ಬಿತ್ತಬೇಡ) ಎಂಬ ಕೊಡವ ಭಾಷಾರೂಪ ಹಾಗೂ ಅರ್ಥಗಳೂ ಇವೆ.

೧೯ನೇ ಶತಮಾನದ ತಲಕಾವೇರಿಯ ಅಗಸ್ತ್ಯೇಶ್ವರ ಶಾಸನದಲ್ಲಿ (೨೫) 'ಮನೆಯಪಂಡ ಮೊಂಣಪ್ಪ', ಪಾಡಿ ಇಗ್ಗುತಪ್ಪ ದೇಗುಲದ ಬಾಗಿಲ ಹಿತ್ತಾಳೆ ತಗಡಿನ ಮೇಲಿನ ಕ್ರಿ.ಶ ೧೮೩೪–೩೫ರ ಶಾಸನದಲ್ಲಿ(೨೭) 'ಅಪ್ಪಾರಂಡ ಬೋಪು' ಎಂಬ ಹೆಸರುಗಳಿದ್ದು ಕೊಡವ ಮನೆಪೆದಗಳನ್ನು ಸ್ಪಷ್ಟವಾಗಿ ಸೂಚಿಸಿವೆ. ಕ್ರಿ.ಶ.೧೮೫೭ರ ಕುಂದಬೆಟ್ಟದ ಮಹಾದೇವರ ಗುಡಿಯ ಸ್ತಂಭಶಾಸನದಲ್ಲಿ (೯೯) ಪಾರುಪತ್ಯೆಗಾರು 'ಮನೆಪ್ಪಂಡ್ರ ಪುಚ್ಚೆಯ', ಕೊಡೆಂದೇರ ಮುದ್ದೈಯ ಮತ್ತು ಮೇದೈತ; 'ಸಣ್ಣಂಡ್ರ ಬೊಳ್ಳೆಯ್ಯ' 'ಮಣಿಂಡೆ ತಿಂಮ್ಮೆಯ ಗವುಡ', ತಿಂಮ್ಮೆಯ ಗವುಡ ಜೆಂನೆಗವುಡನ ಚಂಣಪ್ಪ' ಎಂಬ ಮನೆಪೆದ ಸಹಿತವಾದ ವ್ಯಕ್ತಿನಾಮಗಳಿವೆ. ಇವುಗಳಲ್ಲಿ ಕೊಡವ ಮನೆಪೆದಗಳಾದ ಮನೆಯಪ್ಪಂಡ, ಕೊಡಂದೇರ, ಸಣ್ಣಂಡ್ರ ಅವರ ಮನೆತನದವರು ಇಂದಿಗೂ ಕುಂದಬೆಟ್ಟದ ತಪ್ಪಲಿನ ಕುಂದ ಹಾಗೂ ಹಾತೂರು ಗ್ರಾಮಗಳಲ್ಲಿ ವಾಸವಾಗಿದ್ದಾರೆ.

ಮನೆಪೆದಗಳು ಸ್ಥಳೀಯ ಸಂಸ್ಕೃತಿಯ ದ್ಯೋತಕವಾಗಿದೆ. ಹಾಲೇರಿ ಅರಸರ ಕಾಲದಲ್ಲಿ, ತೋರಿದ ಶೌರ್ಯ ಪ್ರದರ್ಶನ ಹಾಗೂ ಸಲ್ಲಿಸಿದ ಸೇವೆಗಾಗಿ 'ಜಮ್ಮ ಭೂಮಿ' ನೀಡಿದ ಸಂದರ್ಭದಲ್ಲಿ ಮನೆತನ ಗುರುತಿಸಲು ರೂಪಿಸಿದ ಮನೆಪೆದಗಳೂ ಇವೆ; ಆಸ್ತಿ ಪಡೆದ ಸ್ವತಂತ್ರ ಮನೆ ಕಟ್ಟಿಕೊಂಡು ಮನೆಪೆದ ಇಟ್ಟುಕೊಂಡ ಉದಾಹರಣೆಗಳು ಇವೆ.

ಕುಮಟೂರು ಗ್ರಾಮದ ಜನಪದ ಕಲಾವಿದ ದಿ॥ ಬಾಚರಣಿಯಂಡ ಕೆ. ಅಣ್ಣಯ್ಯ ಅವರು 'ಮನೆಪೆದ'ದ ಕುರಿತು ರಚಿಸಿರುವ ಜನಪದ ಗೀತೆ ಇಂತಿದೆ.

"ಆಳ್‌ಪೆದ ಕೊಡವಡನೋಟ್
ಆಳಣ್ಣ ಎನ್ನಿರೋ ಅದೇ ಪಾಟ್
ಆಳ್ ಪೆದತುಳ್ಳ ಆಜಾರವೋ
(ಬಕ್ಕ ಪೆದತುಳ್ಳ ಬಕ್ಕಣೆಯೋ!)
ಬಕ್ಕ ಪೆದತುಳ್ಳ ಬಕ್ಕಣೆಯೋ!)
ಸಮಸಮ ಕೊಟಿತ್ ಪಾಡಿರಿದಾ
ಕೊಡವಡ ಮನೆ ಪೆದ ಎನ್ನ
ಮನೆಪೆದಕೆನ್ನತ ಕಥೆ ಎಣ್ಣ್
ಮನೆಪೆದ ಇದ್‌ನ ಕೇಳಿರಿದಾ
ಕೊಡವಡ ಕೊಂಬಾಟ್ ಆಟೊ
ಪಾಡಿರೋ ಮನೆಪೆದ ಪಾಟೋ
ಎಚ್ಚರ್ ಒಕ್ಕೊಳೋ ತಕ್ಕಾಮೆ

ತಕ್ಕಾಮೆಕ್ ಒತ್ತ ಒಕ್ಕಾಮೆ
ನಾವುಕ್ ತೇನ್‌ನ ತೊರಿಂಜನ್ನೆ
ಬಕ್ಕಪೆದ ಇದ್ ಉಕ್ಕುವುದಾ
ಪಾಟ್ ಮೊಳಿ ಕೂಟಿ ಪಾಡಿರೆಲ್ಲಾ
ಆದಿಮೂಲ ಲೇಲೇಲಾ ಲೇಲಾ

(ಕನ್ನಡ ಅನುವಾದ)

ವೀರನ ಹೆಸರಿಗೆ ಕೊಡವನ ನೋಡು
ವೀರನ ಅಣ್ಣ ಎಂದರೆ ಅದೆ ಹಾಡು
ವೀರನ ಖ್ಯಾತಿಗೆ ನಡೆಸುವ ಚರ್ಯೆ
(ಶೌರ್ಯದ ಹೆಸರದು ಕೋಟೆಗು ಎತ್ತರ)
ಒಕ್ಕಲು ಹೆಸರೊತ್ತಿದೆ ಒಪ್ಪಿತ ಕಾರ್ಯಕೆ
ಒಕ್ಕಲು ಒಕ್ಕೂಟವಿದೆ ಸಮ್ಮತ ಕಾರ್ಯಕೆ
ಜೊತೆ ಜೊತೆ ಕೂಡಿ ಹಾಡಿರು ಈ ಹಾಡು
ಕೊಡವರ ಮನೆಪೆದ ಆದುದು ಹೇಗೆ?
ಮನೆಪೆದ ವಾದುದಿಂತಿದೆ ಕೇಳು
ಕೊಡವರ ಕೊಂಬಾಟವನಾಡುತ
ಹಾಡಿರಿ ಮನೆಪೆದ ಹಾಡನೆ ಎಲ್ಲರು
ಎಷ್ಟಿದೆ ಒಕ್ಕವು ಅಷ್ಟಕು ತಕ್ಕಮೆಯು
(ಹಿರಿಮೆಗೆ ಹೆಸರದು)

ತಕ್ಕಾಮೆಗೆ ಒತ್ತದು ಒಕ್ಕಲು ಬಳಗವು
ನಾಲಗೆಗದೆ (ಬಾಯಿಗೆ)ಜೇನನು ಸುರಿತವು
ಮನೆಪೆದದೊಳಗೂ ಸವಿ ಉಕ್ಕುವುದು
ಈ ಮೊದಲಹಾಡ ಹಾಡಿರೆಲ್ಲ ಕೂಡಿ
ಮಂಗಳವು ಮಂಗಳವು ಆದಿಮೂಲಗೆ
ನೋಡಿ"[೨೦]

ರಃ ಹಾಡಿನಲ್ಲಿ ಮನೆತನದ ಶೂರನ ಶೌರ್ಯ ಭಕ್ತಿ ವ್ಯಕ್ತವಾಗಿದೆ. ಅವನ ಹೆಸರಿಗೆ ಊನ ಬರದಂತೆ ವಂಶಿಕರು ನಡೆದುಕೊಳ್ಳುವ ಪ್ರಜ್ಞೆ ಇದೆ. ಕುಟುಂಬದ ಒಗ್ಗಟ್ಟಿನ ಚಿತ್ರವಿದೆ. ವಂಶಗೌರವ ಎತ್ತಿ ಹಿಡಿಯಬೇಕೆನ್ನುವ ಆಶಯವಿದೆ. ಬಂಧು ಬಳಗದ ಸಾಮರಸ್ಯದ ಚಿತ್ರವಿದೆ. ಮನೆಪೆದ ಹೇಳಿದಂತೆ ನಾಲಗೆಗೆ ಜೇನು ಸವಿದಂತಾಗುತ್ತದೆ. ಮನೆಪೆದದ ಹಾಡೆಂದರೆ ಮನೆತನದ ಇತಿಹಾಸದ ಮೊದಲ ಹಾಡು, ಎಂದೆಲ್ಲಾ ಧ್ವನಿಸುವ ಈ ಹಾಡಿನ ಸಂವಾದ ಶೈಲಿ ಆತ್ಮೀಯವಾಗಿದ್ದು, ತಕ್ಕಾಮೆಯ ಮನೆಪೆದದ ಉಗಮಕ್ಕೆ ಕಾರಣ ಎಂಬ ಸುಳುಹನ್ನು ದಟ್ಟವಾಗಿ ನೀಡುತ್ತದೆ.

ಪಟ್ಟೋಲೆ ಪಳಮೆಯ 'ಬಾಲಲೀಲೆ' ಹಾಡಿನಲ್ಲಿ ಜೋಗುಳವಾಡುತ್ತ ಕತೆ ಹೇಳುತ್ತಾ:

'ತಟ್ಟಾಂಡಾಣೆಲ್ ತಾರ್ ಕೊಡಂದೆ
ಉದಿಯೊಂಡಾಣೆಲ್ ನೂರ್ ಕುದುರೆ
ಪಂಡೇತಜ್ಞಂಡ ಪಡೆ ಬಂದ ಕಾಲ.'[೨೨]

ಈ ಸಾಲುಗಳು ಸಿರಿಬಾಯಿ ದೊಡ್ಡವೀರಪ್ಪನ ಕಾಲದ 'ಕಾಂಡಂಡ' ಮನೆತನಕ್ಕೆ ಸಂಬಂಧಿಸಿದ ಕತೆಯ ಸೂಚನೆ ಎಂದು ಅಭಿಪ್ರಾಯ ಪಡಲಾಗಿದೆ. ರಾಜರು ಕೊಟ್ಟಂತಹ 'ಉದಿಯಂಡ' ಎಂಬ ಹೆಸರು ಘಟನಾವಾಚಿಯಾಗಿತ್ತು. ತುಲಾ ಸಂಕ್ರಮಣದ ತೀರ್ಥೋದ್ಭವ ಸಮಯದಲ್ಲಿ ಅಮ್ಮತ್ತಿ ಬಿಳುಗುಂದ ನಾಡಿನಲ್ಲಿ 'ಪೊಂಗಮರದ ಬೊತ್ತ್' (ಕತ್ತರಿ ಆಕೃತಿಯಲ್ಲಿರುವ ಪೊಂಗಮರದ ಕೋಲು ಅಥವಾ ಬಿದಿರು ಕಡ್ಡಿಗಳ ತುದಿಗೆ ವೃತ್ತಾಕಾರದಲ್ಲಿ 'ಕೈಬಳ' ಬಳ್ಳಿಸುತ್ತಿ ನಿಲ್ಲಿಸುವುದು). ಬೊತ್ತುಗಿಡದ ಒಂದು ಕಾಂಡ ಬಳಸಿ 'ಕಾಂಡ ಬೊತ್ತ್' ನಿಲ್ಲಿಸುವುದುಂಟು. ಬಹುಶಃ ಈ ರೀತಿಯ ಬೊತ್ತ್ ಇಡುವ ವಿಶೇಷ ಪದ್ಧತಿಯಿಂದ 'ಕಾಂಡಂಡ' ಮನೆಪೆದ ಬಂದಿದೆ.

'ಕಾಂಡ ಬೊತ್ತಿನ ಮನೆಯವರಾದ್ದರಿಂದ 'ಕಾಂಡ' ಶಬ್ದಕ್ಕೆ 'ಅಂಡ' ಎಂಬ ಬಹುವಚನ ಪ್ರತ್ಯಯ (of=ಅವರ) ಸೇರಿ ಕಾಂಡಂಡ ಆಗಿದೆ.

ನಾಲಡಿ ಗ್ರಾಮದ ಪರದಂಡ ಮನೆತನಕ್ಕೆ ಮೊದಲಿಗೆ ಮನೆಪೆದ 'ನಂಬಿಮಡ' ಎಂದಿತ್ತು. ಅದು ಕೇರಳದ ಮೂಲದಿಂದ ಬಂದ ಮನೆತನ. ಹಾಗಾಗಿ ಕೇರಳದಿಂದ ಶ್ರೀ ಇಗ್ಗುತಪ್ಪದೇವರು, ಸೋದರರು ಹಾಗೂ ಸೋದರಿಯೊಡನೆ (ಪನ್ನಂಗಾಲತಮ್ಮೆ) 'ಯುವಕಪಾಡಿಯ ನಾಲಡಿಗೆ ಬಂದಾಗ ಮನೆಯವರು ನೀರು ಹುಡುಕಿ ತಂದುಕೊಟ್ಟರು. 'ಪರದಿ ತನ್ನನಿಕೊಂಡ್ ಇನ್ನ್‌ಮೊದಲ್ ಪರದಂಡ ಅನ್ನ್ ಮನೆಪೇರ್ .

ಇರ್ಕಟ್ಟೆ'–ಅಂದರೆ ತಣ್ಣಿ (ನೀರು) ಯನ್ನು ಅರಸಿತಂದು ಕೊಟ್ಟು ದಾಹ ತಣಿಸಿದ್ದರಿಂದ ಇದು ಮುಂದೆ ಪರದಂಡ ಎಂಬ ಮನೆತನದ ಹೆಸರು ರೂಢಿಗೆ ಬರಲಿ ಎಂದರ್ಥ.

ರಾಜರು ಕೊಟ್ಟ ಮನೆಪೆದಗಳು (ರಾಜರು ಕೊಟ್ಟ ಮನೆತನದ ಹೆಸರು):

ಮಡಿಕೇರಿ ತಾಲ್ಲೂಕು ಬಲಮುರಿ (ಬಲಂಬೇರಿ) ಗ್ರಾಮದಲ್ಲಿ ನೆರವಂಡ ಮನೆತನವಿತ್ತು. ಆ ಮನೆತನದ ಸುಬ್ಬಯ್ಯ ಹಾಲೇರಿ ಅರಸರಲ್ಲಿ ಕರಣಿಕನಾಗಿದ್ದ. ಮಡಿಕೇರಿ ಅರಮನೆಗೆ ದಿನವೂ ಕುದುರೆ ಮೇಲೆ ಅಷ್ಟು ದೂರದಿಂದ ಹೋಗಿ ಬರುವುದು ತ್ರಾಸದಾಯಕವಾಗಿತ್ತು. ಆಗ ದೊರೆಯು ಅವನಿಗೆ ಮಡಿಕೇರಿ ಸಮೀಪದ ಪೂರ್ವದ ಹಾದಿಯ ಕಾಟಕೇರಿ ಗ್ರಾಮದಲ್ಲಿ 'ಭೂಮಿಕಾಣಿ' ಕೊಟ್ಟು ಬೈರೇಟಿರ ಸುಬ್ಬಯ್ಯ ಎಂದು ಮನೆಪೆದ ಇಟ್ಟಿದ್ದರಿಂದ ಬೈರೇಟಿರ ಒಕ್ಕಕ್ಕೆ ಸುಬ್ಬಯ್ಯ ಮೂಲ ಪುರುಷನಾದ.(ಕುಪ್ಪಚ್ಚಿರ ಮೊಣ್ಣಪ್ಪ, ಪೊಮ್ಮಾಲೆ ಕೊಡಗ್, ಪು. ೧೦).

ಚೆಂಗಾಳ್ವ ಅಥವಾ ಕೊಂಗಾಳ್ವರ ಹೆಸರಿಗೆ ಉಪಾಧಿಯಾಗಿ 'ಚೋಳ' ಎಂಬ ಶಬ್ದ ಸೇರಿದ್ದುದು ಶಾಸನೋಕ್ತ. ಬಹುಶಃ ಅವರ ವಂಶಿಕರಾಗಿ 'ಚೋಳಂಡ' ಮನೆತನ ಕುಂದಗ್ರಾಮದಲ್ಲಿ ನೆಲೆಯಾಗಿತ್ತು. ದೊಡ್ಡ ವೀರರಾಜೇಂದ್ರ ಒಡೆಯನು

(೧೭೮೯-೯೦) ಪಿರಿಯಾಪಟ್ಟಣದಿಂದ ತಪ್ಪಿಸಿಕೊಂಡು ಬಂದಾಗ, ಈ ಮನೆತನ ರಾಜನಿಗೆ ಆಸರೆ ಕೊಟ್ಟ ಕಾರಣ 'ಮನೆಯಪ್ಪಂಡ' ಎಂಬ ಹೊಸ ಮನೆಪೆದ ಆ ಮನೆತನಕ್ಕೆ ಬಂದಿತಂತೆ. 'ಮುಕ್ಕಾಟಿರ' ಎಂಬ ಮನೆಪೆದ 'ಐರಿರ' ಮನೆತನಕ್ಕೆ ರಾಜರ (ಹಾಲೇರಿ) ಕಾಲದಲ್ಲಿ 'ಮೂಲೆಮನೆ' ಎಂಬ ಮನೆಪೆದ ಇಟ್ಟರಂತೆ. ಹೀಗೆ ರಾಜರು ಕೊಟ್ಟ ಎಷ್ಟೋ ಮನೆತನದ ಹೆಸರುಗಳಿವೆ.

ಕುಟುಂಬದ ಹೆಸರುಗಳು ಸ್ಥಳ ಹಾಗೂ ಸನ್ನಿವೇಶಕ್ಕೊಳಪಟ್ಟಿವೆ. ಬಾಳಿಯಡ, ಬಾಳಕುಟ್ಟಿರ, ಬಾಳಂಡ ಎಂಬ ಮನೆ ಹೆಸರುಗಳ ಮೂಲ ಬಾಳ್. ನೆಲ್ಲಿರ ನೆಲ್ಲಚಂಡ, ನೆಲ್ಲಮಕ್ಕಡ, ದುಂದಪಂಡ, ಮಂದನೆರವಂಡ, ಎಂಬ ಕುಟುಂಬಗಳ ಹೆಸರಿನ ಮೂಲ 'ಮಂದ್'. ಮಂದ್ ಎಂದರೆ ದೇಗುಲ. ಅಣ್ಣಿರ, ನೆಲ್ಲಿರ, ಕೊಲ್ಲಿರ ಎಂಬ ಮನೆಪೆದಗಳ ಮೂಲ ಆ ಶಬ್ದಗಳ ಮೊದಲ ಎರಡಕ್ಷರಗಳಾದ ಅಣ್ಣಿ, ನೆಲ್ಲಿ, ಕೊಲ್ಲಿಗಳಿಂದಾಗಿದ್ದು ರ-ಕಾರ ಪ್ರತ್ಯಯ ಹೊಂದಿದೆ. ಅಮ್ಮಂಡ, ಜಮ್ಮಡ, ಅಯ್ಯಂಡ, ಪಟ್ಟಡ ಇತ್ಯಾದಿ ಹೆಸರುಗಳು 'ಡ' ಕಾರ ಪ್ರತ್ಯಯ ಸೇರಿದ 'ಅಮ್ಮ' ಜಮ್ಮ, ಅಯ್ಯ-ಪಟ್ಟ ಶಬ್ದಗಳ ಮೂಲ ಹೊಂದಿದೆ; ಅಜ್ಜಮಾಡ; ಕಾಳಿಮಾಡ, ಪಟ್ಟಮಾಡ, ಮಾರಮಾಡ ಇತ್ಯಾದಿ ಮನೆ ಹೆಸರುಗಳಲ್ಲಿ 'ಮಾಡ' ಎಂದರೆ ಮನೆಗಳು ಎಂಬರ್ಥವಿದ್ದು ಹೆಸರುಗಳ ಮೊದಲೆರಡು ಅಕ್ಷರಗಳು ಅವುಗಳ ಮೂಲವನ್ನು ಹೇಳುತ್ತವೆ ಎಂಬ ಅಭಿಪ್ರಾಯವನ್ನು ಐ.ಮಾ. ಮುತ್ತಣ್ಣನವರು ವ್ಯಕ್ತಪಡಿಸಿದ್ದಾರೆ. ಇಲ್ಲಿ 'ಬಾಳ್ ಎಂದರೆ 'ಕತ್ತಿ ಬದುಕು', ಜೀವನ, ಜೀವಿತ ಎಂಬರ್ಥಗಳೂ ಇವೆ. ಶೌರ್ಯ ಸೂಚಕ 'ಕತ್ತಿ' ಎಂಬ ಅರ್ಥವನ್ನು ಪರಿಗಣಿಸಿ ವೀರರಿಗೆ ಹೆಸರಾದ ಮನೆತನದವರು ಎಂದಿಟ್ಟುಕೊಳ್ಳ ಬಹುದು. ಡ,ರ,ಅಂಡ ಪ್ರತ್ಯಯಗಳನ್ನು ಸೇರಿಸಿಕೊಳ್ಳುವುದು ವ್ಯವಸ್ಥೆಯಾಗಿರಬಹುದು.

ಚಂಗೇಟಿರ, ಚಂಗೇಪಂಡ, ಚಂಗಣಮಾಡ, ಚಂಗನ ಇತ್ಯಾದಿ ಮನೆಪೆದಗಳು ಬಹುಶಃ ಚೆಂಗಾಳ್ವ ವಂಶದ ಪರಂಪರೆಯೆನಿಸುತ್ತದೆ. ಕೊಂಗಾಂಡ, ಕೊಂಗಿಪಂಡ, ಕೋಗೀರ, ಕೊಂಗೇಟ್ಟಿರ, ಕೊಂಗೆರ ಇತ್ಯಾದಿ ಮನೆಪೆದಗಳು ಕೊಂಗಾಳ್ವ ಅರಸು ವಂಶ ಮೂಲವನ್ನು ತೋರುತ್ತದೆ.

ವಿಜಯನಗರೋತ್ತರ ಕ್ರಿ.ಶ. ೧೫೬೫-೮೫ ಅವಧಿಯಲ್ಲಿ ಕೊಡಗಿನಲ್ಲಿ ಅರಾಜಕ ಅವಸ್ಥೆಯಿತ್ತು. ಆ ಸಮಯದಲ್ಲಿ ಬಾಳುಕಾರರು, ಬಾಚಿಕಾರರು, ನಾಡ್‌ಬಾಚೆಕಾರರು ಎಂದುಕೊಳ್ಳುತ್ತ ಕೊಡಗಿನ ಒಂದೊಂದು ಭಾಗವನ್ನು ಹಿಡಿತದಲ್ಲಿಟ್ಟುಕೊಂಡು ಇವರು ಪರಸ್ಪರ ಕಲಹವಾಡುತ್ತಿದ್ದರು, ನಾಯಕರು ಬಂದ ಮೇಲೆ ಇವರು ಅವರ ಅಧೀನರಾಗಿ ಸೈನಿಕ ಮುಖ್ಯರಾಗಿ ಬಾಳುವೆ ಮಾಡಿದಂತಿದೆ. ಬಹುಶಃ ಬಾಳುವಂಡ, ಬಾಚರಣಿಯಂಡ, ಬಾಚಮಾಡ, ಬಾಚೆಟ್ಟಿರ, ಬಾಚ್ಚಳ್ಳಿರ, ಬಾಳಂಡ ಇತ್ಯಾದಿ ಮನೆಪೆದಗಳು ಈ ಮೂಲದಿಂದ ರೂಪುಗೊಂಡಿವೆ. ಈ ಮನೆತನದವರು ಹಾಲೇರಿ ಅರಸರ ಪೂರ್ವದಿಂದಲೂ ಇದ್ದು, ಹಾಲೇರಿ ಅರಸರ ಕಾಲಕ್ಕೆ ಗೌರವಾನ್ವಿತವಾಗಿ ಜಮ್ಮ ಆಸ್ತಿಯನ್ನು ರೂಢಿಸಿಕೊಂಡಿರುವಂತಿದೆ. ಕುಮಟೂರಿನ ಚಾಚರಣಿಯಂಡ ಮನೆತನದ ಐನ್‌ಮನೆಯ ಹಸ್ತಿಸೋಪಾನ, ಕಲ್‌ಬೋಟಿ, ಬಟ್ಟಗಲ್ಲುವ್ಯವಸ್ಥೆ, ಇತ್ಯಾದಿಗಳು ಕೊಳಗದಾಳುವಿನಲ್ಲಿರುವ

ಮೂಲಮನೆಯ ಬಾಚರಣಿಯಂಡ ಮನೆತನಕ್ಕೆ ಬಂದ ವ್ಯವಸ್ಥೆಯ ಪ್ರತೀಕ ಎನಿಸುತ್ತದೆ. ಈ ಮನೆತನದ ಮೂಲಪುರುಷನ ಹೆಸರು 'ಮಣಿಯ' ಎಂದಿದ್ದು ಮೊದಲಿಗೆ 'ಮುದ್ದುಮಣಿಯಂಡ' ಎಂಬ ಮನೆಪೆದವಿತ್ತು. ಮನೆತನವು ತೋರಿದ ಶೌರ್ಯದ ಕಾರಣ ಬಾಚಮಣಿಯಂಡ ಎಂದಾಗಿ ಮುಂದೆ 'ಬಾಚರಣಿಯಂಡ' ಎಂಬ ಹೆಸರು ರೂಢಿಗೆ ಬಂದಿದೆ.

ತಾವಳಗೇರಿ ಮೂರ್ನಾಡುವಿನಲ್ಲಿ 'ಕೈಬಿಲಿರ' ಮನೆತನವಿದೆ. ಇದು ಹಾಲೇರಿ ಅರಸುವಂಶ ಪೂರ್ವದಿಂದಲೂ ಇದ್ದ ಮನೆತನವೆನ್ನಲಾಗಿದೆ. ಕೈಲ್‌ಪೊಳ್ದು ಹಬ್ಬದಲ್ಲಿ (ಕೊಡಗಿನ ಆಯುಧ ಪೂಜೆ ಹಬ್ಬ) ಬೇಟೆಗೆ ಹೋಗುವ ತರುಣರಿಗೆ ಹಿರಿಯರು ಹೇಳುತಿದ್ದ ಎಚ್ಚರಿಕೆಯ ನುಡಿ ಕೈಬಲ್ಯ(ನರಿ=ಹುಲಿ) 'ಹುಲಿ'ಗೆ ಕೈಯಲ್ಲಿ ಹೆಚ್ಚು ಬಲ ಎಂದರ್ಥ. ಅಂದರೆ ಈ ಮನೆಯವರು ತೋಳ್ಬಲಕ್ಕೆ ಪ್ರಸಿದ್ಧಿಗೊಂಡವರಾಗಿದ್ದರಿಂದ ಈ ಹೆಸರು ಬಂದಿದೆ. ಕೈಬಲ್ಯ>ಕೈಬಿಲ>ಕೈಬಿಲರ ಆಗಿದೆ.

ಅಂಜಿಗೇರಿ ನಾಡಿನಲ್ಲಿ 'ಅಜ್ಜಿಕುಟ್ಟಿರ' ಎಂಬ ಮನೆಪೆದ ಕಂಡುಬರುತ್ತದೆ. ಅಜ್ಜಿ ಮಕ್ಕಳನ್ನು ಸಾಕಿದ ಕಾರಣಕ್ಕಾಗಿ ಈ ಹೆಸರು ಬಂದಿದೆ. ಮನೆಯ ಬಳಿ ಹಲಸಿನ ಮರ ಇದ್ದ ಕಾರಣ (ಚಕ್ಕೆ ಅಂದರೆ ಹಲಸು) 'ಚಕ್ಕೆರ' ಮನೆಪೆದ ಬಂದಿದೆ. ಬೆಟ್ಟಾಯತ್ ನಾಡಿನಲ್ಲಿ ರಾಜರ ಕಾಲಕ್ಕೆ ಶತ್ರುಗಳಿಗೆ ಅಡ್ಡವಾದವರು ದಾನಕ್ಕೆ ಹೆಸರಾದ್ದರಿಂದ 'ಅಡ್ಡಂಡ' ಎಂಬ ಹೆಸರು ಬಂದಿದೆ. 'ಪುತ್ತರಿ' (ಹುತ್ತರಿ) ಹಬ್ಬದ ಸಂಬಂಧವಾಗಿ 'ಪುತ್ತರಿರ' ಮನೆಪೆದ ಬಂದಿರಬಹುದು.

ಪಟ್ಟೋಲೆ ಪಳಮೆಯ 'ಎವ್ವಮಕ್ಕಡ ದೇಬುವಡ ಪಾಟ್'ನಲ್ಲಿ ಪಾಂಡಿ, ಪರದ, ಕುಡುವ, ಬಡುವ, ಮೋಕಿಯು, ಪರುವ ಇತ್ಯಾದಿ ಮನೆಪೆದಗಳಿವೆ, ಕಾಲಕ್ರಮೇಣ ಪಾಂಡಿರ, ಪರದಂಡ, ಕುಡುವಂಡ, ಬಡುವಂಡ, ಮೋರಿರ, ಪರುವಂಡ ಎಂಬ ಬಹುವಚನರೂಪಿ ಮನೆಪೆದಗಳಾಗಿ ರೂಢಿಗೊಂಡಿವೆ. ಹಾಗೆಯೆ ಅವಿಭಕ್ತ ಕುಟುಂಬದ ಸಂಕೇತವಾಗಿ ಅಜ್ಜಾಮಾಡ, ಆಂಡಾಮಾಡ, ಕೋರಮಾಡ, ಅಣ್ಣಿಮಾಡ, ಅಕ್ಕಣಿಮಾಡ ಎಂದು ಚಾಲ್ತಿಗೊಂಡಿವೆ. 'ಮಾಡ' ಎಂದರೆ ತುಂಬಾ ಜನರು ವಾಸಿಸುವ ದೊಡ್ಡಮನೆ ಎಂಬ ಅರ್ಥವಿದೆ. ಕುಟ್ಟಂಡ, ಕೋದಂಡ, ಕೊರವಂಡ ಎನ್ನುವಲ್ಲಿ, ರಾಜರ ಬಳಿ ಇದ್ದು ಹೆಸರು ಮಾಡಿದ ವ್ಯಕ್ತಿಯ ಹೆಸರಿನ ಮೂಲದ್ದಾಗಿದೆ. ಇಲ್ಲಿ ಅಂಡ (ಅಜೆ=ಅವರ) ಎಂಬ ಬಹುವಚನ ಪ್ರತ್ಯಯ ಸೇರಿ ಗೌರವ ಸೂಚಕ ಮನೆಪೆದಗಳಾಗಿವೆ.

ಮನೆಪೆದಗಳು ಕೊನೆಯ ಅಕ್ಷರ ಅಥವಾ ಶಬ್ದ ಇರ, ವರ, ಡ, ಳ, ಅಂಡ, ಮಾಡ, ಇತ್ಯಾದಿ ಪ್ರತ್ಯಯಗಳು ಕೂಡುವ ಮೂಲಕ ಕಾಣಿಸಿಕೊಳ್ಳುತ್ತವೆ. ಈ ಪ್ರತ್ಯಯಗಳು ಆಯಾ ಮನೆತನಕ್ಕೆ, ಮನೆಪೆದಕ್ಕೆ ಗೌರವ ತರುವ 'ಇಂಥ ಮನೆಯವರು' ಎಂಬರ್ಥ ಸಂಯುಕ್ತವಾಗಿ ಸೇರಿವೆ.

ಮನೆತನ ಅನ್ನುವುದು ಸಾಮಾಜಿಕ ಬಂಧ. ಈ ವಂಶವೃಕ್ಷವು ಹುಟ್ಟಿದ ಮಕ್ಕಳ ಮನೆಪೆದ, ಮನೆತನದ ಸಾಂಸ್ಕೃತಿಕ ಇತಿಹಾಸವನ್ನು ತೆರೆದಿಡುತ್ತದೆ. ವಂಶದ ಅಸ್ತಿತ್ವವನ್ನು ನಿರ್ಮಿಸಿದ ವ್ಯಕ್ತಿ, ಘಟನೆ, ಪರಿಸರ, ಶೌರ್ಯ, ಕಾರಣಗಳನ್ನು ಪ್ರತಿಬಿಂಬಿಸುತ್ತವೆ. ಇವುಗಳಿಗೂ ಆತ್ಮೀಯ ಬಾಂಧವ್ಯದ ಕೃತಜ್ಞತೆಯನ್ನು ತೋರಿಸಲು ಇರುವ ಐತಿಹಾಸಿಕ ಸಂಕೇತವೇ ಮನೆಪೆದವಾಗಿ ಉಳಿದಿವೆ.

ಕೊಡವರ ಉಡುಗೆ-ತೊಡುಗೆ

ಮಾನವನು ಆದಿವಾಸಿಯಾಗಿದ್ದಾಗಲೇ ಉಡುಗೆ ತೊಡುಗೆಗಳೆಡೆಗೆ ಒಲವು ಮೂಡಿದಂತೆ ಕಂಡುಬರುತ್ತದೆ. ಮಾನವನಿಗೂ ಪ್ರಾಣಿಗೂ ಇರುವ ಮುಖ್ಯ ವ್ಯತ್ಯಾಸದಲ್ಲಿ ಅವರಾಡುವ ಭಾಷೆಯಂತೆಯೇ ಉಡುಪು ಪ್ರಮುಖವಾಗಿದೆ. ಮೊದಮೊದಲು ಕೇವಲ ಪ್ರಾಕೃತಿಕ ಅವಶ್ಯಕತೆಯಾಗಿದ್ದ ಉಡುಪು ಕಾಲಕಳೆದಂತೆ ಸಾಮಾಜಿಕ ಬಂಧನವಾಗಿ ಮಾರ್ಪಟ್ಟಿತು. ಉಡುಪು ಶರೀರವನ್ನು ರಕ್ಷಿಸುವ ಜೊತೆಗೆ ಅಲಂಕಾರದ ದ್ಯೋತಕವಾಗಿದೆ.

ಹಿಂದೆ ಆಹಾರಕ್ಕಾಗಿ ಬೇಟೆಯಾಡಿದ ಪ್ರಾಣಿಯ ಚರ್ಮವನ್ನೇ ದೇಹರಕ್ಷಣೆಗಾಗಿ ಧರಿಸುತ್ತಿದ್ದರು. ಅನಂತರ ನಾರಿನ ಬಟ್ಟೆಯನ್ನು ನೇಯ್ಗೆ ಮಾಡಿ ಉಡಲಾರಂಭಿಸಿದರು. ಮಾನವನಲ್ಲಿ ಕಾಲಕ್ರಮೇಣ ಕಲಾದೃಷ್ಟಿ ಬೆಳೆದಂತೆ, ಸಭ್ಯತೆಯ ಕಲ್ಪನೆ ಬೆಳದಂತೆ, ಉಡುಗೆಯಲ್ಲಿ ಮಾರ್ಪಾಟಾಯಿತು. ಕಮಲದ ದಂಟಿನ ನಾರಿನಿಂದ, ಗಿಡದ ತೊಗಟೆಯಿಂದ, ಹಂಸದ ತುಪ್ಪಳದಿಂದ, ಬಟ್ಟೆಯನ್ನು ನೇಯುತ್ತಿದ್ದರು. ಅನೇಕ ದಶಕ ಕಾಲ ಕಾಡು ಜನರು, ಅಂಡಮಾನ್ ದ್ವೀಪದ ವಾಸಿಗಳು ಮೊದಲಿಗೆ ಬಟ್ಟೆಯ ಬದಲು ದೇಹಕ್ಕೆ ಬಣ್ಣವನ್ನು ಲೇಪಿಸಿಕೊಳ್ಳುತ್ತಿದ್ದರು. ಆ ಬಣ್ಣ ಬಿಸಿಲು, ಮಳೆ ಚಳಿಗಾಳಿಯಿಂದ ದೇಹವನ್ನು ರಕ್ಷಿಸುತ್ತದೆಂಬ ಭಾವನೆ ಆಗಿನ ಜನರಿಗಿತ್ತು.

ಭಾರತದಲ್ಲಿ ಹರಪ್ಪ ಸಂಸ್ಕೃತಿಯ ಕಾಲದ ಜನರಿಗೆ ಹತ್ತಿ, ಸೆಣಬು ಮತ್ತು ನಾರುಡುಗೆ ಗೊತ್ತಿತ್ತು. ಪುರುಷರು ಅನೇಕ ವಿಧವಾದ ರುಮಾಲುಗಳನ್ನು ಧರಿಸುತ್ತಿದ್ದರು. ಆಗಿನ ಹೆಂಗಸರು ಭೂಷಣಪ್ರಿಯರಾಗಿದ್ದರು. ವೇದ ಕಾಲದ ಆರ್ಯರು ಹತ್ತಿ, ಉಣ್ಣೆ, ಸೆಣಬು, ನಾರುಬಟ್ಟೆಗಳನ್ನು ನೇಯ್ಗೆ ಮಾಡಿ ಧರಿಸುತಿದ್ದರು. ಅವರು ಧರಿಸುತ್ತಿದ್ದುದು ಮೂರು ವಸ್ತ್ರ, ಮೊದಲು ನಿವೀ (ಬಾಳೆಕಾಯಿಸೀರೆ) ಅದರ ಮೇಲೆ ವಾಮ (ಚಿಕ್ಕದಾದ) ಇವುಗಳ ಮೇಲೆ ಅದಿವಾಮ. ವೇದಗಳ ಕಾಲದ ಯೋಧರು ಚಿನ್ನ ತಾಮ್ರ ಮುಂತಾದ ಲೋಹಗಳ ಕವಚ, ತಲೆಪಾಗು ಧರಿಸುತ್ತಿದ್ದರು. ಆದರೆ ಹೊಲಿದ ಬಟ್ಟೆ ಕಲಾತ್ಮಕವಲ್ಲ. ಆರೋಗ್ಯ ದೃಷ್ಟಿಯಿಂದಲೂ ಇದು ಅನುಚಿತ ಎಂಬುದು ಅವರ ಭಾವನೆ. ಹೊಕ್ಕಳ ಹತ್ತಿರವೂ ಎಡಭಾಗ ಹಿಂಭಾಗಗಳಲ್ಲೂ ಒಂದು ಗಂಟು ಹಾಕಬೇಕು. ನಡುವಿಗೆ ಉಟ್ಟ ಬಟ್ಟೆಯಿಂದ ದೇಹದ ಮೇಲ್ಭಾಗ ಮುಚ್ಚಿಕೊಳ್ಳಬಾರದು. "ಹೆಂಗಸರು ಉದ್ದನೆಯ ಒಂದೇ ಬಟ್ಟೆಯಿಂದ ಭುಜ ಮುಚ್ಚಿ ಕೆಳಗಿನವರೆಗೂ ಜೋಲಾಡುವಂತೆ ಧರಿಸುತ್ತಿದ್ದಾರೆಂದು ಯುವಾನ್‌ಚ್ವಾಂಗ್"೨೩ ಹೇಳಿದನಾದರೂ ಪ್ರಾಚೀನ ಶಿಲ್ಪಗಳಲ್ಲಿ ಈ ರೀತಿ ಕಂಡುಬರುವುದಿಲ್ಲ.

ನಡುವಿನ ಕೆಳಗೆ ಒಂದು ವಸ್ತ್ರ, ಎದೆಕಟ್ಟು ಇವು ಸಾಮಾನ್ಯ ಉಡುಗೆ. ದಕ್ಷಿಣದವರಲ್ಲಿ ಚೋಳಿ(ರವಿಕೆ) ಪ್ರಚಾರದಲ್ಲಿತ್ತು. ಹೊಯ್ಸಳ, ವಿಜಯನಗರದ ಕಾಲದಲ್ಲಿ ಮಹಾಕೂರ್ಪಾಸ್ (ನಿಲುವಂಗಿ) ಕುಲ್ಲಾವಿ, ಕೋಕು(ರುಮಾಲು) ಪಾದಯಾಮ ಅಥವಾ ಪಯ್ಜಾಮ(ಷರಾಯಿ) ಉತ್ತರೀಯ, ನಡುಕಟ್ಟು ಇದು

ರಾಜಸಭೆಯ ಉಡುಪು ಕ್ಷತ್ರಿಯರು. ಸೈನಿಕರು ಚರ್ಮ ಮತ್ತು ಲೋಹನಿರ್ಮಿತ ತನುಸ್ತ್ರಾಣ ಶಿರಸ್ತ್ರಾಣವನ್ನು ಧರಿಸುತ್ತಿದ್ದರು. ಕರ್ನಾಟಕದ ದಕ್ಷಿಣ ಭಾಗದಲ್ಲಿ ಪುರುಷರು ಲುಂಗಿಯುಟ್ಟರೆ ಕರಾವಳಿಯಲ್ಲಿ ಲುಂಗಿ, ಚಡ್ಡಿ ಎರಡನ್ನೂ ಧರಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಧೋತ್ರ ಉಡುತ್ತಾರೆ. ಪ್ರಾಚೀನದಲ್ಲಿ ಮನೆಯ ಹಿರಿಯ ಗಂಡಸರು ಕಸೆ ಅಂಗಿ ಧರಿಸುತ್ತಿದ್ದರು.

ಉತ್ತರ ಹಾಗೂ ದಕ್ಷಿಣ ಕರ್ನಾಟಕಗಳಲ್ಲಿ ನೂಲು ಅಥವಾ ರೇಷ್ಮೆಯ ಪೇಟಧರಿಸುತ್ತಿದ್ದರು. ಕರ್ನಾಟಕಾದ್ಯಂತ ಸ್ತ್ರೀಯರು ಸೀರೆಯುಡುತ್ತಾರೆ. ಕುಪ್ಪಸ, ಜಂಪರುಗಳನ್ನು ಬಹುಭಾಗದ ಜನ ಧರಿಸುತ್ತಾರೆ. ಕೆಲವು ಸಮಾಜದಲ್ಲಿ ಎದೆಯವರೆಗೆ ಸೆರಗನ್ನು ಹೊದೆಯುತ್ತಾರೆ. ಮದುವೆಯ ಸಂದರ್ಭದ ಸೀರೆಗಳಲ್ಲಿ ಧಾರೆಸೀರೆ, ಒಪ್ಪಣಿ ಸೀರೆ, ಅರಿಸಿನ ಪತ್ತಲು, ಆಯಿಸೀರೆ, ತಾಯಿಸೀರೆ ಹೀಗೆ ಹಲವು ತೆರನಾಗಿವೆ. ಸಣ್ಣಮಕ್ಕಳಿಗೆ ಉಡುಗೊರೆಯಾಗಿ ಅಂಗಿ, ಕುಲಾಯಿ, ಕುಂಚಿಗೆ, ಜಬಲಾಗಳನ್ನು, ಲಂಗೋಟಿಗಳನ್ನು ಉಡಿಸುತ್ತಾರೆ. ಇತ್ತೀಚೆಗೆ ಕೊಡವರು ಇತರ ಸಮಾಜದವರಂತೆ ಶರ್ಟ್, ಪ್ಯಾಂಟ್, ಶೂಸ್‌ಗಳನ್ನು ಧರಿಸುತ್ತಾರೆ. ಮನೆಯೊಳಗಿರುವಾಗ ಶರ್ಟ್ ಮತ್ತು ಪ್ಯಾಂಟ್ ಇಲ್ಲವೇ ಪಂಚೆ-ಲುಂಗಿಗಳನ್ನು ತೊಡುವ ಪುರುಷರ ಮನೆಯ ಹೊರಗಿರುವಾಗ ಶರ್ಟ್, ಪ್ಯಾಂಟ್, ಸಾಕ್ಸ್ ಮತ್ತು ಶೂಸ್‌ಗಳನ್ನು ತೊಡುತ್ತಾರೆ. ಲುಂಗಿ-ಪಂಚೆ, ಹವಾಯಿ ಚಪ್ಪಲಿಗಳು ನಿಷಿದ್ಧವೆನ್ನುವಷ್ಟರ ಮಟ್ಟಿಗೆ ' ಹೊರಗಡೆ ಹೋಗುವಾಗ ಧರಿಸುವುದಿಲ್ಲ.

ಕೊಡಗು ಪ್ರದೇಶದ ಶೀತಲ ವಾತಾವರಣದಿಂದ ಮತ್ತು ಆಂಗ್ಲರ ಪ್ರಭಾವದಿಂದ ಉಡುಗೆ ತೊಡುಗೆಗಳು ಭಾರತದ ಇತರ ಜನಾಂಗಗಳಿಗಿಂತ ಭಿನ್ನವಾಗಿರುವಂತೆ ಬದಲಾಗಿರಬಹುದು. ವಿದ್ಯಾವಂತರು, ಶ್ರೀಮಂತರು, ಒಳ್ಳೆಯ ಉದ್ಯೋಗದಲ್ಲಿರುವವರು, ಬಹಳವಾಗಿ ಸೂಟು, ಟೈ ಶೂಸ್‌ಗಳಲ್ಲಿರುವುದನ್ನು ಕಾಣುತ್ತೇವೆ.

ಬಿಳಿಯ ಪಂಚೆಯನ್ನು ಪೂಜಾ-ವ್ರತಗಳಲ್ಲಿ, ಮರಣಕ್ಕೆ ಸಂಬಂಧಿಸಿದ ಆಚರಣೆಗಳಲ್ಲಿ ಉಟ್ಟರೂ ಧೋತ್ರವನ್ನುಡಲು ಅರಿತವರು ಕೊಡವರಲ್ಲಿ ಅತ್ಯಲ್ಪ. ಹಬ್ಬ ಹರಿದಿನಗಳಲ್ಲಿ, ವಿವಾಹಗಳಲ್ಲಿ ಕೊಡವ ಪುರುಷರು ಕುಪ್ಯ, ಚೇಲೆ, ಪೀಚೆಕತ್ತಿ, ರುಮಾಲು (ಮಂಡತುಣಿ) ಗಳಿಂದ ಅಲಂಕೃತರಾದಾಗ ಇವರ ಸೌಂದರ್ಯ ಇಮ್ಮಡಿಯಾಗುತ್ತದೆ. ಹಾಗೆಯೇ ಸ್ತ್ರೀಯರು ಸೀರೆಯನ್ನು ವಿಶಿಷ್ಟ ರೀತಿಯಲ್ಲಿ ಉಟ್ಟು, ತಲೆಗೆ ವಸ್ತ್ರವನ್ನು ಕಟ್ಟಿರುವಾಗ, ಗೌರವರ್ಣದ ಈ ಸುಂದರಿಯರು ಭಾರತದ ಇನ್ನಿತರ ಯಾವುದೇ ಜನಾಂಗಕ್ಕಿಂತ ಭಿನ್ನವಾಗಿ ಆಕರ್ಷಕರಾಗಿ ಕಾಣುವರು.

ಕೊಡಗಿನಲ್ಲಿ ಬಹುತೇಕ ಕೊಡವತಿಯರು ದಿನ ನಿತ್ಯದಲ್ಲೂ ತಮ್ಮದೇಯಾದ ರೀತಿಯಲ್ಲಿ ಸೀರೆಯನ್ನುಟ್ಟರೂ, ಕೊಡಗಿನ ಹೊರಗೆ ಸಾಮಾನ್ಯವಾಗಿ ಇತರರಂತೆ ಸೀರೆಯನ್ನುಡುತ್ತಾರೆ. ವಿಶೇಷ ಸಂದರ್ಭಗಳು ನಡೆದಾಗ ಮಾತ್ರ ತಮ್ಮ ಶೈಲಿಯ ಉಡುಗೆ ತೊಡುಗೆಗಳನ್ನು ಧರಿಸುತ್ತಾರೆ.

ಕೊಡವರ ಉಡುಪುಗಳಲ್ಲಿಯೂ ಸುತ್ತಲಿನ ಜನಜೀವನವು ಬದಲಾವಣೆಗೊಳ್ಳುತ್ತಿರುವಂತೆಯೇ ಮಾರ್ಪಾಡುಗಳುಂಟಾಗಿವೆ. ಅವರ ಉಡುಗೆ-ತೊಡುಗೆಗಳು ಅವರ ಜನಜೀವನದ, ನಾಗರಿಕತೆಯ ಬೆಳವಣಿಗೆಗೆ ಪ್ರತೀಕವಾಗಿವೆ.

ಕೊಡವರ ಉಡುಗೆಗಳನ್ನು ಪುರುಷರ, ಮಹಿಳೆಯರ ಹಾಗೂ ಸಾಂಪ್ರದಾಯಿಕ ಉಡುಗೆಗಳೆಂದು ವಿಂಗಡಿಸಬಹುದು.

ಪುರುಷರ ಉಡುಪುಗಳು

ಕೊಡವ ಪುರುಷರ ಹೊರಗೆ ಉಡುಪುಗಳನ್ನು ಮುಖ್ಯವಾಗಿ ಮೂರು ರೀತಿಯಲ್ಲಿ ವಿಂಗಡಿಸಬಹುದು.

೧. ಕುಪ್ಯ
೨. ಚೇಲೆ
೩. ಮಂಡೆ ತುಣಿ

ಕುಪ್ಯ

ಕುಪ್ಪಸವೆನ್ನುವುದರ ಕೊಡವ ರೂಪಾಂತರ ಕುಪ್ಯ. ಇದನ್ನು ಕುಪ್ಪಿಯವೆಂದೂ ಕರೆಯುತ್ತಾರೆ. ಇದು ಮೊಣಕಾಲಿಗಿಂತ ಸ್ವಲ್ಪ ಕೆಳಗಿನವರೆಗೆ ಬರುವಷ್ಟು ಉದ್ದವಿರುವ ಅರ್ಧ ತೋಳಿನ ನಿಲುವಂಗಿ ಮುಂಭಾಗವು ಪೂರಾ ತೆರೆದಿದ್ದು, ಧರಿಸುವಾಗ ಎಡಭಾಗವನ್ನು ದೇಹದ ಎಡಭಾಗಕ್ಕೆ ತಂದು, ಬಿಗಿಯಾಗಿ ಹಿಡಿದು ಕುಪ್ಯದ ಬಲ ಅಂಚಿಗೆ ಜೋಡಿಸಲಾಗಿರುವ ಲಾಡಿಯಿಂದ ಸೊಂಟವನ್ನು ಒಂದು ಸುತ್ತು ಬಳಸಿ ಬಂಧಿಸಲಾಗುವುದು.

ಹಿಂದೆ ಹತ್ತಿಯ ಬಟ್ಟೆಯಲ್ಲಿ ತಯಾರಿಸಲಾಗುತ್ತಿದ್ದ ಕುಪ್ಯವಿತ್ತು. ಕೊಡಗನ್ನಾಳುತ್ತಿದ್ದ ಲಿಂಗಾಯಿತ ರಾಜರ ಕಾಲದಲ್ಲಿ ಆಸ್ಥಾನದ ಮುಖ್ಯಾಧಿಕಾರಿಗಳು, ದಿವಾನರು, ಸೇನಾಪತಿಗಳು ತುಂಬುತೋಳಿನ ಕೆಂಪು, ನೀಲಿ, ಬೂದಾ, ಇನ್ನಿತರ ಬಣ್ಣದ ಕುಪ್ಯವನ್ನು ಧರಿಸುತ್ತಿದ್ದರು. ಇವುಗಳ ಮೇಲೆ ಬೂಟಾ ಸೀರೆಯ ಮೇಲಿರುವಂತಹ ಬೊಟ್ಟುಗಳಿರುತ್ತಿದ್ದವು. ಇದಕ್ಕೆ 'ಕುರಿಕುಪ್ಯ' (ಬೊಟ್ಟು) ಅಥವಾ 'ಪಟ್ಟ್‌ಕುಪ್ಯ'ವೆನ್ನುವರು. ಇವು ರೇಷ್ಮೆಯದ್ದಾಗಿರುತ್ತಿದ್ದವು. ಇಂದು ಸಾಮಾನ್ಯವಾಗಿ ಎಲ್ಲರೂ ಅರ್ಧತೋಳಿನ ಕಪ್ಪು ಬಣ್ಣದ ಕುಪ್ಯವನ್ನು ತೊಡುತ್ತಾರೆ. ಕಪ್ಪು ಕುಪ್ಯ ಅದರೊಳಗಿನ ಬಿಳಿಯ ಅಂಗಿ, ಕೆಂಪು ಚೇಲೆ, ಬಿಳಿಯ ಮಂಡೆತುಣಿ ಈಗ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

ಕುಪ್ಯವನ್ನು ಬಿಳಿಯ ಬಣ್ಣದ ಹತ್ತಿಯ ದಪ್ಪನೆಯ 'ಗ್ಯಾಬರ್ಡೀನ್' (Gabardine) ಬಟ್ಟೆಯಿಂದಲೂ ತಯಾರಿಸುತ್ತಾರೆ. ಇದು ತುಂಬುತೋಳಿ ನದ್ದಾಗಿದ್ದು, ತೋಳಿನ ಕೊನೆ ಜುಬ್ಬದಂತಿರುತ್ತದೆ. ಮದುವಣಿಗನು, ವಯೋವೃದ್ಧರೂ ಕುಟುಂಬದ, ಊರಿನ ಹಾಗೂ ದೇವಸ್ಥಾನದ ಮುಖ್ಯಸ್ಥರೂ ಈ ಕುಪ್ಯವನ್ನು ಧರಿಸುತ್ತಾರೆ. ಪುರುಷ ಶವ ಶೃಂಗಾರದಲ್ಲೂ ಬಿಳಿಯ ಕುಪ್ಯವನ್ನೇ ತೊಡಿಸುತ್ತಾರೆ. ೨೦ ನೇ ಶತಮಾನದ ಆದಿಯವರೆಗೂ ಮದುವಣಿಗನು ಕೆಂಪು ರೇಷ್ಮೆಯ ಕುಪ್ಯವನ್ನೇ ಧರಿಸುತ್ತಿದ್ದನು. ಇದೂ ತುಂಬುತೋಳಿನದ್ದಾಗಿರುತ್ತಿತ್ತು. ಕುಪ್ಯವೆಂಬ ನಿಲುವಂಗಿ ಕೊಡವರ ಹಿರಿತನದ ಸಂಕೇತವಾಗಿಯೂ, ಯಜಮಾನಿಕೆಯ ಸಂಕೇತವಾಗಿಯೂ

ಗೌರವಾನ್ವಿತ ಉಡುಗೆಯಾಗಿಯೂ ಪರಿಗಣಿಸಲ್ಪಟ್ಟಿದ್ದು, ಕೊಡವರ ಸಂಪ್ರದಾಯದ ಸಂಕೇತವಾಗಿ ಕೊಡವ ಪರಂಪರೆಯ ಪ್ರತೀಕ ವಾದಂತಿದೆ.

ಚೇಲೆ

ಸುಮಾರು ಎರಡು ಗೇಣು ಅಗಲದ, ಎರಡೂವರೆ ಮೂರು ಮೀಟರ್ ಉದ್ದದ ರೇಷ್ಮೆಯ ಬಟ್ಟೆಯಿದು. ಕೆಂಪು, ಬೂದು, ನೀಲಿ, ಮರೂನ್, ಹಳದಿ ಇತ್ಯಾದಿ ಬಣ್ಣಗಳಿದ್ದರೂ ಕೆಂಪು ಬಣ್ಣದ್ದು ಹೆಚ್ಚು ಪ್ರಚಲಿತವಾಗಿದೆ. ಇದರ ಎರಡೂ ಕೊನೆಗಳಲ್ಲಿ ಸುಮಾರು ಎರಡು ಗೇಣುಗಳ ಉದ್ದಕ್ಕೆ ಚಿನ್ನದ ಬಣ್ಣದ ಜರತಾರಿಯಿರುತ್ತದೆ. ಚೇಲೆಯ ಅಂಚಿನಲ್ಲಿ ಸೀರೆಯ ಸೆರಗಿನಂಚಿನಂತೆ ಕುಚ್ಚುಗಳನ್ನು ಕಟ್ಟಿರುತ್ತಾರೆ. ಅಲ್ಲದೆ ಚೇಲೆಯ ಎರಡು ಬದಿಗಳುದ್ದಕ್ಕೂ ಸುಮಾರು ನಾಲ್ಕು ಬೆರಳಗಲಕ್ಕೆ ಚಿನ್ನದ ಬಣ್ಣದ ಜರತಾರಿಯಿರುತ್ತದೆ.

ಚೇಲೆಯು ಕುಪ್ಯದ ಮೇಲೆ ಸೊಂಟಕ್ಕೆ ಭದ್ರವಾಗಿ ಸುತ್ತಲ್ಪಡುವ ಪಟ್ಟಿ. ಇದನ್ನು ಸೊಂಟಕ್ಕೆ ಕಟ್ಟುವ ಮೊದಲು ಉದ್ದಕ್ಕೂ ಎರಡು ಬಾರಿ ಸಮವಾಗಿ, ಅಗಲ ಸುಮಾರು ಅರ್ಧಗೇಣು (೧೦ ಸೆ.ಮಿ) ಆಗುವಂತೆ ಮಡಚಬೇಕು. ಆ ಮೇಲೆ ಸಣ್ಣಗೆ ಬಿಗಿಯಾಗಿ ಸುರುಳಿ ಸುತ್ತಿಕೊಳ್ಳಬೇಕು. ಅನಂತರ ಚೇಲೆಯ ಕೊನೆಯ ಸುಮಾರು ಎರಡು ಗೇಣುದ್ದಕ್ಕೆ ತೊಡೆಯ ಮೇಲ್ಗಡೆ ನೇತಾಡುವಂತೆ ಸೊಂಟದ ಎಡಭಾಗದಲ್ಲಿಟ್ಟು ಹಿಂಬದಿಯಿಂದ ಆರಂಭಿಸಿ, ಬಲದಿಂದ ಎಡಕ್ಕೆ ಸುತ್ತಿ, ಇನ್ನೊಂದು ಕೊನೆಯು ಎಡತೊಡೆಯ ಮೇಲ್ಗಡೆ ನೇತಾಡುವಂತೆ ವಿಶೇಷ ರೀತಿಯಲ್ಲಿ ಬಂಧಿಸುತ್ತಾರೆ. ಚೇಲೆಯು ಸೊಂಟಕ್ಕೆ ಅನುಕೂಲವಾದಷ್ಟು ಬಿಗಿಯಾಗಿ ಸುತ್ತಿ, ಕಟ್ಟುವುದರಿಂದ, ಸಾಹಸ ಚಟುವಟಿಕೆಗಳಲ್ಲಿ ದೇಹಕ್ಕೆ ಉತ್ತಮ ದೃಢತೆಯನ್ನು ಕೊಡುತ್ತದೆ.

ಮಂಡೆತುಣಿ

ಕೊಡವ ಭಾಷೆಯಲ್ಲಿ 'ಮಂಡೆ' ಎಂದರೆ ತಲೆ, 'ತುಣಿ' ಎಂದರೆ ಬಟ್ಟೆ, ಇದು ಸುಮಾರು ಅಡಿ ಅಡಿ (೨೪೫ ೨೪೫ ಸೆಂಟಿಮಿಟರ್) ಚೌಕದ ಹತ್ತಿಯ ವಾಯಿಲ್‌ಬಟ್ಟೆ. ಇದರ ಎದುರು-ಬದುರಿನ ಎರಡು ಅಂಚುಗಳುದ್ದಕ್ಕೂ ಸುಮಾರು ೨ ಸೆಂ.ಮಿ ಅಗಲದ ಚಿನ್ನದ ಲೇಪವಿರುವ ಬೆಳ್ಳಿಯ ಸರಿಗೆಯ ಕಲಾಪತ್ತಿದೆ. ಇದನ್ನು ಹೆಚ್ಚು ಕಡಿಮೆ ಮೈಸೂರು ಪೇಟಾದ ಮಾದರಿಯಲ್ಲೇ ತಲೆಗೆ ಸುತ್ತಲಾಗುವುದು. ಮದುಮಗನ ತಲೆಗೆ ಕಟ್ಟುವ ಮಂಡೆ ತುಣಿಯನ್ನು ಪಾನಿ ಮಂಡೆ ತುಣಿ ಎನ್ನುವರು. ಇದರ ಹಿಂಭಾಗದ ಕೆಳ ಅಂಚಿನಲ್ಲಿ ಒಳಗಡೆ ಕಾಗದವನ್ನಿಟ್ಟು, ಆ ಭಾಗ ಗಡುಸಾಗಿರುವಂತೆ ಮಾಡಿ, ಮಂಡೆತುಣಿಗೆ ಒಂದು ವಿಶೇಷ ರೂಪಬರುವಂತೆ ಮಾಡಲಾಗುವುದು.

ಈ ಬಟ್ಟೆಯನ್ನು ತಲೆಗೆ ಕಟ್ಟಿಸಿಕೊಳ್ಳುವುದಕ್ಕೆ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಲ್ಲದೆ, ಕಟ್ಟಲು ಅರಿತಿರುವವರು ಇಂದು ಅತಿ ಕಡಿಮೆ. ಹಿಂದೆ ರಾಜರ ಕಾಲದಲ್ಲಿ ಮತ್ತು ಆಂಗ್ಲರ ಸಮಯದಲ್ಲಿ ಬೊಟ್ಟುಗಳಿರುವ ಕೆಂಪು ಇಲ್ಲವೇ ಕಡುಗೆಂಪು ಬಣ್ಣದ ಮಂಡೆ ತುಣಿಯನ್ನು ಕಟ್ಟಿಕೊಳ್ಳುತ್ತಿದ್ದರು.

೨೦ನೆಯ ಶತಮಾನದ ಆರನೇ ದಶಕದವರೆಗೂ ಬರಿತಲೆಯಲ್ಲಿ ಕೊಡವರು ಓಡಾಡುತ್ತಿರಲಿಲ್ಲ. ಆಂಗ್ಲರ ಪ್ರಭಾವದ ವಿವಿಧ ಬಗೆಯ ಹ್ಯಾಟುಗಳಿದ್ದವು (ಟೋಪಿ). ಗಾಂಧೀಯುಗದ ಖಾದಿ ಟೋಪಿಗಳಿದ್ದರೂ ಪರಂಪರಾಗತವಾಗಿ ಕೊಡಗಿನವರು 'ವಸ್ತ್ರ' ಕಟ್ಟಿಕೊಳ್ಳುತ್ತಿದ್ದರು. ಈ ವಸ್ತ್ರಕ್ಕೆ 'ವೈತ್ರವೆಂಬ' ಅಪಭ್ರಂಶಿತ' ಹೆಸರೂ ಇತ್ತು. ಇದು ಸುಮಾರು ಒಂದು ಮೀಟರ್ ಅಳತೆಯ ಹತ್ತಿಯ ಬಟ್ಟೆ. ಇದನ್ನು 'ಚೌಕ'ವೆಂದು ಕರೆಯುತ್ತಿದ್ದರು. ಈ ಬಟ್ಟೆಯಲ್ಲಿ ಕಪ್ಪು ಚೌಕುಳಿಗಳಿರುತ್ತಿದ್ದವು. ವಸ್ತ್ರದ ಎರಡೂ ಮೂಲೆಗಳನ್ನು ಜೋಡಿಸಿ, ಕರ್ಣರೇಖೆ (diagoual)ಯ ಭಾಗವು ಹಣೆಯ ಮೇಲ್ಭಾಗಕ್ಕೆ ಬರುವಂತೆ ಇಟ್ಟು, ಎಡಬಲಕ್ಕೆ ಬಂದ ಮೂಲೆಗಳನ್ನು ತಲೆಯ ಹಿಂಭಾಗದಲ್ಲಿ ಅಡ್ಡ ಹಾಯಿಸಿ, ತಲೆಯ ಪಕ್ಕದಲ್ಲಿ ವಸ್ತ್ರಕ್ಕೆ ಸಿಕ್ಕಿಸುತ್ತಿದ್ದರು. ಒಂದರ ಮೇಲೊಂದಾಗಿ ಜೋಡಿಸಿದ ಮೂಲೆಗಳುಳ್ಳ ವಸ್ತ್ರದ ಭಾಗವು ಬೆನ್ನಮೇಲೆ ಬಿದ್ದುಕೊಳ್ಳುತ್ತಿತ್ತು.

ಈ ವಸ್ತ್ರವು ಬಿಳಿಯ ಬಟ್ಟೆಯ ಮೇಲೆ ಕಪ್ಪು ಚೌಕುಳಿಗಳಿಂದ ಕೂಡಿದ್ದರೆ "ಬೊಳ್ತ ಚೆಕ್ ವೈತ್ರ' ವೆಂದೂ ಕೆಂಪು ಬಣ್ಣದ ಬಟ್ಟೆಯ ನಸುಗೆಂಪಿನ ಚೌಕರಳಿಯಿರುವ 'ಚೋಂದ ಚೆಕ್ ವೈತ್ರ' ವೆಂದೂ ಕರೆಯುತ್ತಾರೆ. ಮದುವೆಯ ಹಿಂದಿನ ಸಂಜೆ ಮದುಮಗನಿಗೆ ಈ ಚೋಂದ (ಕೆಂಪು) ಚೆಕ್ ವೈತ್ರವನ್ನು ತಲೆಗೆ ಕಟ್ಟುವರು.

ಸ್ತ್ರೀಯರ ಉಡುಪುಗಳು

ರವಿಕೆ : ಮೊದಲು ಕಳಕುಪ್ಪಸವಿದ್ದು ಅನಂತರ ತುಂಬು ತೋಳಿನ ರವಿಕೆಯನ್ನು, ಅರೆತೋಳಿನ ರವಿಕೆಯನ್ನು ತೊಡುತ್ತಾರೆ. ಕೊಡವರ ವಿವಾಹದಲ್ಲಿ ಮದುವಣಗಿತ್ತಿ ತುಂಬು ತೋಳಿನ ರವಿಕೆಯನ್ನು ಧರಿಸಲೇಬೇಕು. ತುಂಬುತೋಳಿನ ರವಿಕೆಯನ್ನು ವಯಸ್ಸಾದ ಸ್ತ್ರೀಯರು ಹಾಗೂ ತೋಟ ಕೆಲಸ ಮಾಡುವ ಹೆಂಗಸರು ತೊಡುತ್ತಾರೆ. ಕಾಫಿ ತೋಟದಲ್ಲಿ ಕೆಲಸ ನಿರ್ವಹಿಸುವಾಗ ಕ್ರಿಮಿಕೀಟಗಳು ಕಡಿಯುವುದನ್ನು ತಡೆಯಲು, ಬಿಸಿಲು ಚಳಿಯು ಕೈಗೆ ತಾಗದಂತಿರಲು ತುಂಬು ತೋಳಿನ ರವಿಕೆಯನ್ನು ಧರಿಸುತ್ತಾರೆ.

ಸೀರೆ: "ಕೊಡವ ಭಾಷೆಯಲ್ಲಿ ಸೀರೆಗೆ 'ಪೊಡೆಯ' ಎನ್ನುವರು".[೨೪] ಕೊಡವತಿಯರ ಸಾಂಪ್ರದಾಯಿಕ ಶೈಲಿಯಲ್ಲಿ ಸೀರೆಯನ್ನುಡಲು ಎರಡೂ ಕಡೆ ಅಂಚುಗಳಿರುವ ಸೀರೆ ಪ್ರಶಸ್ತವಾದುದು.

ಸಾಂಪ್ರದಾಯಿಕ ರೀತಿಯಲ್ಲಿ ಸೀರೆಯನ್ನು ಉಡಬೇಕಾದರೆ, ಮೊದಲಿಗೆ ಸೀರೆಯ ಒಳಗಿನ ಕೊನೆಯನ್ನು ದೇಹದ ಹಿಂಭಾಗದಲ್ಲಿ ಸಿಕ್ಕಿಸಿ ಸೀರೆಯನ್ನು ಬಲಬದಿಗಾಗಿ ಮುಂಭಾಗಕ್ಕೆ ಬಳಸಿ ನಿರಿಗೆ ಹಿಡಿಯಬೇಕು. ಅನುಕೂಲಕ್ಕೆ ತಕ್ಕಷ್ಟು ನಿರಿಗೆಯಾದ ಮೇಲೆ, ಅದನ್ನು ಎಡಬದಿಗಾಗಿ ದೇಹದ ಹಿಂಭಾಗಕ್ಕೆ ತಂದು ಓರಣವಾಗಿ ಸಿಕ್ಕಿಸಬೇಕು. ಸೀರೆಯ ಉಳಿದ ಭಾಗವನ್ನು ಬಲಕಂಕುಳಿನ ಕೆಳಗಿನಿಂದ ಮುಂಭಾಗಕ್ಕೆ ತಂದು, ಅಲ್ಲಿಂದ ಎದೆಯ ಮೇಲ್ಭಾಗದಿಂದ ಹಾದು ಎಡಕಂಕಳಿನ ಕೆಳಗಿನಿಂದ ಸಾಗಿ, ಬೆನ್ನ ಅಡ್ಡಹಾಯಿಸಿ, ಬಲಭುಜದ ಮೇಲಿಂದ ಮತ್ತೆ

ಮುಂಭಾಗಕ್ಕೆ ತಂದು ಅಲ್ಲಿ ಎದೆಯ ಅಡ್ಡಕ್ಕೆ ಹಾದು ಹೋಗುವ ಸೀರೆಯ ಮೇಲ್ಭಾಗಕ್ಕೆ ಪಿನ್ನಿನಿಂದ ಇಲ್ಲವೇ ಬ್ರೋಚ್ (brooche)ನಿಂದ ಬಂಧಿಸಬೇಕು. ಹಿಂದಿನ ಕಾಲದಲ್ಲಿ ಗಂಟು ಕಟ್ಟಿ ಬಂಧಿಸುತ್ತಿದ್ದರು. ಈ ಕಟ್ಟಿಗೆ ಕೊಡವ ಭಾಷೆಯಲ್ಲಿ 'ಮೊಲೆಕಟ್ಟ್' ಎಂದು ಹೆಸರು.

ಕೊಡಗಿನ ಕೊಡವತಿಯರು ದಿನನಿತ್ಯದಲ್ಲಿ ಸಾಂಪ್ರದಾಯಿಕವಾದ ಹಿಂದೆ ನೆರಿಗೆಯಿರುವ 'ಕೊಡವ ಪೊಡೆಯ' ವನ್ನೇ ಉಡುವರು. ಆದರೆ ತರುಣಿಯರು ಇತರರಂತೆ ಮುಂದೆ ನೆರಿಗೆಯಿಟ್ಟು ಸೀರೆಯನ್ನು ಉಡುವುದಿದೆ. ಪ್ರತಿದಿನ ಯಾವ ಬಣ್ಣದ ನಮೂನೆಯ ಸೀರೆಯನ್ನು ಬೇಕಾದರೂ ಉಡಬಹುದು. ಆದರೆ ಬಿಳಿಯ ಬಣ್ಣದ ಸೀರೆಯನ್ನು ಉಡಲೇಬಾರದೆಂಬ ನಿಯಮವಿದೆ. ವಯೋವೃದ್ಧರು ನಿತ್ಯದ ಉಡುಗೆಯಲ್ಲಿ ತಿಳಿಬಣ್ಣದ ಸೀರೆಯನ್ನುಡುತ್ತಾರೆ. ಮದುವಣಿಗಿತ್ತಿಯು ಕೆಂಪುಬಣ್ಣದ ರೇಷ್ಮೆಯ 'ಬೊಟ್ಟ್ ಪೊಡೆಯ' (ಬೂಟಾಸೀರೆ) ಯನ್ನುಡಬೇಕು. ಇದಕ್ಕೆ 'ಬೊಟ್ಟ್ ಪೊಡೆಯ'ವೆಂದೂ ಹೇಳುವರು. ದುಂಡುಕತ್ತಿನ, ತುಂಬು ತೋಳಿನ ಕೆಂಪು ರೇಷ್ಮೆಯ ರವಿಕೆಯನ್ನು ತೊಡಬೇಕು. ತಲೆಯ ಮೇಲೆ ಕೆಂಪು ರಂಗಿನ ರೇಷ್ಮೆಯ (ಮಕಮಲ್ಲಿನ) ಇಲ್ಲವೇ ನೈಲಾನಿನ ಮುಸುಕು ವಸ್ತ್ರವನ್ನು ಧರಿಸುವಳು.

ವಿಧವೆಯರು ಪೂರ್ಣವಾಗಿ ಬೆಳ್ಳಗಿರುವ ಸೀರೆ, ತುಂಬುತೋಳಿನ ರವಿಕೆ, ಒಳಲಂಗ, ತಲೆವಸ್ತ್ರ ಮತ್ತು ಬಿಳಿಯ ಕರವಸ್ತ್ರವನ್ನೇ ಉಪಯೋಗಿಸಬೇಕೆಂಬ ನಿಯಮವಿದೆ. ಆದರೆ ಈಚೆಗೆ, ಮುಖ್ಯವಾಗಿ ಯುವ ವಿಧವೆಯರು ತಿಳಿ ಬಣ್ಣದ, ತಿಳಿ ವಿನ್ಯಾಸದ ಸೀರೆಯನ್ನುಡುವುದು ಅನುಕಂಪಗಳಿಸುವ ದೃಷ್ಟಿಯಿಂದ ಮಾನ್ಯವಾಗಿದೆ.

ತಲೆವಸ್ತ್ರ : ಭಾರತೀಯ ಪದ್ಧತಿಗನುಸಾರವಾಗಿ ಸ್ತ್ರೀಯಾಗಲೀ ಪುರುಷನಾಗಲೀ ಬರಿದಲೆಯಲ್ಲಿ ಹೊಸ್ತಿಲು ದಾಟಿ ಹೊರಹೋಗಬಾರದು. ಗಂಡಸರು ರುಮಾಲು, ಮುಂಡಾಸು, ಕೊಟ್ಟಪಾಳೆ(ಮುಟ್ಟಾಳೆ) ಇತ್ಯಾದಿಗಳನ್ನು ಧರಿಸಿದರೆ, ಸ್ತ್ರೀಯರು ಸೆರಗು, ಮುಖಪರದೆಯನ್ನು ತಲೆಯ ಮೇಲಿಂದ ತೊಟ್ಟುಕೊಳ್ಳಬೇಕು.ಹಾಗೆಯೇ "ಕೊಡವ ಸ್ತ್ರೀಯರು ತಲೆಯ ಮೇಲೆ ವಸ್ತ್ರ ಕಟ್ಟಿಕೊಳ್ಳುತ್ತಾರೆ. ಇದನ್ನು ಕೊಡವ ಭಾಷೆಯಲ್ಲಿ ವಸ್ತ್ರವೆಂದೇ ಕರೆಯುತ್ತಾರೆ. ಇದಕ್ಕೆ 'ವೈತ್ರ' ವೆಂಬ ಹೆಸರೂ ಇದೆ".೨೫ ಇದು ವಸ್ತ್ರದ ಇದಕ್ಕೆ ಅಪಭ್ರಂಶಿತ ರೂಪ. ಈ ವಸ್ತ್ರವು ಸುಮಾರು ಒಂದು ಮೀಟರ್ ಚೌಕದ ರೇಷ್ಮೆಯ ಜಾರ್ಜೆಟ್ ಬಟ್ಟೆ. ಇದರ ಒಂದು ಅಂಚಿನ ಮಧ್ಯದಲ್ಲಿ ಸುಮಾರು ಬೆರಳಗಲದ ಚಿನ್ನದ ಬಣ್ಣದ ಜರಿಯ ವಿನ್ಯಾಸವಿರುತ್ತದೆ. ಅಲ್ಲದೆ ನಾಲ್ಕು ಅಂಚಿನುದ್ದಕ್ಕೂ ಕಿರಿದಾದ ಜರತಾರಿ ಇರುತ್ತದೆ. ಮೈಯಲ್ಲೂ ಕಲಾ ಪತ್ತಿನ ಬೊಟ್ಟುಗಳಿರುತ್ತವೆ.

ಮೂರು ಬೆರಳಗಲದ ಜರತಾರಿಯು ಮುಂದಲೆಯ ಮೇಲೆ ಇರುವಂತೆ ವಸ್ತ್ರವನ್ನು ತಲೆಯ ಮೇಲೆ ಹೊದ್ದು, ಕಿವಿಗಳನ್ನು ಅರ್ಧಕ್ಕೆ ಮುಚ್ಚುವಂತೆ ಹಿಂದುಗಡೆಗೆ ತಂದು, ಅಂಚಿಗೆ ಜೋಡಿಸಲಾಗಿರುವ ಚಿಕ್ಕ ಲಾಡಿಗಳಿಂದ ವಸ್ತ್ರವನ್ನು ಜಡೆಗೆ ಕಟ್ಟಲಾಗುವುದು. ಮದುಮಗಳ ಮುಖ್ಯ ಸಂಗಾತಿಯಾದ 'ಬೋಜಕಾರ್ತಿ'ಯು ಕೆಂಪು ವಸ್ತ್ರವನ್ನೇ ತಲೆಗೆ ಕಟ್ಟಬೇಕು. ಸಾಮಾನ್ಯವಾಗಿ

ಕೆಂಪು ಬಣ್ಣದ ವಸ್ತ್ರವೇ ಇದ್ದರೂ ಸೀರೆಯ ಬಣ್ಣಕ್ಕೆ ಹೊಂದಿಕೊಳ್ಳುವಂತೆ ಹಲವು ಬಣ್ಣದ ವಸ್ತ್ರವನ್ನು ಕಟ್ಟಿಕೊಳ್ಳುತ್ತಾರೆ.

ಹಿಂದಿನ ಕಾಲದಲ್ಲಿ ಮದುವೆಯಾದ ಒಂದು ವರ್ಷದವರೆಗೆ ಸ್ತ್ರೀಯು ತಲೆಗೆ ವಸ್ತ್ರವನ್ನು ಕಟ್ಟಿಕೊಂಡೇ ಇರಬೇಕಿತ್ತು. ಒಂದು ವರ್ಷದವರೆಗೆ ಅವಳು "ಪುತ್ತಂಗಾರ್ತಿ" ಎಂದೆನಿಸಿಕೊಳ್ಳುತ್ತಿದ್ದಳು, "ಪುದಿಯ ಅಂಗಕಾರ್ತಿ" ಎಂದರೆ 'ಹಸಿಮೈ' ಎಂದರ್ಥ. ೨೦ನೇ ಶತಮಾನದ ನಡುಭಾಗದವರೆಗೂ ಸ್ತ್ರೀಯು ಬರಿದಲೆಯಲ್ಲಿರಬಾರದು, ಮುಖ್ಯವಾಗಿ ಅಡುಗೆ ಕೋಣೆಯಲ್ಲಿ ಹಾಗೂ ಊಟದ ಕೋಣೆಯಲ್ಲಿ ತಲೆಗೆ ವಸ್ತ್ರವನ್ನು ಕಟ್ಟಿಕೊಂಡಿರಬೇಕೆಂಬ ನೇಮವಿತ್ತು. ಈ ವಸ್ತ್ರವನ್ನು ದಿನನಿತ್ಯ ಕಟ್ಟಿಕೊಳ್ಳದಿದ್ದರೂ 'ಚೆಕ್ ವಸ್ತ್ರ'ವೆಂದು ಕರೆಸಿಕೊಳ್ಳುತ್ತಿದ್ದ ಕಪ್ಪು ಚೌಕಳಿಗಳಿರುವ ಬಿಳಿಯ ಬಟ್ಟೆಯನ್ನು ಕಟ್ಟಿಕೊಳ್ಳುತ್ತಿದ್ದರು. ಈ ಅಂಶವು ಕೊಡವರ ಶುಚಿತ್ವವನ್ನು ಸೂಚಿಸುತ್ತದೆ.

ರೇಷ್ಮೆಯ ವಸ್ತ್ರವನ್ನು ಕಟ್ಟುವಂತೆಯೇ ಈ ವಸ್ತ್ರದ ಒಂದು ಅಂಚಿನ ನಡುಭಾಗವು ಮುಂದಲೆಯ ಮೇಲೆ ಬರುವಂತೆ ತಲೆಯ ಮೇಲಿಟ್ಟು, ಆ ಅಂಚಿನ ಎರಡೂ ಕೊನೆಗಳಿಂದ ವಸ್ತ್ರವನ್ನು ಜಡೆಗೆ ಕಟ್ಟಲಾಗುತ್ತಿತ್ತು. ಭಾರತೀಯರನ್ನಷ್ಟೇ ಅಲ್ಲದೆ ವಿದೇಶಿಯರನ್ನು ಕೊಡವರ ಉಡುಗೆ ಮೋಹಗೊಳಿಸಿದೆ. ಯುವತಿಯರು ಸಾಂಪ್ರದಾಯಿಕ ಸಂದರ್ಭಗಳಲ್ಲಿ ಕೊಡವ ಶೈಲಿಯ ಸೀರೆಯಲ್ಲಿ ಕಾಣಿಸಿಕೊಳ್ಳಲು ಇಚ್ಛಿಸುತ್ತಾರೆ.

ವಿಶೇಷ ಸಂದರ್ಭಗಳಲ್ಲಿಯ ಉಡುಪುಗಳು

ತುಲಾ ಸಂಕ್ರಮಣ (ಕಾವೇರಿ ಸಂಕ್ರಮಣ) : ಸ್ನಾನದ ಬಳಿಕ ಮನೆಯ ಹಿರಿಯ ಮುತ್ತೈದೆ ಹೆಂಗಸು ಸಾಂಪ್ರದಾಯಿಕ ರೀತಿಯಲ್ಲಿ ಉಡುಪುಗಳನ್ನುಟ್ಟು 'ಕನ್ನಿಪೂಜೆ'ಗೆ ಸಿದ್ಧಪಡಿಸುತ್ತಾಳೆ. 'ಕನ್ನಿಪೂಜೆ' ಯೆಂದರೆ ಕಾವೇರಿಮಾತೆಯ ಪೂಜೆ. ಈ ಸಂದರ್ಭದಲ್ಲಿ ಸ್ತ್ರೀಯರೆಲ್ಲರೂ ಸಾಂಪ್ರದಾಯಿಕ ಉಡುಗೆಯನ್ನೇ ಧರಿಸಬೇಕಾಗುತ್ತದೆ.

ಹುತ್ತರಿ ಹಬ್ಬದಲ್ಲಿ ಕದಿರು ತೆಗೆಯಲು ಹೊರಟಾಗ ಕೊಡವ ಸ್ತ್ರೀಯರು ಪರಂಪರಾಗತ ಶೈಲಿಯಲ್ಲಿ ಉಡುಗೆಗಳನ್ನುಡುತ್ತಾರೆ. ಕೋಲಾಟ ಮುಂತಾದ ಮನರಂಜನಾ ಪ್ರದರ್ಶನಗಳಿಗೆ, 'ಮಂದ್' ಗೆ ಹೋಗುವಾಗಲೂ ತಮಗಿಷ್ಟವಾದ ಬಣ್ಣದ ಸೀರೆಯನ್ನು ಕೊಡವರ ಶೈಲಿಯಲ್ಲೇ ಉಟ್ಟು, ತಲೆಗೆ ವಸ್ತ್ರ ಕಟ್ಟಿಕೊಂಡುಹೋಗಬೇಕಾಗುತ್ತದೆ. ಕೊಡವರಲ್ಲಿ ಇತ್ತೀಚೆಗೆ ಎಲ್ಲಾ ಸಂಪ್ರದಾಯಗಳು ಖಿಡ್ಡಾಯವಾಗುತ್ತಿವೆ.

ಮರಣದ ಸಂದರ್ಭದಲ್ಲಿನ ಉಡುಪುಗಳು

ಶವದ ಉಡುಪು: ಹಿಂದಿನ ಕಾಲದಲ್ಲಿ ಮೊಣಕಾಲವರೆಗೆ ಬರುವ ಕಳಕುಪ್ಪವನ್ನು ತೊಡಿಸುತಿದ್ದರು. ಈಗ ಒಳಲಂಗವನ್ನು ತುಂಬು ತೋಳಿನ ರವಿಕೆಯನ್ನು ತೊಡಿಸುವರು. ರವಿಕೆಯ ಹಿಂಭಾಗವು ಮುಂದೆ ಬರುವಂತೆ ತೊಡಿಸಬೇಕು. ಇವುಗಳ ಮೇಲೆ ಕೊಡವ ಶೈಲಿಯಲ್ಲಿ ಹಿಂದಕ್ಕೆ ನೆರಿಗೆ ಸಿಕ್ಕಿಸಿ ಸೀರೆಯುಡಿಸುವರು, ತಲೆಗೆ ವಸ್ತ್ರಕಟ್ಟುವರು. ಮೃತ ಸ್ತ್ರೀಯು, ಮುತ್ತೈದೆಯಾಗಿದ್ದರೆ ಬಣ್ಣದ ಸೀರೆ, ರವಿಕೆ, ವಸ್ತ್ರಗಳನ್ನುಡಿಸುತ್ತಾರೆ.

ವಿಧವೆಯಾದರೆ ಬಿಳಿಯ ಬಟ್ಟೆಗಳನ್ನು ಮಾತ್ರ ತೊಡಿಸುತ್ತಾರೆ. ಮೃತಳು ವಿವಾಹಿತಳಲ್ಲದಿದ್ದರೆ ಅವಳಿಗೆ ದಿನನಿತ್ಯ ಉಡುಪನ್ನೆ ಉಡಿಸುತ್ತಾರೆ.

ಮೃತಳ ಸಂಬಂಧಿಗಳ ಉಡುಪುಗಳು

ಮೃತರು ಪುರುಷನೇ ಆಗಲಿ ಸ್ತ್ರೀಯೇ ಆಗಲಿ ಸಂಬಂಧಿಕರು ಉಡುವ ಉಡುಪುಗಳು ಒಂದೇ ತೆರನಾಗಿವೆ. ಸಂಬಂಧಿಯು ಸ್ತ್ರೀಯಾಗಿದ್ದರೆ ಬಿಳಿ ಸೀರೆ ಬಿಳಿಯರವಿಕೆಯನ್ನೂ ತೊಡಬೇಕಾಗುವುದು. ವಿಧವೆಯಾಗಿದ್ದರೆ ಸಂಪೂರ್ಣ ಬಿಳಿಯ ಬಟ್ಟೆಗಳನ್ನೇ ತೊಡಬೇಕಾಗುವುದು ಸುಮಂಗಲಿಯಾಗಿದ್ದರೆ ಬಣ್ಣದ ಅಂಚಿರುವ ಬಿಳಿಯ ಸೀರೆಯನ್ನುಡಬೇಕಾಗುತ್ತದೆ. ಹಿಂದಿನ ಕಾಲದಲ್ಲಿ ತೀರಾ ಹತ್ತಿರದ ಸಂಬಂಧಿ ಸ್ತ್ರೀಯು ರವಿಕೆಯನ್ನು ತೊಡುತ್ತಿರಲಿಲ್ಲ. ಬದಲಾಗಿ ತೋಳಿಲ್ಲದ ಕಳಕುಪ್ಪವನ್ನು ಧರಿಸುತ್ತಿದ್ದರು. ಈಗ ರವಿಕೆಯನ್ನು ಧರಿಸುತ್ತಾರಾದರೂ ಭುಜದ ಮೇಲೆ "ನಿಪ್ಪ್‌ತುಣಿ"ಯನ್ನು ಕಟ್ಟಲಾಗುತ್ತದೆ.

ಕೊಡಗಿನಲ್ಲಿ ಕೊಡವರಲ್ಲದೆ ಇವರ ಪದ್ಧತಿಯನ್ನು ಅನುಸರಿಸುವವರೆಲ್ಲರೂ ಕೊಡವ ಶೈಲಿಯಲ್ಲಿ ಸೀರೆಯನ್ನುಡುತ್ತಾರೆ. ಅರೆಗೌಡ ಸಮಾಜದ ಸ್ತ್ರೀಯರ ನಿರಿಗೆಯನ್ನು ಮುಂದಕ್ಕೆ ಸಿಕ್ಕಿಸಿದರೂ ಭುಜದ ಮೇಲೆ ಸೆರಗನ್ನು ತಂದು ಕಟ್ಟುತ್ತಾರೆ. ಈಗ ವಯೋವೃದ್ಧರು ಮಾತ್ರ ಉಡುತ್ತಾರೆ.

ಉಡುಪಿನ ನಂಬಿಕೆ ಪದ್ಧತಿ ಮತ್ತು ನಿಷೇಧಗಳು

ಹಿಂದೆ ಮದುವಣಿಗನು ಬಿಳಿಯ ಅಥವಾ ಕೆಂಪು ಕುಪ್ಯ ತೊಡುತ್ತಿದ್ದನು. ನಂತರದಲ್ಲಿ ಬಿಳಿಯ ಕುಪ್ಯವನ್ನು ಮಾತ್ರ ಧರಿಸುವುದು ಪದ್ಧತಿಯಾಯಿತು. ಕಪ್ಪು ಬಣ್ಣದ ಕುಪ್ಯ ಧರಿಸುವುದು ರೂಢಿಯಾಯಿತು. ತನಗೆ ವಯಸ್ಸಾದಾಗ ತನ್ನ ಕಪ್ಪು ಬಣ್ಣದ ಕುಪ್ಯವನ್ನು ಮಗನಿಗಿತ್ತು, ತನ್ನ ಮರಣದವರೆಗೂ ಸಾಂಪ್ರದಾಯಿಕ ಸಂದರ್ಭಗಳಲ್ಲಿ ಬಿಳಿ ಕುಪ್ಯವನ್ನೇ ತೊಡುವುದು ರೂಢಿಯಾಯಿತು. ಇತ್ತೀಚೆಗೆ ಕೆಲವು ಗ್ರಾಮಗಳಲ್ಲಿ ಬಿಳಿಕುಪ್ಯವನ್ನು ಮೈಮೇಲೆ ದೇವರ ಆವೇಶ ಬರಿಸುವ 'ತಿರೂಳಕಾರ' ಎಂದು ಕರೆಸಿಕೊಳ್ಳುವವನು ಮತ್ತು ಕುಟುಂಬದ ಯಜಮಾನನಾದ 'ಕೊರವುಕಾರ'ನೂ ಊರ ಮುಖ್ಯಸ್ಥನಾದ 'ಊರ್‌ತಕ್ಕ' ನಾಡಿನ ಮುಖ್ಯಸ್ಥನಾದ 'ನಾಡ್ ತಕ್ಕ' ಹಾಗೂ ವಯೋವೃದ್ಧರು ಧರಿಸುತ್ತಾರೆ.

ತಿರೊಳಕಾರರು ಸಭೆ ಸಮಾರಂಭಗಳಿಗೆ ಬಿಳಿಯ ಕುಪ್ಯ ಧರಿಸಿ ಹೊರಟರೆ ಮತ್ತು ಶಾಖಾಹಾರಿಯಾದ ಈತನ ಬಳಿ ಮಾಂಸಹಾರಿಗಳು ಊಟಕ್ಕೆ ಕೂರುತ್ತಿರಲಿಲ್ಲ. ಈ ಬಿಳಿಯ ಕುಪ್ಯವೇ ಸಸ್ಯಹಾರದ ಸಂಕೇತವಾಗಿರುತಿತ್ತು. ಸ್ತ್ರೀಯರು ಅಥವಾ ಪುರುಷರು ಯಾವುದೇ ತೊಡುಗೆಯನ್ನು ಅಂದರೆ ಅಂಗಿ, ರವಿಕೆ, ಕುಕ್ಯ ಇತ್ಯಾದಿಗಳ ಬೆನ್ನಬದಿಯನ್ನು ಮುಂಬದಿಗೆ ಬರುವಂತೆ ತೊಟ್ಟುಕೊಳ್ಳಬಾರದು. ಇದು ಶವಕ್ಕೆ ಮಾತ್ರ ತೊಡಿಸುವ ಕ್ರಮವಾಗಿರುತ್ತದೆ. ಶಾಲು ಅಥವಾ ಟವಲನ್ನಾಗಲೀ ಭುಜಗಳ ಮೇಲೆ, ಬೆನ್ನು ಮುಚ್ಚುವಂತೆ ಇಟ್ಟುಕೊಳ್ಳಬಾರದು. ಇದು ನಿಪ್ಪ್‌ತುಣಿಯನ್ನು ಉಟ್ಟಂತಾಗುವುದು. ಕೊಡವರಲ್ಲಿ ಕೆಲವು ನಂಬಿಕೆಯಂತೆ ತೊಟ್ಟುಕೊಂಡಿರುವ ಬಟ್ಟೆಯನ್ನು ಹೊಲಿಯಬಾರದು.

ಅಂತೆಯೇ ತೊಟ್ಟ ಬಟ್ಟೆ ಆಕಸ್ಮಿಕವಾಗಿ ಸುಟ್ಟರೆ, ಅದನ್ನು ಕಳಚಿ, ದನಗಳಿಂದ ತುಳಿಸಿ, ಒಗೆದು, ಶುಭ್ರಗೊಳಿಸಿ ತೊಟ್ಟುಕೊಳ್ಳಬಹುದೆಂಬ ಪದ್ಧತಿಯಿದೆ.

ಪುರಾಣಗಳಲ್ಲಿ ಕೊಡವರು ಸೀರೆ ಉಡುವ ಪದ್ಧತಿ

"ಸ್ಕಂದ ಪುರಾಣದಲ್ಲಿ ಕಾವೇರಿಯು ತನ್ನ ಗಂಡನಿಂದ ಮುನಿದು ಹೊಳೆಯಾಗಿ ಹರಿದು ಹೋದ ದಿನ ತುಲಾ ಸಂಕ್ರಮಣವಾಗಿತ್ತು. ಇದಕ್ಕಿಂತ ಎರಡು ದಿನಗಳಿಗೆ ಮುನ್ನ ಆ ಪ್ರದೇಶದ ರಾಜನಾಗಿದ್ದ ಚಂದ್ರವಂಶದ ದೇವಕಾಂತನಿಗೆ ಕಾವೇರಿಯ ಅವತಾರದಲ್ಲಿರುವ ಪಾರ್ವತಿಯು ಕನಸಿನಲ್ಲಿ ಕಾಣಿಸಿಕೊಂಡು 'ತುಲಾ ಸಂಕ್ರಮಣ'ದ ದಿನದಂದು 'ಬಲಮುರಿ' ಎಂಬ ಸ್ಥಳದಲ್ಲಿ ತನ್ನ ಆಗಮನಕ್ಕಾಗಿ ರಾಜನ ಸಮಸ್ತ ವಂಶಜರೂ ಕಾಯುತ್ತಿರುವಂತೆ ಅಪ್ಪಣೆಯಿತ್ತಳು. ಅದೇ ರೀತಿ ತುಲಾ ಸಂಕ್ರಮಣದಂದು ನದಿಯಾಗಿ ಹರಿದು ಬಂದ ಕಾವೇರಿಯಲ್ಲಿ ದೇವಕಾಂತನ ವಂಶಸ್ಥ ಸ್ತ್ರೀಯರು ಸ್ನಾನ ಮಾಡಿದಾಗ ಸೀರೆಯ ನೆರಿಗೆಗಳು ನದಿಯ ಸೆಳೆತದಿಂದ ಮೈಯ ಹಿಂಭಾಗಕ್ಕೆ ಸರಿದವು. ಅದನ್ನು ದೇವಿಯ ಆಶೀರ್ವಾದವೆಂದು ಪರಿಗಣಿಸಿ, ಅಂದಿನಿಂದ ಅವರು ಸೀರೆಯ ನೆರಿಗೆಗಳನ್ನು ದೇಹದ ಹಿಂಭಾಗದಲ್ಲಿ ಸಿಕ್ಕಿಸಿ ಉಡತೊಡಗಿದರು.[೨೬]"

ಸೀರೆಯ ನೆರಿಗೆಯನ್ನು ಹಿಂಬದಿಗೆ ಸಿಕ್ಕಿಸಿ, ಸೆರಗನ್ನು ಭುಜದ ಮೇಲಿಂದ ಹಾಯಿಸಿ, ಬಲ ಎದೆಯ ಮೇಲ್ಗಡೆ ಗಂಟು ಹಾಕುವ ಈ ವಿನ್ಯಾಸದ ಸೀರೆ ಕಾಡು ಮೇಡುಗಳಲ್ಲಿ ನಡೆಯಲು, ಗಿರಿಕಂದರಗಳನ್ನು ಹತ್ತಿಳಿಯಲು ಬಹಳ ಅನುಕೂಲವಾದದ್ದು. ಆದ್ದರಿಂದ ಮಲೆನಾಡ ಸ್ತ್ರೀಯರಿಗೆ ಈ ರೀತಿ ಸೀರೆಯುಡುವುದನ್ನು ರೂಪುಗೊಳಿಸಿರಬಹುದು. ಒಟ್ಟಿನಲ್ಲಿ ಕಾವೇರಿ ನೀರಿನ ಸೆಳೆತ ಭಕ್ತಿ ಪ್ರೀತಿ ಮತ್ತು ಪೂಜ್ಯ ಭಾವನೆ ಇವೆಲ್ಲರ ಪ್ರತೀಕವಾಗಿ ನೀರಿನಲ್ಲಿ ಮುಳುಗಿದ ಹೆಂಗಸರ ಸೀರೆ ಹಿಂದಕ್ಕೆ ಸರಿದುದನ್ನೇ ನೆಪವಾಗಿಟ್ಟುಕೊಂಡು ಅಂದಿನಿಂದ ಇಂದಿನವರೆಗೆ ಕೊಡವ ಸ್ತ್ರೀಯರು ಅದೇ ರೀತಿ ಸೀರೆಯನ್ನು ಉಡುತ್ತಿರುವುದು ಪರಂಪರೆಯ ಪ್ರತೀಕವಾಗಿ ಉಳಿದಿದೆ.

ಸಾಹಿತ್ಯದಲ್ಲಿ ಕೊಡವ ಉಡುಪುಗಳು

೧) 'ಮಂಗಲ ಪಾಟ್' (ಮದುವೆ ಹಾಡು)

ಪೊಂಗುಳಿ ಕುಳಿಚಿತ್, ಮಾಜುತ್ತಿ ಮಡಿಪಾಂದ್'

ನೇರ ಪೋಲೆ ಕುಪ್ಪಾಯ, ನೆತ್ತ ಪೋಲೆ ತೊಪ್ಪಾಯ ಪಾನಿ ಮಂಡೆ ಕಟ್ಟಾಯಿ...[೨೭]

೨. ಜನಪದ ಗೀತೆಯಲ್ಲಿ: ಪುಣ್ಯಾರ್ಚಿತ ಸ್ನಾನವನ್ನು ಮಾಡಿ, ಹಳೆ ಬಟ್ಟೆ ಕಳಚಿ, ಮಡಿವಸ್ತ್ರಗಳಿಂದ ಸೂರ್ಯನಂತಹ (ಕೆಂಬಣ್ಣದ) ಕುಪ್ಯ, ನೆತ್ತರಿನಂತಹ (ಕೆಂಪು ಬಣ್ಣದ) ಪಾನಿ ಮಂಡೆ ತುಣಿಯನ್ನು ಶಿರಸ್ತ್ರಾಣವಾಗಿ ಧರಿಸಿ.. ಎಂದು ಮದುವಣಿಗನ ಉಡುಪಿನ ವರ್ಣನೆಯಿದೆ.

ಮಂಗಲಕಾರ್ತಿರ ಬೋಜೊಮ್ಮ ನೋಟ್,
ಕಣ್ ಮಯಕಂದ ಬೊಟ್ಟ್ ಪೂಡೆಯ,

ಅದಂಗೊತ್ತೋರ್ ಕೈಕಳಕುಪ್ಸ;
ಕಂಡಿತೂ ಕಾಣತ ಕೆಂದೊಲ್ಲಿ ಮುಸ್‌ಕ್.

(ಕನ್ನಡದ ಅನುವಾದ)

ಮದುವಣಗಿತ್ತಿಯ ಸೌಂದರ್ಯವನ್ನೊಮ್ಮೆ ನೋಡು
ಕಣ್ಣು ಕೋರೈಸುವ ಬೊಟ್ಟಿನ ಸೀರೆ;
ಅದಕ್ಕೊಪ್ಪುವ ಒಂದು ಕೈಕಳ ಕುಪ್ಪಸ;
ಕಂಡೂ ಕಾಣದಂತಹ
ಕೆಂಪುವಲ್ಲಿ ಮುಸುಕು.

ಎಂದು ಮದುವಣಗಿತ್ತಿಯ ಉಡುಪನ್ನು ಬಣ್ಣಿಸಲಾಗಿದೆ.

ಮದುವೆಯ ಹಿಂದಿನ ಸಂಜೆಯ ಊರುಕೊಡುವ (ಚಪ್ಪರ) ಸಮಾರಂಭದಲ್ಲಿ ನಾಲ್ವರು ಕೊಡವರು ಧ್ವನಿಯೆತ್ತಿ ಹಾಡುವ ಮಂಗಲ ಪಾಟ್ (ಮದುವೆ ಹಾಡು) ಈ ರೀತಿಯಿದೆ.

"ಕುಟ್ಟುವತ್ ಚಿಂಗಾರ
ಇಟ್ಟಣಿವಕ್ಕಾಳಿಲ್ಲೆ;
ಪೊಟ್ಟಿಲುಳ್ಳ ಪಟ್ಟೋಳಿ
ಬೀಜುಡ್ ಪಕಾಳಲ್ಲೆ".

ಸಂದೋಕದಲ್ಲಿರುವ ಒಡವೆಗಳನ್ನು ತೊಟ್ಟು ಶೃಂಗರಿಸಿಕೊಳ್ಳುವವರಿಲ್ಲ ; ಪೆಟ್ಟಿಗೆಯಲ್ಲಿರುವ ಪಟ್ಟೋಳಿ(ಬೊಟ್ಟಿನ) ಸೀರೆಯನ್ನುಡುವವರಿಲ್ಲ. ಮದುವೆಗೆ ಸಿದ್ಧನಾಗಿ ನಿಂತ ಯುವಕನು ತನಗೊಪ್ಪುವ ಹೆಣ್ಣನ್ನು ಹುಡುಕಿ ಬರಲು ಯೋಚಿಸುವಾಗ ಹೇಳುವ ಮಾತುಗಳು.

ಕೊಡಗಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಕೀರ್ತಿವೆತ್ತ ಪಂಜೆ ಮಂಗೇಶರಾಯರು 'ಹುತ್ತರಿ ಹಾಡು'ನಲ್ಲಿ ದಟ್ಟಿ (ಚೇಲೆ) ಕುಪ್ಪಸ (ಕುಪ್ಸ)ದ ವೈಶಿಷ್ಟ್ಯವು ಒಮ್ಮತ, ಒಗ್ಗಟ್ಟು, ಒಂದೇ ಮನಸ್ಸನ್ನು ಪ್ರತಿಬಿಂಬಿಸುವುದರಲ್ಲಿದೆ ಎಂದು ಹೇಳಿದ್ದಾರೆ.

ಒಮ್ಮತವು ಒಗ್ಗಟ್ಟು ಒಂದೇ ಮನವು ಎಲ್ಲಿದೆ ಹೇಳಿರಿ?
ಸುಮ್ಮನಿತ್ತರೆ ದಟ್ಟಿ ಕುಪ್ಪಸ?..
ಎಂದು ಪ್ರಶ್ನಿಸಿದ್ದಾರೆ.

ಉಡುಪಿಗೆ ಸಂಬಂಧಿಸಿದ ಗಾದೆಗಳು

೧. ಒಡೆಯ ಕನಾಂದೂ ಪೊಡೆಯ ಎಳಲಾಂದು ಎಣ್ಣ್‌ನ ಪೊಣ್ಣಿಲ್ಲೆ
ಗಂಡನು ಭಾರವೆಂದೂ ಸೀರೆಯು ಅತಿ ಉದ್ದವೆಂದೂ ಹೇಳಿದ ಹೆಣ್ಣಿಲ್ಲ

೨. ಕೊಂಬ ತೊಪ್ಪಿಯ ಕೋಂಬರೆಕಾರ; ಚೇಯ ಚೇಲೆ ಚೇಲೆಕಾರ ಚಿಂಗಾರಕಾರ; ಅಜ್ಜ ಕುಪ್ಪಿಯಕಾರ ಒಕ್ಕಾಮೆಕಾರ.

ಬಿನ್ನಾಣದ ಟೊಪ್ಪಿಯವನು ಕೋಣೆಯಲ್ಲಿರುವವನು (ಆಲಸಿ), ಭರ್ಜರಿ ಜರಿಯ ಚೇಲೆಯವನು ಶೃಂಗಾರ ಪ್ರಿಯನು ಹಳೆಯ ಕುಪ್ಸದವನು ಒಕ್ಕಲು ಕಟ್ಟುವನು (ವಂಶೋದ್ಧಾರಕನು)

ಒಗಟುಗಳು

೧. ಎಂಗಡ ಒರ್ ಅಕ್ಕಂಡ ಪೊಡೆಯತ್‌ರ ನೆರಿ ಲೆಕ್ಕ ಮಾಡುವರ್ ಕಯ್ಯುಲೆ (ಕುಮ್ಮು)

ನಮ್ಮ ಒಬ್ಬಳು ಅಕ್ಕನ ಸೀರೆಯ ನಿರಿಗೆ ಎಣಿಸಲಾಗದಷ್ಟು (ಅಣಬೆ)

೨. ಎಂಗಡೋರ್ ಅಜ್ಜಂಡ ಮಂಡೆತುಣಿ ಮಡಕುವಕ್ ಕಯ್ಯುಲೆ (ಆವಿಜ)

ನಮ್ಮ ಒಬ್ಬ ಅಜ್ಜನ ತಲೆವಸ್ತ್ರ ಮಡಿಸಲಾಗದು (ಆಕಾಶ)

ಸಾಂಪ್ರದಾಯಿಕ ಉಡುಗೆಗಳು: ಮದುವಣಿಗ, ಅವನ ಒಡನಾಡಿಯಾದ 'ಬೋಜಕಾರ'. ಕುಟುಂಬದ ಮುಖ್ಯಸ್ಥ, ಊರಿನ, ನಾಡಿನ, ದೇವಸ್ಥಾನದ ಮುಖ್ಯಸ್ಥರು ಆಯಾಯ ವಿಶೇಷ ಸಂದರ್ಭಗಳಲ್ಲಿ ಸಾಂಪ್ರದಾಯಿಕ ಉಡುಪುಗಳನ್ನು ಧರಿಸುವರು. ಇಲ್ಲಿ ಕೆಲವು ಪ್ರಮುಖ ಉಡುಗೆಗಳನ್ನು ಚರ್ಚಿಸಿ ವಿಶ್ಲೇಷಿಸಲಾಗಿದೆ.

ಅಂಗವಸ್ತ್ರ

ಕೆಂಪು ಬಣ್ಣದ ರೇಷ್ಮೆಯ ಒಂದು ಮೀಟರ್ ಚೌಕದ ಚೌಕುಳಿಯಿರುವ ವಸ್ತ್ರ. ಮದುವಣಿಗ, ಭೋಜಕಾರ, 'ಕೊರವುಕಾರ'ನೆಂದು ಕರೆಸಿಕೊಳ್ಳುವ ಆ ಕುಟುಂಬದ ಮುಖ್ಯಸ್ಥ – ಇವರು ಮದುವೆಯಂದು ಅಂಗವಸ್ತ್ರವನ್ನು ತೊಡುವರು. ಎದುರು – ಬದುರಿನ ಮೂಲೆಗಳನ್ನು ಜೊತೆಗೂಡಿಸಿ ತ್ರಿಕೋಣಾಕಾರದಲ್ಲಿ ಮಡಿಚಲ್ಪಟ್ಟ ಈ ಬಟ್ಟೆಯನ್ನು ಎಡಹೆಗಲ ಮೇಲೆ ಇಳಿ ಬಿಟ್ಟು, ಕೆಳಗಿಳಿದ ಎರಡೂ ಮೂಲೆಗಳನ್ನು ಹಿಂದೆ – ಮುಂದೆ ಚೇಲೆಗೆ ಸಿಕ್ಕಿಸಲಾಗುವುದು.

ಮುಸುಕು : ಮದುವೆಯ ದಿನ ಮದುವಣಿಗನು ಉಡುಗೆ ತೊಡುಗೆಗಳನ್ನು ಧರಿಸಿ, ಮಂಡೆ ತುಣಿಯ ಮೇಲೆ ಸುಮಾರು ಒಂದು ಮೀಟರ್ ಚೌಕದ ಮುಖಮಲ್ಲಿನಂತಹ ತೆಳ್ಳಗಿನ ಕೆಂಪು ಬಟ್ಟೆಯ ಮುಸುಕನ್ನು ಇಳಿಬಿಟ್ಟುಕೊಳ್ಳುವನು. ಹಿಂದಿನ ಕಾಲದಲ್ಲಿ ಈ ವಸ್ತ್ರವು ಮುಖ ಮುಚ್ಚುವಂತೆ ಇರುತ್ತಿತ್ತು. ಈಗ ಪೋಟೋ ವಿಡಿಯೋ, ಇತ್ಯಾದಿಗಳ ಚಿತ್ರೀಕರಣ ಮಾಡುವುದರಿಂದ ಮುಖ ಮುಚ್ಚದಂತೆ ಪಿನ್ನಿನಿಂದ ಈ ವಸ್ತ್ರವನ್ನು ಮಂಡೆ ತುಣಿಗೆ ಬಂಧಿಸಲಾಗುವುದು. ಮದುವೆಯ ಎಲ್ಲಾ ಪದ್ಧತಿಗಳು ಮುಗಿದು, ಮದುಮಗನು ತನ್ನ ನವವಧುವಿನೊಡನೆ ಹೆಣ್ಣಿನ ಮನೆಯಿಂದ ಹೊರಗೆ ಬರುವಾಗ, ವಧುವಿನ ತಾಯಿಯು ಅವನ ಮುಸುಕನ್ನು ತೆಗೆದು ಮಡಚಿ ಅವನ ಭುಜದ ಮೇಲಿಡುತ್ತಾಳೆ. ಹುಲಿಯನ್ನು ಕೊಂದ ಬಳಿಕ ನಡೆಸುವ 'ನರಿಮಂಗಲ', (ಹುಲಿಮದುವೆ) ಮದುವಣಿಗನಂತೆಯೇ ಅಲಂಕೃತನಾದವನು ಮುಸುಕನ್ನು ಧರಿಸಿದರೂ ಅದು ಅವನ ಮುಖವನ್ನು ಮುಚ್ಚುವಂತೆ ಇರುವುದಿಲ್ಲ. ಇದು ಮದುಮಗನ ಶೌರ್ಯದ ಸಂಕೇತವಾಗಿರುತ್ತದೆ ಎನ್ನಬಹುದು.

ಕರವಸ್ತ್ರ : ಮದುವಣಿಗನು ಸುಮಾರು ಒಂದು ಗೇಣು ಚೌಕದ, ಕೆಂಪು ಬಣ್ಣದ ಚೌಕಳಿಯ ಕರವಸ್ತ್ರವನ್ನು ಉಪಯೊಗಿಸುತ್ತಾನೆ. ಸಾಮಾನ್ಯವಾಗಿ ಇದನ್ನು ಅವನು ತೊಟ್ಟಿರುವ ಪೀಚೆ ಕತ್ತಿಯ ಹಿಡಿಕೆಗೆ ಕಟ್ಟಲಾಗಿರುತ್ತದೆ.

ದೈನಂದಿನ ಉಡುಪುಗಳು (ಬದಲಾದ ಉಡುಗೆ)

ಇಂದು ಸಾಂಪ್ರದಾಯಿಕ ಸಂದರ್ಭಗಳಲ್ಲಿ ಧರಿಸಲ್ಪಡುವ ಉಡುಪುಗಳನ್ನು ಹಿಂದೆ ದೈನಂದಿನ ಉಡುಪುಗಳಾಗಿ ತೊಡುತ್ತಿದ್ದರು. ಕ್ಷತ್ರಿಯರಾದ ಕೊಡವರು, ರಾಜರ ಸೈನ್ಯದಲ್ಲಿ ಯೋಧರಾಗಿದ್ದರಲ್ಲದೇ, ನಿತ್ಯ ಕಸುಬಾದ ವ್ಯವಸಾಯದ ಬಳಿಕ ಬೇಟೆಯಾಡುತ್ತಿದ್ದರು. ಆ ಸಂದರ್ಭಗಳಲ್ಲಿ ಪೀಚೆಕತ್ತಿ, ಒಡಿಕತ್ತಿ, ಕೋವಿ ಖಡ್ಗಗಳು ಉಡುಪುಗಳ ಉಪ ಅಂಗಗಳಾಗಿರುತ್ತಿದ್ದವು.

ಬ್ರಿಟಿಷರ ಆಗಮನದ ಬಳಿಕ ಕೊಡವರು ಆಂಗ್ಲರ ಪ್ರಭಾವಕ್ಕೊಳಗಾಗಿ ಕುಪ್ಯ ಚೇಲೆಗಳನ್ನು ಬಿಟ್ಟು ಅಂಗಿ-ಷರಾಯಿಗಳನ್ನು, ತಲೆಗೆ ಹ್ಯಾಟು, ಶರ್ಟ್, ಚಡ್ಡಿಗಳನ್ನು ತೊಡುತ್ತಿದ್ದರು. ಮೊಣಕಾಲಿನವರೆಗಿನ ಬೂಟುಗಳನ್ನು ತೊಡುತಿದ್ದರು. ತೋಟಗಳಲ್ಲಿ ಓಡಾಡಲು, ಕುದುರೆಸವಾರಿ ಮಾಡಲು ಅನುಕರಣೀಯವಾದ ಈ ದಿರಿಸುಗಳು ತುಂಬ ಅನುಕೂಲಕರವಾಗಿದ್ದು, ಕೊಡಗಿನ ಸಮಶೀತೋಷ್ಣ ಹವಾಮಾನಕ್ಕೂ ಸಹಕಾರಿಯಾಗುವಂತಹದ್ದಾಗಿರುತ್ತವೆ.

ವಿಶೇಷ ಸಂದರ್ಭಗಳಲ್ಲಿನ ಉಡುಗೆಗಳು : ಕೊಡವರಲ್ಲಿ ವಿಶೇಷ ಸಂದರ್ಭಗಳೆಂದರೆ ಹಬ್ಬ ಹರಿದಿನಗಳು, ಪೂಜೆ, ಮತ್ತು ಮರಣ. ಹಿಂದಿನ ಕಾಲದಲ್ಲಿ ಕುಪ್ಯ, ಚೇಲೆ, ಮಂಡೆ ತುಣಿಗಳನ್ನು ದಿನವೂ ಉಡುವ ವಸ್ತುಗಳಾದ್ದರಿಂದ ಪೂಜೆಯಲ್ಲೂ ಇದೇ ರೀತಿ ಅಲಂಕೃತರಾಗಿರುತಿದ್ದರು. ಇಂದು ಮನೆಗಳಲ್ಲಿ ನಡೆಸುವ ಪೂಜೆಗಳಲ್ಲಿ ಸಾಮಾನ್ಯ ಉಡುಪುಗಳನ್ನು ಮಾತ್ರ ಧರಿಸುತ್ತಾರೆ.

ಕೆಲವು ನಿಶ್ಚಿತ ದೇವಸ್ಥಾನಗಳಲ್ಲಿ ಸಾಂಪ್ರದಾಯಿಕ ಉಡುಪಿನಲ್ಲಿರಬೇಕಾದ ನಿಯಮವಿರುವಾಗ, ಸಾದಾ ಉಡುಪಿನಲ್ಲಿರುವವರನ್ನು ಪ್ರಕಾರದೊಳಗೆ ಬರದಂತೆ ನಿಷೇಧಿಸಲಾಗುವುದು. ಕೊಡವರ ಮುಖ್ಯ ಹಬ್ಬಗಳಾದ ಕೈಲ್ ಪೊಳ್ದ್, ತುಲಾ ಸಂಕ್ರಮಣ (ಕಾವೇರಿ) ಮತ್ತು ಹುತ್ತರಿ ಹಬ್ಬದಲ್ಲಿ ಸಾಂಪ್ರದಾಯಿಕ ಉಡುಪುಗಳನ್ನು ಧರಿಸಬೇಕಾಗುತ್ತದೆ.

ಕೈಲ್ ಪೊಳ್ದ್ (ಕೈಲ್ ಮುಹೂರ್ತ)

ಈ ಹಬ್ಬವನ್ನು ಕೈಲ್ ಮುಹೂರ್ತವೆಂದು ಕರೆಯುತ್ತಾರೆ. ಕೈದುಗಳ ಹಬ್ಬ, ಆಯುಧ ಪೂಜೆಯ ಹಬ್ಬವೆಂದೂ ಕರೆಯಬಹುದು. ಈ ಹಬ್ಬದಲ್ಲಿ ಮನೆಯಲ್ಲಿರುವ ಸಕಲ ಆಯುಧಗಳನ್ನು ಶುಚಿಗೊಳಿಸಿ, ಹೂ-ಗಂಧಗಳಿಂದ ಶೃಂಗರಿಸಿ ಪೂಜಿಸುತ್ತಾರೆ. ಸೌರಮಾನ ಪಂಚಾಂಗದ ಸಿಂಹಮಾಸದ ಹದಿನೆಂಟನೇ ದಿನದಂದು ವ್ಯವಸಾಯದ ಪ್ರಯುಕ್ತ ತೆಗೆದಿರಿಸಿದ್ದ ಆಯುಧಗಳನ್ನು ಅನುಗೊಳಿಸಿ ಪೂಜಿಸುತ್ತಾರೆ. ಪೂಜೆಯನ್ನು ನಡೆಸುವವನು ಕೊರವುಕಾರ. (ಮುಖ್ಯಸ್ಥ) ಇವನು ಸ್ನಾನ ಮಾಡಿ, ಕುಪ್ಯ ಚೇಲೆಗಳನ್ನು ಮಾತ್ರ ಧರಿಸಿರುತ್ತಾನೆಯೇ ಹೊರತು ಈತನು ಮಂಡೆತುಣಿಯನ್ನು ಧರಿಸಿರುವುದಿಲ್ಲ. ಪೀಚೆಕತ್ತಿಯನ್ನು ಪೂಜಾ ಸ್ಥಾನದಲ್ಲಿರಿಸುತ್ತಾನೆ. ಊಟದ ಅನಂತರ ಅಪರಾಹ್ನದಲ್ಲಿ ಗಂಡಸರೆಲ್ಲರೂ ಊರದೇವಸ್ಥಾನದಲ್ಲಿ ಸೇರಿ, ನಿಶ್ಚಿತ ಪ್ರದೇಶದಲ್ಲಿ ಎತ್ತರದ ಮರವೊಂದಕ್ಕೆ ಕಟ್ಟಲಾದ

ತೆಂಗಿನ ಕಾಯಿಗಳಿಗೆ ಗುಂಡು ಒಡೆಯುವರು. ಇದಕ್ಕೆ 'ರೀಚ್ ಬೊಡಿ' (ರೀಡು = ಗುರಿ; ಬೊಡಿ = ಗುಂಡು) ಎನ್ನುತ್ತಾರೆ. ಹೀಗೆ ಗುಂಡು ಒಡೆಯುವಾಗ ಸಂಪ್ರದಾಯದ ಕುಪ್ಯ ಚೇಲೆಯನ್ನು ಧರಿಸಲೇಬೇಕೆಂಬ ನಿಯಮವಿದೆ.

ತುಲಾ ಸಂಕ್ರಮಣ

ತುಲಾಸಂಕ್ರಮಣದಂದು, ತಲಕಾವೇರಿಯಲ್ಲಿ ತೀರ್ಥೋದ್ಭವವಾಗುವ ಹಬ್ಬದ ಮುಹೂರ್ತದಂದು ತಲಕಾವೇರಿಯಲ್ಲಿರುವ ಕೊಡವರು ಕುಪ್ಯ ಚೇಲೆಯಲ್ಲಿರುವರು. ಈ ಹಬ್ಬವನ್ನು ಪ್ರತಿ ಕೊಡವರ ಮನೆಯಲ್ಲೂ ಆಚರಿಸುತ್ತಾರೆ. ಇಲ್ಲಿ ಕುಟುಂಬದ ಹಿರಿಯ ಮುತ್ತೈದೆಗೆ ಪ್ರಾಧಾನ್ಯ.

ಹುತ್ತರಿ: 'ಪುದಿಯ ಅರಿ' ಅಂದರೆ 'ಹೊಸ' 'ಅರಿ' ಎಂದರೆ ಹೊಸ ಅಕ್ಕಿ. ಇದನ್ನು ಮನೆಗೆ ತರುವ ಈ ಹಬ್ಬವನ್ನು 'ಪುತ್ತರಿ' (ಹುತ್ತರಿ) ಎನ್ನುತ್ತಾರೆ. ಸುಗ್ಗಿಯ ಕಾಲದಲ್ಲಿ ಬತ್ತದ ಗದ್ದೆಯಿಂದ ಹೊಸ ಕದಿರನ್ನು ಕುಯ್ದು ಮನೆಗೆ ತರುವ ಸಂದರ್ಭದಲ್ಲಿ, ಕದಿರನ್ನು ಕುಯ್ಯುವವನು ಉಡುಗೆಂದಾದ ಕುಪ್ಯಚೇಲೆಯನ್ನು ತೊಡಬೇಕೆಂಬ ಪದ್ಧತಿಯಿದೆ.

ಕದಿರನ್ನು ಮನೆಗೆ ತಂದ ಮರುದಿನಗಳಲ್ಲಿ ಊರಿನ ಮತ್ತು ನಾಡಿನ (ಹಲವು ಊರುಗಳು ಸೇರಿ ಒಂದು ನಾಡಾಗುತ್ತದೆ) 'ಮಂದ್' (ಬಯಲು)ಗಳಲ್ಲಿ, ಕೋಲಾಟ, ಪರಿಯಕಳಿ ಮುಂತಾದ ಸಾಂಪ್ರದಾಯಿಕ ನೃತ್ಯವನ್ನು ಪ್ರದರ್ಶಿಸುವರು. ಈ ನೃತ್ಯದಲ್ಲಿ ಭಾಗವಹಿಸುವವರು ಕುಪ್ಯ, ಚೇಲೆ, ಮಂಡೆತುಣಿ, ಪೀಚೆಕತ್ತಿಯನ್ನು ಧರಿಸಿರಲೇಬೇಕು ಎಂಬ ನಿಯಮವಿದೆ. ಇದೇ ಸಂದರ್ಭದಲ್ಲಿ ಊರಿನ, ನಾಡಿನ ದೇವಸ್ಥಾನಗಳ 'ತಕ್ಕ' (ಮುಖ್ಯಸ್ಥ)ರು ಎಡಭುಜದ ಮೇಲೆ ಕೆಂಪು ಅಂಗವಸ್ತ್ರವನ್ನು ಧರಿಸಿರಬೇಕು.

ಶವದ ಉಡುಪುಗಳು : ಗಂಡಸರು ಹಿಂದಿನ ಕಾಲದಲ್ಲಿ ಶವದ ಒಳ ಉಡುಪಾಗಿ 'ಕಳಕುಪ್ಸ'ವನ್ನು ತೊಡಿಸುತ್ತಿದ್ದರು. ಹಾಗೆಯೇ ಬಿಳಿಯ ಕುಪ್ಸವನ್ನು ಶವದ ಬೆನ್ನಿನ ಬದಿ ದೇಹದ ಮುಂಭಾಗಕ್ಕೆ ಬರುವಂತೆ ತೊಡಿಸುವರು. ಚೇಲೆಯನ್ನು ಸೊಂಟಕ್ಕೆ ಸುತ್ತಿ ಕಟ್ಟುವರು. ಅನಂತರ ಪೀಚೆಕತ್ತಿಯನ್ನು ಸಿಕ್ಕಿಸುವರು.

ಮಂಡೆ ತುಣಿಯನ್ನು ಶವದ ಮಡಿಸಿದ ಮೊಣಕಾಲಿಗೆ ಸುತ್ತಿ ಕಟ್ಟಿದ ಅನಂತರ ಶವದ ತಲೆಯ ಮೇಲಿಟ್ಟು ಬಾಯಿಯನ್ನು ಕೆಂಪು ರೇಷ್ಮೆಯ ಚಿಕ್ಕದೊಂದು ಬಟ್ಟೆಯಿಂದ ಮುಚ್ಚುವರು.

ಶವವನ್ನು ದಹನ ಮಾಡುವ ಸಂದರ್ಭದಲ್ಲಿ ಶವದಲ್ಲಿರುವ ಮಂಡೆತುಣಿ, ಚೇಲೆ, ಮತ್ತು ಪೀಚೆಕತ್ತಿಯನ್ನು ಬಿಚ್ಚುತ್ತಾರೆ. ಕುಪ್ಸವನ್ನು ಕಳಚಿ ಮನೆಯ ಆಳಿಗೆ ದಾನ ಮಾಡುತ್ತಾರೆ.

ಸಂಬಂಧಿಕರ ಉಡುಪುಗಳು

ಮರಣ ಹೊಂದಿದವರು ಸ್ತ್ರೀಯರಾಗಲಿ, ಪುರುಷನೇ ಆಗಲಿ ಅವರ ಸಂಬಂಧಿಕರು ಧರಿಸುವ ಉಡುಪುಗಳ ನಿಯಮ ಒಂದೇ ಆಗಿರುತ್ತದೆ. ಪುರುಷ ಸಂಬಂಧಿಗಳಾದರೆ ನಿತ್ಯದ ಉಡುಪನ್ನು ಕಳಚಿ, ಬಿಳಿಯ ಪಂಚೆಯನ್ನು ಉಟ್ಟು, 'ನಿಪ್ಪ್‌ತುಣಿ' ಯನ್ನು ಕಟ್ಟಿಕೊಳ್ಳಬೇಕು, 'ನಿಪ್ಪ್'(ಭುಜ) ತುಣಿ (ಬಟ್ಟೆ) ಎಂದರೆ

ಸುಮಾರು ಒಂದು ಮೀಟರ್ ಉದ್ದದ ಬಿಳಿಯ ಬಟ್ಟೆ. ಇದನ್ನು ಬೆನ್ನ ಮೇಲೆ ಇಳಿಬಿಟ್ಟು, ಕೊರಳ ಮುಂದೆ ಕಟ್ಟಿಕೊಳ್ಳುವುದು. ಚಿನ್ನದ ಆಭರಣಗಳನ್ನೆಲ್ಲಾ ಕಳಚಿಟ್ಟು ಬರಿಗಾಲಲ್ಲಿ ಇರಬೇಕಾಗುತ್ತದೆ. ಸತ್ತವರಿಗೆ ತೀರಾ ಹತ್ತಿರದ ಸಂಬಂಧಿಗಳಲ್ಲದವರು ಪಂಚೆಯ ಬದಲಿಗೆ ಅಂಗಿ ಷರಾಯಿಗಳನ್ನಾಧರಿಸಿ ನಿಪ್ಪ್‌ತುಣಿಯನ್ನು ಕಟ್ಟಿಕೊಳ್ಳಬೇಕು. ತೀರಾ ದೂರದ, ಅಥವಾ ಸಂಬಂಧವಿಲ್ಲದ ಪರಿಚಿತ ಕೊಡವನಾದರೆ ನಿಪ್ಪ್‌ತುಣಿ ಕಡ್ಡಾಯವಲ್ಲ. ಮರಣ ಹೊಂದಿದ ವ್ಯಕ್ತಿಯ ಕುಟುಂಬದ ಎಲ್ಲ ಕಿರಿಯ ಸಂಬಂಧಿಗಳಿಗೆ ನಿಪ್ಪ್‌ತುಣಿ ಕಡ್ಡಾಯವಾಗಿರುತ್ತದೆ.

ಇತರ ಸಮುದಾಯದ ಪುರುಷರ ಉಡುಪುಗಳು

ಕೊಡವರಲ್ಲದೆ ಕೊಡವ ಮಾದರಿಯುಲ್ಲೇ ಧರಿಸುವ ಇತರ ಸಮುದಾಯದವರೆಂದರೆ ಅಮ್ಮ ಕೊಡವರು, ಪೂಮಾಲೆ ಕುಡಿಯರು, ಕೆಂಬಟ್ಟಿಯರು, ಐರಿಗಳು, ಕೋಲೆಯವರು, ಮಡಿವಾಳರು, ಪೆಗ್ಗಡೆಯರು, ಗೊಲ್ಲರು, ಬಣ್ಣರು, ಪಣಿರರು, ಮಲೆಯರು, ಮೇದರು, ಕೋಯವರು ನಾಯಿಂದರು. ಪದ್ಧತಿ ಪ್ರಕಾರ ಮೇದರು, ಕೆಂಬಟ್ಟಿಗಳು ಪೀಚೆಕತ್ತಿಯನ್ನು ಧರಿಸುತ್ತಿರಲಿಲ್ಲ. ಈಗೀಗ ಅದು ಶೃಂಗಾರ ವಸ್ತುವಾಗಿರುವುದರಿಂದ ಸುಸ್ಥಿತಿಯಲ್ಲಿರುವ ಇತರರೂ ಧರಿಸುತ್ತಾರೆ. ಮೇಲೆ ಹೇಳಿದ ಎಲ್ಲಾ ಸಮಾಜದ ಮನೆಮಾತು ಕೊಡವ ಭಾಷೆಯಾಗಿದೆ. ಕೊಡಗಿನ ಅರೆಗೌಡರು ವಿವಾಹ ಮುಂತಾದ ಸಂದರ್ಭಗಳಲ್ಲಿ ಮಂಡೆತುಣಿಯನ್ನು ಮಾತ್ರ ಧರಿಸುತ್ತಾರೆ.

ತೊಡುಗೆಗಳು

ಮಾನವ ಸೌಂದರ್ಯ ಪ್ರಿಯ. ಆತನು ತನ್ನ ಸೌಂದರ್ಯವರ್ಧನೆಗಾಗಿ ಚಿನ್ನ, ಬೆಳ್ಳಿ, ಲೋಹ, ಮುತ್ತು ರತ್ನಗಳಿಂದ ತಯಾರಿಸಿದ ಅಲಂಕಾರಿಕ ಸಾಧನವನ್ನು, ದಾಗಿನ, ಒಡವೆ, ಬಂಗಾರವೆಂಬ ರೂಪದಲ್ಲಿ ಬಳಸುತ್ತಾನೆ. ಮೊದಲು ನಿಸರ್ಗದ ವಸ್ತುಗಳೇ ಆಭರಣಗಳಾಗಿ ಬಳಕೆಯಾಗುತ್ತಿದ್ದವು. ತಾನು ಬೇಟೆಯಾಡಿದ ಪ್ರಾಣಿಗಳ ದಂತ, ರೋಮಗಳಿಂದಲೇ ಆಭರಣಗಳನ್ನು ತಯಾರಿಸಿ ಉಪಯೋಗಿಸುತ್ತಿದ್ದನು. ಪರಶಿವ ಎಲುಬಿನ ಮಾಲೆ ತೊಡುತ್ತಿದ್ದನೆಂಬ ಕಲ್ಪನೆಯಲ್ಲಿ ಪ್ರಾಚೀನ ಮಾನವನು ಎಲುಬನ್ನೇ ಆಭರಣವಾಗಿ ಮಾಡಿಕೊಂಡಿರಬಹುದು. ಬೇರು, ನಾರು, ಬೀಜ, ಕಡವೆ, ಪ್ರಾಣಿಯ ಉಗುರು, ಕೊಂಬು ಮೊದಲಾದವುಗಳನ್ನು ಅವುಗಳ ನೈಸರ್ಗಿಕ ಸ್ಥಿತಿಯಲ್ಲಿಯೇ ಕಟ್ಟಿ ಧರಿಸಲು ಆದಿಯಲ್ಲಿ ಪ್ರಾರಂಭಿಸಿದ. ಇದರ ಪಳೆಯುಳಿಕೆಯು ಆಧುನಿಕ ರೂಪ ಪಡೆದು ಈಗಲೂ ಆನೆ ಬಾಲದ ರೋಮ, ಹುಲಿ ಉಗುರು, ಮೊದಲಾದವು ಚಿನ್ನ ಮತ್ತು ಬೆಳ್ಳಿಯ ಕಟ್ಟಿನೊಂದಿಗೆ ಉಂಗುರ ಮತ್ತು ಚಿನ್ನದ ಸರದಲ್ಲಿ ಬಳಕೆಯಾಗುತ್ತಿದೆ.

ಮನುಷ್ಯ ನಾಗರಿಕನಾದಂತೆಲ್ಲಾ ಆಭರಣದಲ್ಲಿ ವೈವಿಧ್ಯತೆ ಕಾಣಿಸಿಕೊಂಡಿತು. ಮಣ್ಣಿನಿಂದ ಆಭರಣ ಮಾಡಲು ಕಲಿತ ಮಾನವ ಶಿಲಾಯುಗದಿಂದ ಲೋಹಯುಗಕ್ಕೆ ಬಂದಾಗ ಮೃದು ಲೋಹಗಳಾದ ಚಿನ್ನ, ಬೆಳ್ಳಿ, ಹಿತ್ತಾಳೆ, ತಾಮ್ರ ಆವಿಷ್ಕಾರವಾಗಿ ಆಭರಣಗಳ ಬೆಳವಣಿಗೆಯಾಯಿತು. ಮನುಷ್ಯನ

ಆರೋಗ್ಯದ ಮೇಲೆ ಲೋಹಗಳು ಉತ್ತಮ ಪರಿಣಾಮ ಬೀರಿದ್ದು ಮಕ್ಕಳಿಗೆ ಬಾಲಗ್ರಹವಾಗದಿರಲೆಂದು ಕೈಗೆ ತಾಮ್ರದ ಕಡಗ, ಕೈಗೆ ಮಂತ್ರಿಸಿದ ಕಬ್ಬಿಣದ ಬಳೆ ತೊಡಿಸುವ ಪದ್ಧತಿ ಇಂದಿಗೂ ರೂಢಿಯಲ್ಲಿದೆ.

ಕೊಡಗಿನ ಆಭರಣದ ವೈವಿಧ್ಯತೆ

ಆಭರಣಗಳನ್ನು ಸಾಮಾಜಿಕ, ಧಾರ್ಮಿಕ, ಜನಾಂಗಿಕ, ಪ್ರಾದೇಶಿಕ, ಪಾರಂಪರಿಕ, ಆಧುನಿಕ ಎಂದು ವಿವಿಧ ನೆಲೆಗಳಲ್ಲಿ ಅಧ್ಯಯನ ಮಾಡಬಹುದು. ಇವು ಪ್ರೇಮ, ದ್ವೇಷ, ಅಧಿಕಾರ, ಸಂಪತ್ತು, ಅಹಂಕಾರ, ಹೆಮ್ಮೆ, ಕನ್ಯತ್ವ, ಸ್ತ್ರೀತ್ವ, ವಿಧವೆಯಸ್ಥಾನ ಮುಂತಾದ ಎಲ್ಲದರ ಸಂದೇಶವನ್ನು ಸಾರುವ ಸಾಂಕೇತಿಕ ವಸ್ತುಗಳಾಗಿವೆ. ಮುತ್ತು ರತ್ನ ಮಾಣಿಕ್ಯದ ಆಭರಣಗಳಿಗೆ ರೋಗವನ್ನು ವಾಸಿಮಾಡುವ ಶಕ್ತಿ ಇದೆ ಎಂಬ ನಂಬಿಕೆಯೂ ಇದೆ. ಸಮಾಜದಲ್ಲಿ ವ್ಯಕ್ತಿಯ ಸ್ಥಾನಮಾನ ಮತ್ತು ಸಂಪತ್ತಿನ ಅಳತೆಗೋಲಾಗಿಯೂ ಪರಿಗಣಿಸಲಾಗಿದೆ. ಚಿನ್ನ ಅಥವಾ ಬೆಳ್ಳಿಯ ಕರಡಿಗೆ, ಮೂರುನಾಮ ಚಿಹ್ನೆಯ ಪದಕವಿರುವ ಸರ, ಮೂರು ತಲೆಗಳುಳ್ಳ ಸರ, ಕ್ರೈಸ್ತರ ಶಿಲುಬೆ ಚಿಹ್ನೆಯುಳ್ಳ ಸರ, ಮುಂತಾದವು ಸಮಾಜದ ಧಾರ್ಮಿಕ ನಂಬಿಕೆಯನ್ನು, ಧರ್ಮದ ಚಿಹ್ನೆಗಳಾಗಿ ಸಂಕೇತಿಸುತ್ತವೆ.

ಪ್ರತಿಯೊಂದು ಸಮುದಾಯಕ್ಕೂ, ಪ್ರದೇಶಕ್ಕೂ ತನ್ನದೇ ಆದ ಆಭರಣಗಳಿವೆ. ಇವುಗಳನ್ನು ಪ್ರಾದೇಶಿಕವಾಗಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ, ಮಲೆನಾಡು ಆಭರಣಗಳೆಂದು ಗುರುತಿಸಬಹುದು. ಆಭರಣಗಳು ವಿನ್ಯಾಸದಲ್ಲಿ ನಿರ್ದಿಷ್ಟ ಪ್ರದೇಶವನ್ನು ಪ್ರತಿನಿಧಿಸುತ್ತವೆ.

ಮಹಿಳೆಯರ ಆಭರಣ

ಕೊಕ್ಕೆತಾತಿ, ಪೊಮ್ಮಾಲೆ, ಜೋಮಾಲೆಗಳು ಕಡಗ, ಪತ್ತಾಕು, ಹವಳದ ಸರಗಳು ಮುಂತಾದವು ಪಾರಂಪರಿಕ ಒಡವೆಗಳಾಗಿವೆ. ಕೊಡವರ ಆಭರಣಗಳು ಅವರ ವೈಭವಯುತ ಜೀವನ ಪದ್ಧತಿಯನ್ನು ಪ್ರತಿಬಿಂಬಿಸುತ್ತವೆ. ಪಾರಂಪರಿಕ ಆಭರಣಗಳ ವಿನ್ಯಾಸ, ವೈಶಿಷ್ಟ್ಯ ಅವುಗಳನ್ನು ರೂಪಿಸಿದ ಕುಶಲಕರ್ಮಿಗಳ ಕಲಾ ನೈಪುಣ್ಯಕ್ಕೆ ದ್ಯೋತಕವಾಗಿದೆ. ಆಭರಣ ಪ್ರಿಯರಾದ ಕೊಡವ ಸ್ತ್ರೀಯರು ಪ್ರತಿನಿತ್ಯ ವಿಶೇಷ ಒಡವೆಗಳನ್ನು ತೊಡುತ್ತಾರೆ.

ಕೊಡವ ಮುತ್ತೈದೆಯರು ದಿನನಿತ್ಯ ಕತ್ತಿನಲ್ಲಿ ಕರಿಮಣಿಸರ, ಕಿವಿಗಳಿಗೆ ಓಲೆ, ಕೈಗಳಿಗೆ ಬಳೆಗಳು, ಕಾಲಿಗೆ ಕಾಲುಂಗರವನ್ನು ಧರಿಸುತ್ತಾರೆ. ಕೈಬೆರಳಿಗೆ ಮದುವೆಯುಂಗುರ ಧರಿಸುತ್ತಾರೆ. ಯುವತಿಯರು ಕಾಲಂದಿಗೆ, ಬಾಲೆಯರು ಕಾಲ್ಗೆಜ್ಜೆ ತೊಡುತ್ತಾರೆ. ಹಬ್ಬ ಹರಿದಿನಗಳಲ್ಲಿ, ವಿವಾಹ-ವಿಶೇಷ ಸಂದರ್ಭಗಳಲ್ಲಿ ಸ್ತ್ರೀಯರು ಕಿವಿಗಳಿಗೆ ಓಲೆ, ಜುಮುಕಿ, ಮಾಟಿ, ಕತ್ತಿಗೆ ಪತ್ತಾಕು, ಜೋಮಾಲೆ ಕೊಕ್ಕೆತಾತಿ ಪೊಮ್ಮಾಲೆ, ಕೈಗಳಿಗೆ ಬಳೆ, ಕಡಗ, ಮುಂತಾದ ಸಾಂಪ್ರದಾಯಿಕ ಒಡವೆ ತೊಡುತ್ತಾರೆ.

ಜಡೆಬಿಲ್ಲೆ : ಮೂರು – ನಾಲ್ಕು ಬೆರಳಗಲದ ದುಂಡಾಗಿರುವ ಈ ಬಿಲ್ಲೆಯನ್ನು ಶುದ್ಧ ಚಿನ್ನದಿಂದ ತಯಾರಿಸಿರುತ್ತಾರೆ. ಬಿಲ್ಲೆಯ ಸುತ್ತ ಚಿತ್ತಾಕಾರದ

ಕಸೂತಿ ಕೆಲಸವಿರುತ್ತದೆ.ಕೆಂಪು, ಹಸುರು, ಕಲ್ಲುಗಳನ್ನು ಬಿಲ್ಲೆಗೆ ಕೂರಿಸಿರುತ್ತಾರೆ. ಮದುವಣಗಿತ್ತಿಯ ಜಡೆಯುದ್ದಕ್ಕೂ ನಾಲ್ಕಾರು ಬಿಲ್ಲೆಯನ್ನು ಜೋಡಿಸುತ್ತಾರೆ.

ಚೌರಿಕೊತ್ತ್ : ಕೊಡವ ಭಾಷೆಯಲ್ಲಿ 'ಕೊತ್ತ್' ಎಂದರೆ ಕುಚ್ಚು, ಜಡೆ ಚೌರಿಯ ಕೊನೆಯಲ್ಲಿ ಕಟ್ಟುವ ಈ ಚೌರಿಕೊತ್ತಿನ ಕರಿ ರೇಷ್ಮೆ ನೂಲಿನ ಕುಚ್ಚನ್ನು ವಧು ಆಲಂಕಾರಿಕ ವಸ್ತುವಾಗಿ ಜಡೆಗೆ ಧರಿಸುತಿದ್ದಳು. ಇತ್ತೀಚಿಗೆ ಕೊಡವ ಮಹಿಳೆಯರಲ್ಲಿ ಈ ಕುಚ್ಚುಗಳು ಕಡಿಮೆಯಾಗುತ್ತಿವೆ.

ಕಿವಿಯ ಆಭರಣಗಳು

ಬೆಂಡೋಲೆ, ಮುರವು, ಲೋಲಾಕು, ಜುಮುಕಿ, ಕೆಮಿಕೊಂಡೊಳ, ಕೊಪ್ಪಂಬ್, ಮಾಟಿ ಮುಖ್ಯವಾದವುಗಳು. 'ಕೊಮಿಕೊಂಡೊಳ' ಮತ್ತು 'ಕೊಪ್ಪಂಬ್' ಈಗ ಬಳಕೆಯಲ್ಲಿಲ್ಲ. 'ಮುರವು' ಇತ್ತೀಚೆಗೆ ಪ್ಯಾಶನ್ ಒಡವೆಯಾಗಿದೆ.

ಬೆಂಡೋಲೆ : ಸಾಧಾರಣವಾಗಿ ಕೊಡವ ಮಹಿಳೆಯರು ಕಲ್ಲುಗಳ ಬೆಂಡೋಲೆ ಧರಿಸುತ್ತಾರೆ. ಶ್ರೀಮಂತಿಕೆ ಗನುಸಾರವಾಗಿ ವಜ್ರ, ಪಚ್ಚೆ, ಮಾಣಿಕ್ಯ ಮೊದಲಾದವುಗಳಿಂದ ಬೆಂಡೋಲೆಯನ್ನು ಮಾಡಿಸಿಕೊಳ್ಳುವರು.

ಓಲೆ : ಓಲೆ ಎಂದರೆ ವಾಸ್ತವವಾಗಿ ತಾಳೆಗರಿಯ ಸುರುಳಿ. ಹಿಂದೆ ಕಿವಿಯನ್ನು ರಂಧ್ರಮಾಡಿ ಅದರಲ್ಲಿ ಈ ಸುರುಳಿಯನ್ನು ತೂರಿಸುತ್ತಿದ್ದರು. ಕ್ರಮವಾಗಿ ದೊಡ್ಡ ದೊಡ್ಡ ಸುರುಳಿಯನ್ನು ತೂರಿಸುತ್ತಿದ್ದರು. ಕಿವಿಯ ಈ ರಂಧ್ರ ದೊಡ್ಡದಾಗಿ ನೇತಾಡುತ್ತಿತ್ತು. ಹಿಂದಿನ ಕಾಲದಲ್ಲಿ ಸಾಮಾನ್ಯರು ದಿನನಿತ್ಯದಲ್ಲಿ ತಾಳೆಯೋಲೆಯನ್ನು ತೊಟ್ಟರೆ ವಿಶೇಷ ಸಂದರ್ಭಗಳಲ್ಲಿ ಮಾತ್ರ ಚಿನ್ನದ ತಗಡಿನ ಸುರುಳಿಯಿಂದ ಕಿವಿಯನ್ನಲಂಕರಿಸುತ್ತಿದ್ದರು. ಈಗ ಇಂತಹ ಓಲೆ ಧರಿಸುವವರು ಅತಿ ವಿರಳ.

ಮುರುವು : ಇದನ್ನು ಮುರ, ಮುರು ಎಂದು ಕರೆಯುತ್ತಾರೆ. ಲವಂಗವನ್ನು ಹೋಲುವ ಈ ಒಡವೆ ಒಂದೂವರೆ ಸೆಂಟಿ ಮೀಟರ್ ಉದ್ದದ ಸಪೂರವಾದ ಚಿನ್ನದ ನಳಿಕೆಯಾಗಿದ್ದು, ಒಂದು ತುದಿಯಲ್ಲಿ ಗುಂಡಾಗಿರುತ್ತದೆ. ಅಲ್ಲಿ ಬಣ್ಣದ ಒಂದು ಚಿಕ್ಕಕಲ್ಲು, ಇಲ್ಲವೇ ರತ್ನವನ್ನು ಅಳವಡಿಸಿರಲೂಬಹುದು. ಇನ್ನೊಂದು ಕೊನೆಯಲ್ಲಿ ತಿರುಪಿರುತ್ತದೆ. ಕಿವಿಯ ಮಧ್ಯಭಾಗದಲ್ಲಿ ರಂಧ್ರಮಾಡಿ ಇದನ್ನು ತೂರಿಸಿ ತಿರುಪಿನಿಂದ ಬಂಧಿಸಲಾಗುತ್ತದೆ. ಇತ್ತೀಚಿಗೆ ಹೆಚ್ಚು ಯುವತಿಯರು ಈ ಮುರವನ್ನು ಧರಿಸುತ್ತಿದ್ದಾರೆ.

ಲೋಲಾಕು : ಯುವತಿಯರು ಮತ್ತು ನವ ಮದುವಣಗಿತ್ತಿಯು ತೊಡುವ ಆಭರಣ ಕಿವಿಯ ಓಲೆ ಅಥವಾ ಕಡಕಿಗೆ ಸಿಕ್ಕಿಸಲಾಗಿ, ನೇತಾಡುವ ಇವುಗಳನ್ನು ಮುತ್ತು ಹವಳ ಮತ್ತು ಚಿನ್ನದಿಂದ ತಯಾರಿಸಿರುತ್ತಾರೆ.

ಜುಮುಕಿ : ಲೋಲಾಕಿನಂತೆ ಕಿವಿಯಲ್ಲಿ ನೇತಾಡುವ ಆಭರಣ. ಮುತ್ತು ಅಥವಾ ಕಲ್ಲುಗಳ ಪುಟ್ಟ ಗೊಂಚಲುಗಳು ಬುಗಟೆಯಿಂದ ನೇತಾಡುತ್ತವೆ. ಯುವತಿಯರು ಮತ್ತು ಮದುಮಗಳು ಜುಮುಕಿಯನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ.

ಕೆಮಿಕೊಂಡೊಳ : ಕಿವಿಗೆ ಕೊಡವ ಭಾಷೆಯಲ್ಲಿ 'ಕೆಮಿ' ಎಂದು ಕರೆಯುತ್ತಾರೆ. ಕೊಂಡೊಳ ಎಂಬುದು 'ಕುಂಡಲ' ಎಂಬುವುದರ ತದ್ಭವ ಪದ.

'ಕೆಮಿಕೊಂಡೊಳ'ದ ಈ ಒಡವೆ ಉಂಗುರದಂತಿರುತ್ತದೆ. ಕಿವಿಯ ಮೇಲಂಚಿನ ರಂಧ್ರಗಳ ಮೂಲಕ ಈ ತಂತಿಯ ಕುಣಿಕೆಯನ್ನು ತೂರಿಸಿ, ಅಂಡಾಕೃತಿಯ ಭಾಗ ಮುಂಭಾಗಕ್ಕೆ ಬರುವಂತೆ ಧರಿಸಲಾಗುತ್ತದೆ. ಈ ಆಭರಣವನ್ನು ಈಗ ಯಾರೂ ಉಪಯೋಗಿಸುತ್ತಿಲ್ಲ.

ಕೊಪ್ಪುಂಬ್ : ಕಿವಿಯ ಮೇಲ್ಭಾಗದಲ್ಲಿ ಅಲಂಕರಿಸಲ್ಪಡುವ ಇದನ್ನು ಕನ್ನಡದಲ್ಲಿ ಕೊಪ್ಪು ಎನ್ನುವರು. ಬಿಲ್ಲಿನ ತುದಿಯನ್ನು ಹೋಲುವ ಈ ಕೊಪ್ಪುಂಬ್ ಹೆಸರಿಗೆ ತಕ್ಕಂತೆ ಕಿವಿಯ ತುದಿಯಲ್ಲಿ ಧರಿಸಲ್ಪಡುವಂತದ್ದು ಬಿಲ್ಲಿನ ಹೆಡೆಯಂತೆ ಇದಕ್ಕೆ ಸಿಕ್ಕಿಸಿದ ಚಿನ್ನದ ಸಪೂರವಾದ ಸರಪಳಿಯೊಂದು ಓಲೆಯ ಕೆಳಗೆ ಸಿಕ್ಕಿಸಿರುತ್ತಾರೆ.

ಮಾಟಿ : ಕಿವಿಯೋಲೆಗೆ ಸಿಕ್ಕಿಸಲಾಗುವ ಈ ಚಿನ್ನದ ಸರಪಳಿಯನ್ನು ಕಿವಿಯ ಮೇಲ್ಭಾಗದಲ್ಲಿ ತಲೆಗೂದಲಿಗೆ ಜೋಡಿಸಲಾಗುವುದು. ಮಾಟಿಯನ್ನು ಮದುವಣಗಿತ್ತಿ, ತರುಣಿಯರು ಧರಿಸುವರು.

ಮೂಕೊರ್ಡ್ (ಮೂಗುತಿ) : ಮೂಗುತಿಗೆ ಕೊಡವ ಭಾಷೆಯಲ್ಲಿ 'ಮೂಕೊರ್ಡ್' ಎನ್ನುತ್ತಾರೆ. ಕೊಡವತಿಯರ ಮೂಗುತಿಯನ್ನು ಕಲ್ಲು, ವಜ್ರ ಮುತ್ತು ಮೊದಲಾದ ರತ್ನಗಳಿಂದ ತಯಾರಿಸುತ್ತಾರೆ. ಮದುವಣಗಿತ್ತಿ ಮೂಗುತಿಯನ್ನು ಕಡ್ಡಾಯವಾಗಿ ಧರಿಸಬೇಕು. ಮೂಗು ಚುಚ್ಚಿಸಿಕೊಳ್ಳದವರು ೧ ಆಕಾರದ ಮೂಗುತಿಯನ್ನು ಮೂಗಿಗೆ ಧರಿಸುತ್ತಾರೆ.

ಕಂಠಾಭರಣಗಳು : ಕೊಡವತಿಯರ ಕಂಠಾಭರಣಗಳು ತನ್ನದೇ ಆದ ವೈಶಿಷ್ಟ್ಯತೆಯನ್ನು ಉಳಿಸಿಕೊಂಡಿವೆ. ಅವುಗಳಲ್ಲಿ ಪ್ರಮುಖವಾದವು ಜೋಮಾಲೆ, ಕೊಕ್ಕೆತಾತಿ, ಪತ್ತಾಕ್, ಅಡ್ಡಿಗೆ, ಸರಪಳಿ ಮುಂತಾದವು. ಹಿಂದೆ ಕೊಡವರು ಮಾತ್ರ ಧರಿಸುತ್ತಿದ್ದ ಈ ಆಭರಣವನ್ನು ಇತ್ತೀಚಿಗೆ ಇತರ ಸಮುದಾಯದವರು ಧರಿಸುತ್ತಾರೆ.

ಪೊಮ್ಮಾಲೆ : ಪೊನ್ನಿಮಾಲೆ–'ಪೊಮ್ಮಾಲೆ' ಚಿನ್ನದ ಒಂದುಗುಂಡು ಒಂದು ಹವಳ ಅನುಕ್ರಮವಾಗಿ ಚಿನ್ನದ ಸರಿಗೆಯ ಸರಪಳಿಯಿಂದ ಪೋಣಿಸಲಾಗಿರುವ ಸರ. ಈ ಸರವನ್ನು ಶ್ರೀಮಂತಿಕೆಗೆ ಅನುಗುಣವಾಗಿ ಒಂದು, ಎರಡು ಇಲ್ಲವೇ ಮೂರು ಎಳೆಗಳಂತೆ ತಯಾರಿಸಿಕೊಳ್ಳುತ್ತಾರೆ. ವಧುವಿನ ಅಲಂಕಾರದಲ್ಲಿ ಈ ಸರಕ್ಕೆ ಪ್ರಾಮುಖ್ಯತೆ ಇದೆ.

ಮದುವಣಗಿತ್ತಿ ಚಪ್ಪರದ ದಿನದಂದು ಅಂದರೆ 'ಊರು ಕೂಡುವ' ಸಮಾರಂಭದ ದಿನ ಸಂಜೆ ವಧು ಸ್ನಾನಮಾಡಿ ಕೆಂಪು ಬಣ್ಣದ ಜರತಾರಿ ಸೀರೆ, ತುಂಬುತೋಳಿನ ರವಿಕೆ, ತಲೆಗೆ ಕೆಂಪು ವಸ್ತ್ರತೊಟ್ಟು, ಬೋಜಕಾರ್ತಿಯ ಕೈ ಹಿಡಿದುಕೊಂಡು ಮನೆಯ 'ನಡುಬಾಡೆ' (ಮಧ್ಯದ ವಿಶಾಲ ಕೋಣೆ) ತೂಗುದೀಪದೆದರು ನಿಲ್ಲುತ್ತಾಳೆ. ಇಷ್ಟದೇವರನ್ನು ಪ್ರಾರ್ಥಿಸಿ, ತೂಗುದೀಪಕ್ಕೆ ಅಕ್ಷತೆ ಹಾಕಿ, ತಾಯಿ, ತಂದೆ ಮತ್ತು ಗುರುಹಿರಿಯರ ಕಾಲಿಗೆ ನಮಸ್ಕರಿಸುತ್ತಾಳೆ. ಆ ಸಮಯದಲ್ಲಿ ನಾಲ್ವರು ಗಂಡಸರು ಚೆಂಬುದುಡಿ (ಹಿತ್ತಾಳೆದುಡಿ) ಬಾರಿಸುತ್ತಾ ಮದುವೆಯನ್ನು ಕುರಿತು ಹಾಡು ಹಾಡುತ್ತಿರುತ್ತಾರೆ. ಆಗ ವಧುವಿನ ತಾಯಿ ಪೊಮ್ಮಾಲೆಯನ್ನು ತೊಡಿಸುತ್ತಾಳೆ. ಮದುವೆ ಮುಗಿದು ನೂತನ ದಂಪತಿಗಳು

ಮೊಟ್ಟ ಮೊದಲಿಗೆ ವಧುವಿನ ತವರು ಮನೆಗೆ ಹೋಗುವ ದಿನದವರೆಗೆ (ಮನೆಮೊಟ್ಟು) ಪೊಮ್ಮಾಲೆಯನ್ನು ಮದುವಣಗಿತ್ತಿ ಧರಿಸಬೇಕಾಗುತ್ತದೆ.

ಜೋಮಾಲೆ : ಚಿನ್ನದ ಗುಂಡುಗಳನ್ನು ಚಿನ್ನದ ಸರಿಗೆಯಿಂದ ಇಲ್ಲವೇ ಕಪ್ಪು ಬಣ್ಣದ ರೇಷ್ಮೆಯ ದಾರದಿಂದ ವಿಶೇಷ ರೀತಿಯಲ್ಲಿ ಹೆಣೆಯಲಾಗುತ್ತದೆ. ಎರಡೆಳೆಯ ಜೋಮಾಲೆ ಉದ್ದವಾಗಿರುತ್ತದೆ. ಕೆಲವೇ ಕುಶಲಕರ್ಮಿಗಳು ಮಾತ್ರ ಇದನ್ನು ತಯಾರಿಸುತ್ತಾರೆ. ಇತ್ತೀಚಿಗೆ ಈ ಜೋಮಾಲೆ ಪ್ರಸಿದ್ಧಿ ಪಡೆದು ಎಲ್ಲರೂ ಧರಿಸುತ್ತಾರೆ.

ಕೊಕ್ಕೆತಾತಿ : ಕೊಕ್ಕೆತಾತಿಯನ್ನು ಚಂದ್ರಹಾರವೆಂದೂ ಕರೆಯತ್ತಾರೆ. ಇಮ್ಮಡಿ ಶಂಕು ವಿನಾಕಾರದ ಚಿನ್ನದ ಗುಂಡುಗಳನ್ನು ಚಿನ್ನದ ಸರಿಗೆಯುಲ್ಲಿ ಪೋಣಿಸಲಾಗುತ್ತದೆ. ಮಧ್ಯದಲ್ಲಿ ಚೌತಿಯ ಚಂದ್ರಾಕಾರದ ಪದಕವಿರುವುದು. ೯ ಚಿನ್ನದ ಪದಕದ ಮೇಲ್ಮೈಯಲ್ಲಿ ಚಿತ್ತಾರದ ಕೆತ್ತನೆಯಿದ್ದು, ಕೆಂಪು ಬಿಳಿ ಹರಳುಗಳನ್ನು ಸುಂದರವಾಗಿ ತೂರಿಸಲಾಗುತ್ತದೆ. ಪದಕದ ಕೆಳ ಅಂಚಿನುದ್ದಕ್ಕೂ ಕಿರು ಮುತ್ತುಗಳ ಗೊಂಚಲುಗಳಿರುತ್ತವೆ. ಪದಕದ ಮೇಲಂಚಿನ ಮಧ್ಯದಲ್ಲಿನ ಚಿಕ್ಕ ಉಂಗುರಕ್ಕೆ ಗುಂಡುಗಳ ಸರವನ್ನು ಜೋಡಿಸಲಾಗುವುದು. ಇದರ ಬದಲಾಗಿ ನಾಗರ ಹೆಡೆಯೂ ಇರುವುದುಂಟು. ಕೊಕ್ಕೆತಾತಿಯನ್ನು ಮದುಮಗಳು ಕಡ್ಡಾಯವಾಗಿ ಧರಿಸಬೇಕಾಗುತ್ತದೆ.

ಪತ್ತಾಕ್

'ಪತ್ತಾಕ್' ಎಂಬುದಕ್ಕೆ ಪದಕ ಎಂಬ ಅರ್ಥವಿದೆ. ಇದನ್ನು ವಿವಾಹಿತ ಕೊಡವ ಸ್ತ್ರೀಯರು ಮಾತ್ರ ತೊಡುತ್ತಾರೆ. ಮದುವೆಯ ಸಂದರ್ಭದಲ್ಲಿ ವರ ಇದನ್ನು ಕಟ್ಟದಿದ್ದರೂ ಮಾಂಗಲ್ಯದಷ್ಟೆ ಪಾವಿತ್ರ್ಯವನ್ನು ಪಡೆದಿದೆ. ಮದುಮಗಳ ತಾಯಿಯು 'ಊರುಕೂಡುವ' (ಚಪ್ಪರ) ರಾತ್ರಿ 'ಪೊಮ್ಮಾಲೆ'ಯನ್ನು ಮಗಳಿಗೆ ತೊಡಿಸುವಾಗಲೇ 'ಪತ್ತಾಕ್'ನ್ನು ಕಟ್ಟುತ್ತಾಳೆ, ಒಂದು ತೊಲ ಇಲ್ಲವೆ ಒಂದು ಸವರನ್ ಚಿನ್ನದ ನಾಣ್ಯದ ಹೊರ ಅಂಚಿನಲ್ಲಿ ಚೂಪಾದ ಅರೆಗಳಂತಿದ್ದು, ಅಲ್ಲಿ ಪುಟ್ಟ ಕೆಂಪುಕಲ್ಲುಗಳನ್ನು ತೂರಿಸಿರುತ್ತಾರೆ.

ಕೆಂಪುಕಲ್ಲುಗಳು ಪತ್ತಾಕಿನ ಮೇಲ್ಭಾಗದಲ್ಲಿ ಬಿಚ್ಚಿದ ನಾಗರ ಹೆಡೆಯಂತಿರುತ್ತದೆ. ಮುತ್ತಿನ ಮೂರೆಳೆಯ ಪುಟ್ಟ ಜುಮುಕಿಯ ಗೊಂಚಲಿನ ಜೊತೆಗೆ ಹೆಡೆಯ ಎರಡೂ ಬದಿಗಳಿಗೆ ಚಿನ್ನದ ಸರಪಳಿಯಿಂದ ಹವಳದ ಮತ್ತು ಚಿನ್ನದ ಗುಂಡುಗಳನ್ನು ಜೋಡಿಸಿರುತ್ತಾರೆ. ಸರಪಳಿಯ ಕೊನೆಯ ಕುಣಿಕೆಗೆ ಕರಿಮಣಿಯ ಸರವನ್ನು ಬಂಧಿಸಿರುತ್ತಾರೆ.

ಅಡ್ಡಿಗೆ : ಕಂಠವನ್ನು ಬಳಸಿದಂತೆ ಕಟ್ಟಲ್ಪಡುವ ಅರ್ಧಚಂದ್ರಾಕೃತಿಯ ಆಭರಣವೇ ಅಡ್ಡಿಗೆ. ಇದರ ಸುತ್ತ ಆಯತಾಕಾರದ ದೊಡ್ಡ ಬಣ್ಣದ ಕಲ್ಲುಹರಳುಗಳನ್ನು ಕೂಡಿಸಲಾಗುತ್ತದೆ. ಕೆಳ ಅಂಚಿನುದ್ದಕ್ಕೂ ಕಿರು ಮುತ್ತಿನ ಗೊಂಚಲುಗಳನ್ನು ಜೋಡಿಸಿರುತ್ತಾರೆ. ಅಡ್ಡಿಗೆಯ ಹಿಂಭಾಗದಲ್ಲಿ ಚಿನ್ನದ ಸರಪಳಿಯಿದ್ದು ಕೊನೆಯಲ್ಲಿರುವ ಕುಣಿಕೆಯಿಂದ ಬಂಧಿಸಲಾಗುತ್ತದೆ. ಇದು ಪ್ರಾಚೀನ ಆಭರಣಗಳಲ್ಲೊಂದಾಗಿದೆ.

ಚಂಜೋಲೆ (ಸರಪಳಿ) : ಕೊಡವ ಭಾಷೆಯಲ್ಲಿ "ಚಂಜೋಲೆ" ಕನ್ನಡದಲ್ಲಿ ಸರಪಳಿಯೆಂದಾಗಿದೆ. ಇದು 'ಶೃಂಖಲಾ' ಎಂಬುವುದರ ತದ್ಭವ ರೂಪ. ಚಿನ್ನದಿಂದ ತಯಾರಿಸಲಾಗುವ ಇದು ಎದೆಯ ಕೆಳಭಾಗಕ್ಕೆ ಬರುವಂತಿರುತ್ತದೆ. ಇದನ್ನು ಹಲವಾರು ವಿನ್ಯಾಸಗಳಲ್ಲಿ ರೂಪಿಸುತ್ತಾರೆ.

ಸಾಧಾರಣವಾಗಿ ಮಧ್ಯವಯಸ್ಸು ದಾಟಿದವರು ಇದನ್ನು ತೊಟ್ಟುಕೊಳ್ಳುವರು. ಹಿಂದಿನ ಕಾಲದಲ್ಲಿ ವಿಧವೆಯರು ಚಿನ್ನದೊಡವೆಗಳನ್ನು ಬಳಸುವುದು ನಿಷಿದ್ಧವಾಗಿತ್ತು. ಬೆಳ್ಳಿಯ ಬಳೆ, ಕೈಕಡಗ, ಸರಪಳಿಗಳನ್ನು ತೊಡಬಹುದಾಗಿತ್ತು. ಆದರೆ ಈಗ ವಿಧವೆಯರು ಕಂಠಾಭರಣವಾಗಿ ಚಿನ್ನದ ಸರವನ್ನು ಧರಿಸುತ್ತಿದ್ದಾರೆ.

ಕೈ ಆಭರಣಗಳು : ಬಳೆ, ಕಡಗ ಉಂಗುರ ಮುಖ್ಯವಾದ ಕೈ ಆಭರಣಗಳಾಗಿವೆ. ಹಿಂದು ಹೆಣ್ಣು ಮಕ್ಕಳಿಗೆ ಗಾಜಿನ ಬಳೆಗಳು ಮುತ್ತೈದೆತನದ ಸಂಕೇತ. ಇದಲ್ಲದೆ ಪೌಂಬೆ, ಪರಿಗಡಗ, ಮುಂತಾದ ವಿಶೇಷ ಕೈಯ ಆಭರಣಗಳು ಕೊಡವರಲ್ಲಿವೆ. ಸಾಮಾನ್ಯವಾಗಿ ಎಲ್ಲ ಸ್ತ್ರೀಯರಂತೆ ಕೊಡವ ಸ್ತ್ರೀಯರೂ ಬಗೆ ಬಗೆಯ ವಿನ್ಯಾಸದ ಬಳೆಗಳನ್ನು ತೊಡುತ್ತಾರೆ. ಅಲಂಕಾರಕ್ಕೆಂದು ಮುತ್ತೈದೆಯರು, ತರುಣಿಯರು ಎಲ್ಲಾ ವಿಧದ ಬಳೆಗಳನ್ನು ತೊಡುತ್ತಾರೆ. ಹಿಂದೆ ಇವರು ಬೆಳ್ಳಿಯ ಬಳೆ, ಕಡಗಳನ್ನು ಮಾತ್ರ ಧರಿಸುತ್ತಿದ್ದರು. ಕೊಡವರಲ್ಲಿ ಗಾಜಿನ ಬಳೆಗಳಿಗೆ ವಿಶೇಷ ಸ್ಥಾನವಿದೆ. ವಧುವಿಗೆ ಮದುವೆಯದಿನ ಬಳೆ ತೊಡಿಸುವ ಶಾಸ್ತ್ರವಿದೆ. ಸ್ನಾನಕ್ಕೆ ಮೊದಲು ತಾಳೆಯೋಲೆಯ ಚಾಪೆಯ ಮೇಲೆ ವಧುವನ್ನು ಕುಳ್ಳಿರಿಸುವರು. ಪಕ್ಕದಲ್ಲಿ ಒಂದು ಬಿದಿರಿನ ಬುಟ್ಟಿಯಲ್ಲಿ ಒಂದು ಸೇರು ಅಕ್ಕಿ, ಒಂದು ತೆಂಗಿನಕಾಯಿ, ಒಂದು ಚಿಪ್ಪು ಬಾಳೆಯ ಹಣ್ಣುಗಳನ್ನಿಡುವರು. ಹುಡುಗಿಯೆದುರು ಬಳೆಗಾರ ಕುಳಿತು ಬಳೆಗಳನ್ನು ತೊಡಿಸುವನು. ಕೆಂಪು ಹಸಿರು ಬಣ್ಣದ ಬಳೆಗಳೊಡನೆ ಒಂದು ಜತೆಯಾದರೂ ಕಪ್ಪುಮುತ್ತೈದೆ ಬಳೆಗಳನ್ನು ತೊಡಿಸಲೇಬೇಕು.

ಬಳೆಗಳನ್ನು ತೊಡಿಸಿಕೊಂಡಾದ ಬಳಿಕ ವಧುವು ಬಳೆಗಾರನ ಜೋಳಿಗೆಗೆ ಎರಡೂ ಕೈಗಳಿಂದ ಮುಟ್ಟಿ ನಮಸ್ಕರಿಸಬೇಕು. ಅವಳ ಬಳಿಕ ಇನ್ನಿಬ್ಬರಾದರೂ ಕಪ್ಪು ಮುತ್ತೈದೆ ಬಳೆಗಳನ್ನು ತೊಡಿಸಿಕೊಳ್ಳಬೇಕು.

ಕಡಗ: ಅರಗಿನ ಬಳೆಯ ಮೇಲೆ ಚಿನ್ನದ ತಗಡನ್ನು ಹೊಂದಿಸಿದ ಒಡವೆ. ಇದರ ಎರಡೂ ಅಂಚುಗಳು ಗುಂಡಗೆ ದಪ್ಪಗಿರುತ್ತವೆ. ನಡುವಿನ ಭಾಗದಲ್ಲಿ ಕುಸುರಿ ಕೆಲಸವಿರುತ್ತದೆ. ವಾಸ್ತವವಾಗಿ ಇವು ಎರಡು ಅರ್ಧವೃತ್ತದ ಬಳೆಗಳಾಗಿವೆ. ಒಂದು ಕೊನೆ ತಿರುಪಿನಿಂದ ಜೋಡಿಸಲ್ಪಟ್ಟಿರುವುದು. ಮಣಿಗಂಟಿಗೆ ಹೊಂದಿ ಕೊಂಡಂತಿರುವ ಕಡಗವನ್ನು ತೊಟ್ಟ ಅನಂತರ ಇನ್ನೊಂದು ಕೊನೆಯಲ್ಲಿರುವ ತಿರುಪಿನಿಂದ ಬಂಧಿಸಲಾಗುವುದು. ಸಾಮಾನ್ಯವಾಗಿ ಒಂಟಿ ಕಡಗ ಹೆಚ್ಚು ಬಳಕೆಯಲ್ಲಿದೆ.

ಪೌಂಚಿ : ಕನ್ನಡದಲ್ಲಿ 'ಪೌಂಚಿ' ಎಂದೇ ಹೆಸರಾಗಿರುವ ತ್ರಿಭುಜಾಕೃತಿಯ ಪಿರಮಿಡ್‌ನಂತಿರುವ ಚಿನ್ನದ ಪುಟ್ಟ ಪುಟ್ಟ ಚಿನ್ನದ ತುಂಡುಗಳನ್ನು ಕರಿರೇಷ್ಮೆ ನೂಲಿನಿಂದ ವಿಶೇಷ ರೀತಿಯಲ್ಲಿ ಪೋಣಿಸಿರುತ್ತಾರೆ. ('ಬಳೆ') ಮೂರು ನಾಲ್ಕು ಸಾಲುಗಳುಳ್ಳ ಈ ಆಭರಣವನ್ನು ಒಟ್ಟಾಗಿ ಕೈಗೆ ಕಟ್ಟುತ್ತಾರೆ. ಇದನ್ನು

ತೊಡಲೇಬೇಕೆಂಬ ಪದ್ಧತಿಯಿಲ್ಲ. ವಧುವಿನ ಕೈಯ ಅಲಂಕಾರದ ಒಡವೆಯಾಗಿದ್ದು ಕೈಗಡಿಯಾರದಂತೆ ಮಣಿಕಟ್ಟಿನ ತಿರುಪಿನಿಂದ ಬಂಧಿಸಿರುತ್ತಾರೆ.

ಕೈಪದಿಚೆ : 'ಪದಿಚೆ' ಎಂದರೆ ಆಭರಣ ಎಂದರ್ಥ. ಕೈಯ ಆಭರಣವಾದ್ದರಿಂದ ಇದಕ್ಕೆ ಕೈಸರ, ಕೈಪಿಲ್ಲಿ ಎಂದು ಕರೆಯುವರು. ಇದನ್ನು ಚಿನ್ನದಿಂದ ತಯಾರಿಸುತ್ತಾರೆ. ಕೈಯ ಐದು ಬೆರಳುಗಳಿಗೆ ಉಂಗುರಗಳಿರುತ್ತವೆ. ಪ್ರತಿಯೊಂದು ಉಂಗುರಕ್ಕೂ ಒಂದೊಂದು ಚಿನ್ನದ ಸರಪಳಿಯನ್ನು ಜೋಡಿಸಲಾಗಿದ್ದು, ಅವೆಲ್ಲಾ ಒಂದಾಗಿ ಬಳೆಯೊಂದಕ್ಕೆ ಜೋಡಿಸಲ್ಪಟ್ಟಿರುತ್ತವೆ. ಈ ಒಡೆವೆಯಿಂದ ಅಲಂಕರಿಸಿಕೊಳ್ಳುವಾಗ ಮೊದಲು ಬಳೆ ತೊಟ್ಟುಕೊಂಡು, ಸರಪಳಿಗಳನ್ನು ಮುಂಗೈ ಮೇಲಿಂದ ಹಾಯಿಸಿ ಉಂಗುರಗಳನ್ನು ಧರಿಸಿಕೊಳ್ಳಬೇಕು. ಕೆಲವು ನಮೂನೆಯಲ್ಲಿ ಮುಂಗೈಯಗಲಕ್ಕೆ ಚಕ್ರಾಕಾರದ ರಚನೆಯಿದ್ದು, ಅದನ್ನು ಮುತ್ತು ರತ್ನಗಳಿಂದ ಶೃಂಗರಿಸಿರುವುದೂ ಇದೆ. ಈ ಒಡವೆಯನ್ನು ಮದುವಣಗಿತ್ತಿಯು ಎರಡೂ ಕೈಗಳಿಗೊಂದರಂತೆ ಧರಿಸಬೇಕು.

ಕಾಲಿನ ಆಭರಣಗಳು

ಪಾಗಡ, ಕಾಪಿಲ್ಲಿ, ಕಾಸರ, ಗಗ್ಗರ ಮುಂತಾದವುಗಳು ಮುಖ್ಯವಾದ ಕಾಲಿನ ಆಭರಣಗಳು. ಇವೆಲ್ಲಾ ಬೆಳ್ಳಿಯ ಒಡವೆಗಳಾಗಿರುತ್ತವೆ. ಕಾಲುಗಳಿಗೆ ಚಿನ್ನದ ಆಭರಣಗಳನ್ನು ತೊಡಬಾರದೆಂಬ ಪದ್ಧತಿ ಕೊಡವರಲ್ಲಿರುವುದರಿಂದ ಬೆಳ್ಳಿಯ ಆಭರಣ ಬಳಕೆಯಲ್ಲಿದೆ.

ಪಾಗಡ : ಪಾದದ ಕಡಗವನ್ನು ಪಾಗಡ ಎನ್ನುತ್ತಾರೆ. ಇದನ್ನು ಮದುವಣಗಿತ್ತಿ ಮಾತ್ರ ತೊಡುತ್ತಾಳೆ.

ಕಾಪಿಲ್ಲಿ : ಕಾಲುಂಗರವೇ ಕಾಪಿಲ್ಲಿಯಾಗಿದೆ. ಕಾಪಿಲ್ಲಿ ಎಂದರೆ ಕಾಲುಂಗರ. ವಾಸ್ತವವಾಗಿ ಇದು ಕಾಸರದ ಒಂದು ಭಾಗ. ಕಾಸರದಲ್ಲಿ ಪಾದದ ಪ್ರತಿಯೊಂದು ಬೆರಳಿಗೂ ಒಂದೊಂದು ಕಾಪಿಲ್ಲಿಯಿರುತ್ತದೆ.

ಕಾಸರ : ಕಾಲಿನ ಸರವೇ ಕಾಸರ. ಕಾಲ್ಸರವೆಂದೂ ಬಳಕೆಯಲ್ಲಿದೆ. ಪಾದದ ಒಂದೊಂದು ಬೆರಳುಗಳಿಗೆ ಒಂದೊಂದು ಪಿಲ್ಲಿಯಿರುತ್ತದೆ. ಪ್ರತಿ ಪಿಲ್ಲಿಗೂ ಒಂದೊಂದು ಸಪೂರ ಸರಪಳಿಯನ್ನು ಜೋಡಿಸಲಾಗಿರುತ್ತದೆ. ಮುಂಗಾಲಿನ ಬೆರಳಿನ ಇವು ಒಂದಾಗಿ ಸೇರಿಸಲ್ಪಟ್ಟು ಅಲ್ಲಿಂದ ಎರಡು ಮೂರು ಸರಪಳಿಗಳಿಂದ ಪಾಗಡಕ್ಕೆ ಜೋಡಿಸಿರುತ್ತಾರೆ. ಈ ಆಭರಣವನ್ನು ವಧುವು ಧರಿಸುತ್ತಾಳೆ.

ಗಗ್ಗರ : ಕಾಲಿನ ಹರಡಿನ ಮೇಲೆ ಧರಿಸುವ ಆಭರಣ ಇದರ ಕೆಳ ಅಂಚಿನಲ್ಲಿ ಕಿರುಗೆಜ್ಜೆಗಳನ್ನು ಪೋಣಿಸಲಾಗುತ್ತದೆ. ಈ ಆಭರಣವನ್ನು ದಿನನಿತ್ಯವೂ ಧರಿಸಬಹುದು. ಸಾಧಾರಣವಾಗಿ ನಡುವಯಸ್ಸು ದಾಟಿದವರು ತೊಡುವುದಿಲ್ಲ. ಮದುಮಗಳನ್ನು ಶೃಂಗರಿಸುವಾಗ ಪಾಗಡವನ್ನು ಕೆಳಗೆ ಬರುವಂತೆ ತೊಡಿಸುತ್ತಾರೆ. ಕೆಲವರು ಪಾಗಡವನ್ನು ಧರಿಸಿದ್ದರೆ ಗಗ್ಗರವನ್ನು ತೊಡುವುದಿಲ್ಲ.

ಕಾಲುಬೆರಳಿನ ಆಭರಣಗಳು : ಕಾಸರದ ಪಿಲ್ಲಿ ಒಂದು ಕಾಲಿನ ಬೆರಳ ಆಭರಣ. ಅದರೆ ಇದು ಕಾಸರವನ್ನು ತೊಟ್ಟಾಗಲಷ್ಟೇ ತೊಡಲ್ಪಡುತ್ತದೆ.

ಕಾಲುಂಗರ : ವಿವಾಹಿತ ಸ್ತ್ರೀಯ ಲಾಂಛನವೇ ಕಾಲುಂಗುರ. ವಿವಾಹದ ಕುರುಹಾಗಿ ತೊಡಿಸಿದ ಕಾಲುಂಗುರವನ್ನು ಕಾಲಿನ ಇತರ ಆಭರಣಗಳನ್ನು ಧರಿಸದಿದ್ದರೂ ಹಾಕಬೇಕಾಗುತ್ತದೆ. ಕಾಲುಂಗರವು ವಿವಿಧ ರೂಪಗಳಲ್ಲಿರುತ್ತದೆ. ಸಾಮಾನ್ಯವಾಗಿ ದುಂಡಗಿನ ಉಂಗುರ, ಸ್ಪ್ರಿಂಗಿನಂತೆ ಎರಡು ಸುತ್ತಿನರಚನೆ ಅಥವಾ ಉಂಗುರದ ಮೇಲೆ ಪುಟ್ಟ ಹೂವನ್ನು ಜೋಡಿಸಿಟ್ಟಂತೆ ಇರುತ್ತದೆ.

ಬ್ರೋಚ್ : ಕೊಡವ ಪದ್ಧತಿಯಲ್ಲಿ ಸೀರೆಯುಡುವಾಗ ಬೆನ್ನ ಮೇಲಿಂದ ಸೆರಗನ್ನು ತಂದು ಬಲಭುಜದ ಮೇಲಿಂದಳಿಸಿ, ಎದೆಯುದ್ದಕ್ಕೆ ಹಾದು ಹೋಗಿರುವ ಸೀರೆಯ ಮೇಲಂಚಿಗೆ ಬಲ ಭಾಗದಲ್ಲಿ ಬಂದಿಸುವ ಆಭರಣ. ವಿವಿದ ರೂಪದ ಬಿಲ್ಲೆಯಾಕಾರದ ಈ ಒಡವೆಯ ಹಿಂಬದಿಯ ಪಿನ್ನಿನಿಂದ ಸೀರೆಯನ್ನು ಜೋಡಿಸಲಾಗುತ್ತದೆ. ಇದು ಬ್ರಿಟಿಷರಿಂದ ಸ್ವೀಕರಿಸಿದ ಆಭರಣ. ಇದಕ್ಕೂ ಮೊದಲು ಸೀರೆಯನ್ನು ಗಂಟುಹಾಕಿ ಜೋಡಿಸಲಾಗುತ್ತಿತ್ತು.

ಪುರುಷರ ಆಭರಣಗಳು

ಕೊಡವ ಪುರುಷರು ಸಾಧಾರಣವಾಗಿ ಕೈ ಬೆರಳಲ್ಲೊಂದು ಉಂಗುರವನ್ನು ಬಿಟ್ಟರೆ ಬೇರೆ ಆಭರಣವನ್ನು ಧರಿಸುವುದಿಲ್ಲ. ಮದುವಣಿಗನು ಧರಿಸಬೇಕಾದ ಕೆಲವು ಮುಖ್ಯವಾದ ಆಭರಣಗಳೆಂದರೆ ಕೊಕ್ಕೆತಾತಿ, ಪೊಮ್ಮಾಲೆ, ಕಟ್ಟಿಬಳೆ. ಮದುವೆ, ಪೂಜೆ ಮತ್ತಿತರ ಸಾಂಪ್ರದಾಯಿಕ ಸಂದರ್ಭಗಳಲ್ಲಿ ಕುಪ್ಸೆ (ನಿಲುವಂಗಿ) ತೊಟ್ಟು, ಸೊಂಟಕ್ಕೆ ಕಟ್ಟಿದ ಚೇಲೆ (ನಡುಪಟ್ಟಿಗೆ)ಗೆ ಸಿಕ್ಕಿಸುವ ಪೀಚೆಕತ್ತಿ ವಾಸ್ತವವಾಗಿ ಕ್ಷತ್ರಿಯ ಕೊಡವರ ಆಯುಧವಾಗಿದ್ದರೂ ಈಗ ಅದರಿಂದ ಯಾವುದೇ ಉಪಯೋಗವಿಲ್ಲದ್ದರಿಂದ ಆಭರಣವೆಂದೇ ಕರೆಯಬಹುದು. ಅದೇ ರೀತಿ ತೊಡಂಗ್ ಮತ್ತು ಒಡಿಕತ್ತಿಯೂ ಆಭರಣದ ಸಾಲಿಗೆ ಸೇರಿಸಬಹುದು. ಕೊಡವ ಪುರುಷರು ತಲೆಗೆ ಮಂಡೆತುಣಿ (ರುಮಾಲು) ಯನ್ನು ತೊಟ್ಟ ಬಳಿಕ ಯಾವ ತಲೆಯ ಆಭರಣವನ್ನು ಧರಿಸುವುದಿಲ್ಲ.

ಕಂಠಾಭರಣಗಳು : ಸ್ತ್ರೀಯರ ಆಭರಣದಂತಿರುವ ಈ ಚಂದ್ರಹಾರವನ್ನು ಮದುವೆಯಲ್ಲಿ ವರನು ತೊಡುತ್ತಾನೆ.

ಪೊಮ್ಮಾಲೆ : ಮದುವೆಯ ಹಿಂದಿನ ಸಂಜೆ 'ಊರ್‌ಕೊಡು'ವಂದು (ಚಪ್ಪರ) ಮದುಮಗನು ಸ್ನಾನ ಮಾಡಿ ಬಿಳಿಯ ಕುಪ್ಯ ಚೇಲೆ, ತಲೆಗೆ ಕೆಂಪು ಚೌಕುಳಿ, ವಸ್ತ್ರ, ಉಟ್ಟು, ಮನೆಯ ನಡುಮನೆಗೆ ತನ್ನ ಸಂಗಡಿಗ 'ಬೋಜಕಾರ' ನೊಡನೆ ಬರುವನು. ಅಲ್ಲಿನ ತೂಗು ದೀಪದೆದರು ನಿಂತು ಅದಕ್ಕೆ ಅಕ್ಷತೆ ಹಾಕಿ ನಮಸ್ಕರಿಸುವನು, ಅನಂತರ ತಾಯಿ, ತಂದೆ ಗುರು ಹಿರಿಯರ ಕಾಲ್ಮುಟ್ಟಿ ನಮಸ್ಕರಿಸುವನು, ಈ ಸಮಯದಲ್ಲಿ ನಾಲ್ವರು ಗಂಡಸರು ಚೆಂಬುದುಡಿ ಬಾರಿಸುತ್ತಾ ಈ ಮದುವೆಯ ಕುರಿತು ಲಾವಣಿ ಹಾಡುವರು. ಹುಡುಗನ ತಾಯಿ ಪೊಮ್ಮಾಲೆಯನ್ನು ತೊಡಿಸುವಳು. ಮದುವೆ ಮುಗಿದು, ನವದಂಪತಿಗಳು ಪ್ರಥಮವಾಗಿ ಹೆಣ್ಣಿನ ತವರಿಗೆ ಹೋಗುವವರೆಗೆ ಈ ಪೊಮ್ಮಾಲೆಯನ್ನು ಧರಿಸಬೇಕಾಗುತ್ತದೆ.

ಕಿವಿಯ ಆಭರಣಗಳು : ಪ್ರತಿಯೊಬ್ಬ ಕೊಡವ ಪುರುಷನು ಕಿವಿ ಚುಚ್ಚಬೇಕೆಂಬ ನಿಯಮ ಹಿಂದೆ ಇತ್ತು. ಪ್ರತಿಯೊಬ್ಬ ಪುರುಷನು ಕಿವಿಗಳಲ್ಲಿ ಕಡುಕುಗಳನ್ನು ಧರಿಸುತ್ತಿದ್ದನು. ಹಿಂದೆ ಪುರುಷರಿಗೆ 'ಕೆಮಿಕುತ್ತಿಮಂಗಲ' ಎಂಬ ಕಿವಿ ಚುಚ್ಚುವ ಕಾರ್ಯದ ಉಪನಯನ ಸಮಾರಂಭವಿರುತ್ತಿತ್ತು. ಇದರಲ್ಲಿ ಮಿಂದು ಮಡಿಯುಟ್ಟು ಬಂದ ಹುಡುಗನ ಕಿವಿಗಳ ತಟ್ಟು (ಪಾಲೆ)ಗಳನ್ನು ಚುಚ್ಚಿಸಿ ರಂಧ್ರ ಮಾಡಿ ಚಿನ್ನದ 'ಕಡುಕ'ನ್ನು ಧರಿಸುತ್ತಿದ್ದರು. ಕಿವಿ ಚುಚ್ಚಿಸಿ ಕೊಳ್ಳದವನು ಮದುವೆಯಾಗುವಂತಿರಲಿಲ್ಲ.

ಮದುವಣಿಗನು ಕಿವಿಗಳಲ್ಲಿ ಕಡುಕುಗಳನ್ನು ತೊಡಲೇಬೇಕು. ಈಚೆಗೆ ಕಿವಿಗಳಲ್ಲಿ ರಂಧ್ರಗಳಿಲ್ಲದ ಕಾರಣ, U ಆಕಾರದ ಸಿಕ್ಕಿಸಿಕೊಳ್ಳಬಹುದಾದ ಕೃತಕ ಆಭರಣವನ್ನು ತೊಡುತ್ತಾರೆ.

ಪುರುಷರ ಕೈ ಆಭರಣಗಳು: ದಿನನಿತ್ಯದ ವ್ಯವಹಾರದಲ್ಲಿ ಕೊಡುವ ಪುರುಷರು ಕೈಗಳಲ್ಲಿ ಯಾವೊಂದು ಆಭರಣವನ್ನೂ ಧರಿಸುವುದಿಲ್ಲ. ಆದರೆ ಮದುವಣಿಗಿತ್ತಿಯ ಎರಡೂ ಕೈಗಳಲ್ಲಿ ಕಟ್ಟಿ ಬಳೆಗಳನ್ನು ಧರಿಸಿರುತ್ತಾಳೆ. ಕೈಯ ಬೆರಳಲ್ಲಿ ಯಾವುದಾದರೊಂದು ಉಂಗುರವಿರುವುದು ಸಾಮಾನ್ಯ. ಆದರೆ ನವವಿವಾಹಿತರು ಮದುವೆಯುಂಗುರವನ್ನು ಧರಿಸುವ ಸಂಪ್ರದಾಯವಿದೆ.

ಕಟ್ಟಿಬಳೆ : 'ಗಟ್ಟಿ' ಎನ್ನುವುದಕ್ಕೆ ಕೊಡವ ಭಾಷೆಯಲ್ಲಿ 'ಕಟ್ಟಿ' ಎನ್ನುವರು. ಈ ಗಟ್ಟಿಬಳೆ ಎನ್ನುವುದು 'ಕಟ್ಟಿಬಳೆ' ಎಂದಾಗಿದೆ. ಇದು ಚಿನ್ನದ ಕೈಕಡಗ. ಕಿರುಬೆರಳಷ್ಟು ದಪ್ಪನಾದ ಈ ಬಳೆಯನ್ನು ಮದುಮಗನು ಕೈಗೆ ತೊಡುತ್ತಾನೆ. ಇತ್ತೀಚಿಗೆ ಕಟ್ಟಿ ಬಳೆಯಲ್ಲಿ ಅರಗನ್ನು ಚಿನ್ನದೊಂದಿಗೆ ಹೊದಿಸಿ ತಯಾರಿಸುತ್ತಾರೆ. ಮದುವಣಿಗ ಈ ಆಭರಣವನ್ನು ತೊಡಲೇಬೇಕು. ಕ್ಷಾತ್ರ ಪದ್ಧತಿಯಲ್ಲಿ ವಿವಾಹವಾಗುವ ಕೊಡವ ಯುವಕನು ತಾನು ಮೆಚ್ಚಿದ ಹೆಣ್ಣನ್ನು ಜಯಿಸಿ ತರುವುದರಿಂದ ಈ ಆಭರಣ ಅವನ ಶೌರ್ಯದ ಸಂಕೇತ. ಮಹತ್ಕಾರ್ಯವೊಂದಕ್ಕೆ ಕಂಕಣ ತೊಡುವುದೇ ಈ ಕಟ್ಟಿ ಬಳೆಯನ್ನು ತೊಡುವುದರ ಸಂಕೇತವೆನ್ನಬಹುದು.

ವೀರ-ಸೇನಾನಿಗಳು ಈ ಬಳೆಯನ್ನು ನಿತ್ಯ ಧರಿಸುತ್ತಿದ್ದರು. ಬೇಟೆ ಯಾಡುವುದು ಮಾನ್ಯವಾಗಿದ್ದ ಕಾಲದಲ್ಲಿ ಹುಲಿ ಬೇಟೆಯಾಡಿ 'ನರಿ ಮಂಗಲ' (ಹುಲಿ ಮದುವೆ) ಮಾಡಿಕೊಳ್ಳುವಾಗಲೂ ಈ ಬಳೆಯನ್ನು ತೊಡುತ್ತಿದ್ದರು.

ಪುರುಷರ ಸೊಂಟದ ಆಭರಣಗಳು : ಸೊಂಟಕ್ಕೆ ಕಟ್ಟಿಕೊಳ್ಳುವ ಚೇಲೆ (ಸಾಂಪ್ರದಾಯಿಕ ಉಡುಪಾದ ಕುಪ್ಯವನ್ನು ಧರಿಸಿದಾಗ) ಯ ಸುತ್ತಲೂ ಕಟ್ಟಿಕೊಳ್ಳುವ ತೊಡಂಗ್, ಅದಕ್ಕೆ ಸಿಕ್ಕಿಸಿಕೊಳ್ಳುವ ಒಡಿಕತ್ತಿ, ಚೇಲೆಗೆ ಸಿಕ್ಕಿಸುವ ಪೀಚೆ ಕತ್ತಿ, ಇತ್ಯಾದಿಗಳು ವಾಸ್ತವವಾಗಿ ಆಪ್ತ ಆಯುಧಗಳು. ಒಡಿಕತ್ತಿಯನ್ನು ಮದುಮಗ ಮಾತ್ರ ತೊಡುತ್ತಾನೆ.

ಪೀಚೆಕತ್ತಿ : ಇದಕ್ಕೆ 'ಉಮ್ಮತ್‌ಕತ್ತಿ' ಹಾಗೂ 'ಚಳಕತ್ತಿ' ಎಂಬ ಹೆಸರುಗಳು ಕೊಡವ ಭಾಷೆಯಲ್ಲಿವೆ. ಇದು ಚಿನ್ನ ಮತ್ತು ಬೆಳ್ಳಿಯ ತಗಡಿನ ಹೊದಿಕೆಯಿರುವ ರತ್ನ ಖಚಿತ ಒರೆಯಿರುವ ಗೇಣುದ್ದದ ಕತ್ತಿ. ಇದರ ಹಿಡಿಕೆಯೂ ರತ್ನಖಚಿತ ವಾಗಿರುತ್ತದೆ. ಇದರ ಒರೆಯ ಮೇಲಂಚಿಗೆ ಜೋಡಿಸಲಾದ ಅರೆ ಮಾರುದ್ದದ

ಕಲಾತ್ಮಕವಾದ ಬೆಳ್ಳಿಯ ಜೋಡಿ ಸರಪಳಿ ಇರುತ್ತದೆ. ಇದರ ಕೊನೆಯಲ್ಲಿರುವ ಕೊಕ್ಕೆಯನ್ನು ಸೊಂಟಕ್ಕೆ ಕಟ್ಟಲಾದ ಚೇಲೆಯ ಬೆನ್ನ ಭಾಗಕ್ಕೆ ಸಿಕ್ಕಿಸಲಾಗುತ್ತದೆ.

ಒಡಿಕತ್ತಿ : ಉಡಿಯಲ್ಲಿ ಧರಿಸುವ ಕತ್ತಿಯಾದುದರಿಂದ ಉಡಿಕತ್ತಿ ಒಡಿಕತ್ತಿ (ವಡಿಕತ್ತಿ) ಎಂಬ ಹೆಸರನ್ನು ಪಡೆದಿರಬಹುದು. ಹೊಡೆಯಲು ಬಳಸುವ ಕತ್ತಿ–ಹೊಡೆಕತ್ತಿ–ಒಡಿಕತ್ತಿಯಾಗಿರಲೂ ಬಹುದು. ಅಂಗೈಯಗಲದ ಅಲಗಿರುವ ಕತ್ತಿಯಾಗಿದ್ದು ಹಿಡಿ ಬಲವಾಗಿರುತ್ತದೆ.. ಇದು ಆಭರಣಕ್ಕಿಂತಲೂ ಆಯುಧದಂತೆ ಕಾಣುತ್ತದೆ. ಮದುವೆಯಲ್ಲಿ ಬಾಳೆ ಬಿರುದನ್ನು ಸ್ವೀಕರಿಸುವಾಗ ಬಾಳೆಯ ದಿಂಡುಗಳನ್ನು ಕತ್ತರಿಸಲು ಒಡಿಕತ್ತಿಯನ್ನು ಉಪಯೋಗಿಸುತ್ತಾರೆ. ಒಡಿಕತ್ತಿಯನ್ನು ಹಿಡಿದು ಸಾಂದರ್ಭಿಕ ಸಮಯದಲ್ಲಿ ನೃತ್ಯವನ್ನು ಮಾಡುತ್ತಾರೆ.

ತೊಡಂಗ್ : ತೊಡಂಗ್ ಎಂದರೆ 'ಸಿಕ್ಕಿಸು', 'ತೊಡವು' ಎಂದರೆ ಒಡವೆ ಎಂಬ ಅರ್ಥವಿದೆ. ತೊಡಂಗ್‌ನ್ನು ಉಕ್ಕಿನಿಂದ ತಯಾರಿಸಲಾಗಿದೆ. ವಿಶೇಷವಾದ ಒರೆ ಸೊಂಟದ ಸುತ್ತಲಾಗಿ ಸರಪಳಿಯಿಂದ ಬಂಧಿಸಲ್ಪಟ್ಟು, ಹಿಂಭಾಗದಲ್ಲಿ ಒಡಿಕತ್ತಿಯನ್ನು ಸಿಕ್ಕಿಸುವಂತಿದೆ. ತೊಡಂಗ್ ಮತ್ತು ಒಡಿಕತ್ತಿ ಮದುವಣಿಗನು ಧರಿಸಲೇಬೇಕಾದ ಪ್ರಮುಖ ಸಾಧನಗಳಾಗಿವೆ. (ಛಾಯಾಚಿತ್ರವನ್ನು ಅನುಬಂಧ–೦೬ ರಲ್ಲಿ ನೀಡಲಾಗಿದೆ).

ಇತರ ಆಭರಣಗಳು – ಗೆಜ್ಜೆತಂಡ್ : ಆಭರಣವಲ್ಲದಿದ್ದರೂ ವಿಶೇಷ ಪುರುಷರ ಲಾಂಛನ 'ತಂಡ್' ಎಂದರೆ ದಂಡ. ಗೆಜ್ಜೆ ಕಟ್ಟಿದ ದಂಡ ಸುಮಾರು ಮಾರುದ್ದದ ಕರಿಬೀಟೆ ಮರದಲ್ಲಿ ಸುಂದರವಾಗಿ ಕೆತ್ತನೆಯ ಕೆಲಸ ಮಾಡಲಾಗಿರುವ ಕೋಲು ಉದ್ದಕ್ಕೂ ಗೇಣಿ ನಂತರದಲ್ಲಿ ಬೆಳ್ಳಿಯ/ಚಿನ್ನದ ಬೆರಳಗಲದ ತಗಡನ್ನು ಕಟ್ಟಿರುತ್ತಾರೆ. ಇದಕ್ಕೆ ಬೆಳ್ಳಿಯ ಅಥವಾ ಚಿನ್ನದ ಕಿರುಗೆಜ್ಜೆಗಳನ್ನು ಸಿಕ್ಕಿಸುತ್ತಾರೆ. ಹಿಂದಿನ ಕಾಲದಲ್ಲಿ ಊರ ಹಿರಿಯರು, ದೇವಸ್ಥಾನದ, 'ತಕ್ಕ' (ಮುಖ್ಯಸ್ಥ)ರು, ಹುಲಿ ಮದುವೆ ಮಾಡಿಸಿಕೊಂಡವರು, ಗೆಜ್ಜೆ ತಂಡನ್ನು ಬಳಸುತಿದ್ದರು. ಈಗ ಸಾಮಾನ್ಯವಾಗಿ ಮದುಮಗನು ಮಾತ್ರ ಹಿಡಿದುಕೊಳ್ಳುತ್ತಾನೆ.

ಜನಪದ ಗೀತೆಗಳಲ್ಲಿ ಆಭರಣಗಳು : ಮದುವೆಯ ಸಂದರ್ಭದಲ್ಲಿ ನಾಲ್ವರು ಗಂಡಸರು 'ಚೆಂಬುದುಡಿ' (ತಾಮ್ರದದುಡಿ) ಬಾರಿಸುತ್ತಾ ಲಾವಣಿಗಳನ್ನು ಹಾಡುವರು. ಇವುಗಳಿಗೆ 'ಮಂಗಲಪಾಟ್' (ಮದುವೆಹಾಡು) ಎನ್ನುವರು. ಇವುಗಳಲ್ಲಿ ಮದುಮಗನು ಮದುವೆಯಾಗ ಬಯಸಿದ ಹೆಣ್ಣನ್ನು ವರ್ಣಿಸಿ ಈ ಹಾಡನ್ನು ಹಾಡಲಾಗುವುದು. ಅದರಲ್ಲಿ ಮದುಮಗ ಹಾಗೂ ಮದುಮಗಳ ಆಭರಣಗಳ ಬಗ್ಗೆಯೂ ಹಾಡುತ್ತಾರೆ.

ಮದುಮಗಳ ಆಭರಣಗಳನ್ನು ಕುರಿತು –

ಮದುವಣಗಿತ್ತಿಯ ಸೌಂದರ್ಯವನ್ನೊಮ್ಮೆ ನೋಡು ....
ಕಣ್ಣಿಗೆ ಒಪ್ಪುವ ಕೊಕ್ಕೆ ತಾತಿಯೂ
ಜೋಮಾಲೆ, ಕರಿಮಣಿ, ಮುತ್ತಿನ ಸರವೂ
ಕೈ ತುಂಬ ಕಾಣಿಸುವ ಜೋಡಿ ಕಡಗ,
ಕಿವಿಗಳಲ್ಲಿ ಹೊಳೆಯುವ ವಜ್ರದೋಲೆ,

ನಾಗಜಡೆಯಲಿಹ ಜಡೆಬಿಲ್ಲೆಯು ನೋಡು;
ಕೈಸರ, ಕಾಲ್ಸರಗಳ ಧರಿಸಿದ ಚೆಂದ. ಎಂದು ಹಾಡಿದರೆ

ಮದುಮಗನ ಆಭರಣಗಳನ್ನು ಕುರಿತು

ಬಳ್ಳಿಯಂತಹ ನಡುವಿಗೆ
ಕನ್ನಡಿ (ಯಂತೆ ಹೊಳೆಯುವ) ತೊಡಂಗನ್ನು ಚೆನ್ನಾಗಿಕಟ್ಟಿ,
ಒಡಿಕತ್ತಿ, ಪೀಚೆಕತ್ತಿಗಳನ್ನು ಯುಕ್ತವಾಗಿ ಧರಿಸಿ,
ಒಳ್ಳೆಯ ಕಟ್ಟಿ ಬಳೆಗಳನ್ನು ಎರಡು ಕೈಗಳಿಗೇರಿಸಿ,
ಸುಂದರ ಬೆರಳಿಗೆ ಚಿನ್ನದುಂಗುರ ತೊಡಿಸಿ,
ನೀಳವಾದ ಕೊರಳಿಗೆ ಏಳು ತೊಲದ ಮೊಮ್ಮಾಲೆ (ಹಾಕಿ)
ಗೆಜ್ಜೆತಂಡನ್ನು ಕೈಯಲ್ಲಿ ಹಿಡಿದು .... ಎಂದೂ ಮುಂತಾಗಿ ಹಾಡುವರು.

ಆಭರಣಗಳಿಗೆ ಸಂಬಂಧಿಸಿದ ಗಾದೆಗಳು

೧. ಸಾಕ್ಷಿ ಚತ್ತತ್, ಓಲೆ ಮುತ್ತತ್
(ಸಾಕ್ಷಿ ಸತ್ತ, ಓಲೆ ತನಗಾಯಿತು)
೨. ಸಾಲ ಮಾಡಿತ್ ಓಲೆ ಮಾಡಿತ, ಓಲೆ ಮಾರಿತೊ ಸಾಲ ತೀಂದ್‌ಲೆ
(ಸಾಲ ಮಾಡಿ ಓಲೆ ಮಾಡಿಸಿ, ಓಲೆ ಮಾರಿದರೂ ಸಾಲ ತೀರಲಿಲ್ಲ)
೩. ಕಡ್‌ಕಟ್ಟ, ಮೂಪಂಗ್ ದುಡಿಕೊಟ್ಟ್ ಕೇಳ
(ಕಡಕು ಧರಿಸಿದ ಮುಂದಾಳಿಗೆ (ಹಿರಿಯನಿಗೆ) ದುಡಿಯಶಬ್ದ ಕೇಳಿಸದು)
'ಕರಪಕ್ ಉಳುವ ಇಡ್‌ವಕ್ ಮಡಿಯ
ಚಿಂಗಾರ ಉಳ್ಳವ ಪೊರಡುವಕ್ ಮಡಿಯ
(ಹಾಲು) ಕರೆಯಲು ಇರುವವಳು ಇಕ್ಕಲು ಹಿಂಜರಿಯವಳು
ಒಡವೆಗಳುಳ್ಳವಳು ಶೃಂಗರಿಸಿಕೊಳ್ಳಲು ಹಿಂಜರಿಯಳು.

ಕೊಡವರು ಇಂತಹ ವಂಶ ಪಾರಂಪರಿಕ ಉಡುಗೆ ತೊಡುಗೆಗಳಿಂದಾಗಿ ತಮ್ಮದೇ ಆದ ವೈಶಿಷ್ಟ್ಯತೆ ಹೊಂದಿದ್ದಾರೆ. ಇತರ ಸಂದರ್ಭಗಳಲ್ಲಿ ಆಧುನಿಕತೆಯ ಸೊಗಡಿಗೆ ಮಾರುಹೋಗಿದ್ದರೂ ಸಾಂಪ್ರದಾಯಿಕ ಮದುವೆ, ಹಬ್ಬಗಳು ಇತರ ಸಂಸ್ಕಾರಗಳಲ್ಲಿ ಹಳೆಯ ಕಾಲದ ಉಡುಗೆ ತೊಡುಗೆಯನ್ನು ಧರಿಸಿ ಇಂದಿಗೂ ಪ್ರತ್ಯೇಕತೆಯನ್ನು ಕಾಯ್ದುಕೊಂಡು ಸಂಸ್ಕೃತಿಯನ್ನು ಬೆಳೆಸಿ ಉಳಿಸುವಲ್ಲಿ ಇತರರಿಗೆ ಮಾದರಿಯಾಗಿದ್ದಾರೆ.

ಆಹಾರ ಪದ್ಧತಿ : ಮನಷ್ಯನ ಜೀವನಕ್ಕೆ ಗಾಳಿ ನೀರು ಆಹಾರ ಅತ್ಯಂತ ಅವಶ್ಯಕವಾದದ್ದು. ಆದಿಮಾನವ ಗೆಡ್ಡೆಗೆಣಸುಗಳನ್ನು ತಿಂದು ಹಸಿವನ್ನು ನೀಗಿಸಿಕೊಳ್ಳುತ್ತಿದ್ದ. ಆಹಾರವಿಲ್ಲದೆ ಜೀವಜಗತ್ತು ಬದುಕಲಾರದು. ಮಾನವ ಕಾಲಕ್ರಮೇಣ ಕೃಷಿಯನ್ನು ಕಲಿತು ಹಲವಾರು ರೀತಿಯ ಧಾನ್ಯಗಳನ್ನು ಬೆಳೆಯಲು ತೊಡಗಿದನು. ದವಸ ಧಾನ್ಯಗಳನ್ನು ಬೆಳೆದು ನಾಲಿಗೆಗೆ ಬೇಕಾದ ರುಚಿಯನ್ನು ಹುಡುಕಿದ ಮಾನವ ನಾಗರಿಕತೆಯ ವಿಕಾಸದೊಂದಿಗೆ ತನ್ನ ಆಹಾರದ

ರುಚಿಯಲ್ಲಿಯೂ ವೈವಿಧ್ಯತೆಯನ್ನು ಹುಡುಕ ತೊಡಗಿದ. ಮನುಷ್ಯ ಬೆಂಕಿಯ ಉಗಮವನ್ನು ಕಂಡಾಗಲೇ ಅಡುಗೆಯ ಆವಿರ್ಭಾವವಾಯಿತೆನ್ನಬಹುದು. 'ಅಡು' ಎಂಬ ಧಾತುವಿನಿಂದ 'ಅಡುಗೆ' ಎಂಬ ಶಬ್ದ ನಿಷ್ಪತ್ತಿಯಾಗಿದೆ. ಅಡು ಎಂದರೆ ಬೇಯಿಸು ಎಂದರ್ಥ. ಅಡುಗೆಯ ರುಚಿ, ರಹಸ್ಯವಿರುವುದು ಬೇಯಿಸುವಿಕೆಯಲ್ಲಿಯೇ ವೈ.ಸಿ ಭಾನುಮತಿ ಅವರ ಮಾತಿನಲ್ಲಿ ಹೇಳುವುದಾದರೆ, "ಚೆನ್ನಾಗಿ ಮಾಡಿದ ಅಡುಗೆ, ತೃಪ್ತಿ ತರುವ ಊಟ ಬಾಳಲ್ಲಿ ತುಂಬಾ ಸುಖ ತರುವಂಥವು. ಮಾಡಿದವರಿಗೆ ಹೆಸರು ನಾಲ್ಕು ಜನಕ್ಕೆ ಸಂತೋಷಪಡಿಸಿದರು ಎಂದೂ ತಿಂದವರಿಗೆ ಆ ದಿನದ ಪುಣ್ಯ ಲಭಿಸಿತು ಎಂದು ತುಷ್ಟಿ"[೨೮]

"ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ" ಕೊಡವರು ಆಹಾರವನ್ನು ಆರೋಗ್ಯದ ಹಿನ್ನೆಲೆಯಲ್ಲಿ ತಯಾರಿಸುತಿದ್ದರು. 'ಊಟ ತನ್ನಿಚ್ಚೆ, ನೋಟ ಪರರಿಚ್ಚೆ' ಎಂಬ ಗಾದೆಯನ್ನು ನೋಡಿದಾಗ ನಮಗೆ ಬೇಕಾದ ಆಹಾರವನ್ನು ಅಗತ್ಯವಿರುವಷ್ಟು ಮಾತ್ರ ಸ್ವೀಕರಿಸಬೇಕೆಂಬ ಅರ್ಥವಿದೆ. ರುಚಿಯಾದ ಅಡುಗೆ ತಯಾರಿಸುವುದು ಹೇಗೆ ಒಂದು ಕಲೆಯೋ ಹಾಗೆಯೇ ಮಾಡಿದ ಅಡುಗೆಯ ರುಚಿ ಹೇಳುವುದು ಒಂದು ಕಲೆ. "ಭೋಜನಮಂ ಮಾಡಬಹುದು, ಸ್ವಾದುವನರಿಯಲರಿದು ಬತ್ತೀಸ ಪುತ್ತಳಿ ಕಥೆಯಲ್ಲಿ ರುಚಿ ನೋಡುವ ಸಾಮರ್ಥ್ಯ ಎಲ್ಲರಿಗೂ ದಕ್ಕುವಂಥದಲ್ಲ ಎಂಬ ಸೂಚನೆಯಿದೆ."[೨೯]

ಪ್ರತಿಯೊಂದು ದೇಶದ ಸಂಸ್ಕೃತಿಯು ತನ್ನದೇ ಆದ ಅಡುಗೆ ಪದ್ಧತಿಯನ್ನು ಹೊಂದಿದೆ. ಭೌಗೋಳಿಕ ಪರಿಸರ, ಹವಾಗುಣ, ಬೆಳೆಯುವ ಬೆಳೆಗಳು ಅಡುಗೆಯ ವೈವಿಧ್ಯತೆಗೆ ಕಾರಣವಾಗಿವೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಅಡುಗೆಯ ಉಲ್ಲೇಖಗಳ ಹಾಗೂ ಸೂಪಶಾಸ್ತ್ರ ಗ್ರಂಥಗಳು ದೊರೆಯುತ್ತವೆ. ಕನ್ನಡ ಆದಿ ಕಾವ್ಯ ಪಂಪಭಾರತದಲ್ಲಿಯೂ ಚಕ್ಕಣ ಎಂಬ ಅಡುಗೆಯ ಪ್ರಸ್ತಾಪವಿದೆ. ಇದು ಹುರಿದಮಾಂಸಕ್ಕೆ ಸಂವಾದಿಪದ. ಚಾವುಂಡರಾಯನ 'ಲೋಕೋಪಕಾರ' ಗ್ರಂಥದ ಎಂಟನೆಯ ಅಧ್ಯಾಯವು ಅಡುಗೆಗೆಂದೇ ಮೀಸಲಾಗಿದೆ. ಇಲ್ಲಿ ಅನ್ನವನ್ನು ಹಲವು ದಿನಗಳವರೆಗೆ ಕೆಡದಂತೆ ಇಡುವ ಕ್ರಮ, ಇಡ್ಡಲಿ ಹಣ್ಣುಗಳಿಂದ ರಸ ತೆಗೆಯುವುದು, ತರಕಾರಿಗಳ ಕಹಿ ತೆಗೆಯುವ ಸಂಗತಿಗಳಿವೆ.

ವಡ್ಡಾರಾಧನೆಯಲ್ಲಿ 'ಇಡ್ಡಲಿ' ಮುಂಡಗೆಯಂತಹ ಜನಪದ ಅಡುಗೆಯ ವಿಷಯ ಪ್ರಸ್ತಾಪಿಸಲ್ಪಟ್ಟಿದೆ. ಮಂಗರಸನ ಸೂಪಶಾಸ್ತ್ರ ಗ್ರಂಥವು ಅಡುಗೆಗೆ ಸಂಬಂಧಿಸಿದ ಪ್ರಥಮ ಸ್ವತಂತ್ರ ಕೃತಿ.ಇದರಲ್ಲಿ ಆರು ಅಧ್ಯಾಯಗಳಲ್ಲಿ ವಸ್ತುವನ್ನು ನಿರ್ವಹಿಸಲಾಗಿದೆ. ಪದ್ಮರಾಜ ಪುರಾಣದಲ್ಲಿ 'ಪರಮಾನ್ನ' ವನ್ನು ಪಾಯಸ ಎಂದು ಕರೆಯಲಾಗಿದೆ. ಬಸವಣ್ಣನವರ ವಚನದಲ್ಲಿ ಪರಡಿ ಪಾಯಸದ ಉಲ್ಲೇಖವಿದೆ.

"ಆಹಾರ ವ್ಯವಸ್ಥೆಗೂ ಜನರ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗೂ ನೇರವಾದ ಸಬಂಧವಿದೆ. ಜನರ ಆರ್ಥಿಕ ಶಕ್ತಿ ನಿರ್ದಿಷ್ಟ ರೀತಿಯ ಆಹಾರ ಪದ್ಧತಿಯನ್ನು ರೂಢಿಸಿಕೊಳ್ಳಲು ಕಾರಣವಾಗುತ್ತದೆ. ಮನುಷ್ಯರು ಬದುಕುವ

ಪರಿಸರ ಕೂಡ ಆಹಾರ ವ್ಯವಸ್ಥೆಯ ರೂಪುಗೊಳ್ಳುವಿಕೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ನಿಸರ್ಗದ ಆವರಣವು ಅಂತಹ ಪರಿಸರದಲ್ಲಿ ದೊರೆಯುವ ಉತ್ಪನ್ನಗಳನ್ನು ಆಹಾರವನ್ನಾಗಿ ಬಳಸಲು ಕಾರಣವಾಗಿದೆ".[೨೦] ಆಹಾರ ವ್ಯವಸ್ಥೆಯಲ್ಲಿ ದೈನಂದಿನ ಆಹಾರ ಪ್ರಮುಖ ಘಟಕ ಯಾವ ಆಹಾರವನ್ನು ಯಾವ ಋತುವಿನಲ್ಲಿ ಸೇವಿಸಬೇಕು ಎನ್ನುವುದು ಕೂಡ ಆಹಾರ ಸಂಸ್ಕೃತಿಯ ಪ್ರಮುಖ ಅಂಗವಾಗಿದೆ.

ಕೊಡವರು ಊಟೋಪಚಾರಗಳಲ್ಲಿ ವಿಶಿಷ್ಟತೆಯನ್ನು ಕಾಯ್ದುಕೊಂಡಿದ್ದಾರೆ. 'ಹಸಿದು ಬಂದವರಿಗೆ ದಣಿವಾರಿಸು' ಎಂಬಂತೆ ಉಪಚಾರಿಕೆಯಲ್ಲೂ ಅವರದು ಎತ್ತಿದ ಕೈ. ಪ್ರಕೃತಿಯಲ್ಲಿ ಸಿಗುವ ನಾರುಬೇರು, ಗೆಡ್ಡೆಗೆಣಸು, ತೊಗಟೆ, ಹಣ್ಣುಗಳಿಂದ ಹಿಡಿದು ಸಸ್ಯಗಳಿಂದ ದೊರೆಯುವ ಧಾನ್ಯಗಳು, ಕಾಳುಗಳು, ಸೊಪ್ಪು, ತರಕಾರಿಗಳನ್ನು ತಾವೇ ಬೆಳೆದು ಉಪಯೋಗಿಸುತ್ತಾರೆ. ಕೊಡವರಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದಿರುವ 'ಪಂದಿಕರಿ, ಅಕ್ಕಿರೊಟ್ಟಿ, ಕಡುಂಬುಟ್ಟ್' (ಹಂದಿಮಾಂಸ ಸಾರು, ಅಕ್ಕಿರೊಟ್ಟಿ, ಕಡುಂಬಿಟ್ಟು) ನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ.

"ಮಾಂಸದ ಅಡುಗೆ ಬಹಳ ಹಿಂದಿನಿಂದಲೂ ವಿಶೇಷ ಸ್ಥಾನವನ್ನು ಪಡೆದಿದೆ. "ಕುಮಾರವ್ಯಾಸನ ಕರ್ನಾಟ ಭಾರತ ಕಥಾ ಮಂಜರಿಯಲ್ಲಿ ದ್ರೌಪದಿಯು ಭೀಮನಿದ್ದ ಪಾಕಶಾಲೆಗೆ ಬಂದಾಗ ಅಲ್ಲಿ ವಿವಿಧ ಪ್ರಾಣಿಗಳ ಮಾಂಸದ ರಾಶಿಯನ್ನು ದ್ರೌಪದಿ ಕಾಣುವ ಚಿತ್ರ ಮತ್ತು ಅವುಗಳಿಂದ ತಯಾರಿಸಿದ ಭಕ್ಷ್ಯಗಳು ಕಂಡುಬರುತ್ತವೆ".[೨೧] ಭೀಮಕವಿಯ 'ಬಸವ ಪುರಾಣ'ದಲ್ಲಿ ಮಾಂಸದ ಪ್ರಸ್ತಾಪವಿದೆ.

"ಇತ್ತ ಕೇಳ್ವೆ ಸಾಮವೇದಿಯು
ಸತ್ತ ಕರುವು ಮಾಡಿ ನೀಡಲು
ತುತ್ತು ತುತ್ತಿಗೆ ಸವಿದು ತಣಿಯದೆ ಕಾಲಿ ಕಾಲಮ್ಮೆ
ಮತ್ತು ಮಾವಿನ ಹಣ್ಣನೀಯಲು
ಮತ್ತೆ ಮೇಲಿದಾ ವೀರ, ಬೋಳವೆಯಿತ್ತ ಹುಗ್ಗಿಯನ್ನುಂಟು"[೨೨]

ಈ ಮೇಲಿನ ಪದ್ಯದಲ್ಲಿ ಸತ್ತ ಕರುವನ್ನು ಅಡುಗೆ ಮಾಡಿ ಬಡಿಸಿದ ಚಿತ್ರಣವನ್ನು ಕಾಣಬಹುದು. ಭಕ್ಷ್ಯಬೋಜನಗಳ ಬಗ್ಗೆ ಲಭ್ಯವಿರುವ ಆಧಾರಗಳನ್ನು ಹೇಳುವುದಾದರೆ, ರಾಜವಂಶದವರು, ಕ್ಷತ್ರಿಯರು, ಪುರೋಹಿತ ವರ್ಗದವರು ಮಾಂಸವನ್ನು ಸೇವಿಸುತ್ತಿದ್ದದ್ದು ಈ ಉಲ್ಲೇಖದಿಂದ ಖಚಿತವಾಗುತ್ತದೆ.

ಕೊಡವರ ಆಹಾರ ಪದ್ಧತಿ ಕೂಡ ಅಧ್ಯಯನ ಯೋಗ್ಯ. ಇವರ ಅಡುಗೆಯನ್ನು ಮಾಂಸಾಹಾರದ ಅಡುಗೆ, ಸಸ್ಯಾಹಾರದ ಅಡುಗೆ, ದಿನನಿತ್ಯದ ಅಡುಗೆ, ವಿಶೇಷ ಸಾಂದರ್ಭಿಕ ಅಡುಗೆ ಹಾಗೂ ಹಣ್ಣಿನ ಅಡುಗೆ ಎಂದೂ ವಿಂಗಡಿಸಲಾಗಿದೆ.

ಕೊಡವರು ಮದುವೆ, ಮರಣ, ತಿಥಿ ಮುಂತಾದ ಕಾರ್ಯಗಳಲ್ಲಿ ವಂಶಪಾರಂಪರ್ಯವಾಗಿ ಬಂದ ವಿಶೇಷ ಅಡುಗೆಗಳಲ್ಲಿ ಇಂದಿಗೂ ವೈಶಿಷ್ಟ್ಯತೆಯನ್ನು

ಕಾಪಾಡಿಕೊಂಡು ಬರುತ್ತಿದ್ದಾರೆ. ಅನೇಕ ಆಧುನಿಕ ಅಡುಗೆಗಳು ಲಗ್ಗೆಯಿಟ್ಟರೂ ಸಹ ಸಾಂಪ್ರದಾಯಿಕ ಅಡುಗೆಗಳನ್ನು ಉಳಿಸಿಕೊಂಡಿದ್ದಾರೆ.

ಮಾಂಸಾಹಾರದ ಅಡುಗೆ

ಹಂದಿಮಾಂಸದ ಸಾರು (ಪಂದಿಕರಿ)

ಕೊಡವರಿಗೆ ಹಂದಿಮಾಂಸ ಬಲು ಪ್ರಿಯವಾದದ್ದು. ಇದರಿಂದ ಸಾರು, ಉಪ್ಪಿನಕಾಯಿ, ಗೊಜ್ಜು ಮಂತಾದವುಗಳನ್ನು ತಯಾರಿಸುತ್ತಾರೆ. ಮದುವೆ ತಿಥಿ, ನಾಮಕರಣ, ಕೈಲ್‌ಮೂಹೂರ್ತ ಹಬ್ಬಗಳಲ್ಲಿ ಮತ್ತು ಹಿರಿಯರಿಗೆ ಎಡೆ (ಮೀದಿ) ಹಾಕುವಾಗಲೂ ಹಂದಿ ಮಾಂಸದ ಸಾರನ್ನು ಮಾಡುತ್ತಾರೆ. ಕೈಲ್‌ಮೂಹೂರ್ತ ಹಬ್ಬಕ್ಕೆ ಮನೆಯ ಮತ್ತು ತೋಟದ ಕೆಲಸದ ಆಳುಗಳಿಗೂ ಹಂದಿಮಾಂಸವನ್ನು ತಪ್ಪದೆ ಹಂಚುತ್ತಾರೆ. ಮನೆಯಲ್ಲಿಯೇ ಮಾಂಸಕ್ಕಾಗಿ ಹಂದಿಯನ್ನು ಸಾಕುತ್ತಾರೆ.

ಕೊಡವರ 'ಪಂದಿಕರಿ ಕಡುಂಬುಟ್ಟ್' ತುಂಬಾ ಪ್ರಖ್ಯಾತಿ ಪಡೆದಿದೆ. ಇದರ ಜೊತೆ ಅಕ್ಕಿ ರೊಟ್ಟಿಯನ್ನು ತಯಾರಿಸುತ್ತಾರೆ. ಇವರ ಹಂದಿ ಮಾಂಸದ ತಯಾರಿಕೆಗೆ ಬಹಳ ಬೇಡಿಕೆ ಇದೆ. ಹಸಿಮಾಂಸವನ್ನು ತೊಳೆದು ಶುಂಠಿ, ಹಸಿಮೆಣಸಿನಕಾಯಿ, ಅರಿಸಿನ ಪುಡಿ, ಕೊತ್ತಂಬರಿ ಸೊಪ್ಪು, ಬೆಳ್ಳುಳ್ಳಿಯನ್ನು ಜಜ್ಜಿ ಉಪ್ಪು ಹಾಕಿ ಮಾಂಸಕ್ಕೆ ಕಲಸಿಟ್ಟ ಅರ್ಧ ಗಂಟೆ ಅನಂತರ ಒಲೆಯ ಮೇಲಿಟ್ಟು ಚೆನ್ನಾಗಿ ಬೇಯಿಸುತ್ತಾರೆ. ಬೇಯುವ ಮಾಂಸಕ್ಕೆ ಮಸಾಲ ಅಂದರೆ ಧನಿಯ, ಜೀರಿಗೆ, ಲವಂಗ, ಚಕ್ಕೆ, ಕರಿಮೆಣಸು ಮುಂತಾದ ಪದಾರ್ಥಗಳನ್ನು ಹುರಿದು ಮಾಡಿದ ಪುಡಿಯನ್ನು ಹಾಕುತ್ತಾರೆ. ಈ ಸಾರಿಗೆ ಕೊಡಗಿನ ಕಾಚಂಪುಳಿ ವಿಶೇಷ ರುಚಿ ಕೊಡುವ ಕಾರಣ ಕಪ್ಪು ಬಣ್ಣದ ಈ ಹುಳಿ ಹಾಕುತ್ತಾರೆ. ಬೇಯಲು ಸ್ವಲ್ಪ ನೀರು ಹಾಕಿ ಉಪ್ಪು ಬೆರೆಸುತ್ತಾರೆ. ಕಪ್ಪುಬಣ್ಣದಲ್ಲಿ ತಯಾರಿಸಲ್ಪಟ್ಟ ಈ ಕರಿ ತುಂಬಾ ರುಚಿಕರವಾಗಿರುತ್ತದೆ. ಈ ಮಾಂಸವು ಅತಿಯಾದ ಜಿಡ್ಡಿನಿಂದ ಕೂಡಿರುವ ಕಾರಣ ಬೇರೆ ಎಣ್ಣೆ, ತುಪ್ಪದ ಅವಶ್ಯಕತೆ ಇರುವುದಿಲ್ಲ. ಹಂದಿ ಮಾಂಸದಿಂದ ಬಂದ ತುಪ್ಪವನ್ನು ಶೇಖರಿಸಿಟ್ಟು ಬೇರೆ ಸಾರುಮಾಡಲು, ಮೀನುಕರಿಯಲು ಬಳಸುತ್ತಾರೆ. ಹಂದಿಮಾಂಸವನ್ನು ಉಪ್ಪು ಖಾರ ಬೆರಸಿ ಚೆನ್ನಾಗಿ ಒಣಗಿಸಿ ಎಲ್ಲಾ ಕಾಲಕ್ಕೂ ಸಂಗ್ರಹಿಸಿಡುವ ಪದ್ಧತಿ ಕೊಡವರಲ್ಲಿದೆ. ಹಂದಿ ಮಾಂಸದ ಸೇವನೆಯಿಂದ ಶರೀರದ ಉಷ್ಣಾಂಶ ಕಡಿಮೆಯಾಗುವುದರ ಜೊತೆಗೆ, ಪೈಲ್ಸ್ ಮುಂತಾದ ಕಾಯಿಲೆಗಳನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದೆ.

ಒಣಗಿದ ಹಂದಿ ಮಾಂಸದ ಸಾರು (ಒಣಕ್ ಪಂದಿಯರ್ಚಿ ಕರಿ)

ಕೊಡವರು ಹಿಂದಿನ ಕಾಲದಲ್ಲಿ ಬೇಟೆಗೆ ಹೋಗುತ್ತಿದ್ದರು. ಕಾಡುಹಂದಿ, ಮೊಲ, ಜಿಂಕೆ, ಕಾಡುಬೆಕ್ಕನ್ನು ತಂದು ತಾವು ಮತ್ತು ಅಕ್ಕ ಪಕ್ಕದವರಿಗೂ ಹಂಚಿ ತಿನ್ನುತ್ತಿದ್ದರು. ಹೇರಳವಾಗಿ ಸಿಗುತ್ತಿದ್ದ ಮಾಂಸವನ್ನು ಮಳೆಗಾಲದಲ್ಲಿ ಉಪಯೋಗಿಸಲು ಒಣಗಿಸಿ ರಕ್ಷಿಸಿಡುತ್ತಿದ್ದರು. ಉಪ್ಪು, ಅಚ್ಚಮೆಣಸಿನ ಪುಡಿ, ಅರಿಸಿಣವನ್ನು ಮಾಂಸಕ್ಕೆ ಕಲೆಸಿ ಸಣ್ಣ ದಾರದಂತಿರುವ ತಂತಿಗೆ ಪೋಣಿಸಿ, ಅಥವಾ ಬಿದಿರಿನ ತಟ್ಟಿ (ತಟ್ಟೆ) ಯಲ್ಲಿ ಹರಡಿ, ಒಲೆಯ ಮೇಲೆ ಬಿಸಿ

ತಾಗುವ ರೀತಿ ಹಗ್ಗವನ್ನು ಕಟ್ಟಿ ಅದರ ಮೇಲೆ ತಟ್ಟೆಯನ್ನಿಟ್ಟು ಮಾಂಸವನ್ನು ಒಣಗಿಸಿ ಎತ್ತಿಟ್ಟುಕೊಳ್ಳುತ್ತಾರೆ.

ಒಣಗಿದ ಹಂದಿ ಮಾಂಸವನ್ನು ಕುದಿಯುವ ನೀರಿಗೆ ಹಾಕಿ ಚೆನ್ನಾಗಿ ತೊಳೆದು ಬೇಯಿಸಬೇಕು. ಬೆಂದ ಮಾಂಸ ಗಟ್ಟಿಯಾಗಿರುವುದರಿಂದ ಕಲ್ಲಿನಿಂದ ಜಜ್ಜಬೇಕು. ಅನಂತರ ಈರುಳ್ಳಿ, ಬೆಳ್ಳುಳಿ ಹಸಿಮೆಣಸಿನಕಾಯಿ ವಗ್ಗರಣೆಯ ಜೊತೆಗೆ ಮಾಂಸ ಹಾಕಿ ಮಸಾಲ ಕಾಚಂಪುಳಿ ಸೇರಿಸಬೇಕು. ಬೇಕಾದರೆ ಆಲೂಗೆಡ್ಡೆಯನ್ನು ಒಣಮಾಂಸದ ಜೊತೆ ಹಾಕಬಹುದು. ಕೊಡವರು ರೊಟ್ಟಿಗೆ ಈ ಸಾರನ್ನು ಹೆಚ್ಚಾಗಿ ಬಳಸುತ್ತಾರೆ. ಅಪರೂಪಕ್ಕೆ ಇದೇ ರೀತಿ ಕೋಳಿ ಹಾಗೂ ಕುರಿ ಮಾಂಸವನ್ನು ಎಲ್ಲಾ ರೀತಿಯ ಕಾಡು ಪ್ರಾಣಿಗಳ ಮಾಂಸವನ್ನು ಒಣಗಿಸಿ ಉಪಯೋಗಿಸುತ್ತಿದ್ದರು.

ಕುರಿ ಮಾಂಸದ ಸಾರು (ಕೊರಿಯರ್ಚಿಕರಿ)

ಕೊಡವರು ಕುರಿಮಾಂಸವನ್ನು ಮದುವೆ ತಿಥಿ ಹಬ್ಬಗಳು ಮುಂತಾದ ಎಲ್ಲಾ ಸಮಯದಲ್ಲೂ ಬಳಸುತ್ತಾರೆ. ಕುರಿಮಾಂಸದಿಂದ ಪಲಾವ್, ಸಾರು, ಫ್ರೈಯನ್ನು ತಯಾರಿಸುತ್ತಾರೆ. ಹಸಿಮಾಂಸವನ್ನು ತೊಳೆದು ಉಪ್ಪು, ಅರಿಸಿನ ಪುಡಿ, ಅಚ್ಚಖಾರದ ಪುಡಿಯನ್ನು ಕಲೆಸಿಟ್ಟು ಹತ್ತು ನಿಮಿಷದ ಅನಂತರ ಬೇಯಿಸಿಕೊಳ್ಳುತ್ತಾರೆ. ಬೆಂದ ಮಾಂಸಕ್ಕೆ ಈರುಳ್ಳಿ, ಹಸಿಮೆಣಸು, ಕೊತ್ತಂಬರಿ ಸೊಪ್ಪು, ಟೊಮ್ಯಾಟೊ, ಶುಂಠಿ, ಬೆಳ್ಳುಳ್ಳಿಯನ್ನು ಎಣ್ಣೆಯಲ್ಲಿ ಬಾಡಿಸಿ ಬೆಂದ ಮಾಂಸಕ್ಕೆ ತೆಂಗಿನಕಾಯಿ, ಜೀರಿಗೆ ಚಕ್ಕೆ ಲವಂಗ ಕರಿಮೆಣಸು, ಧನಿಯಾವನ್ನು ಹುರಿದು ಮಸಾಲೆ ತಯಾರಿಸಿ ಮಾಂಸದ ಜೊತೆ ಕುದಿಸುತ್ತಾರೆ. ಈ ಸಾರನ್ನು ರೊಟ್ಟಿ ತಿನ್ನಲು ಅನ್ನದ ಜೊತೆ, ನೂಪುಟ್ಟು (ನೂಲಿನ ಹಿಟ್ಟು) ತಿನ್ನಲು ಬಳಸುತ್ತಾರೆ. ಕೊಡವರು ಪ್ರತಿದಿನ ಒಂದಲ್ಲ ಒಂದು ರೀತಿಯ ಮಾಂಸವನ್ನು ಊಟಕ್ಕೆ ಬಳಸುತ್ತಾರೆ.

ನಾಟಿ ಕೋಳಿ ಸಾರು (ಕೋಳಿ ಕರಿ)

ಕೊಡವರು ತಮ್ಮ ತಮ್ಮ ಮನೆಗಳಲ್ಲಿ ಕೋಳಿಗಳನ್ನು ಸಾಕುತ್ತಾರೆ. ತಮಗೆ ಬೇಕಾದಾಗ ಅಂದರೆ ನಂಟರು ಬಂದಾಗ, ಗದ್ದೆ ನಾಟಿ ಸಮಯದಲ್ಲಿ, ಹಬ್ಬಗಳಲ್ಲಿ, ಕುಳಿಯ ಕೊಡುವಾಗ (ಗುಳಿಗನನ್ನು ಸಂತೈಸುವುದು) ಪಾಷಣಮೂರ್ತಿ, ಪಂಜುರುಳಿ ದೇವರುಗಳಿಗೆ ನಾಟಿ ಕೋಳಿಯನ್ನು ಕುಯ್ಯುತ್ತಾರೆ. ನಾಟಿಕೋಳಿ ಸಾರು ಮತ್ತು ನೂಪುಟ್ಟು, (ನೂಲಿನ ಹಿಟ್ಟು, ಅಕ್ಕಿ ಶಾವಿಗೆ) ಪಾಪುಟ್ಟು, ಅಕ್ಕಿ ರೊಟ್ಟಿ ಜೊತೆಗೆ ಉಪಯೋಗಿಸುತ್ತಾರೆ.

ಕೊಡವರು ಆಟಿ ಮಾಸ ಅಂದರೆ ಕಕ್ಕಡ ತಿಂಗಳಿನಲ್ಲಿ ವಿಶೇಷವಾಗಿ ನಾಟಿ ಕೋಳಿಯನ್ನು ತಿನ್ನಲೇಬೇಕು. ಶುದ್ಧಗೊಳಿಸಿದ ಕೋಳಿ ಮಾಂಸಕ್ಕೆ ಉಪ್ಪು, ಅಚ್ಚಕಾರದಪುಡಿ, ಅರಿಸಿನವನ್ನು ಬೆರೆಸಿ ಹತ್ತು ನಿಮಿಷದ ನಂತರ ಈರುಳ್ಳಿ, ಹಸಿಮೆಣಸಿನಕಾಯಿಯನ್ನು ಎಣ್ಣೆಯಲ್ಲಿ ಕೆಂಪಗೆ ಹುರಿದು ಮಾಂಸ ಹಾಕುತ್ತಾರೆ. ಮಾಂಸ ಎಣ್ಣೆಯಲ್ಲಿ ನೀರು ಇಂಗಿಸಿ ಮೇಲೆ ತೆಂಗಿನಕಾಯಿ, ಧನಿಯ, ಜೀರಿಗೆ, ಕೊತ್ತಂಬರಿ ಸೊಪ್ಪನ್ನು ಹಾಕಿ ಮಸಾಲೆ ತಯಾರಿಸಿ ಬೆರೆಸುತ್ತಾರೆ. ತಮಗೆ

ಬೇಕಾದಾಗ ದಿಡೀರ್ ಕೋಳಿ ಕರಿಯನ್ನು ಮಾಡುತ್ತಾರೆ. ಕೋಳಿ ಕರಿಯನ್ನು ಅಕ್ಕಿ ರೊಟ್ಟಿ ನೂಪುಟ್ಟುವಿನ ಜೊತೆ ತಿನ್ನುತ್ತಾರೆ.

ಹಸಿ ಮೀನಿನ ಸಾರು (ಪಚ್ಚೆ ಮೀನ್ ಕರಿ)

ಕೊಡವರು ಬಾಳೆಮೀನು, ಮತ್ತಿಮಿನು, ಐಲೆಮೀನು, ಕೊಯಿಲೇ ಮೀನು, ಮುಂತಾದವುಗಳಿಂದ ಸಾರು, ಫ್ರೈ ಮತ್ತು ಉಪ್ಪಿನಕಾಯಿಯನ್ನು ತಯಾರಿಸುತ್ತಾರೆ. ಮೀನಿನ ಸಾರನ್ನು ಅಕ್ಕಿ ರೊಟ್ಟಿ ಅಥವಾ ಅನ್ನದ ಜೊತೆಗೆ ಬಳಸುತ್ತಾರೆ. ಶುದ್ಧಗೊಳಿಸಿದ ಹಸಿಮೀನಿಗೆ ಉಪ್ಪು, ಹುಳಿ, ಖಾರ ಬೆರೆಸಿ ತೆಂಗಿನಕಾಯಿ ಧನಿಯಾ, ಜೀರಿಗೆ, ಒಣಮೆಣಸಿನಕಾಯಿ ಮಸಾಲೆ ತಯಾರಿಸಿ ಸೇರಿಸುತ್ತಾರೆ. ವಗ್ಗರಣೆಗೆ ಟೊಮ್ಯಾಟೊ, ಈರುಳ್ಳಿ, ಕರಿಬೇವು ಬಳಸುತ್ತಾರೆ. ಹಸಿಮೀನಿಗೆ ಕಾಚಂಪುಳಿ, ಅಚ್ಚಕಾರದಪುಡಿ, ಉಪ್ಪು ಬೆರೆಸಿ ಎಣ್ಣೆಯಲ್ಲಿ ಕರಿದು ಊಟಕ್ಕೆ ಬಳಸುತ್ತಾರೆ.

ಒಣಮೀನು ಅಲೂಗೆಡ್ಡೆ ಸಾರು (ಒಣಕ್ ಮೀನ್ ಕಂಡೆ ಕರಿ)

ಕೊಡವರು ಒಣಮೀನಿನಲ್ಲಿ ಸಾರು, ಚಟ್ನಿ, ಗೊಜ್ಜು, ಉಪ್ಪಿನಕಾಯಿ ಮುಂತಾದ ಬಗೆ ಬಗೆಯ ಅಡುಗೆಯನ್ನು ತಯಾರಿಸುತ್ತಾರೆ. ಒಣಮೀನನ್ನು ಕೆಂಡದಲ್ಲಿ ಸುಟ್ಟು ಊಟಕ್ಕೆ ಬಳಸುತ್ತಾರೆ. ಕೊಡವರು ತಯಾರಿಸುವ ಒಣಮೀನು ಆಲೂಗೆಡ್ಡೆ ಸಾರು ವಿಶೇಷವಾದ ರುಚಿ ಕೊಡುತ್ತದೆ. ಚೆನ್ನಾಗಿ ಉಪ್ಪಿನಲ್ಲಿ ಒಣಗಿದ ಮೀನನ್ನು ಎಲ್ಲಾ ಕಾಲದಲ್ಲೂ ಶೇಖರಿಸಿಡುತ್ತಾರೆ. ಊಟಕ್ಕೆ ಮಾಂಸ ಇಲ್ಲದಿದ್ದರೆ ಒಣಮೀನು ಇರಲೇಬೇಕು. ಈರುಳ್ಳಿ, ಹಸಿಮೆಣಸಿನಕಾಯಿ, ಕರಿಬೇವು ಮುಂತಾದ ಪದಾರ್ಥಗಳನ್ನು ಎಣ್ಣೆಯಲ್ಲಿ ಕೆಂಪಗೆ ಹುರಿದು ಇದರ ಜೊತೆಗೆ ಹಣ್ಣಾದ ಟೊಮ್ಯಾಟೊ ಅಥವಾ ಕಾಯಿ ಟೊಮ್ಯಾಟೊ, ಆಲೂಗೆಡ್ಡೆಯನ್ನು ಹಾಕಿ ಬೇಯಿಸಿ, ತೆಂಗಿನಕಾಯಿ, ಜೀರಿಗೆ, ಅಚ್ಚಖಾರದಪುಡಿ, ಅರಿಸಿನ, ಚಕ್ಕೆ, ಲವಂಗ, ಮಸಾಲೆಯನ್ನು ಹಾಕಿ ಕುದಿಯುವ ಮಸಾಲೆಗೆ ಒಣಮೀನನ್ನು ಹಾಕಿ ಚೆನ್ನಾಗಿ ಬೇಯಿಸಿ ಬೇಕಾದಷ್ಟು ಉಪ್ಪು ಕಾಚಂಪುಳಿಯನ್ನು ಸೇರಿಸಿದರೆ ರುಚಿಯಾಗಿರುತ್ತದೆ. ಕೊಡವರು ರೊಟ್ಟಿಯ ಜೊತೆ ಈ ಸಾರನ್ನು ಬಳಸುತ್ತಾರೆ.

ಏಡಿ ಸಾರು (ನೆಂಡ್ ಕರಿ)

ಮಳೆಗಾಲದಲ್ಲಿ ಏಡಿಯನ್ನು ಹಿಡಿದು ತಂದು ಶುದ್ಧಗೊಳಿಸಿ ಮೆಣಸಿನ ಪುಡಿ, ಕಾಚಂಪುಳಿ (ಒಂದು ಜಾತಿಯ ಹುಳಿ) ಯನ್ನು ಬೆರೆಸಿಟ್ಟು ವಗ್ಗರಣೆಗೆ ಈರುಳ್ಳಿ, ಹಸಿಮೆಣಸನ್ನು ಹಾಕಿ ಸ್ವಲ್ಪ ಬೆಂದ ಏಡಿಯ ಜೊತೆಗೆ ಜೀರಿಗೆ, ಬೆಳ್ಳುಳ್ಳಿ, ಧನಿಯಾ, ತೆಂಗಿನಕಾಯಿಯ ಮಸಾಲೆಯನ್ನು ಬೆರೆಸುತ್ತಾರೆ. ಈ ಸಾರು ಮಳೆಗಾಲದಲ್ಲಿ ದೇಹದ ಶೀತವನ್ನು ಸಮವಾಗಿಡುತ್ತದೆಂಬ ನಂಬಿಕೆ ಕೊಡವರಲ್ಲಿದೆ. ಏಡಿಯನ್ನು ಸುಟ್ಟು ಅಥವಾ ಹುರಿದು ಚಟ್ನಿಯನ್ನು ತಯಾರಿಸುತ್ತಾರೆ.

ಕೊಯಿಲೆ ಮೀನು ಸಾರು(ಕುಸುಲೆ ಮೀನು) (ಕೊಯಿಲೆ ಮೀನ್‌ಕರಿ)

ಮಳೆಗಾಲದಲ್ಲಿ ಗದ್ದೆಯ ತೋಡಿನಲ್ಲಿ ಸಿಗುವ ಸಣ್ಣ-ಸಣ್ಣ ಈ ಮೀನು

ತುಂಬಾ ರುಚಿಯಾಗಿರುತ್ತದೆ. ಕೊಡವರು ರೊಟ್ಟಿಯ ಜೊತೆ ಕೊಯಿಲೆ ಮೀನಿನ ಸಾರನ್ನು ಬಳಸುತ್ತಾರೆ. ಅರಿಸಿನ ಪುಡಿ, ಕಾಚಾಂಪುಳಿ, ಮೆಣಸಿನಪುಡಿ ಬೆರೆಸಿ ಬೆಳ್ಳುಳ್ಳಿ, ಈರುಳ್ಳಿಯೊಂದಿಗೆ ವಗ್ಗರಣೆ ಕೊಟ್ಟು, ಧನಿಯಪುಡಿ, ಜೀರಿಗೆ ಸ್ವಲ್ಪ ತೆಂಗಿನಕಾಯಿಯ ಮಸಾಲೆ ಹಾಕುತ್ತಾರೆ. ಇದರಿಂದ ಉಪ್ಪಿನಕಾಯಿಯನ್ನು ತಯಾರಿಸುತ್ತಾರೆ.

ಒಣಮೀನು ಚಟ್ನಿ (ಒಣಕ್ ಮೀನ್ ಪಜ್ಜಿ)

ಒಣಮೀನನ್ನು ಬೆಂಕಿ ಕೆಂಡದಲ್ಲಿ ಚೆನ್ನಾಗಿ ಸುಟ್ಟು ಪುಡಿ ಮಾಡಿಕೊಂಡು ತೆಂಗಿನಕಾಯಿ, ಹಸಿಮೆಣಸು, ಬೆಳ್ಳುಳ್ಳಿ, ಉಪ್ಪು, ಹುಳಿ ಹಾಕಿದ ಚಟ್ನಿಯ ಮಿಶ್ರಣಕ್ಕೆ ಬೆರೆಸಿ ಅನ್ನದ ಜೊತೆ ಅಥವಾ ರೊಟ್ಟಿಯ ಜೊತೆ ಬಳಸುತ್ತಾರೆ. ಹೀಗೆ ನಿಸರ್ಗದ ಎಲ್ಲಾ ವಸ್ತುಗಳನ್ನು ಬಳಸಿ ಕೊಡವರು ರುಚಿಕರವಾದ ಅಡುಗೆ ತಯಾರಿಸುತ್ತಾರೆ.

ಸಸ್ಯಹಾರದ ಅಡುಗೆ

ಕೊಡವರು ಬಹಳ ಹಿಂದಿನಿಂದಲೂ ಬೆಟ್ಟ ಗುಡ್ಡ, ಪ್ರಕೃತಿಯ ಒಳಹೊಕ್ಕು ಬದುಕನ್ನು ನಡೆಸುತ್ತಿದ್ದಾರೆ. ಪ್ರಕೃತಿಯ ಎಲ್ಲಾ ಗೆಡ್ಡೆ, ಗೆಣಸು, ಹಣ್ಣು ನಾರಿನ ಪದಾರ್ಥಗಳನ್ನು ಆರೋಗ್ಯದ ಹಿತದೃಷ್ಟಿಯಿಂದ ಅನಾದಿ ಕಾಲದಿಂದ ಇಂದಿನವರೆಗೂ ಬಳಸುತ್ತಿದ್ದಾರೆ. ದಟ್ಟವಾದ ಅರಣ್ಯ, ಮಳೆಯಿಂದ ಹೇರಳವಾಗಿರುವ ಸಸ್ಯರಾಶಿಯನ್ನು ಉಪಯೋಗಿಸಿಕೊಂಡು, ಇತ್ತೀಚೆಗೆ ತಮ್ಮ ಮನೆಗಳಲ್ಲೂ ಬೆಳೆದ ಕಾಳುಗಳು, ಸೊಪ್ಪು, ತರಕಾರಿ, ಗೆಡ್ಡೆಗಳು, ಹಣ್ಣು ಹಂಪಲನ್ನು ಉಪಯೋಗಿ ಸುತ್ತಿದ್ದಾರೆ.

ಮಲೆನಾಡಿನಲ್ಲಿ ಹೆಚ್ಚು ಮಳೆ ಬೀಳುವ ಕಾರಣ ಜನಜೀವನ ಅಸ್ತವ್ಯಸ್ತಗೊಂಡಿರುತ್ತದೆ. ಮಳೆಗಾಲದಲ್ಲಿ ಅಂಗಡಿ, ಸಂತೆಗಳಿಗೂ ಹೋಗಲು ತೊಂದರೆಯಾಗುತ್ತದೆ. ಅಂಥ ಸಂದರ್ಭದಲ್ಲಿ ಕೊಡವರು ತಮ್ಮ ಹಿತ್ತಲಿನಲ್ಲಿರುವ ಸೊಪ್ಪು, ಕಾಯಿಗಳನ್ನು ದಿನನಿತ್ಯದ ಅಡುಗೆಗೆ ಬಳಸುತ್ತಾರೆ. ಇದರಿಂದ ಆರೋಗ್ಯ ವೃದ್ಧಿಸುವ ಜೊತೆಗೆ ಹಣವನ್ನು ಉಳಿಸುವ ಗುರಿ ಇವರದಾಗಿರುತ್ತದೆ.

ಆಟಿ ಮಾಸದ ಮದ್ದಿಟ್ಟು, ಮದ್ದುಪಾಯಸ (ಮದ್‌ಪುಟ್ಟು)

ಕೊಡಗಿನಲ್ಲಿ ಕಕ್ಕಡ ತಿಂಗಳು ಆಟಿ ಮಾಸದಲ್ಲಿ (ಜುಲೈ-ಆಗಸ್ಟ್) ಈ ವಿಶೇಷ ಮದ್ದಿನ ಪಾಯಸವನ್ನು ತಯಾರಿಸುತ್ತಾರೆ. ಕೊಡವರಲ್ಲದೆ ಇತರ ಎಲ್ಲಾ ಸಮುದಾಯದವರು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದೆಂದು ಈ ಪಾಯಸ ಉಪಯೋಗಿಸುತ್ತಾರೆ. ಕಕ್ಕಡ ೧೮ ರಂದು ೧೮ ಬಗೆಯ ಔಷಧಿಯ ಗುಣಗಳುಳ್ಳ ಈ ಸೊಪ್ಪನ್ನು ಮಾಡುತ್ತಾರೆ. ಒಂದು ದಿನ ಕಡಿಮೆ ಆದರೂ ಔಷಧಿ ಗುಣ ಕಡಿಮೆಯಾಗುತ್ತದೆ ಎಂಬುದು ಇದರ ನಂಬಿಕೆ.

ಮಳೆಗಾಲದಲ್ಲಿ ಸೊಂಪಾಗಿ ಚಿಗುರಿದ ಈ ಸೊಪ್ಪನ್ನು ಕಾಂಡ ಮತ್ತು ಎಲೆಯ ಸಮೇತ ಮುರಿದು ತಂದು ಶುಚಿಗೊಳಿಸಿ ನೀರಿನಲ್ಲಿ ಬೇಯಿಸಿದಾಗ

ಕಡು ನೇರಳೆ ಬಣ್ಣದ ಸುವಾಸನೆ ಭರಿತ ರಸ ಬರುತ್ತದೆ. ಈ ರಸಕ್ಕೆ ಬೆಳ್ತಗೆ ಅಕ್ಕಿ, ಬೆಲ್ಲ, ತೆಂಗಿನಕಾಯಿ, ಏಲಕ್ಕಿ ಹಾಕಿ ಬೇಯಿಸಿದರೆ ನೇರಳೆ ಬಣ್ಣದ ಪಾಯಸ ತಯಾರಾಗುತ್ತದೆ. ಈ ಪಾಯಸಕ್ಕೆ ಹಸುವಿನ ತುಪ್ಪ ಅಥವಾ ಜೇನನ್ನು ಬೆರಸಿ ತಿನ್ನುತ್ತಾರೆ.

ಮದ್ದ್‌ಪುಟ್ಟ್ ತಿಂದ ಮಾರನೇ ದಿನ ಬೆಳಗ್ಗೆ ಮೂತ್ರ ವಿಸರ್ಜಿಸಿದಾಗ ಕೆಂಪಾಗಿದ್ದರೆ ಔಷಧಿ ಶರೀರಕ್ಕೆ ಅಂಟಿದೆ ಎಂದರ್ಥ. ಕಕ್ಕಡ ತಿಂಗಳಿನಲ್ಲಿ ಮಳೆ ಜಾಸ್ತಿ ಇರುವ ಕಾರಣ ದೇಹದ ಶೀತವನ್ನು ಈ ಸೊಪ್ಪು ಕಡಿಮೆ ಮಾಡುತ್ತದೆ. ಮದ್ದಿನ ರಸದೊಂದಿಗೆ ಅಕ್ಕಿ ಹಿಟ್ಟನ್ನು ಇಂಗಿಸಿ, ಆರಿದ ಸಣ್ಣಚೂರುಗಳನ್ನಾಗಿ ಮಾಡಿ ಜೇನು ಹಾಕಿ ತಿಂದರೆ ರುಚಿಯಾಗಿರುತ್ತದೆ. ಕೊಡವರು ತಮ್ಮ ಮನೆಯ ಅಂಗಳದಲ್ಲೇ ಈ ಸೊಪ್ಪನ್ನು ಬೆಳೆಸುತ್ತಾರೆ. ಅವರು ಎಲ್ಲೇ ವಾಸವಿರಲಿ ಆಗಸ್ಟ್ ಮೂರನೇ ತಾರೀಕಿನಂದು ಈ ಪಾಯಸವನ್ನು ತಯಾರಿಸುತ್ತಾರೆ. ಇದೇ ಸಮಯದಲ್ಲಿ ಮರಗೆಣಸು, ನಾಟಿ ಕೋಳಿ ಸಾರನ್ನು ಉಪಯೋಗಿಸುತ್ತಾರೆ.

ಕೆಸ ಸೊಪ್ಪಿನ ಸಾರು (ಕೇಂಬು ಕರಿ)

ಕೊಡವರು ಬಹಳ ಹಿಂದಿನಿಂದಲೂ ಪ್ರಕೃತಿಯಲ್ಲಿ ಕಂಡು ಬರುವ ಗೆಡ್ಡೆಗೆಣಸು ಸೇವಿಸಿದಂತೆ, ಹೊಳೆಯಲ್ಲಿ ಸಿಗುವ ಕೆಸುವಿನ ಸುಳಿ ಅಥವಾ ಕೆಸುವಿನ ದಂಟು ಮತ್ತು ಕೆಸುವಿನ ಗೆಡ್ಡೆಯನ್ನು ಬಳಸಿ ನಾನಾ ರೀತಿಯ ಅಡುಗೆ ತಯಾರಿಸುತ್ತಾರೆ. ವರ್ಷಕೊಮ್ಮೆಯಾದರೂ ಈ ರೀತಿಯ ಅಡುಗೆಯನ್ನು ಊಟದಲ್ಲಿ ಬಳಸಬೇಕೆಂಬ ನಿಯಮ ಇವರಲ್ಲಿದೆ.

ಕೆಸುವಿನ ದಂಟು ಅಥವಾ ಎಳಸಾದ ಸುಳಿಯನ್ನು ತಂದು ಉಪ್ಪು ಹಾಕಿ ಬೇಯಿಸಿ, ಧನಿಯಾ ಅಚ್ಚಖಾರದ ಪುಡಿ ಹಾಕಿ ತೆಂಗಿನಕಾಯಿಯನ್ನು ಬಳಸಿ ಮಸಾಲೆ ತಯಾರಿಸಿ ಬೆಳ್ಳುಳ್ಳಿ ಒಣಮೆಣಸಿನೊಂದಿಗೆ ವಗ್ಗರಣೆ ಕೊಡುತ್ತಾರೆ. ಈ ಖಾದ್ಯಕ್ಕೆ ಹೆಚ್ಚಾಗಿ ಹುಳಿ ಹಾಕುತ್ತಾರೆ. ಇಲ್ಲದಿದ್ದಲ್ಲಿ ನಾಲಿಗೆ ಕಡಿತ ಉಂಟಾಗುತ್ತದೆ. ರೊಟ್ಟಿಯ ಜೊತೆ ಅಥವಾ ಅನ್ನದ ಜೊತೆ ಇದನ್ನು ಬಳಸಬಹುದು. ಹಾಗೆಯೇ ಕೆಸುವಿನ ದಂಟು ಮತ್ತು ಗೆಡ್ಡೆಯನ್ನು ಸಾರು ಮಾಡಿ ಊಟಕ್ಕೆ ಬಳಸುತ್ತಾರೆ.

ಬಾಳೆದಿಂಡಿನ ಪಲ್ಯ

ಹೊಟ್ಟೆಯಲ್ಲಿನ ಕರುಳಿನ ಭಾಗದಲ್ಲಿ ಅಂಟಿಕೊಂಡಿರುವ ಕೂದಲನ್ನು ಕತ್ತರಿಸಿ, ಸುಲಭ ಜೀರ್ಣಕ್ರಿಯೆಗೆ ಬಾಳೆದಿಂಡು ಸಹಕಾರಿ. ಆದ್ದರಿಂದ ಕೊಡವರು ವರ್ಷಕೊಮ್ಮೆಯಾದರೂ ಇದನ್ನು ಬಳಸುತ್ತಾರೆ. ಬಾಳೆದಿಂಡನ್ನು ಕತ್ತರಿಸಿ ಬಿಳಿಯ ಭಾಗ ಕಾಣುವವರೆಗೆ ಸಿಪ್ಪೆ ಸುಲಿದು, ಸಣ್ಣದಾಗಿ ಹೆಚ್ಚಿಕೊಂಡು ಅಂಟು ಬಿಡಲು ಅರಿಶಿನ ಮತ್ತು ನೀರಿನೊಂದಿಗೆ ತೊಳೆಯುತ್ತಾರೆ. ನಂತರ ಅರಿಸಿನ, ಉಪ್ಪು ಮೆಣಸಿನ ಪುಡಿ ತೆಂಗಿನ ಕಾಯಿ, ಧನಿಯಾ ಹಾಕಿ ಮಸಾಲೆ ತಯಾರಿಸಿ ಈರುಳ್ಳಿ, ಬೆಳ್ಳುಳ್ಳಿ, ಕರಿಬೇವು, ಸಾಸುವೆ ಜೊತೆ ವಗ್ಗರಣೆ ಮಾಡಿ ಪಲ್ಯ ತಯಾರಿಸುತ್ತಾರೆ. ಈ ಪಲ್ಯವನ್ನು ಕೊಡವರು ವರ್ಷಕೊಮ್ಮೆಯಾದರೂ ಬಳಸುತ್ತಾರೆ.

ತೆರಿಮೆ ಸೊಪ್ಪಿನ ಪಲ್ಯ (ತೆರಿಮೆ ತೊಪ್ಪು ಪಲ್ಯ)

ಕೊಡಗಿನಲ್ಲಿ ಮಾತ್ರ ಕಂಡುಬರುವ ಅಪರೂಪದ ಈ ಸೊಪ್ಪು ಸಣ್ಣ ಸಣ್ಣ ಕವಲುಗಳಾಗಿ ಹರಡಿಕೊಂಡು ಅಲಂಕಾರಿಕ ಗಿಡದಂತೆ ಗೋಚರಿಸುತ್ತದೆ. ತುಂಬಾ ಸುಂದರವಾಗಿ ಕಾಣುವ ಈ ಸಸ್ಯ ತಿನ್ನಲು ಬಲು ರುಚಿ. ಹೊಳೆಯ ದಂಡೆಯಲ್ಲಿ ನೀರು ಹರಿವ ಜಾಗದಲ್ಲಿ ಮಾತ್ರ ಇದು ಸಿಗುತ್ತದೆ. ಸೊಪ್ಪನ್ನು ಬಿಡಿಸಿಕೊಂಡು ಉಪ್ಪು, ಅರಿಸಿನ, ಕಾಚಂಪುಳಿಯನ್ನು ಸೊಪ್ಪಿಗೆ ಕಲೆಸಿಡುತ್ತಾರೆ. ಈ ರೀತಿ ಇಟ್ಟಾಗ ಆ ಸೊಪ್ಪಿನ ಲೋಳೆ ಕಡಿಮೆಯಾಗುತ್ತದೆ. ಈರುಳ್ಳಿಯನ್ನು ಸಣ್ಣಗೆ ಹೆಚ್ಚಿಕೊಂಡು ಹಸಿಮೆಣಸಿನಕಾಯಿಯನ್ನು ಎಣ್ಣೆಗೆ ಹಾಕಿ ಚೆನ್ನಾಗಿ ಬಾಡಿಸಿದ ನಂತರ ಈ ತೆರಿಮೆ ಸೊಪ್ಪನ್ನು ಹಾಕಿ ಚೆನ್ನಾಗಿ ಹುರಿಯುತ್ತಾರೆ. ಈ ಸೊಪ್ಪಿನ ಪಲ್ಯ ಅಕ್ಕಿ ರೊಟ್ಟಿಯ ಜೊತೆಗೆ ತಿನ್ನಲು ತುಂಬಾ ರುಚಿಯಾಗಿರುತ್ತದೆ.

ಕಳಲೆ ಸಾರು (ಬೈಂಬಳೆ ಕರಿ)

ಕೊಡವರಲ್ಲಿ ಬೈಂಬಳೆ ಕರಿ, ಅಕ್ಕಿ ರೊಟ್ಟಿ ಅಂದರೆ ಬಿದಿರು ಸಾರಿಗೆ ವಿಶೇಷ ಸ್ಥಾನಮಾನ. ಕೊಡಗಿನಲ್ಲಿ ಕಳಲೆಗೆ 'ಕಣಿಲೆ' ಎನ್ನುವರು. ಮಳೆಗಾಲದಲ್ಲಿ ಹೆಚ್ಚಾಗಿ ಸಿಗುವ ಈ ಬಿದಿರು ಕಣಿಲೆಯನ್ನು ಉಪ್ಪು ಹಾಕಿ ಎಲ್ಲಾ ಕಾಲಕ್ಕೂ ಶೇಖರಿಸಿಡುತ್ತಾರೆ. ಇದು ದೇಹದ ಉಷ್ಣತೆಯನ್ನು ಕಾಪಾಡುತ್ತದೆಂಬ ನಂಬಿಕೆ ಕೊಡವರದು.

೨೪ಗಂಟೆಗಳ ಕಾಲ ನೆನೆಹಾಕಿ ಹುಳಿ ಬರಿಸಿ ನೀರನ್ನು ತೆಗೆದು ಅರಿಶಿನ, ಉಪ್ಪು ಹಾಕಿ ಚೆನ್ನಾಗಿ ಬೇಯಿಸುತ್ತಾರೆ. ಬೆಂದ ಕಣಿಲೆಯನ್ನು ಈರುಳ್ಳಿ, ಬೆಳ್ಳುಳ್ಳಿ, ಕರಿಬೇವು, ಸಾಸುವೆಯೊಂದಿಗೆ ವಗ್ಗರಣೆ ಹಾಕಿ ಧನಿಯಾ, ಜೀರಿಗೆ, ಅಚ್ಚ ಮೆಣಸಿನಕಾಯಿ, ತೆಂಗಿನಕಾಯಿಯನ್ನು ಅರೆದು ಮಸಾಲೆ ತಯಾರಿಸಿ ಕಣಿಲೆಗೆ ಸೇರಿಸುತ್ತಾರೆ. ಅಕ್ಕಿ ರೊಟ್ಟಿಯ ಜೊತೆ ಬೆಳಗ್ಗಿನ ಉಪಾಹಾರಕ್ಕೆ ಸೇವಿಸುವುದು ಕೊಡವರಿಗೆ ಇಷ್ಟ. ಇದರಿಂದ ಉಪ್ಪಿನ ಕಾಯಿಯನ್ನು ತಯಾರಿಸುವರು. ಪುರಾತನ ಕಾಲದಿಂದಲೂ ಸಾವಿರಾರು ಜನರು ಬಿದಿರನ್ನು ಅವಲಂಬಿಸಿದ್ದಾರೆ. ಸರ್ವಜ್ಞನು ಬಿದಿರಿನ ಮಹತ್ವವನ್ನು ಹೀಗೆ ಹೇಳಿದ್ದಾನೆ.

'ಬಿದಿರು ಅಂದಣವಕ್ಕು
ಬಿದಿರು ಸತ್ತಿಗೆಯಕ್ಕು
ಬಿದಿರಿಂ ಸಕಲ ಸಂಪದವಕ್ಕೂ ಲೋಕದೊಳ್'

ಕಡುಬು (ಕಡುಂಬುಟ್ಟ್)

ಕಡುಂಬುಟ್ಟನ್ನು ಅಂದರೆ ಕಡುಬನ್ನು ಮಲೆನಾಡಿನಲ್ಲಿ ಹೊರತುಪಡಿಸಿದಂತೆ ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ಬಿಳಿ ಬಣ್ಣದ ಸಣ್ಣ ಸಣ್ಣ ಉಂಡೆಯಾಕಾರದ ಈ ಕಡುಬು ಹಂದಿ ಮಾಂಸದ ಸಾರಿನ ಜೊತೆಗೆ ಒಳ್ಳೆ ರುಚಿಯನ್ನು ಕೊಡುತ್ತದೆ. ಅಕ್ಕಿಯನ್ನು ತೊಳೆದು ಒಣಗಿಸಿ ತರಿಯನ್ನಾಗಿಸಿ ಕುದಿಸಿದ ನೀರಿಗೆ ಅಕ್ಕಿ ತರಿಯನ್ನು ಹಾಕಿ ಉಪ್ಪಿಟ್ಟಿನ ಹದಕ್ಕೆ ಇಂಗಿಸಿಕೊಳ್ಳಬೇಕು. ಇಂಗಿಸುವಾಗ ಉಪ್ಪನ್ನು ಹಾಕಿಕೊಳ್ಳಬೇಕು. ಇಳಿಸಿದ ತಕ್ಷಣ ಬಿಸಿ ಇರುವಾಗಲೇ ಕೈಗೆ ಅಂಟದಿರುವಂತೆ

ತುಪ್ಪವನ್ನು ಸವರಿಸಿಕೊಂಡು ಸಣ್ಣ ಸಣ್ಣ ಉಂಡೆಯನ್ನಾಗಿ ಮಾಡಿ ಹಬೆಯಲ್ಲಿ ಬೇಯಿಸಬೇಕು. ಕೊಡಗಿನಲ್ಲಿ ಇದಕ್ಕಾಗಿಯೆ ತಯಾರಿಸಲಾದ ಪಾತ್ರೆ ಇರುತ್ತದೆ.ಇದನ್ನು 'ಸ್ಯಾಕಲ' ಎನ್ನುತ್ತಾರೆ. ಹಬೆಯಲ್ಲಿ ಬೆಂದ ಕಡುಬು ಎರಡು ದಿನದವರೆಗೆ ಕೆಡುವುದಿಲ್ಲ. ತಿನ್ನಲು ಬಹಳ ರುಚಿಯಾಗಿರುತ್ತದೆ. ಕೊಡವರು ಎಲ್ಲಾ ಸಂದರ್ಭಗಳಲ್ಲಿ ಈ ಅಡುಗೆ ತಯಾರಿಸುತ್ತಾರೆ. ಕೈಲ್‌ಮುಹೂರ್ತ ಹಬ್ಬದಲ್ಲಿ 'ಪಂದಿಕರಿ ಕಡುಂಬುಟ್ಟ್' ನ್ನು ಮಾಡಲೇಬೇಕು.

ಅಕ್ಕಿ ರೊಟ್ಟಿ (ಅಕ್ಕಿ ವೊಟ್ಟಿ)

ಕೊಡವರು ತಯಾರಿಸುವ ಈ ರೊಟ್ಟಿ ವಿಶೇಷ ರೀತಿಯದ್ದಾಗಿರುತ್ತದೆ. ಎರಡು ದಿನ ಇಟ್ಟರೂ ಕೆಡುವುದಿಲ್ಲ, ಬಿಸಿ ಮಾಡಿದರೆ ಮೆತ್ತಗಾಗುತ್ತದೆ. ಪ್ರತಿ ದಿನ ಬೆಳಗ್ಗೆ ತಿಂಡಿಗಾಗಿ ಈ ರೊಟ್ಟಿಯನ್ನು ತಯಾರಿಸುತ್ತಾರೆ. ಈ ರೊಟ್ಟಿಗೆ ಹಂದಿಮಾಂಸದ ಸಾರು ವಿಶೇಷವಾಗಿ ಒಪ್ಪುತ್ತದಾದರೂ ಬೇರೆ ರೀತಿಯ ಪಲ್ಯಗಳನ್ನು ಇದರ ಜೊತೆ ಬಳಸಬಹುದು.

ಮೊದಲೇ ತಯಾರಿಸಿದ ಅನ್ನದ ಜೊತೆ ಅಕ್ಕಿ ಹಿಟ್ಟನ್ನು (ಅಕ್ಕಿ ಪುಡಿ) ಜೊತೆಗೆ ಸ್ವಲ್ಪ ಉಪ್ಪು ಹಾಕಿ ಚೆನ್ನಾಗಿ ನಾದಿದ ನಂತರ ಸಣ್ಣ ಉಂಡೆಗಳನ್ನಾಗಿ ಮಾಡಿ ತೆಳುವಾಗಿ ತಟ್ಟಬೇಕು. ಈಗ ರೊಟ್ಟಿ ತಟ್ಟುವ ಮಿಷನ್ ಇರುವುದರಿಂದ ತುಂಬಾ ತೆಳುವಾದ ರೊಟ್ಟಿ ತಟ್ಟಬಹುದು. ಕಾದ ತವದ ಮೇಲೆ ರೊಟ್ಟಿಯನ್ನು ಹಾಕಿ ಒಂದು ನಿಮಿಷದ ನಂತರ ಮಗುಚಿ ಹಾಕಬೇಕು, ತಕ್ಷಣ ಮಗುಚಿದ್ದರೆ ಆ ರೊಟ್ಟಿ ಉಬ್ಬುವುದಿಲ್ಲ. ಒಂದೇ ಕಡೆ ಚೆನ್ನಾಗಿ ಬೆಂದ ರೊಟ್ಟಿಯನ್ನು ಕೆಂಡದ ಮೇಲಿಟ್ಟು ಸುತ್ತ ತಿರುಗಿಸಿದಾಗ, ಮೇಲಿನ ಭಾಗ ಉಬ್ಬಿದಂತಾಗಿ, ಪರಿಮಳಭರಿತ ರೊಟ್ಟಿ ತಯಾರಾಗುತ್ತದೆ. ಬಿಸಿ ಇರುವಾಗ ತಿಂದರೆ ಈ ರೊಟ್ಟಿ ಬಹಳ ರುಚಿಯಾಗಿರುತ್ತದೆ. ಮಳೆಗಾಲದಲ್ಲಿ ಅಕ್ಕಿರೊಟ್ಟಿಯನ್ನು ಬೆಳಗ್ಗೆ ಮತ್ತು ರಾತ್ರಿಯೂ ತಯಾರಿಸುತ್ತಾರೆ.

'ಅಕ್ಕಿ ಶಾವಿಗೆ' (ನೂಪುಟ್ಟು)

ಕೊಡವರು ಅಕ್ಕಿ ಶಾವಿಗೆಗೆ ನೂಪುಟ್ಟ್ ಎನ್ನುತ್ತಾರೆ. ಅಂದರೆ ನೂಲಿನಂತಿರುವ ಹಿಟ್ಟು ಅಕ್ಕಿಯ ಶಾವಿಗೆಯನ್ನು ಮದುವೆ, ಹಬ್ಬಗಳಲ್ಲಿ, ನೆಂಟರಿಷ್ಟರು ಬಂದಾಗ ತಯಾರಿಸುತ್ತಾರೆ. 'ನೂಪುಟ್ಟ್ ಕೊರಿ ಎರ್ಚಿ ಕರಿ 'ನೂಲಿನ ಹಿಟ್ಟು, ಕುರಿ ಮಾಂಸದ ಸಾರು ಚೆನ್ನಾಗಿ ಹೊಂದಿಕೊಳ್ಳುವ ಕಾರಣ ಇಷ್ಟಪಟ್ಟು ತಯಾರಿಸಿ, ಬಡಿಸುತ್ತಾರೆ.

ನೂಲಿನ ಹಿಟ್ಟು, ನೂಪುಟ್ಟನ್ನು ಅಕ್ಕಿ ತರಿಯಿಂದ ಮಾಡುತ್ತಾರೆ. ಅಕ್ಕಿಯನ್ನು ಕುದಿಯುವ ನೀರನಲ್ಲಿ ಇಂಗಿಸಿಕೊಳ್ಳಬೇಕು. ಇಂಗಿಸುವಾಗ ಆ ಹಿಟ್ಟಿಗೆ ಮೆಂತ್ಯವನ್ನು ಹುರಿದು ಕುಟ್ಟಿದ ಪುಡಿಯನ್ನು ಬಿಳಿ ಬಟ್ಟೆಯಲ್ಲಿ ಕಟ್ಟಿ ಹಾಕಬೇಕು. ವಿಶೇಷ ಪರಿಮಳಕ್ಕಾಗಿ ಮೆಂತ್ಯದ ಪುಡಿಯನ್ನು ಹಾಕಿ ತಯಾರಿಸುತ್ತಾರೆ.

ಕೆಳಗೆ ಇಳಿಸಿ ಇಂಗಿಸಿದ ಹಿಟ್ಟನ್ನು ಉಂಡೆಗಳನ್ನಾಗಿ ಮಾಡಿ ಹಬೆಯಲ್ಲಿ ಬೇಯಿಸಿಕೊಂಡ ಆನಂತರ ಶಾವಿಗೆ ಒರಳಿನಲ್ಲಿ (ನೂಪುಟ್ಟು ತರಿ) ಹಾಕಿ ನಿಧಾನವಾಗಿ

ಒತ್ತುತ್ತಾರೆ. ಹೀಗೆ ಒತ್ತುವಾಗ ಒರಳಿನ ಕೆಳಗೆ ಇನ್ನೊಬ್ಬರು ತಟ್ಟೆಯನ್ನಿಡುತ್ತಾರೆ. ಒಂದೊಂದಾಗಿ ಒತ್ತಿದ ನೂಪುಟ್ಟನ್ನು ಕುರಿಮಾಂಸ ಅಥವಾ ಕೋಳಿಮಾಂಸದ ಸಾರಿನ ಜೊತೆ ತಿನ್ನುತ್ತಾರೆ. ಆದರೆ ಮಲೆನಾಡು, ಬಯಲುಸೀಮೆಗಳಲ್ಲಿ ಕಾಯಿ ಹಾಲು ಅಥವಾ ಬೆಲ್ಲದ ನೀರನ್ನು ತಯಾರಿಸಿ ಸೇವಿಸುತ್ತಾರೆ.

ಪಾಪುಟ್ಟು (ಪಾಪಿಟ್ಟು)

ಪಾಪುಟ್ಟನ್ನು ಕೊಡವರು ದಿನ ನಿತ್ಯದ ಬೆಳಗ್ಗಿನ ತಿಂಡಿಗೆ ಉಪಯೋಗಿಸುತ್ತಾರೆ. ಅಕ್ಕಿಯನ್ನು ಸಣ್ಣರವೆಯಂತೆ ತರಿಮಾಡಿಕೊಂಡು ಒಂದು ಅಳತೆಯಲ್ಲಿ ಅಕ್ಕಿ ತರಿಯನ್ನು ಅರ್ಧಗಂಟೆ ನೀರಿನಲ್ಲಿ ನೆನೆಸುತ್ತಾರೆ. ಅದಕ್ಕೆ ಒಂದಕ್ಕೆ ಎರಡರಂತೆ ನೀರು, ತೆಂಗಿನಕಾಯಿ ತುರಿ, ರುಚಿಗೆ ಉಪ್ಪು ಸೇರಿಸಿ ಅಗಲವಾದ ತಟ್ಟೆಯಲ್ಲಿ ಹಾಕಿ ಹಬೆಯಲ್ಲಿ 'ಸ್ಯಾಕಲ' ಎಂಬ ವಿಶೇಷ ಪಾತ್ರೆಯಲ್ಲಿ ಬೇಯಿಸುತ್ತಾರೆ. ತುಂಬಾ ಮೃದುವಾಗಿ ಬಿಳಿ ಬಣ್ಣದ ತಟ್ಟೆ ಇಡ್ಲಿಯಂತೆ ಕಾಣುವ ಈ ಪಾಪುಟ್ಟನ್ನು ಮೊಟ್ಟೆ ಸಾರಿನ ಜೊತೆಯಲ್ಲಿ ಅಥವಾ ಕೋಳಿ ಸಾರಿನ ಜೊತೆಯಲ್ಲಿ ಸವಿಯುತ್ತಾರೆ. ಸಕ್ಕರೆ ಬೆರೆಸಿ ಸಿಹಿ ಪಾಪುಟ್ಟನ್ನು ತಯಾರಿಸುತ್ತಾರೆ.

ಓಡಿಟ್ಟು (ಓಡು ಪುಟ್ಟು)

ಓಡು ದೋಸೆ, ಓಡು ಪುಟ್ಟು ಎಂದು ಇದನ್ನು ಕರೆಯಬಹುದು. ರಾತ್ರಿ ಅಕ್ಕಿಯನ್ನು ನೆನಸಿಟ್ಟು ಬೆಳಗ್ಗೆ ನುಣ್ಣಗೆ ರುಬ್ಬಿ ಉಪ್ಪು ಸೇರಿಸಿ ಮಂದವಾದ ತವದಲ್ಲಿ (ಕೊಡವರು ಓಡು ಎನ್ನುತ್ತಾರೆ) ತೆಳುವಾದ ದೋಸೆಯಂತೆ ಓಡಿಗೆ ತವದಲ್ಲಿ ಹುಯ್ಯುತ್ತಾರೆ. ಈ ಓಡು ದೋಸೆಯನ್ನು ಚಟ್ನಿ ಅಥವಾ ಪಲ್ಯದೊಂದಿಗೆ ಅಥವಾ ಕೋಳಿ ಮಾಂಸದ ಸಾರಿನೊಂದಿಗೆ ಸವಿಯಬಹುದು.

ನೀರು ದೋಸೆ

ಕೊಡವರು ಅಕ್ಕಿಯಿಂದ ಮಾಡುವ ಹೊಸ ಹೊಸ ಬಗೆಯ 'ಸನ್ನಾಸ್', 'ಪತ್ತಲು' ಮುಂತಾದ ತಿಂಡಿಯ ನಡುವೆಯೂ ಹಳೆಯ ಅಡುಗೆಯನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ಹಿಂದಿನ ದಿನ ಅಕ್ಕಿಯನ್ನು ನೀರಿನಲ್ಲಿ ನೆನಸಿಟ್ಟು ಮಾರನೇ ದಿನ ತೆಂಗಿನಕಾಯಿ, ಉಪ್ಪು, ಸೇರಿಸಿ ತುಂಬಾ ನುಣ್ಣಗೆ ರುಬ್ಬಿದ ಹಿಟ್ಟನ್ನು ತೆಳುವಾಗಿಸಿ, ಕಾದ ತವಕ್ಕೆ ಎಣ್ಣೆ ಹಚ್ಚಿ ತೆಳುವಾಗಿ ದೋಸೆ ಹುಯ್ಯಬೇಕು. ಈ ನೀರು ದೋಸೆಗೆ ಕೊಡವರು ಹೆಚ್ಚಾಗಿ ಕೋಳಿಸಾರನ್ನು ಬಳಸುತ್ತಾರೆ. ಅಪರೂಪಕ್ಕೆ ಹುಳಿದೋಸೆಯನ್ನು ಕೊಡವರು ತಯಾರಿಸುತ್ತಾರೆ.

ಕುಳಿರಿಟ್ಟು (ಕುಳ್‌ರ್ ಪುಟ್ಟು)

ಇದು ಕೊಡವರ ವಂಶಪಾರಂಪರಿಕ ಅಡುಗೆ. ಈ ಅಡುಗೆ ದೇಹವನ್ನು ಬಹಳ ತಂಪಾಗಿಟ್ಟಿರುತ್ತದೆ. ಇದು ತಣ್ಣಗೆ ಇರುವ ಕಾರಣ 'ಕುಳಿರಿಟ್ಟು' ಎಂದು ಹೆಸರು ಪಡೆದಿದೆ. ಕೊಡವರಲ್ಲಿ 'ಕುಳ್‌ರ್' ಅಂದರೆ ಚಳಿ ಎಂದರ್ಥ. ತಿಂದ ತಕ್ಷಣ ಹೊಟ್ಟೆಯಲ್ಲಿ ತಣ್ಣಗಾಗುವ ಕಾರಣ ಈ ಹೆಸರು ಹೊಂದಾಣಿಕೆಯಾಗುತ್ತದೆ.

"ರಾತ್ರಿ ಮೆಂತ್ಯ, ಅಕ್ಕಿಯನ್ನು ನೆನೆಸಿ ಬೆಳಗ್ಗೆ ಉಪ್ಪು, ಏಲಕ್ಕಿಯನ್ನು ಹಾಕಿ ನುಣ್ಣಗೆ ರುಬ್ಬಿಕೊಂಡು ಹಿಟ್ಟನ್ನು ಸಣ್ಣ ಉರಿಯಲ್ಲಿ ಪಾಯಸದ ಹದಕ್ಕೆ ಇಂಗಿಸಿಕೊಂಡು ಅಗಲವಾದ ತಟ್ಟೆಗೆ ಹಾಕಿ ತಣ್ಣಗಾಗಿಸಬೇಕು. ತಣ್ಣಗಾದ ತಟ್ಟೆಯಲ್ಲಿ ಹರಡಿದ ಹಿಟ್ಟನ್ನು ತುಂಡರಿಸಿ ಸಣ್ಣ ಚೂರುಗಳನ್ನಾಗಿ ಮಾಡಿ, ಬೆಲ್ಲದ ಸಿಹಿ ನೀರನ್ನು ತಯಾರಿಸಿ ಕೊಡವರು ಕುಳಿರಿಟ್ಟನ್ನು ಉಪಯೋಗಿಸುತಿದ್ದರು.[೩೩]

ತಟ್ಟೆಯ ಹಿಟ್ಟು (ತಳಿಯ ಪುಟ್ಟ್)

ತಟ್ಟೆ ಇಡ್ಲಿಯನ್ನು ಹೋಲುವ ಈ ಅಡುಗೆಯನ್ನು ಕೊಡವರು ಆಗಾಗ್ಗೆ ತಯಾರಿಸುತ್ತಾರೆ. ಅಕ್ಕಿ, ಉದ್ದಿನ ಬೇಳೆ, ಮೆಂತ್ಯವನ್ನು ನೀರಿನಲ್ಲಿ ನೆನೆಸಿ ರಾತ್ರಿಯೆ ರುಬ್ಬಬೇಕು. ರುಬ್ಬಿದ ಅಕ್ಕಿ ಹಿಟ್ಟಿನ ಮಿಶ್ರಣಕ್ಕೆ ಸಣ್ಣ ರವೆಯಂತಿರುವ ತರಿಯನ್ನು ಸೇರಿಸಿ ಗಂಜಿಯ ರೂಪದ ಹದಕ್ಕೆ ಬರುವಂತೆ ಅಕ್ಕಿ ಗಂಜಿಯನ್ನು ತಯಾರಿಸಿ ಬೆರೆಸಬೇಕು.

ಬೆರೆಸಿದ ಅಕ್ಕಿಯ ಮಿಶ್ರಣ ಹಾಗೂ ಗಂಜಿಯ ಮಿಶ್ರಣವನ್ನು ಚೆನ್ನಾಗಿ ಕಲಸಿ ಮಾರನೇ ದಿನ ಬೆಳಗ್ಗೆ ಉಪ್ಪು ಹಾಕಿ ಸಣ್ಣ ತಟ್ಟೆಗೆ ಎಣ್ಣೆ ಸವರಿ ಮುಂದವಾಗಿ ತಟ್ಟೆ ಇಡ್ಲಿಯಂತೆ ಹಬೆಯಲ್ಲಿ ಬೇಯಿಸುತ್ತಾರೆ. ಇದನ್ನು ಕೋಳಿಮಾಂಸದ ಸಾರು ಅಥವಾ ಚಟ್ನಿಯ ಜೊತೆ ಸವಿಯುತ್ತಾರೆ.

ಅಕ್ಕಿ ಇವರ ಆಹಾರ ಪದ್ಧತಿಯಲ್ಲಿ ಪ್ರಧಾನ ಪಾತ್ರ ವಹಿಸಿರುವುದನ್ನು ಈ ಅಡುಗೆಗಳಲ್ಲಿ ಕಾಣಬಹುದು. ಕೊಡವರು ಅಕ್ಕಿಯಿಂದ ವಿವಿಧ ಬಗೆಯ ಅಡುಗೆಯನ್ನು ತಯಾರಿಸಿ ಋತುಮಾನಗಳಿಗನುಗುಣವಾಗಿ ಸೇವಿಸುತ್ತಾರೆ.

ಹಣ್ಣಿನ ವಿಶೇಷ ಅಡುಗೆ

ಕೊಡಗಿನಲ್ಲಿ ಹಣ್ಣುಗಳು ಹೇರಳವಾಗಿ ಸಿಗುತ್ತವೆ. ಕೊಡವರು ಹಣ್ಣುಗಳನ್ನು ಉಪಯೋಗಿಸಿಕೊಂಡು ವಿವಿಧ ರೀತಿಯ ಅಡುಗೆಗಳನ್ನು ತಯಾರಿಸುತ್ತಾರೆ. ಕೊಡಗಿನಲ್ಲಿ ಸಾಮಾನ್ಯವಾಗಿ ಎಲ್ಲಾ ಕಾಲದಲ್ಲಿಯೂ ಬಗೆಬಗೆಯ ಹಣ್ಣುಗಳು ಸಿಗುತ್ತವೆ. ಕೊಡವರು ಹಣ್ಣನ್ನು 'ಪಣ್ಣ್' ಎಂದು ಕರೆಯುತ್ತಾರೆ. ಕರ್‌ಮಂಜಿ ಪಣ್ಣ್, ಕಾಕೆ ಪಣ್ಣ್, ತೊಲಿಯರ್ ಹಣ್ಣು, ಎಲಂದೆ ಹಣ್ಣು, ನೇರಳೆ ಹಣ್ಣು, ಮಜ್ಜಿಗೆ ಹಣ್ಣು, ಕೊಡಂಬಾಳೆ ಹಣ್ಣು, ಕೋಡ ಕಿತ್ತಳೆ, ಜಮುನಾರಿ ಹಣ್ಣು, (ಜಂಬುನೇರಳೆ), ರಾಮಫಲ, ಸೀತಾಫಲ, ಕದಲಿ ಬಾಳೆ, ಚೊಂದ ಕದಲಿ, ಪಚ್ಚೆಕದಲಿ, ಪೂಬಾಳೆ, ಏಲಕ್ಕಿ ಬಾಳೆ, ಮರಬಾಳೆ, ಕರಿಬಾಳೆ, ನೇಂದ್ರಬಾಳೆ, ಹಲಸಿನಹಣ್ಣು, ಮಾವಿನ ಹಣ್ಣು, (ಕಾಡು ಮಾಂಗೆ, ಗೋಮಾಂಗೆ) ನೆಲ್ಲಿಕಾಯಿ, ನಿಂಬೆಹಣ್ಣು, ಕಿತ್ತಳೆ ಹಣ್ಣು, ಸೀಬೆ ಹಣ್ಣು, (ಪೇರಲಿ) ಇರಳೆ ಹಣ್ಣು, ಎರಡು ಬಗೆ ನೆಲ್ಲಿಕಾಯಿ (ಕೊಡವರು ನೆಲ್ಲಿಯನ್ನು ಎಮ್ಮೆನೆಲ್ಲಿ, ಪಯ್‌ನೆಲ್ಲಿ ಎನ್ನುತ್ತಾರೆ.) ಬಂಡುಳಿ, ಬಡವಪುಳಿ, ಹೀಗೆ ಹಲವಾರು ವಿಶೇಷ ರೀತಿಯ ಹಣ್ಣುಗಳು ಸಿಗುತ್ತವೆ.

ಇವರು ಹಣ್ಣುಗಳಿಂದ ವಿವಿಧ ರೀತಿಯ ಸಾರುಗಳನ್ನು, ಸಿಹಿ ತಿಂಡಿಯನ್ನು ಮತ್ತು ವಿಶೇಷ 'ಹಣ್ಣಿನ ರಸ' (ವೈನ್) ಮತ್ತು 'ಜಾಮ್' ತಯಾರಿಸುತ್ತಾರೆ. ಕೊಡವರ ಈ ಖಾದ್ಯಗಳು ಅಂತರರಾಷ್ಟ್ರೀಯ ಮಟ್ಟದಲ್ಲೂ ಪ್ರಖ್ಯಾತಿ ಪಡೆದಿವೆ.

ಹಲಸಿನ ಹಣ್ಣಿನ ತಿನಿಸುಗಳು: "ಹಸಿದು ಹಲಸಿನ ಹಣ್ಣು ತಿನ್ನಬೇಕು. ಉಂಡು ಬಾಳೆ ಹಣ್ಣು ತಿನ್ನಬೇಕು" ಎಂಬ ಗಾದೆಯಂತೆ ಕೊಡಗಿನಲ್ಲಿ ಸಿಗುವ ಹಲಸಿನ ಹಣ್ಣು ಎಲ್ಲರ ಹೊಟ್ಟೆ ತುಂಬಿಸುತ್ತದೆ. ಬಡವರ ಹಸಿವನ್ನು ಇಂಗಿಸುತ್ತದೆ.

ಕೂಲೆ ಹಲಸಿನ ಹಿಟ್ಟು (ಕೂಲೆ ಪುಟ್ಟು)

ಹಲಸಿನ ಹಣ್ಣಿನಿಂದ ಕೊಡವರು ಹಲವಾರು ವಿಶೇಷ ತಿನಿಸುಗಳನ್ನು ತಯಾರಿಸುತ್ತಾರೆ. ಇವರು ತಯಾರಿಸುವ ಕೂಲೆ ಪುಟ್ಟನ್ನು ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ಮಾಗಿದ ಹಲಸಿನ ಹಣ್ಣಿನ ತೊಳೆ ಬಿಡಿಸಿ ಅಕ್ಕಿ ಜರಡಿ (ವನಲಿ) ಯಲ್ಲಿ ಚೆನ್ನಾಗಿ ಉಜ್ಜಿ ರಸ ತೆಗೆಯುತ್ತಾರೆ. ಈ ರಸದ ಜೊತೆ ರವೆಯಂತಿರುವ ಅಕ್ಕಿ, ತೆಂಗಿನಕಾಯಿಯ ಚೂರು, ಏಲಕ್ಕಿಪುಡಿ, ಬೆಲ್ಲ ಅಥವಾ ಸಕ್ಕರೆ, ಚಿಟಿಕೆ ಉಪ್ಪು, ಎಲ್ಲವನ್ನೂ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ, 'ಕೂಲೆ ಎಲೆ' ಎಂಬ ಒಂದು ಜಾತಿಯ ಎಲೆ ಅಥವಾ ಬಾಳೆ ಎಲೆಯನ್ನು ಬಾಡಿಸಿಕೊಂಡು ಒಂದೊಂದು ಸೌಟು ಅಳತೆ ಮಾಡಿ ಈ ಮಿಶ್ರಣವನ್ನು ಎಲೆಗೆ ಹಾಕಿ ಮಡಿಸಿ, ಹಬೆಯಲ್ಲಿ ಬೇಯಿಸಬೇಕು. ಬೇಯಿಸಿದ ಕೂಲೆ ಪುಟ್ಟು ತಣ್ಣಗಾದರೆ ರುಚಿ ಜಾಸ್ತಿ ಇರುತ್ತದೆ. ಕೊಡವರು ಇದರ ಜೊತೆ ತುಪ್ಪ ಹಾಕಿ ಸವಿಯುತ್ತಾರೆ. ಮಳೆಗಾಲದಲ್ಲಿ ಹಲಸಿನ ಹಣ್ಣು ಜಾಸ್ತಿ ಸಿಗುವ ಕಾರಣ ಈ ಅಡುಗೆಯನ್ನು ಮಳೆಗಾಲದಲ್ಲಿ ಹೆಚ್ಚು ಮಾಡುತ್ತಾರೆ. ಕೊಡಗಿನಲ್ಲಿ ಎರಡು ಬಗೆಯ ಹಲಸನ್ನು ನೋಡಬಹುದು. ಬರಿಕೆ ಹಲಸಿನಹಣ್ಣು ಮತ್ತು ಕೂಲೆ ಹಲಸಿನಹಣ್ಣು ಮೇಲಿನ ಈ ತಿನಿಸನ್ನು ಕೂಲೆ ಹಣ್ಣಿನಿಂದ ಮಾತ್ರ ತಯಾರಿಸುತ್ತಾರೆ. ಏಕೆಂದರೆ ಈ ಹಣ್ಣು ತುಂಬಾ ಮೆದುವಾಗಿರುತ್ತದೆ. ಕೂಲೆ ಹಿಟ್ಟಿನ ಪರಿಮಳ ತುಂಬಾ ವಿಶೇಷವಾಗಿರುತ್ತದೆ.

ಹಲಸಿನ ಹಣ್ಣಿನ ದೋಸೆ: ಒಂದು ಅಳತೆಗೆ ಅಕ್ಕಿ ನೆನೆಸಿ, ಅಕ್ಕಿ ಜೊತೆಗೆ ಹಲಸಿನ ತೊಳೆ, ಬೆಲ್ಲ, ಏಲಕ್ಕಿ, ತೆಂಗಿನಕಾಯಿ ಚೂರು ಹಾಕಿ ರುಬ್ಬಿದ ನಂತರ ಕಾವಲಿಯ ಮೇಲೆ ಸ್ವಲ್ಪ ಮಂದವಾಗಿ ದೋಸೆಯ ರೀತಿ ಹುಯ್ಯುವರು.

ಹಲಸಿನ ಹಣ್ಣಿನ ಜಾಮ್: ಈ ಹಣ್ಣನ್ನು ರುಬ್ಬಿ ಚೆನ್ನಾಗಿ ಹಿಂಡಿ ರಸ ತೆಗೆದು ಒಲೆಯ ಮೇಲಿಟ್ಟು ಕುದಿಸಿ ಸಕ್ಕರೆ, ಎಸೆನ್ಸ್ ಹಾಕಿ ತಿರುವಿ ಗಟ್ಟಿಯಾದ ಇಳಿಸುವರು. ಮೇಲೆ ಹಣ್ಣಿನ ರಸದ ಜೊತೆ ಸೀಬೆಹಣ್ಣು, ಬಾಳೆಹಣ್ಣನ್ನು ಬೇಯಿಸಿ ಈ ರಸದೊಂದಿಗೆ ಬೆರೆಸಿ ಜಾಮ್ ತಯಾರಿಸುವರು.

ಸಿಹಿ ಪಕೋಡ: ಹಲಸಿನ ಹಣ್ಣು, ತೆಂಗಿನಕಾಯಿ, ಏಲಕ್ಕಿ, ನೆನೆಸಿದ ಅಕ್ಕಿಯನ್ನು ರುಬ್ಬಿಕೊಳ್ಳುವರು. ಸಿಹಿ ಬೇಕಾದರೆ ಬೆಲ್ಲ ಅಥವಾ ಸಕ್ಕರೆಯನ್ನು ಸೇರಿಸಬಹುದು. ಕಾದ ಎಣ್ಣೆಗೆ ಸಣ್ಣ ಸಣ್ಣ ಉಂಡೆಗಳನ್ನಾಗಿ ಮಾಡಿ ಹಾಕಿ ಚೆನ್ನಾಗಿ ಕೆಂಪು ಬಣ್ಣ ಬರುವವರೆಗೆ ಕರಿದು ಇಳಿಸುತ್ತಾರೆ. ಬಿಸಿಯಾಗಿರುವಾಗಲೇ ತಿಂದರೆ ರುಚಿಯಾಗಿರುತ್ತದೆ. ಇದಕ್ಕೆ ಗಾರಿಗೆ ಎಂದೂ ಕರೆಯುತ್ತಾರೆ.

ಹಲಸಿನ ಕಾಯಿಯ ಹಪ್ಪಳ: ಹಲಸಿನ ಕಾಯಿಯ ತೊಳೆಯನ್ನು ಬಿಡಿಸಿ ನೀರಿನಲ್ಲಿ ಬೇಯಿಸಿಕೊಳ್ಳುವರು. ಬೇಯಿಸಿದ ಹಲಸಿನ ಕಾಯಿ ಜೊತೆಗೆ ಕೊಡಗಿನ ವಿಶೇಷ ಗಾಂಧಾರಿ ಮೆಣಸಿನಕಾಯಿ, ಕರಿಮೆಣಸು, ಜೀರಿಗೆ ಹಾಕಿ ಕುಟ್ಟಿ ಹಿಟ್ಟು

ಅಂಟು ಬಂದಾಗ ಎಲೆಯ ಮೇಲೆ ತಟ್ಟಿ ಬಿಸಿಲಿನಲ್ಲಿ ಒಣಗಿಸುತ್ತಾರೆ. ಹಾಗಯೇ ಹಲಸಿನ ದಿಂಡನ್ನು ನೀರಿನಲ್ಲಿ ಉಪ್ಪು ಹಾಕಿ ಕುದಿಸಿ ಉಪ್ಪಿನಕಾಯಿ ಹಾಕುತ್ತಾರೆ. ಈ ದಿಂಡನ್ನು ಬೇರೆ ಉಪ್ಪಿನಕಾಯಿ ಜೊತೆ ಬೆರೆಸುತ್ತಾರೆ. ಹಲಸಿನ ಮಿಡಿಯನ್ನು ಬೇಯಿಸಿ ಪಲ್ಯವನ್ನು ಮತ್ತು ಮಿಡಿಯನ್ನು ಕಡ್ಲೆಕಾಳಿನೊಂದಿಗೆ ಸಾರನ್ನು ತಯಾರಿಸುತ್ತಾರೆ.

ಹಲಸಿನ ಬೀಜದ ಚಟ್ನಿ : ಹಲಸಿನ ಬೀಜವನ್ನು ಸಾರಿನೊಂದಿಗೆ ಮತ್ತು ಉಪ್ಪು ಹಾಕಿ ಬೇಯಿಸಿ ತಿನ್ನುವ ಪದ್ಧತಿಯಿದೆ. ಮಳೆಗಾಲದಲ್ಲಿ ಒಲೆಯ ಮುಂದ ಕುಳಿತು ಕೆಂಡದಲ್ಲಿ ಹಲಸಿನ ಬೀಜವನ್ನು ಚೆನ್ನಾಗಿ ಸುಟ್ಟು ಸಿಪ್ಪೆ ಸುಲಿದು ತಿನ್ನುವರು. ಈ ಬೀಜವನ್ನು ಹುರಿದು ತೆಂಗಿನಕಾಯಿ, ಹಸಿಮೆಣಸು, ಬೆಳ್ಳುಳ್ಳಿ, ಹುಣಸೆ ಹಣ್ಣು, ಉಪ್ಪು ಹಾಕಿ ಚೆನ್ನಾಗಿ ರುಬ್ಬಿ ಚಟ್ನಿ ತಯಾರಿಸುವರು. ಈ ಚಟ್ನಿ ಅಕ್ಕಿ ರೊಟ್ಟಿಯೊಂದಿಗೆ ಚೆನ್ನಾಗಿ ಹೊಂದುತ್ತದೆ. ಹಲಸಿನ ಬೀಜವನ್ನು ಸಿಪ್ಪೆ ಸುಲಿದು ಬೇಳೆಯ ಜೊತೆ ಸೇರಿಸಿ ಸಾರನ್ನು ತಯಾರಿಸುತ್ತಾರೆ.

ಬಾಳೆ ಮುರುಕು: ಕೊಡಗಿನಲ್ಲಿ ಬಾಳೆ ಹಣ್ಣು ಎಲ್ಲಾ ಕಾಲದಲ್ಲೂ ಸಿಗುತ್ತದೆ. ಕೊಡಗಿನ ಬಾಳೆ ಹಣ್ಣುಗಳು ತುಂಬಾ ರುಚಿಕರವಾಗಿರುತ್ತವೆ. ಇಲ್ಲಿ ಪ್ರಮುಖವಾಗಿ ಏಲಕ್ಕಿ ಬಾಳೆ, ಪೂಬಾಳೆ, (ಹೂ ಬಾಳೆ) ಮರಬಾಳೆ, ಕರಿಬಾಳೆ, ಬೂದಿಬಾಳೆ, ನೇಂದ್ರಬಾಳೆ ಎಂಬ ನಾನಾ ರೀತಿಯ ಬಾಳೆ ಹಣ್ಣುಗಳು ಸಿಗುತ್ತವೆ. ಪಚ್ಚಬಾಳೆಯನ್ನು ಬೆಳೆಸಿದರೂ ತೀರ ಕಡಿಮೆ ಎನ್ನಬಹುದು.

ಕಳಿತ ಬಾಳೆ ಹಣ್ಣನ್ನು ಮೈದಾ ಹಿಟ್ಟು, ಸಕ್ಕರೆ, ಏಲಕ್ಕಿ ಪುಡಿ, ತೆಂಗಿನಕಾಯಿ ತುರಿ ಎಲ್ಲವನ್ನೂ ಕಲಸಿದ ಆನಂತರ ಕಾದ ಎಣ್ಣೆಯಲ್ಲಿ ಕರಿಯುತ್ತಾರೆ. 'ಬಾಳೆ ಮುರುಕು' ಎಂದು ಹೆಸರಿರುವ ಈ ತಿನಿಸಿಗೆ ಇತರೆಡೆ ಬಾಳೆ ಹಣ್ಣಿನ ಗಾರಿಗೆ ಎನ್ನುತ್ತಾರೆ.

ನೇಂದ್ರ ಬಾಳೆ ಹುರಿಯುವುದು (ಬಾಳೆಪೊರಿಪೊ)

ನೇಂದ್ರಿಯ ಬಾಳೆ ಹಣ್ಣನ್ನು ತೆಳುವಾಗಿ ತುಂಡರಿಸಿ, ಮೈದಾಹಿಟ್ಟು ಸೋಡಾ, ಚಿಟಿಕೆ ಉಪ್ಪು ಬೆರೆಸಿ ಕಾದ ಎಣ್ಣೆಯಲ್ಲಿ ಬಿಡುತ್ತಾರೆ. ಕೆಂಪಗೆ ಬೆಂದ ತಿನಿಸು ರುಚಿಯಾಗಿರುತ್ತದೆ. ನೇಂದ್ರಿಯ ಬಾಳೆ ತಿನಿಸು ಕೇರಳದಿಂದ ಬಂದಿದೆ. ಕೊಡಗಿನಲ್ಲಿ ಕೇರಳದ ಮಲೆಯಾಳಿಗಳು ಮತ್ತು ಮಾಪಿಳ್ಳೆಗಳು ಹೆಚ್ಚಾಗಿರುವುದರಿಂದ ಅಡುಗೆಯಲ್ಲಿ ಈ ಮಾರ್ಪಾಡು ಕಂಡು ಬರುತ್ತದೆ.

ಬಾಳೆ ಹಣ್ಣಿನ ತಂಬಿಟ್ಟು (ತಂಬುಟ್ಟ್)

ತಂಬಿಟ್ಟು ಹುತ್ತರಿ ಹಬ್ಬದ ವಿಶೇಷ ತಿನಿಸಾಗಿದೆ. ನವಂಬರ್ ಅಥವಾ ಡಿಸೆಂಬರ್ ತಿಂಗಳಿನಲ್ಲಿ ಆಚರಿಸುವ ಈ ಹಬ್ಬದಲ್ಲಿ ತಂಬಿಟ್ಟನ್ನು ಮಾಡಲೇಬೇಕು. ಪುತ್ತರಿ ಹಬ್ಬದ ಊಟದ ರುಚಿಯನ್ನು ನೆನೆಸುವ ಒಂದು ಹಾಡು ಇಂತಿದೆ.

"ತಂಬೂಟ್ಟ್ ಪುತ್ತರಿ ಮೀಂಗರಿ ಕೂಳ್ ಪೊಯಿಲೇ ಪೊಯಿಲೇ
ಒಕ್ಕ್ ಪುತ್ತರಿ ಒಮ್ಮತೆ ಬಾತ್ ಪೊಯಿಲೇ ಪೊಯಿಲೇ

ಹೋ ಒಪ್ಪಕ ಪುತ್ತರಿ ಬಣ್ಣತೆ ಬಾತ್ ಪೊಯಿಲೇ ಪೊಯಿಲೇ
ಪೋಪಕ ಪುತ್ತರಿ ಎಣ್ಣತೆ ಪೋಚಿ ಪೊಯಿಲೇ ಪೊಯಿಲೇ

"ಹುತ್ತರಿ ತಂಬಿಟ್ಟು, ಕೇಚಕ್ಕಿ ಅನ್ನ ಮತ್ತು ಮೀನಿನ ಸಾರಿನ ರುಚಿಯನ್ನು ಹೇಳುತ್ತಾ ರುಚಿ, ಸಂತೋಷ ಕೊಡುವ ಹುತ್ತರಿಯನ್ನು ವರುಷಕೊಮ್ಮೆ ಬಂದು ಸದ್ದಿಲ್ಲದೆ ಹೋಗುತ್ತಿಯಾ, ನಮ್ಮನ್ನು ಅಗಲಬೇಡ" ಕುಸುಲಕ್ಕಿಯನ್ನು ಸಣ್ಣ ಉರಿಯಲ್ಲಿ ಹುರಿದು ಏಲಕ್ಕಿಯನ್ನು ಹಾಕಿ ನುಣ್ಣಗೆ ಪುಡಿಮಾಡಿಟ್ಟುಕೊಂಡು ಅದಕ್ಕೆ ಕಳಿತ ಬಾಳೆಹಣ್ಣನ್ನು ಕಲಸಿ, ತೆಂಗಿನಕಾಯಿ ತುರಿ ಸೇರಿಸಿ ರುಚಿಯಾದ ತಂಬಿಟ್ಟನ್ನು ತಯಾರಿಸುತ್ತಾರೆ. ಬೇಕಾದರೆ ಎಳ್ಳನ್ನು ಹುರಿದು ಹಾಕಬಹುದು. ತುಪ್ಪ ಹಾಕಿ ತಿಂದರೆ ರುಚಿ ಹೆಚ್ಚು. ಇಂತಹ ತಂಬಿಟ್ಟನ್ನು ಕೊಡಗಿನಲ್ಲಿ ಮಾತ್ರ ಕಾಣಲು ಸಾಧ್ಯ. ಹುರಿದ ಕುಸುಲಕ್ಕಿ ಪುಡಿಯನ್ನು ಶೇಖರಿಸಿಟ್ಟುಕೊಂಡರೆ ಯಾವಾಗ ಬೇಕಾದರೂ ಇದನ್ನು ತಯಾರಿಸಬಹುದು.

ಬಾಳೆ ಹಣ್ಣಿನ ಏಳಕ್ಕಿ ಪುಟ್ಟು

ಏಳು ತರದ ವಸ್ತುಗಳನ್ನು ಹಾಕಿ ಮಾಡುವುದರಿಂದ ಏಳಕ್ಕಿ ಹಿಟ್ಟು ಎಂಬ ಹೆಸರನ್ನು ಪಡೆದಿದೆ. ಕೊಡವರು ಹುತ್ತರಿ ಹಬ್ಬಕ್ಕೆ ಸಾಂಪ್ರದಾಯಿಕವಾಗಿ ಇದನ್ನು ಮಾಡುತ್ತಾರೆ. ಹುತ್ತರಿ ಹಬ್ಬದ ಸಮಯದಲ್ಲಿ ಹೊಸ ಬತ್ತವನ್ನು ಸಿಪ್ಪೆ ತೆಗೆದು ಏಳು ಅಕ್ಕಿಯನ್ನಾಗಿಸಿ, ನೆನೆಸಿದ ಅಕ್ಕಿ ಪುಡಿಯ ಜೊತೆಗೆ ಬಾಳೆ ಹಣ್ಣು, ತೆಂಗಿನಕಾಯಿ ಚೂರು ಏಳು ಭತ್ತ, ಕಲ್ಲಿನ ಚೂರು, ಹಾಗಲಕಾಯಿ, ಹುತ್ತರಿ ಗೆಣಸು ಮುಂತಾದ ಏಳು ತರದ ವಸ್ತುಗಳನ್ನು ಹಾಕಿ ತಯಾರಿಸುವ ಈ ಖಾದ್ಯ ವಿಶೇಷವಾದದ್ದು.

ಮಾವಿನ ಹಣ್ಣಿನ ಸಾರು (ಮಾಂಗೆ ಕರಿ)

ಕೊಡಗಿನಲ್ಲಿ ಮಳೆಗಾಲದಲ್ಲಿ ಸಿಗುವ ಜೀರಿಗೆ ಮಾವಿನ ಹಣ್ಣನ್ನು ಬೇರೆ ಕಡೆ ನೋಡಲು ಸಾಧ್ಯವಿಲ್ಲ. ಪುಟ್ಟ ಆಕಾರದ ಮಾವಿನ ಹಣ್ಣು ಮಳೆಗಾಲದಲ್ಲಿ ಹೆಚ್ಚು ಸಿಗುವುದರಿಂದ ಉಪ್ಪು ನೀರಿಗೆ ಹಾಕಿ ಎಲ್ಲಾ ಕಾಲದಲ್ಲೂ ಕೊಡವರು ಉಪಯೋಗಿಸುತ್ತಾರೆ. ಕೊಡವರು ಈ ಸಾಂಪ್ರದಾಯಿಕ ಅಡುಗೆಯನ್ನು ಮದುವೆಯಲ್ಲೂ ಮಾಡುತ್ತಾರೆ. ಮಾವಿನ ಹಣ್ಣಿನ ಸಿಪ್ಪೆ ಸುಲಿದು, ಈರುಳ್ಳಿ, ಉಪ್ಪು, ಮೆಣಸನ್ನು ಕಲೆಸಿಟ್ಟು ಬೆಳ್ಳುಳ್ಳಿ ಕರಿಬೇವಿನೊಂದಿಗೆ ವಗ್ಗರಣೆ ಹಾಕಿ ಜೀರಿಗೆ, ಧನಿಯಾ ಪುಡಿ, ಬೆಲ್ಲವನ್ನು ಹಾಕಿ ತಯಾರಿಸುವ ಈ ಸಾರು ವಿಶೇಷ ಕಪ್ಪು ಬಣ್ಣದಿಂದ ಕೂಡಿದ್ದು ಪರಿಮಳಭರಿತವಾಗಿರುತ್ತದೆ.

ಮಾವಿನ ಹಣ್ಣಿನ ಚಟ್ನಿ (ಮಾಂಗೆ ಪಜ್ಜಿ)

ಕೊಡವರಲ್ಲಿ ಮಾಂಗೆ ಪಜ್ಜಿ ತುಂಬಾ ರುಚಿಯಾಗಿರುತ್ತದೆ. ಚಟ್ನಿಗೆ ಬಳಸುವ ಎಲ್ಲಾ ಪದಾರ್ಥಗಳನ್ನು ರುಬ್ಬಿಕೊಂಡು ನಂತರ ಮಾವಿನ ಹಣ್ಣನ್ನು ಸಿಪ್ಪೆ ಸುಲಿದು ತಿರುಳನ್ನು ಚಟ್ನಿ ಜೊತೆ ಸೇರಿಸುತ್ತಾರೆ. ಇದನ್ನು ತುಪ್ಪ ಅನ್ನದ ಜೊತೆ ಅಥವಾ ಇತರ ಸಮಯದಲ್ಲಿ ಊಟದ ಜೊತೆ ಬಳಸುತ್ತಾರೆ.

ಕೈಹುಳಿ ಚಟ್ನಿ (ಕೈಪುಳಿ ಪಜ್ಜಿ)

ಕೊಡವರು ತಯಾರಿಸುವ ಕೈಪುಳಿ ಪಜ್ಜಿ ಆರೋಗ್ಯದ ದೃಷ್ಟಿಯಿಂದ ಮುಖ್ಯವಾಗಿದೆ. ಬೆಳಗಿನ ಜಾವ ಕೈ ಹುಳಿಯನ್ನು ಜೀರಿಗೆಯೊಂದಿಗೆ ಉಪ್ಪು ಹಾಕಿ ತಿಂದರೆ ಪಿತ್ತ ಶಮನ, ವಾಕರಿಕೆ, ತಲೆ ಸುತ್ತುವಿಕೆ ಕಡಿಮೆಯಾಗುತ್ತದೆಂಬ ನಂಬಿಕೆ ಕೊಡವರಲ್ಲಿದೆ. ಬಾಣಂತಿಯರಿಗೆ ಅನ್ನದ ಜೊತೆ ಈ ಚಟ್ನಿಯನ್ನು ತಿನ್ನಿಸುತ್ತಾರೆ. ಮಳೆಗಾಲದಲ್ಲಿ ಶೀತಬಾಧೆಯನ್ನು ಈ ಚಟ್ನಿ ತಡೆಯುತ್ತದೆ.

ಕೆಂಡದಲ್ಲಿ ಕೈಹುಳಿಯನ್ನು ಸುಟ್ಟು ಸಿಪ್ಪೆ ತೆಗೆದು, ಮೆಣಸು, ಜೀರಿಗೆ ಬೆಳ್ಳುಳ್ಳಿ, ಒಣಮೆಣಸಿನಕಾಯಿ, ಕೊಬ್ಬರಿಯನ್ನು ರುಬ್ಬಿ ಸಾಸುವೆ, ಬೆಳ್ಳುಳ್ಳಿ ಕರಿಬೇವು ಜೊತೆಗೆ ಸ್ವಲ್ಪ ಬೆಲ್ಲವನ್ನು, ಉಪ್ಪನ್ನು ಹಾಕುತ್ತಾರೆ. ನೋಡುವುದಕ್ಕೆ ಕಪ್ಪು ಬಣ್ಣವಾದರೂ ಪಜ್ಜಿ ರುಚಿಯಾಗಿರುತ್ತದೆ.

ಸಾಂದರ್ಭಿಕ ಅಡುಗೆ

ಹುತ್ತರಿ ಗೆಣಸಿನ ಪಾಯಸ : ಹುತ್ತರಿ ಹಬ್ಬದಲ್ಲಿ ಹುತ್ತರಿ ಗೆಣಸಿನ ಪಾಯಸ ಕಡ್ಡಾಯವಾಗಿ ಮಾಡುತ್ತಾರೆ. ಬೇರೆಲ್ಲೂ ಕಾಣದಂತಹ ಈ ಗೆಡ್ಡೆಯನ್ನು ಬೇಯಿಸಿ ಸಾರು ಪಲ್ಯವನ್ನು ತಯಾರಿಸುತ್ತಾರೆ. ಹುತ್ತರಿ ಗೆಣಸನ್ನು ಸಣ್ಣ ಸಣ್ಣ ತುಂಡನ್ನಾಗಿ ಬೇಯಿಸಿ, ಆರಿದ ಮೇಲೆ ಚೆನ್ನಾಗಿ ಕಲೆಸಿ ಅದಕ್ಕೆ ಸಕ್ಕರೆ, ಏಲಕ್ಕಿಯನ್ನು ಹಾಕುತ್ತಾರೆ. ನೋಡುವುದಕ್ಕೆ ಬಿಳಿ ಬಣ್ಣದಂತೆ ಇರುವ ಈ ಪಾಯಸ ರುಚಿಯಾಗಿರುತ್ತದೆ.

ಮರ ಬಾಳೆಕಾಯಿ ಬೇಯಿಸುವುದು (ಚಾತ ಪುಕ್ಕುವೊ): ಕೊಡವರು ಶವ ಸಂಸ್ಕಾರವಾದ ದಿನ ಅಂದರೆ ಸ್ಮಶಾನದಿಂದ ಬಂದ ಅನಂತರ ಮರಬಾಳೆಯನ್ನು ಬೇಯಿಸಿ ತಿನ್ನುತ್ತಾರೆ. ಮರಬಾಳೆಯನ್ನು ವೃತ್ತಾಕಾರದಲ್ಲಿ ಕುಯ್ದು ಉಪ್ಪು ಅರಿಸಿನ ಪುಡಿ ಹಾಕಿ ಬೇಯಿಸುತ್ತಾರೆ. ಆ ದಿನ ಸಂಜೆ ಇದನ್ನು ಮೃತ ವ್ಯಕ್ತಿಗಿಂತ ಕಿರಿಯರು ತಿನ್ನುತ್ತಾರೆ. ಆದ್ದರಿಂದ ಕೊಡವರಲ್ಲಿ ಬೇರೆ ಸಮಯದಲ್ಲಿ ಬಾಳೆಕಾಯಿ ಸಾರನ್ನು ಮಾಡುವುದಿಲ್ಲ. ಮತ್ತು ಮಧ್ಯಾಹ್ನದ ಅನಂತರ ಬಾಳೆಗೊನೆಯನ್ನು ಸಹ ಕಡಿಯುವುದಿಲ್ಲ. ಇತ್ತೀಚೆಗೆ ಈ ಬಾಳೆಕಾಯಿಯನ್ನು ಶವ ಸಂಸ್ಕಾರದ ದಿನ ವಗ್ಗರಣೆ ಮಾಡಿ ತಿನ್ನುವ ಪದ್ಧತಿ ರೂಢಿಯಲ್ಲಿದೆ.

ಹೆಸರುಬೇಳೆ ಪಾಯಸ (ಮೌತರಿ ಪಾಯಸ): ಇದನ್ನು ಕೊಡವರು ತಿಥಿಯ ದಿನ (ಮಾದ) ಮಾತ್ರ ಮಾಡುತ್ತಾರೆ. ಬಿಳಿಬೆಲ್ಲ, ತಂಬಿಟ್ಟು ಪುಡಿ, ತುಪ್ಪವನ್ನು ಹಾಕಿದ ಈ ಪಾಯಸ ತಿಥಿ ಅಡುಗೆಯಾದ್ದರಿಂದ ಕೊಡವರ ಮನೆಯಲ್ಲಿ ಬೇರೆ ಯಾವ ಸಂದರ್ಭದಲ್ಲಿಯೂ ಹೆಸರು ಬೇಳೆ ಪಾಯಸ ಮಾಡುವುದಿಲ್ಲ. ಹಾಗಯೇ ತಿಥಿಗೆ ಬೂದುಗುಂಬುಳ ಸಾರನ್ನು ಮಾಡುವುದರಿಂದ ಇತರ ಸಮಯದಲ್ಲಿ ಬೂದುಗುಂಬಳವನ್ನು ಕೊಡವರು ಉಪಯೋಗಿಸುವುದಿಲ್ಲ.

ಸಿಹಿ ಕುಂಬಳ ಸಾರು ಮತ್ತು ದೋಸೆ (ಕುಂಬಳ ಕರಿ): ಕೊಡವರ ಕಾವೇರಿ ಚಂಗ್ರಾದಿ ಅಂದರೆ ತುಲಾ ಸಂಕ್ರಮಣದಂದು ಕುಂಬಳ ಸಾರು ದೋಸೆಯನ್ನು ಮಾಡಿ ಬೊತ್ತ್ ಪುಟ್ಟ್ ಇಡುತ್ತಾರೆ. ಅಂದರೆ ಬಿದಿರು ಕಡ್ಡಿಯಿಂದ

ಕತ್ತರಿಯಾಕಾರದಂತೆ ಗದ್ದೆ, ಮನೆಯ ಮುಂಭಾಗ, ಹಿಂಭಾಗದಲ್ಲಿ ಈ ಕಡ್ಡಿಗಳನ್ನು ಚುಚ್ಚಿ ಸಂಪ್ರದಾಯದಂತೆ ದೋಸೆ ಮತ್ತು ಕುಂಬಳ ಸಾರನ್ನು ಅದರ ಮೇಲಿಡುತ್ತಾರೆ. ಇದು ತುಲಾ ಸಂಕ್ರಮಣದ ವಿಶೇಷ ಅಡುಗೆಯಾಗಿದೆ.

ಸೌತೆಕಾಯಿಪಚ್ಚಡಿ, ಮಂಡಕ್ಕಿಪುರಿ : ಕೊಡವರು ಮದುವೆಯ ಚಪ್ಪರದ ದಿನ ಅಂದರೆ 'ಊರುಕೊಡುವ' ದಿನ ರಾತ್ರಿ ಮಂಡಕ್ಕಿ ಪುರಿಯ ಜೊತೆಗೆ ಹಂದಿ ಮಾಂಸದ ಸಾರನ್ನು ಕಲೆಸಿ ತಿನ್ನುತ್ತಾರೆ. ಈ ವಿಶೇಷ ಅಡುಗೆಯನ್ನು ಊರುಪತ್ತಿ ಕೊಡುತ್ತಾರೆ. ಜೊತೆಗೆ ಬತ್ತದ ಸಾರಾಯಿ (ಕಾಂಬಿಗಳ್ಳ್)ಯನ್ನು ಸೇವಿಸುತ್ತಾರೆ. ಮದುವೆಯ ಚಪ್ಪರದ ದಿನ ಸೌತೆಕಾಯಿ ಪಚ್ಚಡಿಯ ಜೊತೆಗೆ ಹಂದಿಮಾಂಸದ ಸಾರನ್ನು ಮಾಡುತ್ತಿದ್ದರು. ಇತ್ತೀಚೆಗೆ ಆಧುನಿಕ ಐಷರಾಮಿ ಅಡುಗೆಗಳು ಆವರಿಸಿಕೊಂಡು ಸಾಂಪ್ರದಾಯಿಕ ಅಡುಗೆಗಳು ಮರೆಯಾಗಿವೆ.

ಹೊಸ ಅಕ್ಕಿ ಪಾಯಸ (ಪುದಿಯಕ್ಕಿ ಕೂಳ್) : ಹುತ್ತರಿ ಹಬ್ಬದ ಅನಂತರ ಕೊಡವರು ಹೊಸ ಅಕ್ಕಿ ಮಾಡುತ್ತಾರೆ. ಬೆಳೆ ಬಂದಾಗ ಹೊಸ ಬತ್ತವನ್ನು ಅಕ್ಕಿ ಮಾಡಿ ಜೊತೆಗೆ ಅನ್ನ ಸಾರು ಮಾಡಿ ಮೀದಿ (ಎಡೆ) ಹಾಕಿ ಎಲ್ಲಾರು ಒಟ್ಟಿಗೆ ಸೇರಿ ಊಟ ಮಾಡುತ್ತಾರೆ. ಹೊಸ ಅಕ್ಕಿ ಪಾಯಸವನ್ನು ಮಡಿಯಿಂದ, ದೈವಭಕ್ತಿಯಿಂದ ಮಾಡುತ್ತಾರೆ. ಹಿಂದಿನ ಕಾಲದಲ್ಲಿ ಬತ್ತದ ಕಣದಲ್ಲೇ ಒಣಗಿದ ಬತ್ತವನ್ನು ಅಲ್ಲೇ ಕುಟ್ಟಿ ಪಾಯಸ ತಯಾರಿಸುತ್ತಿದ್ದರು. ಈಗ ತಮ್ಮ ಮನೆಗಳಲ್ಲೇ ಎಲ್ಲರೂ ಪಾಯಸ ತಯಾರಿಸುತ್ತಾರೆ.

ಗುಜ್ಜಿ ಕಂಡೆ: ಕೊಡಗಿನ ಕಾಡಿನಲ್ಲಿ ಸಿಗುವ ಪರಾವಲಂಬಿ ಸಸ್ಯದ ಕಾಂಡವನ್ನು 'ಗುಜ್ಜಿಕಂಡೆ' ಎನ್ನುವರು. ಕಾಂಡದ ರಸದಲ್ಲಿ ಔಷಧೀಯ ಗುಣ ಇರುವುದರಿಂದ ಬಾಣಂತಿಗೆ ಈ ರಸದ ಪಾಯಸವನ್ನು ತಯಾರಿಸಿ ಕೊಡುತ್ತಾರೆ. ಇತರರು ಈ ಗೆಡ್ಡೆಯನ್ನು ಮಳೆಗಾಲದಲ್ಲಿ ಹೆಚ್ಚಾಗಿ ಸೇವಿಸುತ್ತಾರೆ. ಇದು ದೇಹದ ಉಷ್ಣಾಂಶವನ್ನು ಕಾಪಾಡುತ್ತದೆ.

ಎಳ್ಳಡಿಗೆ

ಕೊಡವರು ಬಾಣಂತಿಗೆ ವಿಶೇಷವಾಗಿ ಎಳ್ಳಡಿಗೆ ತಯಾರಿಸುತ್ತಾರೆ. ಬಿಳಿ ಎಳ್ಳನ್ನು ಹುರಿದು, ಕೊಬ್ಬರಿ, ಬೆಲ್ಲ, ಮೆಂತ್ಯವನ್ನು ಪುಡಿ ಮಾಡಿಕೊಂಡು ತುಪ್ಪದಲ್ಲಿಯೇ ಬೇಯಿಸಿ ಎಳ್ಳು ಪಾಕ ತೆಗೆಯುತ್ತಾರೆ. ಈ ಎಳ್ಳಡಿಗೆ ಕೊಟ್ಟರೆ ಬಾಣಂತಿಯ ಹೊಟ್ಟೆಯಲ್ಲಿನ ಗಾಯ ಮಾಯುತ್ತದೆ ಮತ್ತು ಬಾಣಂತಿಗೆ ಶಕ್ತಿಯು ಹೆಚ್ಚುತ್ತದೆಂದು ೬೦ ದಿನ ನಂತರ ಎಳ್ಳಡಿಗೆಯನ್ನು ಕೊಡುತ್ತಾರೆ. ಇದು ಶರೀರದ ಉಷ್ಣಾಂಶವನ್ನು ತಡೆಯುತ್ತದೆ. ಬಾಣಂತಿಗೆ ೪೦ ದಿನದ ನಂತರ ಉದ್ದಿನ ಕಾಳಿನ ಪಾಯಸವನ್ನು ಕೊಡುತ್ತಾರೆ. ಬೆಲ್ಲ, ಕಾಯಿತುರಿ, ತುಪ್ಪವನ್ನು ಬೆರೆಸಿ ೦೩ ದಿನ ಮಾತ್ರ ಕೊಡುತ್ತಾರೆ. ಹಾಗೆಯೇ ೦೩ ದಿನ ಮೆಂತ್ಯದ ಪಾಯಸವನ್ನು ಮಾಡಿ ತಿನ್ನಿಸುತ್ತಾರೆ.

ಕೊಡವರು ಬಾಣಂತಿಗೆ ಪರಿಸರದಲ್ಲಿನ ಸಸ್ಯಗಳಿಂದ ತಯಾರಿಸಿದ ಔಷಧಿಯನ್ನು ಹೆಚ್ಚಾಗಿ ಕೊಡುತ್ತಾರೆ. ಬಾಣಂತಿಗೆ ಹಾಲು ಹೆಚ್ಚಿಸಲು

ತೋರಳೆಸೊಪ್ಪು, ಬೆಳ್ಳುಳ್ಳಿ, ಮೆಂತ್ಯ, ಅರಿಸಿನ, ಕರಿಮೆಣಸು, ತೆಂಗಿನಕಾಯಿ ಮತ್ತು ತುಪ್ಪವನ್ನು ಮಿಶ್ರಮಾಡಿ ೧೨ ದಿನ ಕುಡಿಸುವರು. ಗಾಳಿಸೊಪ್ಪು, ಬೆಳ್ಳುಳ್ಳಿ, ಕರಿಜೀರಿಗೆ, ನಂಜಿನಬೀಜ, ಕರಿಮೆಣಸನ್ನು ತುಪ್ಪದಲ್ಲಿ ಒಗ್ಗರಣೆ ಮಾಡಿ ತಿನ್ನಿಸುವರು. ಕೈಹುಳಿ ರಸಕ್ಕೆ ಕರಿಮೆಣಸುಪುಡಿ, ಬೆಳ್ಳುಳ್ಳಿ ಸೇರಿಸಿ ಕೊಡುವರು. ಹಾಗೂ ಗುಜ್ಜೆ ಸೊಪ್ಪು, ವಡಿಬಾಳೆ ಕಂಡೆಯನ್ನು ಕಷಾಯ ಮಾಡಿ ಕುಡಿಸುತ್ತಾರೆ. ಬಿಸಿ ಅನ್ನಕ್ಕೆ ಕರಿಮೆಣಸುಪುಡಿ, ಉಪ್ಪು, ಈರುಳ್ಳಿ, ತುಪ್ಪ ಹಾಕಿ ತಿನ್ನಿಸುವರು. ೧೫ ದಿನದ ನಂತರ ಕರಿಮೆಣಸು, ತುಪ್ಪದೊಂದಿಗೆ ಕುರಿಮಾಂಸವನ್ನು ಹುರಿದು ತಿನ್ನಿಸುತ್ತಾರೆ. ಇದರ ಜೊತೆಗೆ ಕರಿಬಾಳೆ ಪಲ್ಯ, ಹಾಗಲಕಾಯಿ ಪಲ್ಯವನ್ನು ತಿನ್ನಿಸುವರು. ಕುಡುಕಂಜಿಯನ್ನು (ಸಾಸುವೆ) ಅರೆದು ಪುಡಿ ಮಾಡಿ ಬೆಲ್ಲದ ರಸ, ತೆಂಗಿನಕಾಯಿ ತುಪ್ಪದೊಂದಿಗೆ ಬೆರೆಸಿ ತಿನ್ನಿಸುವುದರಿಂದ ಬಾಣಂತಿ ಹಾಗೂ ಮಗುವಿನ ಆರೋಗ್ಯ ವೃದ್ಧಿಸುತ್ತದೆ.

ಕೊಡವರು ಸಾಂಪ್ರದಾಯಿಕ ಅಡುಗೆಯನ್ನು ಉಳಿಸಿಕೊಂಡರೂ ಕೆಲವು ಆಧುನಿಕ ಸಿದ್ಧ ಪದಾರ್ಥಗಳು ಲಗ್ಗೆಯಿಡುತ್ತಿವೆ. ಹಿಂದಿನ ಬೀಸುವ ಕಲ್ಲಿನ ಬದಲಾಗಿ ಮಿಕ್ಸಿ, ಗ್ರೈಂಡರ್‌ಗಳು ತಲೆ ಎತ್ತಿವೆ. ತೋರ್ಪಡಿಕೆಯ, ಆಡಂಬರದ ವ್ಯವಸ್ಥೆಗಾಗಿ ಮಾಂಸ ಹಾಗೂ ಮದ್ಯ ಸೇವನೆ ಹೆಚ್ಚುತ್ತಿದೆ.

ಕೊಡವರ ತಿಂಡಿ ತಿನಿಸುಗಳನ್ನು ವೈಜ್ಞಾನಿಕವಾಗಿ ಅವಲೋಕಿಸಿದಾಗ ಹೆಚ್ಚು ಮಳೆ, ಗಾಳಿ, ಚಳಿ, ಕಠಿಣ ಪರಿಶ್ರಮ, ಸಾಹಸಿ ಜೀವನಕ್ಕೆ ಒಪ್ಪುವಂತಹ ಭೋಜನವನ್ನು ತಯಾರಿಸುವುದು ಕಂಡುಬರುತ್ತದೆ. ಇವರು ರುಚಿಕರವಾದ ಅಡುಗೆಯ ಜೊತೆಗೆ ಕೆಲವು ವಿಶೇಷ ಹಣ್ಣಿನ ಪಾನೀಯಗಳನ್ನು ತಯಾರಿಸುತ್ತಾರೆ. ಭತ್ತ, ರಾಗಿ, ದ್ರಾಕ್ಷಿ, ಚೇರ್‍ರಿ, ಖರ್ಜೂರ, ನೆಲ್ಲಿಕಾಯಿ, ಮುಂತಾದ ಹಣ್ಣುಗಳಿಂದ ಹುಳಿ ಬರಿಸಿದ ವಿಶೇಷ ಪಾನೀಯಗಳನ್ನು ವೈನ್ ಎನ್ನುತ್ತಾರೆ. ಇದನ್ನು ಹೆಂಗಸರು, ಗಂಡಸರೆಲ್ಲರೂ ಉಪಯೋಗಿಸುತ್ತಾರೆ. ಊಟಕ್ಕೆ ಮೊದಲು ಪ್ರಾಚೀನ ಕಾಲದಲ್ಲಿ ಬೈನೆ ಮರದ ಶೇಂದಿ ಮತ್ತು ಶರಾಬನ್ನು ಬಳಸುತ್ತಿದ್ದರು. ಇತ್ತೀಚೆಗೆ ಒಳ್ಳೆಯ ಹಣ್ಣಿನ ರಸ ಮತ್ತು ಬ್ರಾಂದಿಯನ್ನು ಉಪಯೋಗಿಸುತ್ತಿದ್ದಾರೆ.

'ಬೊಳ್ಳೆಕಳ್ಳ್' (ಸೇಂದಿ) ಎಂಬ ವಿಶೇಷ ಪಾನೀಯವನ್ನು ಮುಂಜಾನೆ ಸೇವಿಸಿದರೆ ಶಕ್ತಿ ವೃದ್ಧಿಸುತ್ತದೆಂಬ ನಂಬಿಕೆಯಿದೆ. ಪ್ರಕೃತಿಯಿಂದ ಉತ್ಪಾದಿಸುವ ಈ ಪಾನೀಯವನ್ನು 'ಕಾರೋಣ', 'ಮೀದಿಬೆಪ್ಪೊ' ಪೂಜೆಗಳಲ್ಲಿ ಎಡೆ ಇಡುವುದಕ್ಕಾಗಿ ಉಪಯೋಗಿಸುತ್ತಾರೆ. ಆದ್ದರಿಂದಲೇ ಕೊಡವರು ಬೊಳ್ಳೆಕಳ್ಳನ್ನು ಅಮೃತಕ್ಕೆ ಹೋಲಿಸಿದ್ದಾರೆ.

ಬೊಳ್ಳೆಕಳ್ಳ್‌ನ ಜನಪದ ಹಾಡು ಇಂತಿದೆ.

'ನಲ್ಲೋರ್ ಅಮೃತವೋ – ಒಳ್ಳೆಯ ಅಮೃತವೂ
ಮೆಲ್ಲೆನಾ ಬೂಕುವಿನೋ – ಮೆಲ್ಲನೆ ಸುರಿಯುವೆ ನಾನು
ಚಳ್ಳೆಕ್ ಬೂಕಣೆ – ಚಳ್ಳೆಗೆ ಸುರಿಯುವಾಗ
ತುಳ್ಳಿಕಳಿ ಕೂಲ – ಪುಟಿದೇಳಬಹುದು

ಆರಾರ ಕೇಟಿತ್ ಏರ ಕುಡ್‌ಚವು – ಮತ್ತೆ ಕೇಳಿ ಹೆಚ್ಚು ಕುಡಿದವರು ಶೂರಂಗ ವೀರಂಗ ಧೀರಂಗಳಾಕೂಲ" – ಶೂರಧೀರರಾಗುತ್ತಾರೆ.

ಕೊಡವರ ದುಡಿಮೆ, ಶ್ರಮಕ್ಕೆ ಹಾಗೂ ಪರಿಸರದ ಹಿನ್ನಲೆಯಲ್ಲಿ ಅವರ ಆಹಾರ ಪದ್ಧತಿ ಹೀಗೆ ಮುಂದುವರೆಯುತ್ತಿದೆ. ಕೊಡವರ ಅಡುಗೆಗಳು ಆರೋಗ್ಯದ ದೃಷ್ಟಿಯಿಂದಲೂ ಉತ್ತಮವಾಗಿರುತ್ತವೆ.

ಕೊಡವರ ಪಂದಿಕರಿ, ಅಕ್ಕಿ ರೊಟ್ಟಿ, ಕಡುಂಬುಟ್ಟ್ (ಹಂದಿ ಮಾಂಸದ ಸಾರು, ರೊಟ್ಟಿ, ಕಡುಬು) ಹೆಸರನ್ನು ಪಡೆದುಕೊಂಡಿವೆ. ಆಧುನಿಕ ಪಿಜ್ಜಾ, ಬರ್ಗರ್, ರೋಲರ್, ಗೋಬಿ ಮಂಚೂರಿ ಮುಂತಾದ ಅಡುಗೆಗಳ ನಡುವೆಯೂ ಕೆಲವು ಸಾಂಪ್ರದಾಯಿಕ ಅಡುಗೆಗಳು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಎಲ್ಲಾ ಶುಭ ಸಮಾರಂಭಗಳಲ್ಲಿ ಕೊಡವರು ಸಾಂಪ್ರದಾಯಿಕ ಅಡುಗೆಗಳನ್ನು ಮಾಡುತ್ತಿರುವುದು ಇದಕ್ಕೆ ಸಾಕ್ಷಿ. ಕೊಡವರು ತಮ್ಮ ಮನೆಯಲ್ಲಿ ತಯಾರಿಸುವ ಕಳಲೆ, ಹಂದಿಮಾಂಸದ ಚುಟ್ಟಿ, ಮೀನು, ನಿಂಬೆ, ಮಾವು, ಅಂಬಟ್ಟೆ ಕಾಯಿ ಉಪ್ಪಿನಕಾಯಿಗಳಂತೂ ತುಂಬಾ ರುಚಿಕರವಾಗಿರುತ್ತವೆ. ಹಾಗೇಯೇ ಹಬ್ಬಹರಿದಿನಗಳಲ್ಲಿ ತಯಾರಿಸುವ ಚಿರೋಟಿ, ಬಡವ ಕಜ್ಜಾಯ, ಪಾಯಸವು ಸ್ವಾದಿಷ್ಟಕರವಾಗಿರುತ್ತದೆ. ಹಿಂದೆ ಮಣ್ಣಿನ ಪಾತ್ರೆಗಳಿಂದ ಅಡುಗೆಯನ್ನು ತಯಾರಿಸುತ್ತಿದ್ದ ಕೊಡವರು ಇತ್ತೀಚೆಗೆ ಆಧುನಿಕ ರೀತಿಯ ಸಲಕರಣೆಗಳ ಉಪಯೋಗಕ್ಕೆ ಒಗ್ಗಿಕೊಂಡಿದ್ದಾರೆ.

ಹಿಂದೆ ಕೊಡವರು ಊಟಕ್ಕೆ ಮೊದಲು ಮಹಿಳೆಯು ಕನ್ನೀಕೊಂಬರೆಯ ಮನೆದೇವರಿಗೆ ಊಟ ಅರ್ಪಿಸಿದ ನಂತರ, ಮನೆಯ ಪುರುಷ ಯಜಮಾನರಿಗೆ ಊಟವನ್ನು ಬಡಿಸುವ ಪದ್ಧತಿ ಇತ್ತು. ಇತ್ತೀಚಿಗೆ ಈ ವ್ಯವಸ್ಥೆ ಮರೆಯಾಗಿದೆ.

ಹಿಂದಿನ ಕಾಲದ ಸಂಪ್ರದಾಯ, ಸಂಸ್ಕಾರ, ಅಡುಗೆ ಪದ್ಧತಿ ಯಾವುದೇ ಆಗಲಿ ಅದು ವೈಜ್ಞಾನಿಕ ದೃಷ್ಟಿಯಿಂದ, ಆರೋಗ್ಯದ ಪ್ರಜ್ಞೆಯಿಂದ ಮಹತ್ವವನ್ನು ಉಳಿಸಿಕೊಂಡಿದೆ. ಇತ್ತೀಚೆಗೆ ಜಾಗತೀಕರಣ ಕಾರಣಗಳಿಂದ ಜೀವನ ಶೈಲಿ ಬದಲಾಗಿದ್ದರೂ ಕೊಡವರು ಪಾರಂಪರಿಕ ಅಡುಗೆ ಪದ್ಧತಿಯನ್ನು ಇಂದಿಗೂ ಉಳಿಸಿ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳುವ ಜೊತೆಗೆ ಪ್ರಾಚೀನ ಅಡುಗೆ ಸಂಸ್ಕೃತಿಗೂ ತಮ್ಮ ಕೊಡುಗೆಯನ್ನು ಸಲ್ಲಿಸುತ್ತಿದ್ದಾರೆ.

ಕೊಡವರ ಅತಿಥಿ ಸತ್ಕಾರ

ಕೊಡಗು ಆದರಾತಿಥ್ಯಗಳ ತವರೂರು. ಸಂಬಂಧಿಕರು ಹಾಗೂ ಸ್ನೇಹಿತರ ಭೇಟಿಯಿಂದ ತುಂಬಾ ಸಂತೋಷಪಡುತ್ತಾರೆ. ಪುರುಷ ಅತಿಥಿಗಳು ಬಂದಾಗ ಮನೆಯ ಪುರುಷರು 'ಕಯ್ಯಾಲೆ' (ಮೊದಲನೆ ವೆರಾಂಡ) ಯಲ್ಲಿ ಎದುರುಗೊಂಡು ಯೋಗ ಕ್ಷೇಮ ವಿಚಾರಿಸುತ್ತಾರೆ. ಕೊಡವರಲ್ಲಿ ಯಾರೇ ಹಿರಿಯ ವ್ಯಕ್ತಿಗಳನ್ನು ಕಂಡಾಗ, ಅದು ಮನೆಯಾಗಲಿ ಅಥವಾ ಹೊರಗಿನ ಸ್ಥಳವಾಗಲಿ, ಸಮಾರಂಭಗಳಲ್ಲಾಗಲಿ ಕಿರಿಯರು ಕಾಲುಮುಟ್ಟಿ ನಮಸ್ಕರಿಸುವ ವಿಶೇಷ ಪದ್ಧತಿ ಇದೆ. ಈ ಸಂದರ್ಭದಲ್ಲಿ ಹಿರಿಯ ವ್ಯಕ್ತಿ ತನ್ನ ಕೈಯನ್ನು ತಲೆಯ ಮೇಲಿಟ್ಟು, ದೀರ್ಘ ಆಯುಷ್ಯ. 'ಸೌಖ್ಯತ ಬಾಳು' (ಸುಖವಾಗಿರು) 'ನಲ್ಲೋಣ್ಣೆ ಬಾಳು',

'ನೂರುಕಾಲ ಬದ್‌ಕ್', 'ನೀಕ್ ನಲ್ಲದಾಡ್' (ಚೆನ್ನಾಗಿ ಬಾಳು) ಎಂದು ಹರಸುತ್ತಾನೆ. ಕಾಲು ಮುಟ್ಟಿ ನಮಸ್ಕರಿಸುವುದನ್ನು 'ಕಾಲು ಪುಡಿಪೊ' ಎನ್ನುತ್ತಾರೆ.

ಹಿರಿಯರ ಆಶೀರ್ವಾದದ ಜನಪದ ಹಾಡು ಇಂತಿದೆ.

"ದೇವರ ನೆನತಿತ್	–	ದೇವರ ನೆನೆದು
ಮಮ್ಮರಿಂದ ಕಾರೋಣ	–	ಕಣ್ಮರೆಯಾದ ಕಾರಣ
ಕಾರೋಣಂಡ ಸೇಸಲ್	–	ಕಾರೋಣನ ನೆಲೆಯಲ್ಲಿ
ಪೊಮುತ್ತ್ ಸರಪೋಲೆ	–	ಮುತ್ತಿನ ಸರದಂತೆ
ಆಣ್ ಪೊಣ್ಣಡೆ ಮೇಂಗಿ	–	ಗಂಡು ಹೆಣ್ಣು ಸೇರಿ
ಪತ್ತ್ ಮೆಕ್ಕಳಾಯಿತ್	–	ಹತ್ತು ಮಕ್ಕಳಾಗಿ
ಪನ್ನಂದಾನ ಚಾಕಿತ್	–	ಹನ್ನೊಂದನೆ ಮಗುವನ್ನು ಸಾಕಿ
ದೇವನು ದೇವಿಯಾಯಿ	–	ದೇವ ದೇವಿಯೂ
ತಣ್ಣನೆ ಮೊಲಂದಂಡ್	–	ನೆಮ್ಮದಿಯಲ್ಲಿ ಬಾಳಲ್ಲಿ
ನೂರ್‌ಕಾಲ ಬಾಳಂಡು"	–	ನೂರುವರ್ಷ ಬಾಳಲಿ

ಕಾವೇರಿ ತುಲಾ ಸಂಕ್ರಮಣದ ಸಂದರ್ಭದಲ್ಲಿ ಕೊಡವರಲ್ಲಿ ಕಣಿ ಪೂಜಿಸುವ ಪದ್ಧತಿ ಇದೆ. ಹತ್ತಿರದ ಬಂಧುಗಳು ತಮ್ಮ ತಮ್ಮ ಸಂಬಂಧಿಕರ ಮನೆಗಳಿಗೆ ತೆರಳಿ ಪೂಜಿಸಿದ ಕಣಿಯನ್ನು ನೋಡಿ ನಮಸ್ಕರಿಸಿ, ಮನೆಯ ಹಿರಿಯರ ಕಾಲಿಗೆ ನಮಸ್ಕರಿಸುವ ಈ ಪದ್ಧತಿ ಇಂದಿಗೂ ಉಳಿದುಕೊಂಡು ಬಂದಿದೆ. ಇಂತಹ ಪದ್ಧತಿಗಳ ಆಚರಣೆಯಿಂದ ಕೊಡವರಲ್ಲಿ ಬಾಂಧವ್ಯ ವೃದ್ಧಿಸಿದೆ.

ಕೊಡವರ ಅತಿಥಿ ಸತ್ಕಾರ ಇತರರಿಗೂ ಮಾದರಿಯಾಗಿದೆ. ನೆಂಟರು ಬಂದಾಗ ಮನೆಯ ಮುಂದಿರುವ 'ಐಮರ' ದಲ್ಲಿ ಕಾಲು ತೊಳೆಯಲು ಕಂಚಿನ ಚೊಂಬಿನಲ್ಲಿ ನೀರನ್ನಿಟ್ಟು, 'ಕನ್ನಿ ಕಂಬ' ದಲ್ಲಿ ಟವಲನ್ನು ನೇತು ಹಾಕಿರುತ್ತಾರೆ. ಅತಿಥಿಗಳು ಮನೆಗೆ ಬಂದ ತಕ್ಷಣ ಕಾಲಿಗೆ ನೀರನ್ನು ಹಾಕಿ ಒಳ ಪ್ರವೇಶಿಸುತ್ತಾರೆ. ಮನೆಗೆ ಬಂದ ಅತಿಥಿಗಳ ಕಾಲಿಗೆ ನಮಸ್ಕರಿಸಿ ಕಾಫಿ ತಿಂಡಿಗಳನ್ನು ನೀಡುತ್ತಾರೆ. ಊಟದ ಸಮಯವಾದರೆ ಊಟ ಬಡಿಸಿ ಸತ್ಕರಿಸುತ್ತಾರೆ. ತಮ್ಮ ಅತಿಥಿಗಳನ್ನು ಹಾಗೆಯೇ ಕಳುಹಿಸುವುದಿಲ್ಲ.

ಕೊಡವರ ಅತಿಥಿ ಸತ್ಕಾರದ ಹಾಡು ಮೇಲಿನ ಮಾತನ್ನು ಪುಷ್ಟೀಕರಿಸುತ್ತದೆ.

ಉಂಬಳ ಮನೆಯಿಂದ	–	ಊಟ ಮಾಡುವ ಕೋಣೆಯಿಂದ
ದುಂಬ್‌ನ ಕಲತಿಂಜಿ	–	ತುಂಬಿದ ಮಡಿಕೆಯಿಂದ
ಬೊಳ್ಳಿ ಚೆಂದ್ ನೀರಾಯಿ	–	ಬೆಳ್ಳಿಯ ಚೆಂಬಿನಲ್ಲಿ ನೀರಾಗಿ
ಸುಬ್ಬರಾಯ ದೇವಂಡ	–	ಸುಬ್ರಹ್ಮಣ್ಯ ದೇವರ
ಪೀಲಿಯಂಡ ಮೈಲ್‌ಡ	–	ಗರಿತುಂಬಿದ ನವಿಲು
ಮೈಲ್‌ಡ ನಡೆ ಪೋಲೆ	–	ನವಿಲಿನ ನಡಿಗೆಯಲ್ಲಿ
ಆಡಿಲಾಡಿ ಬಂದಿತೆ	–	ಬಳಕುತ್ತಾ ಬಂದು
ಬಾಲ ಮಿಂಞ ನೀ ಬೆಚ್ಚ	–	ಬಂದವರ ಎದುರು ನೀರಿಟ್ಟರು

ಇಂದಿಗೂ ಕೂಡ ಇವರ ಮನೆಗಳಿಗೆ ಭೇಟಿ ನೀಡುವ ಅತಿಥಿಗಳಿಗೆ

ವಿವಿಧ ರೀತಿಯ ಭೋಜನವನ್ನು ಮನಃಪೂರ್ವಕವಾಗಿ ಬಡಿಸಿ, ಹಿಂದಿರುಗುವಾಗ ಅವರಲ್ಲಿರುವ ಕಾಫಿ, ಮೆಣಸು ಏಲಕ್ಕಿಯನ್ನು ಕೊಟ್ಟು ಕಳುಹಿಸುವುದು ಅವರಿಗೆ ಪರಂಪರೆಯಿಂದ ಬಂದಿರುವ ಸಂಸ್ಕಾರ.

ಬ್ರಿಟಿಷರ ಭಾಷೆ, ಕೋಟು, ಸೂಟ್, ಗೃಹಾಲಂಕಾರ, ಶಿಸ್ತುಗಳೆಲ್ಲ ಇವರ ಮೇಲೆ ಪ್ರಭಾವ ಬೀರಿವೆ. ಹಾಗೆಯೇ ಗುಡ್ಡಗಾಡಿನ ಬುಡಕಟ್ಟು ಜನಾಂಗದ ಸಂಸ್ಕಾರಗಳು, ಆಚಾರ-ವಿಚಾರಗಳು ಇವರ ಮೇಲೆ ಪರಿಣಾಮ ಬೀರಿವೆ. ಹಳೆಯ ತಲೆಮಾರಿನ ಅತಿಥಿ ಸತ್ಕಾರವು ಈಗ ಆಧುನಿಕ ರೂಪವನ್ನು ಪಡೆದಿದೆ. ಇದಕ್ಕೆ ಪೂರಕವಾಗಿ ಕೊಡಗಿನಲ್ಲಿ ತಲೆಎತ್ತಿರುವ ಐಷರಾಮಿ 'ಹೋಮ್‌ಸ್ಟೇ' ಪದ್ಧತಿಯು ಆದರಾತಿಥ್ಯದ ಸಂಸ್ಕೃತಿಯು ಪಾಶ್ಚಿಮಾತ್ಯ ಪ್ರಭಾವದಿಂದ ತಲೆದೂರಿದ ಆಧುನಿಕ ರೂಪವಾಗಿದೆ. ಒಟ್ಟಿನಲ್ಲಿ ಕೊಡವರ ನಡೆನುಡಿಗಳು ಉಡುಗೆ-ತೊಡುಗೆಗಳು, ಆಹಾರ ಪದ್ಧತಿಗಳು ಇತರ ಸಮುದಾಯದ ಸಂಸ್ಕಾರಗಳಿಗಿಂತ ಭಿನ್ನತೆಯನ್ನು ಪಡೆದುಕೊಂಡು, ಇಂದಿಗೂ ಪಾರಂಪರಿಕ ಪದ್ಧತಿಗಳನ್ನು ಉಳಿಸಿಕೊಂಡು ಬರುತ್ತಿರುವುದು ಸಂತೋಷದ ವಿಚಾರವಾಗಿದೆ.

ಕೊಡವರ ಉಪಜಾತಿ ಮತ್ತು ಬುಡಕಟ್ಟುಗಳು

ಕೊಡಗು ಜಿಲ್ಲೆಯಲ್ಲಿ ಇಂದಿಗೂ ನಾಗರಿಕತೆಯ ಸಂಪರ್ಕವಿಲ್ಲದೆ ಕಾಡಿನಲ್ಲಿಯೇ ವಾಸಿಸುವ ಬುಡಕಟ್ಟುಗಳಿವೆ. ಅನೇಕ ಬುಡಕಟ್ಟು ಜನರು, ಅವರಲ್ಲಿ ಕಂಡುಬರುವ ವಿವಿಧ ಪ್ರಭೇದಗಳು ಹೊರಗಿನಿಂದ ಬಂದು ಇಲ್ಲಿನ ಆಚಾರ ವಿಚಾರಗಳನ್ನು ಅಳವಡಿಸಿಕೊಂಡ ಜನಾಂಗಗಳು ಮತ್ತು ಹೊರಗಿನಿಂದ ಬಂದು ಇಲ್ಲಿ ನೆಲಸಿ ತಮ್ಮ ತನವನ್ನು ಉಳಿಸಿಕೊಂಡಿರುವವರನ್ನು ಇಲ್ಲಿ ಕಾಣಬಹುದಾಗಿದೆ. ಕೆಲವು ಬುಡಕಟ್ಟಿನ ಜನರ ಸಂಖ್ಯೆ ಬೆರಳೆಣಿಕೆಯಲ್ಲಿ ಮಾತ್ರ ಈ ಪ್ರದೇಶದಲ್ಲಿ ಕಾಣಸಿಗುತ್ತಾರೆ.

ಒಂದೊಂದು ಬುಡಕಟ್ಟು ಗುಂಪಿನವರು ಅವರದೇ ಆದ ಭಾಷೆ, ದೇವರು, ಧರ್ಮ ಮುಂತಾದುವನ್ನು ಹೊಂದಿದ್ದಾರೆ. ಜನರ ಸಂಪ್ರದಾಯಗಳು ತುಂಬಾ ವಿಶಿಷ್ಟವಾಗಿವೆ. ಸೋಮವಾರಪೇಟೆ ತಾಲೂಕನ್ನು ಬಿಟ್ಟರೆ ಉಳಿದ ಎಲ್ಲಾ ವರ್ಗದವರಿಗೂ ಕೊಡವ ಭಾಷೆಯೇ ಸಂಪರ್ಕ ಭಾಷೆಯಾಗಿದೆ. ಬುಡಕಟ್ಟು ಜನರು ಆಕಾರವಿಲ್ಲದ ಕೆಲವು ದೈವಗಳನ್ನು ಪೂಜಿಸುತ್ತಾರೆ. ದಕ್ಷಿಣದ ಕುಟ್ಟದಲ್ಲಿನ ಕುಟ್ಟದಮ್ಮ ಪ್ರಸಿದ್ಧ ದೇವತೆ. ಈಕೆ ಮುಖ್ಯವಾಗಿ ಜೇನು ಕುರುಬ, ಬೆಟ್ಟ ಕುರುಬ ಹಾಗೂ ಕಾಡುಕುರುಬರ ಆರಾಧ್ಯ ದೈವವಾಗಿದೆ. 'ತಂಬಿರಾತ್ತಿ' ಪಣಿಯ ರದ್ದಾಗಿದೆ. ಉಳಿದಂತೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೇರಳದ ದೈವಗಳು ಮತ್ತು ಭೂತಗಳು ಜನಪ್ರಿಯವಾಗಿವೆ.

ಕೊಡವರು ಬೆಳಿಗ್ಗೆ ಮತ್ತು ಸಂಜೆ 'ನೆಲ್ಲಕ್ಕಿ ನಡುಬಾಡೆ' ಯಲ್ಲಿನ ದೀಪವನ್ನೇ ಗುರುದೇವರೆಂದು ಪೂಜಿಸುತ್ತಾರೆ. ಇದರೊಂದಿಗೆ ಹಿರಿಯರ ಹೆಸರಿನಲ್ಲಿ ದೀಪ ಹೊತ್ತಿಸಿ ನಮಸ್ಕರಿಸಿರುತ್ತಾರೆ. 'ಕಾವೇರಿ ಮಾತೆ' ಕೊಡವರ ಮುಖ್ಯ ದೈವ. ಹೆತ್ತ ತಾಯಿಗಿಂತ ಕಾವೇರಿ ದೊಡ್ಡವಳೆಂದು ಕೊಡವರ ಭಾವನೆ. ತಲಕಾವೇರಿ, ಪಾಡಿಯ ಇಗ್ಗುತಪ್ಪ ಇವು ಪ್ರಮುಖ ದೇವಾಲಯ, ಕೊಡಗಿನ ಪೂಜಾಲಯ ಗಳಲ್ಲಿ ಕೇರಳದ ಪ್ರಭಾವ ಹೆಚ್ಚಾಗಿ ಕಂಡುಬರುತ್ತದೆ.

ಕೊಡವ ಭಾಷೆ ಮಾತನಾಡುವ ಪ್ರಮುಖ ಉಪಜಾತಿಗಳು

ಅಮ್ಮ ಕೊಡವ, ಅಗಸ, ಪೆಗ್ಗಡೆ, ಮೇದ, ಕೋಯವ, ಐರಿ, ಕುಂಬಾರ, ಹಜಾಮ, ಗೊಲ್ಲ, ಕೆಂಬಟ್ಟಿ ಹೊಲೆಯ ಮುಂತಾದವು. ಹೊರನೋಟಕ್ಕೆ ಕೊಡವರೆಲ್ಲಾ ಒಂದೇ ಎಂಬಂತೆ ಕಂಡು ಬಂದರೂ ಇವರಲ್ಲಿ ಹಲವು ಒಳಪ್ರಭೇದಗಳು ಕಾಣಬರುತ್ತದೆ. ಕೆಲವು ಇಂದಿಗೂ ಉಳಿದುಕೊಂಡು ಬಂದಿವೆ. ಊಟ, ಉಡುಗೆ–ತೊಡುಗೆಗಳು ಒಂದೇ ರೀತಿಯದ್ದಾಗಿವೆ. ಇತರ ಜಾತಿಗಳಿಗೂ ಜಮ್ಮ ಭೂಮಿಯ ಒಡೆತನವಿದೆ. ಆದರೂ ಸಾಮಾಜಿಕವಾಗಿ ಕೊಡವ ಒಕ್ಕಲುತನದವರಿಗೂ ಇವರಿಗೂ ಅಲ್ಪ ಸ್ವಲ್ಪ ವ್ಯತ್ಯಾಸಗಳುಂಟು. ಕೊಡವರು ಈ ಉಪಗುಂಪಿನವರನ್ನು ಸಾಮಾಜಿಕವಾಗಿ ಸಮಾನ ಅಂತಸ್ತಿನವರೆಂದು ಪರಿಗಣಿಸುವುದಿಲ್ಲ.

ಕೊಡವರು ಉಪಜಾತಿಯವರನ್ನು ಕುಡಿಗಳಾಗಿ (ಮನೆ ಕೆಲಸ) ಮಾಡಲು ನೇಮಿಸಿಕೊಳ್ಳುತ್ತಾರೆ. ಕೆಲವರು ತಮ್ಮ ಕುಲ ಕಸುಬನ್ನು ಮಾಡಿಕೊಂಡು ಹೋಗುತ್ತಾರೆ. ಕೊಡವರಲ್ಲಿ ಹಲವರು ರಾಜರ ಕಾಲದಲ್ಲಿ ವೀರಶೈವರಾದರೂ ಅವರ ಸಂಪ್ರದಾಯ ಕೊಡವರ ಮೇಲೆ ವಿಶೇಷ ಪ್ರಭಾವ ಬೀರಿಲ್ಲ.

ರಾಜರ ಕಾಲಕ್ಕೆ ಹೊರಗಿನಿಂದ ಬಂದು ಇಲ್ಲಿ ನೆಲೆಸಿದವರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಡೆಯಿಂದ ವಲಸೆ ಬಂದ ಗೌಡರು, ಉತ್ತರ ಕೊಡಗಿನಲ್ಲಿದ್ದ ವೀರಶೈವರು ಮತ್ತು ಮೈಸೂರು ಕಡೆಯಿಂದ ಬಂದ ಒಕ್ಕಲಿಗರು ಪ್ರಮುಖರು. ಅರೆಗೌಡರು ಭಾಗಮಂಡಲದ ಕಡೆ ಹೆಚ್ಚಾಗಿರುತ್ತಾರೆ. ಇವರು ತಮ್ಮ ಸಂಪ್ರದಾಯಗಳನ್ನೆಲ್ಲಾ ಕೊಡವರಂತೆ ಬದಲಾಯಿಸಿಕೊಂಡಿದ್ದಾರೆ. ಊಟ, ಐನ್‌ಮನೆ, ಉಡುಗೆ ಮುಂತಾದವುಗಲ್ಲಿ ಈ ಸಾಮ್ಯವಿದೆ. ಭಾಷೆಯಲ್ಲಿ ಮಾತ್ರ ವ್ಯತ್ಯಾಸ ಕಂಡುಬರುತ್ತದೆ. ಕೊಡಗು ಜಿಲ್ಲೆಯಲ್ಲಿ ಕಂಡುಬರುವ ಉಪಜಾತಿಗಳನ್ನು ಈ ಕೆಳಕಂಡಂತೆ ಸ್ಥೂಲವಾಗಿ ವಿವರಿಸಲಾಗಿದೆ.

ಅಗಸ :– ಬಹುಮಂದಿ ಅಗಸರು ಕೊಡಗಿಗೆ ವಲಸೆ ಬಂದವರು ಇವರು ಕನ್ನಡ, ಕೊಡವ, ಮಲಯಾಳ ಭಾಷೆ ಮಾತನಾಡುತ್ತಾರೆ. ಕೊಡವರ ವಿವಾಹದಲ್ಲಿ ಅಗಸರು ಮುಖ್ಯ ಪಾತ್ರ ವಹಿಸುತ್ತಾರೆ. ಕೊಡವ ಭಾಷೆಯನ್ನು ಮಾತನಾಡುವ ಕೊಡವ ಮಡಿವಾಳರಿಗೆ ಜಮ್ಮ ಭೂಮಿಯಿದೆ.

೧. ಇವರು ಶ್ರೀಮಂಗಲ, ಭಾಗಮಂಡಲ, ಹುದಿಕೇರಿ, ನಾಪೋಕ್ಲು ಬಲಮುರಿ, ಪಾಲೂರು, ಬೇತೂರು ಕಣ್ಣಂಗಾಲ, ಬಿಟ್ಟಂಗಾಲ ಮುಂತಾದ ಕಡೆ ಹೆಚ್ಚಾಗಿ ಕಂಡು ಬರುತ್ತಾರೆ.

ಕೊಡವ ಮಡಿವಾಳರಲ್ಲಿ ಬಳಿಗಳಿದ್ದು, ಒಂದೇ ಬಳಿಯಲ್ಲಿ ಕೊಟ್ಟು ತಂದು ಮಾಡುವುದಿಲ್ಲ. ಕೊಡವರಂತೆ ಅವರಲ್ಲೂ ಮನೆತನಗಳುಂಟು. ಇವರ ದೇವರು ಗುರುಕಾರೊಣ ಎಂದು ಹೇಳಿಕೊಳ್ಳುತ್ತಾರೆ. ಹೆಚ್ಚಾಗಿ ಹುತ್ತರಿ, ಕೈಲ್ ಪೊಳ್ದು, ಕಾವೇರಿ ಸಂಕ್ರಮಣ, ಸುಬ್ರಮಣ್ಯ ಷಷ್ಠಿ, ಬಿಸು (ವಿಷು) ಯುಗಾದಿ ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ. ವಿಶೇಷವೇನೆಂದರೆ ವಿವಾಹಗಳಲ್ಲಿ ತಾಳಿ ಕಟ್ಟುವ ಸಂಪ್ರದಾಯವಿಲ್ಲ. ಕೊಡವರ ಸಮಾರಂಭಗಳಲ್ಲಿ, ಮದುವೆಗಳಲ್ಲಿ ಬಟ್ಟೆ ಕಟ್ಟುವುದು ಬಟ್ಟೆ ಹಾಸುವುದು ಮುಂತಾದ ಸೇವೆಗಳನ್ನು ಮಾಡುತ್ತಾರೆ. ಪ್ರತಿಫಲವಾಗಿ

ಹಣ ಮತ್ತು ಧಾನ್ಯವನ್ನು ಪಡೆಯುತ್ತಾರೆ. ಮಾರಿಯಮ್ಮನ ಹಬ್ಬ, ಭಗವತಿ ಜಾತ್ರೆಗಳಲ್ಲಿ ದೇವರಿಗೆ ಪಂಜು ಹಿಡಿಯುತ್ತಾರೆ.

ಕೊಡವ ಅಗಸರು ಶವವನ್ನು ಸುಡುತ್ತಾರೆ. ಕೆಲವರು ಹೂಳುತ್ತಾರೆ. ಕೊಡವರ ಮನೆಗೆಲಸ ಮಾಡುವುದಕ್ಕೂ ಅಗಸರು ಮುಂದಾಗಿದ್ದಾರೆ. ಇವರ ಪರಂಪರೆಯ ಮುಖ್ಯ ಉದ್ಯೋಗ ಕೊಡವರ ಮನೆಗಳಲ್ಲಿ ಬಟ್ಟೆ ಒಗೆಯುವುದಾಗಿತ್ತು. ಇತ್ತೀಚೆಗೆ ಹೊಸ ಉದ್ಯೋಗಗಳನ್ನು ಕಂಡುಕೊಂಡಿದ್ದಾರೆ.

ಅಡಿಯರು : ಅಡಿಯರು ಮಡಿಕೇರಿ ಭಾಗಮಂಡಲದ ಸುತ್ತ ಮುತ್ತ ಕಂಡುಬರುತ್ತಾರೆ. ಇವರನ್ನು 'ಯರವ' ಎಂದು ಕರೆಯುವರು. ತುಳು, ಮಲೆಯಾಳಿ ಶಬ್ದಗಳಿಂದ ಕೂಡಿದ ಕನ್ನಡದ ಒಂದು ಉಪಭಾಷೆಯನ್ನು ಮಾತನಾಡುತ್ತಾರೆ. ಶಿವ, ದ್ವಿಜ ಹಾಗೂ ಬ್ರಾಹ್ಮಣ ಕನ್ಯೆಯ ವಿವಾಹದಿಂದ ಅಡಿಯ ಸಮುದಾಯ ಉಗಮವಾಯಿತೆಂಬ ದಂತಕತೆಯಿದೆ. ಇವರ ಪೂರ್ವಜರು ಭದ್ರಕಾಳಿ ದೇವಸ್ಥಾನಗಳಲ್ಲಿ ಅರ್ಚಕರಾಗಿದ್ದಾರೆಂದು ಹೇಳಿಕೊಳ್ಳುತ್ತಾರೆ. ವಾಸಿಸುವ ಸ್ಥಳದ ಆಧಾರದ ಮೇಲೆ ಮಂದಗಳೆಂಬ ಒಳಗುಂಪನ್ನು ಮಾಡಿಕೊಂಡಿದ್ದಾರೆ. ತಾವು ಕೆಲಸ ಮಾಡುವ ತೋಟಗಳ ಸಮೀಪ ಜೋಪಡಿಗಳನ್ನು ಕಟ್ಟಿಕೊಂಡು ವಾಸಿಸುತ್ತಾರೆ.

ಅಡಿಯರು ಕೃಷಿ ಕಾರ್ಮಿಕರು, ಕೆಲವರು ಕಾಡಿನಲ್ಲಿ ಜೇನು ಸಂಗ್ರಹಿಸುತ್ತಾರೆ. ವಾಟೆಯಿಂದ ಕುಕ್ಕೆ, ಗೇರಗ ಮೊದಲಾದವುಗಳನ್ನು ಮಾಡುತ್ತಾರೆ. ಹಿಂದೆ ವಿವಾಹಗಳಲ್ಲಿ ಹಾಗೂ ಯಾರಾದರೂ ಸತ್ತಾಗ ಜಲಗ ಊದುತ್ತಿದ್ದರು. ಹೆಂಗಸರು ಹಣೆಯ ಮೇಲೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಸೀರೆ ಉಡುವಾಗ ಬಲತೋಳಿನ ಮೇಲೆ ಒಂದು ಗಂಟು ಹಾಕುತ್ತಾರೆ. ಇದನ್ನು ಸಿಂಧಕಟ್ಟು ಎನ್ನುವರು.

ವಿವಾಹದಲ್ಲಿ ಬ್ರಾಹ್ಮಣರ ಅಥವಾ ಗ್ರಾಮದೇವತೆಗಳ ಪೂಜಾರಿಗಳ ನೆರವು ಕೋರುತ್ತಾರೆ. ತಾಳಿಕಟ್ಟುವುದು ವಿವಾಹದ ಮುಖ್ಯ ಅಂಗ. ತಾಯಿಯ ಸಹೋದರನ ಮಗಳು ಅಥವಾ ತಂದೆಯ ಸಹೋದರಿಯ ಮಗಳನ್ನು ವಿವಾಹವಾಗುವುದು ಸಾಮಾನ್ಯ. ವಿಧವೆಯರು, ವಿವಾಹ ವಿಚ್ಛೇದನ ಪಡೆದವರೂ ಪುನಃ ವಿವಾಹವಾಗ ಬಹುದು. ಇವರಲ್ಲಿ ಊರಿಗೊಬ್ಬ 'ಪೆರುಮನ್' ಎಂಬ ಯಜಮಾನನಿದ್ದು, ವಿವಾಹ, ಶವಸಂಸ್ಕಾರ ಮುಂತಾದ ಕಾರ್ಯಗಳನ್ನು ನಡೆಸಿಕೊಡುತ್ತಾನೆ. ಅಡಿಯರು ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ಕೊಟ್ಟಲಿ, ಕುರುಮನೆ, ಮಂದ್‌ದೈವ, ಯಲ್ಲಮ್ಮ ಮೊದಲಾದ ದೇವತೆಗಳನ್ನು ಪೂಜಿಸುತ್ತಾರೆ. ಪಿತೃಪೂಜೆಯೂ ರೂಢಿಯಲ್ಲಿದೆ. ಶಕುನಗಳಿಗೆ ಇವರು ಬೆಲೆ ಕೊಡುತ್ತಾರೆ. ಕಣಿಕೇಳುತ್ತಾರೆ. ಸತ್ತವರನ್ನು ಹೂಳುತ್ತಾರೆ ಸುಡುವ ಸಂಪ್ರದಾಯವೂ ಇದೆ. ಕೊಡವ ಸಂಪ್ರದಾಯಗಳನ್ನು ಹೆಚ್ಚಾಗಿ ಅನುಸರಿಸುತ್ತಾರೆ.

ಅಮ್ಮ ಕೊಡವರು

ಕೊಡಗಿನ ಮೂಲ ಅರ್ಚಕರು ಹೆಸರಿನ ಕೊನೆಯಲ್ಲಿ ಅಮ್ಮ ಅಥವಾ ಅಮ್ಮಯ್ಯ ಎಂದು ಸೇರಿಸಿಕೊಳ್ಳುತ್ತಾರೆ. ಹೆಚ್ಚಾಗಿ ದಕ್ಷಿಣ ಕೊಡಗಿನ ಭಾಗಗಳಾದ

ಪೊನ್ನಂಪೇಟೆ, ಕಾನೂರು ಕೊತೂರು, ಮಾಯಮುಡಿ, ನಾಪೋಕ್ಲು, ಚೇರಂಬಾಣೆ, ಮೊದಲಾದ ಕಡೆ ಇವರು ಕಂಡುಬರುತ್ತಾರೆ.

ಅಮ್ಮ ಕೊಡವರು ಮಲಬಾರಿನಿಂದ ಬಂದವರಾಗಿದ್ದು ಇವರು ಬ್ರಾಹ್ಮಣ ಸ್ತ್ರೀ ಮತ್ತು ಕೊಡವ ಪುರುಷನ ಸಂತತಿಯವರೆಂಬ ಅಭಿಪ್ರಾಯವಿದೆ. ವೈನಾಡಿನ ತಂಬಿಕಟ್ ತಂಬಿರಾನ್ ಎಂಬುವವನು ತನ್ನ ಮಗಳಿಗೆ ಋತುಮತಿಯಾಗುವುದಕ್ಕೆ ಮುಂಚೆ ಮದುವೆ ಮಾಡಲು ಸಾಧ್ಯವಿಲ್ಲದಾಗಿ ಕಾಡಿಗಟ್ಟಿದಾಗ ಆ ಹುಡುಗಿ ಕೊಡವ ಯುವಕನೊಬ್ಬನಿಗೆ ಸಿಕ್ಕಿ ಅವರಿಬ್ಬರೂ ಮದುವೆಯಾದರು. ಇವರ ಸಂತತಿಯವರು ಮುಂದೆ ಅಮ್ಮ ಕೊಡವರಾದರೆಂದು ಹೇಳುತ್ತಾರೆ. ಕಾವೇರಿ ಮಾತೆ 'ಪಟ್ಟಮ' (ಬ್ರಾಹ್ಮಣ)ರನ್ನು ಸಮಧಾನ ಮಾಡಿ ಭಾಷೆ ಕೊಟ್ಟ ಅನಂತರ ಅವರೇ ಅಮ್ಮಕೊಡವರಾದರೆಂಬ ಪ್ರತೀತಿ ಇದೆ. ಇಲ್ಲಿ ಕಂಡುಬರುವ ಹಾಡು ಮೇಲಿನ ಮಾತನ್ನು ಪುಷ್ಟೀಕರಿಸುತ್ತದೆ.

"ಪಟ್ಟಮರೇ ಕೇಳಿರೋ
ದೇವ ಮುನಿ ನಿಂಗಕ್
ಇಟ್ಟ ಶಾಪ ತಟ್ಟಿಲ
ಆನಕಲೂ ಪಟ್ಟರೆ
ಎನ್ನ ನಾಗ ನಂಬಿತ್
ಇಂಜಚ್ಚಕ್ ನಾಳೋಳ
ಉಂಬಕೂ ಕುಡಿಪಕೂ
ಬಾವಕೂ ಬದುಕ್ವಕೂ
ನಿಂಗಕ್ ಕೊರುವಾಂಡ"

ರಾಜರ ಕಾಲದಲ್ಲಿ ಇವರನ್ನು ಕಾವೇರಿ ಬ್ರಾಹ್ಮಣರೆಂದು ಕರೆಯುತ್ತಿದ್ದರು. ಇವರ ಉಡುಗೆತೊಡುಗೆಗಳು ಕೊಡವರಂತೆ ಇರುತ್ತವೆ. ಹಬ್ಬ ಹರಿದಿನಗಳನ್ನು ಕೊಡವರಂತೆಯೇ ಆಚರಿಸುತ್ತಾರೆ. (ಕೈಲ್ ಪೊಳ್‌ದ್‌ನ್ನು ಹೊರತುಪಡಿಸಿ) ಹೆಂಗಸರು ಸೀರೆ ನೆರಿಗೆಯನ್ನು ಹಿಂದೆ ಬಿಟ್ಟು ಉಡುತ್ತಾರೆ. ವಿವಾಹದಲ್ಲಿ ತಾಳಿಕಟ್ಟುವ ಪದ್ಧತಿ ಇದೆ. ಸಾಂಪ್ರದಾಯಿಕವಾಗಿ ಮದ್ಯ ಮಾಂಸ ಸೇವಿಸುವುದಿಲ್ಲ. ಇವರಲ್ಲಿ ಭಾರದ್ವಾಜ ಮತ್ತು ವಿಶ್ವಾಮಿತ್ರ ಗೋತ್ರಗಳಿವೆ. ಉಪನಯನವಿದೆ. ಅಧ್ಯಯನ, ದಾನ, ಯಜ್ಞ ಈ ತ್ರಿಕರ್ಮಗಳ ಅಧಿಕಾರವಿದೆಯೆನ್ನುತ್ತಾರೆ. ವೆಂಕಟರಮಣನಿಗೆ ಹರಿಸೇವೆ ಮಾಡುವ ಪದ್ಧತಿಯಿದೆ. ಮಾಂಗಲ್ಯಧಾರಣೆ, ಧಾರೆ ಮೊದಲಾದ ಸಂಪ್ರದಾಯಗಳಿವೆ. ಸತ್ತವರನ್ನು ಸುಡುತ್ತಾರೆ. ಕೊಡವರಂತೆ ಐನ್ ಮನೆಗಳಿವೆ. ಈಗ ಮುಖ್ಯ ಉದ್ಯೋಗ ಕೃಷಿ.

ಈಡಿಗರು: ಈಡಿಗರ ಮೂಲ ವೃತ್ತಿ ಬಗನಿ, ಈಚಲ ಮೊದಲಾದ ಮರಗಳಲ್ಲಿ ಹೆಂಡ ಇಳಿಸುವುದು. ಮೂಲ ಈಡಿಗರನ್ನು ಮೈಸೂರು ಕಡೆಯ ಈಡಿಗರು, ಕೇರಳದ ತೀಯರು, ದಕ್ಷಿಣ ಕನ್ನಡದ ಬಿಲ್ಲವರು, ತಮಿಳುನಾಡಿನ ನಾಡಾರುಗಳು ಎಂದು ಕರೆಯುತ್ತಾರೆ. ಇವರು ಕುಶಾಲನಗರ, ಕೂಡಿಗೆ, ಸೋಮವಾರಪೇಟೆಯ

ಸುತ್ತಮುತ್ತ ಕಂಡುಬರುತ್ತಾರೆ. ಮೈಸೂರಿನ ಕಡೆಯ ಈಡಿಗರಲ್ಲಿ ಮಡ್ಡಿ ಈಡಿಗ (ಸಾಚಾರಈಡಿಗ) ಬಲ್ಲದ ಈಡಿಗ, ಏಣಿಈಡಿಗ ಮೊದಲಾದ ಒಳಗುಂಪುಗಳಿವೆ. ಇವರು ಕಟಮೇಶ್ವರ ಯಲ್ಲಮ್ಮ ಸುರಭಾಂಡೇಶ್ವರಿ, ಮಾತಂಗಿ ಮೊದಲಾದ ದೇವತೆಗಳನ್ನು ಪೂಜಿಸುತ್ತಾರೆ, ಇವರ ಮಾತೃಭಾಷೆ ಕನ್ನಡ, ಉತ್ತರ ಭಾಗಬಿಟ್ಟು ಲೇಯರು ಮತ್ತು ಬಿಲ್ಲವರು ಕಂಡು ಬರುತ್ತಾರೆ. ಇವರಲ್ಲಿ ಸತ್ತವರನ್ನು ಹೂಳುವ ಪದ್ಧತಿ ಇದೆ.

ಐರಿಗಳು: ಐರಿಗಳು ಕೊಡವರಂತೆ ಕೊಡಗಿನ ಮೂಲನಿವಾಸಿಗಳು. ಇವರ ಜನಜೀವನ, ಸಂಸ್ಕಾರಗಳೆಲ್ಲವೂ ಕೊಡವರನ್ನೇ ಹೋಲುತ್ತವೆ. ಕೊಡವ ಭಾಷೆಯನ್ನು ಮಾತನಾಡುತ್ತಾರೆ. ಅರಸರ ಕಾಲದಲ್ಲಿ ಅರಮನೆಯಲ್ಲಿ ಕುಶಲಕರ್ಮಿಗಳಾಗಿ ಕೆಲಸ ಮಾಡುತಿದ್ದರಂತೆ. ಇವರಿಗೂ ಜಮ್ಮ ಭೂಮಿಯಿದೆ. ಮೊದಲಿಗೆ ಚಿನ್ನ, ಬೆಳ್ಳಿ, ಕೆಲಸ ಮಾಡುತ್ತಿದ್ದರು. ಕೊಡವರು ಉಪಯೋಗಿಸುವ ಪೀಚೆ ಕತ್ತಿಗಳಿಗೆ ಚಿನ್ನ, ಬೆಳ್ಳಿ ಮತ್ತು ಮುತ್ತುಗಳನ್ನು ಸೇರಿಸುತ್ತಿದ್ದರು. ಈಗ ಹೆಚ್ಚಿನವರು ಮರಗೆಲಸ ಮಾಡುತ್ತಿದ್ದಾರೆ. ಇವರ ಮನೆದೇವರು ಕಾವೇರಿ ಮತ್ತು ಇಗ್ಗುತಪ್ಪ. ಇವರಲ್ಲಿಯೂ ಮನೆತನಗಳಿವೆ. ಕಮೇಯಂಡ, ದುಗ್ಗಂಡ, ಅನ್ನಂಬರಿ, ಇಕೋಳಂಡ, ಅಮ್ಮನಂಡ, ಒಬ್ಬರ, ಪೊನ್ನಿರ ಮುಂತಾದವು.

ಕಣಿಯರು: ಕಣಿಯರು ಮಲಬಾರಿನಿಂದ ಬಂದವರು. ಇವರ ಮೂಲ ವೃತ್ತಿ ಕಣಿ (ಜ್ಯೋತಿಷ್ಯ) ಹೇಳುವುದು. ಜಿಲ್ಲೆಯ ಎಲ್ಲಾ ಕಡೆಯೂ ಕಂಡುಬರುತ್ತಾರೆ. ಮೂಲತಃ ಮಲಯಾಳ ಮಾತನಾಡುವರಾದರೂ ಕೊಡವ ಭಾಷೆಯನ್ನು ಮಾತನಾಡುತ್ತಾರೆ. ಇಂದಿಗೂ ಕೊಡವ ಕಾಫಿ ತೋಟದಲ್ಲಿ ಕೂಲಿಕೆಲಸವನ್ನು ಮಾಡುತ್ತಿದ್ದಾರೆ.

ಇಗ್ಗುತಪ್ಪ: ಇವರು ಕಾವೇರಿ ಮಾತೆಯನ್ನು ಪೂಜಿಸುತ್ತಾರೆ. ಹಿಂದೆ ಕೊಡವರ ಮನೆಯ ದೇವತಾ ಕಾರ್ಯಗಳಿಗೆ ಶುಭಕಾರ್ಯಗಳಿಗೆ ಒಳ್ಳೆಯ ದಿನಗಳನ್ನು ನಿಶ್ಚಯಿಸಿ ಕೊಡುತ್ತಿದ್ದರು. ಇತ್ತೀಚಿಗೆ ಇವರೂ ಕೃಷಿಯಲ್ಲಿ ತೊಡಗಿದ್ದಾರೆ.

ಕಾಪಳರು: ರಾಜರ ಆಳ್ವಿಕೆಯ ಸಮಯದಲ್ಲಿ ಕೊಡಗಿನಲ್ಲಿ 'ನಾಲ್ಕುನಾಡು' ಅರಮನೆಯಲ್ಲಿ ಕಾವಲುಗಾರರಾಗಿ ಕೆಲಸ ಮಾಡುತ್ತಿದ್ದರು. ಇವರನ್ನು ಮಲಬಾರಿನಿಂದ ವಲಸೆ ಬಂದವರೆಂದು ಹೇಳುತ್ತಾರೆ. ಬಹಳ ಹಿಂದಿನಿಂದಲೂ ಕೊಡಗು ಮತ್ತು ಕೇರಳದ ನಂಟು ಇರುವುದು ಕಂಡುಬರುತ್ತದೆ. ಬೈಡಮಲೆ ಭೂತನಿಗೆ ಹೆದರಿ ಓಡಿಹೋಗಿ ಚೋಳ ಸೋಮೇಶ್ವರನ ಖಜಾನೆಯನ್ನು ಕಾಯುತ್ತಿದ್ದರಿಂದ (ಕಾವಲ್ಕಾರರು) 'ಕಾಪಳ'ರೆಂಬ ಹೆಸರು ಬಂದಿದೆ ಎಂದು ಕುಶಾಲಪ್ಪನವರು ತಿಳಿಸುತ್ತಾರೆ. ಇವರ ದೇವತೆಯಾದ ಗಣಪತಿಯನ್ನು ಕೊಡವ ಭಾಷೆಯಲ್ಲಿ 'ಕಾಪಾಲಿನ್' ಎನ್ನುತ್ತಾರೆ. ಕಾಪಳರು ಭೂತ ಪೂಜೆಯನ್ನು ಮಾಡುತ್ತಾರೆ. ಹಳೇ ವಿವಾಹ ಸಂಪ್ರದಾಯಗಳನ್ನು ಬಿಟ್ಟು ಕೊಡವರ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದಾರೆ. ಹುಟ್ಟು ಸಾವುಗಳಲ್ಲಿ ಮೈಲಿಗೆ ಆಚರಿಸುತ್ತಾರೆ. ಅಕಾಲಿಕ ಮರಣಕ್ಕೀಡಾದವರನ್ನು ಹೂಳುತ್ತಾರೆ. ವಯಸ್ಸಾದವರು ಸತ್ತರೆ ಸುಡುತ್ತಾರೆ. ಇವರು ಕೊಡವರಂತೆಯೆ ದೇವರ ಹೆಸರಿನಲ್ಲಿ ಕೋಲಗಳನ್ನು ಕಟ್ಟಿಸುತ್ತಾರೆ. ಕುಳಿಯ ಬೌಡಿಯರನ್ನು ಪೂಜಿಸುತ್ತಾರೆ.

ಕುಡಿಯರು

ಕುಡಿಯರನ್ನು 'ಮಲೈಕುಡಿಯ' ಎಂದು ಕರೆಯುತ್ತಾರೆ. ಇವರು ಭಾಗಮಂಡಲ ನಾಡು. ನಾಪೋಕ್ಲು ಮತ್ತು ವೀರಾಜಪೇಟೆ ನಾಡುಗಳಲ್ಲಿ ಕಂಡುಬರುತ್ತಾರೆ. ಇವರ ಮುಖ್ಯ ವೃತ್ತಿ ಬೈನೆ ಮರದಿಂದ ಹೆಂಡ ಇಳಿಸುವುದು. ಮನೆ ಮಾತು ತುಳು, ಕೊಡವ, ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಸಾಮಾನ್ಯ ಎತ್ತರ, ಮೈ ಬಣ್ಣ ಕಪ್ಪು. ಹೆಂಗಸರು ಆಭರಣ ಧರಿಸುತ್ತಾರೆ.ಇವರಲ್ಲಿ ಎರಡು ಒಳಪಂಗಡಗಳಿವೆ. ಪನೆಕುಡಿಯ ಮತ್ತು ತೇಮಕುಡಿಯ. ಪನೆಕುಡಿಯರನ್ನು 'ಒಯ್ಯೆ ಕುಡಿಯ', 'ಗೆಜ್ಜೆಕುಡಿಯ', 'ಅಚ್ಚೆಕುಡಿಯ', 'ಪೂಮಲೆಕುಡಿಯ', 'ನೀರಾಳಿಕುಡಿಯರೆಂದು' ಕರೆದರೆ, ತೇಮೆಕುಡಿಯರನ್ನು ತೇಮೆಯ, ತೇಮೆತಂಡ, ತೇಮತಿಯ ತೆಕ್ಕುಡಿಯ, ಮಲೆಕುಡಿಯ, ಮಲೆಪಾಳಿಯ ಎಂದು ಕರೆಯುತ್ತಾರೆ. ಕುಡಿಯರು ಹಿರಿಯರನ್ನು ಪೂಜಿಸುತ್ತಾರೆ. ಕಾಡಿನ ಒಳಗಡೆ ದೇವಸ್ಥಾನಗಳಲ್ಲಿ ತಮ್ಮಯ್ಯ ಮತ್ತು ಮಲತಂಪುರನ್ ಎಂಬ ಭೂತಗಳನ್ನು ಪೂಜಿಸುತ್ತಾರೆ. ಕುಲದೇವತಾ ಪದ್ಧತಿ (ಟೋಟೆಮಿಸಂ) ಯಲ್ಲಿ ಇವರು ನಂಬಿಕೆಯುಳ್ಳವರು. ಕಾಡಿನಲ್ಲಿ ಮರ, ಕಲ್ಲಿನಿಂದ ಮಾಡಿದ ವಿಗ್ರಹಗಳು ಕಬ್ಬಿಣದ ಸಲಕರಣೆಗಳನ್ನು ದೇವಸ್ಥಾನಗಳಲ್ಲಿಟ್ಟು ಪೂಜಿಸುತ್ತಾರೆ. 'ಕಲ್ಲುರ್ಟಿ' ಯೆಂಬುದು ಕಾಳಿಯಂತೆ ಪೂಜಿಸುವ ಒಂದು ದೇವತೆ ಈ ದೇವತೆಯ ಜೊತೆಗೆ ಕಾವೇರಿ ಮಾತೆ ಭೈರವ ಪಾಂಡವರು, ಗುಳಿಗ ದೇವತೆಯನ್ನು ಪೂಜಿಸುತ್ತಾರೆ.

ಕುರುಬರು: ಕೊಡಗಿನಲ್ಲಿ ಇವರನ್ನು ಹಾಲು ಮತದವರೆಂದೂ ಹಾಲು ಕುರುಬರೆಂದು ಕರೆಯುತ್ತಾರೆ. ಜಿಲ್ಲೆಯಲ್ಲಿ ಇವರನ್ನು ಪರಿಶಿಷ್ಟ ಬುಡಕಟ್ಟು ಸಮುದಾಯಕ್ಕೆ ಸೇರಿಸಲಾಗಿದೆ. ಇವರು ವಲಸೆಬಂದವರು. ಇವರ ಮುಖ್ಯ ಕಸುಬು ಕುರಿಸಾಕುವುದು ಹಾಗೂ ಕಂಬಳಿ ನೇಯುವುದಾಗಿತ್ತು. ಕೊಡಗಿನ ಸೋಮವಾರಪೇಟೆಯ ತೊರೆನೂರು, ಶನಿವಾರಸಂತೆ, ವೀರಾಜಪೇಟೆಯ ಹೆಬ್ಬಾಲೆ, ತಿತಿಮತಿ, ಭದ್ರಗೋಳ, ಒಂಟಿಯಂಗಡಿಯಲ್ಲಿ ನೆಲೆಸಿದ್ದಾರೆ.

ಇವರ ಜೊತೆಗೆ ಕುಂಬಾರರು ಕೇರಳ, ದಕ್ಷಿಣ ಕನ್ನಡ ಜಿಲ್ಲೆಗಳಿಂದ ಬಂದವರಿದ್ದಾರೆ. ಕನ್ನಡ ಮಾತನಾಡುವ ಸೀಮೆಯವರನ್ನು 'ಕೊಯ್ರ' ಎಂದು ಕರೆಯುತ್ತಾರೆ. ಇವರು ದೊಡ್ಡ ವೀರರಾಜನ ಕಾಲದಲ್ಲಿ ವಲಸೆ ಬಂದವರೆಂದು ಹೇಳುತ್ತಾರೆ. ವೆಂಕಟೇಶ್ವರ ಇವರ ಮನೆದೇವರು. ಹೆಂಗಸರು ಕೊಡವರಂತೆ ಬಟ್ಟೆ ಧರಿಸುತ್ತಾರೆ. ಈ ಸಮಾಜದ ಯಜಮಾನನನ್ನು 'ಪಟದಾರಿ' ಎಂದು ಕರೆಯುವರು.

ಜೇನು ಕುರುಬರು

ಜೇನುಕುರುಬರು ಜಿಲ್ಲೆಯ ಪೊನ್ನಂಪೇಟೆ, ಶ್ರೀಮಂಗಲ, ಅಮ್ಮತ್ತಿನಾಡು, ಸೋಮವಾರಪೇಟೆ ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವರ ಮುಖ್ಯ ಕಸುಬು ಮರ ಹಾಗೂ ಪೊಟರೆಗಳಲ್ಲಿ ಜೇನು ಸಂಗ್ರಹಿಸುವುದು. ಇವರನ್ನು ಆನೆಕುರುಬ, ಕಾವಾಡಿ, ಪೂಮೆಕುರುಬ ಎಂದೂ ಕರೆಯುತ್ತಾರೆ. ರಾಜರ ಕಾಲದಲ್ಲಿ ಇವರು ಆನೆಗಳನ್ನು ಪಳಗಿಸುತ್ತಿದ್ದರಲ್ಲದೆ, ಅವುಗಳ ಮೇಲ್ವಿಚಾರಣೆಯನ್ನು

ನೋಡಿಕೊಳ್ಳುತ್ತಿದ್ದರು.

ಕುರು ಎಂದರೆ ಬೆಟ್ಟ, ಕುರುಬ ಎಂದರೆ ಬೆಟ್ಟದಲ್ಲಿ ವಾಸಿಸುವವನು. ಕೇರಳ, ತಮಿಳುನಾಡಿನಲ್ಲಿ ವಾಸಿಸುವ ಇವರನ್ನು ಕಟ್ಟನಾಯಕರು, ಶೋಲನಾಯಕರು, ತೇನೆಕುರುಮ, ಜೇನುಕೊಯ, ಕುರುವ ಎಂದೆಲ್ಲಾ ಕರೆಯುತ್ತಾರೆ. ಕನ್ನಡದ 'ಕುರುಬ' ತಮಿಳಿನ 'ಕುರುಂಬ' ಕೇರಳದ 'ಕುರುಮನ್' ಹೆಸರುಗಳು ಒಂದೇ ಬುಡಕಟ್ಟನ್ನು ಸೂಚಿಸುತ್ತವೆ.

ಇವರ ಮೈಬಣ್ಣ ಕಪ್ಪು. ಗಂಡಸರೂ ಹೆಂಗಸರೂ ತಲೆ ಕೂದಲನ್ನು ಉದ್ದವಾಗಿ ಬಿಟ್ಟು ಹಿಂದೆ ಗಂಟುಹಾಕುತ್ತಾರೆ. ಇತ್ತೀಚೆಗೆ ಗಂಡಸರು ಕ್ರಾಪು ಮಾಡಿಸಿಕೊಳ್ಳುತ್ತಾರೆ. ಇವರು ಮಾತನಾಡುವ ಭಾಷೆ ಕನ್ನಡದ ಒಂದು ಉಪಭಾಷೆಯಾಗಿದೆ (ಬುಡಕಟ್ಟು ಭಾಷೆಯಲ್ಲಿದೆ).

ಜೇನು ಕೀಳುವುದು ಇವರ ಮೂಲ ವೃತ್ತಿ ಆದರೆ ಇತರ ವೃತ್ತಿಗಳಾದ ಬೊಂಬುಗಳನ್ನು, ಹುಲ್ಲನ್ನು ಕಾಡಿನಲ್ಲಿ ಸಂಗ್ರಹಿಸುತ್ತಾರೆ. ನಾಯಿಗಳೊಂದಿಗೆ ಬೇಟೆಯಾಡಿ ಗೆಡ್ಡೆಗೆಣಸುಗಳನ್ನು ತಿಂದು ಜೀವಿಸುತ್ತಾರೆ. ಇದರ ಜೊತೆಗೆ ಕಾಡಿನಲ್ಲಿ ಸಿಗುವ ಕೊಳಿಕೆ, ಕಾಗೆಸೊಪ್ಪನ್ನು ಆಹಾರವಾಗಿ ಬಳಸುತ್ತಾರೆ. ಅನ್ನವನ್ನು ಕಾಳುಮೆಣಸಿನೊಂದಿಗೆ ಬೆರೆಸಿಕೊಂಡು ತಿನ್ನುತ್ತಾರೆ. ರಾಗಿಯಿಂದ ಮುದ್ದೆ, ರೊಟ್ಟಿ, ಮಾಡಿ ಉಪಯೋಗಿಸುತ್ತಾರೆ. ಕುಂಬಳಕಾಯನ್ನು ಸೀಳಿ ಬೇಯಿಸಿ ಉಪ್ಪು ಹಚ್ಚಿ ತಿನ್ನುತ್ತಾರೆ.

ಜೇನು ಕುರುಬರು ಕುಲದೇವತಾ ಪದ್ಧತಿ ಅನುಸರಿಸುತ್ತಾರೆ. ಭೂತ ಪೂಜೆಯಲ್ಲಿ ಬೆಟ್ಟ ಕುರುಬರಿಗಿಂತ ಇವರು ಕಡಿಮೆ ಒಲವುಳ್ಳವರು. ಸಿದ್ಧರಾಮ, ಸೂರ್ಯ ಚಂದ್ರ, ಭೈರವನನ್ನು ಪೂಜಿಸುತ್ತಾರೆ. ಮಾಟ, ಮಂತ್ರ, ತಂತ್ರಗಳಲ್ಲಿ ಇವರಿಗೆ ನಂಬಿಕೆ. ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕೆಲವು ಹಬ್ಬಗಳಲ್ಲಿ ದೇವರನ್ನು, ಮನುಷ್ಯರನ್ನು ಬೈಯ್ಯುತ್ತಾರೆ. (ಅಂದು ಅವರು ಯಾರನ್ನು ಬೇಕಾದರೂ ಬೈಯುತ್ತಾರೆ). ವೇಷವನ್ನು ಹಾಕಿಕೊಂಡು ಗುಂಪು ಗುಂಪಾಗಿ ಮನೆ ಮನೆಗೆ ಹೋಗಿ, ಅಕ್ಕಿ, ಬಟ್ಟೆ ಮೊದಲಾದವುಗಳನ್ನು ಸಂಗ್ರಹಿಸುತ್ತಾರೆ. ಕೋಲಾಟ ಇವರ ಮುಖ್ಯವಾದ ಕಲೆ, ಸತ್ತವರನ್ನು ತಮ್ಮ ಗುಡಿಸಿಲಿನ ಪಕ್ಕದಲ್ಲಿ ಹೂಳುತ್ತಾರೆ. ನಂತರ ಗುಡಿಸಲನ್ನು ಸುಟ್ಟು ಹಾಕಿ ಬೇರೆಡೆಗೆ ವಾಸ ಹೋಗುತ್ತಾರೆ. ಸತ್ತವರನ್ನು ಚಾಪೆಯಲ್ಲಿ ಸುತ್ತಿ ಮರ, ಬಂಡೆಗಳ ಮೇಲೆಯಿಟ್ಟು, ಹಕ್ಕಿ ಪಕ್ಷಿಗಳು ತಿನ್ನಲು ಬಿಡುತ್ತಿದ್ದರು. ನಾಗರೀಕ ಸಂಪರ್ಕ ಹೆಚ್ಚು ಹೆಚ್ಚು ದೊರೆತಂತೆಲ್ಲಾ ಆಚಾರ ವಿಚಾರಗಳಲ್ಲಿ ನಾವಿನ್ಯತೆ ಕಂಡುಬರುತ್ತಿದೆ. ಕೊಡವರ ಅನೇಕ ಇವರ ಸಂಪ್ರದಾಯಗಳನ್ನು ಅಳವಡಿಸಿಕೊಂಡಿದ್ದಾರೆ. ಅಲೆಮಾರಿತನ ಬಿಟ್ಟು ಒಂದೆಡೆ ನೆಲೆ ನಿಂತಿದ್ದಾರೆ. ಶವ ಸಂಸ್ಕಾರದಲ್ಲಿ ಹೂಳುವುದು, ಸುಡುವುದು ಎರಡೂ ಉಂಟು.

ಕೆಂಬಟ್ಟಿಗಳು

ಕೆಂಬಟ್ಟಿಗಳು ದಲಿತರ ಒಂದು ಉಪಪಂಗಡ. ಇವರು ಕೊಡಗಿನಲ್ಲಿ ಮಾತ್ರ ಕಂಡುಬರುತ್ತಾರೆ. ಕೊಡಗಿನ ಮೂಲದವರಲ್ಲಿ ಇವರೂ ಸೇರಿದ್ದಾರೆ. ಕೊಡವ ಭಾಷೆಯನ್ನಾಡುತ್ತಾರೆ. ಪಡುಕುಟ್ಟುಪಾಡ, ಬೆಟ್ಟಕುಟ್ಟಪಾಡ, ಬೆಟ್ಟ ಕುಟ್ಟಿ

ಅಪ್ಪು' ಕಾಡುಕುಟ್ಟಿಕಾಳು, ಪೊನ್ನಕುಟ್ಟಿಕಾಳು, ಬೆಳ್ಳಿಕುಟ್ಟಿಅಯ್ಯು, ಗಡ್ಡ ಕುಟ್ಟಿ ಬೇಲಿ, ಚೆಂಗಿಕುಟ್ಟಿ ಪಂಜು ಎಂಬ ಕುಲಗಳು ಇವರಲ್ಲಿವೆ. ಒಂದೇ ಕುಲದಲ್ಲಿ ವಿವಾಹ ಸಂಬಂಧವೇರ್ಪಡುವುದಿಲ್ಲ. ಇವರು ಕೊಡವರ ಗದ್ದೆಗಳಲ್ಲಿ ತೋಟಗಳಲ್ಲಿ ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇವರ ಕೆಲವು ಸಾಮಾಜಿಕ ಪದ್ಧತಿಗಳು ಕೊಡವರ ಪದ್ಧತಿಗಳನ್ನು ಹೋಲುತ್ತವೆ.

ವಿವಾಹಗಳಲ್ಲಿ ತೆರಕೊಡುವ ಪದ್ಧತಿಯಿದೆ. ಕೊಡವರಂತೆ ಬಾಳೆಕಂಬ ಕತ್ತರಿಸುವ ಪದ್ಧತಿಯಿಲ್ಲ. ಆದರೆ ಕೆಲವೆಡೆ ಇದು ಕಂಡುಬರುತ್ತದೆ. ಸತ್ತವರನ್ನು ಹೂಳುವುದು, ಸುಡುವುದು, ರೂಢಿಯಲ್ಲಿದೆ. ರಾಜರ ಕಾಲದಲ್ಲಿ ೧೮೦ ಇವರನ್ನು ಪನ್ಯಜಮೀನುಗಳ ಕೃಷಿ ಆಳುಗಳನ್ನಾಗಿಸಿಕೊಂಡಿದ್ದರು. ಹಾಗೂ ಅವರ ಕುಟುಂಬಗಳಿಗೆ ರಕ್ಷಣೆಗಳನ್ನು ನೀಡುತ್ತಿದ್ದರು. ಕೆಂಬಟ್ಟಿ ಹೊಲೆಯರು ಪನ್ನಾಂಗಾಲತಮ್ಮೆ, ಅಯ್ಯಪ್ಪ, ಕಾರೊಣಗುರು,

ಕುರುಂದ, ಕಲ್ಯಾಟಜ್ಜಪ್ಪ, ಕಾಕೋಟಚ್ಚಯ್ಯಪ್ಪ, ನೀಲಿ/ನೀಲಮ್ಮ ದೇವರು, ನಾತ, ಪೊಲಪ್ಪ, ಮಂಚಾವುಂಡಿ, ಬೇಲಿದೇವರು, ಮಂದಣಮೂರ್ತಿ, ಮೂರ್ತಿಅಮ್ಮೆ, ಗುಳಿಗ, ಪೂದ, ಪಾಷಣಮೂರ್ತಿ ಮತ್ತು ಮಾರಮ್ಮನನ್ನು ಪೂಜಿಸುತಿದ್ದರು.

ಕೊಯವರೆಂಬ ಮೂಲ ನಿವಾಸಿಗಳು ಸಹ ಕೊಡವರ ಆಚಾರ, ವಿಚಾರಗಳನ್ನು ಅನುಸರಿಸುತ್ತಾರೆ. ಇವರ ಮನೆಯ ಮಾತು ಕೊಡವ ಭಾಷೆಯೇ ಆಗಿದೆ. ಇವರಲ್ಲೂ ಮನೆತನಗಳುಂಟು. ಮೂವತ್ನಾಲ್ಕು ಐನ್‌ಮನೆಗಳು ಕೂಡ ಇವೆ. ಕೊಡಗಿನ ಎಲ್ಲಾ ಭಾಗಗಳಲ್ಲಿ ಇವರು ಕಂಡುಬರುತ್ತಾರೆ.

ಗಾಣಿಗರು: ಕೊಡಗು ಜಿಲ್ಲೆಗೆ ಮೈಸೂರು ಮತ್ತು ದಕ್ಷಿಣ ಕನ್ನಡ ಕಡೆಯಿಂದ ವಲಸೆ ಬಂದವರು. ಮೈಸೂರು ಕಡೆಯ ಗಾಣಿಗರಲ್ಲಿ, ಹೆಗ್ಗಾಣಿಗ, ಕಿರುಗಾಣಿಗರೆಂಬ ಪ್ರಭೇದಗಳಿವೆ. ಗಾಣಿಗರು ತಮ್ಮ ಹೆಸರಿನ ಮುಂದೆ ಶೆಟ್ಟಿ ಎಂದು ಸೇರಿಸಿಕೊಳ್ಳುತ್ತಾರೆ. ಇವರ ಮದುವೆಯಲ್ಲಿ ತೆರಪದ್ಧತಿ ರೂಢಿಯಲ್ಲಿದೆ. ದಾಸಯ್ಯಗಳನ್ನು ಕರೆದು ಮಣೆಸೇವೆ ಮಾಡುವ ಪದ್ಧತಿ ಇದೆ. ಈಗ ಗಾಣಗಳಲ್ಲಿ ಎಣ್ಣೆ ತೆಗೆಯುವ ಬದಲು ರೋಟರಿ ಯಂತ್ರಗಳನ್ನು ಉಪಯೋಗಿಸುತ್ತಿದ್ದಾರೆ. ಸತ್ತವರನ್ನು ಸುಡುತ್ತಾರೆ. ಇವರಲ್ಲಿ ಕಟ್ಟೆ ಮನೆಗಳಿಲ್ಲ.

ಗೊಲ್ಲರು: ಗೊಲ್ಲರನ್ನು ಕೊಡಗಿನಲ್ಲಿ ಗೌಳಿ, ಗವುಳೆ, ಅತ್ತೆಕಾಳಿ, ಮೇಪಾಡಿ ಎಂಬ ಹೆಸರುಗಳಿಂದಲೂ ಕರೆಯುತ್ತಾರೆ. ಇವರನ್ನು ಯಾದವರೆಂದು ಕರೆಯುವುದು ವಾಡಿಕೆ. ಮೈಸೂರು ಕಡೆಯಿಂದ ಬಂದ ಇವರಲ್ಲಿ ಪೈತಾಲ, ಪುನುಗು, ಬೀಗಮುದ್ರೆ ಅಥವಾ ಬೊಕ್ಕಸ ಮೊದಲಾದ ಒಳಪಂಗಡಗಳಿವೆ. ಒಂಟಿ ಚಪ್ಪರದವರು ಕೊಂಡು ಚಪ್ಪರದವರು ಎಂಬ ಎರಡು ಪ್ರಭೇದಗಳಿವೆ. ಕೊಡಗು ಜಿಲ್ಲೆಯಲ್ಲಿ ಗೊಲ್ಲರು, ಕುಂಜಿಲ, ಬೆಟ್ಟಗೇರಿ, ಅಯ್ಯಂಗೇರಿ, ಪೆರೂರು ಚೆಟ್ಟಿಮಾನಿ, ಬೇತ್ರಿ ಗಾಳಿಬೀಡು, ಮಡಿಕೇರಿ ಮುಂತಾದ ಕಡೆ ಕಂಡುಬರುತ್ತಾರೆ. ಇವರು ಕೊಡವ ಭಾಷೆಯನ್ನಾಡುತ್ತಾರೆ. ಕೊಡವರಂತೆ ಇವರಲ್ಲೂ ೩೨ ಐನ್‌ಮನೆಗಳಿವೆ. ಪೊನ್ನಿಕಂಡ, ಬಿದ್ದಿಯಂಡ, ಪತ್ತಿಯಂಡ, ಚಿಂದಂಡ ಮುಂತಾದ ಮನೆತನದ ಹೆಸರನ್ನು ನೋಡಬಹುದು. ಇವರಿಗೆ ಭೂಮಿಯುಂಟು. ಕೊಡಗಿನ

ಗೊಲ್ಲರು ಅಯ್ಯಂಗೇರಿಯಲ್ಲಿರುವ ಶ್ರೀ ಕೃಷ್ಣನನ್ನು ಪೂಜಿಸುತ್ತಾರೆ. ಕೊಡವರ ಹಬ್ಬಗಳ ಜೊತೆಗೆ ಯುಗಾದಿ ಶ್ರೀಕೃಷ್ಣಜನ್ಮಾಷ್ಟಮಿ, ಗೌರಿಗಣೇಶ ಹಬ್ಬಗಳನ್ನು ಆಚರಿಸುತ್ತಾರೆ. ಸತ್ತವರನ್ನು ಹೂಳುವುದೂ ಉಂಟು. ಸುಡುವುದೂ ಉಂಟು.

ಅರೆಗೌಡರು : ವಿಜಯನಗರದ ಪತನವಾದ ಮೇಲೆ ಇಕ್ಕೇರಿ ಸಂಸ್ಥಾನಕ್ಕೆ ಬಂದು ದಕ್ಷಿಣ ಕನ್ನಡದ ಮೂಲಕ ಕೊಡಗಿಗೆ ಬಂದರೆಂಬ ಅಭಿಪ್ರಾಯವಿದೆ. ಇವರು ದಕ್ಷಿಣ ಕನ್ನಡ ಪುತ್ತೂರು, ಸುಳ್ಯದ ಕಡೆಯವರು. ದೊಡ್ಡವೀರ ರಾಜೇಂದ್ರನ ಕಾಲದಲ್ಲಿ ವಲಸೆ ಬಂದು ಹೆಚ್ಚಾಗಿ ಭಾಗಮಂಡಲ ನಾಪೋಕ್ಲು ಮಡಿಕೇರಿಯಲ್ಲಿ ನೆಲಸಿದ್ದಾರೆ. ಇವರು ಮಾತನಾಡುವ ಕನ್ನಡ ಭಾಷೆಯನ್ನು ಆರೆಭಾಷೆಯೆನ್ನುತ್ತಾರೆ. ಅರೆಗೌಡರಿಗೆ ಮುನ್ನ ಕ್ರಿ.ಶ. ೧೦೦೧ ರ ಮಡಿಕೇರಿ ಶಾಸನ (ಸಂಖ್ಯೆ ೨) ದಲ್ಲಿ ಗಣಗೂರು ಬಿಹಗಾಮುಣ್ಡ (ಬಿಹಗೌಡ) ಎಂಬ ಗೌಡ ಮನೆತನದ ವ್ಯಕ್ತಿ ಉಕ್ತನಾಗಿದ್ದಾನೆ. ಹುಲುಕೋಡಿನ (ಶನಿವಾರ ಸಂತೆ ಬಳಿ) ಚಿಕ್ಕಣ್ಣ ಬೆಮ್ಮೇಗೌಡನ ವೀರಗಲ್ಲಿನ ಉಲ್ಲೇಖವು ಇದೆ. (ಶಾಸನ ಸಂಖ್ಯೆ ೩೯) (ಎಂ.ಜಿ.ನಾಗರಾಜ್ ಅವರ ಸಂದರ್ಶನ ದಿಂದ ತಿಳಿದು ಬಂದ ಮಾಹಿತಿ)

ಕೊಡಗಿನಲ್ಲಿ ಗೌಡರ ಮನೆತನಗಳು ಸುಮಾರು ೩೫೦ ಇವೆ. ಇವರಿಗೂ ಸಹ ಕೊಡವರಂತೆ ಮನೆತನಗಳ ಹೆಸರಿದೆ. ಇವರಲ್ಲಿಯೂ ಮೂಲ ಮನೆಗಳನ್ನು ಐನ್‌ಮನೆಗಳೆಂದು ಕರೆಯುತ್ತಾರೆ.

ಇವುಗಳಲ್ಲಿ ಎಲ್ಲಾ ಸದಸ್ಯರಿಗೆ ಹಕ್ಕಾಗಿರುವ ಅಡುಗೆ ಕೋಣೆಯನ್ನು 'ಉಂಬೊಳಗೆ' ಎಂದು ಕರೆಯುತ್ತಾರೆ. ಕುಟುಂಬದ ಸಭಾಂಗಣವನ್ನು ಬುಡ್ತ ಎಂದೂ ಪಡಸಾಲೆಯನ್ನು ಕಯ್ಯಾಲೆ ಎಂದು ಕರೆಯುತ್ತಾರೆ. ಉಂಬೊಳಗೆಯಲ್ಲಿ ಕಾರಣರಿಗೆ ಎಡೆಯಿಡುತ್ತಾರೆ. ಕಯ್ಯಾಲೆಯಲ್ಲಿ ಐಮರ ಮುಖ್ಯಭಾಗ. ಇದರ ಮೇಲೆ ಹೆಂಗಸರು ಕುಳಿತು ಕೊಳ್ಳುವಂತಿಲ್ಲ. ಕುಟುಂಬದ ಹಿರಿಯ ಪುರುಷನನ್ನು 'ಪಟ್ಟೆದಾರ'ನೆಂದು ಕರೆಯುತ್ತಾರೆ.

ಕೊಡಗಿನ ಗೌಡರಿಗೆ ಜಮ್ಮ ಭೂಮಿಯುಂಟು. ಹಿಂದೆ ಜಮ್ಮ ಭೂಮಿಯ ಒಡೆಯರಾದ ಕೆಲವರು ಕೊಡವರ ಮನೆತನಗಳ ಹೆಸರುಗಳನ್ನಿಟ್ಟುಕೊಂಡಿದ್ದಾರೆ. ರಾಜರ ಕಾಲದಲ್ಲಿ ಕೆಲವು ಗೌಡ ಕುಟುಂಬಗಳಲ್ಲಿ ಕೊಡವ ಹೆಣ್ಣುಗಳನ್ನು ಮದುವೆಯಾಗಿದ್ದುದರಿಂದ ಆ ಕುಟುಂಬಗಳ ಸ್ತ್ರೀಯರು ಇತ್ತೀಚಿನವರೆಗೂ ಕೊಡವರಂತೆ ಸೀರೆ ಉಡುತ್ತಿದ್ದರು. ಅಂತಹ ಕುಟುಂಬದವರು ಮನೆಯಲ್ಲಿ ಕೊಡವ ಭಾಷೆಯನ್ನಾಡುತ್ತಾರೆ. ಇವರು ಯುಗಾದಿ, ಸಂಕ್ರಮಣ, ಕೈಲು ಮುಹೂರ್ತ, ಕಾವೇರಿ ಸಂಕ್ರಮಣ, ಹುತ್ತರಿ ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ. ಗೌಡರಲ್ಲಿ ಸತ್ತವರನ್ನು ಸುಡುತ್ತಾರೆ. ಮಕ್ಕಳನ್ನು ಹೂಳುತ್ತಾರೆ. ಮದುವೆ ವಯಸ್ಸಿನವರು ಮದುವೆಯಾಗದೆ ಸತ್ತಾಗ, ಗಂಡಸರಾಗಿದ್ದರೆ ಶವದ ಕೈಗಳಿಂದ ಬಾಳೆ ಗಿಡಕ್ಕೆ ತಾಳಿ ಕಟ್ಟಿದ ಶಾಸ್ತ್ರ ಮಾಡಿಸಿ ಸಂಸ್ಕಾರ ಮಾಡುತ್ತಾರೆ. ಹೆಂಗಸರಾಗಿದ್ದರೆ ಹುಲ್ಲಿನಿಂದ ಗಂಡಸಿನಾಕೃತಿಯನ್ನು ಮಾಡಿ ಶವದ ಕೊರಳಿಗೆ ಮಾಂಗಲ್ಯ ಕಟ್ಟಿಸಿ ಸಂಸ್ಕಾರ ಮಾಡುತ್ತಾರೆ. ಶವವನ್ನು ಚಟ್ಟದ ಮೇಲೆ ಒಯ್ದು ಸಂಸ್ಕಾರ ಮಾಡುತ್ತಾರೆ.

ನಾಮಧಾರಿ ಗೌಡರು

ರಾಮಾನುಜಾಚಾರ್ಯರ ವೈಷ್ಣವ ಪಂಥದ ಸಂಪ್ರದಾಯಗಳನ್ನು ಅನುಸರಿಸುವ ಗೌಡರೇ ನಾಮಧಾರಿಗೌಡರು. ನಾಮಧಾರಿ ಎಂಬ ಗುಣವಾಚಕವು ಕೇವಲ ಗೌಡರಲ್ಲಿ ಮಾತ್ರ ವೈಷ್ಣವ ಸಂಪ್ರದಾಯವನ್ನು ಅನುಸರಿಸುವ ಎಲ್ಲಾ ಜಾತಿಗಳಲ್ಲೂ ಕಂಡುಬರುತ್ತದೆ. ಇವರು ಹಣೆಯ ಮೇಲೆ ಕುಂಕುಮದ ನೇರಗೀಟನ್ನು ಹಾಕಿಕೊಳ್ಳುತ್ತಾರೆ. ಪಶ್ಚಿಮ ಘಟ್ಟಗಳ ಗೌಡರಲ್ಲಿ ನಾಮಧಾರಿಗಳ ಶಿಷ್ಟಾಚಾರ ಸಂಪ್ರದಾಯಗಳು ಬಹಳವಾಗಿವೆ. ಮಲೆನಾಡಿನ ನಾಮಧಾರಿಗಳು ಶ್ರಾವಣಮಾಸದಲ್ಲಿ ಮದ್ಯ ಮಾಂಸವನ್ನು ಸೇವಿಸುವುದಿಲ್ಲ. ಆದರೆ ಕೊಡಗಿನ ನಾಮಧಾರಿ ಗೌಡರು ಪೂರ್ಣ ಸಸ್ಯಾಹಾರಿಗಳು. ಮಲೆನಾಡಿನ ನಾಮಧಾರಿಗಳಿಗೂ ಕೊಡಗಿನ ನಾಮಧಾರಿಗಳಿಗೂ ಇರುವ ವ್ಯತ್ಯಾಸಗಳೆಂದರೆ ಕೇವಲ ಶ್ರಾವಣ ಮಾಸದಲ್ಲಿ ಮಾತ್ರ ಮಲೆನಾಡಿನ ನಾಮಧಾರಿಗಳಿಗೂ ಮಾಂಸವನ್ನು ನಿಷೇಧಿಸಿ ವರ್ಷದ ಉಳಿದ ದಿನದಲ್ಲಿ ಉಪಯೋಗಿಸುತ್ತಾರೆ. ಆದರೆಕೊಡಗಿನ ನಾಮಧಾರಿ ಗೌಡರು ಸಂಪೂರ್ಣ ಸಸ್ಯಹಾರಿಗಳು.

ಹರಿಸೇವೆಯನ್ನು ಮಾಡಿ ಭೈರವೇಶ್ವರರನ್ನು ಪೂಜಿಸಿ ಪ್ರಾರ್ಥಿಸುವ ಸಂಪ್ರದಾಯವು ಕೊಡಗಿನ ನಾಮಧಾರಿ ಗೌಡರಲ್ಲಿ ಇದೆ. ಕೊಡಗಿನ ದಕ್ಷಿಣಭಾಗದಲ್ಲಿ ಕಂಡುಬರುವ ಇವರು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಸಂಪಾಜೆ ಕಡೆಯಿಂದ ವಲಸೆ ಬಂದವರೆಂದು ನಂಬಲಾಗಿದೆ. ಕೊಡಗು ಜಿಲ್ಲೆಯ ನಲ್ಲೂರು, ಶಿರಂಗಾಲ, ಹೆಬ್ಬಾಲೆ, ಕೂಡ್ಲೂರು ಕೂಡಮಂಗಳೂರುಗಳಲ್ಲಿ ಇವರು ಕಂಡು ಬರುತ್ತಾರೆ. ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನಲ್ಲಿ ನೆಲೆಸಿರುವವರನ್ನು ಹಿಂದೆ ನಾಮಧಾರಿಗಳೆಂದು ಕರೆಯುತ್ತಿದ್ದು ಇತ್ತೀಚೆಗೆ 'ಗೌಡ' ಎಂಬ ಪ್ರತ್ಯಯ ಸೇರಿಸಿ ನಾಮಧಾರಿಗೌಡ ಎಂದು ಕರೆಯುತ್ತಿರುವುದು ಕಂಡುಬರುತ್ತದೆ. ಬಹುಶಃ ಕರ್ನಾಟಕದಲ್ಲಿ ಗೌಡರಿಗಿರುವ ಮಾನ್ಯತೆ ಸ್ಥಾನಮಾನಗಳು ಹಾಗೂ ಕೊಡಗಿನ ಗೌಡರೊಂದಿಗಿನ ವೈವಾಹಿಕ ಸಂಬಂಧಗಳು ಇದಕ್ಕೆ ಕಾರಣವಾಗಿರಬಹುದು. ನಾಮಧಾರಿಗಳ ಮೂಲ ಕಸುಬು ವ್ಯವಸಾಯ. ಇತ್ತೀಚೆಗೆ ಜೈನಗೌಡರೊಂದಿಗೆ ವಿವಾಹ ಸಂಬಂಧವೇರ್ಪಡುತ್ತಿದೆ. ಇವರ ಮನೆ ದೇವರುಗಳು ತಿರುಪತಿ ತಿಮ್ಮಪ್ಪ, ನಂಜುಂಡೇಶ್ವರ. ಇವರು ಯುಗಾದಿ, ಗೌರಿ, ಗಣೇಶ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ. ಸತ್ತವರನ್ನು ಹೂಳುತ್ತಾರೆ, ಕೆಲವರು ಸುಡುತ್ತಾರೆ.

ದೇವರ ಮಕ್ಕಳು

ಕೊಡಗು ಜಿಲ್ಲೆಯಲ್ಲಿ ಗೌಡರಲ್ಲಿರುವ ಒಳಗುಂಪನ್ನು ದೇವರ ಮಕ್ಕಳೆನ್ನುತ್ತಾರೆ. ಸೋಮವಾರಪೇಟೆ, ದುಂಡಳ್ಳಿ, ಕಾಣಿಕೋಡಿ, ನೀರಗುಂದ,ಸಾಂತಪುರ, ಊಲುಗುತ್ತಿಗಳಲ್ಲಿ ಇವರು ಹೆಚ್ಚಾಗಿರುತ್ತಾರೆ. ಇವರ ಮನೆ ಮಾತು ಕನ್ನಡ. ಮಾಂಸಾಹಾರಿಗಳು. ಮುಖ್ಯ ಉದ್ಯೋಗ ವ್ಯವಸಾಯ. ದನಕರುಗಳ ಆರೋಗ್ಯಕ್ಕಾಗಿ 'ಅಗೇಮಾರಿ' ಎಂಬ ಹಬ್ಬವನ್ನು ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಊರಿನವರೆಲ್ಲರೂ ಊರಬಾಗಿಲಿನಲ್ಲಿ 'ಕರಿಕಲ್ಲಿ'ಗೆ (ಊರ ದೇವತೆ) ಯೆಡೆಯಿಡುತ್ತಾರೆ. ಸತ್ತವರನ್ನು

ಸುಡುತ್ತಾರೆ. ಮಕ್ಕಳು ಸತ್ತರೆ ಹೂಳುತ್ತಾರೆ. ಇದು ಕೊಡವರಲ್ಲೂ ಇರುವ ಪದ್ಧತಿಯೇ ಆಗಿದ್ದು, ಕೊಡವರನ್ನೇ ಇವರು ಅನುಸರಿಸಿರಬೇಕೆನಿಸುತ್ತದೆ.

ಒಕ್ಕಲಿಗ ಗೌಡರು

ಸೋಮವಾರಪೇಟೆ ತಾಲೂಕಿನಲ್ಲಿ ಮಾದರವಳ್ಳಿ, ಶಾಂತಳ್ಳಿ ಕುಂದಳ್ಳಿ, ಕೊರೆ, ಗೌಡಳ್ಳಿ ಮೊದಲಾದ ಕಡೆ ಒಕ್ಕಲಿಗ ಗೌಡರೆಂಬ ಇನ್ನೊಂದು ಗೌಡರ ಒಳಪಂಗಡವಿದೆ. ಇವರಿಗೂ ಗಂಗಡಕಾರಗೌಡರಿಗೂ ಹಿಂದೆ ಸಂಬಂಧವೇರ್ಪಡುತ್ತಿರಲಿಲ್ಲ. ಇವರ ಮುಖ್ಯ ಉದ್ಯೋಗ ವ್ಯವಸಾಯ. ಇವರ ಭಾಷೆ ಕನ್ನಡ. ದೊಡ್ಡಯ್ಯ ಬೇಲೂರು ಚನ್ನಗರಾಯ, ಶಾಂತಳ್ಳಿ ಕುಮಾರಲಿಂಗ, ಮೊದಲಾದವು ಇವರ ಮನೆ ದೇವರುಗಳು. ಇವರು ಮಹಾಲಯ ಪಕ್ಷವನ್ನು ಆಚರಿಸುವುದಿಲ್ಲ. ಗೌರಿ ಹಬ್ಬದ ತರುವಾಯ ಒಂದು ತಿಂಗಳ ನಂತರ 'ಮಾಳ'ದ ಹಬ್ಬವನ್ನು ಆಚರಿಸುತ್ತಾರೆ. ದೀಪಾವಳಿಯ ಹನ್ನೆರಡು ದಿನಕ್ಕೆ ಮಕ್ಕಳ ಹಬ್ಬ ಮಾಡಿ ವ್ಯವಸಾಯೋಪಕರಣಗಳನ್ನೂ ತಿಪ್ಪೆಯನ್ನೂ (ತಿಪ್ಪಮ್ಮ) ಪೂಜಿಸುತ್ತಾರೆ. ಚಾಮರಾಜನಗರದ ಕೆಲವು ಭಾಗದಲ್ಲಿ ಈ ಆಚರಣೆ ಇದೆ. ಈ ಹಬ್ಬವು ಸೋಮವಾರಪೇಟೆ ತಾಲೂಕಿನ ಉತ್ತರ ಭಾಗದಲ್ಲಿ ವಿಶೇಷವಾದುದು. ದೀಪಾವಳಿಯ ದಿನ 'ಬೆಳಗುಂಬಳ' ಬಳ್ಳಿ ತಂದು ಸುತ್ತಿ ಉಂಗುರ ಮಾಡಿ ಗದ್ದೆಗಳಲ್ಲಿ ದನಗಳಿಗೆ ಸುತ್ತುತ್ತಾರೆ.

ಗಂಗಡಕಾರ ಗೌಡರು

ಗೋಣಿಕೊಪ್ಪಲು ಕಡೆ ಇರುವ ಗಂಗಡಕಾರಗೌಡರು, ಮೈಸೂರು, ಹಾಸನ, ಚಿಕ್ಕಮಗಳೂರು ಕಡೆಯಿಂದ ವಲಸೆ ಬಂದವರು. ಇವರಿಗೂ ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದಿರುವ ಗೌಡರಿಗೂ ಮತ್ತು ಸೋಮವಾರಪೇಟೆಯ ದೇವರ ಮಕ್ಕಳು ಮತ್ತು ಒಕ್ಕಲಿಗ ಗೌಡರಿಗೂ ಹಿಂದೆ ವಿವಾಹ ಸಂಬಂಧವೇರ್ಪಡುತ್ತಿರಲಿಲ್ಲ. ಗಂಗಡಕಾರ ಒಕ್ಕಲಿಗರಲ್ಲಿ ಪೆಟ್ಟಿಗೆಯವರು ಮತ್ತು ಬುಜ್ಜಣಿಗೆಯವರು ಎಂಬ ಎರಡು ಒಳಗುಂಪುಗಳಿರುವುದರ ಜೊತೆಗೆ ಆನೆ, ಆವಿ, ಬೆಳ್ಳಿ, ಚಂದ್ರ ಚಿನ್ನ ಮೊದಲಾದ ಕುಲಗಳಿವೆ. ಇವರು ಮನೆಯಲ್ಲಿ ಕನ್ನಡ ಮಾತನಾಡುತ್ತಾರೆ. ಕೊಡಗಿನ ಎಲ್ಲಾ ತಾಲ್ಲೂಕುಗಳಲ್ಲಿ ಬೇರೆ ಬೇರೆ ಗೌಡರು ಸಮುದಾಯದವರು ನೆಲೆಸಿದ್ದರೂ ಪರಸ್ಪರ ವೈವಾಹಿಕ ಸಂಬಂಧಗಳಿರುವುದಿಲ್ಲ. ಆದರೆ ಕೆಲವು ಸಾಮೂಹಿಕ ಆಚರಣೆಗಳಾದ ಹಬ್ಬ, ಜಾತ್ರೆ, ಊಟೋಪಚಾರಗಳಲ್ಲಿ ಸಾಮ್ಯತೆ ಇದೆ. ಆಹಾರ ಸೇವೆಯಲ್ಲಿ ನಿರ್ಬಂಧ ಇರುವುದಿಲ್ಲ.

ಜೋಗಿಗಳು

ಕೊಡಗಿನ ಜೋಗಿಗಳು ಭಾಗಮಂಡಲ, ಕುಶಾಲನಗರ, ಮತ್ತು ಸೋಮವಾರಪೇಟೆಗಳಲ್ಲಿ ನೆಲೆಸಿದ್ದಾರೆ. ಇವರ ಪೂರ್ವ ವೃತ್ತಿ ಭಿಕ್ಷೆ ಬೇಡುವುದು. ಇವರು ನಾಥಪಂಥೀಯರು. ಈಗ ಮೂಲ ವೃತ್ತಿಯನ್ನು ಕೈ ಬಿಟ್ಟಿದ್ದಾರೆ. ಗೋತ್ರ ಇಲ್ಲ. ಸತ್ತವರನ್ನು ಹೂಳುತ್ತಾರೆ. ಮಾಂಸಾಹಾರಿಗಳು. ಹಿಂದೆ ಇವರಿಗೆ

ಕೊತ್ವಾಲರೆಂಬ ಜಾತಿಯ ಮುಖ್ಯಸ್ಥರಿದ್ದರು. ಇತ್ತೀಚೆಗೆ ಕೆಲವು ಬದಲಾವಣೆಗಳಾಗಿ ಎಲ್ಲಾದರಲ್ಲೂ ಕೊಡವರನ್ನೆ ಅನುಸರಿಸುತ್ತಾರೆ.

ದರ್ಜಿಗಳು

ದರ್ಜಿ ಎಂಬ ಪದವು ಹೊಲಿಗೆ ವೃತ್ತಿ ಸೂಚಿಸುತ್ತದೆ. ಈ ಗುಂಪಿನಲ್ಲಿ ಭಾವಸಾರ ಕ್ಷತ್ರಿಯರು, ಶಿಂಪಿಗಳು, ರಂಗಾರೇ, ಚಿಪ್ಪಿಗ, ನಾಮದೇವ ಶಿಂಪಿ ಮೊದಲಾದ ಕುಲಗಳೆಲ್ಲವೂ ಸೇರಿವೆ. ನಾಮದೇವ ಸಿಂಪಿಗಳು ಮಡಿಕೇರಿ, ಸೋಮವಾರಪೇಟೆ, ಶನಿವಾರಸಂತೆ, ಕೊಡ್ಲಿಪೇಟೆಗಳಲ್ಲಿ ಕಂಡುಬರುತ್ತಾರೆ. ಭಾವಸಾರ ಕ್ಷತ್ರಿಯರು ವೀರಾಜಪೇಟೆಯಲ್ಲಿ ಕಂಡುಬರುತ್ತಾರೆ. ಭಾವಸಾರ ಕ್ಷತ್ರಿಯರು ಮನೆಯಲ್ಲಿ ಮರಾಠಿ ಮಾತನಾಡುತ್ತಾರೆ. ಇವರು ವಿರೋಬ, ಜ್ಯೋತೀಬಾ, ಖಂಡೋಬಾ, ಅಂಬಾಭವಾನಿ, ಎಲ್ಲಮ್ಮ ಮೊದಲಾದ ದೇವದೇವತೆಗಳನ್ನು ಪೂಜಿಸುತ್ತಾರೆ. ಇವರು ಸತ್ತವರನ್ನು ಸುಡುತ್ತಾರೆ. ಮಾಂಸಹಾರ ಸೇವಿಸುತ್ತಾರೆ. ಇತರ ಜಾತಿಯವರೂ ದರ್ಜಿ ಕೆಲಸ ಮಾಡಿದರೂ, ಈ ಜಾತಿಗಳೊಂದಿಗೆ ಯಾವುದೋ ರೀತಿಯ ಸಂಬಂಧವಿರುವುದಿಲ್ಲ.

ದೇವಾಂಗ

ದೇವಾಂಗದವರು ಕೊಡಗಿಗೆ ಹಾಲೇರಿ ಅರಸರ ಕಾಲದಲ್ಲಿ ಬಂದವರು. ಇವರ ಮುಖ್ಯ ಉದ್ಯೋಗ ಬಟ್ಟೆ ನೇಯುವುದು. ಇವರು ಹೆಚ್ಚಾಗಿ ಮೈಸೂರು ಜಿಲ್ಲೆಗೆ ಹೊಂದಿಕೊಂಡಿರುವ ಸೋಮವಾರಪೇಟೆ ತಾಲ್ಲೂಕಿನಲ್ಲಿ ಹೆಚ್ಚು ಇದ್ದಾರೆ. ಮಡಿಕೇರಿ, ಕೊಡ್ಲಿಪೇಟೆ, ಶನಿವಾರಸಂತೆ, ಶಿರಂಗಾಲ ಗೋಪಾಲಪುರ, ಕುಶಾಲನಗರ, ತೊರೆನೂರು, ಹುದಿಕೇರಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವರು ಕನ್ನಡ ಮತ್ತು ತೆಲುಗು ಭಾಷೆಯನ್ನಾಡುತ್ತಾರೆ. ಕನ್ನಡ ದೇವಾಂಗದವರಲ್ಲಿ ಹದಿನೆಂಟು ಮನೆಯವರು ಮತ್ತು ಸಿರ್ಸದವರು ಎಂಬ ಎರಡು ಒಳಗುಂಪುಗಳಿವೆ. ಅಲ್ಲದೇ ಅಂಬಲೆ, ಅರಿವಿನ, ಬಣ್ಣಮ, ಬಳೆ ಬೆಳ್ಳಿ, ಮಂದೇ, ಮಚ್ಚೆ ಮೊದಲಾದ ಕುಲಗಳಿವೆ.

ತೆಲುಗು ಮಾತನಾಡುವವರಲ್ಲಿ ಬಂಡಿ, ಬಂತ, ಒಂಟೆ, ಗೋದಾನ, ಗೋದುನ ಮೊದಲಾದ ಕುಲಗಳಿವೆ. ದೇವಾಂಗದವರು ಜನಿವಾರವನ್ನು ಹಾಕಿಕೊಳ್ಳುತ್ತಾರೆ. ದೇವಾಂಗದವರ ಮನೆದೇವರು ರಾಮಲಿಂಗ, ಚೌಡೇಶ್ವರಿ ಮತ್ತು ಬನಶಂಕರಿ. ಕೊಡಗಿನ ದೇವಾಂಗದವರು ಕನ್ನಡ ಭಾಷೆಯನ್ನಾಡುವ ದೇವಾಂಗದವರಾಗಿದ್ದಾರೆ. ಇವರು ಸತ್ತವರನ್ನು ಹೂಳುತ್ತಾರೆ. ಇವರ ಮೂಲ ವೃತ್ತಿ ಬಟ್ಟೆ ನೇಯುವುದಾಗಿದ್ದರೂ ಇಂದು ಈ ವೃತ್ತಿ ಅವರಲ್ಲಿ ಇಲ್ಲ. ಕೊಡವರಂತೆಯೇ ಕೃಷಿ ಮತ್ತಿತರ ಕಸುಬುಗಳನ್ನು ಮಾಡಿ ಜೀವನ ನಿರ್ವಹಣೆ ಮಾಡುತ್ತಿದ್ದಾರೆ.

ನಾಯಿಂದ

ಕೊಡಗು ಜಿಲ್ಲೆಯಲ್ಲಿ ನೆಲೆಸಿರುವ ನಾಯಿಂದರು ಕೊಡವ ತೆಲುಗು ಮತ್ತು ಕನ್ನಡ ಭಾಷೆ ಮಾತನಾಡುತ್ತಾರೆ. ಕೊಡಗಿನಲ್ಲಿ ಕೊಡವ ಮಾತನಾಡುವ

ಹಜಾಮರು, ಕೈಕೇರಿ, ಈಚೂರು, ಬೇಗೂರು, ಬಿ.ಶೆಟ್ಟಿಗೇರಿ ನಡಕೇರಿ, ಗೋಣಿಕೊಪ್ಪಲು, ಮೈತಾಡಿಯಲ್ಲಿ ಕಂಡುಬರುತ್ತಾರೆ. ಇವರ ಮುಖ್ಯ ಉದ್ಯೋಗ ಕ್ಷೌರ ಮಾಡುವುದು. ಇದಲ್ಲದೆ ವಾದ್ಯಬಾರಿಸುವುದು, ಕೃಷಿಮಾಡುವುದು ಉಂಟು.

ಕೊಡವ ಭಾಷೆಯ ಮಾತನಾಡುವ ನಾಯಿಂದರಿಗೆ 'ಜಮ್ಮಭೂಮಿ'ಯಿದೆ. ಕೊಡವರಂತೆ ಮನೆತನಗಳಿವೆ. ವರ್ಷಕ್ಕೊಮ್ಮೆ ಧಾನ್ಯದ ರೂಪದಲ್ಲಿ ಸಿಗುವ ಕೂಲಿಯನ್ನು 'ಅಡಿಕೆ' ಎಂಧು ಕರೆಯುತ್ತಾರೆ. ಕೊಡವರಂತೆ ಐನ್‌ಮನೆಗಳಿವೆ. ಪ್ರಧಾನ ಸಂಪ್ರದಾಯಗಳಲ್ಲಿ ಕೊಡವರನ್ನೇ ಅನುಸರಿಸುತ್ತಾರೆ. ಕೊಡವರ ಮನೆಯ ವಿವಾಹ; ಶವಸಂಸ್ಕಾರಗಳಲ್ಲಿ ನಾಯಿಂದನ ಪಾತ್ರ ಪ್ರಮುಖವಾದುದು.

ಪಾಲೆಯರು

ಕೊಡವರ ತೋಟಗಳಲ್ಲಿ ಕೆಲಸ ಮಾಡಿ ಜೀವನ ನಿರ್ವಹಿಸುವಂಥವರು. ಕೊಡವರಂತೆ ಇವರಿಗೂ ಜಮ್ಮ ಭೂಮಿ ಇದೆ. ಮಡಿಕೇರಿ ತಾಲ್ಲೂಕಿನಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಪಾಲೆಯರು ದಕ್ಷಿಣ ಕನ್ನಡದಿಂದ ಬಂದಿರುವುದರಿಂದ ಇವರ ಮಾತೃಭಾಷೆ ತುಳು ಆಗಿದೆ.

ತುಳು ಪಾಲೆಯರು ತಲೆಯ ಮೇಲೆ ಅಡಿಕೆಪಟ್ಟೆಯ ಟೋಪಿ (ಮುಟ್ಟಾಳೆ) ಹಾಕುತ್ತಾರೆ. ಇವರಲ್ಲಿ ಮೈಲಿ, ಕರಿ, ಅರಮನೆ, ಬಾಕುಡ, ಮತ್ತು ಅಜ್ಜಲ ಎಂಬ ಒಳಗುಂಪುಗಳಿವೆ. ಇವರು ಕೊಡವಗೌಡ ಮೊದಲಾದ ಜಾತಿಯವರಲ್ಲಿ ಕೋಲಕಟ್ಟುತ್ತಾರೆ. ಅಜ್ಜಲ ಪಾಲೆಯರು ಭೂತಗಳ ಕುಣಿತದಲ್ಲಿ ಭಾಗವಹಿಸುತ್ತಾರೆ. ಪೂಜಾರಿಗಳಾಗಿಯೂ ಕಾರ್ಯನಿರ್ವಹಿಸುತ್ತಾರೆ. ಪಾಷಾಣಮೂರ್ತಿಯ ಹಬ್ಬಗಳಲ್ಲಿ ಕಣಿಯನ್ನು ಅಥವಾ ದಿವ್ಯವಾಣಿಯನ್ನು ಹೇಳುತ್ತಾರೆ. ಮೈಮೇಲೆ ದೇವರು ಬಂದಾಗ, ವಿಶಿಷ್ಟವಾದ ಉಡುಪಿನಿಂದ ರಾತ್ರಿಯೆಲ್ಲಾ ನರ್ತಿಸುತ್ತಾರೆ. ಪಾಲೆಯರಿಗೆ ಸ್ವಂತ ಭೂಮಿ ಇಲ್ಲ. ಇವರೊಡನೆ ಆಶ್ರಯದಲ್ಲೇ ಬದುಕು ಸಾಗಿಸುವದರಿಂದ ಅವರ ಸಾಂಪ್ರದಾಯಿಕ ಪಡಿ ನೆರಳು ಇವರ ಮೇಲೆ ಇರುವುದನ್ನು ಗುರುತಿಸಬಹುದು.

ಬೆಟ್ಟ ಕುರುಬರು

ಬೆಟ್ಟ ಕುರುಬರು ಕೊಡಗಿನ ಎಲ್ಲಾ ತಾಲ್ಲೂಕುಗಳಲ್ಲಿಯೂ ಕಂಡುಬರುತ್ತಾರೆ. ವೀರಾಜಪೇಟೆ, ಪೊನ್ನಂಪೇಟೆ, ಶ್ರೀಮಂಗಲ ಮುಂತಾದ ಸ್ಥಳಗಳಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದಾರೆ. ಇವರನ್ನು ಬೆಟ್ಟಕುರುಬ, ಬೆತ್ತಕುರುಬ, ಬೊಟ್ಲಾಡಿ, ಕಾಟಾಳಿ, ಕಾಟುಕುರುಬ, ಕಾಡುಕುರುಬ, ಮುಳ್ಳುಕುರುಬ, ಪುಂಜೆ ಕುರುಬ ಎಂದೆಲ್ಲಾ ಕರೆಯುತ್ತಾರೆ. ಬೆತ್ತ ವಾಟೆ, ಬಿದಿರನ್ನು ಸಿದ್ಧಪಡಿಸುವುದಕ್ಕೆ ಕೊಡವ ಭಾಷೆಯಲ್ಲಿ ಬೊಟ್ಲ ಇಡುವೋ ಎನ್ನುವರು. ಇದನ್ನೇ ಮುಖ್ಯ ಕಸುಬನ್ನು ಮಾಡಿಕೊಂಡರು ಬೆಟ್ಟಕುರುಬರು ಕೇರಳ ತಮಿಳು ನಾಡುಗಳಲ್ಲಿ ಕಂಡುಬರುವ ಉರಲಿಕುರುಬನ್ ಮತ್ತು ಉರುಳಿ ಕುರುಂಬನ್‌ಗಳೂ ಹಾಗೂ ಬೆಟ್ಟ ಕುರುಬರು ಒಂದೇ ಗುಂಪಿಗೆ ಸೇರಿದವರೆಂದು ಹೇಳುತ್ತಾರೆ.

ಬೆಟ್ಟಕುರುಬರು ಜೇನು ಕುರುಬರಂತೆ ಕೊಂಗ ಚೋಳ ಮತ್ತು ಚಾಲುಕ್ಯರಾಜರುಗಳಿಂದ ಕಾಡಿಗೆ ಅಟ್ಟಲ್ಪಟ್ಟ ಪಲ್ಲವರ ಮೂಲದವರೆಂದು ಹೇಳುತ್ತಾರೆ.

ಆಕಾರದಲ್ಲಿ ಗಿಡ್ಡ, ಬಣ್ಣದಲ್ಲಿ ಕಪ್ಪು, ತಲೆ ಉದ್ದ, ಉಬ್ಬಿದ ಕೆನ್ನೆಯ ಮೂಳೆಗಳು, ಚಪ್ಪಟೆಯ ಮೂಗು ಇವು ಇವರ ದೇಹ ಪ್ರಕೃತಿಯಾಗಿದೆ. ಇವರು ವಾಸ ಮಾಡುವ ಸ್ಥಳಗಳನ್ನು 'ಹಾಡಿ' ಎಂದು ಕರೆಯುತ್ತಾರೆ. ಹಾಡಿಯ ಮಧ್ಯದಲ್ಲಿ ಚಾವಡಿಯಿರುತ್ತದೆ. ಇದನ್ನು 'ಅಂಬಾಲ' ಎಂದು ಕರೆಯುತ್ತಾರೆ. ಇದು ಬೆಟ್ಟ ಕುರುಬರ ಪವಿತ್ರ ಸ್ಥಳ.

ಇವರಲ್ಲಿ 'ಮೊಂಡಪಡಿ' ಮತ್ತು 'ಏಳಪಡಿ' ಎಂಬ ಎರಡು ಗುಂಪುಗಳಿವೆ. ಇವರದು ಚುರುಕಿನ ಓಟ, ಆಯಾಸಗೊಳ್ಳದ ಬದುಕು. ಬೆಟ್ಟಕುರುಬರು ಹಿಂದೆ ಕಾಡುಗಳಲ್ಲಿ 'ಕುಮ್ರಿ' ವ್ಯವಸಾಯ ಮಾಡುತ್ತಿದ್ದರು. ಬೊಂಬಿನಿಂದ ಬುಟ್ಟಿ, ಕುಕ್ಕೆ ಮೊದಲಾದವುಗಳನ್ನು ಹೆಣೆಯುತ್ತಾರೆ. ಭೂತರಾಧಾಕರಾದ ಇವರಿಗೆ ಅಜ್ಜ, ಕುಡ ಮತ್ತು ಕುತ್ತನ್ ಎನ್ನುವ ಭೂತಗಳು ಪ್ರಸಿದ್ಧ ದೇವತೆಗಳು. ಇವರಲ್ಲಿ ಕುಲದೇವತಾ ಪದ್ಧತಿ (ಟೋಟೆಮಿಸಂ) ಉಂಟು. ಸತ್ತವರನ್ನು ಹೂಳುತ್ತಾರೆ. ಕೆಲವೊಮ್ಮೆ ಸುಡುತ್ತಾರೆ. ಮೊದಲು ಸತ್ತವನ ಜೊತೆಯಲ್ಲಿ ಅವನು ಉಪಯೋಗಿಸುತ್ತಿದ್ದ ಸಾಮಾನುಗಳನ್ನು ಹೂಳುತ್ತಿದ್ದರು. ಈಗ ಆ ಪದ್ಧತಿ ಕಡಿಮೆಯಾಗಿದೆ. ವಿವಾಹ ವಿಚ್ಛೇದನ ಮತ್ತು ಪುನರ್‌ವಿವಾಹ ಉಂಟು.

ಬೆಸ್ತರು

ಬೆಸ್ತರನ್ನು ಗಂಗಾಕುಲದವರೆಂದು ಕರೆಯುತ್ತಾರೆ. ಇವರು ಮೀನು ಹಿಡಿದು ಜೀವಿಸುತಿದ್ದರು. ಮೈಸೂರಿನಲ್ಲಿ ಇವರನ್ನು ಪರಿವಾರದವರೆಂದೂ ತಮಿಳುನಾಡಿನಲ್ಲಿ ತೊರೆಯರೆಂದೂ ಕರೆಯುತ್ತಾರೆ. ಜಿಲ್ಲೆಯಲ್ಲಿ ತುಳುನಾಡಿನಿಂದ ಬಂದ ಮೊಗೆರರು, ಕೇರಳ, ತಮಿಳುನಾಡಿನಿಂದ ಬಂದ ತೊರೆಯರೆಲ್ಲರೂ, ಬೆಸ್ತರೇ ಆಗಿದ್ದಾರೆ. ಇವರ ಒಳಪಂಗಡಗಳನ್ನು ಬೋಯಿ, ಪಾತೊರೆಯ, ಪಾರತೊರೆಯ, ಅಂದೋಳಿಯ ಎಂದೆಲ್ಲಾ ಕರೆಯುತ್ತಾರೆ. ಇವರು ರಾಜರ ಕಾಲದಲ್ಲಿ ಮೇನೆಗಳನ್ನು ಹೊರುತ್ತಿದ್ದರು. ಇಂದು ಕೃಷಿಕರಾಗಿದ್ದಾರೆ.

ಬಂಟರು : ಕೊಡಗು ಜಿಲ್ಲೆಗೆ ದಕ್ಷಿಣ ಕನ್ನಡದಿಂದ ವಲಸೆ ಬಂದವರು. ಹಾಲೇರಿ ರಾಜರ ಕಾಲದಲ್ಲಿ ಇವರನ್ನು ಮಂಜೇಶ್ವರ, ಕುಂಬ್ಳೆ, ಬಂಟವಾಳ ಪುತ್ತೂರು ಕಡೆಗಳಿಂದ ಕರೆಸಿಕೊಂಡಂತೆ ಕಾಣುತ್ತದೆ. ಕೊಡಗಿನ ಬಂಟರಲ್ಲಿ 'ಮಾಸದಿಕ ಬಂಟರು' ಮತ್ತು 'ಪರಿವಾರ ಬಂಟರೆಂದು', ಎರಡು ವಿಧ. ಇವರ ಮನೆಮಾತು ತುಳು. ಬಂಟರಲ್ಲಿ 'ಕೈಧಾರೆ' ಎಂಬ ಎರಡು ರೀತಿಯ ವಿವಾಹ ಕ್ರಮಗಳಿವೆ.

ಬೈರರು : ದಕ್ಷಿಣ ಕನ್ನಡದಿಂದ ವಲಸೆಬಂದವರು. ಬೈರರನ್ನು ಹನ್ನೆರಡು ಬಣ್ಣದ ಬಲಗೈರಾಣಿ ಕುಲದವರು (ರಾಣಿಯರು) ಎಂದು ಕರೆಯುತ್ತಾರೆ. ಇವರು ಕನ್ನಡ ಭಾಷೆಯನ್ನಾಡುತ್ತಾರೆ. ಚೆರಂಗಾಲ, ಬೆಟ್ಟಮನೆ, ಕಾರಗುಂದ, ಬೆಟ್ಟಗೇರಿ, ಸಿದ್ದಾಪುರ, ಮೂರ್ನಾಡು, ಮಡಿಕೇರಿ, ಸುಂಟಿಕೊಪ್ಪ ಭಾಗಮಂಡಲ ಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವರು ಊಟಕ್ಕೆ ಕುಸುಬಲಕ್ಕಿ ಗಂಜಿಯನ್ನು ತೆಗೆದುಕೊಳ್ಳುತ್ತಾರೆ. ಗುಳಿಗ, ಕಲ್ಲುರ್ಟಿ ಕರಿಚೌಡಿ, ಬೈರ ದೇವರುಗಳನ್ನು ಪೂಜಿಸುವರು. ಗುರು ಕಾರಣ ಪೂಜೆಯನ್ನು ಮಾಡುವರು. ನವರಾತ್ರಿ, ತುಲಾ

ಸಂಕ್ರಮಣ ಹುತ್ತರಿ ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ. ಇಂದು ಕೃಷಿಯನ್ನು ಪ್ರಧಾನವೃತ್ತಿಯಾಗಿ ಅವಲಂಬಿಸಿದ್ದಾರೆ.

ಬಣ್ಣರು ಫಣಿಕರು

ಮಲಬಾರಿನಿಂದ ವಲಸೆ ಬಂದವರು. ಇವರ ಮನೆ ಮಾತು ಮಲೆಯಾಳ. ಕೊಡವರು ಮತ್ತು ಇತರರ ಮನೆಗಳಲ್ಲಿ ಕಣಿಯರ ಹೇಳಿಕೆಗೆ ತಕ್ಕಂತೆ 'ಕಾರಣ' ಹಾಗೂ ಇತರ ಭೂತ, ದೇವತೆಗಳ ಹಬ್ಬ ಜಾತ್ರೆಗಳಲ್ಲಿ ವೇಷ ಹಾಕುವುದು, ಕುಣಿಯುವುದು, ಹಾಗೂ ಮೈ ಮೇಲೆ ಆವೇಶ ಬಂದಾಗ ಪ್ರಶ್ನೆಗೆ ಉತ್ತರ ಹೇಳುವ ಕೆಲಸಗಳನ್ನು ಮಾಡುತ್ತಾರೆ. ಇವರು ಗ್ರಾಮದೇವತೆ ಹಬ್ಬದಲ್ಲಿ ಕೋಲ ಕಟ್ಟುತ್ತಾರೆ.

ಬ್ರಾಹ್ಮಣರು

ಹಾಲೇರಿ ಅರಸರಿಗೆ ಮುನ್ನ ಕೊಡಗಿನಲ್ಲಿ ಬ್ರಾಹ್ಮಣರಿದ್ದ ಬಗ್ಗೆ ೧೧೦೫ರ ಯಡೂರು ಶಾಸನ (ಸಂಖ್ಯೆ-೬೨) ವೂ ಸೂಚಿಸುತ್ತದೆ. ಹಾಲೇರಿ ರಾಜರ ಕಾಲದಲ್ಲಿ ಅನೇಕ ಬ್ರಾಹ್ಮಣರು ಕೊಡಗಿಗೆ ವಲಸೆ ಬಂದರು. ದಕ್ಷಿಣ ಕನ್ನಡದಿಂದ ಹವ್ಯಕ, ಶಿವಳ್ಳಿ ಬ್ರಾಹ್ಮಣರೂ, ಮೈಸೂರು ಮತ್ತು ಹಾಸನ ಮತ್ತು ಶಿವಮೊಗ್ಗ ಕಡೆಗಳಿಂದ ಇತರ ಬ್ರಾಹ್ಮಣರೂ ಜಿಲ್ಲೆಗೆ ವಲಸೆ ಬಂದಿದ್ದಾರೆ. ಇವರು ದೇವಸ್ಥಾನಲ್ಲಿ ಅರ್ಚಕರಾಗಿದ್ದರು. ಕೊಡಗಿನ ಬಹುತೇಕ ದೇವಸ್ಥಾನಗಳಲ್ಲಿ ಶಿವಳ್ಳಿ ಬ್ರಾಹ್ಮಣರೇ ಪೂಜಾರಿಗಳಾಗಿದ್ದಾರೆ. ಬ್ರಾಹ್ಮಣರಲ್ಲಿ ಅನೇಕ ಕುಲಗಳಿದ್ದು, ಅವುಗಳನ್ನು ಗೋತ್ರ ಪ್ರವರಗಳಿಂದ ಗುರುತಿಸಲಾಗುತ್ತದೆ. ಕಾಶ್ಯಪ, ವಿಶ್ವಾಮಿತ್ರ, ಭಾರದ್ವಾಜ ಮೊದಲಾದವು ಕೆಲವು ಗೋತ್ರಗಳ ಹೆಸರುಗಳು. ಬ್ರಾಹ್ಮಣರಿಗೆ ಉಪನಯನವು ಅತಿಮುಖ್ಯವಾದದ್ದು. ಇವರಲ್ಲಿ ಹದಿನಾರು ಸಂಸ್ಕಾರಗಳಿವೆ. ಬ್ರಾಹ್ಮಣರಲ್ಲಿ ಬ್ರಹ್ಮ ವಿವಾಹ ಪದ್ಧತಿ ಆಚರಣೆಯಲ್ಲಿದೆ. ಇವರಲ್ಲಿ ಎರಡು ರೀತಿಯ ವರ್ಗಗಳಿದ್ದವು. ವೈದಿಕರು ಮತ್ತು ಲೌಕಿಕರು.

ವೈದಿಕ ಬ್ರಾಹ್ಮಣರು ವೇದಾಧ್ಯಯನ ಮಾಡಿಕೊಂಡು ಷಟ್ಕರ್ಮನಿರತರಾಗಿರುತ್ತಿದ್ದರು. ಲೌಕಿಕರು ಕರಣಿಕ, ದಿವಾನ, ಮೊದಲಾದ ಆಡಳಿತ ಹುದ್ದೆಗಳಲ್ಲಿದ್ದು, ಲೌಕಿಕ ವ್ಯವಹಾರಗಳಲ್ಲಿ ತೊಡಗಿರುತ್ತಿದ್ದರು. ಬ್ರಾಹ್ಮಣರಲ್ಲಿ ಸಾಂಪ್ರದಾಯಿಕವಾಗಿ ವಿವಾಹ ವಿಚ್ಛೇದನವಾಗಲೀ ವಿಧವಾ ವಿವಾಹವಾಗಲೀ ರೂಢಿಯಲ್ಲಿಲ್ಲ. ವಿಧವೆಯರಿಗೆ ಹಿಂದೆ ಕೇಶಮಂಡಣೆ ಖಡ್ಡಾಯವಾಗಿತ್ತು. ಆಹಾರ ಸೇವನೆಯಲ್ಲಿ ಸಾಂಪ್ರದಾಯಿಕವಾಗಿ ಈರುಳ್ಳಿ ಬೆಳ್ಳುಳ್ಳಿ ಮೊದಲಾದ ತರಕಾರಿಗಳನ್ನು ಸಂಪ್ರದಾಯಸ್ಥ ವೈದಿಕ ಬ್ರಾಹ್ಮಣರು ತಿನ್ನುವುದಿಲ್ಲ.

ಕೊಂಕಣಿ ಭಾಷಿಕ ಗೌಡ ಸಾರಸ್ವತ ಕೆಲವು ಬ್ರಾಹ್ಮಣರು ಮಡಿಕೇರಿ ಮತ್ತು ವಿರಾಜಪೇಟೆಯಲ್ಲಿ ನಡೆಸಿದ್ದಾರೆ. ಹಿಂದೆ ದೇವಾಲಯಗಳಲ್ಲಿ ಅರ್ಚಕರಾಗಿದ್ದ ಇವರು ಇಂದು ಇತರ ವೃತ್ತಿಗಳನ್ನು, ವ್ಯವಸಾಯವನ್ನು ಮಾಡುತ್ತಿದ್ದಾರೆ. ಇವರನ್ನು ಯಾವುದೇ ಶುಭ, ಅಶುಭ ಕಾರ್ಯಗಳಿಗೆ ಕೊಡವರು ಕರೆಯುವುದಿಲ್ಲ.

ಬ್ರಾಹ್ಮಣರಲ್ಲಿ ಸತ್ತವರನ್ನು ಸುಡುತ್ತಾರೆ. ಹಲ್ಲು ಹುಟ್ಟಿದ ಮಕ್ಕಳು, ಸಾಧು, ಸನ್ಯಾಸಿಗಳು ಸತ್ತಾಗ ಮಾತ್ರ ಹೂಳುತ್ತಾರೆ. ಇತ್ತೀಚೆಗೆ ಬ್ರಾಹ್ಮಣರಲ್ಲಿ ಉಪಜಾತಿ ಹಾಗೂ ಭಿನ್ನ ಭಾಷೆ ಮಾತನಾಡುವವರಲ್ಲಿ ವಿವಾಹ ಸಂಬಂಧಗಳು ಏರ್ಪಡುತ್ತಿವೆ.

ಮೇದರು

ಕೊಡಗಿನ ಮೇದ (ಮ್ಯಾದ) ರು ಪರಿಶಿಷ್ಟ ಜಾತಿಗಳಿಗೆ ಸೇರಿದವರಾಗಿದ್ದಾರೆ. ಇವರ ಭಾಷೆ ಕೊಡವ. ಕೊಡಗಿನ ಭಾಗಮಂಡಲ ನಾಪೋಕ್ಲು, ಕಾಟಗೇರಿ, ವೀರಾಜಪೇಟೆ ಮೊದಲಾದ ಕಡೆಗಳಲ್ಲಿ ಕಂಡುಬರುತ್ತಾರೆ. ಆಚಾರ, ವಿಚಾರ, ಸಂಪ್ರದಾಯಗಳಲ್ಲಿ ಕೊಡವರನ್ನು ಹೋಲುವರು. ಇವರಲ್ಲಿ ಕುಲ ಅಥವಾ ಗೋತ್ರಗಳಿಲ್ಲ. ಬೊಂಬಿನಿಂದ ಕುಕ್ಕೆ, ಮೊರ, ಗೊರಗ, ಮಕ್ಕರಿ ತೊಟ್ಟಿಲು ಮೊದಲಾದವುಗಳನ್ನು ಮಾಡಿ ಮಾರುತ್ತಾರೆ. ಕುಲದೇವರು ಚಾಮುಂಡಮ್ಮ. ಸತ್ತವರನ್ನು ಹೂಳುತ್ತಾರೆ. ಹೆಂಗಸರು ಕೊಡವರಂತೆಯೇ ಸೀರೆಯುಡುತ್ತಾರೆ. ಹಬ್ಬಗಳಲ್ಲಿ ಕುಣಿಯುವುದು, ತಮಟೆ ಬಾರಿಸುವುದು ಇವರ ಸಾಂಪ್ರದಾಯಿಕ ಕಸುಬು. ಕೊಡವರ ಹಬ್ಬಗಳು, ಶವಸಂಸ್ಕಾರಗಳಲ್ಲಿ ಇವರ ಪಾತ್ರ ಪ್ರಮುಖ ವಾಗಿದೆ.

ಎರವರು

ಕೊಡಗಿನ ವಿರಾಜಪೇಟೆ ತಾಲ್ಲೂಕಿನಲ್ಲಿ ಹೆಚ್ಚು ವಾಸಿಸುತ್ತಿರುವ ಇವರನ್ನು ಗಿರಿಜನರೆಂದು ಕರೆಯುವರು. ಇವರು ಪರಿಶಿಷ್ಟ ಬುಡಕಟ್ಟಿಗೆ ಸೇರಿಸಿದವರಾಗಿದ್ದಾರೆ. ಹದಿನೇಳನೆಯ ಶತಮಾನದಲ್ಲಿ ವೈನಾಡಿನಲ್ಲಿ ಉಂಟಾದ ಅಸ್ಥಿರತೆಯಿಂದ ಎರವರು ಕೊಡಗಿಗೆ ಬಂದಿರಬೇಕೆಂಬ ಅಭಿಪ್ರಾಯವಿದೆ. ಮೈಬಣ್ಣ ಕಪ್ಪು ಗುಂಗುರು ಕೂದಲು, ದಪ್ಪವಾದ ತುಟಿ, ಕುಳ್ಳಶರೀರ, ಉದ್ದವಾದ ಪಾದ, ಉದ್ದವಾದ ಮುಂಗೈಯನ್ನು ಹೊಂದಿದ್ದಾರೆ. ಲಿಂಗಾಯಿತ ರಾಜರ ಕಾಲದಲ್ಲಿ ಕೃಷಿ ಕೆಲಸಗಳಿಗಾಗಿ ಜಮ್ಮ ಆಳು (ಗುಲಾಮ) ಗಳಾಗಿ ಕರೆಸಿಕೊಳ್ಳುತ್ತಿದ್ದ ಇವರೇ ಪಣಿಯರಿರಬಹುದೆಂಬ ಅಭಿಪ್ರಾಯವಿದೆ. ಇವರು ಹಳ್ಳಿಗಳಲ್ಲಿ ಸರ್ಕಾರದ ಕಾಲೋನಿಗಳಲ್ಲಿ ಹಾಗೂ ಕಾಡಿನೊಳಗೆ ಹೆಚ್ಚಾಗಿ ವಾಸಿಸುತ್ತಾರೆ.

ಎರವರು ತಮ್ಮ ದೇವರುಗಳ ಜೊತೆಗೆ ತಿರುಪತಿ ವೆಂಕಟರಮಣ, ನಂಜನಗೂಡಿನ, ನಂಜುಂಡೇಶ್ವರ, ಮಹದೇಶ್ವರ, ಸಿದ್ದಪ್ಪಾಜಿ, ಕುಟ್ಟದಮ್ಮ, ಚಾಮುಂಡಿ, ದಂಡುಮಾರಮ್ಮ, ಕುಂತೂರು ಮಾರಮ್ಮ ಮೊದಲಾದ ದೇವತೆಗಳನ್ನು ಪೂಜಿಸುತ್ತಾರೆ. ಯೆರವರಲ್ಲಿ ವಿವಾಹವಾದ ತಕ್ಷಣ ದಂಪತಿಗಳು ಬೇರೆ ಸಂಸಾರ ಹೂಡುತ್ತಾರೆ. ವಿವಾಹ ವಿಚ್ಛೇದನ ವಿಧವಾ ಪುನರ್ವಿವಾಹಗಳು ರೂಢಿಯಲ್ಲಿವೆ. ಬಹು ಪತ್ನಿತ್ವ ಅಪರೂಪ. ಕೊಡಗಿನ ಯರವರಲ್ಲಿ ತೆರ ಪದ್ಧತಿ ರೂಢಿಯಲ್ಲಿದೆ. ಇವರಲ್ಲಿ ಓಡಿಹೋಗಿ ಮದುವೆಯಾಗುವುದು ರೂಢಿಯಲ್ಲಿದೆ. ಪಂಜೆರಿಯೆರವ ಮತ್ತು ಪಣಿಯೆರವರ ನಡುವೆ ವಿವಾಹ ಸಂಬಂಧವಾಗುತ್ತದೆ.

ಕೊಡಗಿನ ಇತರ ಜಾತಿಯ ಜೊತೆ ಬಾಂಧವ್ಯನ್ನಿಟ್ಟುಕೊಂಡಿದ್ದಾರೆ. ಸತ್ತವರನ್ನು ಹೂಳುತ್ತಾರೆ. ಎರವರಲ್ಲಿ ಪಣಿಯೆರವ, ಪಂಜಿರಿಯೆರವ, ಬಡಗಯೆರವ, ಮತ್ತು

ಕಾಗೆಯೆರವರೆಂಬ ಒಳಗುಂಪುಗಳಿವೆ. ಇವರು ಮೊದಲಿನಿಂದಲೂ ಕೊಡವರ ತೋಟಗಳಲ್ಲಿ ಮತ್ತು ಮನೆಗಳಲ್ಲಿ ಸೇವಕರಾಗಿ ಕೆಲಸ ಮಾಡುತ್ತಿದ್ದಾರೆ.

ಲಿಂಗಾಯತರು

ಲಿಂಗಾಯತರನ್ನು ವೀರಶೈವರೆಂದು ಕರೆಯುತ್ತಾರೆ. ಕೊಡಗಿನ ಒಡೆಯರ ಕಾಲದಲ್ಲಿ ಇವರು ವಲಸೆ ಬಂದಿದ್ದಾರೆ. ಮೂರನೇ ಮೈಸೂರು ಯುದ್ಧದ ಸಮಯದಲ್ಲಿ ಟಿಪ್ಪುಸುಲ್ತಾನನ ಕೋಪಕ್ಕೆ ಗುರಿಯಾಗಿ ಅನೇಕ ಮಂದಿ ವೀರಶೈವ ವರ್ತಕರು ಪಿರಿಯಾಪಟ್ಟಣದ ಕಡೆಯಿಂದ ವಲಸೆ ಬಂದರು.

ಹಾಸನದ ಗಡಿಪ್ರದೇಶವಾದ ಸೋಮವಾರಪೇಟೆ ತಾಲ್ಲೂಕಿನಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಕೊಡ್ಲಿಪೇಟೆ, ಶನಿವಾರ ಸಂತೆಯಲ್ಲೂ ಕಂಡುಬರುತ್ತಾರೆ. ಕೊಡವ ಪ್ರದೇಶದಲ್ಲಿ ಮೊದಲಿಂದಲೂ ನೆಲೆಸಿರುವ ಪ್ರಭುತ್ವ ವ್ಯವಸ್ಥೆಯಲ್ಲಿ ಲಿಂಗಾಯಿತರು ಕಂಡುಬರುತ್ತಾರೆ. ಕೊಡಗಿನ ಪ್ರಾದೇಶಿಕ ನಾಯಕರಾಗಿ ವ್ಯವಸ್ಥೆಯಲ್ಲಿ ಲಿಂಗಾಯಿತರು ಕಂಡುಬರುತ್ತಾರೆ. ಕೊಡಗಿನ ಪ್ರಾದೇಶಿಕ ನಾಯಕರಾಗಿಯೂ, ಒಂದು ಕಾಲದಲ್ಲಿ ಮೆರೆದವರು. ಇವರ ಅನೇಕ ಮಡಿಗಳು ಈ ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಈ ಲಿಂಗಾಯಿತರಲ್ಲೂ ಹಲವು ಒಳಪಂಗಡಗಳು ಕಂಡುಬರುತ್ತದೆ. ಶೆಟ್ಟಿ, ಬಣಜಿಗ, ಗೌಡ, ಕುಂಬಾರ ಮೊದಲಾಗಿ ಗುರುತಿಸಲಾಗಿದೆ. ಹಾಲೇರಿ ರಾಜರು ಕೊಡಗಿನ ಲಿಂಗಾಯಿತರಿಗೆ ಜಮ್ಮಭೂಮಿ ನೀಡಿರುವ ಕಾರಣ ಇವರು ಕೊಡವರಂತೆ ಆರ್ಥಿಕವಾಗಿ ಸಬಲರಾಗಿದ್ದಾರೆ.

ವಿಶ್ವಕರ್ಮ

ವಿಶ್ವಕರ್ಮ ಗುಂಪಿಗೆ ಸೇರಿದವರು ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದ್ದಾರೆ. ಈ ಗುಂಪಿನಲ್ಲಿ ತುಳು ಕನ್ನಡ, ಮಲೆಯಾಳಿ ತೆಲುಗು, ಕೊಂಕಣಿ, ತಮಿಳು ಮಾತನಾಡುವವರಿದ್ದಾರೆ. ಈ ಜನರನ್ನು ಪಾಂಚಾಲರೆಂದೂ ಕರೆಯುತ್ತಾರೆ. ಇವರಲ್ಲಿ ಚಿನ್ನ, ಬೆಳ್ಳಿ, ಕೆಲಸ ಮಾಡುವ ಅಕ್ಕಸಾಲಿಗರು, ಹಿತ್ತಾಳೆ ಕೆಲಸ ಮಾಡುವ ಕಂಚುಗಾರರೂ ಕಮ್ಮಾರರೂ ಮರದ ಕೆಲಸ ಮಾಡುವ ಬಡಗಿಗಳೂ ಮತ್ತು ಶಿಲ್ಪ ವೃತ್ತಿಗಳೂ ಸೇರಿದ್ದಾರೆ.

ಕೊಡವ ಭಾಷೆಯಲ್ಲಿ ಚಿನ್ನ, ಬೆಳ್ಳಿ, ಕೆಲಸ ಮಾಡುವ ಜನರನ್ನು 'ತಟ್ಟ'ರೆಂದು ಕರೆಯುತ್ತಾರೆ. ತಟ್ಟೆ ಎಂಬ ಪದ ಉದ್ಯೋಗಸೂಚಕವೇ ಹೊರತು ಜಾತಿ ಸೂಚಕವಲ್ಲ. ಇವರಲ್ಲಿ ಕನ್ನಡ ತೆಲುಗು, ತುಳು, ಮಲೆಯಾಳಿ ಮತ್ತು ತಮಿಳು ಮಾತನಾಡುವವರಿದ್ದಾರೆ. ಮಲೆಯಾಳೀ ಮಾತಾನಾಡುವ ಮರದ ಕೆಲಸಗಾರರನ್ನು 'ತಚ್ಚೇರಿ'ಗಳೆಂದು ಕರೆಯುತ್ತಾರೆ. ಮಲೆಯಾಳೀ ಮಾತನಾಡುವ ಕಬ್ಬಿಣದ ಕೆಲಸಗಾರರನ್ನು 'ಕೊಲ್ಲರೆಂದೂ', ಇರಂಬು ತಟ್ಟೆಗಳೆಂದೂ ಕರೆಯುತ್ತಾರೆ. ಇವರ ಆಚಾರ ವಿಚಾರ, ಭಾಷೆ ಸಂಸ್ಕೃತಿ ಎಲ್ಲವೂ ಕೊಡವರಂತೆಯೇ ಇದೆ.

ಹೊಲೆಯರು

ಹೊಲೆಯರು (ಪರಿಶಿಷ್ಟ ಜಾತಿಯವರು) ಜಿಲ್ಲೆಯ ಆದಿವಾಸಿಗಳಲ್ಲಿ ಒಬ್ಬರು. ಇವರನ್ನು 'ಪೊಲೆಯ' ಎಂದೂ ಕರೆಯುತ್ತಾರೆ. ಕೊಡಗಿನಲ್ಲಿ ಹಿಂದೆ

ಹೊಲೆಯರನ್ನು ಕೃಷಿ ಗುಲಾಮರನ್ನಾಗಿ ಮಾಡಿಕೊಂಡಿದ್ದರು. ಇವರಲ್ಲಿ ಹೊನ್ನು (ಒಕ್ಕಲು) ಮಣ್ಣು (ಭೂಮಿ) ಎಂದು ಎರಡು ಬಗೆಯಿದೆ.

ಹೊಲೆಯರಲ್ಲಿ ಎಂಟು ಒಳಗುಂಪುಗಳನ್ನು ನೋಡಬಹುದು. ಕೆಂಬಟ್ಟಿ ಹೊಲೆಯರು, ಕಾಪಲ ಹೊಲೆಯರು, ಎಡಗೈ ಹೊಲೆಯರು, ಮರ್ತಹೊಲೆಯರು, ಮಲಯರು, ಅಡಿಯರು, ಮಾರಂಗಿಗಳು, ಬಲಗೈ ಹೊಲೆಯರು. ಕೆಂಬಟ್ಟಿ ಹೊಲೆಯರು, ಮೂಲತಃ ಕೊಡಗು ಜಿಲ್ಲೆಯವರೇ ಆಗಿದ್ದು, ಕಾಪಳರು, ಮಾರಂಗಿಗಳು ಮತ್ತು ಮಲಯರು ಮಲಬಾರಿನಿಂದ ವಲಸೆ ಬಂದವರಾಗಿರುತ್ತಾರೆ. ಇವರು ಕೊಡವ ಭಾಷೆಯನ್ನಾಡುತ್ತಾರೆ. ಆಹಾರ, ಉಡುಪು, ಸಂಪ್ರದಾಯಾದಿ ಗಳಲ್ಲೂ ಕೊಡವರನ್ನು ಅನುಸರಿಸುತ್ತಾರೆ. ಮರ್ತ ಹೊಲೆಯರು ಮಲರುಗಳ ಭಾಷೆಯನ್ನಾಡುತ್ತಾರೆ. ಎಡಗೈ, ಬಲಗೈಯವರು ಕನ್ನಡ ಮಾತನಾಡುತ್ತಾರೆ. ಕೆಲವು ಸಣ್ಣಪುಟ್ಟ ಜಾತಿಗಳು ಕೊಡಗಿನಲ್ಲಿ ಬಂದು ನೆಲೆಸಿರುವುದನ್ನು ಕಾಣಬಹುದು. ಭಾಗಮಂಡಲ, ಪಾಡಿ, ಇರ್ಪು ಮೊದಲಾದ ದೇವಸ್ಥಾನಗಳಲ್ಲಿ ಅಂಬಲವಾಸಿಗಳು ಮತ್ತು ಪದಾರ್ಥಿಗಳು ಇದ್ದಾರೆ. ಅಂಬಲವಾಸಿಗಳು ದೇವಸ್ಥಾನದ ಅಂಗಳವನ್ನು ಗುಡಿಸಿದರೆ ಮುಕ್ಕಾಟಿಗಳು ಕೈದೀಪ ಹಿಡಿಯುತ್ತಾರೆ. ಪದಾರ್ಥಿಗಳು ಚಂಡೆ ಹೊಡೆಯುತ್ತಾರೆ. ಕ್ರಮೇಣ ವಲಸೆ ಬಂದು ನಿಂತ ನಾಯರುಗಳು ಕೃಷಿ ಭೂಮಿಗಳನ್ನು ಹೊಂದಿದ್ದಾರೆ. ಬೇಡರು ಇಲ್ಲಿಯ ಅಲೆಮಾರಿಗಳಾಗಿದ್ದು, ವರ್ಷದ ಕೆಲವು ಕಾಲ ಮಾತ್ರ ನೆಲೆಸುತ್ತಾರೆ. ಕೊರವರು, ಹಾವಾಡಿಗರು, ಬಸವ ಆಟ ಆಡಿವು ಖಾದಿ ಕೊಂಗರು, ಕರಡಿ ಆಡಿಸುವ ಕರಡಿ ಕೊಂಗರು, ದೊಂಬರು, ಬುಡಬುಡಕೆಯವರು, ಬುಂಡೆಬೆಸ್ತರು, ದುರ್ಗ ಮುರ್ಗಿಗಳು ಇಲ್ಲಿಯ ಅಲೆಮಾರಿಗಳಲ್ಲಿ ಪ್ರಮುಖರು.

ಹೀಗೆ ಕೊಡಗು ಪ್ರದೇಶವೇ ಒಂದು ಬಹುಸಂಸ್ಕೃತಿಯ ನೆಲೆಬೀಡಾಗಿದ್ದು ಎಲ್ಲಾ ಜಾತಿ ಸಮುದಾಯಗಳು ಒಟ್ಟಿಗೆ ನೆಲೆಸಿ ಜೀವನ ನಿರ್ವಹಿಸುತ್ತಿವೆ. ಈ ಎಲ್ಲಾ ಜಾತಿ, ಉಪಜಾತಿಗಳ ಮೇಲೆ ಮೂಲ ಕೊಡವರ ಆಚಾರ-ವಿಚಾರಗಳ ಕಟ್ಟುಕಟ್ಟಳೆಗಳ ಪ್ರಭಾವ ಇದೆ. ಹಾಗಾಗಿ ಇಲ್ಲಿಯ ಉಪಸಂಸ್ಕೃತಿಯ ಜನಸಮುದಾಯಗಳು, ಮೂಲಸಾಂಸ್ಕೃತಿಕ ಕೊಡವರನ್ನು ಅನುಸರಿಸಿಯೇ ಜೀವಿಸುವ ಅನಿವಾರ್ಯತೆ, ಅನ್ಯೋನ್ಯತೆ ಬದುಕಿಗೆ ಅಡಿಪಾಯವಾಗಿ ಪರಸ್ಪರ ಆಧಾರಸ್ತಂಭಗಳಾಗಿ ಬದುಕನ್ನು ಗಟ್ಟಿಗೊಳಿಸಿವೆ.

ನಂಬಿಕೆಗಳು

ಮಾನವನ ಬದುಕಿನುದ್ದಕ್ಕೂ ಹಲವು ಸಂಪ್ರದಾಯಗಳು, ಸಂಸ್ಕಾರಗಳು, ಜೀವನದ ಒಂದು ಕ್ರಮಬದ್ಧವಾದ ಚೌಕಟ್ಟನ್ನು ನಿರ್ಮಿಸುತ್ತವೆ. ಇವುಗಳನ್ನು ಒಪ್ಪಿಕೊಂಡ ಮನಸ್ಸು ಅದಕ್ಕೆ ಪೂರಕವಾದ ಅನೇಕ ನಂಬಿಕೆ, ನಿಷೇಧಗಳನ್ನು ಶ್ರದ್ಧೆಯಿಂದ ಅನುಸರಿಸಿ ಮುಂದುವರೆಸುವುದರ ಮೂಲಕ ಜೀವನದಲ್ಲಿ

ನೆಮ್ಮದಿಯನ್ನು ಕಾಣುತ್ತವೆ. ಕಾಲಾಂತರದಲ್ಲಿ ಹೊಸ ಸಂಪ್ರದಾಯ ಸಂಸ್ಕಾರಗಳು ಹುಟ್ಟಿಕೊಳ್ಳುತ್ತವೆ. ಹಾಗೆಯೆ ಅದನ್ನು ಅನುಸರಿಸಿ ಹೊಸ ನಂಬಿಕೆ ನಿಷೇಧಗಳು ಉದಯಿಸುತ್ತವೆ. ಈ ಹಿನ್ನೆಲೆಯಲ್ಲಿ ಹುಟ್ಟಿದ ಕೊಡವರ ನಂಬಿಕೆಗಳು ಪ್ರಸ್ತುತ ವ್ಯವಸಾಯದ ಮೇಲೆ ಅವಲಂಬಿತವಾಗಿವೆ. ಮೂಲತಃ ಕೊಡವರು ಕೃಷಿಕಾರ ರಾದುದ್ದರಿಂದ ಕೃಷಿಸಂಬಂಧ ನಂಬಿಕೆ ಸಂಸ್ಕಾರದ ದ್ಯೋತಕವಾಗಿ ಹುಟ್ಟಿರಬಹುದು. ಮೂಲ ಪದ್ಧತಿಗಳನ್ನು ಇಂದಿಗೂ ಮುಂದುವರೆಸಿಕೊಂಡು ಬರುತ್ತಿರುವ ಏಕೈಕ ಸಮುದಾಯದ ಕೊಡವರು, ಸಂಪ್ರದಾಯ, ಸಂಸ್ಕಾರ, ಜನಪದ ಕ್ರೀಡೆ, ಆಚಾರವಿಚಾರಗಳು, ಉಡುಗೆತೊಡುಗೆಗಳಲ್ಲಿ ಇಂದಿಗೂ ಅನನ್ಯತೆಯನ್ನು ಕಾಯ್ದುಕೊಂಡು ಬರುತ್ತಿದ್ದಾರೆ. ವಕ್ತೃಗಳ ಹೇಳಿಕೆಯಿಂದ ಕೇಳಿ ಪಡೆದ ಕೆಲವು ಪ್ರಮುಖ ನಂಬಿಕೆಗಳನ್ನು ಧಾರ್ಮಿಕ ನಂಬಿಕೆ ಮತ್ತು ಇತರ ನಂಬಿಕೆಗಳೆಂದು ವಿಭಾಗಿಸಿ ಅಧ್ಯಯನ ನಡೆಸಲಾಗಿದೆ.

ಧಾರ್ಮಿಕ ನಂಬಿಕೆಗಳು

ಕೊಡವರು ಒಲೆಯನ್ನು ಒದೆಯುವುದಾಗಲಿ, ತುಳಿಯುವುದಾಗಲಿ, ಸಾರಿಸುವುದಾಗಲಿ ಮಾಡುವುದಿಲ್ಲ. ಕುಲ ದೇವರನ್ನು ಆರಾಧಿಸುವ ಇವರು ಪ್ರತಿನಿತ್ಯ ಒಲೆ ಪೂಜೆಮಾಡಿ ಅನಂತರ ಅಡುಗೆ ಮಾಡುತ್ತಾರೆ. ಅಡುಗೆ ಮನೆಯ ಒಲೆಯ ಬೆಂಕಿ ಕೆಂಡ, ಅನ್ನ, ನೀರು ಹಾಕಿ 'ತೆಳ್‌ನೀರ್' ಮಾಡುತ್ತಾರೆ. ಈ ತೆಳ್‌ನೀರ್‌ಗೆ ಎಲ್ಲಾ ಭೂತಪ್ರೇತ, ಮಾಟ ಮಂತ್ರಗಳನ್ನು ತಡೆಯುವ ಶಕ್ತಿಯಿದೆ ಎಂದು ನಂಬುವರು. ಶುಭಕಾರ್ಯಗಳಲ್ಲಿ ವೀಳ್ಯೆದೆಲೆ ಅಡಿಕೆಗಳನ್ನು ಬಳಸುತ್ತಾರೆ. ನೆಲ್ಲಕ್ಕಿ ನಡುಬಾಡೆಯ ದೀಪಕ್ಕೆ ನಮಸ್ಕರಿಸಿ ಹೊರಟರೆ ಕಾರ್ಯಸಿದ್ಧಿಸುತ್ತದೆ ಎಂಬ ನಂಬಿಕೆ ಇವರಲ್ಲಿದೆ.

ಕೊಡವರು ಪ್ರಕೃತಿಯ ಆರಾಧಕರಾಗಿರುವುದರಿಂದ ವೃಕ್ಷಗಳಿಗೆ ಪೂಜನೀಯ ಸ್ಥಾನಮಾನ ನೀಡುತ್ತಾರೆ. ಮಾವಿನಮರ ಹಲಸಿನ ಮರದ ಪರಿಕರಗಳನ್ನು ಶುಭಕಾರ್ಯಗಳಿಗೆ ಬಳಸುತ್ತಾರೆ. ಇವರ ಮನೆಯ ಮುಂದೆ ಇಂತಹ ಮರಗಳನ್ನು ಕಾಣಬಹುದಾಗಿದೆ. 'ತಾಂದಿಮರ'ವನ್ನು ಅಶುಭ ಎಂದು ಭಾವಿಸುವ ಇವರು, ಅಶ್ವತ್ಥ ವೃಕ್ಷವನ್ನು ಈಶ್ವರನೆಂದು, ನೆಲ್ಲಿಕಾಯಿ ಮರವನ್ನು 'ಪಾರ್ವತಿ'ಯೆಂದು ತಿಳಿದು ಮದುವೆಮಾಡಿಸಿ ಅನ್ನದಾನ ಮಾಡುತ್ತಾರೆ. ದೇವಸ್ಥಾನಕ್ಕೆ ತೆರಳುವಾಗ ಕೆಂಪು ಬಟ್ಟೆ ಹಾಕಬಾರದು ಎಂದು ನಂಬಿಕೆ ಇವರಲ್ಲಿದೆ. ದುಷ್ಟ ಶಕ್ತಿಗಳ ಕೋಲ, ಆಚರಣೆಗಳ ಆರಾಧನೆಗೆ ಕೆಂಪು ಬಟ್ಟೆ ಬಳಸುವ ಕಾರಣ ತೆರೆಕೋಲಗಳಿಗೆ ತೆರಳುವಾಗ ಇವರು ಶುಭ್ರ ಬಿಳಿಬಣ್ಣದ ಉಡುಪುನ್ನು ಧರಿಸುತ್ತಾರೆ.

ಶವಸಂಸ್ಕಾರಕ್ಕೆ ತೆರಳುವಾಗ ಬಿಳಿ ಬಟ್ಟೆ ಧರಿಸುತ್ತಾರೆ. ಸತ್ತ ವ್ಯಕ್ತಿಯ ಕಾಯಿಲೆ, ಸೋಂಕು ತಮಗೆ ತಾಗಬಾರದೆಂಬ ದೃಷ್ಟಿಯಿಂದ ಈ ನಿಯಮವನ್ನು ಪಾಲಿಸುತ್ತಿದ್ದಾರೆ. ಶವಸಂಸ್ಕಾರದ ಅನಂತರ ಮನೆಗೆ ಬಂದ ತಕ್ಷಣ ಮನೆಯ

ಹೊರಗಡೆ ಸಗಣಿ ನೀರನ್ನು(ಗೋಮೆ) ಪ್ರೋಕ್ಷಿಸುವ ಮೂಲಕ ದೇಹವನ್ನು ಶುದ್ಧಿಗೊಳಿಸುತ್ತಾರೆ. ಅನಂತರ ಸ್ನಾನ ಮಾಡಿ ಮನೆಯೊಳಗೆ ಪ್ರವೇಶಿಸುತ್ತಾರೆ. ಕೊಡವರ ಕುಲದೇವತೆಯಾದ ತಲಕಾವೇರಿ, ವ್ಯವಸಾಯದ ಅಧಿದೇವತೆಯಾದ ಇಗ್ಗುತಪ್ಪನ ದೇವಸ್ಥಾನಕ್ಕೆ ಹೋಗುವಾಗ ಅಕ್ಕಿ ತೆಂಗಿನಕಾಯಿ ಬೆಲ್ಲವನ್ನು ಬಾಡಿಸಿದ ಬಾಳೆಎಲೆಯಲ್ಲಿ ಕಟ್ಟಿ ತಲೆಮೇಲೆ ಹೊತ್ತು ಸಾಗಿ ದೇವಸ್ಥಾನದ ಮೂರು ಸುತ್ತು ಪ್ರದಕ್ಷಿಣೆ ಬಂದರೆ ಮೋಕ್ಷ ಸಿಗುತ್ತದೆಂಬ ನಂಬಿಕೆ ಇವರಲ್ಲಿದೆ. ದೇವರಿಗೆ ನೈವೇದ್ಯ ಅರ್ಪಿಸುವ ಈ ಪದ್ಧತಿಯನ್ನು 'ಬೈವಾಡು ಎಡತಂಡ್ ಪೋಪೋ' ಎನ್ನುತ್ತಾರೆ.

ಶವಸಂಸ್ಕಾರದ ಹನ್ನೊಂದನೇ ದಿನ ಸೂತಕ ತೆಗೆದು ಶ್ರಾದ್ಧ ಮಾಡಿ ಜನರಿಗೆ ಊಟ ಬಡಿಸಿ ಅಮಾವಾಸ್ಯೆ ದಿನದಂದು ಭಗಂಡೇಶ್ವರ ದೇವಸ್ಥಾನಕ್ಕೆ ತೆರಳಿ ಕಾವೇರಿ ಸಂಗಮದಲ್ಲಿ ಸ್ನಾನಮಾಡಿ ಮುಡಿಕೊಡುತ್ತಾರೆ. ಹಿರಿಯರು ಸತ್ತಾಗ ಕಿರಿಯರು, ಹೆಂಡತಿ ಸತ್ತಾಗ ಗಂಡ, ತಂದೆಯಾದರೆ ಹಿರಿಮಗ, ತಾಯಿಯಾದರೆ ಕಿರಿಮಗ, ತಲೆಬೋಳಿಸಿ ಉತ್ತರ ಕ್ರಿಯಾದಿಗಳನ್ನು ಮಾಡುತ್ತಾರೆ. ಇತ್ತೀಚೆಗೆ ತಂದೆ ತಾಯಿ ತೀರಿಕೊಂಡರೆ ಎಲ್ಲಾ ಗಂಡು ಮಕ್ಕಳು ತಲೆ ಬೋಳಿಸುವ ಪದ್ಧತಿಯಿದೆ. ಮನುಷ್ಯರೂಪದ ಬೆಳ್ಳಿಯ ಚಿಕ್ಕಮೂರ್ತಿಯನ್ನು (ಆಳ್‌ರೂಪ) ಪಿಂಡ ಪ್ರಧಾನದ ಜೊತೆಯಲ್ಲಿ ಸಂಗಮದಲ್ಲಿ ಬಿಡುತ್ತಾರೆ. ಸತ್ತವರ ಆತ್ಮ ಅಗಸ್ತ್ಯ ಮುನಿಯ ಜೊತೆ ಇರುವುದೆಂಬ ನಂಬಿಕೆಯಿಂದಾಗಿ ಪಿಂಡ ಪ್ರಧಾನ ಪ್ರಮುಖ ಕ್ರಿಯೆಯಾಗಿದೆ.

ತೀರ್ಥಸ್ನಾನಮಾಡಿದ ಅನಂತರ ಕುಂಕುಮ ಅರ್ಚನೆ ಮಾಡಿ ಹಣ ಅಥವಾ ನಾಣ್ಯ ಹಾಕುವ ವಿಶೇಷ ಪದ್ಧತಿಯಿದೆ. ಪಿಂಡ ಪ್ರಧಾನ ಮಾಡಲು ತೆರಳುವಾಗ ಬೆನ್ನಿಗೆ ಬಿಳಿ ಬಟ್ಟೆಯ 'ನಿಪ್ಪ್ ತುಣಿ'ಯನ್ನು ಕಟ್ಟಿ ತೆರಳುತ್ತಾರೆ. ಬಳಿಕ ಆ ಬಟ್ಟೆಯನ್ನು ನೀರಿಗೆ ಎಸೆಯುತ್ತಾರೆ. ಪಿಂಡ ಪ್ರಧಾನದ ಅನಂತರ ಬ್ರಹ್ಮಗಿರಿ ಬೆಟ್ಟವನ್ನು ಹತ್ತಿದರೆ ಮೋಕ್ಷಸಿಗುತ್ತದೆಂಬ ನಂಬಿಕೆ ಇವರಲ್ಲಿದೆ. ಶುಭ, ಅಶುಭ ಕಾರ್ಯಗಳಲ್ಲಿ ಅಕ್ಕಿಗೆ ಪ್ರಾಮುಖ್ಯತೆಯನ್ನು ನೀಡುತ್ತಾರೆ. ಇವರು ನೆಲ್ಲಕ್ಕಿ ನಡು ಬಾಡೆಯ ದೀಪಕ್ಕೆ ನಮಸ್ಕರಿಸುವಾಗ ಹಬ್ಬಗಳಲ್ಲಿ ಪೂಜಿಸುವಾಗ ಮದುವೆ ಆಚರಣೆಗಳಲ್ಲಿ ಆಶೀರ್ವದಿಸುವಾಗ, ಶವ ಸಂಸ್ಕಾರಗಳನ್ನು ಮಾಡುವಾಗ ಅಕ್ಕಿಯನ್ನು ಬಳಸುತ್ತಾರೆ. ಕ್ಷೀರಕ್ಕೆ ಮಹತ್ವ ನೀಡುವ ಇವರು ಮಗುವಿನ ನಾಮಕರಣ ಸಂದರ್ಭದಲ್ಲಿ ವಧುವು ಗಂಡನ ಮನೆಗೆ ಬಂದಾಗ ಹಾಲು ಅನ್ನ ತಿನ್ನುವ ಆಚರಣೆ ಇವರಲ್ಲಿದೆ. ಮಗುವು ಮೃತಪಟ್ಟಾಗ ಸಂಸ್ಕಾರ ಮಾಡುವ ಸ್ಥಳದಲ್ಲಿ ತಾಯಿಯ ಎದೆ ಹಾಲನ್ನು ಇಟ್ಟರೆ ಮಗುವಿನ ಆತ್ಮಕ್ಕೆ ಶಾಂತಿಸಿಗುತ್ತದೆ ಎಂಬ ನಂಬಿಕೆ ಇವರಲ್ಲಿದೆ.

ಇತರ ನಂಬಿಕೆಗಳು

ಪರಂಪರೆಯ ಮುಂದುವರಿಕೆಯಾಗಿ ಉಳಿದಿರುವಂಥವು. ಐನ್‌ಮುಂದೆ 'ಐಮರ'ದ ಬದಿಯಲ್ಲಿ ಚೆಂಬಿನಲ್ಲಿ ನೀರು ತುಂಬಿಟ್ಟಿರುತ್ತಾರೆ. ಮನೆಗೆ ಬಂದ

ನೆಂಟರು ಆ ನೀರನ್ನು ಮುಟ್ಟದಿದ್ದರೆ ಆ ಮನೆಯ ಹೆಣ್ಣು ಮಕ್ಕಳಿಗೆ ವರಸಿಗುವುದಿಲ್ಲ ಎಂಬ ನಂಬಿಕೆ ಇದೆ. ಉಪ್ಪನ್ನು ಕೈಗೆಕೊಡಬಾರದು, ಹಂದಿಯಮುಳ್ಳನ್ನು ಮನೆಯಲ್ಲಿಟ್ಟರೆ ಜಗಳವಾಗುತ್ತದೆ, ಮನೆಗುಡಿಸುವಾಗ ಗಂಡು ಮಕ್ಕಳಿಗೆ ಪೊರಕೆಯನ್ನು ತಾಗಿಸಬಾರದು ತಾಗಿದರೆ ಮೀಸೆ ಬರುವುದಿಲ್ಲ ಮುಂತಾದ ನಂಬಿಕೆಗಳು ಇವರಲ್ಲಿವೆ. ಬಾಣಂತಿಯನ್ನು ಅರವತ್ತನೇ ದಿನ ಸ್ನಾನಮಾಡಿಸಿದ ಅನಂತರ ಹಂಡೆಯ ನೀರನ್ನು ಬಸಿದು ಎಣ್ಣೆ ಸವರುತ್ತಾರೆ ಎಣ್ಣೆ ಹಚ್ಚಿದ ಹಂಡೆ ತಂಪಾದರೆ ಬಾಣಂತಿ ದೇಹವು ತಂಪಾಗಿರುತ್ತದೆ ಎಂಬ ನಂಬಿಕೆ ಇದೆ.

ಹೊಸ ಮನೆ ಪ್ರವೇಶಿಸುವ ಮೊದಲು 'ಅಸಲು ಕ್ರಿಯೆ' ಮಾಡುವ ವಿಶೇಷ ಆಚರಣೆ ಇವರಲ್ಲಿದೆ. ಮನೆಕಟ್ಟಿದ ಆಚಾರಿಯು ಪ್ರಮುಖ ಪಾತ್ರ ವಹಿಸುತ್ತಾನೆ. ಮನೆಯ ಬಾಗಿಲು ಕಿಟಕಿಗಳನ್ನು ತಟ್ಟಿ ಗೃಹ ಪ್ರವೇಶದ ಹಿಂದಿನ ರಾತ್ರಿ ವೀಳ್ಯ ಕೊಟ್ಟು ಮನೆಯೊಳಗಿನಿಂದ ನಾನು ಮನೆ ಬಿಡುತ್ತೇನೆ 'ಎಡ್‌ತೋಳಿ'(ತಗೋಳ್ಳಿ) ಎಂದೂ ಮನೆಯೊಡಯನು ಹೊರಗೆ ನಿಂತು 'ಎಡ್‌ತಂಡೊ'(ತೆಗೆದುಕೊಂಡೆ) ಎನ್ನುತ್ತಾ ತಕ್ಷಣ ಮನೆಯೊಳಗೆ ಪ್ರವೇಶಿಸುತ್ತಾನೆ. ಕೊಡವರಲ್ಲಿ ಮನೆಯನ್ನು ಆಚಾರಿಯಿಂದ ಹಿರಿಯರು ವಹಿಸಿಕೊಂಡರೆ ಅವರ ಆಯುಷ್ಯ ಕಡಿಮೆಯಾಗುತ್ತದೆ ಎಂಬ ನಂಬಿಕೆ ಇದೆ. ಹೆಣ್ಣು ನೋಡಲು ಹೋಗುವಾಗ ಪೊಂಬಣ (ಮುಯ್ಯಿ) ಕೊಡುವಾಗ ಮದುಮಗಳನ್ನು ಕಳುಹಿಸುವಾಗ, ಬಾಣಂತಿಯನ್ನು ಹೆರಿಗೆಗೆ ಕಳುಹಿಸುವಾಗ, ಮೂರು, ಐದು, ಏಳರಂತೆ ವಿಷಮ ಸಂಖ್ಯೆಯಲ್ಲಿ ಮಹಿಳೆಯರು ಶಾಸ್ತ್ರಗಳನ್ನು ಮಾಡುತ್ತಾರೆ. ಊಟಮಾಡುವ ಸಂದರ್ಭದಲ್ಲಿ ಸೀನುಬಂದರೆ ಕೈತೊಳೆದೇ ಊಟ ಮುಗಿಸ ಬೇಕೆಂಬ ನಂಬಿಕೆಯಿದೆ. ನಾಯಿ ಹುಲ್ಲು ತಿಂದರೆ, ನರಿಗಳು ಊಳಿಟ್ಟರೆ, ಕಾಗೆನೀರಿನಲ್ಲಿ ಮುಳುಗಿ ಎದ್ದರೆ, ಕಾಲಿಕೊಡವನ್ನು ನೋಡಿದರೆ, ನೆಲ್ಲಕ್ಕಿ ನಡುಬಾಡೆ ಮತ್ತು ಕನ್ನಿಕೋಂಬರೆ ನಡುವೆ ಸೀಮೆ ಎಣ್ಣೆ ದೀಪ ಇಟ್ಟರೆ ಅಶುಭ ಎಂದು ನಂಬಿಕೆ ಇದೆ.

ನಂಬಿಕೆಗಳು ಮಾನವನ ಕೈ ಹಿಡಿದು ನಡೆಸುವ ದೀವಿಗೆಗಳು. ನಂಬಿಕೆ ಯಿಂದಲೇ ಮನುಷ್ಯ ನಾಳೆಗಾಗಿ ಸಂಗ್ರಹಿಸುತ್ತಾನೆ. ನಾಡಿಗಾಗಿ ಬದುಕುತ್ತಾನೆ. ಬದುಕಿನ ಜೀವನಾಡಿಗಳಾದ ನಂಬಿಕೆಗಳು ಪರಂಪರೆಯಿಂದ ಬಂದ ಬಳುವಳಿಗಳು. ಕಾಲಕ್ಕೆ ತಕ್ಕಂತೆ, ಪರಿಸರಕ್ಕೆ ತಕ್ಕಂತೆ ಆಯಾ ಸಂಪ್ರದಾಯ ಸನ್ನಿವೇಶಕ್ಕೆ ತಕ್ಕಂತೆ ನಂಬಿಕೆಗಳು ಹುಟ್ಟಿಕೊಂಡಿರುತ್ತವೆ. ಒಂದು ಕಾಲದ ನಾಣ್ಯ ಇನ್ನೊಂದು ಕಾಲದಲ್ಲಿ ಚಲಾವಣೆಯಲ್ಲಿ ಬರದೆ ಇರುವಂತೆ ಕೆಲವು ನಂಬಿಕೆಗಳು ಹೊಸ ರೂಪವನ್ನು ಪಡೆಯಬಹುದು. ಇಲ್ಲವೇ ನಶಿಸಿ ಹೋಗಬಹುದು. ಎಲ್ಲಾ ಸಮುದಾಯಗಳಲ್ಲಿರು ವಂತೆ ಕೊಡವ ಸಮುದಾಯದಲ್ಲೂ ಈ ಮೇಲೆ ಉಲ್ಲೇಖಿಸಿದ ನಂಬಿಕೆಗಳು, ಅವರ ಸಂಸ್ಕಾರದ ಸಂಸ್ಕೃತಿಯ ಪಡಿಯಚ್ಚಿನಂತಿದೆ. ಕೊಡವರ ನಂಬಿಕೆಗಳಲ್ಲಿ ಕೆಲವು

ಧಾರ್ಮಿಕವಾಗಿಯೂ ಮತ್ತೆ ಕೆಲವು ಲೌಖಿಕ ಬದುಕಿನಲ್ಲಿ ಕಂಡುಕೊಂಡ ಅನುಭವಜನ್ಯ ತತ್ವಗಳಾಗಿಯೂ ಉಳಿದುಕೊಂಡಿವೆ.

ಕೊನೆ ಟಿಪ್ಪಣಿಗಳು

೧) ಪಿ.ಎಸ್ ರಾಮಾನುಜಂ, **ಕೊಡವರು,** ಪ್ರಸಾರಾಂಗ, ಮೈಸೂರು, ವಿ.ವಿ, ೧೯೭೫, ಪುಟ-೨೧

೨) Gezetteer - vol. 111 Louis rice, Mysore and Coorg, page, 93

೩) ಪಿ.ಎಸ್ ರಾಮಾನುಜಂ, **ಕೊಡವರು,** ಪ್ರಸಾರಾಂಗ, ಮೈಸೂರು, ವಿ.ವಿ, ೧೯೭೫, ಪುಟ,೩

೪) ಪಿ.ಎಸ್ ರಾಮಾನುಜಂ, **ಕೊಡವರು,** ಪ್ರಸಾರಾಂಗ, ಮೈಸೂರು, ವಿ.ವಿ, ೧೯೭೫, ಪುಟ,೩

೫) ಪಿ.ಎಸ್ ರಾಮಾನುಜಂ, **ಕೊಡವರು,** ಪ್ರಸಾರಾಂಗ, ಮೈಸೂರು, ವಿ.ವಿ, ೧೯೭೫, ಪುಟ, ೧೮

೬) ಬಿ.ಡಿ.ಗಣಪತಿ, **ಕೊಡವಾಸ್,** ಮೆಸರ್ಸ್ ಕೊಡಗು ಕಂಪನಿ, ೧೯೬೨, ಪುಟ,೬

೭) ಅದೇ ಪುಟ, ೬

೮) ಬಿ.ಡಿ.ಗಣಪತಿ, **ಕೊಡವರು,** ಮೆಸರ್ಸ್ ಕೊಡಗು ಕಂಪನಿ, ೧೯೬೨, ಪುಟ,೫

೯) Gezetter, ಸೂರ್ಯನಾಥ್ ಕಾಮತ್, ಪುಟ ೧೦೨

೧೦) ಕೊಡವರು ಬಿ.ಡಿ.ಗಣಪತಿ, **ಮೆಸರ್ಸ್ ಕೊಡಗು ಕಂಪನಿ,** ೧೯೬೨, ಪುಟ, ೪

೧೧) ಪಿ.ಎಸ್ ರಾಮಾನುಜಂ, **ಕೊಡವರು,** ಪ್ರಸಾರಂಗ, ಮೈಸೂರು, ವಿ.ವಿ, ೧೯೭೫, ಪುಟ,೨೨

೧೨) ಅದೇ ಪು. ೧೯

೧೩) ಅದೇ ಪು. ೨೯

೧೪) ಅದೇ ಪು. ೨೩

೧೫) ಅದೇ ಪು. ೨೮

೧೬) **ಜಗತ್ತಿಗೊಂದೇ ಕೊಡಗು,** ಐ.ಮ.ಮುತ್ತಣ್ಣ, ಪುಟ ೨೧೫.

೧೭) **ಜಗತ್ತಿಗೊಂದೇ ಕೊಡಗು,** ಐ.ಮ.ಮುತ್ತಣ್ಣ, ಪುಟ ೨೧೭.

೧೮) ಎಂ.ಜಿ.ನಾಗರಾಜು, **ಕೊಡಗಿನ ಕೈಮಡಗಳು,** ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೨೦೦೪, ಪುಟ ೧೨೫

೧೯) ಅದೇ ಪು. ೧೨೯

೨೦) ಅದೇ ಪು. ೧೩೧

೨೧) **ಕೊಡವ ಸಿರಿ,** ಕೊಡವ ಸಾಹಿತ್ಯ ಅಕಾಡೆಮಿ ಮಡಿಕೇರಿ ೨೦೦೩

೨೨) **ಕೊಡಗಿನಕೈಮಡಗಳು,** ಎಂ.ಜಿ.ನಾಗರಾಜ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೦೪. ಪುಟ-೧೪೦

೨೩) **ಕನ್ನಡ ವಿಷಯ ವಿಶ್ವಕೋಶ,** (ಜಾನಪದ) ೨೦೦೬ ಪುಟ. ೧೩೮

೨೪) **ಗ್ರಾಮೀಣ ಉಡುಗೆ ತೊಡುಗೆಗಳು,** ಕನ್ನಡ ಪುಸ್ತಕ ಪ್ರಾಧಿಕಾರ ೨೦೦೪, ಪುಟ, ೭೭

೨೫) **ಗ್ರಾಮೀಣ ಉಡುಗೆ ತೊಡುಗೆಗಳು,** ಕನ್ನಡ ಪುಸ್ತಕ ಪ್ರಾಧಿಕಾರ ೨೦೦೪, ಪುಟ, ೭೮

೨೬) **ಗ್ರಾಮೀಣ ಉಡುಗೆ ತೊಡುಗೆಗಳು,** ಕನ್ನಡ ಪುಸ್ತಕ ಪ್ರಾಧಿಕಾರ ೨೦೦೪, ಪುಟ, ೮೫

೨೭) ಅದೇ ಪುಟ

೨೮) **ಮಲೆನಾಡಿನ ಒಕ್ಕಲಿಗರು,** ವೈ.ಸಿ ಭಾನುಮತಿ, ಕೇಶವ್ ಭಟ್ ಪ್ರಕಾಶನ, ಮ್ಯಸೂರು ೧೯೯೪ ಪುಟ-೧೫೬.

೨೯) **ಮಲೆನಾಡಿನ ಒಕ್ಕಲಿಗರು,** ವೈ.ಸಿ ಭಾನುಮತಿ, ಕೇಶವ್ ಭಟ್ ಪ್ರಕಾಶನ, ಮ್ಯಸೂರು ೧೯೯೪ ಪುಟ-೧೫೭

೩೦) **ಮಲೆನಾಡಿನ ಒಕ್ಕಲಿಗರ ಆಹಾರ ಕ್ರಮಗಳು :** ಸಾಂಸ್ಕೃತಿಕ ಅಧ್ಯಯನ, ದುಗ್ಗಮ್ಮ.ಡಿ. ಪಿಎಚ್.ಡಿ. ಸಂಶೋಧನ ಗ್ರಂಥ ಮೈಸೂರು,ವಿ.ವಿ ೨೦೧೨ ಪುಟ ೯೨ (ಅಪ್ರಕಟಿತ).

೩೧) ಅದೇ ಪು. ೫೪

೩೨) **ಮಲೆನಾಡಿನ ಒಕ್ಕಲಿಗರ ಆಹಾರ ಕ್ರಮಗಳು,** ಸಂಶೋಧನಾ ಗ್ರಂಥ, ೨೦೧೨ ದುಗ್ಗಮ್ಮ ವಿ.ಡಿ. ಪುಟ-೫೪ (ಅಪ್ರಕಟಿತ).

೩೩) ಸಂದರ್ಶನ, ಶ್ರೀಮತಿ ಬೊಳ್ಳಮ ನಾಣಯ್ಯ, ಜಿಲ್ಲಾಪಂಚಾಯತ್ ಸದಸ್ಯರು, ನಾಪೋಕ್ಲು, ಸಮಯ ೪ಗಂಟೆ, ಕೊಡವ ಜಾತಿ ದಿನಾಂಕ: ೨೦-೦೩-೨೦೧೩

೪ | ಅಧ್ಯಾಯ

ಕೊಡವರ ಸಂಸ್ಕಾರಗಳು

ವ್ಯಕ್ತಿಯು ಸಾಂಪ್ರದಾಯಿಕವಾಗಿ ಕಡ್ಡಾಯವಾಗಿ ಅನುಸರಿಸಿಕೊಂಡು ಬಂದ ಧಾರ್ಮಿಕ ವಿಧಿ ವಿಧಾನಗಳಿಗೆ ಸಂಸ್ಕಾರಗಳೆನ್ನಲಾಗಿದೆ. ಈ ಸಂಸ್ಕಾರಗಳು ಒಂದೆಡೆ ವ್ಯಕ್ತಿಯ ಮಾನಸಿಕ ಸ್ಥಿತಿಗತಿಯ ಮೇಲೆ ಆತನ ಸಂಸ್ಕೃತಿಯ ಮೇಲೆ ಬೆಳಕು ಬೀರಲು ಸಹಾಯವಾಗುತ್ತದೆ.

"ಸಂಸ್ಕೃತ ಸಾಹಿತ್ಯದಲ್ಲಿ ಸಂಸ್ಕಾರವನ್ನು ವಿಶಾಲಾರ್ಥದಲ್ಲಿ ಬಳಸಲಾಗಿದೆ. ಶಿಕ್ಷಣ, ಸಂಸ್ಕರಣ, ತರಬೇತಿ, ಶುದ್ಧೀಕರಣ, ಸಿದ್ಧಿ ಇತ್ಯಾದಿ ವ್ಯಕ್ತಿಯ ಶರೀರ ಮನಸ್ಸು ಹಾಗೂ ಬುದ್ಧಿ ಪವಿತ್ರಗೊಳಿಸಿ ತನ್ಮೂಲಕ ಆತನನ್ನು ಸಮಾಜದ ಪರಿಪೂರ್ಣ ವ್ಯಕ್ತಿಯನ್ನಾಗಿ ಮಾಡುವ ಧಾರ್ಮಿಕ ಕ್ರಿಯೆಗೆ ಸಂಸ್ಕಾರವೆಂದು ಹೇಳಲಾಗಿದೆ.[1] ಸಂಸ್ಕಾರಗಳು ತಮ್ಮದೇ ಆದ ಆಚರಣೆ ವಿಧಿಗಳು ಮತ್ತು ನಿಯಮಗಳ ಜೊತೆಗೆ ಮಾನವನ ಸರ್ವತೋಮುಖ ಶುದ್ಧೀಕರಣಕ್ಕಾಗಿ ಹಾಗೂ ಸಂಸ್ಕರಣ ಪಾವಿತ್ರ್ಯತೆಗಾಗಿ ಶ್ರಮಿಸುತ್ತವೆ. ಸಂಸ್ಕಾರಗಳು ವಿಧಿಕ್ರಿಯೆಗೊಳಗಾದ ವ್ಯಕ್ತಿಗೆ ವರ್ಣಿಸಲಾಗದಷ್ಟು ವಿಶಿಷ್ಟ ಅರ್ಹತೆಯನ್ನು ತಂದುಕೊಟ್ಟು ಸದಾ ಆತನ ಶರೀರ ಅಥವಾ ಆತ್ಮದಲ್ಲಿರುವಂತೆ ಮಾಡುತ್ತವೆ. 'ಸಂ'ಎಂಬ ಉಪಸರ್ಗದೊಡನೆ ಸೇರಿರುವ 'ಕೃ' ಧಾತುವಿನಿಂದ ನಿಷ್ಪನ್ನವಾದ ಶಬ್ದವೇ ಸಂಸ್ಕಾರ. "ಸಂಯುಕ್ತ ಕ್ರಿಯತೇ ಇತಿ ಸಂಸ್ಕಾರ" ಅಂದರೆ ಸರಿಯಾಗಿ ಮಾಡುವುದು. ಸುಂದರವಾಗಿ ಮಾಡುವುದು, ಸದುಪಯೋಗವಾಗುವಂತೆ ಮಾಡುವುದು ಎಂದರ್ಥ. 'ಆತ್ಮ ಶರೀರಾನ್ಯತರ ನಿಷ್ಠ ವಹಿತ ಕ್ರಿಯಾಜನ್ಯ ಅತಿಶಯ ವಿಶೇಷ' ಎಂಬುದು ಸಂಸ್ಕಾರ ಶಬ್ದದ ಶಾಸ್ತ್ರೀಯವಾದ ವಿವರಣೆಯಾಗಿದೆ.

ಆತ್ಮ ಎಂಬುವುದಕ್ಕೆ ಇಲ್ಲಿ ಅಂತ:ಕರಣ ಸೂಕ್ಷ್ಮ-ಶರೀರ ಎಂದರ್ಥ. ಅಂದರೆ ಸ್ಥೂಲ ಶರೀರದಲ್ಲಿದ್ದು, ಸ್ಥೂಲ ಶರೀರದಿಂದ ಕೇಡು ಮಾಡಿಸುವ ಶಕ್ತಿ. ಮನಸ್ಸು-ಬುದ್ಧಿ-ವಿವೇಕ-ಜ್ಞಾನೇಂದ್ರಿಯಗಳ ಒಳರೂಪ, ಶರೀರವೆಂದರೆ ಬಾಹ್ಯ ಶರೀರ-ದೇಹ. 'ಬುದ್ಧಿ' ವಿಷಯಗ್ರಹಣ ಶಕ್ತಿ. 'ವಿವೇಕ' ಗ್ರಹಿತ ವಿಷಯಗಳನ್ನು ವಿಮರ್ಶಿಸುವ ವಿವೇಚನಾ ಶಕ್ತಿ. ಈ ಸೂಕ್ಷ್ಮ ಮತ್ತು ಸ್ಥೂಲಶರೀರಗಳಿಗೆ ಕಾಲ-ಕಾಲಕ್ಕೆ ಮಾಡಿದ ವಿಹಿತ ಕ್ರಿಯೆಗಳಿಂದ ಉಂಟಾಗುವ ವಿಶೇಷ ಸಾಮರ್ಥ್ಯ .ಇದು ಸಂಸ್ಕಾರವೆಂಬ ಪದದ ಅರ್ಥ. ಸಂಸ್ಕಾರ (rite-ritual) ಕಾರ್ಯ-ಕಾರಣ ceremony ಹಾಗೂ ರೂಢಿ-ನಿಯಮ (custom) ಶಬ್ದಗಳನ್ನು ಸಾಮಾನ್ಯವಾಗಿ ಒಂದಕ್ಕೊಂದು ಪೂರಕವಾಗಿ ಬಳಸಲಾಗುತ್ತದೆ.[2]

ಸಂಸ್ಕಾರಗಳನ್ನು ಏಕೆ ಮಾಡಲಾಗುತ್ತಿದೆ ಎಂದು ಹೇಳುವುದು ಕಷ್ಟದ ಕೆಲಸವಾದರೂ ಅವುಗಳಲ್ಲಿರುವ ಭೇದಗಳನ್ನು ಮಾನವಶಾಸ್ತ್ರಜ್ಞರು ಗುರುತಿಸಿದ್ದಾರೆ.

ಧಾರ್ಮಿಕ ಕ್ರಿಯೆಗಳಿಂದ ಕೂಡಿದ ವಿಧಿ ಕ್ರಿಯೆಗಳಿಗೆ ಸಂಸ್ಕಾರಗಳೆಂದು ಕರೆದರೆ, ಇವುಗಳಿಗೆ ವ್ಯತಿರಿಕ್ತವಾದ ತಾರ್ಕಿಕ ಚಟುವಟಿಕೆಗಳನ್ನು ರೂಢಿ-ನಿಯಮುಗಳೆಂದು ವರ್ಣಿಸಲಾಗಿದೆ. ಆತ್ಮ ಮತ್ತು ಶರೀರಗಳಿಗೆ ಜೀವಿತ ವ್ಯವಸ್ಥೆಯಲ್ಲಿ ಬೀಜಾಂಕುರ ದಿಂದ ಪ್ರಾರಂಭಿಸಿ ಶತಮಾನ ಪರ್ಯಂತ ಒಟ್ಟು ೪೮ ಸಂಸ್ಕಾರಗಳನ್ನು ಶಾಸ್ತ್ರದಲ್ಲಿ ಹೇಳಲಾಗಿದೆ. ಇವು ದೃಷ್ಟ-ಅದೃಷ್ಟ ಫಲಗಳನ್ನು ಕೊಡುತ್ತವೆ. ಇವುಗಳಲ್ಲಿ ಗರ್ಭಾದಾನಾದಿ ವಿವಾಹ ಹಂತದ ೧೬ ಸಂಸ್ಕಾರಗಳು-ಗುರು ಅಂದರೆ ತಂದೆ ಮಕ್ಕಳಿಗೆ ಮಾಡಬೇಕಾದ ಸಂಸ್ಕಾರಗಳು.

ವಿವಾಹದಿಂದ ಮರಣದರವರೆಗಿನ ೩೨ ಸಂಸ್ಕಾರಗಳು ತನಗೆ ತಾನೇ ಮಾಡಿಕೊಳ್ಳುವಂತಹವು. ಮರಣದ ಅನಂತರದ ಸಂಸ್ಕಾರಗಳು (ಉತ್ತರದ ೧೬ ಸಂಸ್ಕಾರಗಳು) ಮಗ ತಂದೆಯ ಶರೀರಕ್ಕೂ ಜೀವಾತ್ಮನಿಗೂ ಮಾಡುವಂತಹ ಸಂಸ್ಕಾರಗಳು. ಹೀಗೆ ಮಾಡಿದಾಗ ಈ ಜೀವಾತ್ಮ ಪರಮಾತ್ಮನಾಗುತ್ತಾನೆ

ಜೀವಿಗಳಲ್ಲಿ ಯೋನಿಜ, ಅಂಡಜ, ಸ್ವೇದಜ, ಉದ್ವಿಜಗಳಂತಹ ನಾನಾ ಬಗೆಯ ಜೀವಿಗಳಿವೆ. ಸ್ವಕರ್ಮವಶಾತ್ ನಾನಾ ರೀತಿಯ ಜನ್ಮ ಪಡೆದು ಯಾವಾಗಲೋ ಒಮ್ಮೆ ಮನುಷ್ಯ ಶರೀರವು ಜೀವಿಗೆ ಲಭಿಸುತ್ತದೆ. ಆಗ ಶರೀರಕ್ಕೆ ಸರಿಯಾದ ಸಂಸ್ಕಾರಗಳು ಆಗದಿದ್ದರೆ ಪುನಃ ಜನ್ಮವು ಕರ್ಮವಶಾತ್ ಬೇರೆಯದ್ದು ಅಂದರೆ ಅಂಡಜಾದಿಗಳಲ್ಲಿ ಯಾವುದಾದರೂ ಆಗಬಹುದು. ಯೋನಿಜಗಳಲ್ಲೂ ಅನ್ಯ ಪ್ರಾಣಿ ಜನ್ಮ ಲಭಿಸುವುದು. ಸರಿಯಾದ ಸಂಸ್ಕಾರ ಲಭಿಸಿದರೆ ಆ ಜೀವವು ಇಹದಲ್ಲಿ ಪಡೆಯಬಹುದಾದ ಧರ್ಮ, ಅರ್ಥ, ಕಾಮಗಳ, ಎಲ್ಲಾ ರೀತಿಯ ಫಲವನ್ನು ಅನುಭವಿಸಿ ಕೊನೆಯ ಪುರುಷಾರ್ಥವಾದ ಮೋಕ್ಷವನ್ನು ಪರದಲ್ಲಿ ಪಡೆಯಲು ಸಾಧ್ಯವಾಗುತ್ತದೆ ಎಂದು ಪರಂಪರೆಯಲ್ಲಿ ತಿಳಿಯಲಾಗಿದೆ.

ಆಧುನಿಕತೆಯ ಸೋಗಿನಡಿಯಲ್ಲಿ ಈ ಸಂಸ್ಕಾರಗಳು ಅರ್ಥಹೀನವೆಂದೂ ಅನುಪಯುಕ್ತವೆಂದೂ, ಕಡೆಗಣಿಸಲಾಗುತ್ತದೆ. ಯಾರಿಗೆ ಸಂಸ್ಕಾರಗಳಲ್ಲಿ ನಂಬಿಕೆ ಇದೆಯೋ ಅಂತಹವರು ನಾಮಕರಣ, ಉಪನಯನ, ವಿವಾಹ ಮುಂತಾದ ಸಂಸ್ಕಾರಗಳನ್ನು ಮಾತ್ರ ಆಚರಣೆಯಲ್ಲಿರಿಸಿಕೊಂಡು ಉಳಿದವುಗಳನ್ನು ಕೈ ಬಿಟ್ಟಿರುತ್ತಾರೆ. ತಾವು ಆಚರಿಸುತ್ತಿರುವ ಕೆಲವೇ ಸಂಸ್ಕಾರ ಕರ್ಮಗಳಲ್ಲೂ ಬಾಹ್ಯ ಆಡಂಬರಗಳಿಗೆ ಹೆಚ್ಚಿನ ಪ್ರಾಶಸ್ತ್ಯ. ವೈದಿಕ ಕ್ರಿಯಾಭಾಗಗಳ ಸಮಗ್ರ ಆಚರಣೆಯ ಪರಿವೆ ಯಾರೊಬ್ಬನಿಗೂ ಇದ್ದಂತಿಲ್ಲ. ಊಟ ಉಪಚಾರ ವಸ್ತ್ರ-ಆಭರಣ ವಾದ್ಯ-ಗದ್ದಲ ಒಟ್ಟಿನಲ್ಲಿ ಆಡಂಬರ ಪ್ರದರ್ಶನದಲ್ಲೇ ನಮ್ಮ ಸಂಸ್ಕಾರಗಳು ಪರ್ಯಾವಸಾನವಾಗುತ್ತವೆ. ಅವುಗಳಲ್ಲಿ ಉಚ್ಚರಿಸುವ ಮಂತ್ರಗಳ ಅರ್ಥವೇನು? ಮುಂತಾದ ಪ್ರಮುಖ ವಿಚಾರಗಳ ಕಡೆಗೆ ನಮ್ಮ ದೃಷ್ಟಿ ಹರಿಯುವುದೇ ಇಲ್ಲ. ವೈದಿಕ ಷೋಡಷ ಸಂಸ್ಕಾರಗಳಾದ 'ಗರ್ಭದಾನ' 'ಪುಂಸವನ' ಸೀಮಾಂತೋನ್ನ ಯನ, ಜಾತಕರ್ಮ, ನಾಮಕರಣ, ವಿವಾಹ ಪಿಂಡ ಪಿತೃಯಜ್ಞ, ಅಗ್ನಿಧ್ಯಾನ ಮುಂತಾದ ಅನೇಕ ಸಂಸ್ಕಾರಗಳು ಇತರ ಸಮುದಾಯದ ಮೇಲೆ ಪ್ರಭಾವ ಬೀರಿವೆ.

ಸಂಸ್ಕಾರದಿಂದಾಗಿ ವ್ಯಕ್ತಿ ಸಾಮಾಜಿಕ ಹಕ್ಕು ಬಾದ್ಯತೆಗಳನ್ನು ಪಡೆಯುತ್ತಾನೆ. ತಮ್ಮ ಸಮುದಾಯದ ಕುರುಹಾಗಿ ತನ್ಮೂಲಕ ವ್ಯಕ್ತಿ ಸಮಾಜದ ಅವಿಭಾಜ್ಯ

ಅಂಗವಾಗಿ ಪರಿಣಮಿಸುತ್ತಾನೆ. ಕೊಡವರ ಸಂಸ್ಕಾರಗಳು ಲಿಂಗ, ವರ್ಗ, ಮತ, ಭೇದವೆನ್ನದೆ ಸರ್ವರೂ ಸೇರಿ ಯಶಸ್ವಿಯಾಗುವಂತೆ ಮಾಡಿ ವಿವಿಧತೆಯಲ್ಲಿ ಏಕತೆಯನ್ನು ಮೂಡಿಸುತ್ತವೆ. ಜನನ, ಮದುವೆ, ಮರಣ ಸಂದರ್ಭದ ಅನೇಕ ವಿಧಿ ವಿಧಾನಗಳಲ್ಲಿ ಪ್ರಮುಖ ವೈದಿಕ ಅಂಶಗಳು ಕಂಡುಬರುತ್ತವೆ. ಆದರೆ ಈ ನಿಟ್ಟಿನಲ್ಲಿ ಕೊಡವರ ಸಂಸ್ಕಾರಗಳು ಹೇಗೆ ಅನನ್ಯತೆಯನ್ನು ಕಾಯ್ದುಕೊಂಡಿದೆ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಕೊಡವರ ಜನನ ಸಂಸ್ಕಾರಗಳು

ಪ್ರಸವ : ಕೊಡವರು ಹೆಣ್ಣು ಮಕ್ಕಳಿಗೆ ಸುಮಾರು ಇಪ್ಪತ್ತರಿಂದ ಇಪ್ಪತ್ತೈದು ವರ್ಷದೊಳಗೆ ವಿವಾಹ ಏರ್ಪಡಿಸುತ್ತಾರೆ. ಶೀಘ್ರದಲ್ಲಿ ಗರ್ಭಧರಿಸಬೇಕೆಂಬ ನಿರೀಕ್ಷೆಯೂ ಇವರಲ್ಲಿದೆ. ಇವರು ಗರ್ಭವತಿಯನ್ನು "ಕುಳಿಯಮೆಕರ್ತಿ" ಎಂದು ಕರೆಯುತ್ತಾರೆ. ಏಳನೆಯ ತಿಂಗಳಿನಲ್ಲಿ ಗಂಡನ ಮನೆಯಿಂದ ತವರು ಮನೆಗೆ ಕಳುಹಿಸುತ್ತಾರೆ. ಈ ಸಂದರ್ಭದಲ್ಲಿ ಗರ್ಭವತಿಯೂ ಹೊಸ ಜರಿ ಸೀರೆ(ಬೊಟ್ಟ್ ಪೊಡಿಯ) ಧರಿಸಿ 'ನೆಲ್ಲಕ್ಕಿ ನಡುಬಾಡೆ'ಯಲ್ಲಿ ಚಾಪೆಯ ಮೇಲಿಟ್ಟ 'ಮುಕ್ಕಾಲಿ' ಯ ಮೇಲೆ ಕೂರಿಸಿ ಆಕೆಯ ತಲೆಯ ಮೇಲೆ ಮುತ್ತೈದೆಯರು ಎಣ್ಣೆ ಹಚ್ಚಿ ತಂಪು ಮಾಡುತ್ತಾರೆ. ತವರು ಮನೆಗೆ ಹೊರಡುವ ಮೊದಲು ನೆಲ್ಲಕ್ಕಿಯಲ್ಲಿ ದೇವರನ್ನು ಪ್ರಾರ್ಥಿಸಿ ದೀಪಕ್ಕೆ ಅಕ್ಕಿ ಹಾಕಿ ಹಿರಿಯರಿಗೆ ನಮಸ್ಕರಿಸಿ ಬಲಗಾಲಿನಿಂದ ಹೊಸಿಲು ದಾಟಿ ತವರು ಮನೆಗೆ ಹೊರಡುತ್ತಾಳೆ.

ಕೊಡವರಲ್ಲಿ ಗರ್ಭವತಿಗೆ ಮೊದಲನೇ ಸಲ ತವರು ಮನೆಯಿಂದ ಬುತ್ತಿ ತರುವುದನ್ನು 'ಕೂಪದಿ ಕೂಳ್' ಎನ್ನುತ್ತಾರೆ. ಕೂಪದಿ ತರುವಾಗ ಎರಡು ಮೂರು ತರದ ಹುರಿದ ಮಾಂಸಹಾರಗಳು, ತರಕಾರಿ ಸಾರು, ಸೊಪ್ಪು ಪಲ್ಯ, ಹಾಗಲಕಾಯಿ ಪಲ್ಯ, ಮೊಸರನ್ನ, ಕರಿದ ತಿಂಡಿಗಳು, ಮದ್ಯವನ್ನು ತಂದು ಎಲ್ಲಾರು ಒಟ್ಟಾಗಿ ಸಾಂಪ್ರದಾಯಿಕವಾಗಿ ಊಟ ಮಾಡುತ್ತಾರೆ. ತವರು ಮನೆಯ ಬುತ್ತಿಯ ನಂತರ ಎಲ್ಲಾ ಹತ್ತಿರದ ಬಂಧುಗಳು ಸ್ನೇಹಿತರು 'ಕೂಪದಿ' ಯನ್ನು ಗರ್ಭವತಿಯ ಮನೆಗೆ ತಂದು ಬಡಿಸುತ್ತಾರೆ. ಕೊಡವರ ಕೂಪದಿಯಂತೆ ಈ ಭಾಗದ ಇತರ ಸಮುದಾಯದಲ್ಲೂ ಗರ್ಭವತಿಯನ್ನು ಮನೆಗೆ ಕರೆದು ಅವಳಿಗಿಷ್ಟವಾದ ಅಡುಗೆಯನ್ನು ಬಡಿಸಿ ಉಡುಗೊರೆ ಕೊಟ್ಟು ಕಳುಹಿಸುವ ಸಂಪ್ರದಾಯವಿದೆ.

ಗರ್ಭಿಣಿ ಎಂದು ತಿಳಿಯುತ್ತಿದ್ದ ಹಾಗೆ ತವರು ಮನೆಯವರು ಅತ್ತೆ ಮನೆಯವರು ಗರ್ಭಿಣಿ ಬಯಕೆಯನ್ನು ಅರಿತು ಅವಳಿಗೆ ಇಷ್ಟವಾದದ್ದನ್ನು ಮಾಡಿ ಉಣಿಸುತ್ತಾರೆ. ಇದರಿಂದ ಗರ್ಭವತಿಗೆ ಪೌಷ್ಟಿಕ ಆಹಾರ ದೊರೆಯುತ್ತದೆ. ಪ್ರತಿ ದಿವಸ ಬಂಧು ಬಳಗದವರು ಬಂದು ಪ್ರೀತಿಯ ಮಾತುಗಳನ್ನಾಡುವುದರಿಂದ ಗರ್ಭವತಿಯ ಮನಸ್ಸು ಸದಾ ಉಲ್ಲಾಸವಾಗಿರುವುದು. ಯಾವುದೇ ಚಿಂತೆ, ದುಗುಡ, ದುಮ್ಮಾನಗಳು ಅವಳನ್ನು ತಟ್ಟುವುದಿಲ್ಲ. ಸುಮಾರು ೭ ತಿಂಗಳವರೆಗೆ ಹೀಗೆ ಸಂತುಷ್ಟ ಭೋಜನ ನೀಡುತ್ತಾರೆ. ಹೆರಿಗೆಯ ನಂತರ ಈ ಪ್ರೀತಿ

ಇಮ್ಮಡಿಯಾಗುತ್ತದೆ. ತಾಯಿ ಮತ್ತು ಮಗುವನ್ನು ಬಹಳ ವಿಶೇಷ ಗಮನವಿತ್ತು ಸಲಹುತ್ತಾರೆ.

ಬಸುರಿ ಬಯಕೆಯ ಜನಪದ ಹಾಡು ಇಂತಿದೆ

ತೇಂದುಳಿ ತೊರೆಮಾಂಗೆ - ಹುಳಿಯಾದ ಮಾವಿನ ಮಿಡಿ
ತಿಂದಿನೊ ಕೊದಿ ಪೋಗ - ತಿಂದಷ್ಟು ತೃಪ್ತಿಯಾಗದು
ದೇವತಂದ ಪೂಮಾಲೆ - ದೇವರು ನೀಡಿದ ಹೂವಿನ ಮಾಲೆ
ಚೂಡಿನೋ ಕೊದಿ ಪೋಗ - ಮುಡಿದಷ್ಟೂ ತೃಪ್ತಿಯಾಗದು
ಪೊಂಗ ತಂದೆಲೆ ಭೋಗ - ಸ್ತ್ರೀಯರು ನೀಡಿದ ಬುತ್ತಿ
ತಿಂದಿನೊ ಕೊದಿ ಪೋಗ - ತಿಂದಷ್ಟು ಆಸೆ ತಣಿಯದು
ಅವ್ವ ತಂದ ತಂಗೂಳ್ - ತಾಯಿ ನೀಡಿದ ಬುತ್ತಿಯೂಟ
ಉಂಡಿನೊ ಕೊದಿ ಪೋಗ - ತಿಂದಷ್ಟು ಆಸೆ ನೀಗದು

ಮಗುವಿನ ಜನನ

ಕೊಡವರಲ್ಲಿ ಗಂಡು ಮಗುವಿಗೆ ಹೆಚ್ಚಿನ ಪ್ರಾಶಸ್ತ್ಯ. ಗಂಡು ಮಗು ಹುಟ್ಟಿದ ಕೂಡಲೇ ಉತ್ತರ ದಿಕ್ಕಿನಲ್ಲಿ ನಿಂತು ಗುಂಡು ಹಾರಿಸಿ ಎಲ್ಲರಿಗೂ ತಿಳಿಸುತ್ತಾರೆ. ಇದು ಮುಂದೆ ಈ ಮಗು ವೀರನಾಗಿ, ಉತ್ತಮ ಯೋಧನಾಗಿ ಜೀವನ ನಡೆಸಲಿ ಎಂಬುದರ ಸಂಕೇತವಾಗಿದೆ. ಗಂಡು ಮಗು ಹುಟ್ಟಿದ ತಕ್ಷಣ ಹರಳು ಗಿಡದ ದಂಟಿನಿಂದ ಮಾಡಿದ ಬಿಲ್ಲು ಬಾಣಗಳನ್ನು ಮಗುವಿನ ಕೈಯಲ್ಲಿ ಹಿಡಿಸುತ್ತಾರೆ. ಕೊಡವರು ಕ್ಷತ್ರಿಯರೆಂಬುವುದಕ್ಕೆ ಇದು ಸಾಕ್ಷಿಯಾಗಿದೆ.

ಹುಟ್ಟಿದ ಮಗು ಹೆಣ್ಣಾದರೆ ಮಗು ಹುಟ್ಟಿದಾಕ್ಷಣ ಗಂಟೆ ಅಥವಾ 'ತಳಿಯ ಮಣಿ' (ತಟ್ಟೆ) ಬಡಿದು ನಾದ ಮಾಡುತ್ತಾರೆ. ಇವರಲ್ಲಿ ಹೆಣ್ಣು, ಗಂಡು ಎಂಬ ಭೇದಭಾವ ಕಡಿಮೆ. ಇತ್ತೀಚೆಗೆ ಹೆಚ್ಚಾಗಿ ಆಸ್ಪತ್ರೆಯಲ್ಲಿ ಜನನವಾಗುವುದರಿಂದ ಇಂತಹ ಪದ್ಧತಿಗಳು ಕಣ್ಮರೆಯಾಗುತ್ತಿವೆ.

ಮಗು ಹುಟ್ಟಿದಾಕ್ಷಣ ಅದನ್ನು ಹದವಾದ ನೀರಿನಲ್ಲಿ ಸ್ನಾನ ಮಾಡಿಸಿ ಸ್ವಲ್ಪ ಬೆಲ್ಲ, ತುಪ್ಪ ಮತ್ತು ಕರಿಮೆಣಸಿನ ಪುಡಿ ಮಿಶ್ರಮಾಡಿ ತಿನ್ನಿಸಿ "ಬೆಲ್ಲ ಅಲಿವನ್ನಕೆ ಅಲಿ, ನೆಯಿ ಉರುವನ್ನಕೆ ಉರ್, ಮಳುವುನನ್ನಕೆ ಕಠಿಣ ಆಯಿತಿರ್" ಎಂದೂ ಹರಸುತ್ತಾರೆ. ಬೆಲ್ಲದಂತೆ ನಿನ್ನ ಗುಣ ಸಿಹಿಯಾಗಿ, ತುಪ್ಪ ಬಿಸಿಗೆ ಕರಗಿದಂತೆ, ಬೇರೆಯವರಿಗೆ ಕರುಣೆ ತೋರಿಸಿ ಹೃದಯ ಮರುಗಲೆಂದೂ, ಮೆಣಸಿನಕಾಯಿ ಖಾರದಂತೆ ನೀತಿ ಪಥದಲ್ಲಿ ನಿನ್ನ ವರ್ತನೆ ಯಾರ ದಾಕ್ಷಿಣ್ಯಕ್ಕೂ ಬಾಗದಿರಲಿ ಎಂಬುವುದು ಇದರ ಆಶಯವಾಗಿದೆ.

ಬಾಣಂತಿ ಮತ್ತು ಮಗುವಿನ ಆರೈಕೆ

ಕೊಡವರು ಬಾಣಂತಿಗೆ ನಾಟಿ ಮದ್ದನ್ನು ಹೆಚ್ಚಾಗಿ ಔಷಧಿಯ ರೂಪದಲ್ಲಿ ಕೊಡುತ್ತಾರೆ. ನಂಜು ಮತ್ತು ನೆಗಡಿ ಆಗದ ಹಾಗೆ ನರ್ವೀಸ ರಸವನ್ನು ಕುಡಿಸುತ್ತಾರೆ. ಗಾಳಿಸೊಪ್ಪಿನ ಜೊತೆಗೆ ಬೆಳ್ಳುಳ್ಳಿ ಹಾಗೂ ನಂಜಿನ ಬೀಜವನ್ನು

ಅರೆದು ರಸವನ್ನು ಕುಡಿಸುತ್ತಾರೆ. ಶೀತ ಆಗದ ಆಗೆ ಬಾಣಂತಿ ಸ್ನಾನದ ನಂತರ ಬ್ರಾಂದಿಯನ್ನು ಕುಡಿಸುವ ಪದ್ಧತಿ ಕೊಡವರಲ್ಲಿದೆ. ಹಾಗಲಕಾಯಿ, ಸಾರುಬಾಳೆ ಹಾಗೂ ಗಣಕೆಸೊಪ್ಪು, ಈರುಳ್ಳಿ, ಕರಿಮೆಣಸಿನಪುಡಿ, ಹಸುವಿನ ತುಪ್ಪವನ್ನು ಮುಖ್ಯವಾಗಿ ಔಷಧಿ ರೂಪದಲ್ಲಿ ನೀಡುತ್ತಾರೆ. ಬಾಣಂತಿಗೆ ಎಲೆ, ಅಡಿಕೆ ತಿನ್ನಿಸುವುದರಿಂದ ಹಲ್ಲುಗಳಿಗೆ ಶಕ್ತಿ ಮತ್ತು ಕ್ಯಾಲ್ಸಿಯಂ ಅಂಶಗಳು ದೊರೆಯುವುದೆಂಬ ನಂಬಿಕೆ ಇವರಲ್ಲಿದೆ. ದೇಹಕ್ಕೆ ಎಣ್ಣೆಯನ್ನು ಉಜ್ಜಿ ಸ್ನಾನ ಮಾಡುವುದು, ಕತ್ತು, ಬೆನ್ನು ಸೊಂಟ, ಕಾಲಿನ ಭಾಗಕ್ಕೆ ಕ್ರಮವಾಗಿ ಬಿಸಿನೀರು ಸ್ನಾನ ಮಾಡಿಸುವಿಕೆ, ಸ್ನಾನದ ನಂತರ 'ನೊಕ್ಕಿ ಸೊಪ್ಪಿ'ನ ಹೊಗೆ ಕೊಡುವುದರಿಂದ ರೋಗರುಜಿನಗಳಿಂದ ದೂರವಿರಬಹುದೆಂಬ ನಂಬಿಕೆಗಳೆಲ್ಲವೂ ವಿಶೇಷತೆಯಿಂದ ಕೂಡಿರುತ್ತದೆ.

ಮಗು ಹುಟ್ಟುವ ಕೋಣೆ ಶುಭ್ರವಾಗಿರಬೇಕು. ಹೊಗೆ ಬರುವ ಎಣ್ಣೆ ದೀಪವಿರಬಾರದು, ಹರಳೆಣ್ಣೆ ದೀಪ ಇಟ್ಟಿರಬೇಕು, ಎಂಬ ಹಲವಾರು ನಿಯಮಗಳ ಪ್ರಭಾವವಿದೆ. ಕೊಡವರಲ್ಲಿ ಮಗು ಜನಿಸಿದ ತಕ್ಷಣ ಕೈಯಲ್ಲಿ ಮುಟ್ಟದೆ ಸೂತಕದ ಹಿನ್ನಲೆಯಲ್ಲಿ ಬಟ್ಟೆ ಅಥವಾ ಹಾಸಿಗೆಯಲ್ಲಿ ಮಲಗಿಸದೆ ಬಾಳೆ ಎಲೆಯ ಮೇಲೆ ಮಲಗಿಸುತ್ತಾರೆ. ಹಳ್ಳಿಗಳಲ್ಲಿ ಬೆಳಗಿನ ಸಮಯ ಮಗುವಿಗೆ ಖಾಲಿ ಹೊಟ್ಟೆಗೆ ಹಾಗಲಕಾಯಿ ರಸ ಕುಡಿಸುತ್ತಾರೆ. ಕಣ್ಣಿಗೆ ಕಚ್ಚುಂಡೆ ಸುಳಿಯನ್ನು ಅರೆದು ರಸ ಹಿಂಡುತ್ತಾರೆ. ಹಾಗೂ ತೋರಳೆ ಸೊಪ್ಪಿನ ರಸವನ್ನು ಹಿಂಚುತ್ತಾರೆ. ಪಣಮದ್ದ್‌ರ ಪುಟ್ಟ್ ಎಂಬ ಹಿಟ್ಟನ್ನು ತಿನ್ನಿಸುತ್ತಾರೆ. ಬೇಂಬು, ಜಾಯಿಕಾಯಿಯನ್ನು ಅರೆದು ಕುಡಿಸುತ್ತಾರೆ. ಪ್ರತಿದಿನ ಎಣ್ಣೆ ಸ್ನಾನ ಮಾಡಿಸುವುದು, ಮುಂಜಾನೆ ಮಗುವನ್ನು ಸೂರ್ಯನ ಬೆಳಕಿಗೆ ಹಿಡಿಯುವುದರಿಂದ ಕಣ್ಣಿನಲ್ಲಿ ಕಂಡುಬರುವ ಹಳದಿ ಕಡಿಮೆಯಾಗುತ್ತದೆ. ಮಗುವಿನ ಪಕ್ಕದಲ್ಲಿ ಕಬ್ಬಿಣ ಇಟ್ಟರೆ, ಕೈ ಕಾಲಿಗೆ ಕರಿದಾರ ಕಟ್ಟಿದರೆ, ದುಷ್ಟಶಕ್ತಿ ಹಾಗೂ ದೃಷ್ಟಿ ಆಗುವುದಿಲ್ಲವೆಂಬ ನಂಬಿಕೆ ಇವರಲ್ಲಿದೆ.

ಮಗು ಪ್ರಸವದ ನಂತರದ ಹನ್ನೆರಡುದಿನಗಳವರೆಗೆ ಬಾಣಂತಿಯ ಕುಟುಂಬವು ಸೂತಕದ ಅವಧಿಯಲ್ಲಿ ಇರುತ್ತದೆ. ಈ ಅವಧಿಯಲ್ಲಿ ಇಡೀ ಕುಟುಂಬವು ಹುತ್ತರಿ, ಕೈಲ್ ಮೂಹೂರ್ತ ಮತ್ತು ಯಾವುದೇ ಗ್ರಾಮದ ಹಬ್ಬಗಳಲ್ಲಿ ಬಾಗಿಯಾಗಬಾರದೆಂಬ ನಿಯಮವಿದೆ. ಊರಿನ 'ಮಂದ್' ಅಥವಾ ದೇವಸ್ಥಾನಗಳಿಗೆ ಹೋಗಬಾರದು. ಆದರೆ ಮದುವೆ ಶುಭಕಾರ್ಯಕ್ಕೆ ಯಾವುದೇ ಕಟ್ಟುಪಾಡುಗಳಿಲ್ಲ. ಹನ್ನೆರಡನೇ ದಿನ ಮನೆಯನ್ನು ಮಡಿವಾಳರಿಂದ ಶುದ್ಧಮಾಡಿ ಸೂತಕ ತೆಗೆದು, ಮನೆಗೆ ತೀರ್ಥಪ್ರೋಕ್ಷಣೆ ಮಾಡುತ್ತಾರೆ.

ನಾಮಕರಣ

ಕೊಡವರ ಪದ್ಧತಿಯಲ್ಲಿ ಹನ್ನೆರಡನೆ ದಿನದಲ್ಲಿ ನಾಮಕರಣ ಶಾಸ್ತ್ರ. ಆ ದಿನವೇ ಮಗುವನ್ನು ಪ್ರಥಮವಾಗಿ ತೊಟ್ಟಿಲಿಗೆ ಹಾಕುವ ಸಂಭ್ರಮವಿರುತ್ತದೆ. ಹುಟ್ಟಿದ ನಕ್ಷತ್ರ, ರಾಶಿ, ಗಣಕೂಟವನ್ನು ನೋಡಿ ಹೆಸರನ್ನು ಹುಡುಕುವರು. ಅದರ ಜೊತೆ ಅವರ ಪೂರ್ವಿಕರ ಹೆಸರುಗಳಾದ ಅಪ್ಪಯ್ಯ, ಚಂಗಪ್ಪ, ಮುತ್ತಣ್ಣ, ಪೂಣಚ್ಚ, ಪೊನ್ನಮ್ಮ, ಕಾವೇರಮ್ಮ, ಚೋಂದಮ್ಮ ಮುಂತಾದ ಸಾಂಪ್ರದಾಯಿಕ

ಹೆಸರನ್ನಿಡುತ್ತಾರೆ. ಹನ್ನೆರಡು ದಿನದವರೆಗೆ ಮಗುವನ್ನು ಮುಚ್ಚಳ ಅಥವಾ ಇತರ ವಸ್ತುವಿನಲ್ಲಿ ಮಾಡಿದ ಹಾಸಿಗೆಯಲ್ಲಿ ಮಲಗಿಸಬೇಕು. ಹಾಸಿಗೆಯ ಕೆಳಗೆ ತಾಯಿ ಮತ್ತು ಮಗುವಿನ ಹೊಕ್ಕಳುಬಳ್ಳಿಯನ್ನು ಅಂದರೆ ಸಂಬಂಧ ಬೇರ್ಪಡಿಸಿದ ಚಾಕುವನ್ನು ಇಟ್ಟಿರುತ್ತಾರೆ. ಹನ್ನೆರಡನೇ ದಿನ ತಾಯಿ, ಮಗು ಇಬ್ಬರೂ ಸ್ನಾನ ಮಾಡಿ, ಮಡಿಯುಟ್ಟು, ದೇವರನ್ನು ಪ್ರಾರ್ಥಿಸಿ ಮಗುವನ್ನು ತೊಟ್ಟಿಲಿಗೆ ಹಾಕುವುದೇ ನಾಮಕರಣ ಶಾಸ್ತ್ರ.

ನಾಮಕರಣ ಶಾಸ್ತ್ರದ ಜನಪದ ಹಾಡು ಇಂತಿದೆ.

"ಪನ್ನೆರಂಡ್ ನಾಳ್ಲ್ – ಹನ್ನೆರಡನೇ ದಿನದಲ್ಲಿ
ಕುಂಞಕ್ ಪೆದಲ್ಟ್ಟ – ಮಗುವಿಗೆ ಹೆಸರಿಟ್ಟರು
ಎನ್ನೆಣ್ಣಿ ತರಿವಿರ ? – ಯಾವ ಹೆಸರೆಂದು ಗೊತ್ತೆ
ಅಲ್ಲತೊಂದು ಅಲ್ಲಲ್ಲ – ಬೇರೆ ಯಾವುದೂ ಅಲ್ಲ
ಕೆಂಗುದರೆ ಅಯ್ಯಣ್ಣ – ಕೆಂಪುಕುದುರೆ ಅಯ್ಯಣ್ಣ
ಚೀಲನಲ್ಲ ಅಯ್ಯಣ್ಣ – ಬುದ್ಧಿವಂತ ಅಯ್ಯಣ್ಣ ಎಂದು ಹಾಡುತ್ತಾರೆ.

ಹೀಗೆ ಸಂಪ್ರದಾಯವಾದ ಅಯ್ಯಣ್ಣ, ಸೋಮಯ್ಯ, ಕಾವೇರಪ್ಪ, ಮುತ್ತಪ್ಪ, ನಾಚಪ್ಪ, ಕಾರ್ಯಪ್ಪ, ಬೆಳ್ಳಿಯಪ್ಪ ಎಂಬ ಹೆಸರುಗಳನ್ನು ಗಂಡು ಮಗುವಿನ ನಾಮಕರಣ ಮಾಡುತ್ತಾರೆ. ಅದೇ ರೀತಿ ಹೆಣ್ಣು ಮಕ್ಕಳಿಗೆ ಪೊನ್ನಮ್ಮ, ಕಾವೇರಮ್ಮ, ಬೊಳ್ಳಮ್ಮ, ಚೋಂದಮ್ಮ, ಪೂವಮ್ಮ, ತಂಗವ್ವ, ಗೌರಮ್ಮ ಮುಂತಾದ ಹೆಸರನ್ನಿಡುತ್ತಾರೆ.

"ನಾಮಕರಣ ಶಾಸ್ತ್ರದಂದು ಗಂಡು ಮಗುವಿನ ಸೊಂಟಕ್ಕೆ ಹಾಗೂ ಕೈ, ಕಾಲಿಗೆ ಕರಿಯ ನೂಲಿನ ಉಡಿದಾರವನ್ನು ಕಟ್ಟುತ್ತಾರೆ. ಹೆಣ್ಣುಮಗುವಿಗೆ ಕೈಕಾಲುಗಳಿಗೆ ಮಾತ್ರ ಕಪ್ಪು ದಾರ ಕಟ್ಟುತ್ತಾರೆ. ದೃಷ್ಟಿತಾಗದಿರಲೆಂದು ಹೀಗೆ ಮಾಡುತ್ತಾರೆ. ಮಗುವನ್ನು ತೊಟ್ಟಲಿಗೆ ಹಾಕುವ ಮೊದಲು ಗುಂಡು ಕಲ್ಲನ್ನು ಮೂರು ಬಾರಿ ತೊಟ್ಟಲಿಗೆ ಹಾಕಿ ಪುನ: ತೆಗೆದು ನೆಲದಲ್ಲಿಡುತ್ತಾರೆ. 'ಕಲ್ಲಾಯಪ್ಪತ್ ಬದುಕ್' ಎಂದೂ ಆಶೀರ್ವಾದ ಮಾಡುತ್ತಾರೆ."[3] ಇದರ ಅರ್ಥ ಕಲ್ಲಿನಂತೆ ದೀರ್ಘಾಯುಸ್ಸಿನಿಂದ ಬದುಕು ಎಂದು ಈ ಶಾಸ್ತ್ರವನ್ನು ಮೂವರು ಮುತ್ತೈದೆಯರು ಅಥವಾ ಅವಿವಾಹಿತರು ಮಾಡುತ್ತಾರೆ. ತೊಟ್ಟಿಲಿನಲ್ಲಿ ಮಗುವನ್ನು ಮಲಗಿಸಿದ ನಂತರ ಮಗುವಿನ ಹೆಸರನ್ನು ಕರೆದು 'ಪಾಳ್ ಕೂಳಂಬಕ್ ಏಳು' ಅಂದರೆ ಹಾಲನ್ನವನ್ನು ಉಣ್ಣಲು ಏಳು ಎಂದು ಮಗುವನ್ನು ಎಚ್ಚರಿಸುತ್ತಾರೆ. ಕೊಡವರು ಪ್ರಾಚೀನ ಕಾಲದಿಂದಲೂ ಶ್ರೀಮಂತರು ಎಂಬುದನ್ನು ಮುಂದೆ ಹುಟ್ಟುವ ಮಗುವು ಕೂಡ ಶ್ರೀಮಂತನಾಗಿ ಬಾಳಬೇಕು ಎನ್ನಲು ಒಂದು ಚಿನ್ನದ ನಾಣ್ಯದಲ್ಲಿ ಹಾಲಿನ ಕೆನೆಯನ್ನಿರಿಸಿ ಮಗುವಿನ ಬಾಯಿಗೆ ತಿನ್ನಿಸಿ 'ಪೊನ್ನ್‌ರನ್ನತ ಬದ್‌ಕ್ ನೀಕಾಡ್' (ಬಂಗಾರದಂತಹ ಬಾಳು ನಿನ್ನದಾಗಲಿ) ಎಂದು ಹರಸುತ್ತಾರೆ.

ಮನುಸ್ಮೃತಿಯ ಪ್ರಕಾರ ಜನ್ಮದಿಂದ ಹತ್ತನೇ ಅಥವಾ ಹನ್ನೇರಡನೇ ದಿನದಂದು ನಾಮಕರಣ ಮಾಡುತ್ತಾರೆ. "ನಾಮಧೇಯಂ ದಶಮ್ಯಾಂತು

ದ್ವಾದಶ್ಯಾಂ ವಾಸ್ಯಕಾರಯೇತ್. ಪುಣ್ಯೇತಿಥೌ ಮುಹೂರ್ತೇ ವಾ ನಕ್ಷತ್ರೇ ವಾ ಗುಣಾನ್ವಿತೇ."[೪] ಎಂದರೆ, ಹುಟ್ಟಿದ ಹತ್ತನೇ ಅಥವಾ ಹನ್ನೆರಡನೇ ದಿನದಂದು ನಾಮಕರಣ ಮಾಡಬೇಕು. ಇದಾಗದಿದ್ದರೆ ಯಾವುದಾದರೂ ಒಳ್ಳೆಯ ದಿನದಲ್ಲಿ ಒಳ್ಳೆಯ ನಕ್ಷತ್ರ ಮೂಹೂರ್ತದಲ್ಲಿ ಮಾಡಬೇಕು ಎಂಬುವುದಾಗಿದೆ.

ಒಂದು ಚಿನ್ನದ ನಾಣ್ಯದ ಮೇಲೆ ಮೊಸರನ್ನು ಇರಿಸಿ ಮಗುವಿಗೆ ತಿನ್ನಿಸುತ್ತಾರೆ. ಪ್ರಥಮ ಬಾರಿಗೆ ಅನ್ನಪ್ರಾಶನ ಮಾಡುವರು. ಇತ್ತೀಚಿಗೆ ನಾಮಕರಣ ವಿಧಿಯನ್ನು ಅರವತ್ತು ದಿನಗಳ ನಂತರ ಮಾಡಲಾಗುತ್ತಿದೆ. ಹೆತ್ತ ತಾಯಿಗೆ ೬೦ ದಿನಗಳವರೆಗೆ ವಿಶ್ರಾಂತಿಯನ್ನು ಕೊಡುತ್ತಾರೆ. ಬಾಣಂತಿಯನ್ನು ಈ ಸಮಯದಲ್ಲಿ ವಿಶೇಷವಾಗಿ ಪ್ರತಿದಿನ ಎಣ್ಣೆ ಸ್ನಾನವನ್ನು ಮಾಡಿಸಿ, ಶರೀರದಲ್ಲಿ ಉಷ್ಣ ಹೆಚ್ಚಾಗದಂತೆ ವಿಶಿಷ್ಟವಾದ ಆಹಾರಗಳನ್ನು ಆ ಸಮಯದಲ್ಲಿ ಕೊಡುವುದು ಕಡ್ಡಾಯ.

'ಗಂಗಾಪೂಜೆಯನ್ನು ದಕ್ಷಿಣದಲ್ಲಿ ಬ್ರಾಹ್ಮಣರೆಲ್ಲರೂ ಮಾಡುತ್ತಾರೆ. ಹಾಗೆಯೇ ದೇವರ ತೀರ್ಥವನ್ನು ಮೂರು ಸಲ ತೆಗೆದುಕೊಳ್ಳುತ್ತಾರೆ.[೫] ಇದೇ ಪದ್ಧತಿ ಕೊಡವರಲ್ಲಿ ಬಾವಿಯಿಂದ ಮೂರು ಗುಟುಕು ನೀರು ತೆಗೆದುಕೊಳ್ಳುವ ರೂಪದಲ್ಲಿ ಉಳಿದಿರಬಹುದು ಎನಿಸುತ್ತದೆ.

ಬಾಣಂತಿಯು ಎರಡು ತಿಂಗಳ ವಿಶ್ರಾಂತಿಯ ಬಳಿಕ ತನ್ನ ದೈನಂದಿನ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮೊದಲು 'ಗಂಗಾ ಪೂಜೆ'ಯನ್ನು ಮಾಡಬೇಕು. ಇದನ್ನು 'ನೀರು ತೆಗೆಯುವ ಪದ್ಧತಿ' ಎನ್ನುತ್ತಾರೆ. ೬೧ನೇ ದಿನದಂದು ಬಾಣಂತಿಯು ಸ್ನಾನ ಮಾಡಿ ವಧುವಿನಂತೆ ಸಕಲ ವಸ್ತ್ರಾಭರಣಗಳಿಂದ ಅಲಂಕಾರಗೊಳ್ಳುವಳು. ಪ್ರತಿದಿನ ಬಾಣಂತಿಗೆ ನೀರು ಕಾಯಿಸುತ್ತಿದ್ದ ಕಡಾಯಿಯನ್ನು ಈ ದಿನ ಒಲೆಯಿಂದ ಇಳಿಸಿ ತಣ್ಣೀರು ತುಂಬಿ 'ಕಡಾಯತ್'ರ ಅಡಿ ತಂಪಾನನೆಕೆ ನೀಡ ಕೆಲ ತಂಪಾಡ್.[೬] ಎಂದು ಹಿರಿಯರು ಹರಸುವರು. (ಕಡಾಯಿಯ ತಳ ತಂಪಾದ ಹಾಗೆ ನಿನ್ನ ಹೊಟ್ಟೆ ತಂಪಾಗಲಿ) ಕುಟುಂಬದವರ ಜೊತೆ ಬಾವಿಯ ಹತ್ತಿರ ತೆರಳಿದ ಬಾಣಂತಿಯು ಮೂರು ವೀಳ್ಯದೆಲೆ, ಅಡಿಕೆ ಚೂರು, ಅಕ್ಕಿಯನ್ನು ಸೇರಿಸಿ ಬಾವಿಗೆ ಬಿಡುವಳು.

ಬಾಣಂತಿಯು ಬಾವಿಯಿಂದ ಮೂರು ಗುಟುಕು ನೀರು ಕುಡಿದು ಎರಡು ಚೆಂಬುಗಳಲ್ಲಿ ನೀರು ತುಂಬಿಸಿ ತಲೆಯ ಮೇಲೆ ಒಂದರ ಮೇಲೊಂದರಂತೆ ಚೆಂಬನ್ನಿಟ್ಟು ಮನೆಗೆ ತಂದು ಮನೆಯ 'ನೆಲ್ಲಕ್ಕಿ ನಡುಬಾಡೆ' (ಮಧ್ಯದಕೋಣೆ) ಯಲ್ಲಿರುವ ಹರಳೆಣ್ಣೆಯ ದೀಪದ ಮುಂದೆ ನಿಂತು ದೀಪಕ್ಕೆ ಅಕ್ಕಿಯನ್ನು ಪ್ರೋಕ್ಷಣೆ ಮಾಡಿ ನಮಸ್ಕರಿಸಿ ಹಿರಿಯರ ಕಾಲು ಮುಟ್ಟಿ ಆಶೀರ್ವಾದ ಪಡೆಯುತ್ತಾಳೆ. ಬಾವಿಯಿಂದ ನೀರು ತರುವಾಗ ಆಕೆಯ ಜೊತೆ ಇನ್ನಿಬ್ಬರು ಕನ್ಯೆಯರು ಅಥವಾ ಮುತ್ತೈದೆಯರು ನೀರು ಹೊತ್ತು ತರುವರು. ದೀಪದ ಬೆಳಕಲ್ಲಿ ದೈವವನ್ನು ಕಾಣುವ ಆಶಯ ಇಲ್ಲಿದೆ. ಇದಾದ ನಂತರ ಬಾಣಂತಿ ಮತ್ತು ಮಗು ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡುತ್ತಾಳೆ. ಊಟ–ಉಪಚಾರದೊಂದಿಗೆ ನೀರು ತೆಗೆಯುವ ಶಾಸ್ತ್ರ ಕೊನೆಯಾಗುತ್ತದೆ. ಶಾಸ್ತ್ರಕ್ಕೆ

ಬಂದ ನೆಂಟರಿಷ್ಟರು ಹೋಗುವಾಗ ಮಗುವಿನ ಕೈಗೆ ಹಣವನ್ನು ಕೊಡುವ ರೂಢಿಯೂ ಇದೆ.

ಮಗುವನ್ನು ತೊಟ್ಟಿಲಿಗೆ ಹಾಕುವ ಸಂದರ್ಭದ ಹಾಡು

"ಜೂವ ಜೂವ ಕುಞಯೇ
ಜೂ-------ಜೂ
ಈ ಮನೆರ ಬೊಳಕಾಯಿ
ದೇಶಕೊರ್ ತೋಣೆಯಾಯಿ
ಕೀರ್ತಿನಲ್ಲ ಪದಪೋಯಿ
ದೇವಂಗೊತ್ತ್ ಬಾಳ್‌ಲೊ...ಜೂ.....
ಕಾವೇರಮ್ಮೆ ಮಾತಾಯಿ
ಬೀರ್ಯತಂದ್ ಪೋತುಲ
ದೇಶನಲ್ಲ ಕೊಡವುಡ
ನಲ್ಲಂಗಾಯಿ ಬಾಳ್‌ಲೋ, ಜೂ....
ಎಚ್ಚಕಾಲ ಬದ್ದಿನೋ
ಚಾವದೊಂದೊ ತಪ್ಪಲೇ
ನೀತಿ ಭೀತಿ ಬಟ್ಟೆಲ್
ದೇವಂಗೊತ್ತ್ ಬಾಳ್‌ಲೊ
ಜೂ.....ಜೂ
ಅಪ್ಪಂಗೊರ್ ಪೆದಲಾಯಿ
ಅವ್ವಂಗೊರ್ ನೆಳಲಾಯಿ
ಅಣ್ಣತಂಗೆ ಒಕ್ಕಕ್
ನಲ್ಲದಾಯಿ ಬಾಳ್ ಲೊ
ಜೂ . ಜೂ

ಇಲ್ಲಿ ಮಗುವನ್ನು ಕುರಿತು 'ಕುಟುಂಬದ ಬೆಳಕಾಗಿ, ದೇಶದ ಸೇವಕನಾಗಿ, ದೇವರಿಗೆ ಒಪ್ಪುವ ಉತ್ತಮ ಜೀವನ ನಿನ್ನದಾಗಲಿ, ಕಾವೇರಿಮಾತೆ ನಿನ್ನನ್ನು ಸದಾ ಹರಸಿ ಕಾಪಾಡುತ್ತಾಳೆ. ಪ್ರೇಮ ಸಿಂಚಿತವಾದ ಪ್ರಖ್ಯಾತಿಯನ್ನು ಪಡೆಯುವ, ಶತ್ರುಗಳಿಗೆ ಅಂಜದೆ ಸರ್ವರಿಗೂ ಮಿತ್ರನಾಗಿರು ಎಲ್ಲರಿಗೂ ಎಷ್ಟೇ ವರ್ಷ ಬದುಕಿದರೂ ಸಾವು ನಿಶ್ಚಯ. ಆದ್ದರಿಂದ ಸನ್ಮಾರ್ಗದ ದೇವರಿಗೊಪ್ಪುವ ಜೀವನ ನಡೆಸು. ತಾಯಿ ನೆಲದ ಕೀರ್ತಿಗೆ ನಿನ್ನ ತನು ಮನ ಸವೆಯುವಂತಾಗಲಿ ತಂದೆತಾಯಿಯರಿಗೆ ಉತ್ತಮ ಹೆಸರು ಕೊಡುವ ಜೊತೆಗೆ ಸಹೋದರರಿಗೆ, ಕುಟುಂಬಕ್ಕೆ ಉತ್ತಮ ನೆರಳಾಗಿ, ರಕ್ಷಕನಾಗಿ, ಬಾಳು ಎಂದು ಹಾರೈಸುವ ಈ ಸಂದರ್ಭವು ಕೊಡವರ ದೇಶ ಪ್ರೇಮವು ತೊಟ್ಟಿಲಿನಿಂದಲೇ ಆರಂಭವಾಗುತ್ತದೆ ಎಂಬುದರ ಸಂಕೇತವಾಗಿದೆ.

ಕಚ್ಚೆಪಣ ಕೆಟ್ಟುವೊ

ಮಗುವಿಗೆ ನಾಮಕರಣ ಅಥವಾ ತೊಟ್ಟಿಲಿಗೆ ಹಾಕುವ ಸಂದರ್ಭದಲ್ಲಿ ಹಾಜರಿರುವ ಪ್ರತಿಯೊಬ್ಬರೂ ಮಗುವಿಗೆ ಉಡುಗೊರೆ ನೀಡಿ ಆಶೀರ್ವಾದ ನೀಡುವ ಆಚಾರ ಕೊಡವ ಸಂಸ್ಕೃತಿಯಲ್ಲಿದೆ. ಅದರಲ್ಲಿ ಹೆಣ್ಣು ಮಗುವಿಗೆ ಸಂಬಂಧಿಸಿದ ನಾಮಕರಣದ ಸಂದರ್ಭದಲ್ಲಿ ಆ ಹೆಣ್ಣುಮಗುವನ್ನು ಅಲ್ಲಿ ನೆರೆದಿರುವ ಯಾರಾದರೊಬ್ಬ ಬಂಧುಗಳು, ಪರಿಚಯಸ್ಥರು, ಸಂಬಂಧಿಕರು ತಮ್ಮ ಮಗನಿಗೆ ಇಲ್ಲವೆ ಮೊಮ್ಮಗನಿಗೆ ಆ ಹೆಣ್ಣುಮಗುವನ್ನು ನೀಡಬೇಕು ಎಂದು ಕೇಳುತ್ತಾರೆ. ಅಂದರೆ ಪ್ರೌಢರಾದ ಮೇಲೆ ಈಕೆಯನ್ನು ವಿವಾಹ ಮಾಡಿಕೊಡಬೇಕು ಎಂಬ ಬೇಡಿಕೆಯನ್ನು ಮುಂದಿಡುತ್ತಾರೆ. ಈ ಬೇಡಿಕೆಯನ್ನು ಕೇಳಲು ಎಲ್ಲರಿಗೂ ಹಕ್ಕಿರುವುದಿಲ್ಲ. ಆ ಹೆಣ್ಣು ಮಗುವಿನ ಕುಟುಂಬದ ಪರಿಚಯಸ್ಥರು, ಆತ್ಮೀಯರು, ಬಂಧು, ಬಳಗದವರು ಮಾತ್ರ ಕೇಳಬಹುದು. ಹೆಣ್ಣು ಹೆತ್ತ ಕುಟುಂಬ ಇದಕ್ಕೆ ಒಪ್ಪಿಗೆ ಕೊಟ್ಟ ಸಂದರ್ಭದಲ್ಲಿ ಈ "ಕಚ್ಚೆ ಪಣಕೆಟ್ಟುವೊ" ಪದ್ದತಿ ನಡೆಯುತ್ತದೆ. ಈ ಪದ್ದತಿಯಲ್ಲಿ ಹೆಣ್ಣು ಮಗುವಿನ ಕುಟುಂಬದವರ ಒಪ್ಪಿಗೆಯೊಡನೆ ಸಂಬಂಧ ಬೆಳೆಸಲು ಇಚ್ಚಿಸುವ ಬಾಲಕನ ಕಡೆಯವರು ಒಂದು ಮೊತ್ತದ ಹಣವನ್ನು ತೊಟ್ಟಿಲ ಹಗ್ಗಕ್ಕೆ ಕಟ್ಟುತ್ತಾರೆ. ಇದರಂತೆ ಆಕೆ ಪ್ರಾಪ್ತವಯಸ್ಕಳಾದ ನಂತರ ಅದೇ ಹುಡುಗನಿಗೆ ವಿವಾಹ ಮಾಡಿಕೊಡು ತ್ತಾರೆಂಬ ಮಾಹಿತಿಯನ್ನು ನಾಪೋಕ್ಲುವಿನ ಬೋಪಯ್ಯನವರು ಮಾಹಿತಿ ನೀಡಿದ್ದಾರೆ.

ಈ ಪದ್ಧತಿ ಮೇಲ್ನೋಟಕ್ಕೆ ಬಾಲ್ಯವಿವಾಹದಂತೆ ಕಂಡುಬಂದರೂ ಇದು ಬಾಲ್ಯವಿವಾಹದಂಥ ಅನಿಷ್ಟ ಪದ್ಧತಿ ಅಲ್ಲವೆಂಬ ವಿಚಾರವನ್ನು ಹೇಳಲೇಬೇಕು. ಏಕೆಂದರೆ ಹುಡುಗ ಹುಡುಗಿಗೆ ಬಾಲ್ಯದಲ್ಲಿ ವಿವಾಹ ಮಾಡುತ್ತಿರಲಿಲ್ಲ. ಇದು ಹುಡುಗನಿಗೆ ಹುಡುಗಿಯನ್ನು ಗುರುತಿಸಿಡುವ ಒಂದು ಪದ್ಧತಿ ಅಷ್ಟೆ. ಮದುವೆ ನಡೆಯುತ್ತಿದ್ದದ್ದು ಅವರು ಪ್ರೌಢರಾದಾಗ ಮಾತ್ರ. ಅದೂ ಆ ಜೋಡಿ ಪ್ರೌಢರಾದ ನಂತರದಲ್ಲಿಯೂ ಪರಸ್ಪರ ಒಪ್ಪಿದಾಗ ಮಾತ್ರ. ಇಲ್ಲದಿದ್ದ ಸಂದರ್ಭದಲ್ಲಿ ಎರಡೂ ಕುಟುಂಬಗಳು ಈ ಕಚ್ಚೆಪಣ ಸಂಬಂಧವನ್ನು ಕಡಿದುಕೊಳ್ಳುತ್ತಾರೆ. ಅಂದು ಬಾಲಕನ ಕಡೆಯವರು ಕಟ್ಟಿದ ಹಣದ ಮೊತ್ತ ಅಥವಾ ಅದಕ್ಕೆ ಸಮಾನವಾದ ಯಾವುದೇ ಕಾಣಿಕೆಯನ್ನು ಹುಡುಗನ ಕಡೆಯವರಿಗೆ ಹಿಂತಿರುಗಿಸಿದರೆ ಅಲ್ಲಿಗೆ ಅದು ಮುಗಿಯಿತು. ಯಾವ ಮನಸ್ತಾಪವೂ ಇಲ್ಲದೆ ಯಾವ ಕಲಹವೂ ಇಲ್ಲದೆ ಆತ್ಮೀಯತೆಯಲ್ಲಿಯೇ ಅವರ ಬಂಧುತ್ವ ಮುಂದುವರೆಯುತ್ತದೆ. ಅದರಿಂದಾಗಿ ಇದು ಬಾಲ್ಯವಿವಾಹ ಅಲ್ಲವೆಂಬ ತೀರ್ಮಾನಕ್ಕೆ ಬರಬಹುದು. ಕೊಡವ ಸಂಸ್ಕೃತಿಯಲ್ಲಿ ಹೆಣ್ಣಿನ ಶೋಷಣೆಗೆ ಕಾರಣವಾದ ವರದಕ್ಷಿಣೆ ಪದ್ಧತಿಯಾಗಲಿ, ಬಾಲ್ಯವಿವಾಹವಾಗಲಿ ಎಲ್ಲೂ ಕಂಡುಬರುವುದೇ ಇಲ್ಲ.

ಪ್ರೌಢ ಸಂಸ್ಕಾರಗಳು

ಪ್ರತಿ ಹೆಣ್ಣು ಮಕ್ಕಳು ನಿಸರ್ಗದ ನಿಯಮದಂತೆ ಹತ್ತರಿಂದ ಹದಿನಾರನೆಯ ವಯಸ್ಸಿನಲ್ಲಿ ಮೈ ನೆರೆಯುತ್ತಾರೆ ಇದು ಬಾಲ್ಯಾವಸ್ಥೆಯಿಂದ ತಾರುಣ್ಯಕ್ಕೆ ತಲುಪಿದ

ಸಂಕೇತವೂ ಆಗಿರುತ್ತದೆ. ಹೆಣ್ಣು ಮೈ ನೆರೆಯುವುದಕ್ಕೆ ಸಂವಾದಿಯಾಗಿ ರಜಸ್ವಲೆ, ಋತುಮತಿ, ಪುಷ್ಪವತಿ ದೊಡ್ಡವಳಾದವಳು ಎನ್ನುತ್ತಾರೆ. ಮೈ ನೆರೆಯುವಿಕೆಯನ್ನು ಮೈಲಿಗೆ ಎಂದು ಶುದ್ಧೀಕರಿಸುವ ವಿಧಿ ಅನುಸರಿಸುತ್ತಾರೆ. ಶುದ್ಧ ಆಗುವವರೆಗೆ ಹೆಣ್ಣನ್ನು ಏಕಾಂತದಲ್ಲಿ ಕೂರಿಸಲಾಗುತ್ತದೆ.

ಮೈ ನೆರೆದ ಮೊದಲ ಐದು ದಿನಗಳವರೆಗೆ ಹೆಣ್ಣು ಮಗಳು ಕುಳಿತ ಜಾಗವನ್ನು ಬಿಟ್ಟು ಕದಲುವಂತಿಲ್ಲ. ಅದೇ ಸ್ಥಳದಲ್ಲಿ ಊಟ ನಿದ್ರೆಮಾಡ ಬೇಕಾಗುತ್ತದೆ. ಹಿಂದಿನ ಕಾಲದಲ್ಲಿ ಇಂತಹವರು ಬೇರೆಯವರನ್ನು ಹಾಗೂ ಚಿಕ್ಕ ಮಕ್ಕಳನ್ನು ಮುಟ್ಟುವಂತಿರಲಿಲ್ಲ. ಮುಟ್ಟಿದ್ದರೆ "ಮುಟ್ಟು ದೋಷ" ತಗುಲುತ್ತದೆಂದು ಭಾವಿಸುತ್ತಿದ್ದರು. ದೋಷ ತಗುಲಿದರೆ ಮಕ್ಕಳು ಒಣಗುತ್ತವೆಂಬ ಭಾವನೆಯಿತ್ತು. ಇಂದಿಗೂ ಕೂಡ ಮುಟ್ಟಾದವರು ತುಳಸಿಗಿಡ ಮತ್ತು ವೀಳ್ಯದೆಲೆ, ನಾಗದಾಳಿ ಗಿಡವನ್ನು ಮುಟ್ಟಬಾರದೆಂದೂ ಮುಟ್ಟಿದರೆ ಒಣಗಿ ಹೋಗುತ್ತದೆಂಬ ಪ್ರತೀತಿಯೂ ಇದೆ. ಹಾಗಯೇ ಎಳೆ ಮಗುವನ್ನು ಮುಟ್ಟಾದವರು ಮಾತನಾಡಿಸಿದರೆ ಮಗುವಿಗೆ ಹೊಟ್ಟೆನೋವು ಭೇದಿಯಾಗುವುದೆಂದು ಮಗುವಿನಿಂದ ದೂರವಿರಲು ಹೇಳುತ್ತಾರೆ. ಈ ವ್ಯವಸ್ಥೆ ಎಲ್ಲಾ ಸಮುದಾಯಗಳಲ್ಲೂ ಕಂಡುಬರುವಂತಾಗಿದೆ. ಕೊಡವರು ಯಾವುದೇ ರೀತಿಯ ಕಟ್ಟುಪಾಡನ್ನು ಪಾಲಿಸುವುದಿಲ್ಲ. ಆದಷ್ಟು ಗೌಪ್ಯತೆಯನ್ನು ಕಾಪಾಡಿಕೊಳ್ಳುತ್ತಾರೆ. ಹಿಂದಿನ ದಿನಗಳಲ್ಲಿ ಒಂಬತ್ತು ದಿನಗಳು ಹೊಲೆದಾಣದಲ್ಲಿ ಕೂಡಿಸಿ ಆರೈಕೆ ಮಾಡುತ್ತಿದ್ದರು. ಹತ್ತನೆಯ ದಿನ ಶುದ್ಧ ಸ್ನಾನವಾದ ಮೇಲೆ ಎರಡು ತಿಂಗಳು ವಿಶ್ರಾಂತಿ ಪಡೆಯುತ್ತಿದ್ದಳು,

ನಂತರ ಶುಕ್ರವಾರ, ಮಂಗಳವಾರವನ್ನು ಹೊರತುಪಡಿಸಿ 'ಪೊಕೋಲ್ ನೆರಪೊ' (ಹೋಕೋಲಿನ ಆಟ) ಏರ್ಪಡಿಸುತ್ತಿದ್ದರು. ಹನ್ನೊಂದು ದಿನದವರೆಗೆ ಎಣ್ಣೆ ಸ್ನಾನ ಮಾಡಿಸುತ್ತಿದ್ದರು. ಶಕ್ತಿ ಕೊಡುವಂತಹ ಆಹಾರವನ್ನು ಕೊಡುತ್ತಿದ್ದರು. ಹನ್ನೊಂದು ದಿನ ಮನೆಯ ಹೊರಗಡೆ ಹೋಗುವಂತಿಲ್ಲ. ಕೊನೆಯ ದಿನ ನೆಂಟರಿಷ್ಟರನ್ನು ಕರೆದು ಮೈ ನೆರೆದ ಹೆಣ್ಣಿಗೆ ಸ್ನಾನ ಮಾಡಿಸಿ ಅಲಂಕಾರ ಮಾಡಿ, ಒಂದು ತಟ್ಟೆಯಲ್ಲಿ ಅರಿಶಿನ, ಕುಂಕುಮ, ಹೂ, ತೆಂಗಿನಕಾಯಿ, ಬಾಳೆಹಣ್ಣು ವೀಳ್ಯದೆಲೆ, ಅಡಿಕೆ ಇಟ್ಟು ದೀಪವನ್ನು ಕೈಯಲ್ಲಿಡಿದು ಬಾವಿ ಬಳಿ ತೆರಳಿ ಗಂಗಾ ಪೂಜೆ ಮಾಡಿ ಒಂದು ಚೊಂಬು ನೀರನ್ನು ತಂದು ಕನ್ನಿಕೊಂಬರೆಯಲ್ಲಿ ಇಡುತ್ತಾರೆ. ನಂತರ ಹಿರಿಯರ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆಯಬೇಕು. ಹಿಂದೆಲ್ಲ ಹುಡುಗಿಯರು ಹೊರಗಡೆ ಹೋಗುವಾಗ ಮುಖಕ್ಕೆ ಮುಸುಕು ಹಾಕಬೇಕಾಗುತ್ತಿತ್ತು. ಹಾಗೂ ಮದುವೆ ಆಗುವವರೆಗೂ ಈ ನಿಯಮವನ್ನು ಪಾಲಿಸಬೇಕಿತ್ತು. ಈ ನಿಯಮ ಮುಸ್ಲಿಂರ ಬುರ್ಖಾ ಪದ್ಧತಿಯನ್ನು ಹೋಲುವುದಾದರೂ ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳಲ್ಲಿ ಶೈಕ್ಷಣಿಕ ಮಟ್ಟ ಹೆಚ್ಚಾದಂತೆ ಈ ನಿಯಮಗಳು ಕಣ್ಮರೆಯಾಗಿವೆ.

ಆಹಾರ

ಮೈ ನೆರೆದ ಹೆಣ್ಣು ಮಗಳಿಗೆ ಹನ್ನೊಂದು ದಿನಗಳವರೆಗೆ ಮೃದು ಆಹಾರ ಕೊಡುತ್ತಾರೆ. ಕೊಡವರು ಈ ಸಮಯದಲ್ಲಿ ಶಾಖಭರಿತವಾಗಿರಲು,

ಕೋಳಿಮಾಂಸವನ್ನು ಹುರಿದು ಕೊಡುತ್ತಾರೆ. ಗಾಳಿಸೊಪ್ಪು ಮತ್ತು ಕರಿಮೆಣಸು, ಬೆಳ್ಳುಳ್ಳಿಯನ್ನು ಅರೆದು ರಸವನ್ನು ಕುಡಿಸುತ್ತಾರೆ. ಆ ರಸಕ್ಕೆ ಕಬ್ಬಿಣದ ಕತ್ತಿಯನ್ನು ಕಾಯಿಸಿ, ಅದ್ದಿ ಕುಡಿಸುವುದರಿಂದ ಶೀತಬಾಧೆ, ಹೊಟ್ಟೆನೋವು ಕಡಿಮೆ ಯಾಗುತ್ತದೆಂಬ ನಂಬಿಕೆಯಿದೆ. ಎಳ್ಳಿನ ಜೊತೆಗೆ ಬೆಲ್ಲ ಸೇರಿಸಿ ಉಂಡೆಯನ್ನಾಗಿ ಮಾಡಿ ತಿನ್ನಿಸುವರು. ಉದ್ದಿನ ಬೇಳೆ ಮತ್ತು ಮೆಂತ್ಯವನ್ನು ಬೆರೆಸಿ ಉಂಡೆ ಮಾಡಿ ಕೊಡುವುದುಂಟು ಇದರಿಂದ ಹೆಣ್ಣು ಮಕ್ಕಳು ಅಂದವಾಗಿ, ಶಕ್ತಿವಂತವಾಗುತ್ತಾರೆಂದು ಭಾವಿಸಲಾಗಿದೆ. ಆಹಾರದ ಬಗ್ಗೆ ಜನಪದರ ಈ ಹಾಡು ನೈಜತೆಯನ್ನು ಎತ್ತಿ ಹಿಡಿಯುತ್ತದೆ.

"ಕನ್ಯೆ ಮೈ ನೆರೆದಾಳ ಕನ್ನೆಗೇ ನೊಯ್ಯಲೆ
ಸಣ್ಣ ಶಾವೀಗಿ ಸಕ್ಕರಿ ॥ಸೊ॥
ಸುಬ್ಬಿ ಮೈ ನೆರೆದಾಳ ಸುಬ್ಬಿಗೇ ನೊಯ್ಯಲೆ
ಕೊಬ್ಬರಿ ಕಾರ ತಿಳಿದುಪ್ಪ ॥ಸೊ॥ ಹರದಿ ಮೈ ನೆರೆದಾಳ ಹರದೀಗೇ ನೊಯ್ಯಲೇ
ಪರಡಿ ಪಾಯಸ ರಸಯಸ ರಸಪಾಕ ॥ಸೊ॥

ಆದರೆ ಕೊಡವರಿಂದು ಆಧುನಿಕ ಜೀವನ ವಿಧಾನಕ್ಕೆ ಒಗ್ಗಿಕೊಂಡಿದ್ದಾರೆ.

ಮದುವೆ

ಜಗತ್ತಿನ ಎಲ್ಲೆಡೆ ಒಂದಲ್ಲಾ ಒಂದು ವಿಧದಲ್ಲಿ ಕಂಡು ಬರುವ ಸಾಮಾಜಿಕ ವ್ಯವಸ್ಥೆಯೇ ಮದುವೆ. ಕುಟುಂಬ ಮತ್ತು ವಿವಾಹ ಯಾವುದೇ ಸಮಾಜದ ಮೂಲಭೂತ ಅವಶ್ಯ ಮತ್ತು ಅನಿವಾರ್ಯ ಸಂಸ್ಥೆಗಳು. ಅವು ಒಂದೇ ನಾಣ್ಯದ ಎರಡು ಮುಖಗಳಂತೆ ಪರಸ್ಪರ ಪೂರಕ, ಸ್ತ್ರೀ ಪುರುಷರು ಎರಡು ಸಂಸ್ಥೆಗಳ ಆಧಾರ ಘಟಕಗಳು. ಕುಟುಂಬ ವ್ಯವಸ್ಥೆಗೆ ವಿವಾಹವೇ ಹೆಬ್ಬಾಗಿಲು, ವಿವಾಹ ಸಂಸ್ಥೆಗೆ ಕುಟುಂಬ ಪದ್ಧತಿಯೇ ಅಡಿಗಲ್ಲು.

ಪ್ರಾಚೀನ ಮಾನವನಿಗೆ ಮದುವೆಯ ಬಂಧನವಿಲ್ಲದೆ ಸ್ವೇಚ್ಛಾಚಾರಿಯಾಗಿರಲು ಅವಕಾಶವಿತ್ತು. ಕ್ರಮೇಣ ವಿವೇಕವು ಮೂಡಿ ನಾಗರಿಕ ಮಾನವ ಜೀವನಕ್ಕೆ ಮದುವೆಯು ಅತ್ಯವಶ್ಯಕವಾಯಿತು. ಭಾರತ ದೇಶದ ವಿವಾಹ ಪದ್ಧತಿಗಳು ವೇದೋಕ್ತ ಮತ್ತು ಪುರಾಣೋಕ್ತ ಎಂಬ ಎರಡು ವಿಧಾನಗಳಲ್ಲಿ ನಡೆಯುತ್ತಿದ್ದವು. ವೇದೋಕ್ತ ವಿಧಾನಗಳಲ್ಲಿ ಮಂತ್ರ ವಿಧಾನಗಳನ್ನು ಕಾಣಬಹುದಾಗಿತ್ತು. ಪುರಾಣೋಕ್ತ ವಿವಾಹದಲ್ಲಿ ಮಂತ್ರಗಳಿಲ್ಲ. ಈ ರೀತಿಯ ವಿವಾಹವನ್ನು ಅನೇಕ ಹಿಂದೂ ಪಂಗಡಗಳು ಅನುಸರಿಸುತ್ತಿದ್ದವು. ಮಾನವ ಜೀವನದಲ್ಲಿ ಮದುವೆಗೆ ಪ್ರಮುಖವಾದ ಸ್ಥಾನವಿದೆ. ಗೃಹಸ್ಥಾಶ್ರಮಕ್ಕೆ ಪ್ರವೇಶ ಮಾಡುವಂತಹ ಸಂಸ್ಕಾರವೇ 'ವಿವಾಹ ಸಂಸ್ಕಾರ' ಇದು ವೈದಿಕ ಮತ್ತು ಲೌಕಿಕ ಆಚಾರಗಳ ಸಂಗಮವಾಗಿರುತ್ತದೆ. ವಿವಾಹದ ಆಚರಣೆಯಲ್ಲಿ ನಾನಾ ಪ್ರಕಾರವಾದ ಜನಪದ-ಧರ್ಮ ದೇಶಧರ್ಮ, ಗ್ರಾಮಧರ್ಮ, ಕಾಲಧರ್ಮ, ಕುಲಧರ್ಮ ಇವೆಲ್ಲವೂ ಇರುತ್ತಿದ್ದವು.

ಮದುವೆಗಳಲ್ಲಿಯ ಅನೇಕ ಸಂಪ್ರದಾಯಗಳನ್ನು ವೈಜ್ಞಾನಿಕ ಆಧಾರದಿಂದ ರಚಿಸಲಾಗಿದೆ. ಅದನ್ನು ಬದುಕಿನಲ್ಲಿ ಗಟ್ಟಿಗೊಳಿಸುವ ಸಲುವಾಗಿ ಅನೇಕ ಪೌರಾಣಿಕ

ಕತೆಗಳಲ್ಲಿ ಆಚರಣೆಯನ್ನು ಕಟ್ಟುನಿಟ್ಟಾಗಿ ದಾಖಲಿಸಲಾಗಿದೆ. ಅವುಗಳಲ್ಲಿ ಅತ್ಯಂತ ಮುಖ್ಯವಾಗಿ ಗೋತ್ರ, ಜಾತಕ, ಕೌಟುಂಬಿಕ ಹಿನ್ನಲೆ, ಮೂಹೂರ್ತ' ಕನ್ಯಾದಾನ, ಕಂಕಣಧಾರಣೆ, ಅಕ್ಷತೆ ಧಾರಣೆ, ಮಾಂಗಲ್ಯಧಾರಣೆ, ಪ್ರದಕ್ಷಿಣೆ, ಸಪ್ತಪದಿ ಕಾಲುಂಗುರಧಾರಣೆ; ಅರುಂಧತಿ ನಕ್ಷತ್ರವೀಕ್ಷಣೆ ಮುಂತಾದವು ಅತ್ಯಂತ ಪ್ರಮುಖವಾದವು. ವರಪೂಜೆ, ಕಾಶೀಯಾತ್ರೆ, ನಾಗೋಲಿ ಮುಂತಾದವುಗಳಿಗೆ ಸಾಮಾಜಿಕ ಸ್ಥಾನಮಾನ ಉಂಟು; ಆದರೆ ವೈಜ್ಞಾನಿಕ ಮತ್ತು ವೈಚಾರಿಕ ಹಿನ್ನೆಲೆ ಇಲ್ಲ.

ಮೇಲೆ ಹೇಳಿದ ಸಂಪ್ರದಾಯಗಳು ಹಿಂದೂ ಸಂಸ್ಕೃತಿಯ ಬಹುತೇಕ ಸಮುದಾಯಗಳಲ್ಲಿ ಕಂಡು ಬರುತ್ತದೆಯಾದರೂ ಪ್ರಸ್ತುತ ಅಧ್ಯಯನ ವ್ಯಾಪ್ತಿಗೆ ಬರುವ "ಕೊಡವ ಮದುವೆಯ ಸಂಸ್ಕಾರ"ಗಳನ್ನು ಪರಿಶೀಲಿಸಿದಾಗ ಇಡೀ ಭಾರತೀಯ ಸಂಸ್ಕೃತಿಗಿಂತ ಭಿನ್ನವಾಗಿರುವಂತಹ ಕೆಲವೊಂದು ಕುತೂಹಲ ವಿಚಾರಗಳು ಬೆಳಕಿಗೆ ಬರುತ್ತವೆ. ಅವುಗಳನ್ನು ಕುರಿತಂತೆ ಇಲ್ಲಿ ವಿಸ್ತೃತವಾಗಿ ಪರಿಶೀಲಿಸಲಾಗಿದೆ.

ಕೊಡವರ ವಿವಾಹ ಪದ್ಧತಿಯು ಕೆಲವು ವೈಶಿಷ್ಟ್ಯತೆಗಳಿಂದ ಕೂಡಿದೆ. ಗಂಡಿನ ಮನೆಯಲ್ಲಿ ಗಂಡಿನ ವಿವಾಹ ಶಾಸ್ತ್ರಗಳೂ, ಹೆಣ್ಣಿನ ಮನೆಯಲ್ಲಿ ಹೆಣ್ಣಿನ ವಿವಾಹ ಶಾಸ್ತ್ರಗಳು ನಡೆಯುತ್ತವೆ. ಕೊನೆಯಲ್ಲಿ ಗಂಡಿನವರು ಹೆಣ್ಣಿನ ಮನೆಗೆ ಬಂದು ಹೆಣ್ಣನ್ನು ಕರೆದುಕೊಂಡು ಹೋಗುತ್ತಾರೆ. ಕೊಡವರಲ್ಲಿ ಹೆಣ್ಣಿಗೆ ತಾಳಿ ಕಟ್ಟುವ ಪದ್ಧತಿ ಇಲ್ಲ. ವಧುವಿನ ತಾಯಿಯು ತಾಳಿಯ ಬದಲಿಗೆ 'ಪತ್ತಾಕ್' ಎಂಬ ಸಂಪ್ರದಾಯದ ಒಡವೆಯನ್ನು ಕುತ್ತಿಗೆಗೆ ಹಾಕುತ್ತಾಳೆ. ಕೊಡವರ ಮದುವೆ ಸಂಸ್ಕಾರಗಳ ವಿಧಿಗಳಲ್ಲಿ ಬ್ರಾಹ್ಮಣ ಪೌರೋಹಿತ್ಯವಿಲ್ಲ. ಇದನ್ನು ಭೌಗೋಳಿಕ ಮತ್ತು ಇತರ ಕಾರಣಗಳಿಂದ ನೋಡಿದಾಗ ಕೊಡಗು ಮಲೆನಾಡು ಪ್ರದೇಶವಾದ ಕಾರಣ ಇಲ್ಲಿಯ ಜನ ವ್ಯವಸಾಯ ಮತ್ತು ವೃತ್ತಿಯ ಬಿಡುವಿಲ್ಲದ ವ್ಯವಹಾರದಲ್ಲಿ ಪೌರೋಹಿತ್ಯ ವರ್ಗದವರು ಅಲಭ್ಯವಾದ ಕಾರಣ ಬ್ರಾಹ್ಮಣ ಪೌರೋಹಿತ್ಯ ನಿಂತು ಹೋಗಿರಬಹುದು. ಬುಡಕಟ್ಟು ಮೂಲದ ಪ್ರಾಚೀನ ಪದ್ಧತಿಯ ಪ್ರಭಾವದ ಕಾರಣವೂ ಅದಕ್ಕಿರಬಹುದು.

ಹಿಂದೆ ಕ್ಷತ್ರಿಯರಿಗೆ ಬ್ರಾಹ್ಮಣರ ನಿಕಟ ಸಂಪರ್ಕವಿದ್ದುದರಿಂದ ಅದೇ ಸಂಸ್ಕಾರದಿಂದ ಕೊಡವರು ಬ್ರಾಹ್ಮಣರನ್ನು ಬೇರೆಡೆಯಿಂದ ಕರೆಯಿಸಿಕೊಳ್ಳುವ ಪದ್ಧತಿಯನ್ನು ರೂಢಿಸಿಕೊಂಡಿರಬಹುದು. ಕಾಲಕ್ರಮೇಣ ಅವರು ದೇಶೀಯ ಪದ್ಧತಿಗಳ ಪರಂಪರೆಯ ಕಾರಣ ಎಲ್ಲಾ ವಿಧಿಗಳು ಕೇವಲ ಹಿರಿಯರ ಮುಂದಾಳತ್ವದಲ್ಲಿ ನಡೆದುಬಂದಿರಬಹುದು ಎಂದು ತೋರುತ್ತದೆ. ಕೇರಳ ಕೊಡಗಿನ ಗಡಿಭಾಗವಾದ ಕಾರಣ ಇಲ್ಲಿ ಮಲೆಯಾಳ ಪದ್ಧತಿಗಳು ಬಹಳವಾಗಿ ಬಂದು ಸೇರಿದ ಪರಿಣಾಮವಾಗಿ ಮಂತ್ರ ವಿಧಗಳು ಬಿಟ್ಟು ಹೋಗಿವೆ.

ಕೊಡವ ಸಂಪ್ರದಾಯಗಳಲ್ಲಿ ವಿವಾಹ ಪದ್ಧತಿಯ ವಿವೇಚನೆ ಅತಿ ಮುಖ್ಯವಾಗಿದೆ. ಪ್ರೌಢಾವಸ್ಥೆಗೆ ಬಂದ ಅನಂತರ ಗಂಡು ಹೆಣ್ಣಿನ ಒಪ್ಪಿಗೆ ಪಡೆದು ವಿವಾಹ ನಿಶ್ಚಯ ಮಾಡುತ್ತಾರೆ. ಹಿಂದಿನ ಸಂಪ್ರದಾಯದಂತೆ ಜಾತಕ

ನೋಡುವುದಾಗಲಿ, ದೇವರಲ್ಲಿ ಹೂವು ಕೇಳುವುದಾಗಲಿ ಇತ್ತೀಚೆಗೆ ಕಡಿಮೆಯಾಗಿ ಹೆಣ್ಣು ಗಂಡಿನ ಗಣಕೂಟ ಹೊಂದಿಕೆ ಮಾಡಿ ಮದುವೆ ಮಾಡುತ್ತಾರೆ.

ಗಂಡಿನ ಕಡೆಯವರು ಹೆಣ್ಣನ್ನು ಕೇಳಲು ಹೆಣ್ಣಿನ ಮನೆಗೆ ಹೋಗಿ ವಿವಾಹ ಸಂಬಂಧ ಒಪ್ಪಿಕೊಳ್ಳುವುದನ್ನು 'ಕುರಿ' ಎಂದೂ, ಮದುವೆ ನಿಶ್ಚಯಿಸುವುದನ್ನು 'ಮಂಗಲ ಕುರಿಪ' ಎಂದೂ ಕರೆಯುವರು.

ಗಂಡಿನ ಕಡೆಯವರು 'ಅರುವ' ಮತ್ತು ಸಂಬಂಧಿಕರೊಡನೆ ಹೆಣ್ಣಿನ ಮನೆಗೆ ಹೋಗಿ ಲಗ್ನ ನಿಶ್ಚಯಿಸಿ ಲಗ್ನ ಪತ್ರಿಕೆ ಬರೆಸುತ್ತಾರೆ. 'ನೆಲ್ಲಕ್ಕಿ ನಡುಬಾಡೆ'ಯಲ್ಲಿ 'ತಳಿಯಕ್ಕಿ ಬೊಳ್‌ಚ'ದದ ಪಕ್ಕದಲ್ಲಿ (ತೂಗುದೀಪ) ಎರಡು ಕಡೆ ಗಂಡು-ಹೆಣ್ಣಿನ ಕಡೆಯವರು ನಿಂತು ಮದುವೆ ನಿಶ್ಚಯಿಸಿ ದೀಪಕ್ಕೆ ನಮಸ್ಕರಿಸುತ್ತಾರೆ. ಅನಂತರ ಈಡು ಮಾಡಿ (ಹಣವನ್ನು ದೀಪಕ್ಕೆ ನಂಬಿಕೆಯಾಗಿ ಇಡುವುದು) ಕರೆಯೋಲೆ ಹಂಚುತ್ತಾರೆ.

ಲಗ್ನ ಪತ್ರಿಕೆ ಆದ ಅನಂತರ ಮದುಮಕ್ಕಳು ಯಾವುದೇ ಶುಭ ಸಮಾರಂಭಗಳಿಗೆ, ಹಬ್ಬಗಳಿಗೆ ಹೋಗುವಂತಿಲ್ಲ. ಮದುವೆಗೆ ಹೋದರೂ ಮಂಟಪದಲ್ಲಿ ವಧುವರರ ತಲೆಗೆ ಅಕ್ಕಿ ಹಾಕಬಾರದು, ಶವನೋಡಬಾರದು, ಸಾವಿನ ಸುದ್ದಿ ಕೇಳಬಾರದು, ಹೊಳೆ ದಾಟಬಾರದು, ತಿಥಿ ಕರ್ಮಾಂತರಕ್ಕೆ ಹೋಗಬಾರದೆಂಬ ನಿಷೇಧಗಳಿವೆ.

ಮದುವೆ ಹಿಂದಿನ ದಿನ ಚಪ್ಪರದ ರಾತ್ರಿ ಅಂದರೆ 'ಊರ್ ಕೂಡುವ' ದಿನ ಗಂಡಿನ ಮನೆಯಲ್ಲಿ ಹಾಗೂ ಹೆಣ್ಣಿನ ಮನೆಯಲ್ಲಿ ಊರಿನ ಪ್ರಮುಖರು, ಸಂಬಂಧಿಕರು ಚಪ್ಪರ ಹಾಕಿ ಗೊನೆಬಿಟ್ಟಿರುವ ಬಾಳೆಕಂಬ, ಮಾವಿನ ತೋರಣಗಳನ್ನು ಮುಂಡ್ರತ ಬಳ್ಳಿಯಿಂದ ಬಿಳಿಬಟ್ಟೆಯ ಮೇಲುಕಟ್ಟು ಹಾಕಿ ಚಪ್ಪರವನ್ನು ಅಲಂಕರಿಸುತ್ತಾರೆ. ಅಂದಿನಿಂದ ಮದುವೆ ಮುಗಿಯುವವರೆಗೂ ಮನೆಯಲ್ಲಿ ಕೆಲವು ನಿಷೇಧಗಳಿರುತ್ತವೆ. ಬಾಳೆಕಾಯಿಸಾರು, ದೋಸೆ, ಹೆಸರುಬೇಳೆ ಪಾಯಸ ಮುಂತಾದ ಅಡುಗೆಯನ್ನು ಮಾಡುವುದಿಲ್ಲ. ಚಪ್ಪರ ಕಂಬದ ಕಾಲುಗಳನ್ನು ಬೆಸಸಂಖ್ಯೆಯಲ್ಲಿ ನೆಡುತ್ತಾರೆ. ಚಪ್ಪರ ಹಾಕುವಾಗ ಒಂದು ಕಡೆ ಹಾಲು ಬರುವ ಮರದ ಕಂಬವನ್ನು ನೆಡುತ್ತಾರೆ. ಈ ಸಂಪ್ರದಾಯ ಮಲೆನಾಡಿನ ಶೈವ ಒಕ್ಕಲಿಗರಲ್ಲಿಯೂ ಕಂಡುಬರುತ್ತದೆ.

ಚಪ್ಪರದ ದಿನ ಮದುಮಗನು ಬಿಳಿ ಕುಪ್ಪಸ, ತಲೆಗೆ ಕೆಂಪು ವಸ್ತ್ರ ಧರಿಸಿ, ನೆಲ್ಲಕ್ಕಿ ನಡುಬಾಡೆಯ ದೀಪಕ್ಕೆ ಅಕ್ಕಿಹಾಕಿ ಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾನೆ. ಹೆಣ್ಣಿನ ಮನೆಯಲ್ಲಿಯೂ ಮದುಮಗಳು ಹೊಸ ಬಟ್ಟೆ ಧರಿಸಿ ದೊಡ್ಡವರಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾಳೆ.

ಚಪ್ಪರದ ದಿನ ತೇರಣ ಹಾಕುವ (ಮೆಹಂದಿ) ಶಾಸ್ತ್ರ ನಡೆಯುತ್ತದೆ. ತೇರಣ ಶಾಸ್ತ್ರದಲ್ಲಿ ಮದುಮಕ್ಕಳನ್ನು ಅವರ ಮನೆಗಳಲ್ಲಿ ನೆಲ್ಲಕ್ಕಿ ನಡುಬಾಡೆಯಲ್ಲಿ ಕೂರಿಸಿ ಮೂರು ಜನ ಮುತ್ತೈದೆಯರು ಕೈ ಕಾಲಿಗೆ ತೇರಣ ಹಚ್ಚುತ್ತಾರೆ. ಇತ್ತೀಚೆಗೆ ಮದುವೆಯನ್ನು ಛತ್ರಗಳಲ್ಲಿ ನಡೆಸುವ ಕಾರಣ ಮದುಮಕ್ಕಳಿಬ್ಬರಿಗೂ ಅಲ್ಲೇ ತೇರಣ ಶಾಸ್ತ್ರ ಮಾಡುತ್ತಾರೆ.

ಊರ್ ಪತ್ತಿ

ಕೊಡವರು ಮದುವೆಗೆ ಆಹ್ವಾನಿಸುವ ಒಂದು ಸಂಪ್ರದಾಯವೇ 'ಊರುಪತ್ತಿ' (ಗ್ರಾಮ ಮರ್ಯಾದೆ) ಕುಟುಂಬದ ಯಜಮಾನನು ಗ್ರಾಮಕ್ಕೆ ಕೊಡುವ ಮರ್ಯಾದೆಯನ್ನು ಊರುಪತ್ತಿ ಎನ್ನುವರು. ಮದುವೆಯ ಶುಭಕಾರ್ಯ ಇಡೀ ಹಳ್ಳಿಯ ಎಲ್ಲಾ ಸಮುದಾಯದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೊಡವರ ಈ ಸಂಪ್ರದಾಯ ಅಲ್ಲಿಯ ಸಂಸ್ಕೃತಿಯ ಒಂದು ಭಾಗವಾಗಿಯೇ ಕಂಡುಬರುತ್ತದೆ. ಯಜಮಾನನು ಊರುಪತ್ತಿಯನ್ನು ಕೊಡಲು ಆಗದಿದ್ದರೆ ಅವನ ಪ್ರತಿನಿಧಿಯು ಕೊಡಬಹುದು. ಊರಿನ ಪ್ರತಿ ಕುಳಕ್ಕೆ ಐದು ವೀಳ್ಯದೆಲೆ ಐದು ಅಡಿಕೆ, ಅರ್ಧ ಪಾವಿನಷ್ಟು ಹುರುಕಲು (ಭತ್ತವನ್ನು ಹುರಿದುಮಾಡಿದಪುರಿ), ಒಂದು ಚಿಪ್ಪು ಬಾಳೆಹಣ್ಣು, ಒಂದೆರಡು ಚೂರು ತೆಂಗಿನಕಾಯಿಗಳನ್ನು ತೆಗೆದಿಟ್ಟು ಯಜಮಾನನು ಊರಿನವರನ್ನು ಕರೆದು 'ನೆಲ್ಲಕ್ಕಿ ನಡುಬಾಡೆಯ' (ಅಂದರೆ ಮಧ್ಯದ ಕೋಣೆಯ ದೀಪದ ಮುಂದೆ) ಮುಂದಿಟ್ಟಿರುವ ಊರುಪತ್ತಿಯನ್ನು ಸ್ವೀಕರಿಸಿ ಎಂದು ಕೇಳಿಕೊಂಡಾಗ, ಊರಿನವರು ಊರುಪತ್ತಿಯನ್ನು ತೆಗೆದುಕೊಂಡು ಹೋಗುತ್ತಾರೆ.

ಊರ್ ಪತ್ತಿ ಬೆಚ್ಚಿತ್
ದೇವಯ್ಯ ಬಯಂಬನೆ
ನೆಲ್ಲಕ್ಕಿ ನಡುಬಾಡೆ
ಅಲ್ಲಿ ಬಂದ್ ನಿಂದಿತ್
ಈ ಬಾಕ್ ಪರಂದತ್
ಉಯಿ ! ಎನ್ನಡ ಊರೋನೆ
ಪಂಡಿಯ ನಡಪೋಲೆ
ಊರ್ ಪತ್ತಿ ಬೆಚ್ಚಿಯೆ

ಕನ್ನಡ ಅನುವಾದ

ಊರಿನವರಿಗೆ ಸಲ್ಲಬೇಕಾದ 'ಊರ್‌ಪತ್ತಿ'ಯನ್ನಿಟ್ಟು ದೇವಯ್ಯನೆಂಬ ಹಿರಿಯನು ದೇವರ ಮನೆಯ ದೀಪದ ಅಡಿಯಲ್ಲಿ ಬಂದು ಊರಿನವರನ್ನು ಕುರಿತು ಈ ಮಾತನ್ನಾಡುತ್ತಾನೆ. ಅಯ್ಯೋ ನನ್ನ ಪ್ರೀತಿಯ ಊರಿನವರೆ ಹಿಂದಿನ ಹಿರಿಯರ ಪದ್ಧತಿಯಂತೆ 'ಊರ್‌ಪತ್ತಿ' ಇಟ್ಟಿರುವೆನು. ಏನಾದರೂ ಕೊರತೆ ಇದ್ದಲ್ಲಿ ದಯವಿಟ್ಟು ಕೇಳಿ ಪಡೆಯಿರಿ ಎಂಬ ಈ ಸಾಲು ಊರಿನವರ ಬಗ್ಗೆ ಇದ್ದ ಗೌರವವನ್ನು ವ್ಯಕ್ತಪಡಿಸುತ್ತದೆ.

ಊರ್‌ಪತ್ತಿ ಸಲ್ಲಿಸದಿದ್ದರೆ ಆ ಕುಟುಂಬದ ಬಗ್ಗೆ ಅವರಿಗೆ ಗೌರವವಿಲ್ಲವೆಂದು ಅರ್ಥ. ಮತ್ತೊಂದು ಅರ್ಥದಲ್ಲಿ ತಾವೇನಾದರು ತಪ್ಪು ಮಾಡಿದರೆ ಕ್ಷಮಿಸಿ ಈ ಶುಭಕಾರ್ಯದಲ್ಲಿ ಎಲ್ಲರೂ ಪಾಲ್ಗೊಳ್ಳಿ ಎಂದು ಕೇಳಿಕೊಳ್ಳುವ ಪರಿಪಾಠವೂ ಇದಾಗಿರಬಹುದು.

ಪೆಟ್ಟಿಗೆ ತುಂಬಿಸುವ ಶಾಸ್ತ್ರ

ನೆಲ್ಲಕ್ಕಿ ನಡುಬಾಡೆಯಲ್ಲಿ ಚಾಪೆಯ ಮೇಲೆ ಪೆಟ್ಟಿಗೆಯನ್ನಿಟ್ಟು ಮದುವೆ ಹೆಣ್ಣಿಗೆ ಕೊಡುವ ಒಡವೆ ವಸ್ತ್ರ, ಎಲ್ಲವನ್ನೂ ಶಾಸ್ತ್ರೋಕ್ತವಾಗಿ ಪೆಟ್ಟಿಗೆಗೆ ತುಂಬಿಸುವ

ಈ ಶಾಸ್ತ್ರ ಕೊಡವರಲ್ಲಿ ವಿಶೇಷವಾಗಿದೆ. ಮದು ಮಗಳಿಗೆ ಬೇಕಾಗುವ ದೈನಂದಿನ ಉಪಯೋಗದ ಪಾತ್ರೆಗಳು, ಹೊದಿಕೆ, ಸ್ಟೀಲ್‌ತಟ್ಟೆ, ಉಡಲು ಬೇಕಾಗಿರುವ ಬಟ್ಟೆಬರೆಗಳು, ಆಭರಣಗಳು ಮುಂತಾದವುಗಳನ್ನು ಊರಿನವರು ಮತ್ತು ನೆಂಟರಿಷ್ಟರನ್ನು ಕರೆದು ತೋರಿಸಿ ಎಲ್ಲವನ್ನೂ ನೆಲ್ಲಕ್ಕಿ ನಡುಬಾಡೆಯಲ್ಲಿ ಇಟ್ಟು ಪೆಟ್ಟಿಗೆಗೆ ತುಂಬಿಸುವ ಶಾಸ್ತ್ರವನ್ನು ಮಾಡುತ್ತಾರೆ. ಗಂಡಿನ ಕಡೆಯುವರು ಮದುವೆ ನಿಶ್ಚಯದ ಸಂಕೇತವಾಗಿ ಏನಾದರೂ ಆಭರಣ ಕೊಟ್ಟಿದ್ದರೆ ಅದನ್ನು ಪೆಟ್ಟಿಗೆಗೆ ಹಾಕಬೇಕು. ಈ ಮದುವೆಯ ನಿಶ್ಚಯದ ಸಂಕೇತವನ್ನು "ಈಡ್" ಎಂದು ಕರೆಯುತ್ತಾರೆ. ಪೆಟ್ಟಿಗೆಗೆ ಕರಿಮೆಣಸು, ಅಕ್ಕಿ, ಚಾಪೆ, ಸಣ್ಣದಾದ ಕರಿಬಳೆ, ಹಳೇಕಾಸು, ಅಡಿಕೆ, ನೂಲುಂಡೆ ಸೂಜಿ, ಚಿನ್ನ, ಕಬ್ಬಿಣದ ತುಂಡು, ಕೈಚೀಲ, ಎಣ್ಣೆ ಚೆರಕು, ಬೋಗ್‌ಣಿ, ಕಂಚಿನ ತಟ್ಟೆ ಕಂಚಿನಚೊಂಬು, ಕುಂಕುಮ, ಕಣ್ಣುಕಪ್ಪು, ಓಲೆ ತಾಳಿ (ಚಿಕ್ಕದು) ಮರದ ಬಾಚಣಿಗೆ ಮುಂತಾದ ವಸ್ತುಗಳನ್ನು ಸಂಪ್ರದಾಯದ ಪ್ರಕಾರ ವಿಷಮ ಸಂಖ್ಯೆಯಲ್ಲಿ ಪೆಟ್ಟಿಗೆಗೆ ತುಂಬುತ್ತಾರೆ.

ಚಪ್ಪರ ಶಾಸ್ತ್ರ

ಊರ್‌ಕೂಡುವ ಅಂದರೆ ಚಪ್ಪರದ ದಿನ ಬೆಳಗ್ಗೆ ಮಡಿವಾಳರು ಚಪ್ಪರ ಶಾಸ್ತ್ರವನ್ನು ಮಾಡುತ್ತಾರೆ. ಮನೆಯ ಮುಂದೆ ಹಾಕಿದ ಚಪ್ಪರದಿಂದ ಹಿಡಿದು ನೆಲ್ಲಕ್ಕಿ ನಡುಬಾಡೆಯ ಕೊನೆಯವರೆಗೂ ಬಿಳಿ ಮಡಿಬಟ್ಟೆಯಿಂದ ಮೇಲ್ಕಟ್ಟನ್ನು ಕಟ್ಟಬೇಕು. ಮುಹೂರ್ತಕ್ಕೆ ವಧುವರರನ್ನು ಕೂರಿಸುವ ಸ್ಥಳದಲ್ಲಿ ಬಿಳಿ ಬಟ್ಟೆಯ ಮೇಲ್ಕಟ್ಟನ್ನು ಕಟ್ಟುವರು. ಬಟ್ಟೆಯ ಒಂದು ಮೂಲೆಗೆ ಒಂದು ಹಣ್ಣಾದ ಬಾಳೆಗೊನೆಯನ್ನು, ಇನ್ನೊಂದು ಮೂಲೆಗೆ ಒಂದು ತೆಂಗಿನ ಕಾಯಿಯನ್ನು ಮತ್ತೊಂದು ಮೂಲೆಗೆ ಒಂದು ಬೆಳ್ಳರಿಕಾಯಿಯನ್ನು (ಮಂಗಳೂರು ಸೌತೆಕಾಯಿ) ಕಟ್ಟಿ ಮಧ್ಯಕ್ಕೆ ಮೂರು ವೀಳ್ಯದ ಎಲೆ ಮತ್ತು ಅಡಿಕೆಯನ್ನು ಸೇರಿಸಿ ಕಟ್ಟುತ್ತಾರೆ.

ಕ್ಷೌರ ಮಾಡಿಸುವುದು

ಮದುಮಗನಿಗೆ ಮದುವೆ ಮನೆಯಲ್ಲಿ ಕ್ಷೌರ ಮಾಡುವ ಸಂಸ್ಕಾರ ಕೊಡವರಲ್ಲಿ ವಿಶೇಷವಾದದ್ದು. ನಿಶ್ಚಿತಾರ್ಥ ಮುಗಿದ ಮೇಲೆ ಮದುವೆ ದಿನದವರೆಗೂ ಕ್ಷೌರ ಮಾಡಿಸಿಕೊಳ್ಳದೆ ಮದುವೆ ದಿನದಂದು ಮದುಮಗ 'ಕೊಂಬಮೀಸೆ' ಅಥವಾ 'ಕೊಂಬಂಚವರ' (ಹಾಲಿನಲ್ಲಿ ಮಾಡುವ ವಿಶೇಷ ಕ್ಷೌರ) ಮಾಡಿಸಿಕೊಳ್ಳಬೇಕಾಗಿತ್ತು. ವಿವಾಹ ಆಗದವರು 'ಕೊಂಬಮೀಸೆ' ಬಿಡುತ್ತಿರಲಿಲ್ಲ. ಮದುವೆಯ ದಿನದಂದು ಕೊಂಬಮೀಸೆ ಬಿಟ್ಟನು ಎಂದರೆ ಪ್ರೌಢಾವಸ್ಥೆ ತಲುಪಿದ್ದಾನೆ ಎಂಬುದನ್ನು ಸೂಚಿಸುತ್ತದೆ. ಕೊಡವರ ಮದುವೆಯಲ್ಲಿ ಈ ಕೊಂಬಂಚವರವನ್ನು ಸಾಂಕೇತಿಕವಾಗಿ ಮಾಡಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಕೆಲವು ವಿಶೇಷ ನಿಯಮಗಳನ್ನು ಮದುಮಗ ಪಾಲಿಸಬೇಕಾಗುತ್ತದೆ.

ಮದುಮಗನು ಕ್ಷೌರ ಮಾಡಿಸಿಕೊಳ್ಳುವ ಮೊದಲು ಬಿಳಿ ಕುಪ್ಪಸ ಧರಿಸಿ ಕೆಂಪು ವಸ್ತ್ರವನ್ನು ತಲೆಗೆ ಕಟ್ಟಿಕೊಳ್ಳಬೇಕು, ದಟ್ಟಿಯ ಬದಲಿಗೆ ಸೊಂಟಕ್ಕೆ ಕುಪ್ಪಸದ ಮೇಲೆ ವಸ್ತ್ರವನ್ನು ಕಟ್ಟಿಕೊಳ್ಳಬಹುದು. ಮದುಮಗನ ಕೈಯನ್ನು

ಹಿಡಿದು ಭೋಜಕಾರನು ಸಲಹೆ ಸೂಚನೆಗಳನ್ನು ನೀಡುತ್ತಾನೆ. ಮೊದಲು ಕನ್ನಿಮೂಲೆಯಲ್ಲಿರುವ ಕೋಣೆಯ ದೀಪಕ್ಕೆ ಅಕ್ಕಿ ಹಾಕಿ ನಮಸ್ಕರಿಸುತ್ತಾನೆ. ಅನಂತರ ಕನ್ನಿ ಕಂಬಕ್ಕೆ ಅಕ್ಕಿ ಹಾಕಿ ನಮಸ್ಕರಿಸಿ, ನಂತರ ನೆಲ್ಲಕ್ಕಿ ನಡುಬಾಡೆಯಲ್ಲಿರುವ ದೀಪಕ್ಕೆ ಅಕ್ಷತೆ ಹಾಕಿ ನಮಸ್ಕರಿಸಿ ಅಲ್ಲಿ ಸೇರಿರುವ ಹಿರಿಯರೆಲ್ಲರ ಕಾಲು ಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆದು ಕ್ಷೌರ ಮಾಡಿಸಿಕೊಳ್ಳುತ್ತಾನೆ.

ಕ್ಷೌರ ಮಾಡುವ ಸ್ಥಳದಲ್ಲಿ ಚಾಪೆಯನ್ನು ಹಾಸಿ ಅದರ ಪಕ್ಕದಲ್ಲಿ 'ಮುಕ್ಕಾಲಿ'ಯನ್ನು (ಮೂರು ಕಾಲಿನ ಮಣೆ) ಮತ್ತು ಕಂಚಿನ ಪಾತ್ರೆಯಲ್ಲಿ ಹಾಲು, 'ಪುತ್ತರಿ ಪಚ್ಚಿ' (ಬಿದಿರಿನ ಕುಕ್ಕೆ)ಯಲ್ಲಿ ಒಂದು ಸೇರು ಅಕ್ಕಿ, ಒಂದು ತೆಂಗಿನಕಾಯಿ, ಒಂದು ಚಿಪ್ಪು ಬಾಳೆಹಣ್ಣು ಇಡಬೇಕು. ಕ್ಷೌರ ಮಾಡಲು ಹಾಲನ್ನೇ ಉಪಯೋಗಿಸಬೇಕು, ಕ್ಷೌರ ಮಾಡಲು ಬಳಸುವ ಹಾಲಿನಲ್ಲಿ ಚಿನ್ನದ ಉಂಗುರ ಅಥವಾ ಇತರ ಯಾವುದಾದರೂ ಚಿನ್ನದ ವಸ್ತುವನ್ನು ಹಾಕಬೇಕಾಗುತ್ತದೆ. ಕ್ಷೌರ ಮಾಡಿದ ಕೂದಲನ್ನು ನೆಲಕ್ಕೆ ಹಾಕುವಂತಿಲ್ಲ. ಚಿಕ್ಕ ಪಾತ್ರೆಯಲ್ಲಿ ಸಂಗ್ರಹಿಸಿಟ್ಟುಕೊಳ್ಳುವರು.

ಕ್ಷೌರ ಮಾಡುತ್ತಿರುವಾಗ ವಾದ್ಯ ಘೋಷವಾಗುತ್ತಿರಬೇಕು. ಮದುಮಗ ಕ್ಷೌರ ಮಾಡಿಸಿದ ನಂತರ ಅವನೊಂದಿಗೆ ಶಾಸ್ತ್ರೋಕ್ತವಾಗಿ ಮತ್ತಿಬ್ಬರು ಕ್ಷೌರ ಮಾಡಿಸಿಕೊಳ್ಳಬೇಕು. ಕ್ಷೌರ ಮಾಡಲು ಬಳಸಿದ ಹಾಲನ್ನು ಯಾವುದಾದರೂ ಹಾಲು ಒಸರುವ ಮರದ ಬುಡಕ್ಕೆ ಚೆಲ್ಲಬೇಕು. ಮದುಮಗನು ಕಟ್ಟಿದ್ದ ಕೆಂಪು ವಸ್ತ್ರವನ್ನು ಮತ್ತು ಅಲ್ಲಿ ಹಾಸಿದ್ದ ಚಾಪೆ, ಅಕ್ಕಿ ಹಾಗೂ ಸ್ವಲ್ಪ ಹಣವನ್ನು ಬಹುಮಾನವಾಗಿ ಕ್ಷೌರಿಕನಿಗೆ ಕೊಡಬೇಕು. ಕಂಚಿನ ಪಾತ್ರೆಯೊಂದನ್ನು ಇಲ್ಲವಾದರೆ ಬದಲಿಗೆ ಅಷ್ಟೇ ಬೆಲೆ ಬಾಳುವ ಹಣ ನೀಡಬೇಕಾಗುವುದು. ಹಿಂದಿನ ಕಾಲದಲ್ಲಿ ಮೂರಾಣೆ, ಐದಾಣೆಯ ಲೆಕ್ಕದಲ್ಲಿ ಹಣ ನೀಡಲಾಗುತ್ತಿತ್ತು.

ಬಳೆ ಹಾಕುವ ಶಾಸ್ತ್ರ

ಮದುವೆಯ ಹಿಂದಿನ ದಿನ ಸಂಜೆ ಮದುಮಗಳನ್ನು ಸ್ನಾನ ಮಾಡಿಸಿ ಬಿಳಿ ಮಡಿ ಬಟ್ಟೆಯನ್ನುಡಿಸಿ 'ಬೋಜಕಾರ್ತಿ' (ಮದುವೆ ಮುಗಿಯುವವರೆಗೂ ವಧುವಿನ ಜೊತೆಯಲ್ಲಿರುವ ಮಹಿಳೆ) ಮದುಮಗಳನ್ನು ಕೈ ಹಿಡಿದು ಕರೆತರುತ್ತಾಳೆ. ಬಳೆ ಇಟ್ಟ ಸ್ಥಳದಲ್ಲಿ ಉತ್ತರ ದಕ್ಷಿಣದಿಕ್ಕಿನಲ್ಲಿ ಚಾಪೆ ಹಾಸಲಾಗುತ್ತದೆ. 'ಪುತ್ತರಿ ಪಚ್ಚಿ'ಯಲ್ಲಿ (ಬಿದಿರಿನ ಕುಕ್ಕೆ) ಅಕ್ಕಿ, ಬಾಳೆಹಣ್ಣು ತೆಂಗಿನಕಾಯಿ ಇಟ್ಟು, ಮದುಮಗಳು ಬಳೆಯ ಮಲಾರದ ಮುಂದೆ ಕೂತು ಎರಡೂ ಕೈಯಿಂದ ನಮಸ್ಕರಿಸಿ ಕರಿಬಳೆಯನ್ನು ಹಾಕಿಸಿಕೊಳ್ಳುತ್ತಾಳೆ. ಅನಂತರ ಇನ್ನಿಬ್ಬರೂ ಮುತ್ತೈದೆ ಸ್ತ್ರೀಯರಿಗೆ ಕರಿಬಳೆಯನ್ನು ತೊಡುತ್ತಾರೆ. ಮದುಮಗಳು ಕುಳಿತಿದ್ದ ಚಾಪೆಯನ್ನು, ಪುತ್ತರಿ ಪಚ್ಚೆಯಲ್ಲಿದ್ದ ಎಲ್ಲಾ ಸಾಮಾನುಗಳನ್ನು ಮತ್ತು ಐದು ಹಣವನ್ನು ಬಳೆಗಾರನಿಗೆ ಕೊಡಬೇಕಾಗುತ್ತದೆ. ನಂತರ ಮದುವಣಗಿತ್ತಿಯನ್ನು ಬೋಜಕಾರ್ತಿಯು ಸ್ನಾನಕ್ಕೆ ಕೊಟ್ಟಿಗೆಗೆ ಕರೆದುಕೊಂಡು ಹೋಗಿ ಮೂರು ಮುತ್ತೈದೆ ಹೆಂಗಸರಿಂದ

ನೀರು ಹಾಕಿ ಸ್ನಾನ ಮಾಡಿಸುತ್ತಾರೆ. ಇತ್ತೀಚೆಗೆ ಬಳೆಗಾರರು ಹೆಚ್ಚಾಗಿ ಸಿಗದೆ ಇರುವ ಕಾರಣ, ಬೋಜಕಾರ್ತಿ ತಂದ ಬಳೆಯನ್ನೇ ಶಾಸ್ತ್ರೋಕ್ತವಾಗಿ ತೊಡಿಸುತ್ತಾರೆ.

ಉಡುಪು

ಮದುಮಗನಿಗೆ 'ಬೋಜಕಾರ'ನು (ಮದುಮಗನ ಜೊತೆಯಲ್ಲಿರುವ ಹುಡುಗ) ಉಡುಪು ತೊಡಿಸಿದರೆ, ಮದುವಣಗಿತ್ತಿಗೆ ಬೋಜಕಾರ್ತಿಯು ಉಡುಪನ್ನು ತೊಡಿಸುತ್ತಾಳೆ. ಮದುಮಗನಿಗೆ ಬಿಳಿಯ ಬಣ್ಣದ ಅಥವಾ ಕೆಂಪುಬಣ್ಣದ ರೇಷ್ಮೆ ಕುಪ್ಪಸ, ಕೆಂಪು ರೇಷ್ಮೆ ದಟ್ಟಿ, ಪಾನಿ ಮಂಡೆ ತುಣಿ, ಉಮ್ಮತ್ತಿ ಬಂಗೂಲವಿರುವ ಪೀಚೆಕತ್ತಿ, ತೊಡಂಗ್, ಒಡಿಕತ್ತಿ, ಅರೆಚಂಜೋಲೆ, ಕುತ್ತಿಗೆಗೆ ಚಿನ್ನದ ಹವಳದ ಮಾಲೆ, ಕೈಗೆ ಚಿನ್ನದ ಕಟ್ಟಿಬಳೆ, ಬೆರಳಿಗೆ ಉಂಗುರ ಮತ್ತು ತಲೆಯಮೇಲೆ ಕೆಂಪು ಮುಸುಕನ್ನು ಧರಿಸುತ್ತಾರೆ.

ಮದುಮಗಳಿಗೆ ಕೆಂಪು ಜರತಾರಿ ಸೀರೆ (ಬೊಟ್ಟು ಪೊಡಿಯ) ಕೆಂಪು ಬಣ್ಣದ ಉದ್ದ ತೋಳಿನ ರವಿಕೆಯನ್ನು ತೊಡಿಸುತ್ತಾರೆ (ಕೆಂಪು ಬಣ್ಣ ಕೊಡವರಲ್ಲಿ ಶುಭದ ಸಂಕೇತ). ಮದುಮಗಳಿಗೆ ಸಾಂಪ್ರದಾಯಿಕ ಆಭರಣಗಳನ್ನು ತೊಡಿಸುವರು. ಇತರ ಸಂಬಂಧಿಕರು ಸಹ ಕೆಲವು ಕೆಂಪು ಆಭರಣಗಳನ್ನು ತೊಡುವರು. ಕುತ್ತಿಗೆಗೆ ಕೊಕ್ಕೆತಾತಿ, ಸರ, ಕರಿಮಣಿ, ಮಾಲೆ, ಕಿವಿಗೆ ಓಲೆ, ಜಡೆಗೆ ಜಡೆಬಿಲ್ಲೆ, ಕೈಗೆ ಚಿನ್ನದ ಕಡಗ, ಕಾಲಿಗೆ ಕಾಲುಂಗರ, ಕಾಲುಸರ, ಉಂಗುರ ಮೊದಲಾದವು ಗಳನ್ನು ಧರಿಸಿ, ಹಣೆಗೆ ವಿಭೂತಿ ಹಾಕುವರು. ಅನಂತರ ಎಲೆ, ಅಡಿಕೆ ತಿನ್ನಬೇಕಾಗುತ್ತದೆ. ಕೊಡವ ಹೆಣ್ಣುಮಗಳು ಮದುವೆಯ ನಂತರವೇ ಎಲೆ ಅಡಿಕೆ ತಿನ್ನುವ ರೂಢಿ ಇದೆ.

ಮದುಮಗ ಮತ್ತು ಮದುಮಗಳು ಒಡವೆ, ವಸ್ತ್ರ ಧರಿಸಿದ ನಂತರ ವಾದ್ಯದೊಂದಿಗೆ ಬೋಜಕಾರ, ಬೋಜಕಾರ್ತಿಯೊಂದಿಗೆ, ಸ್ನಾನಗೃಹದಿಂದ ಹೊರಬರಬೇಕಾಗುತ್ತದೆ. ಮಡಿವಾಳನು ಮಡಿಬಟ್ಟೆಯನ್ನು ಹಾಸುತ್ತಾ ಹೋದರೆ ಮದುಮಗಳು, ಮಧುಮಗನು ಈ ಮಡಿ ಬಟ್ಟೆಯ ಮೇಲೆ ಮುಹೂರ್ತ ನಡೆಯುವ ಸ್ಥಳದವರೆಗೂ ನಡೆದು ಹೋಗುತ್ತಾರೆ. ಇವರ ಜೊತೆ ನಾಲ್ಕು ಜನರು 'ದುಡಿ' (ಒಂದು ಬಗೆಯ ವಾದ್ಯ) ಯನ್ನು ತಟ್ಟಿಕೊಂಡು 'ಬಟ್ಟೆ ಪಾಟ್' ಹಾಡುತ್ತ (ದಾರಿಹಾಡು) ಬರುತ್ತಾರೆ.

ಬಟ್ಟೆ ಹಾಡು (ಬಟ್ಟೆ ಪಾಟ್)	**ಕನ್ನಡ ಅನುವಾದ**
ಲೇಲಾಲೆ, ಲಾಲೇಲಾ, ಲೇಲೆಲ ಲೇಲೊ	ಲೇಲಾಲೆ ಲಾಲೀಲಾ, ಲೇಲಲ ಲೇಲೊ
ಲೇಲೇಲೇ ಪಾಡಿ ತರೆಕೊವ್ವ ಎಂಗ	ಲೇಲೇಲೇ ಹಾಡಿ ತರುವೆವು ನಾವು
ತಪ್ಪತೆ ನಾವು ಏಂಗಂಡು ತುದಿಕು	ತಪ್ಪದೆ ರಾಗವಾಗಿ ಹಾಡು
ಏಂಗಿನೊ ನಿನ್ನ ಪಲರ್ ತುದಿಕ್	ರಾಗದಿಂದ ಹಾಡಿದರೆ ಎಲ್ಲರಿಂದ ಹೊಗಳಿಕೆ ಸಿಗುತ್ತದೆ
ಅಲ್ಲೇಂಗಿ ನಿನ್ನ ಪಲರ್ ಪಳಿಯು	ಇಲ್ಲದಿದ್ದರೆ ನಿನಗೆ ದೂಷಣೆ ಸಿಗುತ್ತದೆ
ನೀಕ್ ಕೈಕೂಲಿ ನಾತಪ್ಪಿ ತೊಂಡೆ	ಹಾಡುವ ಕೂಲಿ ನಾ ಕೊಡುವೆ
ಏಳ್ ಮೊದರತೆ ಕೂತಪ್ಪ ತೊಂಡೆ	ಸಿಹಿಯಾದ ಅನ್ನ ಕೊಡುವೆ

ಕೊಲ್ಲತೇನ್ ಕೂಟಿ ಕೋತೇನ್ ಕೂಟಿ	ಕೊಲ್ಲಿಜೇನು ಕೋಲುಜೇನು ಸೇರಿಸಿ
ಕಬ್ಬಡ ಮೋರಲ್ ಮೂರಿ ತೇಗೂಟಿ	ಹಸಿವಿನ ಮೊಸರಲ್ಲಿ ಮೂಲಿ ಜೇನು
ಪಯ್ಯುಡ ನೆಯ್ಯಕ್ ಪರತಿ ತಿರಿಯು	ಹಸುವಿನ ತಪ್ಪದಿ ಅದ್ದಿ ಹತ್ತಿ ಬತ್ತಿಯ
ಪರತಿ ತಿರಿಂಗೊಂಡ್ ಕತ್ತುವ ತಿತ್ತ್	ಹತ್ತಿಸೆ ಕಾಣುವ ಬೆಳಕಿನ ಚೆಲುವು
ತೆಕ್ಕೂ ಬಡಕೂ ತೆಡ್ ಮೊಜ್ಜೋಲೆ	ಉತ್ತರ ದಕ್ಷಿಣ ಹೊಡೆಯುವ ಸಿಡಿಲಿನ ತೆರದಿ
ಕೇಕೂ ಪಡಿ ಇರು ಮಿಂಬಾಂಜೋಲೆ	ಪೂರ್ವದಿಂ ಪಶ್ಚಿಮ ಕೊಡುವ ಮಿಂಚಿನ ತೆರೆದಿ
ಒಕ್ಕೆ ಕೊತ್ತಾಚಾರ ಪಾಡಿಚಿ ಎಂಗ	ಒಕ್ಕದ ಆಚಾರವ ಹಾಡ್ಯವು ನಾವು
ಆಚಾರ ಪಾಡಿತ್ ಬೆಕ್ಕನ್ ಎಂಗ	ಆಚಾರವ ಹಾಡಿಟ್ಟೆವು ನಾವು

ಲೇಲಾಲೇ, ಲಾಲೆಲ, ಲೇಲೇಲೊ ಲೇಲೂ ಲೇಲಾಲೇ, ಲಾಲೆಲ, ಲೇಲೇಲೊ ಲೇಲೂ

(ಆಧಾರ: ಎಂ.ಜಿ.ನಾಗರಾಜ್, ಕೆಂಬಟ್ಟಿ ಸಂಸ್ಕೃತಿ)

ಎಂದು ಹಾಡುವ ಹಾಡು ಮದುವೆಯ ಸಂದರ್ಭವನ್ನು ವರ್ಣಿಸುತ್ತದೆ. ಕಲಾತ್ಮಕವಾಗಿ ಕಟ್ಟಿರುವಂತಹ ಮನೆಯ ಸೊಬಗನ್ನು, ಕೆತ್ತನೆ ಕೆಲಸವನ್ನು, ಮನೆಯ ಸೌಂದರ್ಯವನ್ನು ಜೊತೆಗೆ ಕುಟುಂಬದ ಗೌರವ ಘನತೆಯನ್ನು ಅವರು ಹಿಂದೆ ಸಮಾಜದಲ್ಲಿ ಬದುಕಿದ ರೀತಿಯನ್ನು ಸುಂದರವಾಗಿ ನಿರೂಪಿಸುತ್ತದೆ.

ಮುಹೂರ್ತ

ಹಿಂದಿನ ಕಾಲದಲ್ಲಿ ಮುಹೂರ್ತವನ್ನು ಅವರವರ ಮನೆಗಳಲ್ಲಿಯೇ ಮಾಡುತ್ತಿದ್ದರು. ಮದುಮಗ ಮತ್ತು ಮದುಮಗಳು ಮನೆಯ ಹೊಸ್ತಿಲನ್ನು ಬಲಗಾಲಿಟ್ಟು ದಾಟಿ ಮುಹೂರ್ತದ ಸ್ಥಳಕ್ಕೆ ಬರುತ್ತಾರೆ. ಈ ಸಮಯದಲ್ಲಿ ಮನೆಯ ನೆಲ್ಲಕ್ಕಿ ನಡುಬಾಡೆಯಲ್ಲಿ ದೀಪ ಉರಿಯುತ್ತಿರುತ್ತದೆ. ಮುಹೂರ್ತಕ್ಕೆ ಕೂರಿಸುವ ಸ್ಥಳದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಎರಡು–ಮೂರು ಚಾಪೆ ಮೇಲೆ ಜಮಖಾನ ಹಾಸಿ, ಮಧ್ಯಭಾಗದಲ್ಲಿ ಒಂದು ಮುಕ್ಕಾಲಿಯನ್ನಿಡಬೇಕು. ಮುಕ್ಕಾಲಿಯ ಮೇಲೆ ಕೆಂಪು ವಸ್ತ್ರವನ್ನು ಹಾಸಬೇಕು. ಮುಕ್ಕಾಲಿಯ ಎರಡು ಕಡೆಗಳಲ್ಲೂ 'ಕುತ್ತುಂಬೊಳಿಚ' (ದೀಪಾಲೆಕಂಬ) ಅಥವಾ ಮುಕ್ಕಾಲಿಗಳನ್ನಿಟ್ಟು ಅದರ ಮೇಲೆ 'ತಳಿಯಕ್ಕಿ ಬೊಳ್‌ಚ'ವನ್ನು ಇಡಬೇಕು.

ಇನ್ನೊಂದು ತಟ್ಟೆಯಲ್ಲಿ ಅಕ್ಕಿಯನ್ನಿಟ್ಟು ಅದರ ಮೇಲೆ ಹಾಲು ತುಂಬಿದ ಸಣ್ಣ ಗಿಂಡಿಗಳನ್ನಿಡುವರು.. ಮುಹೂರ್ತಕ್ಕೆ ಕೂರುವ ಮೊದಲು ಮೂರು ಸುತ್ತು ಪ್ರದಕ್ಷಿಣೆ ಬರಬೇಕು. ಅನಂತರ ಮುಕ್ಕಾಲಿಗೆ ನಮಸ್ಕರಿಸಿ ಹಿಂಬದಿಯಿಂದ ಬಲಗಾಲಿಂದ ದಾಟಿ ಮುಕ್ಕಾಲಿಯ ಮೇಲೆ ಕೂರಬೇಕು. ಮುಹೂರ್ತಕ್ಕೆ ಕುಳಿತ ಮದುಮಕ್ಕಳಿಗೆ ಆರತಿ ಮಾಡಿ ಅಕ್ಷತೆ ಹಾಕಿ ಆಶೀರ್ವದಿಸಿ ಉಡುಗೊರೆ, ಹಣವನ್ನು ಕೊಡಬಹುದು. ಉಡುಗೊರೆ ಕೊಡುವಾಗ ಸ್ತ್ರೀಯರೇ ಪ್ರಮುಖ ಪಾತ್ರ. ಮೊದಲು ಮದುಮಕ್ಕಳ ಮುತ್ತೈದೆ ತಾಯಿ ಉಡುಗೊರೆ

ಕೊಡಬೇಕಾಗುತ್ತದೆ. ಮೊದಲು ಉಡುಗೊರೆ ಕೊಡುವವರು ಮೊದಲು 'ಪೊಂಬಣ' (ಚಿನ್ನದ ಹಣ) ಚಿನ್ನದ ನಾಣ್ಯವನ್ನು ಕೊಡುವುದು ಸಂಪ್ರದಾಯ. ನಂತರದ ಮೂವರೂ ಚಿನ್ನವನ್ನೇ ಉಡುಗೊರೆಯಾಗಿ ಕೊಡುತ್ತಾರೆ.

ಉಡುಗೊರೆ ಕೊಡುವ ಸಂದರ್ಭದಲ್ಲಿ ಮದುಮಗ ಮತ್ತು ಮದುಮಗಳಿಗೆ ಅಕ್ಷತೆಯನ್ನು ತೆಗೆದುಕೊಂಡು ಮೂರು ಸಲ ತಲೆಯ ಮೇಲೆರಚಿ ಆಶೀರ್ವದಿಸುತ್ತಾರೆ. ಹತ್ತಿರದ ಸಂಬಂಧಿಕರಾದರೆ ಮೊಣಕಾಲು, ಹೆಗಲುಗಳನ್ನು ಮುಟ್ಟಿ ಅಕ್ಷತೆ ಹಾಕಿ ನಂತರ ಗಿಂಡಿಯಲ್ಲಿನ ಹಾಲನ್ನು ಕುಡಿಸಿ ಆಶೀರ್ವದಿಸುತ್ತಾರೆ. ಮದುವೆಯಲ್ಲಿ ಹಣಕೊಡುವಾಗ ಯಾರೂ ಒಂದು ಹಣಕ್ಕಿಂತ ಕಡಿಮೆ ಹಣವನ್ನು ಕೊಡುವಂತಿರಲಿಲ್ಲ. ಹಣ ಕೊಟ್ಟವರು ಹಿರಿಯರಾಗಿದ್ದರೆ ಮದುಮಕ್ಕಳು ಅವರ ಕಾಲು ಮುಟ್ಟಿ ನಮಸ್ಕರಿಸಬೇಕಾಗುತ್ತದೆ. ಕಿರಿಯರಾಗಿದ್ದರೆ ಮದುಮಕ್ಕಳ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆಯಬಹುದು.

ಮದುಮಗನು ತನ್ನ ತಾಯಿ ನೀಡಿದ ಹಣವನ್ನು ಕುಪ್ಪಸದ ಎದೆ ಭಾಗದಲ್ಲಿ ಇಟ್ಟುಕೊಳ್ಳಬೇಕು. ಹಾಗೆಯೇ ಮದುಮಗಳು ಆ ಹಣವನ್ನು ತನ್ನ ಸೆರಗಿನಲ್ಲಿ ಕಟ್ಟಿಕೊಳ್ಳಬೇಕಾಗುತ್ತದೆ. ಇದನ್ನು 'ಚೀಲಪಣ'ವೆಂದು ಕರೆಯುತ್ತಾರೆ. ಈ ಎಲ್ಲಾ ಶಾಸ್ತ್ರದ ನಂತರ 'ಬಟ್ಟೆ ಪಾಟ್'ನ್ನು ಹಾಡುಗಾರರು ಈ ರೀತಿ ಹೇಳುತ್ತಾರೆ. (ಕ್ಷೇತ್ರಕಾರ್ಯದಿಂದ ತಿಳಿದ ಮಾಹಿತಿ)

ಬಾಳೋ ಕೇಳಿ ಚಂಜೌದಿ
ಚಂಜೌದಿ ಮನವೇಂಗಿ
...........ಬಯಿಂಬನ
ಮಣ್ಣರುವ ಬಾಲನ್
ಕೈಪುಡಿಚಿ ಕೊಂಡಿತ್
ಕನ್ನಿ ಮೂಲೆ ಕೋಂಬರೆ
ಅಲ್ಲಿ ಪೋಯಿ ನಿಂದಿತ್
ಪೊಂಬೊಳಕ್ ಬೆಚ್ಚಾಂಗ
ಸಣ್ಣಕ್ಕಿ ಕನಿಚಿತ್
ಕೈಮಲಂಗಿ ತೊತ್ತಿತ್
ಅಲ್ಲಿಂಜಿ ಪೊರಟಿಟ್
ಕನ್ನಿ ಮೂಲೆ ಕಂಬ್‌ಕ್
ಸಣ್ಣಕ್ಕಿ ಕನಿಚಿತ್
ಕಾತೊಟ್ಟ್ ತಲೆಬೆಚ್ಚಿ
ಅಲ್ಲಿಂಜಿ ಪೊರಟಿತ್
ನೆಲ್ಲಕ್ಕಿ ನಡುಬಾಡೆ
ಅಲ್ಲಿ ಬಂದ್ ನಿಂದಿತ್
ಕಾರಣೋರ ತೊತ್ತಿತ್

ತನ್ನ ಪೆತ್ತ ಅವ್ವಂಡ
ಕಾತೊಟ್ಟ್ ತಲೆ ಬೆಚ್ಚಿ
ಅಲ್ಲಿಂಜಿ ಪೊರಟಿತ್"[೬]

ಹೀಗೆ ಮದುವೆಯ ಸಂದರ್ಭದಲ್ಲಿ ತಾಯಿಯಿಂದ ಪಡೆದ ಚೇಲಪಣದ ವಿಚಾರ ಹಾಗೂ ಆ ಸಂದರ್ಭದ ವಿವಿಧ ಹಂತಗಳನ್ನು ಈ ಹಾಡು ಕಟ್ಟಿಕೊಡುತ್ತದೆ.

ಕೊಡವರ ವಿವಾಹ ಪದ್ಧತಿಯ ಬಗೆಗಳು

ಕೊಡವರ ವಿವಾಹ ಪದ್ಧತಿಯಲ್ಲಿ ನಾನಾ ರೀತಿಯ ಸಂಸ್ಕಾರಗಳನ್ನು ನೋಡಬಹುದು. ಕೊಡವರಲ್ಲಿ ಮದುವೆಯನ್ನು 'ಮಂಗಲ' ಎನ್ನುತ್ತಾರೆ. ಆದರೆ ಮಂಗಲ ಎಂಬುದು ಎಲ್ಲ ಶುಭ ಸಂದರ್ಭದ ಸೂಚಕವಾಗಿದೆ. ಕೊಡವರು ಮಂಗಲ ಎಂಬ ಶಬ್ದವನ್ನು ಎಲ್ಲಾ ಶುಭ ಸಂದರ್ಭದಲ್ಲೂ ಬಳಸುವುದುಂಟು. ಉದಾಹರಣೆಗೆ 'ನರಿಮಂಗಲ' ಅಂದರೆ ಹುಲಿಯನ್ನು ಕೊಂದ ವೀರನಿಗೆ ಮಾಡುವ ಗೌರವ ಸಮರ್ಪಣೆಯು ಮದುವೆಯಾಗಿದೆ. ಹಾಗೆಯೇ 'ಕೆಮಿಕುತ್ತಿಮಂಗಲ' ಅಂದರೆ ಗಂಡಸಿಗೆ ಕಿವಿ ಚುಚ್ಚಿ ಓಲೆ ಹಾಕುವ ಸಂಸ್ಕಾರದ ಮದುವೆಯಾಗಿರುತ್ತದೆ. 'ಬಾಳೆಮಂಗಲ' ಅಂದರೆ ಹೆಣ್ಣಿಲ್ಲದೆ ಬಾಳೆಗಿಡದೊಂದಿಗೆ ಮದುವೆ ಮಾಡುವ ಸಂಸ್ಕಾರ. ಇವುಗಳೆಲ್ಲವನ್ನೂ ಮದುವೆಯಂತೆಯೇ ನಡೆಸುವರು. ಏಳು ಬಗೆಯ ಮದುವೆ ಸಂಸ್ಕಾರಗಳನ್ನು ನಾವು ಕೊಡವರಲ್ಲಿ ಕಾಣಬಹುದಾಗಿದೆ.[೭]

ಮುಖ್ಯವಾಗಿ ಕೊಡವರ "ವಿವಾಹ ಪದ್ಧತಿಯಲ್ಲಿ ಕೆಮಿಕುತ್ತಿಮಂಗಲ, ನರಿಮಂಗಲ, ಬಾಳೆಮಂಗಲ ಕನ್ನಿಮಂಗಲ, ಕೂಡಾವಳಿಮಂಗಲ, ಒಕ್ಕಪರಿಜೆ, ಮಕ್ಕಪರಿಜೆ ಮುಂತಾದವು."[೮]

'ಕೆಮಿಕುತ್ತಿ ಮಂಗಲ' (ಕಿವಿ ಚುಚ್ಚುವ ಮದುವೆ)

'ಕೆಮಿಕುತ್ತಿ ಮಂಗಲ'ವನ್ನು ಪ್ರತಿಯೊಬ್ಬ ಕೊಡವ ಪುರುಷನಿಗೆ ಮಾಡಲಾಗುತ್ತದೆ ಈ ಸಂಸ್ಕಾರವನ್ನು ಮಾಡದಿದ್ದರೆ ಅಂತಹ ಪುರುಷನಿಗೆ ಹೆಣ್ಣು ಕೊಡಬಾರದೆಂಬ ನಿಯಮವಿದೆ. ಕಿವಿ ಚುಚ್ಚಿದ ನಂತರ ಕಿವಿಗೆ 'ಪತ್ತೊಂಟಿ ಕಡ್‌ಕ್' (ಓಲೆ)ನ್ನು ಹಾಕುತ್ತಾರೆ.

ಕಿವಿ ಚುಚ್ಚುವ ಮದುವೆಯ ಸಿದ್ಧತೆಗಳೆಲ್ಲವೂ ಕನ್ನಿ ಮದುವೆಯಂತೆಯೇ ಇರುತ್ತದೆ. ಎಲ್ಲಾ ಬಂಧುಗಳನ್ನು ಆಹ್ವಾನಿಸಿ ಔತಣ ಏರ್ಪಡಿಸಿ, ಮದುವೆಯ ಸಂದರ್ಭದ ಹಾಡನ್ನು ಹಾಡುತ್ತಾ ಮುಹೂರ್ತಕ್ಕೆ ಕೂರಿಸುತ್ತಾರೆ. ಮುಹೂರ್ತಕ್ಕೆ ಕೂರಿಸುವಾಗ ಆತನ ಎರಡು ಹೆಗಲಿನ ಮೇಲೆ ಕೆಂಪು ವಸ್ತ್ರಗಳನ್ನು ಹಾಕಬೇಕು. ಅಕ್ಕಸಾಲಿಗನು ಕಿವಿ ಚುಚ್ಚಿ 'ಪತ್ತೊಂಟಿ ಕಡ್‌ಕ'ನ್ನು ಹಾಕುತ್ತಾನೆ. ಕಿವಿ ಚುಚ್ಚಿದ ಅಕ್ಕಸಾಲಿಗನಿಗೆ ಎರಡು ಕೆಂಪು ವಸ್ತ್ರದ ಜೊತೆಗೆ ಅಕ್ಕಿ, ಬಾಳೆಹಣ್ಣು, ತೆಂಗಿನಕಾಯಿ ಮತ್ತು ಹಣವನ್ನು ಕೊಡಬೇಕು.

'ನರಿ ಮಂಗಲ' (ಹುಲಿ ಮದುವೆ)

ಹುಲಿಯನ್ನು ಕೊಂದವನಿಗೆ ಗೌರವ ಸಲ್ಲಿಸುವುದರ ಸಂಕೇತವೇ ಹುಲಿ ಮದುವೆ. ಹುಲಿಯನ್ನು ಬೇಟೆಯಾಡುವುದು ವೀರ ಕೆಲಸವಾದುದರಿಂದ ಸಭೆಗಳಲ್ಲಿ ಹುಲಿ ಹೊಡೆದವರಿಗೆ ಗೌರವ ಹೆಚ್ಚಾಗಿರುತ್ತದೆ. ಹುಲಿ ಮದುವೆಗೆ ಸತ್ತ ಹುಲಿಯಾಗಲಿ ಅಥವಾ ಅದರ ಚರ್ಮವಾಗಲಿ, ಬಾಲದ ತುದಿಯಾಗಲೀ ಇರಲೇಬೇಕು, ಹೆಬ್ಬುಲಿಯಾದರೆ ಹುಲಿಮದುವೆಯನ್ನು 'ನಾಡ್ ಮಂದ್' (ನಾಡಿನ ಮೈದಾನ) ನಲ್ಲಿ ಏರ್ಪಡಿಸುತ್ತಾರೆ. ಕಿರುಬ, ಚಿರತೆಗಳಾದರೆ ಊರಿನ 'ಮಂದ್'ನಲ್ಲಿ ಏರ್ಪಡಿಸುತ್ತಾರೆ.

"ಹುಲಿಯನ್ನು ಕೊಂದ ಗಂಡಾಗಲಿ, ಹೆಣ್ಣಾಗಲಿ ಈ ಮದುವೆಗೆ ಅರ್ಹರಾಗುತ್ತಾರೆ. ಗಂಡಸಾದರೆ ಆತನಿಗೆ ಕನ್ನಿ ಮದುವೆಯಲ್ಲಿ ಮಾಡುವಂತೆ ಕ್ಷೌರಮಾಡಿಸಿ, ಸ್ನಾನ ಮಾಡಿದ ನಂತರ ಮದುವೆ ಸಂಪ್ರದಾಯದ ಉಡುಗೆಗಳಾದ ಕುಪ್ಪಸ, ರುಮಾಲುಗಳನ್ನು ಧರಿಸಿ, ವಾದ್ಯ ಘೋಷ, ತಾಳ, ದುಡಿ, ಹಾಡಿನೊಂದಿಗೆ ಮುಹೂರ್ತ ನಡೆಸುವ 'ಮಂದ್‌ಗೆ' ತೆರಳುತ್ತಾನೆ. ಹುಲಿಯನ್ನು ಕೊಂದವರು ಹೆಂಗಸಾಗಿದ್ದರೆ ಆಕೆಗೆ ಮದುವೆ ಸಂಪ್ರದಾಯದ ಉಡುಗೆ ತೊಟ್ಟು ಮೆರವಣಿಗೆಯಲ್ಲಿ ಗುಂಡು ಹಾರಿಸಿಕೊಂಡು ಹೋಗುತ್ತಾರೆ. ಮೆರವಣಿಗೆಯಲ್ಲಿ ಹೋಗುವಾಗ ಕೋವಿಯ 'ಮೊಗಬಾಯಿ' ತುದಿಯನ್ನು ಮುಂದಕ್ಕೆ ಹಿಡಿದುಕೊಂಡು ಹೋಗಬೇಕು. ಕೋವಿಗೆ ಕೆಂಪು ವಸ್ತ್ರವನ್ನು ಕಟ್ಟಿರುತ್ತಾರೆ. ಅದನ್ನು 'ಓಜ' ಕಟ್ಟುವುದು ಎಂದು ಕರೆಯುತ್ತಾರೆ. "ಓಜ ಕಟ್ಟುವ ಪದ್ಧತಿ ಗಂಡಸು ಕೋವಿಯಿಂದ ಹುಲಿ ಕೊಂದಿದ್ದರೆ ಮಾತ್ರ ಇರುತ್ತದೆ. ಹೆಂಗಸು ಗುಂಡಿಟ್ಟು ಕೊಂದಿದ್ದರೆ 'ಓಜ'ವನ್ನು ಆಕೆಯ ತುರುಬಿಗೆ ಕಟ್ಟುತ್ತಾರೆ."[6]

'ಹುಲಿ ಮದುವೆ ಮುಹೂರ್ತವಾಗುವ ಸ್ಥಳದಲ್ಲಿ ಚಪ್ಪರ ಹಾಕಿರಬೇಕು. ಅದು ಮಂದ್‌ನಲ್ಲಿ ಕುಣಿಯುವ ಚಕ್ರಾಕಾರದ ಒಳಗಿರಬಾರದು. ಮುಹೂರ್ತಕ್ಕೆ ಕೂರಿಸಿದವರಿಗೆಲ್ಲ ನೆರೆದವರು ತಲೆಯ ಮೇಲೆ ಅಕ್ಷತೆ ಹಾಕಿ ಬಹುಮಾನ ಕೊಟ್ಟು ಗೌರವಿಸಬೇಕು.

ಹುಲಿ ಮದುವೆಯ ಮುಹೂರ್ತದ ಸಂದರ್ಭದಲ್ಲಿ ಬರುವ ಹಾಡು ಇಂತಿದೆ.

"ಬಾಳೊ ಕೇಳಿ ಚಂಜೌದಿ
ಪಾಡುವ ಕತೆ ಕೇಳಿ
ಈ ನಾಡ್ ನಡುವುಲ್
ಬಾಂಗಾಡ್ ಬನತ್‌ಲ್
ಬಾಯಲಂದ ಪೆಬ್ಬುಲ್
ಪಯಿಮುಗೊಂಡಡಗಿಂಜ
ಆ ಸುದ್ದಿ ಕೇಟಿತ್
ನಾಡಡಂಗ ಬಾಲರೂ
ಒತ್ತೊರಮೆ ಕೊಂಡಿತ್

ಕಾಡ್ ಬೋಟೆ ಕೂಡ್‌ಚಿ
ಚೀಲನಲ್ಲಿ ಬಾಲಂಗ
ನಾಯಾಟಿತ್ ಮೋಕಣೆ
ಬಿಲ್ಲ್ ಕಾರ ಬಾಲಂಗ
ಬಾಂಗಾಡ್ ಬನತ್‌ಲ್
ಮಂಗಡುಲ್ ನಿಂದತ್
ಓರಂಡೀರಂಡೆಣ್ಣನೆ
ನಾಯಿಕಾರ ಬಾಲಂಗ
ಬೈಕಡುರ್ ನಿಂದಿತ್
ನಾಯಿನ್‌ಡಿ ಕೂಟಣೆ
ಚೀಲನಲ್ಲಿ ನಾಯಿಯ
ಮಿಞಾಬಯ್ಯ ನೋಚಿತ್
ಮಿಞಾಬಯ್ಯ ನೋಚಿತ್
ಕಾಡ್ ನುಗ್ಗ ತಾಚಿಲ,
ಆಕ್ಕಣಿಕೆ ಚ಼ಂಜೌದಿ,
ಇದೂರ್‌ಕತೆ ಕೊಶ್."[೧೦]

ಇದರ ಕನ್ನಡದ ಸಾರಾಂಶವೆಂದರೆ:– ಹುಲಿಯನ್ನು ಕೊಂದ ವೀರನ ಕತೆ ಹೇಳುತ್ತೇನೆ ಕೇಳಿ, ಈ ನಾಡಿನ ಕಾಡಿನಲ್ಲಿ ಹಿಂಗದ ಹಸಿವಿನ ಹೆಬ್ಬುಲಿಯೊಂದಿತ್ತು. ಈ ವರ್ತಮಾನ ಕೇಳಿ ಗ್ರಾಮದ ಯುವಕರು ಕೋವಿ ಹಿಡಿದು ಕಾಡಿಗೆ ನಾಯಿ ಸಮೇತ ನುಗ್ಗಿದರು. ಆದರೆ ನಾಯಿ ಕಾಡಿನೊಳಗೆ ನುಗ್ಗಲು ಹಿಂಜರಿಯಿತು. ಇದನ್ನು ಅರಿತ ಬೇಟೆಗಾರರು ಹುಲಿ ಹತ್ತಿರದಲ್ಲಿಯೇ ಇದೆಯೆಂಬುದನ್ನು ಗುರುತಿಸಿದರು.

ಕಾಡಿನಲ್ಲಿ ಮರದಡಿಯಲ್ಲಿ ನಿದ್ರಿಸುತ್ತಿದ್ದ ಹುಲಿಯು ಗರ್ಜಿಸಿತು. ನಿಪುಣ ಬೇಟೆಗಾರ ಕೋವಿಯನ್ನು ಹಿಡಿದು ಹುಲಿಯ ಜಾಡನ್ನು ಹಿಡಿದು ಗುಂಡು ಹಾರಿಸಿದನು. ಭಯಂಕರ ಗುಂಡಿನ ಶಬ್ದ ಕಾಡಿನೊಳಗೆ ಮೊಳಗುತ್ತದೆ. ಗುಂಡು ತಾಗಿದ ಹುಲಿಯನ್ನು ವೀರ ಬೇಟೆಗಾರರು ನಾಮುಂದೆ, ತಾಮುಂದೆ ಎಂದು ಓಡಿ ಪ್ರಾಣಿಯನ್ನು ಮುಟ್ಟುತ್ತಾರೆ.

ಹೆಬ್ಬುಲಿಯನ್ನು ನಾಡಿನ ಮೈದಾನ (ಮಂದ್)ಕ್ಕೆ ತಂದು ಹುಲಿ ಮದುವೆ ಮಾಡಲಾಗುತ್ತದೆ. 'ಮುಕ್ಕಾಲಿ' (ಮೂರು ಕಾಲಿನ ಮಣೆ) ಯ ಮೇಲೆ ಕೋವಿ ಹಿಡಿದು ಸರ್ವಾಲಂಕೃತನಾಗಿ ಕುಳಿತ ವೀರಪುತ್ರನಿಗೆ ತಾಯಿ ತಲೆಗೆ ಅಕ್ಕಿಯನ್ನು ಹಾಕಿ ಆಶೀರ್ವದಿಸಿ ಚಿನ್ನದ ನಾಣ್ಯವನ್ನು ಬಹುಮಾನವಾಗಿ ಕೊಡುತ್ತಾಳೆ. ಹಿರಿಯರು "ಇಂದು ನಾವು ನೋಡಿದ ಧೈರ್ಯ, ಸಾಹಸದ ಪ್ರಸಂಗ ಎಂದೂ ನಿನ್ನ ಜೀವನದಲ್ಲಿ ಮೂಡಿ ಬರಲಿ, ಜೀವನದಲ್ಲಿ ಕೀರ್ತಿ ಪಡೆ" ಎಂದು ಹಾರೈಸುತ್ತಾರೆ.

ಕೂಡಾವಳಿ ಮಂಗಲ (ಕೂಡಾವಳಿ ಮದುವೆ)

ಕೂಡಾವಳಿ ಮಂಗಲ ಎಂದರೆ 'ಪುನರ್ ವಿವಾಹ'. ಈ ಪದ್ಧತಿಯಲ್ಲಿ ಮೂರು ಬಗೆಯನ್ನು ನೋಡಬಹುದು, ಒಂದನೆಯದು "ಗಂಡ ಸತ್ತು ಹೋದ ಮೇಲೆ ವಿಧವೆಯು ಸತ್ತ ಗಂಡನ ಸಹೋದರ ಅಥವಾ ಆ ಕುಟುಂಬದ ಇತರರನ್ನು ಮದುವೆಯಾಗುವುದು. ಎರಡನೆಯದಾಗಿ ಮದುವೆಯಾದವನು ಹೆಣ್ಣನ್ನು ಬಿಟ್ಟುಬಿಟ್ಟಾಗ ಆಕೆಯನ್ನು ಮತ್ತೊಬ್ಬನು ಮದುವೆಯಾಗುವುದು. ಮೂರನೆಯದಾಗಿ ಬೇರೆ ಕುಟುಂಬದವರನ್ನು ಮದುವೆಯಾಗುವುದು"[೧೧] ಈ ಪದ್ಧತಿಯು ಕೊಡಗಿನಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಪರಿಸ್ಥಿತಿಯ ಒತ್ತಡದಿಂದ ಈ ಮದುವೆ ನಡೆದರೂ ನೊಂದ ಹೆಣ್ಣು ಮಕ್ಕಳಿಗೆ ಹೊಸ ಬದುಕನ್ನು ಕಟ್ಟಿಕೊಡುವಲ್ಲಿ ಇದು ಸಹಕಾರಿಯಾಗಿದೆ.

ಕೂಡಾವಳಿ ಮದುವೆಗಳಲ್ಲಿ ಮೊದಲನೆಯದಾದ ಅಂದರೆ ಗಂಡನು ಸತ್ತ ಮೇಲೆ ಅವನ ಸಹೋದರರೊಬ್ಬರನ್ನು ಅಥವಾ ದಾಯಾದಿಗಳಲ್ಲೊಬ್ಬನನ್ನು ಮದುವೆ ಮಾಡಿಕೊಳ್ಳುವುದು. ಇದು ಎಲ್ಲರ ಕುತೂಹಲವನ್ನು ಕೆರಳಿಸಿದೆ. ಈ ರೀತಿಯ ಕೂಡಾವಳಿಯಲ್ಲಿ ಗಂಡಿಗೆ ಮಾತ್ರ ಮುಹೂರ್ತದ ಗೌರವವಿದೆ. ಹೆಣ್ಣು, ಕನ್ನಿ-ಅಂದರೆ ಕನ್ಯೆ ಅಲ್ಲದುದರಿಂದ, ಆಕೆ ಮೊದಲನೇ ಮದುವೆಯಲ್ಲೇ ಆಕೆಯ ಕನ್ಯತ್ವವು ಕಳೆದುಹೋದುದರಿಂದ ಆಕೆಗೆ ಮುಹೂರ್ತ ಇರುವುದಿಲ್ಲ.

ಇಂತಹ ಮದುವೆಯಲ್ಲಿ ಆಕೆಗೆ ಮೊದಲನೆಯ ಮದುವೆಯ ಆಡಂಬರ ಇರುವುದಿಲ್ಲ. ಮದುವೆಯ ದಿನ ಹೆಣ್ಣು ಅಂದರೆ ವಿಧವೆ ತನ್ನ ವಿಧವಾ ವೇಷಭೂಷಣವನ್ನು ತ್ಯಜಿಸಿ ಮುತ್ತೈದೆಯಂತೆ ಶೃಂಗರಿಸಿಕೊಳ್ಳುತ್ತಾಳೆ. ಮದುವೆ ಹೆಣ್ಣಿಗೆ ಮಾಡುವ ಅಲಂಕಾರ ಬಯಸಿದರೆ ಅದನ್ನು ಮಾಡಿಕೊಳ್ಳಬಹುದು, ಆದರೆ ಮುಸುಕು ಹಾಕಬಾರದು. ಅವಳಿಗೆ ಕೋಣೆಯಲ್ಲಿ ಅಕ್ಷತೆ ಹಾಕಿ ಹಾಲು ಕುಡಿಸಿ ಮುತ್ತೈದೆ ಹಣ ಕೊಡುತ್ತಾರೆ.

ಈ ಮದುವೆಯಲ್ಲಿ ಗಂಡು ಮೊದಲ ಮದುವೆಯಂತೆಯೇ ಹೆಣ್ಣಿನ ಮನೆಗೆ ಮೆರವಣಿಗೆ ಹೊರಡುತ್ತಾನೆ. ಬಾಳೆ ಬಿರುದನ್ನು ನೀಡಲಾಗುತ್ತದೆ. ದುಡಿ, ತಾಳದ ಸಮೇತ ಮನೆಗೆ ಬರುತ್ತಾನೆ, ಹೆಣ್ಣು ಮೆರವಣಿಗೆಯಲ್ಲಿ ಹೋಗುವಂತಿಲ್ಲ. ಗಂಡಸಾದರೆ "ಕನ್ನಿ ಕೋಂಬರೆಯ ದೀಪ'ಕ್ಕೂ 'ಕನ್ನಿ ಕಂಬ'ಕ್ಕೂ ಅಕ್ಕಿ ಹಾಕಿ ನಮಸ್ಕರಿಸಿ ನಿಲ್ಲುತ್ತಾನೆ."[೧೨] ಹೀಗೆ ಸರಳ ರೂಪದಲ್ಲಿ ವಿಧವಾ ವಿವಾಹವು ನಡೆಯುತ್ತದೆ. ಇತ್ತೀಚೆಗೆ ಇತರ ಸಮುದಾಯದವರಲ್ಲಿಯೂ ವಿಧವಾವಿವಾಹ ನಡೆಯುತ್ತಿದೆ.

"ಕೂಡಾವಳಿ ಮುಹೂರ್ತದ ಹಾಡು ಈ ರೀತಿ ಇದೆ.
ಚೋತ್ ಚೋತ್ ಚುಣ್ಣಾಯಿ
ತೇಡಿಂಗೊಂಡ್ ಪೋಕಣೆ
ತೇಡಿ ಪೋನ ಪಾಬಲ್ಲಿ
ಕಾಲ್‌ಕೆ ತೊರೆ ಬುದ್ಧ

ಎನ್ನನೆಂದರಿವಿರ?
ತನ್ನಡಣ್ಣ ದೇವಯ್ಯ
ಕಾಲ ಕಂಡ ಪೋನಲ್ಲಿ
ಅಣ್ಣ ಬೆಚ್ಚ ಅತ್ತಿಗೆ
ಪಂಡಿಯ ನಡಪೋಲೆ
ಪೂಣ್ಣಾಯಿ ನಡಕಲು
ಎಂದೆಣ್ಣಿ ನೆನತಿತ್
ಚೀಲ ನಲ್ಲ ಬಾಲನ್
ಬೈ ಪಿರಿಂಜಿ ಬಂದಿತ್
ಮಚ್ಚಿ ಮನೆಕೇರಿಕ್
ತನ್ನ ಪೆತ್ತ ಅವ್ವಂಗ್ ಈ ಸುದ್ದಿನರ್‌ಪಚಿ"

ಎರಡನೆಯ ಕೂಡಾವಳಿಯೆಂದರೆ ಮದುವೆಯಾದ ಹೆಣ್ಣನ್ನು ಗಂಡನು ತ್ಯಜಿಸಿ ಆಕೆಯನ್ನು ಬೇರೊಬ್ಬ ಕೂಡಾವಳಿ ಮಾಡಿಕೊಳ್ಳುವುದು. ಇದರಲ್ಲೂ ಹಿಂದಿನ ಗಂಡನ ಮನೆಯ ಸಂಬಂಧವನ್ನು ಕಡಿದುಕೊಳ್ಳಬೇಕು ಇದಕ್ಕೆ ಎರಡೂ ಕಡೆಯವರು ಒಪ್ಪಬೇಕು. ಒಪ್ಪಿಗೆ ಇಲ್ಲದಿದ್ದರೆ ಕಛೇರಿಯಲ್ಲಿ ಅಥವಾ ನಾಡು ಪಂಚಾಯಿತಿಯಲ್ಲಿ ರದ್ದು ಮಾಡಲು ತಕ್ಕ ರುಜುವಾತು ಕೊಟ್ಟು ಮಾಡಬಹುದು.

ಮೂರನೆಯ ಕೂಡಾವಳಿಯೆಂದರೆ, "ಮೊದಲು ಸತ್ತ ಗಂಡನ ಮನೆಯ ಸಂಬಂಧವನ್ನು ಹೆಣ್ಣಿಗೆ ತಪ್ಪಿಸಿ, ಹೆಣ್ಣಿನ ತವರು ಮನೆಯಲ್ಲೇ ಈ ಮದುವೆಯನ್ನು ಮಾಡುತ್ತಾರೆ. ಈ ಕೂಡಾವಳಿಯು ಕುಟುಂಬದ ಹೊರಗಿನವರ ಜೊತೆ ನಡೆಯುತ್ತದೆ. ಮೊದಲ ಗಂಡನ ಸಂಬಂಧವನ್ನು ತಪ್ಪಿಸುವ ಕ್ರಮಕ್ಕೆ 'ಕಲ್ಲ್‌ಮರ ಕೈಪ'ಎಂದು ಹೆಸರು"[೧೪]

ಇಂತಹ "ಮದುವೆಯಲ್ಲಿ ಕನ್ನಿಮದುವೆಯಂತೆಯೇ ಮದುವೆ 'ಕುರಿ' (ನಿಶ್ಚಯ) ಮಾಡಬೇಕು. "ಕರಿಕ್ ಮುರಿಪೊ" (ತರಕಾರಿ ಹೆಚ್ಚುವುದು) ಮತ್ತು "ಪಂದ ಪಣಿ"೧೪ (ಚಪ್ಪರದ ಕೆಲಸ) ಯನ್ನು ಹೆಣ್ಣಿನ ಮನೆಯಲ್ಲೆ ಮಾಡಿ, ಮಾರನೆಯ ದಿನ ಊರಿನ ಜನರ ಸಮ್ಮುಖದಲ್ಲಿ ಬಳೆ ತೊಡಿಸಿ, ಸಂಪ್ರದಾಯದ ಉಡುಗೆ ತೊಡಿಸುತ್ತಾರೆ. ಸ್ನಾನ ಮಾಡಿಸುವಾಗ ದುಡಿ, ತಾಳ, ತಳಿಯಕ್ಕಿ ಬೊಳ್‌ಕ್ ಇರಬಾರದು. ಮದುವೆ ಹೆಣ್ಣು ಕನ್ನಿಕೋಂಬರೆ, ಕನ್ನಿಕಂಭ ಮತ್ತು ನೆಲ್ಲಕ್ಕಿಗೆ ಅಕ್ಕಿ ಹಾಕಿ ಹಿರಿಯರ ಕಾಲು ಮುಟ್ಟಿ ನಮಸ್ಕರಿಸಿ ಒಂದು ಕೋಣೆಯಲ್ಲಿ ಕುಳಿತಿರಬೇಕಾಗುತ್ತದೆ. ಉಡುಗೊರೆ ನೀಡುವವರು ಅಲ್ಲಿಯೇ ಕೊಡಬಹುದು.೧೫

ಮದುಮಗನನ್ನು ಐಮರ ಅಥವಾ ಕುರ್ಚಿಯಲ್ಲಿ ಕೂರಿಸಿ ಅಲ್ಲಿಯೇ ಮುಹೂರ್ತ ನಡೆಸಬೇಕು. ಜನರು ತಲೆಗೆ ಅಕ್ಕಿ ಹಾಕಿ ಹಣ ಕೊಡುವಾಗ ಗಂಡು ಎದ್ದು ನಿಂತುಕೊಳ್ಳಬೇಕು. ಮದುವೆ ಮೆರವಣಿಗೆಯು ಗಂಡಿನ ಮನೆಗೆ ತಲುಪಿದ ಮೇಲೆ ಗದ್ದೆಗೆ ಸಗಣಿ ಹಾಕುವುದಾಗಲಿ, ನೀರು ತರುವುದಾಗಲಿ ಮಾಡಬಾರದೆಂಬ ನಿಯಮವಿದೆ.

ಮೆರವಣಿಗೆಯಲ್ಲಿ ಹೆಣ್ಣನ್ನು ಕರೆದುಕೊಂಡು ಹೋಗುವಾಗ ಮುಸುಕು ಹಾಕಬೇಕು. ಗಂಡಿನ ಮದುವೆ ಮೆರವಣಿಗೆ ಹೆಣ್ಣಿನ ಮನೆಗೆ ತಲುಪಿದ ಸಮಯದಲ್ಲಿ ಹೆಣ್ಣಿನ ಮನೆಯಲ್ಲಿ ಬಾಳೆ ಬಿರುದು ಇಟ್ಟಿದ್ದರೆ, ಹೆಣ್ಣಿನ ಕಡೆಯುವರಿಗೂ ಗಂಡಿನ ಮನೆಯಲ್ಲಿ ಬಾಳೆ ಬಿರುದು ಇಡುತ್ತಾರೆ. ಮದುವೆಯಾದ ತಕ್ಷಣವೇ ವಿಧವಾ ಹೆಣ್ಣು ಮುತ್ತೈದೆಯಂತೆ ನಡೆಸಬಹುದಾದ ಎಲ್ಲಾ ಆಚಾರ ಎಲ್ಲಾ ಹಕ್ಕುಗಳನ್ನು ಪಡೆಯುತ್ತಾಳೆ.

'ಕಲ್ಲ್‌ಮರಕೈಪ' ಮತ್ತು 'ಬುಡ್‌ಧಾರೆ ಪದ್ಧತಿ'

ಕೊಡವರು ಹೇಗೆ ಅತ್ಯಂತ ವ್ಯವಸ್ಥಿತವಾಗಿ, ಅರ್ಥಗರ್ಭಿತವಾಗಿ ವಿವಾಹ ಸಂಬಂಧಗಳನ್ನು ಕೂಡಿಸುತ್ತಾರೆಯೋ, ಅದೇ ರೀತಿ ಮುಂದೆ ಯಾವುದೇ ಒಂದು ಕಾರಣಕ್ಕೆ ಸಂಬಂಧ ಕಡಿದುಕೊಳ್ಳುವುದಕ್ಕೂ ಅದರದ್ದೇ ಆದ ನೀತಿ ನಿಯಮಗಳನ್ನು ಅನುಸರಿಸುತ್ತಾರೆ. ಇಲ್ಲಿ ಎರಡು ರೀತಿಯಿಂದ ಸಂಬಂಧ ಕಡಿದುಕೊಳ್ಳುವ ಸಂದರ್ಭ ಬರಬಹುದು. ಒಂದೋ ಆಕೆಯ ಪತಿ ಮರಣ ಹೊಂದಿ ಆಕೆಯನ್ನು ಬೇರೊಂದು ಕುಟುಂಬದ ಯುವಕನಿಗೆ ಮದುವೆ ಮಾಡಿಕೊಡುವ ಸಂದರ್ಭ. ಎರಡನೆಯದ್ದು; ಗಂಡ ಹಾಗೂ ಹೆಂಡತಿಯಲ್ಲಿ ಹೊಂದಾಣಿಕೆ ಇಲ್ಲದೆ ಪರಸ್ಪರ ಬೇರೆ ಬೇರೆಯಾಗಲು ನಿರ್ಧರಿಸಿದಾಗ ಈ ಸಂದರ್ಭ ಪತಿಯ ಮನೆಯಲ್ಲಿಯೇ ಈ ಸಂಬಂಧ ಕಡಿದುಕೊಳ್ಳುವ ಕಾರ್ಯ ನಡೆಯುತ್ತದೆ. ಇದಕ್ಕೆ ಕೊಡವ ಭಾಷೆಯಲ್ಲಿ "ಕಲ್ಲ್ ಮರ ಕೈಪ" ಎಂದು ಹೇಳುತ್ತಾರೆ. ಅಂದರೆ, ಈ ಹಿಂದೆ ವಿವಾಹವಾಗುವಾಗ ಸಾಕ್ಷಿಗಾಗಿ ಹೆಣ್ಣಿನ ಹನ್ನೊಂದನೇ ಅಚ್ಚಿನ ಚಿನ್ನಕ್ಕೆ ಬದಲಾಗಿ ನೀಡಿರುವ ಹನ್ನೊಂದು ಹರಳು ಕಲ್ಲುಗಳನ್ನು ಹಿಂದಕ್ಕೆ ಸಾಂಕೇತಿಕವಾಗಿ ನೀಡುವುದಾಗಿದೆ. (ಕ್ಷೇತ್ರಕಾರ್ಯದ ಸಂದರ್ಭ ಪಡೆದ ಮಾಹಿತಿ)

'ಕಲ್ಲ್‌ಮರಕೈಪ' ಪದ್ಧತಿಯನ್ನು ನಡೆಸಿದ ನಂತರ ಆಕೆಗೂ ಆ ಕುಟುಂಬಕ್ಕೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ಆಕೆಯನ್ನು 'ಕಲ್ಲ್‌ಮರಕೈಪ ಪದ್ಧತಿ' ಯ ನಂತರ ತವರು ಮನೆಗೆ ಕರೆದೊಯ್ದರೆ ಅಲ್ಲಿಗೆ ಎಲ್ಲಾ ಸಂಬಂಧ ಕಡಿದುಕೊಳ್ಳುತ್ತದೆ.

ಒಂದು ವೇಳೆ ಆಕೆಯ ಗಂಡ ಎಳೆಯ ವಯಸ್ಸಿನಲ್ಲಿಯೇ ಮರಣ ಹೊಂದಿದ್ದಲ್ಲಿ ಅಥವಾ ಆತನೊಂದಿಗೆ ಬಾಳಲು ಸಾಧ್ಯವಾಗದಿದ್ದಲ್ಲಿ ಆಕೆಯ ತವರು ಮನೆಯ ಅರುವ, ಕುಟುಂಬದ ಮುಖ್ಯಸ್ಥ ಸೇರಿದಂತೆ ಮೂವರು ಗಂಡನ ಮನೆಗೆ ಬಂದು ಮಾತುಕತೆ ನಡೆಸುತ್ತಾರೆ. ಎರಡೂ ಕಡೆಯವರು ಒಪ್ಪಿದ ನಂತರ 'ಕಲ್ಲ್‌ಮರಕೈಪ' ಪದ್ಧತಿ ನಡೆಸಲು ತೀರ್ಮಾನಿಸುತ್ತಾರೆ.

ಹೆಣ್ಣಿನ ಅರುವ:–ದಂಡ್ ಕಡೆ ನಾಡೋನೂ, ಇಲ್ಲವನೂ ಬೆಂದೂ, ಅಂಗನು ಅರುವನು ಸಾಲ್ ಕೆಟ್ಟಿ ನಿಂದಿರಾ? (ಎರಡು ಕಡೆಯ ಬಂಧುಗಳು, ಅರುವರು ಸಾಲಿನಲ್ಲಿ ನಿಂತಿದ್ದೀರಾ?)

ಗಂಡಿನ ಅರುವ:– ನಿಂದಿತ್ (ನಿಂತಿದ್ದೇವೆ)

ಹೆಣ್ಣಿನ ಅರುವ:– ಅನಕ್ಕಿಕ್ಕ ಒಕ್ಕಡ ಸೋಮಕ್ಕಂಬೆಣ್ಣುವ ಕುಂಞನ ಅಪ್ಪಯ್ಯಂದೆಣ್ಣುವ ಕುಂಞರ ಆಯುಷ್ಯಾ ಕೊರುವಾಯಿತೂ, ಸೋಮಕ್ಕಂದೆಣ್ಣುವ

ಕುಂಞೆರ ಅದೃಷ್ಟ ಕೆಟ್ಟದಾಯಿತೂ. ಒಡೆಯನೂ ಪೊಣ್ಣಾಯಿತೂ ಪತ್ತ್ ಕಾಲ ಬಾವಕ್ ಋಣ ಇಲ್ಲತಾನಗುಂಡ್, ಇಂದಾಕಣೆ ನಿಂಗಡ ಪೊಮ್ಮಕ್ಕ ಮಕ್ಕಂದೆಣ್ಣಿತಿಂಜ ಸೋಮಕ್ಕಂದೆಣ್ಣುವ ಕುಞೆನ ಪೊಣ್ಣ್ ಕೆಟ್ಟತೇಂಗಿ ತಾಮನೆಂದ್ ಬಯ್ಯಕ್ ಕಾಕಿಯಂಡ್ ಪೋಲುವಾ? (ಸೋಮಕ್ಕ ಎನ್ನುವ ಯುವತಿಯನ್ನು ಅಪ್ಪಯ್ಯ ಎನ್ನುವ ಯುವಕನಿಗೆ ವಿವಾಹ ಮಾಡಿದರೂ, ಸೋಮಕ್ಕಳ ಅದೃಷ್ಟ ಕೆಟ್ಟದಾಗಿ ಗಂಡು ಹಾಗೂ ಹೆಣ್ಣು ಹತ್ತು ವರ್ಷ ಒಟ್ಟಿಗೆ ಬಾಳುವ ಯೋಗ ಇಲ್ಲದಾಗಿದೆ. ಈವರೆಗೆ ನಿಮ್ಮ ಮಕ್ಕಳಂತೆ ನೋಡಿಕೊಂಡ ಸೋಮಕ್ಕಳನ್ನು ನಾವು ತವರಿಗೆ ಹಿಂತಿರುಗಿ ಕರೆದೊಯ್ಯಬಹುದೇ?)

ಗಂಡಿನ ಅರುವ:– ಕ್ ನಾಳ್ ಮರ್ಯಾದಿ ಪ್ರಕಾರ (ಪದ್ಧತಿಯಂತೆ)

ಹೆಣ್ಣಿನ ಅರುವ:– ಇದರಿ ಸಾಕ್ಷಿ ಪಣ (ತೆಗೆದುಕೊಳ್ಳಿ ಸಾಕ್ಷಿ ಹಣ).

ಗಂಡಿನ ಅರುವ:– ಬಾತ್ ಅನಕ್ಕ ಸೋಮುವ್ವಂದೆಣ್ಣುವ ಕುಂಞೆ ಅಪ್ಪಯ್ಯಂದೆಣ್ಣುವ ಕುಂಞೆರ ಸಾಲ್ ಬಾಕ್ ಬಂದಲ್ಲಿ, ಸೋಮವ್ವಂಗ ಚೂದಾಕ್ ಇರ್‌ಂಬ್, ಚುಂಡೆಕ್ ಮೊದಲ್ ಒಂದ್ ಕೊಟ್ಟ್ ನೂರೋಳ..... ಒಕ್ಕಡ್ ಮನೆಲ್ ಸಮ್ಮಂಧ ಕೊಡ್ವಪಕ್...... ಒಕ್ಕಡ ಮನೆಲ್ ಸೋಮವ್ವಂಗಿಂಜ ಸಮ್ಮಂಧತ್‌ನ ಕೊವ್ವಂಜಿನಿಂಗತಂದ ಪನ್ನಂದಚ್ಚಿ ಪೊನ್ನ್ ಇದರಿ, ಬೆಚ್ಚಿತಪ್ಪ. (ಆದರೀಗ ಸೋಮವ್ವ ಎಂದು ಹೇಳುವ ಯುವಕನಿಗೆ ವಿವಾಹವಾಗಿ ಬಂದಾಗ ಆಕೆಗೆ ನೀಡಿದ ಎಲ್ಲಾ ವಸ್ತುಗಳನ್ನು ನಾವು ಅದೇ ರೀತಿ ನೀಡುತ್ತಿದ್ದೇವೆ. ಅಂದು ನೀವು ನೀಡಿದ ಸಾಕ್ಷಿ ಹಣವನ್ನು ನಿಮಗೆ ಹಿಂತಿರುಗಿಸುತ್ತಿದ್ದೇವೆ. ಸ್ವೀಕರಿಸಿ)

ಹೆಣ್ಣಿನ ಅರುವ:–ಬಾತ್ (ಬಂತು)

ಗಂಡಿನ ಅರುವ:– ಇದರಿ ಸಾಕ್ಷಿ ಪಣ (ತೆಗೆದುಕೊಳ್ಳಿ ಸಾಕ್ಷಿ ಹಣ)

ಹೆಣ್ಣಿನ ಅರುವ:– ಬಾತ್ (ಬಂತು)

ಈ ರೀತಿ ಸಾಕ್ಷಿಯಾಗಿ ನೀಡಿದ ಹನ್ನೊಂದು ಕಲ್ಲು ಹರಳುಗಳನ್ನು ಸಾಂಕೇತಿಕವಾಗಿ ಬದಲಾಯಿಸಿಕೊಳ್ಳುತ್ತಾರೆ. ಇದಕ್ಕೂ ಮುನ್ನ ಆಕೆಗೆ ವಿವಾಹದ ಸಂದರ್ಭ ನೀಡಿದ 'ಕಚ್ಚಿಮುಟ್ಟ್' (ಕಂಚುಮೂಟು) ವಸ್ತುಗಳನ್ನು ತಂದು ನೆಲ್ಲಕ್ಕಿ ನಡುಬಾಡೆಯಲ್ಲಿಡಬೇಕು. ಕಲ್ಲ್‌ಮರಕೈಪ ಪದ್ಧತಿ ನಂತರ ತವರು ಮನೆಗೆ ಅದನ್ನು ಕೊಂಡೊಯ್ಯುತ್ತಾರೆ. ಅಲ್ಲಿಗೆ ಎಲ್ಲಾ ಸಂಬಂಧ ಕಡಿದುಕೊಳ್ಳುತ್ತದೆ. ಆದರೆ, ಈಕೆಗೆ ಈ ರೀತಿ ಸಂಬಂಧ ಕಡಿದುಕೊಂಡ ಒಂದು ವರ್ಷದ ನಂತರವೇ ಬೇರೆ ವಿವಾಹ ಮಾಡಿಕೊಡಬೇಕು ಎಂಬ ನಿಯಮವಿದೆ. ಈ ನಿಯಮದಲ್ಲಿ ಕೂಡ ಒಂದು ರೀತಿಯ ಮನೋವೈಜ್ಞಾನಿಕ ಅಂಶವನ್ನು ನಾವು ಕಾಣಬಹುದು. ಎಂದರೆ, ತನ್ನನ್ನು ಪ್ರೀತಿಸುತ್ತಿದ್ದ, ಪತಿ ಕಣ್ಮರೆಯಾದ ಆಘಾತದಿಂದ ಆಕೆ ಇನ್ನೂ ಚೇತರಿಸಿಕೊಂಡಿರುವುದಿಲ್ಲ. ಅಲ್ಲದೆ ಬೇರೊಬ್ಬ ಯುವಕನೊಂದಿಗೆ ವಿವಾಹವಾಗಲು ಆಕೆಯ ಮನಸ್ಸು ಪಕ್ವವಾಗಿರುವುದಿಲ್ಲ. ಇಂತಹ ಸಂದರ್ಭದಲ್ಲಿ ತರಾತುರಿಯಲ್ಲಿ ಮತ್ತೊಂದು ವಿವಾಹವಾದಲ್ಲಿ ಆಕೆಗೆ ಧರ್ಮಸಂಕಟವಾಗುದಲ್ಲದೆ, ಆಕೆ ದುಃಖದಿಂದ ಇದ್ದಲ್ಲಿ ಅದು ವಿವಾಹವಾದ ಯುವಕನ ಮೇಲೆ ಹಾಗೂ

ಆತನ ಕುಟುಂಬದವರ ಮೇಲೆ ಪರಿಣಾಮ ಬೀರಿ ಅವರ ಸಂಸಾರದಲ್ಲಿ ಒಡಕು ಕಾಣಿಸಿಕೊಳ್ಳಬಹುದು ಎಂಬ ದೂರದೃಷ್ಟಿಯನ್ನು ಕಾಣಬಹುದು. ಇಷ್ಟೇ ಅಲ್ಲದೆ, ಕಾಲ ಎಲ್ಲ ನೋವನ್ನೂ ಮರೆಸುತ್ತದೆ ಎಂಬ ಸತ್ಯವನ್ನು ಇಲ್ಲಿ ಕಾಣಬಹುದು. ಪತಿ ಮರಣ ಹೊಂದಿದ ನಂತರ ಆಕೆಯನ್ನು 'ಕಲ್ಲ್ ಮರ ಕೈಪ' ಆಚರಣೆ ಮುಗಿಸಿ ತವರಿಗೆ ಕರೆದೊಯ್ಯುತ್ತಾರೆ. ಮುಂದಿನ ಒಂದು ವರ್ಷ ಆಕೆ ತವರು ಮನೆಯಲ್ಲಿದ್ದು, ತವರಿನ ಸಾಂತ್ವನ, ಪ್ರೀತಿಯಲ್ಲಿ ಪತಿಯನ್ನು ಮರೆಯುತ್ತಾಳೆ. ನಂತರ ಬೇರೊಬ್ಬನಿಗೆ ವಿವಾಹ ಮಾಡಿಕೊಟ್ಟಲ್ಲಿ ಆಕೆ ಹೊಂದಿಕೊಂಡು ಬದುಕುಸಾಗಿಸುವಳು.

'ಬುಡ್‌ಧಾರೆ' ಪದ್ಧತಿ

ಒಂದು ವೇಳೆ ಪತಿ ಮರಣ ಹೊಂದಿ ಆಕೆಗೆ ಬೇರೊಂದು ಕುಟುಂಬದ ಯುವಕನೊಂದಿಗೆ ವಿವಾಹ ಮಾಡಲು ತವರು ಮನೆಯವರು ನಿಶ್ಚಯಿಸಿದಾಗ ನಡೆಯುವ ವಿಶೇಷ ಪದ್ಧತಿಯೇ ಬುಡ್‌ಧಾರೆ ಪದ್ಧತಿ. ಹಾಗೆಯೇ ಯಾವುದೋ ಒಂದು ಕಾರಣಕ್ಕೆ ಗಂಡು ಹಾಗೂ ಹೆಣ್ಣಿಗೆ ಸರಿ ಬರದಿದ್ದಲ್ಲಿ ಅವರಿಬ್ಬರೂ ಬೇರೆ ಬೇರೆಯಾಗಿ ಸಂಬಂಧ ಕಡಿದುಕೊಳ್ಳದಿದ್ದಲ್ಲಿ ಅದನ್ನು "ಬುಡ್‌ಧಾರೆ" ಎಂದು ಕರೆಯುತ್ತಾರೆ. ಯಾವ ಕಾನೂನು ಕಟ್ಟಳೆ, ಅಸಮಾಧಾನ, ವಾದ ವಿವಾದ ಇಲ್ಲದೆ ಹನ್ನೊಂದು ಕಲ್ಲು ಹರಳುಗಳೊಂದಿಗೆ ಸಂಬಂಧ ಕಡಿದುಕೊಳ್ಳುವ ಈ ಆಚರಣೆ ನಿಜವಾಗಿಯೂ, ಅಚ್ಚರಿಯ ಅಂಶವಾಗಿ ಕಾಣಿಸಿಕೊಳ್ಳುತ್ತದೆ. "ಬುಡ್‌ಧಾರೆ" ಪದ್ಧತಿಯನ್ನು ನಡೆಸುವಾಗ ಎರಡು ಕಡೆಯ ಅರುವ ಹಾಗೂ ಇತರ ಪ್ರಮುಖರು ಇರುತ್ತಾರೆ. ಇವರ ಸಮ್ಮುಖದಲ್ಲಿ ದಂಪತಿಗಳನ್ನು ಕರೆದು ಅವರ ಅನಿಸಿಕೆ ಅಭಿಪ್ರಾಯ ತಿಳಿದುಕೊಂಡು ಅವರಿಗೆ ಪರಸ್ಪರ ಹೊಂದಾಣಿಕೆ ಬರದ ಕಾರಣ ಎರಡೂ ಕುಟುಂಬದವರು ಸೇರಿ ಸಂಬಂಧ ಕಡಿದುಕೊಳ್ಳಲು ತೀರ್ಮಾನಿಸಿದ್ದೇವೆ ಎಂದು ಹೇಳುತ್ತಾರೆ. ಅಲ್ಲದೆ ಇವರಿಬ್ಬರು ಮುಂದೆ ಬೇರೊಬ್ಬರನ್ನು ವಿವಾಹವಾಗುವುದಕ್ಕೆ ಯಾವುದೇ ವಿರೋಧ ಇರುವದಿಲ್ಲವೆಂದು ಪರಸ್ಪರ ಪ್ರಮಾಣ ಮಾಡಿಸುತ್ತಾರೆ. "ಬುಡ್‌ಧಾರೆ" ಅನಂತರ ಇವರು ಆರು ತಿಂಗಳ ಕಾಲ ವಿವಾಹವಾಗುವಂತಿಲ್ಲ. ಇದರ ಹಿಂದೆ ಕೂಡ ವೈಜ್ಞಾನಿಕ ಕಾರಣಗಳಿವೆ. ಗಂಡ ಹಾಗೂ ಹೆಂಡತಿ ನಡುವೆ ಭಿನ್ನಾಭಿಪ್ರಾಯ, ಅಸಮಾಧಾನ ಸಹಜ. ಅವರು ಬೇರೆ ಬೇರೆಯಾದರೂ ಮತ್ತೆ ಮನಸ್ಸು ಬದಲಾಯಿಸಿ ಒಂದಾಗಲು ಆರು ತಿಂಗಳು ಅವಕಾಶವಿರುತ್ತದೆ. ಒಂದು ವೇಳೆ ಇಬ್ಬರೂ ಒಪ್ಪಿದಲ್ಲಿ ಗಂಡು ಹೆಣ್ಣಿನ ತವರು ಮನೆಗೆ ಬಂದು ಆಕೆಯನ್ನು ಕರೆದುಕೊಂಡು ಹೋಗಿ ಸಂಸಾರ ನಡೆಸಬಹುದು. ಇದು ಹಿರಿಯ ಮುಖಂಡರು ನೀಡುವ ಉತ್ತಮ ಅವಕಾಶವಾಗಿದ್ದು ಕೊಡವರ ದೂರದೃಷ್ಟಿಯನ್ನು ಇಲ್ಲಿ ಗುರುತಿಸಬಹುದು.

ಒಕ್ಕ ಪರಿಜೆ

ಒಂದು ಕುಟುಂಬದಲ್ಲಿ ಗಂಡು ಮಕ್ಕಳಿಲ್ಲದೆ, ಅಥವಾ ಗಂಡು ಮಕ್ಕಳು ಹುಟ್ಟಿದರೂ ಅಕಾಲ ಮರಣಕ್ಕೆ ತುತ್ತಾಗಿ ವಂಶೋದ್ಧಾರರು ಬೇಕೆಂದು ಬಯಸುವ ಭಾರತೀಯ ಸಂಸ್ಕೃತಿಯ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ವ್ಯವಸ್ಥೆಯ

ಭಾಗವಾಗಿ ಕೊಡಗಿನಲ್ಲಿ ಈ ಪದ್ಧತಿ ಕಂಡುಬಂದಿದೆ. ಕುಟುಂಬದಲ್ಲಿ ಒಬ್ಬಳೇ ಹೆಣ್ಣು ಮಗು ಇದ್ದಲ್ಲಿ ಆಕೆಯನ್ನು ಬೇರೆ ಮನೆತನಕ್ಕೆ ಮದುವೆ ಮಾಡಿಕೊಡುವುದರಿಂದ ಆಕೆ ಹುಟ್ಟಿದ ಕುಟುಂಬ ನಿಸ್ಸಂತತಿಯಾಗಿ ನಿರ್ನಾಮವಾಗುವುದೆಂಬ ಭಾವನೆ ಕೊಡವರದು. ಇಂತಹ ಸಂದರ್ಭಗಳಲ್ಲಿ ಅಳಿಯನನ್ನೇ ಮನೆಯ ವಾರಸುದಾರನನ್ನಾಗಿ ಮಾಡಿಕೊಳ್ಳುವ ಪದ್ಧತಿ ಈ ಭಾಗದಲ್ಲಿದೆ. ಆದ್ದರಿಂದ ಮದುವೆಯಾಗುವ ಗಂಡನನ್ನು ತನ್ನ ಕುಟುಂಬದಲ್ಲಿ ಉಳಿಸಿಕೊಳ್ಳುವುದೇ ಒಕ್ಕ ಪರಿಜೆಯಾಗಿದೆ.

"ವಂಶೋದ್ಧಾರಕ್ಕಾಗಿ ಮಾಡಿಕೊಳ್ಳುವ ಒಕ್ಕ ಪರಿಜೆಯನ್ನು 'ಕುತ್ತಿಕ್ ನಿಪ್ಪೊ' ಎಂದು ಕರೆಯುತ್ತಾರೆ"[೧೫] ಒಕ್ಕಪರಿಜೆಯಲ್ಲಿ ಗಂಡು ಮತ್ತು ಹೆಣ್ಣಿಗೆ ಒಂದೇ ಮುಹೂರ್ತವಿರುತ್ತದೆ. ಒಂದು ಕುಟುಂಬದ ಉಳಿವಿಗಾಗಿ ಈ ಮದುವೆ ನಡೆಯುತ್ತದೆ. ಗಂಡು ತನ್ನ ಕುಟುಂಬ ಬಿಟ್ಟು ಹೆಣ್ಣಿನ ಕುಟುಂಬಕ್ಕೆ ಆಶ್ರಯ ನೀಡಬೇಕು. ಈ ಪದ್ಧತಿಯಲ್ಲಿ ಮದುವೆಯಾದ ಗಂಡಿಗೆ ತನ್ನ ಹೆಂಡತಿಯ ಮನೆತನದ ಹೆಸರನ್ನು ಇಡುವರು. ಈತನೇ ಮುಂದೆ ಮನೆಯ ಯಜಮಾನನಾಗುವನು. ಅವನಿಂಧ ಹುಟ್ಟಿದ ಮಕ್ಕಳು ತಮ್ಮ ತಾಯಿಯ ಕುಟುಂಬಕ್ಕೆ ಸೇರುತ್ತವೆ. ಮುಂದೆ ಆ ಮಕ್ಕಳಿಗೂ ತಾಯಿಯ ಮನೆತನದ ಹೆಸರು ಶಾಶ್ವತವಾಗಿ ಉಳಿಯುತ್ತದೆ. ಈ ಪದ್ಧತಿ ಹಲವು ಹಿಂದೂ ಸಮುದಾಯದ ದತ್ತು ಸ್ವೀಕಾರದ ಪದ್ಧತಿಯನ್ನೇ ಹೋಲುತ್ತದೆಯೆನ್ನಬಹುದು.

ಮಕ್ಕ ಪರಜೆ

ಸಂತಾನಾಭಿವೃದ್ಧಿಗಾಗಿ ನಡೆಯುವ ಈ ಪದ್ಧತಿಯನ್ನು 'ಪಚ್ಚಡಕ್ ನಡಪದ್'[೧೬] ಎಂದು ಕರೆಯುತ್ತಾರೆ. ಈ ಮದುವೆಯಲ್ಲಿ ವಿಶೇಷ ನಿಯಮ, ಶಾಸ್ತ್ರಗಳಿವೆ. "ಒಂದು ಕುಟುಂಬದಲ್ಲಿ ಗಂಡು ಸಂತಾನವಿಲ್ಲದೆ ಗಂಡಸರಿಲ್ಲದೆ ಹೆಣ್ಣು ಸಂತಾನ ಮಾತ್ರವಿದ್ದು, ಆಕೆಯ ನಂತರ ಈ ಕುಟುಂಬ ನಿಸ್ಸಂತತಿಯಾಗುವಂತಿದ್ದರೆ, ಯಾರೂ ಕೂಡ ಆ ಕುಟುಂಬದಲ್ಲಿ 'ಕುತ್ತಿಕ್ ನಿಲ್ಲಲು' ಅಂದರೆ ಒಕ್ಕ ಪರಿಜೆಗೆ ಒಪ್ಪದಿದ್ದರೆ ಮಕ್ಕ ಪರಿಜೆಯ ಏರ್ಪಾಡು ಮಾಡಿಕೊಳ್ಳಬಹುದು. ಮಕ್ಕ ಪರಿಜೆಗೂ ಒಕ್ಕ ಪರಿಜೆಗೂ ಒಂದು ಮುಖ್ಯ ವ್ಯತ್ಯಾಸವಿದೆ. ಮಕ್ಕ ಪರಿಜೆಯಲ್ಲಿ ಗಂಡು ಹೆಣ್ಣಿನ ಮನೆಯಲ್ಲೇ ಇರಬೇಕಾಗಿಲ್ಲ. ಇಲ್ಲಿ ಸಂತಾನ ಅಭಿವೃದ್ಧಿ ಮಾತ್ರ ಮುಖ್ಯವಾಗಿರುತ್ತದೆ. ಹೆಣ್ಣಿನ ಆಸ್ತಿ ಮತ್ತು ಇತರ ಯಾವುದೇ ವಿಷಯಗಳಲ್ಲೂ ಗಂಡಿಗೆ ಹಕ್ಕು ಇರುವುದಿಲ್ಲ."[೧೬] ಇತರ ಸಮುದಾಯದಲ್ಲಿ ನಡೆಯುವ ಕೂಡಾವಳಿ ಪದ್ಧತಿಯಂತೆ ಈ ವ್ಯವಸ್ಥೆ ಕಂಡುಬಂದರೂ ಇಲ್ಲಿ ಸಂತಾನಾಭಿವೃದ್ಧಿಗೇ ಪ್ರಾಶಸ್ತ್ಯ.

ವಿಧವೆ ಪುನರ್ವಿವಾಹ ಮಾಡಿಕೊಂಡರೆ ಅದು ಕೂಡಾವಳಿಯೇ ಆಗುತ್ತದೆ. ಇದಲ್ಲದೆ ಮದುವೆಯಾದ ಹೆಂಡತಿಯು ಹೊಂದಾಣಿಕೆ ಇಲ್ಲದೆ ಗಂಡನ ಜೊತೆಯಲ್ಲಿ ಬಾಳ್ವೆ ಮಾಡಲು ಇಷ್ಟವಿಲ್ಲದೆ ಅಥವಾ ಸಾಧ್ಯವಾಗದೆ ಹೋದರೆ ಆಗ ಊರಿನ ಮುಖಂಡರನ್ನು ಸೇರಿಸಿ ಅವರು ವಿಧಿಸುವ ದಂಡಮೊತ್ತವನ್ನು ಕೊಟ್ಟು ಆ ಗಂಡನ ಸಂಬಂಧವನ್ನು ಕಡಿದುಕೊಳ್ಳುತ್ತಾಳೆ. ನಂತರ ಅವಳು ಕೂಡಾವಳಿಯನ್ನು ಮಾಡಿಕೊಳ್ಳಲು ಅರ್ಹಳಾಗುತ್ತಾಳೆ.

"ಕೊಡವರಲ್ಲಿ ಮಕ್ಕಪರಿಜೆ ಮತ್ತು ಒಕ್ಕ ಪರಿಜೆಗಳು ವಿಶೇಷವಾದ ವಿಧಾನಗಳು.ವಿಧವೆಯು ಗಂಡನ ಸಹೋದರನನ್ನು ಮದುವೆ ಮಾಡಿಕೊಳ್ಳುವುದು ವಿಶೇಷವಾಗಿದೆ. ಇತ್ತೀಚೆಗೆ ಮಕ್ಕಪರಿಜೆಯ ಮಾತ್ರ ಉಳಿದಿದೆ. ಕೊಡವರಲ್ಲಿ ಕಂಡು ಬರುವ 'ಪಚ್ಚಡತ್ ಪೊಣ್' ಈ ಪದ್ಧತಿ ಮೊದಲು ಪಾಂಡವರ ಕಾಲದಲ್ಲಿ ಕಂಡು ಬಂದಿದೆ. ಸುಗಂಧಿನಿಯ ಮಕ್ಕಳಾದ ಚಿತ್ರಸೇನ, ವಿಚಿತ್ರಸೇನರು ಮಡಿದು ಹೋದ ನಂತರ ಅರಮನೆಯಲ್ಲಿ ಸಂತತಿ ಇಲ್ಲದ್ದರಿಂದ ವೇದವ್ಯಾಸರನ್ನು ಕರೆಸಿ ಮಡಿದು ಹೋದವರ ಪತ್ನಿಯರಾದ ಅಂಬ, ಅಂಬಾಲಿಕೆಯರಿಗೆ ವೇದವ್ಯಾಸರಿಂದ ಗರ್ಭದಾನ ಕೊಡಿಸಿದ ಸಂದರ್ಭದಲ್ಲಿ ಹುಟ್ಟಿದ ಮಕ್ಕಳೇ ಧೃತರಾಷ್ಟ್ರ ಮತ್ತು ಪಾಂಡುರಾಯರು. ಆದ್ದರಿಂದ ಬ್ರಹ್ಮಕುಲದವರನ್ನು ಸ್ವಾಮಿ ಎಂದು ಕರೆಯುವುದು ರೂಢಿಯಲ್ಲಿದೆ. ಸ್ವಾಮಿ ಎಂದರೆ ದೇವರಲ್ಲ, ಪೂಜ್ಯರಾದ ಗುರುಗಳು, ಆದ್ದರಿಂದ ಹಿರಿಯರಿಂದ ಕಿರಿಯರಿಗೂ ಸ್ವಾಮಿ ಎಂದು ಕರೆಯುವ ವಾಡಿಕೆ."[೧೮]

ಕೊಡವರಲ್ಲಿ ಕಂಡು ಬರುವ ಮಕ್ಕಪರಿಜೆಯನ್ನು ಕುರಿತು ಹೇಳುವ ಸಂದರ್ಭದಲ್ಲಿ ಇದನ್ನು ಮೊದಲು ಅರ್ಜುನನು ನಡೆಸಿರುವನೆಂದು ಪುರಾಣದಲ್ಲಿ ಕಂಡುಬಂದಿದೆ. ಮಣಿಪುರದಲ್ಲಿ ಚಿತ್ರಾಂಗದೆಯನ್ನು ವರಿಸಿದ ನಂತರ ಹುಟ್ಟಿದ ಮಗನೇ ಬಬ್ರುವಾಹನ ತದನಂತರ ಆ ರಾಜ್ಯದ ಪದವಿ ಆತನಿಗಾಯಿತು. ಅದೇ ರೀತಿ ಕೊಡವರಲ್ಲಿ ಇಂತಹ ಪದ್ಧತಿಗಳು ಬಂದಿವೆ.

ಕೊಡವರು ಚಂದ್ರವಂಶ ಕ್ಷತ್ರಿಯರೆಂದು ಹೇಳಿಕೊಳ್ಳುತ್ತಾ ಅವರು ಪಾಂಡವರ ಜೀವನ ನೀತಿಯನ್ನೇ ಅನುಸರಿಸುತ್ತಿದ್ದಾರೆ ಎಂಬುವುದು ಇಲ್ಲಿಯ ಹಿರಿಯರ ಅಭಿಪ್ರಾಯವಾಗಿದೆ. ಈ ಕೆಳಗಿನ ಹಾಡಿನಲ್ಲಿ ಮೇಲಿನ ವಿವರಗಳನ್ನು ಒಳಗೊಂಡ ಸಂಗತಿ ಅಡಕವಾಗಿದೆ.

"ಅಂಗಯಿಲ್ ಪುಣ್ಣುಕ್
ಕನ್ನಡಿಯೊಂದ್ ತಾಬೋಂಡ
ಚಂದ್ರವಂಶ ಕ್ಷತ್ರಾಂದೊ
ಕೊಡುಮಲೆ ಕೊಡವಡ
ಕೆಟ್‌ನ ಅಲೆ ಉಳ್ಳ
ಪೀಚೆಕತ್ತಿ ಕಂಡಕ
ಕ್ಷತ್ರಿಯಂದರಿವಾಲ.......
ಪಂಚಪಾಂಡೊಗಂ ಜಾಳು
ಪೊಣ್ಣೊಬ್ಬಳ ಬೆಚ್ಚೋಲೆ
ಕೊಡುಮಲೆಲ್ ಕೊಡವರೊ
ಅಣ್ಣಯ್ಯ ಪೊಲಿಂಜಕ
ತಮ್ಮಯ್ಯನ ಕೂಡಿಬಾವ
ತಮ್ಮಯ್ಯ ಪೊಲಿಂಜಕ
ತಮ್ಮಯ್ಯಂಡ ಪೊಂಗಳೊ

ಅಧ್ಯಾಯ್ಯನ ಕೂಡಿ ಬಾವ.....ಇತ್ಯಾದಿ
ಪಾಂಡವಡ ನಡಪ್ಪನ್
ಕೊಡುದೇಶತ್ ಕೊಡುವರೊ
ನಡಲ್ತೆಂಗೊಂಡ್ ಬಪ್ಪಾನ್"[೧೯]

ಕೊಡವರ ವಿವಾಹ ಪದ್ಧತಿಗಳಿಗೆ ಮಹಾಭಾರತ ಕಾಲದ ಕುರುಕ್ಷತ್ರಿಯರ ಪದ್ಧತಿಗಳೇ ಮೂಲ ಎಂದು ತೋರುತ್ತದೆ. ವಿಧವೆಯ ಗಂಡ ಸತ್ತಾಗ ಅವನ ಸಹೋದರನನ್ನು ಮದುವೆ ಮಾಡಿಕೊಳ್ಳುವ ಪದ್ಧತಿಯನ್ನು ಪಾಂಡವರ ಪದ್ಧತಿಯೆಂದೂ, ಈ ಪದ್ಧತಿ ಕೊಡವರಲ್ಲಿ ಇದೆ ಎಂಬುವುದನ್ನು ಈ ಸಂದರ್ಭವು ಸಾಕ್ಷೀಕರಿಸುತ್ತದೆ.

ಹಿಂದೂ ಧರ್ಮಸ್ಮೃತಿಗಳಿಗೆ ಮೂಲದಂತಿರುವ ಮನುಸ್ಮೃತಿಯನ್ನು ನೋಡಿದಾಗ ಅಲ್ಲಿ ೯ನೇ ಅಧ್ಯಾಯದಲ್ಲಿ ಮೇಲಿನ ವಿವಾಹ ಪದ್ಧತಿಗಳ ಉಲ್ಲೇಖವಿರುವುದು ಕಂಡುಬರುತ್ತದೆ.

"ದೇವರಾದ್ವಾ ಸಪಿಂಡಾದ್ವಾ ಸ್ತ್ರೀಯಾ ಸಮ್ಯಜ್ನಾಯುಕ್ತಯಾ
ಪ್ರಜೇಪ್ಸಿತಾಧಾಗಂತವ್ಯಾ ಸಂತಾನಸ್ಯ ಪರೀಕ್ಷಯೇ"[೨೦]

ಇದರ ಅರ್ಥ:– ಮಕ್ಕಳಿಲ್ಲದಿದ್ದರೆ ಗಂಡ ಅಥವಾ ಹಿರಿಯರು ನಿಶ್ಚಯ ಮಾಡಿ ನಿಯೋಜಿಸಲ್ಪಟ್ಟ ಗಂಡನ ಸಹೋದರನಿಂದ ಅಥವಾ ಕುಟುಂಬದ ನಿಕಟ ಬಂಧುವೊಬ್ಬನಿಂದಾಗಲೀ ಹೆಂಡತಿಗೆ ಶಾಸ್ತ್ರ ವಿಧಿಸಿದ ರೀತಿಯಲ್ಲಿ ಮಕ್ಕಳಾಗುವಂತೆ ಮಾಡಿಕೊಳ್ಳಬಹುದು.

"ಯಸ್ಯಾಮ್ರಿಯೇತ ಕನ್ಯಾಯಾ ವಾಚಾಸತ್ಯೇ ಕೃತೇ ಪತಿಃ
ತಾಮನೇನ ವಿಧಾನೇನ ನಿಜೋವಿಂದೇತ ದೇವರಃ"[೨೧]

ಕ್ಷತ್ರಿಯ ಪಂಗಡಗಳಲ್ಲಿ ಗಂಡಂದಿರು ಯುದ್ಧದಲ್ಲಿ ಮೃತರಾಗುವ ಸಂಭವ ಹೆಚ್ಚು, ಹಾಗೆಯೇ ಕೊಡವರಲ್ಲಿ ವೀರಸೇನಾನಿಗಳು ಸೇನೆಯಲ್ಲಿ ಮರಣ ಹೊಂದುತ್ತಾರೆ. ಕೊಡವರಲ್ಲಿ ಕಂಡುಬರುವ ಮೃತ ಪತಿಯ ಸಹೋದರನು ಮೃತ ಪತ್ನಿಯನ್ನು ಮದುವೆ ಮಾಡಿಕೊಳ್ಳುವ ಪದ್ಧತಿ ಮನುಸ್ಮೃತಿಯ ಕಾಲದಿಂದಲೂ ನಡೆದು ಬಂದಿದೆಯೆಂದು ಸ್ಪಷ್ಟವಾಗುತ್ತದೆ.

ಕನ್ನಿಮಂಗಲ

ತಂದೆ ತಾಯಂದಿರು ವರ, ವಧುವನ್ನು ನೋಡಿ ನಿಶ್ಚಯಿಸುವ ವಿವಾಹವೇ ಕನ್ನಿಮಂಗಲ. ಇಲ್ಲಿ ಹಲವಾರು ರೀತಿಯ ಪರೀಕ್ಷೆಗಳು ನಡೆಯುತ್ತದೆ. ವಧುವಿನ ತಾಯಿಯ ನೀತಿ, ನಡತೆ, ಹುಡುಗಿಯ ಸೌಂದರ್ಯ, ವಿದ್ಯೆ ಮೊದಲಾದವುಗಳನ್ನು ವರನ ಕಡೆಯವರು ಪರೀಕ್ಷಿಸಿದ್ದಾರೆ. ವಧುವಿನ ಕಡೆಯವರು ವರನ ಕುಟುಂಬ, ಆರ್ಥಿಕಸ್ಥಿತಿಗತಿ, ಆರೋಗ್ಯ, ನೀತಿ ನಡತೆಗಳನ್ನು ಪರಿಶೀಲಿಸುವರು.

ಕೊಡವರ ಈ ವಿವಾಹದಲ್ಲಿ ಹಿಂದೂ ಪಂಗಡಗಳಲ್ಲಿರುವಂತೆ ಸಪ್ತಪದಿ ಇರುವುದಿಲ್ಲ. ವರನು ವಧುವಿಗೆ ತಾಳಿಕಟ್ಟುವ ಬದಲಿಗೆ ವಧುವಿನ ತಾಯಿ

ಕಟ್ಟುತ್ತಾಳೆ. ತಾಯಿ ಇಲ್ಲದಿದ್ದರೆ ಮುತ್ತೈದೆ ಸ್ತ್ರೀಯರು ಕರಿಮಣಿ ಪೋಣಿಸಿರುವ 'ಪತ್ತಾಕ್'ನ್ನು ಕಟ್ಟುತ್ತಾರೆ. ಕೊಡವರಲ್ಲಿ ಜಾತಕವನ್ನು ಪರೀಕ್ಷಿಸಿ ಹೆಣ್ಣನ್ನು ಒಪ್ಪುತಿದ್ದರು. ಹೆಣ್ಣಿನ ಜಾತಕವನ್ನು ಗಂಡಿನ ಕಡೆಯವರು ತಮ್ಮ ಮನೆಗೆ ಕಳುಹಿಸಿಕೊಡಲು ಕೇಳಬಾರದು. ಗಂಡಿನ ಜಾತಕವನ್ನು ಹೆಣ್ಣಿನ ಕಡೆಯವರು ತರಿಸಿಕೊಂಡು ಜಾತಕ ನೋಡಿ ಸರಿಯಾದಲ್ಲಿ ಹೆಣ್ಣು ನಿಶ್ಚಯಿಸುತ್ತಾರೆ. ಒಂದು ವೇಳೆ ಜಾತಕ ಸರಿ ಬರದಿದ್ದಲ್ಲಿ ಹುಟ್ಟಿದ ನಕ್ಷತ್ರದ, ನಾಮನಕ್ಷತ್ರವನ್ನು ನೋಡಿ ಅದರಂತೆ ಮದುವೆ ಸಮಯದಲ್ಲಿ ಹೆಸರಿನ ಮೊದಲಕ್ಷರದಿಂದ ನಕ್ಷತ್ರವನ್ನು ತಿಳಿದು ಗಣ ಕೂಟದ ಸಾಮ್ಯತೆ ನೋಡಿ ಮದುವೆ ನಿಶ್ಚಯ ಮಾಡಲಾಗುತ್ತದೆ. "ಒಂದು ವೇಳೆ ಜಾತಕ ಸರಿ ಆಗದಿದ್ದಲ್ಲಿ, ಅಥವಾ ಇಲ್ಲದಿದ್ದಲ್ಲಿ ದೇವಸ್ಥಾನಕ್ಕೆ ಹೋಗಿ ವಧೂವರರ ಸಂಬಂಧದಲ್ಲಿ ಪೂಜೆ ಮಾಡಿಸುವರು. ಆ ಸಮಯದಲ್ಲಿ ವಿಗ್ರಹದಿಂದ ಕೆಂಪು ಹೂ ಬಿದ್ದರೆ ಕೆಟ್ಟದೆಂದು ಬಿಳಿ ಹೂ ಬಿದ್ದರೆ ಒಳ್ಳೆಯದೆಂದು ಫಲಗಳನ್ನ ತಿಳಿಯುತ್ತಾರೆ".[೨೨]

ಇತ್ತೀಚೆಗೆ ಹಳೆಯ ವಿಧಾನಗಳನ್ನು ಅನುಸರಿಸದೆ 'ಮನ ಒತ್ತ್‌ೇಂಗಿ ಗಣ ಒತ್ತಿತ್"(ಮನಸ್ಸು ಒಪ್ಪಿದರೆ ದೇವರು ಒಪ್ಪುತ್ತಾರೆ) ಎಂದು ಮನಸ್ಸಿನ ಸಾಮ್ಯತೆಯನ್ನು ನೋಡಿ ವಿವಾಹ ಏರ್ಪಡಿಸುತ್ತಾರೆ. ಕೊಡವರಲ್ಲಿ ಮದುವೆ ನಿಶ್ಚಯ ಮಾಡುವ ಸಂಭ್ರಮವನ್ನು 'ಮಂಗಲಕುರಿಪ'[೨೩] ಎನ್ನುತ್ತಾರೆ. ಕುರಿ ಎಂದರೆ 'ನಿಶ್ಚಯ' ವೆಂದೂ ಮಂಗಲ ಅಂದರೆ ಮದುವೆ ಎಂದರ್ಥ. ಗಂಡಿನ ಕುಟುಂಬದ 'ಅರುವ' (ಕುಟುಂಬದ ಹತ್ತಿರದ ಸ್ನೇಹಿತ ಅಥವಾ ಮುಖ್ಯಸ್ಥ) ಮತ್ತು ಕುಟುಂಬದ ಮತ್ತೊಬ್ಬ ಸಂಬಂಧಿಕ ಹೀಗೆ ಮೂರು ಜನ ಹೆಣ್ಣಿನ ಮನೆಗೆ ಹೋಗುತ್ತಾರೆ. ದಕ್ಷಿಣದ ಕಡೆ ಒಪ್ಪುವೀಳ್ಯಕ್ಕೆ ಮೂರು ಜನರು ಹೋಗಬಾರದೆಂದು ನಂಬಿಕೆ ಇದೆ.

ಗಂಡಿನ ಮನೆಯವರು ಹೆಣ್ಣಿನ ಮನೆಗೆ ನಿಶ್ಚಿತಾರ್ಥಕ್ಕೆ ಹೋಗುವ ದಿನ ಹೆಣ್ಣಿನ ಕುಟುಂಬದ ಯಜಮಾನನು ತನ್ನ ಕುಟುಂಬದ ಅರುವ ಮತ್ತು ತನಗೆ ಬೇಕಾಗಿರುವವರನ್ನು ಮನೆಗೆ ಕರೆಸಬೇಕಾಗುತ್ತದೆ. ಗಂಡಿನ ಕಡೆಯವರಿಗೆ ಫಲಾಹಾರವನ್ನು ಕೊಟ್ಟುಸತ್ಕರಿಸಬೇಕಾಗುತ್ತದೆ. 'ಜ್ಯೋತಿಷ್ಯ'ನಿಂದ ಮುಹೂರ್ತದ ದಿನ (ನಾಳ್ ಮುಹೂರ್ತ)ವನ್ನು ನೋಡಿಸಿ ಅನುಕೂಲಕರವಾದ ಶುಭದಿನವನ್ನು ನಿಶ್ಚಯಿಸುತ್ತಾರೆ. ಜ್ಯೋತಿಷ್ಯವನ್ನು ನೋಡಲು ಬಂದ ಬ್ರಾಹ್ಮಣ ಅಥವಾ ಕಣಿಯನು 'ಲಗ್ನಪತ್ರಿಕೆ' ಬರೆಯುವನು. ಜ್ಯೋತಿಷಿಗೆ ಗಂಡಿನ ಕಡೆಯವರು ಪದ್ಧತಿಯಂತೆ ಒಂದು ಹಣವನ್ನು ಕೊಡಬೇಕಾಗುತ್ತದೆ.

ಈ ಸಂದರ್ಭದಲ್ಲಿ ಕೆಲವು ಪ್ರಮುಖ ಶಾಸ್ತ್ರಗಳೆಂದರೆ, ಪವಿತ್ರಗೊಳಿಸಿದ ನೀರನ್ನು ಪ್ರೋಕ್ಷಿಸಿ ಶುದ್ಧಿಗೊಳಿಸಿ, 'ತಳಿಯಕ್ಕಿ ಬೊಳಿಚ' (ದೀಪ) ದೀಪವನ್ನು ಹಚ್ಚಿ ಗಂಡಿನ ಕಡೆಯವರೊಂದು ಕಡೆ, ಹೆಣ್ಣಿನ ಕಡೆಯವರೊಂದು ಕಡೆ ಸಾಲಾಗಿ ನಿಂತುಕೊಳ್ಳುತ್ತಾರೆ. ಅನಂತರ ಎರಡೂ ಕಡೆಯ ಅರುವರು ಪರಸ್ಪರ ಸಂಭಾಷಣೆಯಂತೆ ಕೆಲವು ಮಾತನ್ನಾಡುತ್ತಾರೆ. "ಸಾಕ್ಷಿ ಹಣವನ್ನು ಹೆಣ್ಣಿನ ಮುಖ್ಯಸ್ಥ ಕೈಗೆ ಗಂಡಿನ ಮುಖ್ಯಸ್ಥ ಹಾಕುತ್ತಾನೆ. ಗಂಡಿನ ಅರುವ ಅಥವಾ

ಆ ಕುಟುಂಬದವನು ದೀಪಕ್ಕೆ ನಮಸ್ಕರಿಸಿ ಐದು ಹಣ ಅಥವಾ ಆಭರಣವನ್ನು ಸಂಕೇತವಾಗಿ ಇಡುವುದನ್ನು 'ಸಾಕ್ಷಿಪಣ (ಸಾಕ್ಷಿಹಣ)' ಎಂದು ಕರೆಯುತ್ತಾರೆ"೨೪

ಮದುವೆ ನಿಶ್ಚಿತಾರ್ಥದ ಅಂದರೆ 'ಮಂಗಲಕುರಿಪ' ಇದರ ಪ್ರಯುಕ್ತ ನಡೆಸುವ ಸಂಭಾಷಣೆ ಈ ಕೆಳಗಿನಂತಿದೆ. ನೆಲ್ಲಕ್ಕಿ ನಡುಬಾಡೆಯಲ್ಲಿ 'ತಳಿಯಕ್ಕಿ ಬೊಳಿಚ' (ದೀಪ) ಹಚ್ಚಿಟ್ಟು ಎರಡು ಕಡೆಗಳಲ್ಲಿ ಗಂಡು ಮತ್ತು ಹೆಣ್ಣಿನ ಕಡೆಯ 'ಮುಖ್ಯಸ್ಥರು' ಈ ರೀತಿ ಕುರಿ (ನಿಶ್ಚಯ) ಮಾಡುವರು.

"ಗಂಡಿನ ಕಡೆ ಮುಖ್ಯಸ್ಥ:–ದಂಡ್ ಕಡೆ ನಾಡೋನೂ, ಇಲ್ಲವನೂ ಬೆಂದೂ ಅಂಗನೂ ಅರುವನೂ ಸಾಲ್ ಕೆಟ್ಟಿ ನಿಂದಿರಾ? (ಎರಡೂ ಕಡೆಯ ನಾಡಿನವರು, ನಂಟರು, ಗ್ರಾಮಸ್ಥರೂ, ಅರುವ ಮೊದಲಾದವರು ಸಾಲಾಗಿ ನಿಂತಿದ್ದೀರಾ?)

ಹೆಣ್ಣಿನ ಮುಖ್ಯಸ್ಥ:– ನಿಂದತ್ (ನಿಂತಿದ್ದೇವೆ)

ಗಂಡಿನ ಅರುವ: ಅನ್ನನಾಚೇಂಗಿ, ನಂಗಡ ಮಾಳೇಟ್ಟಿರ ಚೆಂಗಪ್ಪಂದೆಣ್ಣುವ ಕುಞಕ್ ಕಾಡ್ಯಮಾಡ ಒಕ್ಕಡ ರಾಣಿ ಎಂದೆಣ್ಣುವ ಕುಞನ ತಂದ್ ಬೆಂದ್ ಪರಂದಿತ್ ಸಾಲ್ ಬಾಕೆ ಕೇಟಲ್ಲಿ ತಪ್ಪಾಂಗ್ ಅಡ್ಡಿ ಇಲ್ಲೇಂದ್ ಎಣ್ಣ್‌ನಾಂಗಾಯಿತ್ ನಂಗಬಂದಿತ್ತು. ಇಕ್ಕ ಮಂಗಲ ಕುರಿಚಿತ್ ತರಂಡೂಂದ್ ಕೇಟವ. (ಹಾಗಾದರೆ ನಮ್ಮ ಮಾಳೆಟ್ಟಿರ ಕುಟುಂಬದ ಚೆಂಗಪ್ಪನೆಂಬ ಮಗುವಿಗೆ ಕಾಡ್ಯಮಾಡ ಕುಟುಂಬದ ರಾಣಿಯನ್ನು ಮದುವೆ ಮಾಡಿಕೊಳ್ಳುವ ಸಲುವಾಗಿ ಮಾತುಕತೆ ನಡೆಸಲು ಬಂದಿದ್ದೇವೆ. ಈ ಮದುವೆ ನಿಶ್ಚಯ ಮಾಡಿ ಎಂದು ನಿಮ್ಮನ್ನು ಕೇಳುತ್ತಿದ್ದೇವೆ).

ಹೆಣ್ಣಿನ ಮುಖ್ಯಸ್ಥ:– ರಾಣಿ ಎಣ್ಣುವ ಕುಞನ ಚೆಂಗಪ್ಪ ಎಣ್ಣುವ ಕುಞಕ್ ತಂದು ಬೆಂದು ಪರಂದಿತ್ ಸಾಲ್ ಬಾಕೆ ಕೇಟಲ್ಲಿ, ಪಂಡಿಯ ನಡ್‌ಪ ಪೋಲೆ ನಾಳ್ ಮುಹೂರ್ತ ನೋಟ್‌ನಲ್ಲಿ ಒತ್ತ್ ಬುದ್ದಾನಗುಂಡ್, ತಪ್ಪ, ಕೊವ್ವಂದೆಣ್ಣಿತ್ ತಕ್ಕ್ ತ್‌ಂದಿತ್ ಇಂದೇಕ್....... ದಿನತ್...... ಎಣ್ಣುವ ಕುಞ ಅವಂಡ ಇಲ್ಲವನ, ಬೆಂದುನ ಅಂಗನ, ಅರುವನ, ಊರ್‌ನ, ನಾಡ್‌ನ ಎಲ್ಲ ಕೂಟಿತ್ ಅವಂಡ್ ಮನೆ ಮುಹೂರ್ತ ಕಯಿಚಿತ್ ಈ ಮನೆಕ್ ಮಂಗಲಾಡಿ ಬಂದಕ ಈ ಒಕ್ಕಡ...... ಎಣ್ಣುವ ಕುಞನ ಮುಹೂರ್ತ ಕೈಚಿತ್ ಇಳ್ಪಿ ಕೊಡ್‌ಪಾಂಗ್ ಅಡ್ಡಿ ಇಲ್ಲೆ ಅಲ್ಲಿ ಕೆತ್ತಣೆ..... ಎಣ್ಣುವ ಕುಞಕೂ, ಅವಂಡ ಇಲ್ಲವಂಗೂ, ಬೆಂದುಕೂ, ಅಂಗಂಗೂ, ಅರುವಂಗೂ, ಒರ್ ತಟ್ಟ್‌ಮುಟ್ಟ್ ಬರತನ್ನನೆ ನಡತಿ ತಪ್ಪಭಾರ ಕಾವೇರಮ್ಮಕೂ ದಂಡ್ ಒಕ್ಕಡ ಗುರು ಕಾರಣವಂಗಕೂ ಕೂಡಿತುಂಡ್. (ಕಾಡ್ಯಮಡ ಕುಟುಂಬದ ರಾಣಿ ಎಂಬ ಮಗುವನ್ನು ನಿಮ್ಮ ಚೆಂಗಪ್ಪನೆಂಬ ಮಗುವಿಗೆ ಮದುವೆ ಮಾಡಿಕೊಳ್ಳುವ ಪ್ರಯುಕ್ತ ಮಾತುಕತೆ ನಡೆದು ಮುಹೂರ್ತ ನೋಡಿದಾಗ ಎಲ್ಲವೂ ಸರಿಹೊಂದುತ್ತದೆ. ನಿಮ್ಮ ಮಗು ತನ್ನ ಕುಟುಂಬದವರು, ನೆಂಟರು, ಅರುವರು, ಊರವರು, ನಾಡಿನವರನ್ನು ಸೇರಿಸಿ ತನ್ನ ಮನೆಯಲ್ಲಿ ಮುಹೂರ್ತ ಕಳೆದು ಈ ಮನೆಗೆ ಮೆರವಣಿಗೆ ಬಂದಲ್ಲಿ ಈ ಕುಟುಂಬದ ರಾಣಿ ಎನ್ನುವ ಮಗುವನ್ನು ಮುಹೂರ್ತ ನಡೆಸಿಕೊಡುವಲ್ಲಿ ಯಾವ ಅಡ್ಡಿಯೂ ಇಲ್ಲ. ಅಲ್ಲಿಯವರೆಗೆ ಚೆಂಗಪ್ಪನೆಂಬ ಮಗುವನ್ನು ಆತನ ಕುಟುಂಬ ನಂಂಟರಿಷಂಬಿರಂಂ, ಅರುವ ಮೊದಲಾದವರನ್ನು

ಊರುನಾಡವರನ್ನು ಯಾವುದೇ ತೊಂದರೆಯಿಲ್ಲದೆ ರಕ್ಷಿಸುವ ಭಾರ ಶ್ರೀ ಮೂಲ ಕಾವೇರಮ್ಮನಿಗೂ ಈ ಎರಡು ಕುಟುಂಬಗಳ ಗುರುಹಿರಿಯರಿಗೂ ಸೇರಿದೆ).

ಗಂಡಿನ ಮುಖ್ಯಸ್ಥ: ಅನಕಿಕ್ಕ ಮಾಳೇಟ್ಟಿರ ಒಕ್ಕಡ ಚೆಂಗಪ್ಪಂದೆಣ್ಣುವ ಕುಞಕ್ ಕಾಡ್ಯಮಾಡ ಒಕ್ಕಡ ರಾಣಿ ಎಣ್ಣುವ ಕುಞನ ಕುರಿಚಿ ತಂದಾಂಗ್ ಒತ್ತಿತ್, ಇಂದೇಕ್ ೧೫ ದಿನತ್ ಮಂಗಲಾಡಿ ಪಾಡಿ ಬಂದಕ ಎಂಗಕ್ ಒರೂ ತಟ್ಟ್ ಮುಟ್ಟ್ ಇಲ್ಲತೆ ಈ ಕಾರ್ಯತ್‌ನ ತಿದ್ದಿತ್ ನೀರೆತಪ್ಪ ಅರುವನಾರ್ ಗೂವ? (ಹಾಗಾದರೆ ನಮ್ಮ ಕುಟುಂಬದ ಚೆಂಗಪ್ಪಎನ್ನುವ ಮಗುವು ನಿಮ್ಮ ಕುಟುಂಬದ ಗಂಗಮ್ಮ ಎನ್ನುವ ಮಗುವನ್ನು ಮದುವೆ ನಿಶ್ಚಯಕ್ಕೆ ನಾವು ಒಪ್ಪಿದ್ದೇವೆ. ಆದರೆ ಇಂದಿಗೆ ೧೫ ದಿನಗಳಲ್ಲಿ ನಾವು ಮದುವೆ ಮೆರವಣಿಗೆ ಬಂದಾಗ ನಮಗೆ ಯಾವುದೇ ತೊಂದರೆ ತಕರಾರು ಇಲ್ಲದೆ ಈ ಕೆಲಸವನ್ನು ಸರಿಗೊಳಿಸಿ ಮಾಡಿಕೊಡುವ ಸಹಾಯಕನಾರು?)

ಹೆಣ್ಣಿನ ಮುಖ್ಯಸ್ಥ : ನಾನೇ (ನಾನು)

ಗಂಡಿನ ಮುಖ್ಯಸ್ಥ : ನಿಂಗ ದಾಡ? (ನೀವು ಯಾರ ಮನೆಯವರು)

ಹೆಣ್ಣಿನ ಮುಖ್ಯಸ್ಥ : ಎಂಗ......ಬೊಪ್ಪಂಡ (ನಾಮ ಬೊಪ್ಪಂಡ)

ಗಂಡಿನ ಮುಖ್ಯಸ್ಥ : ಮಣ್ಣರುವನಾ? ಪೊನ್ನರುವನಾ?

ಹೆಣ್ಣಿನ ಮುಖ್ಯಸ್ಥ : ಮಣ್ಣರುವ

ಗಂಡಿನ ಮುಖ್ಯಸ್ಥ : ಎಂದಕ ಇದರಿ ಸಾಕ್ಷಿಪಣ (ಎಂದು ಹೇಳಿ ಹಣವನ್ನು ಕೊಡುವಂತೆ ಕೈ ನೀತಿ)...... ಎಣ್ಣುವ ಕುಞಕ್ ಮಂಗಲ ಕುರಿಚಿ ತಂದ ರಾಣಿ ಎಣ್ಣುವ ಕುಞಕ್‌ಳೆಯೋ, ಮೇಲೆಯೋ ಅಡ್ಡಬಟ್ಟೆಯೋ, ಪಾಳಾತನ್ನನೆ ಮೋತನ್ನಕೆ ನೋಟಿಯವ ಭಾರ ನಿಂಗಡದಾಯಿತುಂಡ್ (ಎಂದು ಹೇಳಿ ಕೈಯಲ್ಲಿರುವ ಸಾಕ್ಷಿಹಣವನ್ನು ಹೆಣ್ಣಿನ ಅರುವನ ಕೈಗೆ ನೀಡಬೇಕು)

ಹೆಣ್ಣಿನ ಅರುವ: ಸಾಕ್ಷಿಪಣ ಬಾತ್ (ಸಾಕ್ಷಿ ಹಣ ಬಂತು)

ಗಂಡಿನ ಅರುವ: 'ಈಡ್' ಬೆಚ್ಚಲುವಾ (ಸಂಕೇತದ ಈಡನ್ನು ಇಟ್ಟುಕೊಳ್ಳುವಿರಾ)

ಹೆಣ್ಣಿನ ಅರುವ : ಮರಿಯಾದಿ ಪ್ರಕಾರ[೨೫]

ಗಂಡಿನ ಅರುವ: ಅಂದಕ ಇದೋಳಿ (ಹಾಗಾದರೆ ತೆಗೆದುಕೊಳ್ಳಿ) ಈ ನಿಶ್ಚಿತಾರ್ಥ ಕಾರ್ಯಕ್ರಮ ನಡೆದ ನಂತರ ಗಂಡಿನ ಮುಖ್ಯಸ್ಥನಾಗಲಿ ಆತನ ಕುಟುಂಬದವನಾಗಲೀ, ದೀಪಕ್ಕೆ ನಮಸ್ಕರಿಸಿ 'ತಳಿಯಕ್ಕಿ ಬೊಳಿಚ'ಕ್ಕೆ ಐದು ಹಣ ಅಥವಾ ಆಭರಣವನ್ನಾಗಲೀ 'ಈಡ್' (ಸಂಕೇತ) ಆಗಿ ಇಡಬೇಕು.

ಕೊಡವರಲ್ಲಿ ದೀಪದ ಮುಂದೆ ಮದುವೆ ನಿಶ್ಚಿತಾರ್ಥ ಅಗ್ನಿ ಸಾಕ್ಷಿಯಾಗಿ ನಡೆಯುವ ಹಿಂದೂ ಧರ್ಮದ ನಿಶ್ಚಿತಾರ್ಥವನ್ನು ನೆನಪಿಸುತ್ತದೆ. ಈ ಸಮಯದಲ್ಲಿ ದೀಪದ ಮುಂದೆ ಇಡುವಂತಹ ಸಾಕ್ಷಿ ಪಣದ ಈಡನ್ನು (ಹರಕೆಯ ಹಣ) ಅಗ್ನಿ ಸಾಕ್ಷಿಯ ಈಡಿನ (ಸಂಕೇತ) ರೂಪದಲ್ಲಿ ಈ ಪದ್ಧತಿಯನ್ನು ಈಗಲೂ ಕಾಣಬಹುದಾಗಿದೆ.

"ಕೊಡವರಲ್ಲಿ ಮದುವೆ ಹಿಂದಿನ ದಿನದ ಚಪ್ಪರವನ್ನು 'ಕರಿಕ್ ಮುರಿಪೊ' ಎನ್ನುತ್ತಾರೆ. 'ಕರಿಕ್ ಮುರಿಪೊ'[೨೬] ಎರಡು ದಿನ ಮೊದಲು ಮದುವೆ ನಿಶ್ಚಯಿಸಿರುವ ಕುಟುಂಬದಲ್ಲಿ ಯಾರಾದರೂ ನಿಧನರಾದರೆ ಹನ್ನೊಂದು ದಿನಗಳವರೆಗೆ ಸೂತಕ ಇರುವ ಕಾರಣ ಮದುವೆ ಮಾಡುವಂತಿಲ್ಲ. ಯಾರಾದರೂ ಮರಣಹೊಂದಿದರೆ ಬಾಗಿಲ ಹಿಂದಿನಿಂದ ಶವವನ್ನು ತೆಗೆದುಕೊಂಡು ಹೋಗಿ ಶವ ಸಂಸ್ಕಾರ ಮಾಡಬೇಕು. ಮಕ್ಕಳು ಸತ್ತರೆ ಇದು ಅನ್ವಯಿಸುವುದಿಲ್ಲ. 'ಚಾವುಪೊಲೆ' ತೆಗೆಯಬಾರದು.

ಮದುವೆ ನಂತರ ಚಾವುಪೊಲೆ ತೆಗೆಯಬೇಕು. ಮದುವೆ ಹತ್ತಿರ ಬಂದಾಗ ಮೃತ್ಯುಸೂತಕವಾದರೆ ವಿಪರೀತ ಕಷ್ಟ ಎದುರಾಗುತ್ತದೆಂಬ ನಂಬಿಕೆ ಕೊಡವರಲ್ಲಿದೆ. ಮೃತ್ಯುವಿನ ಏಳನೇ ದಿನದಲ್ಲಿ ತಿಥಿ ಕರ್ಮಾಂತರಗಳನ್ನು ನಡೆಸಿ ಮದುವೆ ಆದ ನಂತರ 'ಜಾವುಪೊಲೆ' ತೆಗೆದು ತಿಥಿಕರ್ಮ ಮಾಡಬಹುದು. ಸೂತಕವಿಲ್ಲದ ಮನೆಯಲ್ಲಿ ಮದುವೆ ಮಾಡಬಹುದು. ಆದರೆ ಮದುವೆ ಮೆರವಣಿಗೆ ಹೋಗಲು ಸೂತಕದ ಅವಧಿ ಮುಗಿಯಬೇಕು.

ಮದುವೆ ನಿಶ್ಚಯದ ಅನಂತರ ಆಹ್ವಾನ ಪತ್ರಿಕೆಯನ್ನು ಹಂಚುತ್ತಾರೆ. ಪ್ರತಿ ಮನೆಗೆ ವಿಶಿಷ್ಟ ರೀತಿಯಲ್ಲಿ ತೆರಳಿ ಆಹ್ವಾನ ಪತ್ರಿಕೆಯನ್ನು ಕೊಟ್ಟು ಕರೆಯುತ್ತಾರೆ. ಇದನ್ನು 'ಮಂಗಲ ಎಣ್ಣುವ' ಎನ್ನುತ್ತಾರೆ. "ನಂಗಡ....ಂಗ್...... ಮನೇಂಜೆ ಮಂಗಲ.....ನೇ ತಾರೀಕ್ಕ್ ನಿಶ್ಚಯ ಆಯಿತ್. ನಿಂಗಡ ಈ ಮನೇಂಜಿ ಕರಿಕ್ ಮುರಿಪ ದಿನ ಓರ್ ಆಣೂ, ಒರ್ ಪೊಣ್ಣೂ ಬರೋಂಡು, ಮಂಗಲಂದ್ ಮನೆಕಾರ ಎಲ್ಲರೂ ಬರೋಂಡೂಂದ್ ಕೇಟವಕ್ ನಂಗ ಬಂದಿತ್"[೨೭] (ನಮ್ಮ ಮನೆ ಮದುವೆ ಚಪ್ಪರದ ದಿನ ಒಂದು ಗಂಡು ಹೆಣ್ಣು ಬರಬೇಕು, ಮದುವೆ ದಿನ ಮನೆಯವರೆಲ್ಲರೂ ಬರಬೇಕು) ಎಂದು ಮದುವೆಗೆ ಆಹ್ವಾನಿಸುತ್ತಾರೆ. ಸೂತಕ ಇರುವ ಮನೆಗೆ ಮದುವೆಗೆ ಆಹ್ವಾನ ನೀಡುವುದಿಲ್ಲ. ಹೀಗೆ ಸಾಂಪ್ರದಾಯಕವಾಗಿ ಕರೆದ ಮೇಲೆ ಮದುವೆಗೆ ಹೋಗದಿದ್ದರೆ ತಪ್ಪಾಗುತ್ತದೆ.

ಚಪ್ಪರದ ದಿನದಂದು (ಕರಿಕ್ ಮುರಿಪೊ) ಊರಿನ ಪ್ರತಿ ಮನೆಯಿಂದ ಒಬ್ಬ ಹೆಂಗಸು, ಒಬ್ಬ ಗಂಡಸು ಮದುವೆ ಮನೆಗೆ ಹೋಗಿ ಕೆಲಸ ನಿರ್ವಹಿಸುತ್ತಾರೆ. ಊರಿನ ಹೆಂಗಸರು ಅಡುಗೆ ಕೆಲಸ ಅಂದರೆ ತರಕಾರಿ ಹೆಚ್ಚುವುದು, ತೊಳೆಯುವುದು, ಗುಡಿಸುವುದು ಮುಂತಾದ ಕೆಲಸವನ್ನು ಮಾಡುತ್ತಾರೆ.

ಗಂಡಸರು ಮನೆಯ ಮುಂದೆ ಚಪ್ಪರ ಹಾಕುತ್ತಾರೆ. ಇದರಲ್ಲಿ ಐದು, ಏಳು, ಬೆಸಸಂಖ್ಯೆಯ ಕಾಲುಗಳಿರುತ್ತವೆ. ಚಪ್ಪರದ ಮರಗಳಲ್ಲಿ ಯಾವುದಾದರೊಂದು ಹಾಲು ಬರುವ ಮರ ಇರಲೇಬೇಕು. ಬೈನೆ ಮರದ ಸೊಪ್ಪು ನಿಷಿದ್ಧ. ಚಪ್ಪರದ ಕಾಲುಗಳಿಗೆ ಮಾವಿನ ತೋರಣ ಕಟ್ಟಬೇಕು. ಬಾಳೆಕಂಬ, ಬಿಳಿಬಟ್ಟೆಯನ್ನು ಚಪ್ಪರಕ್ಕೆ ಕಟ್ಟಲಾಗುತ್ತದೆ.

ಕೊಡವರಲ್ಲಿ ಎಲ್ಲಾ ಶುಭ ಸಂದರ್ಭಗಳಲ್ಲೂ ಹಿರಿಯರ ಕಾಲು ಮುಟ್ಟಿ ನಮಸ್ಕಾರ ಮಾಡುವ ಪದ್ಧತಿ ಇಂದಿಗೂ ಇದೆ. "ಉತ್ತರ ಭಾರತದಲ್ಲಿ ಮತ್ತು ದಕ್ಷಿಣ ಭಾರತದಲ್ಲೂ ಈ ಪದ್ಧತಿ ಇದೆ. ವೈದಿಕ ಧರ್ಮವನ್ನು ಅನುಸರಿಸುತ್ತಿರುವ

ಕುಟುಂಬಗಳಲ್ಲಿ ಹಿರಿಯರನ್ನು ಕಂಡರೆ ಕಿರಿಯರು ಕಾಲು ಮುಟ್ಟಿ ನಮಸ್ಕರಿಸುತ್ತಾರೆ. ಈ ಕ್ರಮಕ್ಕೆ ಅಭಿವಾದನ ಎಂದು ಹೆಸರು. ದಕ್ಷಿಣದ ಶ್ರೀ ವೈಷ್ಣವ ಬ್ರಾಹ್ಮಣರಲ್ಲಿ ವೈದಿಕರು ಈಗಲೂ ಒಬ್ಬರನ್ನೊಬ್ಬರು ಕಂಡರೆ ಸಾಷ್ಟಾಂಗ ನಮಸ್ಕಾರ ಮಾಡುವ ಪದ್ಧತಿ ಇದೆ. ಶ್ರೀ ವೈಷ್ಣವರಲ್ಲಿ ಒಂದು ಪಂಥವಾದ 'ವಡಹಲೈ' ಪಂಥದಲ್ಲಿ ಎರಡು ಬಾರಿ ನಮಸ್ಕಾರ ಮಾಡುವ ಪದ್ಧತಿ ಇದೆ."[೨೮]

ಕೊಡವರು ಮದುವೆ ಹಿಂದಿನ ದಿನದ ಸಮಾರಂಭವನ್ನು 'ತೇರಣ ಮಂಗಲ' (ಮೆಹಂದಿಶಾಸ್ತ್ರ) ಎಂದು ಕರೆಯುತ್ತಾರೆ. ಮದುಮಗ, ಮದುಮಗಳನ್ನು ನಡುಬಾಡೆಯಲ್ಲಿ ಕುಳ್ಳಿರಿಸಿ ತೇರಣಶಾಸ್ತ್ರ ನಡೆಸಲಾಗುತ್ತದೆ. ಮೂರು ಜನ ಮುತ್ತೈದೆಯರು ತೇರಣವನ್ನು ಹಾಕುತ್ತಾರೆ.

ತೇರಣ ಹಾಕುವಾಗ ನಾಲ್ಕು ಜನರು 'ದುಡಿ'ಯನ್ನು ತಟ್ಟಿಕೊಂಡು ಹಾಡನ್ನು ಹಾಡಬೇಕಾಗುತ್ತದೆ. ಮದುಮಕ್ಕಳಿಗೆ ತೇರಣ ಹಚ್ಚಿದರೆ ಬೇರೆಯವರ ಕೈ, ಕಾಲು ಮುಟ್ಟಿ ನಮಸ್ಕರಿಸುವಾಗ ಯಾವ ಅಂಟು ರೋಗವು ತಾಗದಿರಲೆಂದು ರೋಗನಿರೋಧಕವಾಗಿ ಮತ್ತು ಅಲಂಕಾರಕ್ಕಾಗಿ ತೇರಣ ಹಾಕುವ ಪದ್ಧತಿ ರೂಢಿಯಲ್ಲಿದೆ.

"ಬಾಳೊ ಬಾಳೊ ಚಂಚೌದಿ
ಪಾಡುವ ಮೊಳೆಯೇದ್?
ಅಲ್ಲತೊಂದೂ ಅಲ್ಲಲ್ಲ
ಜಬ್ಬೂಮಿರ ಮಿದಲ್
ಏದ್ ದೇಶ ಚೊಲ್ಲುಳ್ಳ
ನೊಟಿ, ನೋಟಿ, ಕಾಂಬಕ
ಈ ಭೂಮಿಕ ಮೀದಲ್
ಪೊಮ್ಮಲೆ ಕೊಡವಾಪ
ಪೊಮ್ಮಾಲೆ ಕೊಡವುಲ್
ಏದ್‌ನಾಡ ಚೊಲ್ಲುಳ್ಳ
ಅಲ್ಲತ್ತೇದು ಅಲ್ಲಲ್ಲ
....
....
ಈ ನಾಡ್ ನಡುವುಲ್
ನಾಡ್ ಪಾದಿ ಊರಪ"[೨೯]

ತೇರಣಶಾಸ್ತ್ರದ ಅನಂತರ ಸಭೆ ಸೇರಿದ ನೆಂಟರಿಗೆ ಹೊರಡುವಾಗ 'ಊರ್ ಪತ್ತಿ' (ಎಲೆ, ಅಡಿಕೆ, ತೆಂಗಿನಕಾಯಿಯನ್ನಿಟ್ಟು ಹಿರಿಯರಿಗೆ ನೀಡುವ ಗ್ರಾಮ ಮರ್ಯಾದೆ) ಸಭೆ ಸೇರಿದ ನೆಂಟರಿಗೆ ಹೊರಡುವಾಗ ಎಲೆ ಅಡಕೆ ತೆಂಗಿನಕಾಯಿಯನ್ನು ನೆಲ್ಲಕ್ಕಿ ನಡುಬಾಡೆಯಲ್ಲಿ ತಂದಿಟ್ಟು ಪ್ರಾರ್ಥಿಸಿ ಸ್ವೀಕರಿಸಲೇಬೇಕು ಎಂದು ಗ್ರಾಮದ ಹಿರಿಯರಿಗೆ ಕೇಳಿಕೊಳ್ಳುತ್ತಾರೆ. ಇತರ ಹಿಂದೂ ಸಮುದಾಯಗಳ ಈ ಪದ್ಧತಿಯನ್ನು ಕಾಣಬಹುದಾಗಿದೆ.

ದಂಪತಿ ಮುಹೂರ್ತ: ವರನ ಮನೆಯಿಂದ ವಧುವಿನ ಮನೆಗೆ ಬಾಳೋಪಾಟ್, ದುಡಿಕೊಟ್ಟ್, ಕೊಂಬ್ ಕೊಟ್ಟ್‌ವಾದ್ಯ ತಾಳದ ಜೊತೆಯಲ್ಲಿ ಮದುವೆ ದಿಬ್ಬಣ ಹೊರಡುತ್ತಾರೆ. ದಾರಿಯ ಮಧ್ಯೆ ಬೇರೆ ಯಾವ ದಿಬ್ಬಣವನ್ನೂ ನೋಡಬಾರದೆಂದು, ನಿಯಮವಿದೆ.

ದಿಬ್ಬಣದ ಜೊತೆ ಮೂವರು ಹಿರಿಯರು ಹೆಣ್ಣಿನ ಮನೆಗೆ ಲಗ್ನಪತ್ರಿಕೆ, ಕೊಡೆ, ಲಾಟೀನ್ ಮತ್ತು ದೊಣ್ಣೆಯನ್ನು ಹಿಡಿದು ಹೊರಡುತ್ತಾರೆ. ದಿಬ್ಬಣ ಹೆಣ್ಣಿನ ಮನೆ ತಲುಪಿದ ಕೂಡಲೇ ಹೆಣ್ಣಿನ ಕಡೆಯವರು ಇತರರ ಕೈ ಕಾಲು ತೊಳೆಸಿ 'ತಳಿಯಕ್ಕಿ ದೀಪ' (ಬೊಳಕ್)ದೊಂದಿಗೆ ಬರಮಾಡಿಕೊಳ್ಳುತ್ತಾರೆ. ಹೆಣ್ಣಿನ ಕಡೆಯ ಮುಖ್ಯಸ್ಥ (ಒಕ್ಕಕಾರ) ಬಾಳೆ ಕಂಬದ ಕೆಳಗೆ ಚಾಪೆಯನ್ನು ಹಾಸಿ, ಪುರಿ ಅಕ್ಕಿ, ಬಾಳೆ, ತೆಂಗಿನಕಾಯಿ, ಚೊಂಬುನೀರು ತಂದು ಪುರಿ ಬಾಳೆ ಮಿಶ್ರಣ ಮಾಡಿ ಫಲಾಹಾರ ಮಾಡುತ್ತಾರೆ. ನಂತರ ಗಂಡಿನ ಕಡೆಯವರಿಗೆ ಆರು ಬಾಳೆಯನ್ನು ಮರ್ಯಾದೆ ರೂಪದಲ್ಲಿ ಕೊಡುತ್ತಾರೆ. ಇದನ್ನು "ಬಾಳೆ ಬೆಂಗೊ" ಎನ್ನುವರು. ನಂತರ 'ಪೊಳಿಯ'ದ ಜೊತೆಗೆ ಐನ್‌ಮನೆಯಲ್ಲಿ ವರನನ್ನು ಐಮರದ ಕೆಳಗೆ ಕುಳ್ಳಿರಿಸಿ ಹೆಣ್ಣಿನ ತಾಯಿ ಹಾಲು ಅನ್ನ ತಿನ್ನಿಸುವಳು. ನಂತರ ನೆಲ್ಲಕ್ಕಿಯಡಿಯಲ್ಲಿ ದಂಪತಿ ಮುಹೂರ್ತ ಮಾಡುತ್ತಾರೆ. ಈ ಸಂದರ್ಭದ ಹಾಡು ಈ ರೀತಿ ಇದೆ.

"ಒರಂದೀರಡೆಣ್ಣನೆ	–	ಒಂದೆರಡು ಎನ್ನುವಷ್ಟರಲ್ಲಿ
ಉಂಡಿತರ ಕುಡಿಚಿತ್	–	ಉಂಡು ತಿಂದು ಕುಡಿದು
ಈನಗುಂಡ್ ಪೋರಾಂದ್	–	ಇಷ್ಟು ಸಾಲದೆಂದು
ನೆಲ್ಲಕ್ಕಿ ನಡುಬಾಡೆ	–	ನೆಲ್ಲಕ್ಕಿ ನಡುಬಾಡೆ
ಪೋಯಿ ಬಾಡೆ ನಡುವುಲ್	–	ನೆಲ್ಲಕ್ಕಿ ನಡುಬಾಡೆಯಲ್ಲಿ
ಅಯ್ಯಣ್ಣ ಬಯಿಂಬನೂ	–	ಅಯ್ಯಣ್ಣ ಯುವಕ
ಮಾಚಮ್ಮ ಕುಮಾರಿಯೂ	–	ಮಾಚಮ್ಮ ಕುಮಾರಿ
ಮೂರ್‌ತ ಕೆಳತತ್"	–	ಮುಹೂರ್ತಕ್ಕೆ ಕುಳಿತರು

ವರನ ಎಡಬದಿಯಲ್ಲಿ ವಧುಕೂರಿಸಿ ಹಿರಿಯರೆಲ್ಲರೂ ಅಕ್ಕಿ ಹಾಕಿ ಉಡುಗೊರೆ ನೀಡಿ ಆಶೀರ್ವಾದ ಮಾಡುತ್ತಾರೆ.

"ಮೂರ್‌ತ ಕಳಕಣೆ	–	ಮುಹೂರ್ತಕ್ಕೆ ಕುಳಿತಾಗ
ಮಾಚಮ್ಮಂಡ ಪೆತ್ತವ್ವ	–	ಮಾಚವ್ವನ ಹೆತ್ತಾಕೆ
ಭೂಮಿದೇವಿ ಉಮ್ಮವ್ವ	–	ಭೂಮಿದೇವಿ ಉಮ್ಮವ್ವ
ಆಡಿಲಾಡಿ ಬಂದೀತ್	–	ಬಳಕುಕತ್ತಾ ಬಂದು
ಅಯ್ಯಣ್ಣ ಬಯಿಂಬಂಡ	–	ಅಯ್ಯಣ್ಣ ಯುವಕನಿಗೆ
ಮಂಡೆಕಕ್ಕಿಲ್‌ಟ್ಟಿತ್	–	ತಲೆಗೆ ಅಕ್ಕಿ ಹಾಕಿ
ಕ್‌ಂಡಿ ಪಾಲ್ ಕೊಡ್‌ಲೆತ್	–	ಕಿಂಡಿ ಹಾಲು ನೀಡಿ
ಪೊಂಬಣ ಕೈಕಟ್ಟ	–	ಉಡುಗೊರೆ ನೀಡಿ
ಅಕ್ಕಣೆಕ್ ಅಯ್ಯಣ್ಣ	–	ಅಷ್ಟರಲ್ಲಿ ಅಯ್ಯಣ್ಣ

ತನ್ನಡೋಕ ಮಾವಿರ	–	ತನ್ನ ಅತ್ತೆಯ
ಕಾತೊಟ್ಟ್ ತಲೆ ಬೆಚ್ಚ	–	ಕಾಲು ಹಿಡಿದು ತಲೆಗೆ ಮುಟ್ಟಿ
ನೀಲಕೊಡಿ ಉಮ್ಮವ್ವ	–	ಬಾನಿನಂತಹ ಉಮ್ಮವ್ವ
ಅಲ್ಲಿಂಬೆ ಪೊರಟಿತ್	–	ಅಲ್ಲಿಂದ ಹೊರಟಳು
ಮಾಡಮ್ಮ ಕುಮಾರಿಕೂ	–	ಮಾಚಮ್ಮ ಕುಮಾರಿಕ್
ಪೊಂಬಣ್ಣ ಕೈಕಟ್ಟ್	–	ಪೊಂಬಣ್ಣ ಕೈಕ್‌ಟ್ಟ್
ಈನಗುಂಡ್ ಪೋರಾಂದ್	–	ಇಷ್ಟಕ್ಕೆ ಸಾಲದೆಂದು
ಅಯ್ಯಣ್ಣ ಬಯಿಂಬಂಗೂ	–	ಅಯ್ಯಣ್ಣ ಯುವಕನಿಗೂ
ಮಾಚಮ್ಮ ಕುಮಾರಿಕೂ	–	ಮಾಚಮ್ಮ ಕುಮಾರಿಗೂ
ಕೊಡ್‌ನ ಜನವೆಲ್ಲ	–	ಬಂದು ಸೇರಿದ ಜನರೆಲ್ಲ
ಅಕ್ಕಿ ಪಣ ಇಟ್ಟತ್”	–	ಉಡುಗೊರೆ ನೀಡಿ

ಅಲ್ಲಿದ್ದ ಹಿರಿಯರು ಹಾಗೂ ಕಿರಿಯರೆಲ್ಲರೂ ವಧು ವರರಿಗೆ ತಲೆಯಮೇಲೆ ಅಕ್ಕಿ ಹಾಕಿ ಉಡುಗೊರೆ ನೀಡಿದ ನಂತರ ಭೋಜಕಾರ ವರನಿಗೆ ಒಡಿಕತ್ತಿ ಕೊಟ್ಟು ಹೆಣ್ಣಿನ ಎದುರು ನಿಲ್ಲಿಸುತ್ತಾನೆ. ವರನು ಹೆಣ್ಣಿನ ತಲೆಗೆ ಅಕ್ಕಿ ಹಾಕಿ ಗಿಂಡಿ ಹಾಲುಕುಡಿಸಿ 'ಚೀಲಪಣ' ಕೊಡುತ್ತಾನೆ. ನಂತರ ಹೆಣ್ಣಿನ ಕೈ ಹಿಡಿದು ಮುಕ್ಕಾಲಿಯಿಂದ ಎಬ್ಬಿಸುತ್ತಾನೆ.

“ಅಕ್ಕಣೆಕ್ ಸಂಜದಿ	–	ಅಪ್ಪರಲ್ಲಿ ಬಂಧುವೇ
ಅಯ್ಯಣ್ಣ ಬಯಿಂಬಂಡ	–	ಅಯ್ಯಣ್ಣ ಯುವಕನನ್ನು
ಬೋಜಕಾರ ಬಾಲನ್	–	ಬೋಜಕಾರ ಯುವಕ
ಅಯ್ಯಣ್ಣ ಬಯಿಂಬನ	–	ಅಯ್ಯಣ್ಣ ಯುಕನ
ಕೈಪುಡಿ ಅಜಿತೆಪ್ಪಚಿ	–	ಕೈ ಹಿಡಿದು ಎಬ್ಬಿಸಿ
ಅಲ್ಲಿಂಜೆದ್ದ ಅಯ್ಯಣ್ಣ	–	ಅಲ್ಲಿಂದೆದ್ದ ಅಯ್ಯಣ್ಣ
ಪಾಕಂಡ ಮೊಳಿ ಪೂಂಞ್	–	ಹಾಲು ಕಂಡ ಬೆಕ್ಕಿನಂತೆ
ಒತ್ತಿ ಡೊತ್ತಿ ಪೋಯಿತ್	–	ಚುರುಕಿನಲ್ಲಿ ಹೋಗಿ
ಪೊಂಗ ಮಿಂಞ ನಿಂದಿತ್	–	ಆಕೆಯ ಮುಂದೆ ನಿಂತ
ಮಂಡೆಕಕ್ಕಿ ತಾಚಿತ್	–	ತಲೆಗೆ ಅಕ್ಕಿ ಹಾಕಿ
ಕ್ಂಡಿ ಪಾಲ್ ಕೊಡ್‌ತ್‌ತ್	–	ಕಿಂಡಿ ಹಾಲು ನೀಡಿ
ಚೀಲಪಣ ಕೈಕಟ್ಟ್	–	ಉಡುಗೊರೆ ನೀಡಿ
ಮಾಚಮ್ಮ ಕುಮಾರಿನ	–	ಮಾಚಮ್ಮ ಕುಮಾರಿಯ
ಕೈಪುಡಿತ್‌ಪ್ಪ್‌ನ”	–	ಕೈ ಹಿಡಿದು ಎಬ್ಬಿಸಿದ

(ಆಧಾರ : ಕೊಡವ ಸಾಂಸ್ಕೃತಿಕ ಅಧ್ಯಯನ, ಐತಿಚಂಡ ರಮೇಶ್ ಉತ್ತಪ್ಪ)

ಹಾಡಿನೊಂದಿಗೆ ಹಸಿದ ಬೆಕ್ಕು ಹಾಲಿನ ಬಳಿ ಧಾವಿಸುವಂತೆ ವರನು ವಧುವಿನ ಬಳಿ ಧಾವಿಸುತ್ತಾನೆ. ಎಂಬ ಹಾಸ್ಯ ಭರಿತ. (ದುಡಿಕೊಟ್ಟ್) ಹಾಡಿನೊಂದಿಗೆ ದಂಪತಿ ಮುಹೂರ್ತ ಮುಕ್ತಾಯವಾಗುವುದು. ಕೊಡವರು

ಹಿಂದೆ ಐನ್ ಮನೆಯಲ್ಲೇ ಮುಹೂರ್ತ ಮಾಡುತ್ತಿದ್ದರು. ಇತ್ತೀಚೆಗೆ ಸ್ಥಳದ ಅಭಾವ, ಸಮಯದ ಅಭಾವದಿಂದ ಹೆಚ್ಚಾಗಿ ಮಂಟಪಗಳಲ್ಲಿ ದಂಪತಿ ಮುಹೂರ್ತ ಮಾಡುತ್ತಾರೆ. ಇತರ ವಿವಾಹಗಳು ಈಗ ಸಂಪೂರ್ಣವಾಗಿ ಮರೆಯಾಗುತ್ತಿದೆ.

ಬಾಳೆಬಿರುದು

"ಕೊಡವರ ವಿವಾಹದಲ್ಲಿ 'ಬಾಳೆ ಬಿರುದು' ಎಂಬ ವಿಶಿಷ್ಟವಾದ ಪದ್ಧತಿ ಇದೆ. ಬಾಳೆಬಿರುದನ್ನು ಅರ್ಹರಾದ ಕೆಲವೇ ವ್ಯಕ್ತಿಗಳಿಗೆ ಗೌರವಪೂರ್ವಕವಾಗಿ ಕೊಡಲಾಗುತ್ತದೆ. ಮದುವೆ ಮನೆಗೆ ಬೇಕಾದ ಸಾಮಾನುಗಳನ್ನು (ಉಪ್ಪುಸಾಸುವೆಬಿಟ್ಟು)ನೆಂಟರಿಷ್ಟರು ತಲೆ ಮೇಲೆ ಹೊತ್ತು ತರುವುದನ್ನು 'ಕೇಟಾಮೆ"[೩೦] ತರುವುದು ಎನ್ನುತ್ತಾರೆ. ಈ ಕೇಟಾಮೆ ತಂದವರಿಗೆ ಬಾಳೆ ಬಿರುದು ಕೊಟ್ಟು ಸ್ವಾಗತಿಸಿ ಕಳುಹಿಸುತ್ತಾರೆ.

ಹಿಂದೆ ವರ ಹಾಗೂ ವಧುವಿನ ಐನ್‌ಮನೆಯಲ್ಲಿ ಪ್ರತ್ಯೇಕವಾಗಿ ಮುಹೂರ್ತ ನಡೆಯುತ್ತಿತ್ತು. ಇದರ ಪರಿಣಾಮವಾಗಿ ಬಾಳೆ ಬಿರುದು ಅಥವಾ 'ಬಾಳೆ ಬೇಂಗುವೊ' ಪದ್ಧತಿಯು ವಿವಾಹ ಮಂಟಪದ ಬಳಿಯೇ ನಡೆಯುತ್ತಿತ್ತು. ಸಾಮಾನ್ಯವಾಗಿ ಹನ್ನೆರಡು ಬಾಳೆದಿಂಡುಗಳನ್ನು ನೆಟ್ಟು 'ಬಾಳೆಮರ್ಯಾದಿ' ನೀಡುತ್ತಾರೆ. ಒಂದು ಸಂಸಾರದಲ್ಲಿ ನಡೆಯುವ ಮೊದಲ ವಿವಾಹದಲ್ಲಿ ವಧು ಇಲ್ಲವೇ ವರನ ತಾಯಿಯ ತವರು ಮನೆಗೆ ಮೊದಲ ಆದ್ಯತೆ ನೀಡುತ್ತಾರೆ. ಅಂದರೆ, ಸೋದರ ಮಾವನಿಗೆ (ತಾಯಿಯ ಸಹೋದರರಿಗೆ)ಮೊದಲು 'ಬಾಳೆ ಬಿರುದು' ನೀಡುತ್ತಾರೆ. ಒಂದು ವೇಳೆ ತಾಯಿಯ ಸಹೋದರ ಇಲ್ಲದಿದ್ದಲ್ಲಿ ತಾಯಿಯ ತವರು ಮನೆಯಲ್ಲಿ ಯಾರಾದರು ಈ ಬಾಳೆ ಬಿರುದು ಪಡೆದುಕೊಳ್ಳಬಹುದು. ಇದು ತಾಯಿಗೆ ಕೊಡವರು ನೀಡುವ ಗೌರವ ಹಾಗೂ ಅಭಿಮಾನವನ್ನು ಸೂಚಿಸುತ್ತದೆ. ತಾಯಿಯ ತವರು ಮನೆ ಎಂದರೆ ಕೊಡವರಿಗೆ ವಿಶೇಷ ಅಕ್ಕರೆ.

ಹಿರಿಯರು ಹೇಳುವಂತೆ ಹಿಂದೆ ಒಮ್ಮೆ ಮಾತ್ರ ಸಹೋದರ ಮಾವನಿಗೆ ಬಾಳೆ ಬಿರುದು ನೀಡಲಾಗುತ್ತಿತ್ತು. ಅಂದರೆ, ತಂದೆ ತಾಯಿಯ ಮಕ್ಕಳಲ್ಲಿ ಮೊದಲು ಯಾರು ವಿವಾಹವಾಗುತ್ತಾರೋ ಎಂದರೆ ತಾಯಿಯ ತವರು ಮನೆಗೆ ವಿವಾಹ ಆಗುವ ಸಂದರ್ಭದಲ್ಲಿ ಮಾತ್ರ ಮತ್ತೆ ತಾಯಿಯ ತವರು ಮನೆಗೆ ಬಾಳೆ ಬಿರುದು ಕೊಡಬೇಕಾಗಿರಲಿಲ್ಲ. ಆದರೆ, ಈಗ ಪ್ರತಿ ವಿವಾಹದಲ್ಲಿ ಮಾವನ ಮನೆಯವರಿಗೆ 'ಬಾಳೆ ಬಿರುದು' ನೀಡುವುದನ್ನು ಕಾಣಬಹುದು.

ಬಾಳೆ ಬಿರುದು ನೀಡುವಾಗ ಕೆಲವೊಂದು ನೀತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಬಾಳೆಯನ್ನು ಕಡಿಯುವಾಗ ಅದು ತುಂಡಾಗದಿದ್ದಲ್ಲಿ ಇನ್ನೊಮ್ಮೆ ಕಡಿಯಬಾರದು. ಆ ಬಾಳೆ ದಿಂಡನ್ನು ಕತ್ತಿಯಿಂದ ದೂಡಿ ಕೆಳಗೆ ಉರುಳಿಸಬೇಕು. ಯಾವುದೇ ಕಾರಣಕ್ಕೂ ಬಾಳೆಯನ್ನು ಎಡಬದಿಯಿಂದ ಕಡಿಯಬಾರದು. ಅಲ್ಲದೆ ಮೇಲಿನಿಂದ ಕೆಳಮುಖವಾಗಿ ಕಡಿಯಬೇಕೇ ಹೊರತು ಕೆಳಗಿನಿಂದ ಮೇಲ್ಮುಖವಾಗಿ ಕಡಿಯಬಾರದು. ದೇವರನ್ನು ಪ್ರಾರ್ಥಿಸಿ ನಂತರ ಬಾಳೆ ಬಿರುದು ಕೊಡಬೇಕು. ಈ ಸಂದರ್ಭ 'ಮಂಡೆತುಣಿ' (ತಲೆಪೇಟ)

ಯನ್ನು ತೆಗೆದು ದೇವರನ್ನು 'ಮಹಾಗುರು ಈಶ್ವರ ಇಗ್ಗುತಪ್ಪ ಹೋ ಹೋ' ಎಂದು ಸ್ಮರಿಸಿ ಬಾಳೆ ಕಡಿದ ಮೇಲೆ ಬಂಧುಗಳು ಕುಣಿದು ಸಂಭ್ರಮ ಆಚರಿಸುವುದನ್ನು ಕಾಣಬಹುದು. ಇಲ್ಲದಿದ್ದಲ್ಲಿ ಸೋಲು ಒಪ್ಪಿಕೊಂಡಂತಾಗುತ್ತದೆ. ಬಾಳೆ ಬೇಂಗುವೊ ಸಂದರ್ಭ ನೀಡುವ ಹಣದಲ್ಲಿ ಒಂದು ಭಾಗವನ್ನು ಊರಿನ ಭಂಡಾರಕ್ಕೆ ನೀಡಬೇಕಾಗುವುದು.

	ಕನ್ನಡ ಅನುವಾದ
"ಇಲ್ಲವನು ಬೆಂದುನೊ	ಎಲ್ಲಾ ಬಂಧುಗಳು
ಅಂಗನೊ ಅರುವನೊ	ಅಂಗನೂ ಅರುವನೂ
ಎಲ್ಲ ಜೋಡು ಕೂಟಿತ್	ಎರಡು ಕೈ ಸೇರಿಸಿ
ಕೊಂಬ್ ಕೊಟ್ಟ್ ಪಾಟಾಯಿ	ಕೊಂಬುವಾದ್ಯ ಹಾಡಾಗಿ
ತಂಗೊಯ್ಯನೆ ಬಂದಿತ್	ಬಿರುಸಿನಿಂದ ಬಂದ
ಅಯ್ಯೆಣ್ಣ ಬಯಿಂಬನ	ಅಯ್ಯಣ್ಣನೆಂಬ ಧೀರ
ಕಣ್ಣೊಡನೆ ಕಂಡಿತ್	ಕಣ್ಣಿನಲ್ಲೇ ಸ್ವೀಕರಿಸಿ
ತಕ್ಕಾರ ಪೆರ್‌ಚಾಯಿ	ಗೌರವ ಸ್ವೀಕರಿಸಿ
ನಾಟಚರ ಚೆಮ್ಮಾಯಿ	ಎಲ್ಲಾ ಪದ್ಧತಿಯಂತೆ
ದಂಡ್ ಕಡೆ ನಾಡೋನ್	ಎಡು ಕಡೆಯ ಊರವರು
ಸಾಲ್‌ಕೆಟ್ಟಿ ನಿಂದಿತ್	ಸಾಲಿನಲ್ಲಿ ನಿಂತು
ಚಿಂಗ ಬಾಳೆ ಬೇಂಗಿತ್"	ಬಾಳೆಯನ್ನು ಕಡಿದರು.

(ಮೂಲ: ಕೊಡವ ಸಾಂಸ್ಕೃತಿಕ ಅಧ್ಯಯನ, ಐತಿಚಂಡ ರಮೇಶ್ ಉತ್ತಪ್ಪ)

ವಿಶೇಷ ಎಂದರೆ ಈ ಹಿಂದೆ ವಿವಾಹವಾಗುವ ಯುವಕನೇ ಬಾಳೆಯನ್ನು ಕಡಿಯಬೇಕಿತ್ತು. ಅಲ್ಲದೆ ಈ ಒಡಿಕತ್ತಿಯನ್ನು ತನ್ನ ಒರೆಯಲ್ಲಿ ಇಟ್ಟುಕೊಳ್ಳಬೇಕಿತ್ತು. ಒಂದು ವೇಳೆ ಬಾಳೆ ಕಡಿಯುವಾಗ ವರನಿಗೆ ಏಟು ಬೀಳಬಹುದು ಎಂಬ ಕಾರಣಕ್ಕೆ (ಈಗ ವರ ಬಾಳೆ ಕಡಿಯುವುದಿಲ್ಲ.) ಅವನ ಪರವಾಗಿ ಬೇರೆಯವರು ಕಡಿಯುತ್ತಾರೆ.

ಈ ಹಿಂದೆ ಪ್ರತ್ಯೇಕವಾಗಿ ಮುಹೂರ್ತ ನಡೆಯುತ್ತಿದ್ದ ಕಾರಣ ವರ ಹಾಗೂ ಬಂಧುಗಳು ಮುಹೂರ್ತ ಆದ ಮೇಲೆ ವಧುವಿನ ಮನೆಗೆ ಮೆರವಣಿಗೆಯಲ್ಲಿ ತೆರಳಿ ಅಲ್ಲಿ ಬಾಳೆ ಬಿರುದು ಪಡೆಯುತ್ತಿದ್ದರು. ಈ ಸಂದರ್ಭ ವರನೇ ಬಾಳೆ ಕಡಿದು ತನ್ನ ಶೌರ್ಯ ಪ್ರದರ್ಶನ ಮಾಡಬೇಕಿತ್ತು. ಬಿ.ಡಿ.ಗಣಪತಿ ಅವರು ಬಾಳೆ ಬಿರುದಿನ ಬಗ್ಗೆ ಈ ರೀತಿ ಹೇಳುತ್ತಾರೆ. "ಬಾಳೆ ಬಿರುದು ಅಂದರೆ ಏಳು ಅಥವಾ ಆರು ಬಾಳೆಗಿಡದ ದಪ್ಪ ಕಾಂಡಗಳನ್ನು ಸುಮಾರು ಮೂರಡಿ ಎತ್ತರದಲ್ಲಿ ಕತ್ತರಿಸಿ ನೆಲದಲ್ಲಿ ಗೂಟದ ಮೇಲೆ ಸಾಲಾಗಿ ನಿಲ್ಲಿಸಿರುತ್ತಾರೆ. ಇವುಗಳನ್ನು ಹೂವುಗಳಿಂದ ಶೃಂಗರಿಸಿರುತ್ತಾರೆ. ಮದುವೆಯ ಗಂಡು ತನ್ನ ಒರೆಯಲ್ಲಿರುವ ಒಡಿಕತ್ತಿಯಿಂದ ಈ ಬಾಳೆ ದಿಂಡುಗಳನ್ನು ಒಂದೊಂದೇ ಏಟಿಗೆ ಕತ್ತರಿಸಿ ಹಾಕಬೇಕು. ಮದುವಣಿಗನು ಶಾರೀರಿಕ ದೃಷ್ಟಿಯಿಂದ ಸಮರ್ಥನೋ ಎಂಬುದನ್ನು ತಿಳಿಯಲಿರುವ ಪರೀಕ್ಷೆ ಇದು.

ಬಾಳೆ ಕಡಿಯುವುದನ್ನು ಕೊಡವರ ವೀರತನದ ಸಂಕೇತವೆನ್ನಬಹುದು. ಬಹಳ ಹಿಂದೆ ವಧುವನ್ನು ಕರೆತರಲು ದಿಬ್ಬಣದ ಮೆರವಣಿಗೆಯಲ್ಲಿ ತೆರಳುತಿದ್ದಾಗ ಶತ್ರುಗಳನ್ನು ಜಯಗಳಿಸಿದ ಸಂಕೇತವಾಗಿ ಬಾಳೆ ಕಡಿಯುತ್ತಿದ್ದರು ಎಂಬ ಅಭಿಪ್ರಾಯ ಇದೆ. ಈ ಸಂಸ್ಕೃತಿ ಕೊಡಗಿನೆಲ್ಲೆಡೆ ಇಂದಿಗೂ ವಿವಾಹದ ಸಂದರ್ಭದಲ್ಲಿ ಆಚರಣೆಯಲ್ಲಿದೆ.

ಕೊಡವರ ವಿವಾಹ ಪದ್ಧತಿಯಲ್ಲಿ ಅನೇಕ ರೀತಿಯ ಕ್ಷತ್ರಿಯರ ವಿವಾಹದ ಸಾಮ್ಯತೆ ಇರುವುದರಿಂದ ಕೊಡವರ ಮೂಲ ಪುರುಷರು ಕ್ಷತ್ರಿಯ ವಂಶದವರು ಎನ್ನುವ ನಂಬಿಕೆಯನ್ನು ವಿವಾಹ ಪದ್ಧತಿಯು ಪುಷ್ಟೀಕರಿಸುತ್ತದೆ. ಹಿಂದಿನ ಅನೇಕ ಪದ್ಧತಿಗಳನ್ನು ಇಂದು ಕೇವಲ ಸಂಕೇತ ರೂಪದಲ್ಲಿ ಆಚರಿಸುತ್ತಿದ್ದಾರೆ.

ಬಾಳೆ ಕಡಿದು ದಿಬ್ಬಣದೊಂದಿಗೆ ಗಂಡನ್ನು ಮೆರವಣಿಗೆಯ ಮೂಲಕ ಹೆಣ್ಣಿನ ಮನೆಗೆ ಕರೆತರುತ್ತಾರೆ. ಬ್ರಾಹ್ಮಣರಲ್ಲಿ ವರಪೂಜೆಮಾಡಿ ಕರೆತರುತ್ತಾರೆ. ಇನ್ನು ಕೆಲವರಲ್ಲಿ ಸೋದರಮಾವನ ಮನೆಗೆ ಕರೆದುಕೊಂಡು ಹೋಗಿ ಅಲ್ಲಿಂದ ಮೆರವಣಿಗೆಯಲ್ಲಿ ಕರೆತರುತ್ತಾರೆ. ಕೊಡವರಲ್ಲಿ ಇನ್ನೊಂದು ವಿಶೇಷತೆ ಎಂದರೆ ಹೆಣ್ಣಿನ ಮನೆಗೆ ಮೆರವಣಿಗೆ ಹೊರಟಾಗ ಕೆಲವರು ಬಾಳೆ ಬಿರುದು ಕೊಟ್ಟು ಮರ್ಯಾದೆ ಮಾಡುತ್ತಾರೆ. ಸಾಂಪ್ರದಾಯಿಕ ಉಡುಪನ್ನು ಧರಿಸಿ ಈ ಬಾಳೆ ಬಿರುದನ್ನು ಕೊಡಬೇಕು. ಬಾಳೆ ಬಿರುದನ್ನು ಸ್ವೀಕರಿಸಿದ ಅನಂತರ ಬಿರುದು ಕೊಟ್ಟವರಿಗೆ ಎರಡು ಹಣ ಕಾಣಿಕೆ ಕೊಡಬೇಕಾಗುತ್ತದೆ. ಹೆಣ್ಣಿನ ಮನೆಯ ಹತ್ತಿರ ಬಂದಾಗ ಕೂರವುಕಾರನು ಕೈಯಲ್ಲಿ ಲಗ್ನಪತ್ರಿಕೆ ಹಿಡಿದು ಹೆಣ್ಣಿನ ಮನೆಯವರನ್ನು 'ನಂಗಡ ಕಣ್ಣಂಗ್ ನಿಂಗಡ ಮೂಡಿನ ಇಕ್ಕ ಕೇಪಕ್ ಮಂಗಲಾಡಿ ಬಂದಿತ್' ಎಂದು ಹೆಣ್ಣು ಕೇಳುವುದನ್ನು 'ಕೂರು ಅರಿವೊ' ಎನ್ನುತ್ತಾರೆ. ಅನಂತರ ದಂಪತಿ ಮುಹೂರ್ತ ಸಂಬಂಧಕೊಡುವುದು ಮುಂತಾದ ನಿಯಮಗಳನ್ನು ಅನುಸರಿಸಬೇಕು.

'ಬಟ್ಟೆ ತಡ್‌ಪೊ' ವಧುವಿನ (ದಾರಿ ಅಡ್ಡಗಟ್ಟುವುದು)

ಧಾರೆ ಆದ ಮೇಲೆ ನಂತರ ವಧುವನ್ನು ಕರೆದುಕೊಂಡು ಗಂಡಿನ ಮನೆಗೆ ಬರುವ ಸಂದರ್ಭದಲ್ಲಿ 'ಬಟ್ಟೆ ತಡ್‌ಪೊ' (ದಾರಿ ತಡೆಯುವುದು) ಎಂಬ ಪದ್ಧತಿ ಇದೆ. ವಧುವಿನ ಮಾವನ ಮಗ ಇಲ್ಲವೇ ಸೋದರತ್ತೆಯ ಮಗ ಹೆಣ್ಣನ್ನು ತಡೆಯುತ್ತಾರೆ. ಆ ಸಮಯದಲ್ಲಿ ಆತನಿಗೆ ಚಿನ್ನದ ನಾಣ್ಯ ಕೊಟ್ಟು ಸಂತೈಸಬೇಕಾಗುತ್ತದೆ. ಇದನ್ನು 'ಸಾಕ್ಷಿ ಪಣ' ನೀಡುವುದು ಎನ್ನುತ್ತಾರೆ. ಆತ ಆ ನಾಣ್ಯದ ಜೊತೆಗೆ ಇನ್ನೊಂದು ನಾಣ್ಯ ಸೇರಿಸಿ ವಧುವಿನ ಸೆರಗಿಗೆ ಕಟ್ಟುತ್ತಾನೆ. ಮನೆಯ ಸೇವಕ ದಾರಿಗೆ ಅಡ್ಡ ಬಂದಾಗಲೂ ಹಣ ಕೊಟ್ಟು ಸಂತೈಸಬೇಕಾಗುತ್ತದೆ. ಇತ್ತೀಚೆಗೆ ವರನ ಹತ್ತಿರದ ಸಂಬಂಧಿಗಳು ಹೆಣ್ಣನ್ನು ತಡೆಯುತ್ತಾರೆ. ಸುಮಾರು ಮೂರರಿಂದ ನಾಲ್ಕು ಗಂಟೆಗಳ ಕಾಲವಾದರೂ ತಲೆ ಮೇಲೆ ನೀರು ಹೊತ್ತಿರುತ್ತಾಳೆ. ದಾರಿಯುದ್ದಕ್ಕೂ ತಡೆದು ತಡೆದು ಹಾಡುಗಳನ್ನು ಹಾಡುತ್ತ ಸಾಗುವ ಈ ಮೆರವಣಿಗೆ ಹೆಣ್ಣಿನ ತಾಳ್ಮೆಯ ಪರೀಕ್ಷೆಯ ಭಾಗವಾಗಿ ನಡೆಯುತ್ತದೆ.

ಗದ್ದೆಗೆ ಸಗಣಿ ಹೊತ್ತೊಯ್ಯುವ ಅಚ್ಚರಿಯ ಪದ್ಧತಿ

ನಸುಗತ್ತಲಿನಲ್ಲಿ ಮದುವೆ ದಿಬ್ಬಣವು ವಧುವಿನ ಮನೆಯಿಂದ ವರನ ಮನೆಗೆ ಹಿಂತಿರುಗುತ್ತದೆ. ಮೆರವಣಿಗೆಯಲ್ಲಿ ಹಲವು ಮಂದಿಯ ಜೊತೆಗೆ ವಾದ್ಯ ದುಡಿಯ ನಿನಾದವೂ ನಿರಂತರವಾಗಿ ಇರುವದರಿಂದ ದಾರಿ ಸವೆದದ್ದು ಯಾರಿಗೂ ತಿಳಿಯುವುದಿಲ್ಲ. ಸಾಕಷ್ಟು ದೂರ ಹೀಗೆ ಕಾಲು ನಡಿಗೆಯಲ್ಲಿಯೇ ದಿಬ್ಬಣ ಆಗಮಿಸುತ್ತದೆ.

	ಕನ್ನಡ ಅನುವಾದ
"ಅಯ್ಯಣ್ಣ ಬಯಿಂಬನು	ಅಯ್ಯಣ್ಣ ಯುವಕ
ಮಾಚಮ್ಮ ಕುಮಾರಿಯು	ಮಾಚಮ್ಮ ಕುಮಾರಿಯು
ಪಟ್ಟ್ ಪೋಲೆ ಪಟ್ಟಮ	ಪಟ್ಟದಂಥತೆ ಪಟ್ಟಡ
ಆ ಒಕ್ಕ ಮನೆಯಿಂಜಿ	ಆ ಒಕ್ಕ ಮನೆಯಿಂದ
ಮಂಗ್‌ಲಾಡಿ ಬಂದಿತ್	ಮದುವೆ ದಿಬ್ಬಣ ಬಂದು
ಈ ಒಕ್ಕಡ ಒಣಿಲ್	ಈ ಕುಟುಂಬದ ಓಣಿಯಲ್ಲಿ
ಮಂಗ್‌ಲ ಮರಿಯಣೆ	ದಿಬ್ಬಣ ಬಂದು ಸೇರುವಾಗ
ಚಿಂಗ ಬಾಳೆ ಮಟ್ಟತ್	ಬಾಳೆ ಗೌರವ ನೀಡುವಲ್ಲಿ
ಜೋಡೆರಂಡ್ ಚೆಂಬಕ	ಜೋಡಿ ಹಕ್ಕಿಗಳೆರಡು
'ಉಕ್ಕು''ಉಕ್ಕ್' ಂದೆಣ್ಣ್ನ''೩೭	ಉಕ್ ಉಕ್ ಎಂದು

(ಮಾಹಿತಿ : ಶಕ್ತಿ ದಿನಪತ್ರಿಕೆ ದಿನಾಂಕ ೩೦-೧೨-೨೦೧೩)

ಇಲ್ಲಿ ಜನಪದ ಕವಿ ನೂತನ ವಧು ವರರ ಆಗಮನದಲ್ಲಿ ಶುಭಶಕುನದ ಮುನ್ಸೂಚನೆಯ ಆಶಯ ಕಂಡಿದ್ದಾನೆ. ಮೆರವಣಿಗೆ ಬಂದು ಅ ಕುಟುಂಬ ಓಣಿಯಲ್ಲಿ ನಿಲ್ಲುತ್ತಿದ್ದಂತೆ ಶುಭ ಶಕುನ ನುಡಿಯುವ ಹಕ್ಕಿ ಸದ್ದು ಮಾಡುತ್ತದೆ. ಅಂದರೆ, ಈ ಮನೆಯಲ್ಲಿ ನೂತನ ದಂಪತಿಯ ಬದುಕು ಹಸನಾಗುತ್ತದೆ ಎಂಬ ಶುಭ ಸೂಚನೆಯದು. ಇಷ್ಟೇ ಅಲ್ಲ; ಅಲ್ಲಿ ಇನ್ನಷ್ಟು ಒಳ್ಳೆಯ ಲಕ್ಷಣಗಳು ಈ ಸಂದರ್ಭ ಕಾಣಿಸಿಕೊಳ್ಳುತ್ತವೆ.

	ಕನ್ನಡ ಅನುವಾದ
"ಅಕ್ಕಣೆಕ್ ಸಂಜದಿ	ಅಷ್ಟರಲ್ಲಿ ಬಂಧುವೇ
ಉಂಬಳ ಮನೆಯಿಲ್	ಊಟ ಮಾಡುವ ಕೋಣೆಯಿಂದ
ಮೂರೊಲೆಲ್ ತಿತ್ತಾಯಿ	ಮೂರು ಒಲೆಯ ಬೆಂಕಿ
ಪಾ ಕುಡಿಕೆ ಪಾಲೆಲ್ಲ	ಹಾಲಿನ ಮಡಿಕೆಯ ಹಾಲು
ಪಾಲುಕ್ಕಿ ಮರಿಂಜಿತ್.."	ಹಾಲು ಉಕ್ಕಿ ಹರಿಯಿತು

ಅಂದರೆ, ಮದುವೆಯ ಮೆರವಣಿಗೆ ಓಣಿಗೆ ಬರುತ್ತಿದ್ದಂತೆ ಶುಭ ಸೂಚನೆಗಳ ಸರಮಾಲೆಯೇ ಆರಂಭವಾಗುತ್ತದೆ. ಮನೆಯೊಳಗೆ ಇರುವ ಮೂರು ಒಲೆಯಲ್ಲಿ ಬೆಂಕಿ ಉರಿದು ಅಲ್ಲಿಟ್ಟ ಹಾಲಿನ ಪಾತ್ರೆ ಉಕ್ಕಿ ಹಾಲೆಲ್ಲ ಹೊರಗೆ ಹರಿಯಿತು. ಹಾಲು ಉಕ್ಕಿ ಹರಿಯುವುದು ಸಮೃದ್ಧಿಯ ಸಂಕೇತವಾಗಿದೆ.

ವಧು ಹಾಗೂ ವರನನ್ನು 'ತಳಿಯಕ್ಕಿ ಬೊಳಕ್'ನೊಂದಿಗೆ ಒಳಗೆ ಬರಮಾಡಿಕೊಳ್ಳುತ್ತಾರೆ. ದಾರಿಯಲ್ಲಿ ದೃಷ್ಟಿ ತಗಲಿರಬಹುದು ಅಥವಾ ದುಷ್ಟ ಶಕ್ತಿಗಳು ಸೋಕಿರಬಹುದು ಎಂಬ ಮುನ್ನೆಚ್ಚರಿಕೆ ಕ್ರಮವಾಗಿ 'ತೆಳ್‌ನೀರ್' ಪ್ರೋಕ್ಷಿಸಿಕೊಂಡು ಒಳಬರುತ್ತಾರೆ. 'ತೆಳ್‌ನೀರ್' ಅಂದರೆ ಶುದ್ಧ ನೀರು. ಕಂಚಿನ ತಟ್ಟೆಯಲ್ಲಿ ನೀರಿಗೆ ಕೆಂಡದ ಇದ್ದಿಲು. ಸ್ವಲ್ಪ ಅನ್ನವನ್ನು ಹಾಕಿ ಅದರ ನೀರನ್ನು ಬಂದವರ ಮೇಲೆ ಪ್ರೋಕ್ಷಣೆ ಮಾಡುತ್ತಿದ್ದರು. ಹಿಂದೆ ತಟ್ಟೆಯಲ್ಲಿನ ನೀರಿಗೆ ಉರಿಯುವ ಸೌದೆಯನ್ನು ಅದ್ದಿ ಆ ನೀರನ್ನು ಮೈಮೇಲೆ ಸಿಂಪಡಿಸಿಕೊಳ್ಳುತ್ತಿದ್ದರು. ಇದರಿಂದ ದುಷ್ಟ ಶಕ್ತಿಗಳ ದೃಷ್ಟಿ ತಾಗಿದ್ದರೆ ದೂರವಾಗುತ್ತದೆ ಎಂಬ ನಂಬಿಕೆ ಅವರದು.

ಹೆಣ್ಣನ್ನು ಮನೆಗೆ ಹತ್ತಿಸಿ 'ನಡುಬಾಡೆ'ಯಲ್ಲಿ ಅಕ್ಕಿ ಹಾಕಿ ಗುರು ಕಾರೋಣನನ್ನು ಪ್ರಾರ್ಥಿಸಿ ಐಮರದಲ್ಲಿ ಕುಳ್ಳಿರಿಸಿದ ಬಳಿಕ ಕೆಲ ಕಾಲ ಅವಳಿಗೆ ಮೀಸಲಿರಿಸಿದ ಕೋಣೆಗೆ ಕರೆದುಕೊಂಡು ಹೋಗಿ ಅಲ್ಲಿ ಬಿಡುತ್ತಾರೆ. ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಂಡು ನಂತರ ಅವಳ ಕಾಲಿಗೆ ತೊಡಿಸಿದ್ದ ಆಭರಣಗಳನ್ನು ಬಿಚ್ಚುತ್ತಾರೆ. ಆಕೆ ವಸ್ತ್ರ ಕಟ್ಟಿಕೊಂಡು ಮತ್ತೆ ನೆಲ್ಲಕ್ಕಿ ನಡುಬಾಡೆಗೆ ಬಂದು ಅಕ್ಕಿ ಹಾಕಿ ಪ್ರಾರ್ಥಿಸಿ ಮುಂದಿನ ಶಾಸ್ತ್ರ ನೆರವೇರಿಸಲು ಸಿದ್ಧಳಾಗುತ್ತಾಳೆ. ಅದು ಕೊಟ್ಟಿಗೆಯಿಂದ ಸಗಣಿ ಕುಕ್ಕೆಯನ್ನು ಹೊತ್ತುಕೊಂಡು ಜಮೀನಿಗೆ ಹಾಕಿ ಬರುವ ಶಾಸ್ತ್ರ. ಆ ಹಾಡು ಈ ಕೆಳಗಿನಂತಿದೆ.

	ಕನ್ನಡ ಅನುವಾದ
"ಪಂಡಿಯ ನಡಪೋಲೆ	ಹಿಂದಿನ ಪದ್ಧತಿಯಂತೆ
ನೀಲಕೊಡಿ ಮಾಚಮ್ಮ	ಬಾನಿನಂತಹ ಮಾಚಮ್ಮ
ಪಾಲ್ ಕೂಳ್ ಉಂಡಿತ್	ಹಾಲನ್ನ ತಿಂದ ನಂತರ
ಕೊಂಬ್ ಕೊಟ್ಟ್ ಪಾಟಾಯಿ	ಕೊಂಬುವಾದ್ಯ ಹಾಡಿನೊಂದಿಗೆ
ಚೋಮ ನಿಪ್ಪ ಕೊಟ್ಟಿಕ್	ಎತ್ತು ಇರುವ ಕೊಟ್ಟಿಗೆಗೆ
ಚಾಚಿ ಮೆಲ್ಲೆ ಪೋಯಿತ್	ಅಲ್ಲಿ ಹೋಗಿ ನಿಂತು
ಬೊಳ್ಳೋಟೆರ ಕೂಟೆಲ್	ಬಿದಿರಿನ ಕುಕ್ಕೆಯಲ್ಲಿ
ಚೋಮಚಾಣ ಕೊಂಡಿತ್	ಸಗಣಿಯನ್ನು ತುಂಬಿಸಿ ತೆಗೆದು
ಆಯಿರಂಡ ಜಬ್ಬೂಮಿ	ಅವರ ಜಮೀನಿಗೆ
ಈ ಭೂಮಿರ ಮೀದಲ್	ಆ ಜಮೀನಿನ ಮೇಲೆ
'.. .. ..' ಒಕ್ಕಡ	'....' ಕುಟುಂಬದ
ಏಳ್ ಮೂಲೆ ಆಕತ್	ಏಳ್ ಮೂಲೆ ಜಮೀನಿಗೆ
ಚೋಮ ಜಾಣ ಇಟ್ಟಿತ್"	ಎತ್ತಿನ ಸಗಣಿ ಹಾಕಿ"

ಇದು ಅಪರೂಪದ ಪದ್ಧತಿಯೆಂದೇ ಹೇಳಬಹುದು. ಏಕೆಂದರೆ ಮದುವೆ ಆಗಿ ಬಂದ ಕೆಲವೇ ಸಮಯದಲ್ಲಿ ಸಗಣಿಯನ್ನು ಹೊತ್ತುಕೊಂಡು ಹೋಗುವದು ಆಶ್ಚರ್ಯಕರ ಸಂಗತಿಯೇ ಸರಿ. ಇದು ಕೇವಲ ಆಚರಣೆಯಾಗಿ ಬರಲಿಲ್ಲ. ಮದುವೆಯಾಗಿ ಮನೆಗೆ ಬರುವ ಹೆಣ್ಣಿಗೆ ಗಂಡಿನ ಮನೆಯಲ್ಲಿ ಅಡುಗೆ ಮಾಡುತ್ತಾ

ಕುಟುಂಬದವರ ಸೇವೆ ಮಾಡುವದೊಂದೇ ಕಾರ್ಯವಲ್ಲ. ಇದು ಕೃಷಿ ಕುಟುಂಬದಲ್ಲಿ ಇರುವ ಸಾಮಾನ್ಯ ಪದ್ಧತಿ. ಕೊಡವರು ಕೃಷಿಕರು ಆಗಿರುವುದರಿಂದ ಪೂರ್ವಭಾವಿಯಾಗಿ ಹೆಣ್ಣು ಕೃಷಿಯಲ್ಲಿ ತೊಡಗುವುದರ ಸಾಂಕೇತಿಕ ನಡೆ ಇದಾಗಿರಬಹುದು. ಆಕೆಗೆ ಗಂಡಿನ ಮನೆಯಲ್ಲಿ ಆ ಕುಟುಂಬದ ಇತರರಿಗೆ ಇರುವಂತೆಯೇ, ಕೆಲವೊಮ್ಮೆ ಅವರಿಗೂ ಹೆಚ್ಚಿನ ಹಕ್ಕನ್ನು ನೀಡಲಾಗುತ್ತದೆ.

ಆ ಮನೆಯ 'ಐಮರ'ದಲ್ಲಿ ಕುಳ್ಳಿರಿಸಿ ಅಲ್ಲಿನ ಹಕ್ಕನ್ನು ನೀಡುತ್ತಾರೆ. ಅದೇ ರೀತಿ ಈಗ ಸಗಣಿಯನ್ನು ಹೊತ್ತುಕೊಂಡು ಹೋಗಿ ಗದ್ದೆಯಲ್ಲಿ ಹಾಕುವುದು ಕೂಡ ಆಕೆಗೆ ಭೂಮಿಯ ಹಕ್ಕನ್ನು ನೀಡುವ ಒಂದು ವಿಶೇಷ ಕ್ರಮವಾಗಿದೆ. ತನ್ನ ಜಮೀನು ಯಾವುದೆಂದು ಗುರುತಿಸುವದು, ಎಲ್ಲರ ಎದುರೇ ಜಮೀನಿನ ಹಕ್ಕು ನೀಡುವುದು, ಇನ್ನು ಮುಂದೆ ಎಲ್ಲಾ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕೆಂದು ಸೂಚಿಸುವ ಈ ಪದ್ಧತಿ ಇತ್ತೀಚಿನವರೆಗೂ ನಡೆದುಕೊಂಡು ಬಂದಿತ್ತು.

ಕೊಡವರ ಮದುವೆಯಲ್ಲಿ 'ಪೆಟ್ಟಿಗೆ ನೊಡುವುದು' ಎಂಬ ಸಂಪ್ರದಾಯವನ್ನು ಮದುವೆ ಮಾರನೇ ದಿನ ಮಾಡುತ್ತಾರೆ. ವಧುವು ತನ್ನ ತವರು ಮನೆಯಿಂದ ಬಳುವಳಿಯಾಗಿ ಪಡೆದಂತಹ ಬಟ್ಟೆ, ಹಣ, ಒಡವೆಗಳನ್ನು ತಂದು ನೆಲ್ಲಕ್ಕಿ ನಡುಬಾಡೆಯಲ್ಲಿಟ್ಟರೆ, ಯಾರಾದರೂ ಹಿರಿಯರು ವಸ್ತಗಳ ಹೆಸರು ಹೇಳಿ ಒಂದೊಂದಾಗಿ ತೆಗೆದು ನೆರೆದಿರುವ ಜನರಿಗೆ ವಸ್ತುಗಳನ್ನು ತೋರಿಸುತ್ತಾರೆ. ಹಾಗೆ ತೋರಿಸುವ ವ್ಯಕ್ತಿಗೆ ಐದು ಹಣವನ್ನು ಕೊಡಬೇಕಾಗುತ್ತದೆ. ಇತ್ತೀಚೆಗೆ ಈ ಪೆಟ್ಟಿಗೆ ನೋಡುವ ಶಾಸ್ತ್ರ ಫ್ಯಾಶನ್ ಆಗಿದೆ. ಒಬ್ಬರ ಮೇಲೆ ಪೈಪೋಟಿಯಂತೆ ಅವರ ಅಂತಸ್ತಿಗೆ ತಕ್ಕಂತೆ ಹೊಸ ಹೊಸ ವಸ್ತುಗಳನ್ನು ಪೆಟ್ಟಿಗೆಗೆ ಹಾಕುತ್ತಾರೆ.

ಮರುನಾಮಕರಣ ಪದ್ಧತಿ

ಕೊಡವರ ಮದುವೆಯ ಇನ್ನೊಂದು ಪ್ರಮುಖ ವಿಶೇಷವೆಂದರೆ ಮದುವೆ ನಂತರ ಗಂಡನ ಮನೆಯಲ್ಲಿ ಹೊಸ ಹೆಸರಿಡುವ ಪದ್ಧತಿ. ಮದುವೆ ಹೆಣ್ಣು ಗಂಡನ ಮನೆ ಪ್ರವೇಶಿಸುತ್ತಿದ್ದಂತೆ ತವರು ಮನೆಯಲ್ಲಿ ಶಾಸ್ತ್ರೋಕ್ತವಾಗಿ ನಾಮಕರಣ ಮಾಡಿದ ಹೆಸರನ್ನು ಬದಲಾಯಿಸಿ, ಆ ಕುಟುಂಬಕ್ಕೆ ಸರಿ ಹೊಂದುವಂತಹ ಹಿರಿಯರ ಹೆಸರುಗಳಾದ ಸೀತವ್ವ, ಚೊಂದಮ್ಮ, ಬೊಳ್ಳಮ್ಮ ಪೊನ್ನವ್ವ, ಕಾವೇರಮ್ಮ, ಗಂಗಮ್ಮ ಎಂಬ ಹೊಸ ಹೆಸರನ್ನಿಟ್ಟು ಕರೆಯುವರು. ಹೊಸ ಹೆಸರಿನಿಂದ ಪರಿಚಿತಳಾದ ಹೆಣ್ಣು ಮುಂದೆ ಕುಟುಂಬದ ಹಕ್ಕನ್ನು ಪಡೆಯುತ್ತಾಳೆ.

ಮರುನಾಮಕರಣ ಸಂದರ್ಭದ 'ಬಾಳೋಪಾಟ್' ಈ ಕೆಳಗಿನಂತಿದೆ.

"ಕೇಳೊ ಕೇಳೊ ಸಂಜದಿ"
ಅಯ್ಯಣ್ಣ ಬಯಿಂಬನು
ಮಾಚಮ್ಮ ಕುಮಾರಿಯು
ಪಟ್ಟ್ ಪೋಲೆ ಪಟ್ಟಮ

ಆ ಒಕ್ಕ ಮನೆಯಿಂಜಿ
ಮಂಗ್‌ಲಾಡಿ ಬಂದಿತ್
ಈ ಒಕ್ಕಡ ಓಣಿಕ
ಮಂಗ್‌ಲ ಮರಿಯಣೆ
ಚೆಂಗ ಬಾಳೆ ಮಟ್ಟತ್
ಜೋಡಕಂಡ್ ಚೆಂಬ್‌ಕ
"ಉಕ್ಕ" "ಉಕ್ಕ್"ಂದೆಣ್ಣ್‌ನ
ಅಕ್ಕಣಕ್ ಸಂಜದಿ
ಉಂಬಳ ಮನೆಯಿಲ್
ಮಾರೋಲೆಲ್ ತಿತ್ತಾಯಿ
ಪಾ ಕುಡಿಕೆ ಪಾಲೆಲ್ಲ
ಪಾಲುಕ್ಕಿ ಮರಿಂಜತ್
ಓರಂದೀರಂಡೆಣ್ಣಣೆ
ಮಂಗ್‌ಲ ಮರಿಂಜತ್
ಈನಂಗುಡ್ ಪೋರಾಂದ್
ಪಂಡಿಯ ನಡಪೋಲೆ
ನೀಲ ಕೊಡಿ ಮಾತಮ್ಮ
ಪಾತ್ ಕೂಳ್ ಉಂಡಿತ್,
ಆನೆ ಕೊಂಬ್ ಚೀಪಾಯಿ
ಜೋಗ ತಲೆ ಚೀಪಿತ್,
ಕೊಬ್ ಕೊಟ್ಟ್ ಪಾಟಾಯಿ
ಚೋಮ ನಿಪ್ಪ ಕೊಟ್ಟ್‌ಕ್
ಚಾಚಿ ಮೆಲ್ಲೆ ಪೋಯಿತ್
ಬೊಳ್ಳೋಟೆರ ಕೂಟೆಲ್
ಚೋಮ ಜಾಣ ಕೊಂಡಿತ್
ಆಯಿರಂಡ ಜಬ್ಬೂಮಿ
ಈ ಭೂಮಿರ ಮೀದಲ್
ನಡಿಕೇರಿಯಂಡ ಒಕ್ಕಡ
ಏಳ ಮೂಲೆ ಆಕತ್
ಜೋಮ ತಾಣ ಇಟ್ಟಿತ್
ನೀಲ ಕೊಡಿ ನೀರ್‌ಲ್
ಕಾಲೂ ಮೂಡೂ ಕತ್ತಿಕ್
ಗಂಗೆ ಪೂಜೆ ಮಾಡಿತ್
ನೀಲಕೊಡಿ ನೀರ್‌ನ
ಜೋಡೆರಂಡ್ ಚೆಂಬ್‌ಲ್
ಕೋತಿಂಗುಂಡ್ ಬಂದಿತ್

ಉಂಬಳ ಮನೆಯಿಲ್
ಅಲ್ಲಿ ಕೋಂದ್ ಬೆಚ್ಚತ್
ಓರಂದೀರಂಡೆಣ್ಣಣೆ
ಇಲ್ಲವನೂ ಬೆಂದುವೂ
ಅಂಗನೂ ಅರುವನೂ
ತನ್ನಡೋರ್ ಊರೋನೂ
ಮಾಚಮ್ಮ ಕುಮಾರಿಕ್
ಪೊನ್ನವ್ವ ಪೆದಲ್‌ಟ್ಟ
ಈ ನಂಗುಂಡ್ ಪೋರಾಂದ್
ಊರ್ ಕಾರ ಬಾಲರೊ
ಅತ್ತಿ ಪತ್ತಿ ಕೊಂಡಿತ್
ವೈಯ್ಯನೆ ಪಿರಿಂಜತ್.
ಒಂದ್ ಕೇಳ್ ಸಂಜದಿ,
ಅಯ್ಯಣ್ಣ ಬಯಿಂಬನ
ಮಣ್ಣರುವ ಬಾಲನ್
ಕನ್ನಿ ಮೂಲೆ ಕೋರಿಬರೆ
ನೀಲಕೊಡಿ ಪೊನ್ನವ್ವ
ಬಂದಿತಿಂದ್ ಕೂಡನ
ಏಳರೆರ ಒಳ್‌ಕ್
ಕೂಟಿತೆ ಪೊರಟಿತ್.
ಅಯ್ಯಣ್ಣ ಬಯಿಂಬಗೂ
ಪೊನ್ನವ್ವಂಗ್ ದೇವಿಕೂ
ಪೊಮ್ಮುತ್ತ್‌ಸರ ಪೋಲೆ
ಆಣ್ ಪೊಣ್ಣೆಡೆಮೇಂಗಿ
ಪತ್ತ್ ಮಕ್ಕಳಾಯಿತ್
ಪೊನ್ನವ್ವನ್ ದೇವಿಯೊ
ಪೈ ತಾಂಡೆಕೆಳ್‌ತಿತ್
ಪನ್ನಂದಾನ ಚಾಕಿತ್
ತಾಂದೇವನೂ ದೇವಿಯೂ
ಈ ಭೂಮಿರ ಮೀದಲ್
ನೂರ್ ಕಾಲ ಬಾವಡ್
ಎಂದೆಣ್ಣಿತ್ ಪಾಡುವ
ಈ ಪಾಡುವ ಬೆಕ್ಕನ
ಬೆಪ್ಪ ಕೊಮ್ಮೆಡ್ ಪಕ
ಪಾಡುವ ಮೊರಡಾಪ
ಆದಿ ಮೂಲ ಲೆಲ್ಲೇಲೊ!

ಇದರ ಕನ್ನಡ ಅನುವಾದ ಈ ರೀತಿ ಇದೆ.

"ಮನೆಗೆ ನೀರು ತಂದ ಮೇಲೆ ಮನೆಯ ನಡುಕೋಣೆಯಲ್ಲಿ ಗ್ರಾಮಸ್ಥರು, ಅತಿಥಿಗಳು, ಮನೆಯವರು ಸೇರಿ ವಧುವಿಗೆ ಹೊಸ ಹೆಸರನ್ನು ಹಾಕುವರು. ನಾಮಕರಣದ ನಂತರ ಭೋಜನ. ತರುವಾಯ ನೆಂಟರೂ ಗ್ರಾಮಸ್ಥರೂ, ಗೆಳೆಯರೂ ಸೇರಿ ಕುಟುಂಬವನ್ನು ಅಭಿವೃದ್ಧಿಗೊಳ್ಳಲೆಂದೂ ಓಡಿಹೋದ ಆಳುಗಳು ತಿರುಗಿ ಬರಲೆಂದೂ, ಅವರ ಭವಿಷ್ಯ ಧ್ರುವನಕ್ಷತ್ರದಂತೆ ಸದಾ ಬೆಳಗಲೆಂದೂ ಭೂಗತ ನಿಧಿಗಳು ಅವರಿಗೆ ದೊರೆಯಲೆಂದೂ ಅವರ ವ್ಯವಸಾಯವು ಅಭಿವೃದ್ಧಿಗೊಂಡು ಬವಣೆಗಳು ಇಗ್ಗುತಪ್ಪ ಬೆಟ್ಟದಂತೆ ನಿಲ್ಲಲೆಂದೂ, ದಿವಸವು ಕಾವೇರಿ ನದೀತಟದ ಮರಳು ರಾಶಿಯಂತೆ ಹೆಚ್ಚಲೆಂದೂ ಅವರ ಮನೆಯಲ್ಲಿ ಚಿನ್ನದ ನಾಣ್ಯಗಳು ನದಿಕೆರೆಯ ಹರಳಿನಂತೆ ತುಂಬಲೆಂದೂ, ವಯಸ್ಸಾದವರು ಬಾಡದ ಹೂವುಗಳಂತೆ ಶತಾಯುಗಳಾಗಿರಲೆಂದೂ, ಯುವಕರು ಮತ್ತು ಮಕ್ಕಳು ಸೋರೆಕಾಯಿ ಹೂವಿನಂತೆ ಹೆಚ್ಚಲೆಂದೂ, ಮಕ್ಕಳು ಬಿದುರಿನ ಹೊಸ ಚಿಗುರಿನಂತೆ ಹಳೆಗಿಡಕ್ಕಿಂತ ಮೇಲೇರಿ ನಿಲ್ಲುವಂತೆ ಅಭಿವೃದ್ಧಿಗೊಳ್ಳಲೆಂದೂ ಹರಸುವ."[೩೧]

ವೇದ, ಮಂತ್ರ, ಬ್ರಾಹ್ಮಣರ ಪೌರೋಹಿತ್ಯವಿಲ್ಲದೆಯೂ ಕೊಡವರ ವಿವಾಹದಲ್ಲೂ ಧಾರ್ಮಿಕ ಹಾಗೂ ಐತಿಹಾಸಿಕ ಮಹತ್ವದ ಅಂಶಗಳು ಕಂಡುಬರುತ್ತವೆ. ಇವರ ವಿಧವಾ ವಿವಾಹ, ಒಕ್ಕಪರಿಜೆ, ಮಕ್ಕಪರಿಚೆ, ಬುಡ್‌ಧಾರೆ ಪದ್ಧತಿಯನ್ನು ಅವಲೋಕಿಸಿದಾಗ ಹೆಣ್ಣಿಗೆ ವಿಶೇಷವಾಗಿ ನ್ಯಾಯ, ಸ್ಥಾನಮಾನಗಳನ್ನು ದೊರಕಿಸುವಲ್ಲಿ ಕೊಡವರು ಸಮರ್ಥರಾಗಿದ್ದಾರೆ ಎನಿಸುತ್ತದೆ. ಇವರ ಸಂಸ್ಕಾರಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳಾಗಿದ್ದರೂ, ಎಲ್ಲಾ ಆಚರಣೆಗಳನ್ನು ಇಂದಿಗೂ ಉಳಿಸಿಕೊಂಡು ಇತರರಿಗೆ ಮಾದರಿಯಾಗಿದ್ದಾರೆ.

ಕೊಡವರಲ್ಲಿ ಶವಸಂಸ್ಕಾರ

"ಹುಟ್ಟು ಆಕಸ್ಮಿಕವಾದರೆ ಸಾವು ಖಚಿತ(birth is an accident , but death is bound to come) ಎನ್ನುವಂತೆ 'ಜಾತಸ್ಯ ಮರಣಂ ಧ್ರುವಂ' ಎಂಬ ಸಂಸ್ಕಾರವಾಣಿಯಂತೆ ಹುಟ್ಟಿದ ಸಕಲ ಚರಾಚರ ಜೀವರಾಶಿಗಳು ಸಾಯಲೇಬೇಕೆಂದು ಸೃಷ್ಟಿನಿಯಮವಿದೆ. ಮನುಷ್ಯನು ಒಂದಲ್ಲ ಒಂದು ದಿನ ಸಾಯಲೇ ಬೇಕು; ಸಾಯುತ್ತಾನೆ. ಹುಟ್ಟಿನ ಬಗ್ಗೆ ನಿಖರವಾಗಿ ಹೇಳಬಹುದಾದರೂ ಸಾವನ್ನು ಯಾರೂ ಕಂಡಿಲ್ಲ. ಮಾನವ ತನ್ನ ತಾರುಣ್ಯದಲ್ಲಿ ಮದೋನ್ಮತ್ತನಾಗಿ ವರ್ತಿಸಿ ತನ್ನ ಹತ್ತಿರದವರಿಗೆ, ನೆರೆಹೊರೆಯವರಿಗೆ ಕೊಟ್ಟ ತೊಂದರೆಗಳನ್ನು ಇಳಿವಯಸ್ಸಿನಲ್ಲಿ ನೆನೆದು ದು:ಖಿಸುತ್ತಾನೆ. ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡುತ್ತಾನೆ. ಇಹಲೋಕದ ಕಷ್ಟಗಳು ಮತ್ತೆ ಹುಟ್ಟಿ ಬರಬಾರದೆಂದು ಮುಕ್ತಿಯ ಹಾದಿಯನ್ನು ಹುಡುಕುತ್ತಾನೆ.

ಕೊಡವರು ಮರಣಕ್ಕೆ 'ಚಾವು' ಎಂಬ ಶಬ್ದವನ್ನು ಬಳಸುತ್ತಾರೆ. ಚಾವು ಎಂದರೆ ಸಾವು ಎಂದರ್ಥ. ಕೆಲವು ಹಿಂದೂ ಸಂಸ್ಕೃತಿಯಲ್ಲಿ 'ಲಿಂಗೈಕ್ಯ' ಮೃತ, ಶಿವನಪಾದಸೇರು, ಅಸುನೀಗು, ಇಹಲೋಕ ತ್ಯಜಿಸು ಎಂದು ಅರ್ಥೈಸುವುದುಂಟು. ಬಟ್ಟೆ ಹಳೆಯದಾದೊಡನೆ ಕಳಚುವಂತೆ, ವೃದ್ಯಾಪ್ಯ ಪ್ರಾಪ್ತವಾದಾಗ ಭೌತಿಕ ದೇಹ ತ್ಯಜಿಸಿದರೂ ಆತ್ಮ ಅಮರವೆಂದು ಭಾವಿಸುವ ಕಾರಣ ಕೆಲವರು ಸಾವಿಗೆ

ಶೋಕ ವ್ಯಕ್ತಪಡಿಸುವುದಿಲ್ಲ. ಬದಲಾಗಿ "ಮರಣವೇ ಮಹಾನವಮಿ" ಎಂದು ಭಾವಿಸಿ, ಸ್ವಸಂತೋಷದಿಂದ ಭೌತಿಕ ದೇಹ ಬಿಡುವರು. ಶಿಶುನಾಳ ಶರೀಫರ ರಃ ಹಾಡು ಈ ಅಂಶವನ್ನು ಸ್ಪಷ್ಟಪಡಿಸುತ್ತದೆ.

ಬಿಡತೇನಿ ದೇಹ ಬಿಡತೇನಿ
ಬಿಡತೇನಿ ದೇಹನ ಕೊಡತೇನಿ ಭೂಮಿಗೆ
ಇಡತೇನಿ ಮಹಿಮಾದ ನಡತೆ ಹಿಡಿದು ದೇಹ
ಅವನಿಯೊಳು ಶಿಶುನಾಳದೀಶನೆ ಗತಿಯೆಂದು
ಆವನ ಬಾದೆ ಗೆದ್ದು ಶಿವಲೋಕದೋಳು
ದೇಹಾ ಬಿಡತೇನಿ!

ಕೊಡವರಲ್ಲಿ ಸತ್ತಾಗ ವಿಶಿಷ್ಟವಾದ ಕೆಲವು ವಿಧಿಗಳನ್ನು ಮಾಡುತ್ತಾರೆ. ಇವರಲ್ಲಿ ಹೂಳುವ ಮತ್ತು ಸುಡುವ ಎರಡು ಪದ್ಧತಿ ರೂಢಿಯಲ್ಲಿದೆ. ಇವರ ಸೂತಕ, ತಿಥಿಗಳಲ್ಲಿ ವಿಶೇಷವಾದ ಆಚರಣೆಗಳನ್ನು ಕಾಣಬಹುದು. ಸಾವು ಸಮೀಪಿಸುತಿದ್ದಂತೆ ಮನೆಯ ವಿಶಾಲವಾದ ನೆಲ್ಲಕ್ಕಿ ನಡುಬಾಡೆಯಲ್ಲಿ (ಮಧ್ಯದ ಕೋಣೆ) ಮಲಗಿಸುತ್ತಾರೆ. ಶವದ ಪಕ್ಕದಲ್ಲಿ ತೆಂಗಿನಕಾಯಿ, ತುಳಸಿ, ಗರಿಕೆಹುಲ್ಲು ಮತ್ತು ಚಿನ್ನದ ನಾಣ್ಯವಿಡುತ್ತಾರೆ. ಪ್ರಾಣ ಹೋಗುವ ಸಮಯದಲ್ಲಿ ತುಳಸಿ ಮತ್ತು ಗರಿಕೆ ಹುಲ್ಲನ್ನು ತೆಂಗಿನಕಾಯಿ ನೀರಿನಲ್ಲಿ ಅದ್ದಿ ಬಾಯಿಗೆ ಬಿಡುತ್ತಾರೆ. ಹತ್ತಿರದ ಸಂಬಂಧಿಕರು ಬಾಯಿಯೊಳಗೆ ಚಿನ್ನದ ನಾಣ್ಯವಿಟ್ಟು ನೀರು ಬಿಡುತ್ತಾರೆ, ತುಳಸಿ ಮಾಲೆಯನ್ನು ಕೊರಳಿಗೆ ಹಾಕುತ್ತಾರೆ.

ತುಳಸಿಯು ಹಿಂದುಗಳಿಗೆ ಪವಿತ್ರ ಗಿಡ. ತುಳಸಿಯ ಜೊತೆ ಬಿಲ್ವ ಪತ್ರೆಯನ್ನು ದರ್ಭೆಯನ್ನು ಶುಭಾಶುಭ ಕರ್ಮಗಳಲ್ಲಿ ಉಪಯೋಗಿಸುತ್ತಾರೆ. ಕೊಡವರು ಬಳಸುವ ಗರಿಕೆ ಹುಲ್ಲು ಬಹುಶ: ದರ್ಭೆಯ ಪ್ರತೀಕವಾಗಿದೆ. ದರ್ಭೆಯ ನೀರು ವೈದಿಕ ಮತದ ಪ್ರಕಾರ ಪವಿತ್ರವಾದ ನೀರು, ವೈದಿಕ ಪ್ರಕ್ರಿಯೆಗಳಲ್ಲಿ ದರ್ಭೆಯ ಉಪಯೋಗ ಅನಿವಾರ್ಯವಾಗಿದೆ.

ಸತ್ತವರು ವಿವಾಹವಾಗಿದ್ದರೆ ಅಥವಾ ವಯಸ್ಸಾದವರಾಗಿದ್ದರೆ ಜೋಡಿ ಗುಂಡನ್ನು, ವಿವಾಹ ಆಗದಿದ್ದರೆ ಒಂಟಿ ಗುಂಡನ್ನು ಹಾರಿಸುತ್ತಾರೆ. ಊರಿನವರಿಗೆ ಮರಣದ ವಾರ್ತೆಯನ್ನು ಗುಂಡಿನ ಶಬ್ದ ಸೂಚಿಸುತ್ತದೆ. ಕೊಡಗು ಪರ್ವತ ಪ್ರಾಂತ್ಯವಾದ್ದರಿಂದ ಹಾಗೂ ತೋಟದ ಮನೆಗಳು ದೂರವಿರುವುದರಿಂದ ಮರಣವಾರ್ತೆಯನ್ನು ಸುಲಭವಾಗಿ ಜನರಿಗೆ ಮುಟ್ಟಿಸುವ ಕ್ರಮ ಇದಾಗಿದೆ. ಗುಂಡಿನ ಶಬ್ಬ ಕೇಳಿದೊಡನೆಯೇ ಗ್ರಾಮಸ್ಥರು ಏನೇ ಕೆಲಸ ಮಾಡುತಿದ್ದರೂ ತಕ್ಷಣ ಬಿಟ್ಟು ಸಾವಿನ ಮನೆಗೆ ಬಂದು ಸಹಾಯ ಮಾಡುತ್ತಾರೆ. ಸತ್ತ ತಕ್ಷಣವೇ ಹೊಲೆಯರನ್ನು ಕರೆಸಿ ವಾದ್ಯ ಮಾಡಲಾಗುತ್ತದೆ. ಈ 'ಚಾವುಪರೆ' ವಾದ್ಯವು ಶವಸಂಸ್ಕಾರ ಮುಗಿಯುವ ತನಕ ನಡೆಯುತ್ತದೆ. ಸಾಮಾನ್ಯವಾಗಿ ಚಾವುಪರೆಯಲ್ಲಿ ಶೋಕಗೀತೆಯನ್ನು ನುಡಿಸುತ್ತಾರೆ.

"ನೀರ್‌ಕ್ಕ್‌ಳಿವ"(ನೀರಿಗೆ ಇಳಿಯುವುದು)

ಕೊಡವರು ಮರಣ ಸಂಸ್ಕಾರದ ಸಂದರ್ಭದಲ್ಲಿ ಧರಿಸುವ ಉಡುಪು ಕೂಡ ವಿಶಿಷ್ಟ. ಸತ್ತ ವ್ಯಕ್ತಿಯ ಹತ್ತಿರದ ಸಂಬಂಧಿಕರು ತಮ್ಮ ಮೈ ಮೇಲಿನ ಬಟ್ಟೆಸಮೇತ ನೀರಲ್ಲಿ ಮುಳುಗುವರು. ಗಂಡಸರು ಕುಪ್ಪಸದಟ್ಟಿ ಹಾಕಬೇಕು. ಅಥವಾ ಸೊಂಟಕ್ಕೊಂದು ಬಿಳಿ ಪಂಚೆ ಕಟ್ಟಿಕೊಳ್ಳಬೇಕು ಮೈಯನ್ನು ಮುಚ್ಚಲು ಮತ್ತೊಂದು ಬಿಳಿ ಬಟ್ಟೆಯನ್ನು ಹೊದ್ದುಕೊಳ್ಳಬೇಕು. ಹೆಂಗಸರು ಬಿಳಿ ಬಟ್ಟೆಯನ್ನು ತೊಡಬೇಕು. ಸಾವಿಗೆ ಬರುವ ಪ್ರತಿಯೊಬ್ಬರು ಬಿಳಿಯ ಉಡುಪನ್ನೇ ಧರಿಸಬೇಕಾಗುತ್ತದೆ. ಹತ್ತಿರದ ಸಂಬಂಧಿಕರು ರವಿಕೆಯ ಬದಲಾಗಿ 'ನಿಪ್ಪ್‌ತುಣಿ' ಯನ್ನು ಬೆನ್ನಿಗೆ ಕಟ್ಟಿಕೊಳ್ಳಬೇಕಾಗುತ್ತದೆ. 'ನಿಪ್ಪುತುಣಿ' ಅಂದರೆ ಟವಲಿನಂತಿರುವ ಬಿಳಿಬಟ್ಟೆ. ತಲೆಯ ಕೂದಲನ್ನು ಬಿಚ್ಚಿ ಬೆನ್ನಿನ್ನಲ್ಲಿ ಹರಡಿಕೊಳ್ಳುತ್ತಾರೆ. ಈ ಪದ್ಧತಿಯನ್ನು ಮೃತವ್ಯಕ್ತಿಗಿಂತ ವಯಸ್ಸಿನಲ್ಲಿ ಕಿರಿಯರಾದವರು ಮಾತ್ರ ಅನುಸರಿಸುತ್ತಾರೆ. ಹಿರಿಯರಿಗೆ ಇದು ಅನ್ವಯಿಸುವುದಿಲ್ಲ.

ನೀರಿಗೆ ಇಳಿಯುವವರು ಸಂಪೂರ್ಣ ನೀರೊಳಗೆ ಮುಳುಗಿ ಒದ್ದೆ ಮಾಡಿಕೊಳ್ಳದಿದ್ದರೂ ಕೈಕಾಲು ಮುಖವನ್ನಾದರೂ ತೊಳೆದು ತಲೆಗೆ ನೀರು ಚಿಮುಕಿಸಬೇಕಾಗುತ್ತದೆ. ಉಟ್ಟ ಬಟ್ಟೆಯಲ್ಲಿ ಮುಳುಗುವ ಈ ಕೊಡವರ ಸ್ನಾನವನ್ನು ಸಂಸ್ಕೃತದಲ್ಲಿ 'ಶಾಸ್ತ್ರರೀತ್ಯಾ ಸಚೇಲಸ್ನಾನ' ಎಂದು ಕರೆಯುತ್ತಾರೆ. ಇದು ಹಿಂದೂ ಧರ್ಮ ಶಾಸ್ತ್ರದ ಪ್ರಕಾರ ಎಲ್ಲರೂ ಮಾಡುವ ಪದ್ಧತಿ. ಕೊಡವರು ಈ ಸ್ನಾನದ ನಂತರ ಧರಿಸುವ ಕುಪ್ಪಸ ಅಥವಾ ಸೊಂಟಕ್ಕೊಂದು ಬಿಳಿಬಟ್ಟೆಯ, ಮೈಮುಚ್ಚುವ ಬಿಳಿಬಟ್ಟೆ, ಈ ನಿಯಮವನ್ನು ಸಂಸ್ಕೃತದಲ್ಲಿ ಅಂತರೀಯ ಮತ್ತು ಉತ್ತರೀಯವೆಂದು ಕರೆಯುವರು. ಧಾರ್ಮಿಕ ಕಾರ್ಯಗಳಲ್ಲಿ ಈ ಬಟ್ಟೆಗಳ ಅಂದರೆ ಅಂತರೀಯ-ಸೊಂಟಕ್ಕೆ ಉಡುವ ಬಟ್ಟೆ-ಉತ್ತರೀಯ ಮೇಲಕ್ಕೆ ಹೊದ್ದುಕೊಳ್ಳುವ ಬಟ್ಟೆ ಈ ಎರಡರ ಉಪಯೋಗ ಧರ್ಮಶಾಸ್ತ್ರಕ್ಕನುಗುಣವಾಗಿ ಎಲ್ಲ ಪಂಗಡಗಳಲ್ಲೂ ಕಂಡುಬರುತ್ತದೆ.

"ಚಾವುಕ್ ಕೈ ಕೊಡ್‌ಪ" (ಸಾವಿಗೆ ಕೈ ಕೊಡುವುದು)

ನೀರಿಗಿಳಿದವರು ಮತ್ತು ಇತರರು ಶವಕ್ಕೆ ಕೈ ಕೊಡುವುದಕ್ಕೆ 'ಚಾವುಕ್ ಕೈ ಕೊಡ್‌ಪ' ಎನ್ನುತ್ತಾರೆ. ಶವಕ್ಕೆ ಕೈ ಕೊಡುವಾಗ ತಮ್ಮ ತಲೆಯ ಮೇಲಿನ ವಸ್ತ್ರ ಇಲ್ಲವೇ ಟೊಪ್ಪಿಯನ್ನು ತೆಗೆಯಬೇಕು. ಬಲಗೈಯ ಹೊರಭಾಗವನ್ನು ಶವದ ಎದೆಯ ಮೇಲಿಟ್ಟು ತಮ್ಮ ಅಂಗೈಯಿಂದ ಎದೆಗೆ ಹೊಡೆಯುವಂತೆ ಇಡಬೇಕು.

ಕೈಕೊಡುವವರು ಸತ್ತವರ ಸಂಬಂದ ಹಿಡಿದು, ಕಿರಿಯರಾದರೆ ಅವರ ಹೆಸರನ್ನು ಹಿಡಿದು 'ಕೆಟ್ಟಿರೋ ಅಜ್ಜಯ್ಯ, ಕೆಟ್ಟಿರೋ ಐಯ್ಯಣ್ಣ ಎಂದು ಮೂರು ಬಾರಿ ಹೇಳಬೇಕು'. (ಮಾಹಿತಿ: ಬೊಪ್ಪೇರ ಕಾವೇರಪ್ಪ, ನಾಪೋಕ್ಲು) ಮೂರು ಬಾರಿ ಕೂಗಿದ ಅನಂತರ ಜೋಡಿಗುಂಡನ್ನು ಹಾರಿಸಿ ಮನೆಗೆ ಬಂದು ಬಾಳೆ ಎಲೆಯ ತುದಿಯ ತುಂಡಿನಲ್ಲಿ ಅನ್ನ ಹಾಕಿ, ಎಣ್ಣೆ ಬತ್ತಿ ಹೊತ್ತಿಸಿ, ಮೂರು ಬಾರಿ ನೀರಿಗಿಳಿದು ಶೃಂಗಾರಗೊಂಡ ಶವಕ್ಕೆ ಕೈಕೊಡುವ ಪದ್ಧತಿ ಇಂದಿಗೂ ಕೊಡವರಲ್ಲಿ ಕಂಡುಬರುತ್ತದೆ. ತೆಂಗಿನ ಕಾಯಿ ಚೂರು ಇಟ್ಟು ಶೋಕವನ್ನಾಚರಿ

ಸುತ್ತಾರೆ. ಇತರ ಹಿಂದುಗಳಂತೆ ಬಾಳೆ ಎಲೆ ಕೊಡವರ ಸಂಸ್ಕಾರದಲ್ಲೂ ಅನಿವಾರ್ಯವಾಗಿದೆ.

"ಚಾವು ಒಳಿಯುವ" (ಶವದ ತಂಗುವಿಕೆ)

ಕೊಡವರು ಶವವನ್ನು ಒಂದು ರಾತ್ರಿ ಕಾರಣಾಂತರದಿಂದ ತಂಗಿಸಬೇಕಾದರೆ ಬಿಳಿಬಟ್ಟೆಯನ್ನು ಹೊದಿಸಿ, ದೀಪವನ್ನು ಹಚ್ಚಿ ರಾತ್ರಿಯಿಡಿ ನಿದ್ರಿಸದೆ ಕಾಯುತ್ತಾರೆ. ಶವವನ್ನು ರಾತ್ರಿ ಕಾಯದಿದ್ದರೆ, ಆತ್ಮ ಹತ್ತಿರವಿದ್ದು ಅಥವಾ ಇತರ ಜೀವಗಳು ಹೊಕ್ಕು ಆ ಶರೀರ ಎದ್ದು ನಡೆಯಬಹುದೆಂಬ ನಂಬಿಕೆ ಇದೆ.

"ಶವವನ್ನು ರಾತ್ರಿ ತಂಗಿಸುವಾಗ ಮಗುಚಿದ ಚಾಪೆಯ ಮೇಲೆ ದಕ್ಷಿಣಕ್ಕೆ ತಲೆಯನ್ನಿಟ್ಟು ಮಲಗಿಸಿ ಶವದ ಮುಖದ ಮೇಲೆ ಒಂದು ಕಂಚಿನ ಗಂಗಳವನ್ನು ಮುಚ್ಚುತ್ತಾರೆ. ಅದು ಮೂಗಿಗೆ ತಾಗದಂತೆ ಬಟ್ಟೆಯ ಸಿಂಬಿಯನ್ನು ಮಾಡಿ ಮುಖದ ಮೇಲೆ ಇಟ್ಟು ಗಂಗಳ ಮುಚ್ಚುತ್ತಾರೆ. ಶವವನ್ನು ಕಾಣದಂತೆ ಅದರ ಮೇಲೆ ಒಂದು ಹಚ್ಚಡವನ್ನು ಹಾಸುತ್ತಾರೆ. ಇದಕ್ಕೆ "ಮೂಡ್‌ಲಿಡುವ"[೩೨] ಎಂದು ಹೆಸರು . ಮಾರನೇ ದಿನ ಇವೆಲ್ಲವನ್ನು ತೆಗೆಯಲಾಗುವುದು.

ಕಾಕಿ ಮೊರಡುವೋ (ಸಂಬಂಧ ಕರೆದು ಅಳುವ ವಿಧಾನ)

ಶವದ ಮುಂದೆ ರಾತ್ರಿ ಸಾವಿಗೆ ಸಂಬಂಧಿಸಿದ ಹಾಡನ್ನು (ಚಾವು ಪಾಟನ್ನು) ನಾಲ್ಕು ಜನ ಗಂಡಸರು ಹಾಡುತ್ತಾರೆ. ಈ ಹಾಡಿನಲ್ಲಿ ಸತ್ತವರ ಸಂಬಂಧವನ್ನು ಪ್ರತಿ ಸಾಲಿನ ಅಂತ್ಯದಲ್ಲಿ ಅಜ್ಜಯ್ಯ, ತಾಯವ್ವ,ಅಣ್ಣಯ್ಯ, ಅಕ್ಕಯ್ಯ, ಬಾವಯ್ಯ ಇತ್ಯಾದಿ ತಮಗಿರುವ ಸಂಬಂಧವನ್ನು ಹೇಳುತ್ತಾರೆ. ಕಿರಿಯರಾದರೆ ಮಾಚಯ್ಯ, ಸೋಮಯ್ಯ, ಪೂವಮ್ಮ ಎಂದು ಸೇರಿಸಿ ಸಾವಿನ ಹಾಡನ್ನು ಹಾಡುತ್ತಾರೆ.

ಚಾವುಪಾಟ್ (ಸಾವುಪದ)

ಕೆಟ್ಟಿರೋ ಅಜ್ಜಯ್ಯ ನಿಂಗ
ಕೆಟ್ಟನಕೆ ಕೆಟ್ಟಲೇ ಅಜ್ಜಯ್ಯ
ಜೋಲೆರೋ ಅಜ್ಜಯ್ಯ ನಿಂಗ
ಚೋತನ್ನಕೆಚೋಡಿಲೇ ಅಜ್ಜಯ್ಯ

(ಸಂಪೂರ್ಣ ಹಾಡನ್ನು ಅನುಬಂಧ-೬ ರಲ್ಲಿ ಕೊಡಲಾಗಿದೆ.)

ಚಾವುಪಾಟಿನ ಕನ್ನಡ ಅನುವಾದ ಇಂತಿದೆ. ಸಾವಿನ ಹಾಡನ್ನು ರಾತ್ರಿಯಿಡೀ ಹಾಡುತ್ತಾರೆ. ಈ ಚಾವು ಪಾಟಿನಲ್ಲಿ ಗತಿಸಿದವರನ್ನು ನೆನೆದು 'ನೀವು ಪುಣ್ಯಶಾಲಿಗಳು –ಈಗ ನೀವು ಅಗಲಿದಿರಿ' ಎನ್ನುವ ಅರ್ಥದಲ್ಲಿ ಅವರ ಸತ್ಕಾರ್ಯಗಳನ್ನೆಲ್ಲಾ ಹೊಗಳುತ್ತಾ "ನೀವು ನಮ್ಮ ಮಕ್ಕಳನ್ನು ಸಪ್ತಶಾಸ್ತ್ರಪಾರಂಗತ ರನ್ನಾಗಿ ಮಾಡಿದಿರಿ. ನಿಮ್ಮ ವಿರೋಧಿಗಳನ್ನು ಗೆದ್ದಿರುವಿರಿ. ನೀವು ಕಾವೇರಿ ,ಗಂಗೆ, ತುಂಗೆ, ಯಮುನೆ, ಸರಸ್ವತಿ, ರಾಮೇಶ್ವರ ಮೊದಲಾದ ಪುಣ್ಯತೀರ್ಥ ಸ್ನಾನಮಾಡಿದಿರಿ. ನಿಮಗೆ ಕೆಲವು ಅಪಶಕುನಗಳಾದವು–ಎಡಗಣ್ಣು ಹಾರಿತು,

ಸುಂಟರಗಾಳಿ ಬಂದು ಎಲೆಗಳು ಹಾರಿದವು. ಜ್ವರಬಂದು ಗ್ರಾಮದೇವತೆಯನ್ನು ಕೇಳಿದಾಗ ಮರಣ ಸಮೀಪಿಸಿದೆಯೆಂದು ನುಡಿಯಿತು. ಆದ್ದರಿಂದ ನಿಮ್ಮ ಮಕ್ಕಳು ನಿಮ್ಮ ಹೆಸರಿನಲ್ಲಿ ಗೋದಾನ ಮಾಡಿಸಿದರು. ಕೊಡ, ಕೋಲು, ಪಾತ್ರೆ, ಅಕ್ಕಿ, ತೆಂಗಿನಕಾಯಿ ಎಣ್ಣೆ ಇತ್ಯಾದಿ ಹನ್ನೊಂದು ವಸ್ತು ಜೋಯಿಸರಿಗೆ ದಾನ ಮಾಡಿದರು. ದಾನ ಪಡೆದವರು ಸಾತ್ವಿಕ ಅರಸುಯುದಿಷ್ಠಿರಂತೆ ನಿಮಗೆ ಸ್ವರ್ಗ ಪ್ರಾಪ್ತಿಯಾಗಲೆಂದು ಹರಸಿದರು.

ದು:ಖಿತ ಪತ್ನಿ ಪುತ್ರರು ದೇವರನ್ನು ಕುರಿತು ಪ್ರಾರ್ಥಿಸಿದರು. ರಾಮನಾಮ ಸಂಕೀರ್ತನೆ ಮಾಡಿದರು. ಇಡೀ ವಾತಾವರಣವು ರಾಮನಾಮದಿಂದ ಪ್ರತಿಧ್ವನಿಸಿತು. ಪಕ್ಷಿಯು ತನ್ನ ಗೂಡನ್ನು ಬಿಟ್ಟು ಹಾರಿ ಹೋಗುವಂತೆ ನಿಮ್ಮ ಆತ್ಮವು ಶರೀರವನ್ನು ಬಿಟ್ಟು ಅಗಲಿತು. ಪುನ: ಇನ್ನೊಂದು ಜನ್ಮ ತಳೆದು ಹುಟ್ಟಿಬರಲು ಯತ್ನಿಸದಿರಿ. ಭಗವಂತನ ಶಿರದಲ್ಲಿ ಮೂಡಿದ ಬಾಡದ ಹೂವಿನಂತೆ ಸದಾ ವೈಕುಂಠದಲ್ಲಿ ಜೀವಿಸಿರಿ ಇಲ ಎಂಬ ವಿವರಗಳು ಇರುತ್ತವೆ.

ಮೇಲಿನ ಕೊಡವರ 'ಚಾವು ಪಾಟ್'ನಲ್ಲಿ ಹಿಂದೂ ಸಂಪ್ರದಾಯದ ಹಲವು ಪದ್ಧತಿಗಳನ್ನು ನೋಡಬಹುದು .ಇಲ್ಲಿ ಕಂಡು ಬರುವ ಎಣ್ಣೆ, ತೆಂಗಿನಕಾಯಿ ದಾನ ಪದ್ಧತಿ, ಪುರ್ನಜನ್ಮದ ಬಗ್ಗೆ ನಂಬಿಕೆ ರಾಮನಾಮ ಸಂಕೀರ್ತನದಲ್ಲಿ ಶ್ರದ್ಧೆ, ಅಪಶಕುನದ ಬಗ್ಗೆ ಎಡಗಣ್ಣು ಹಾರುವುದು ಮುಂತಾದವುಗಳು ಹಿಂದೂ ಧರ್ಮದ ಮೂಲ ನಂಬಿಕೆಗಳನ್ನೇ ಎತ್ತಿ ಹಿಡಿಯುತ್ತವೆ.

ಪಾರಿಕೋಳಿ ಬುಡುವೊ:

ಕೊಡವರಲ್ಲಿ ಯಾವುದೇ ವ್ಯಕ್ತಿ 'ಮಂಗಳವಾರ' ಅಥವಾ ಶುಕ್ರವಾರ' ಮೃತಪಟ್ಟರೆ ಶವ ಸಂಸ್ಕಾರದ ಸಂದರ್ಭದಲ್ಲಿ ಜೀವಸಹಿತವಿರುವ ಕೋಳಿಯನ್ನು ಮೃತಶರೀರದ ಮೇಲಿಂದ ಎಸೆಯುತ್ತಾರೆ. ಅಂದರೆ ಹಾರಿಸುತ್ತಾರೆ. ಈ ರೀತಿಯಾಗಿ ಹಾರಿಸಿದ ಕೋಳಿಯನ್ನು ಸ್ಥಳೀಯ ದಲಿತ ಪಂಗಡಕ್ಕೆ ಸೇರಿದ ಕೆಂಬಟ್ಟಿಗಳು ಅಥವಾ ಕಾಪಳರು ಅದನ್ನು ಅಟ್ಟಿಸಿಕೊಂಡು ಹೋಗಿ ಹಿಡಿದುಕೊಳ್ಳಬೇಕು. ನಂತರ ಅದನ್ನು ತಮ್ಮ ಮನೆಗೆ ತೆಗೆದುಕೊಂಡು ಹೋಗಿ ತಿನ್ನಬೇಕು. ಇದು 'ಪಾರಿಕೋಳಿ ಬುಡುವೊ' (ಜೀವವಿರುವ ಕೋಳಿಯನ್ನು ಹಾರಿಸುವ) ಶಾಸ್ತ್ರವಾಗಿದೆ. ಈ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಸ್ಥಳೀಯ ಹಿರಿಯರೊಬ್ಬರನ್ನು ಸಂದರ್ಶಿಸಿದಾಗ ಅವರು ನೀಡಿದ ಮಾಹಿತಿ ಇಲ್ಲಿನ ಜನರ ಮೂಢನಂಬಿಕೆಗೆ ದ್ಯೋತಕವಾಗಿದೆ.

ಸಾಮಾನ್ಯವಾಗಿ ಮಂಗಳವಾರ ಅಥವಾ ಶುಕ್ರವಾರ ಬಹಳ ಕಠಿಣವಾದ ದಿನಗಳಂತೆ. ಆ ದಿನದಲ್ಲಿ ವ್ಯಕ್ತಿಯು ಮೃತಪಟ್ಟರೆ ಆ ವ್ಯಕ್ತಿಯ ಆತ್ಮ 'ದೆವ್ವ'ವಾಗಿ ಮನೆಯವರಿಗೆ ತೊಂದರೆ ಕೊಡಬಹುದು. ಅದರಿಂದಾಗಿ ಶವ ಸಂಸ್ಕಾರದ ಸಂದರ್ಭದಲ್ಲಿ ಮೃತ ಶರೀರವನ್ನು ಮನೆಯ ಒಳಗಿನಿಂದ ಅಂಗಳಕ್ಕೆ ತಂದಿಟ್ಟ ನಂತರ ಜೀವವಿರುವ ಕೋಳಿಯನ್ನು ಮೃತಶರೀರದ ಮೇಲಿಂದ ಹಾರಿಬಿಟ್ಟರೆ ಆ ದೆವ್ವದ ವಕ್ರ ದೃಷ್ಟಿ ಕೋಳಿಯ ಮೇಲೆ ಬಿದ್ದು ಆ ಕೋಳಿಯ 'ರಕ್ತ' ಕ್ಕೆ ಆಸೆ ಪಟ್ಟು ಕೋಳಿಯಲ್ಲಿ ದೆವ್ವ ಅಂತರ್ಗತವಾಗಿ ಮನೆಯವರಿಗೆ ದೆವ್ವದಿಂದ 'ಮುಕ್ತಿ' ಸಿಗುವುದೆಂಬ ನಂಬಿಕೆ ಇಲ್ಲಿನ ಸ್ಥಳೀಯ ಜನತೆಯಲ್ಲಿದೆ.

ಗಂಡಸರ ಶವ ಸಂಸ್ಕಾರ

ಸತ್ತ ವ್ಯಕ್ತಿಯು ಗಂಡಸರಾಗಿದ್ದರೆ ಶವದ ಮುಖ ಕ್ಷೌರ ಮಾಡುತ್ತಾರೆ. ಕ್ಷೌರವನ್ನು ಕೊಡವರೇ ಮಾಡಬೇಕಾಗುತ್ತದೆ. ಶವಕ್ಕೆ ಎಣ್ಣೆ ಅರಿಸಿನ ಹಾಕಿ ಸ್ನಾನ ಮಾಡಿಸುತ್ತಾರೆ. ಶವಕ್ಕೆ ನೀರು ಹಾಕುವ ಸಂದರ್ಭದಲ್ಲಿ ಮೃತನ ಹೆಂಡತಿಯು ಮೂರು ಚೆಂಬು ನೀರು ಹಾಕಬೇಕಾಗುತ್ತದೆ. ಸ್ನಾನದ ಅನಂತರ ನೀರಿದ್ದ ಪಾತ್ರೆಯನ್ನು ಅಲ್ಲೇ ಮಗುಚಿ ಹಾಕಬೇಕಾಗುತ್ತದೆ.

ಸ್ನಾನ ಆದ ಮೇಲೆ ಶವಕ್ಕೆ ಬಿಳಿಕುಪ್ಪಸವನ್ನು ತೊಡಿಸುತ್ತಾರೆ. ಹಣೆಗೆ ವಿಭೂತಿ ಹಾಕಿ, ಚಿನ್ನದ ನಾಣ್ಯವನ್ನು ಅಂಟಿಸುತ್ತಾರೆ. ಶವವನ್ನು ಸುಡುವುದಾದರೆ ಕುಪ್ಪಸವನ್ನು ಒಳಗಿನಿಂದ ಹೊರಕ್ಕೆ ಮಗುಚಿ ತೊಡಿಸುತ್ತಾರೆ. ಶವ ಹೂಳುವುದಾದರೆ ಕುಪ್ಪಸದ ಮುಂಬದಿಯ ಹಾಳೆಯನ್ನು ಬಲಬದಿಗೆ ಸೇರಿಸಿ ಉಡಬೇಕು.

ಶವದ ಕೈಗಳನ್ನು ಎದೆಯ ಮೇಲೆ ಜೋಡಿಸಿ ಕೈಗೆ ಕನ್ನಡಿಯನ್ನು ವಿಭೂತಿಯನ್ನಿಡುತ್ತಾರೆ. ಶವದ ಕಣ್ಣು ತೆರೆದುಕೊಂಡಿದ್ದರೆ ಬಾಳೆಗಿಡದ ರಸದಿಂದ ಕಣ್ಣನ್ನು ಎಳೆದು ಮುಚ್ಚುವಂತೆ ಮಾಡುತ್ತಾರೆ. ಶವದ ಬಾಯಿಗೆ ಎಲೆ ಅಡಕೆ ಹಾಕಿ ತುಟಿಯನ್ನು ಕೆಂಪು ಬಟ್ಟೆಯಿಂದ ಮುಚ್ಚುತ್ತಾರೆ. ಪೀಚೆಕತ್ತಿಯನ್ನು ಉಡುಪಿಗೆ ಧರಿಸುತ್ತಾರೆ. ಸಿಂಗರಿಸಿದ ಶವವು ಸಂಪೂರ್ಣ ಮದುಮಗನಂತೆ ಕಾಣುತ್ತದೆ.

ಶವವನ್ನು ಶೃಂಗರಿಸಿದ ಮೇಲೆ ನಡುಬಾಡೆ (ನಡುಮನೆ) ಯಲ್ಲಿ ಮಂಚದ ಮೇಲೆ ಚಾಪೆಯನ್ನು ಮಗುಚಿ ಹಾಕಿ ಅದರ ಮೇಲೆ ಹಾಸಿಗೆ ಹಾಕಿ ಶವವನ್ನು ಮಲಗಿಸಬೇಕು. ಇದನ್ನು 'ಚಾವುಕೂಟ್' ಅಂದರೆ ಸಾವು ಸೇರಿಸುವುದು ಎನ್ನುವರು. ಶವದ ಕೈ ಕಾಲುಗಳನ್ನು ಮಡಚಿ ಕುಳಿತುಕೊಳ್ಳಲು ಅನುಕೂಲವಾಗುವ ಹಾಗೆ ಗೋಡೆಗೆ ಒರಗಿಸಿ ಪೂರ್ವಾಭಿಮುಖವಾಗಿ ಕೂರಿಸಲಾಗುತ್ತದೆ. ಶವವನ್ನು ಮಲಗಿಸುವಾಗ ಬಿಳಿ ಬಟ್ಟೆಯನ್ನೇ ಹಾಸಬೇಕು. ಶವ ಕೂರಿಸಿದ ಮೇಲ್ಭಾಗದಲ್ಲಿಯೂ ಬಿಳಿ ಬಟ್ಟೆಯನ್ನು ಕಟ್ಟಿರಬೇಕಾಗುತ್ತದೆ.

ಮನೆಯ ಹೊರಗಡೆ ಮೃತರಾದರೆ ಶವವನ್ನು 'ನೆಲ್ಲಕ್ಕಿ ನಡುಬಾಡೆ'ಯಲ್ಲಿ ಮಲಗಿಸಲು ಅವಕಾಶವಿಲ್ಲ. ಸಾಂಕ್ರಾಮಿಕ ಕಾಯಿಲೆ ಮತ್ತು ಅಪಘಾತದಿಂದ ಮೃತರಾದರೆ ಈ ನಿಯಮ ಅನ್ವಯವಾಗುವುದಿಲ್ಲ. ಒಂದು ಮನೆಯಲ್ಲಿ ಸತ್ತು ಇನ್ನೊಂದು ಮನೆಯಲ್ಲಿ ಸಾವು ಕೂಡಿಸುವುದಾದರೆ ಸತ್ತ ಮನೆಯಲ್ಲಿ ಶವಕ್ಕೆ ಸ್ನಾನ ಮಾಡಿಸಬಾರದೆಂದು ನಿಯಮವಿದೆ.

ಶವಕ್ಕೆ ಮದುಮಗನಂತೆ ಸಿಂಗರಿಸಿ ಮಂಚದ ಮೇಲೆ ಒರಗಿಸಿ ಕೂರಿಸಿ ಪಕ್ಕದಲ್ಲಿ ಕರ್ಪೂರ, ಧೂಪದ ಹೊಗೆಯನ್ನು ಹಾಕಿ, ಗಂಧದಕಡ್ಡಿ ಹಚ್ಚಿ ದೀಪವನ್ನು ಹಚ್ಚಿಡಬೇಕು ಬಾಡೆ(ನಡುಮನೆ)ಯಲ್ಲಿ ತಟ್ಟೆಯಲ್ಲಿ ಅಕ್ಕಿಯನ್ನಿಟ್ಟು ಒಡೆದ ತೆಂಗಿನಕಾಯಿ ಚಿಪ್ಪಿನಲ್ಲಿ ಹಸುವಿನ ತುಪ್ಪ ಹಾಕಿ ಅದರಲ್ಲಿ ಬತ್ತಿಯಿಟ್ಟು ದೀಪ ಹಚ್ಚಬೇಕು .ಶವವನ್ನು ಸಂಸ್ಕಾರ ಮಾಡಲು ತೆಗೆದುಕೊಂಡು ಹೋಗುವಾಗ 'ತಳಿಯಕ್ಕಿ ದೀಪ ಅಂದರೆ ತಟ್ಟೆಯಲ್ಲಿ ಅಕ್ಕಿ ಇಟ್ಟ ದೀಪವನ್ನು ಮುಂದೆ ಹಿಡಿದುಕೊಂಡು ಹೋಗಬೇಕು.ಶವವನ್ನು ಸುಡುವುದಾದರೆ ಆ ದೀಪದ ಸಮೇತ ಅಕ್ಕಿಯನ್ನು ಬೆಂಕಿಗೆ ಸುರಿಯಬೇಕು ಹೂಳುವುದಾದರೆ ಗುಂಡಿಗೆ ಸುರಿಯಬೇಕು.

ಶವದ ಮೇಲೆ ನೊಣಗಳು ಕೂರದಂತೆ ಬೀಸಣಿಗೆಯಿಂದ ಬೀಸಬೇಕು. ಇದನ್ನು ಬೈನೆ ಮರದ ಸೊಪ್ಪಿನಿಂದ ತಯಾರಿಸುತ್ತಾರೆ. ಗಂಡಸರ ಶವದ ಮುಂದೆ ಹೆಂಗಸರು ಹತ್ತಿರ ಕುಳಿತಿರಬೇಕು. ಕೊಡವರ ಶವ ಯಾತ್ರೆಯು ವೈಭವದ ಗೌರವ ಮಾರ್ಯದೆಯನ್ನು ಕಣ್ಣಿಗೆ ಕಟ್ಟಿಸುತ್ತದೆ. ಶವವನ್ನು ಹೊರುವವರು ಕೊಡವರೇ ಆಗಿರುತ್ತಾರೆ. ಶವವನ್ನು ಹೊತ್ತುಕೊಂಡು ಹೋಗುವಾಗ ನೆರಳಿಗಾಗಿ ಬಿಳಿ ಬಟ್ಟೆಯನ್ನು ಕೊಡೆಯಂತೆ ಕಟ್ಟಿರುತ್ತಾರೆ. ಸ್ಮಶಾನದವರೆಗೆ ದಾರಿಯುದ್ದಕ್ಕೂ ಚಿಲ್ಲರೆ ನಾಣ್ಯ ಚೆಲ್ಲುವ ಸಂಪ್ರದಾಯವಿದೆ.

ಕೊಡವರು ಶವ ಸಾಗಿಸುವಾಗ ದಾರಿಯುದ್ದಕ್ಕೂ 'ಮಂಜಲಕ್ಕಿ' (ಅರಿಶಿನ ಮಿಶ್ರಿತ ಅಕ್ಕಿ) ಚೆಲ್ಲುತ್ತಾ ಅಳುತ್ತಾ ಹೋಗುತ್ತಾರೆ. ಶವವನ್ನು ತೆಗೆದ ನಂತರ ಮನೆಯನ್ನು ಶುದ್ಧಮಾಡಿ ಸಗಣಿ ನೀರು ಪ್ರೋಕ್ಷಿಸುತ್ತಾರೆ. ಸಗಣಿ ಮತ್ತು ಗೋಮೂತ್ರ ಈಗಲೂ ಬಹಳ ಪವಿತ್ರವೆಂದು, ಶುದ್ಧಿಕಾರಕವೆಂದೂ ಕೊಡವರಲ್ಲಿ ನಂಬಿಕೆ ಇದೆ. ಶ್ರೀ ವೈಷ್ಣವ ಪಂಥದಲ್ಲಿ ಯಾವುದೇ ಅಶುದ್ಧವನ್ನು ಶುದ್ಧವಾಗಿಸಲು ಪಂಚಗವ್ಯ ಎಂಬುದನ್ನು ತೆಗೆದುಕೊಳ್ಳುತ್ತಾರೆ. ಪಂಚಗವ್ಯವು ಐದು ಪದಾರ್ಥಗಳು ಸಮ್ಮಿಶ್ರವಾಗಿದೆ. ಈ ಐದರಲ್ಲಿ ಗೋಮೂತ್ರವು ಒಂದಾಗಿದೆ. ಆದ್ದರಿಂದ ಗೋಮೂತ್ರವನ್ನು ಸೇವಿಸುವ ಮೂಖಾಂತರ ಶುದ್ಧರಾಗುತ್ತಾರೆಂಬ ನಂಬಿಕೆ ವೈದಿಕರಲ್ಲಿ ಇಂದಿಗೂ ಇದೆ.[೩೩]

ಕೊಡವರಲ್ಲಿ ಶವ ಸಂಸ್ಕಾರಕ್ಕೆ ಗುಂಡಿಯನ್ನು ತೆಗೆಯುವಾಗ, ಅಥವಾ ಸುಡಲು ಸೌದೆ ಜೋಡಿಸುವಾಗ ಉತ್ತರ ದಕ್ಷಿಣಾಭಿಮುಖವಾಗಿ ಇರಬೇಕಾಗುತ್ತದೆ. ಶವವನ್ನು ಹೂಳುವ ಅಥವಾ ಸುಡುವ ಸಂದರ್ಭದಲ್ಲಿ ಗುಂಡಿಯ ಸೌದೆಯನ್ನು ಪ್ರದಕ್ಷಿಣೆ ಹಾಕುತ್ತಾರೆ. ಮೃತರ ಹೆಂಡತಿ ಅಥವಾ ಗಂಡನ ತಲೆಯ ಮೇಲೆ ನೀರು ತುಂಬಿದ ಮಣ್ಣಿನ ಪಾತ್ರೆಯನ್ನು ಇಡುತ್ತಾರೆ. ಹಿರಿಯ ಮಗನ ತಲೆಯ ಮೇಲೆ ತೆಂಗಿನಕಾಯಿಯನ್ನೂ ಸೋದರಳಿಯನ್ನು 'ಕ್ಂಡಿ ಕೊಡ'ವನ್ನೂ (ಹಿತ್ತಾಳೆ ಗಿಂಡಿ) ಹೊತ್ತಿರುತ್ತಾರೆ. ಇವರೆಲ್ಲರೂ ಬೆರಳಿಗೆ ಗರಿಕೆ ಹುಲ್ಲಿನ ಉಂಗುರ ಧರಿಸಬೇಕಾಗುತ್ತದೆ.[೩೪] 'ಸಾವಿನ' ಬಾಯಿಗೆ ನೀರು ಕೊಡುವ ಸಂಬಂಧಿಕರು ಗರಿಕೆ ಹುಲ್ಲು ಮತ್ತು ತುಳಸಿ ದಳಗಳಿಂದ ನೀರನ್ನು ಅದ್ದಿ ಶವದ ಬಾಯಿಗೆ ಹಾಕುತ್ತಾರೆ.[೩೫]

ಸ್ಮಶಾನದಲ್ಲಿ ಪ್ರದಕ್ಷಿಣೆ ಹಾಕಿದ ನಂತರ ಬಿಳಿ ಹಚ್ಚಡವನ್ನು ಹಿಡಿದಿಡುತ್ತಾರೆ. ಮಣ್ಣಿನ ಕೊಡಕ್ಕೆ ತೂತು ಕೊರೆದು ನೀರು ಒಸರುವಂತೆ ಮಾಡುತ್ತಾರೆ. ಇದು ಜೀವನ ತೂತು ಕೊರೆದ ಮಣ್ಣಿನ ಕೊಡದಿಂದ ಹರಿಯುವ ನೀರಿನಂತೆ ಸ್ವಲ್ಪ ಸ್ವಲ್ಪ ಕಳೆದು ಹೋಗುವುದೆಂಬ ಸಂಕೇತವಿರಬಹುದು.

ಶವಕ್ಕೆ ಪ್ರದಕ್ಷಿಣೆ ಹಾಕಿದ ನಂತರ ಹತ್ತಿರದ ಸಂಬಂಧಿಕರು ಶವವನ್ನು ಸುತ್ತುವರೆದು ನಿಲ್ಲುತ್ತಾರೆ. ಆಗ ಮೇಲ್ಕಟ್ಟು ಬಿಳಿ ಬಟ್ಟೆಯನ್ನು ಬಿಚ್ಚಲಾಗುತ್ತದೆ. ಕೊಡದ ನೀರನ್ನು ಕಂಚಿನ ಪಾತ್ರೆಗೆ ಹಾಕಿಕೊಳ್ಳುತ್ತಾರೆ. ಇದನ್ನು 'ಕೊಡಕುಕ್ಕುವೊ' ಎನ್ನುತ್ತಾರೆ.

ಸತ್ತ ವ್ಯಕ್ತಿ ಗಂಡಸಾದಲ್ಲಿ ಹೆಂಡತಿಯು ಮಣ್ಣಿನ ಕೊಡವನ್ನು ಶವ ಮಲಗಿಸಿದ ಮಂಚದ ಕಾಲಿಗೆ ಒಡೆಯುತ್ತಾರೆ. ಹೆಂಡತಿಯು ಕರಿಮಣಿ, ಓಲೆ,

ಬಳೆ ಮುಂತಾದ ಮುತ್ತೈದೆ ಧರಿಸುವ ವಸ್ತುಗಳನ್ನು ಕಳೆದು ಗಂಡನ ಕುಪ್ಪಸದ ಮಡಿಲಲ್ಲಿ ಹಾಕುತ್ತಾಳೆ. ಈ ಪದ್ಧತಿಯನ್ನು ಇತರ ಹಿಂದೂಗಳಲ್ಲೂ ಕಾಣಬಹುದಾಗಿದೆ.

ಗಂಡಸು ಸತ್ತಾಗ ಸುಡುವ ಸಂದರ್ಭದಲ್ಲಿ, ಶವಕ್ಕೆ ಮಗ ಕೊಳ್ಳಿ ಇಡುತ್ತಾನೆ. ಈ ಪದ್ಧತಿಯನ್ನು ಎಲ್ಲಾ ಹಿಂದೂಗಳಲ್ಲಿ ಕಾಣಬಹುದು. ಸತ್ತ ವ್ಯಕ್ತಿಯ ಹೆಂಡತಿ ಏಳು ತಿಂಗಳು ತುಂಬಿದ ಗರ್ಭಿಣಿಯಾಗಿದ್ದರೆ, ಬಳೆ ಒಡೆಯುವ ಶಾಸ್ತ್ರವನ್ನು ಮನೆಯಲ್ಲೇ ಮಾಡಬಹುದಾಗಿದೆ. ಯಾವುದಾದರೂ ಕಾಯಿಲೆಯಿಂದ ನಡೆಯಲು ಶಕ್ತಿ ಇಲ್ಲದಿದ್ದರೂ ಮನೆಯಲ್ಲಿ ಎಲ್ಲವನ್ನು ಮಾಡಿಸುತ್ತಾರೆ.

ಸ್ಮಶಾನದಿಂದ ಶವವನ್ನು ಸಂಸ್ಕಾರ ಮಾಡಿ ಹಿಂತಿರುಗುವಾಗ ತಾವು ಬಂದ ದಾರಿಗೆ ಅಡ್ಡವಾಗಿ ಮುಳ್ಳು ಹಾಕಿ ವಾಪಸಾಗುವರು. ಇದು ಮೃತ ವ್ಯಕ್ತಿ ಹೋದ ದಾರಿಯಲ್ಲಿ ಬೇರೆ ಯಾರೂ ಹೋಗದಂತೆ ಕಲ್ಲು ಮುಳ್ಳು ಹಾಕಿಕೊಂಡು ಹೋಗು ಎಂಬುದರ ಸೂಚಕವಾಗಿದೆ. "ನೀನು ಪೋಪ ಬಟ್ಟೆಲ್ ದಾರು ಬಕ್ಕತನ್ನಕ್ಕೆ ಇನ್ನನ್ನೇ ಕಲ್ಲುಮುಳ್ಳು ಇಟ್ಟಂಡು ಪೋ" ಎಂದು ಹೇಳಿ ದಾರಿಯುದ್ದಕ್ಕೂ ಮುಳ್ಳು ಹಾಕಿ ಬರುತ್ತಾರೆ. ಕೊಡವರಲ್ಲಿ ವಿಧವೆಗೆ ಮುಡಿತೆಗೆಯುವುದಿಲ್ಲ ಆದರೆ ವಿಧವೆಯು ಬಿಳಿ ಬಣ್ಣದ ಉಡುಪನ್ನೇ ಮುಂದೆ ಧರಿಸಬೇಕಾಗುತ್ತದೆ. ಕಿವಿಗೆ ಕೆಂಪು ಕಲ್ಲಿನ ಓಲೆಯನ್ನು ಧರಿಸುವಂತಿಲ್ಲ, ಬೇರೆ ಬಣ್ಣದ ಉಡುಪನ್ನು ಧರಿಸುವಂತಿಲ್ಲ. ಶೋಕವನ್ನು ವ್ಯಕ್ತಪಡಿಸುವ ಮರಣದ ಹಾಡು ಹೀಗಿದೆ:

ಓ ತಂದೆಯೇ ನೀನು ಜೀವ ಕಳೆದುಕೊಂಡೆ !
ನೀನು ಜೀವಂತವಿರುವಾಗ, ನಿನ್ನ ಕೈಯು
ಈ ಮನೆಯನ್ನು ಕಾಪಾಡಿತು ಮತ್ತು ಅನ್ನ ನೀಡಿತು.
ಇಡೀ ಹೊಲವನ್ನು ಬಿತ್ತಿತ್ತು,
ನೀನು ಅಡಿಗಲ್ಲನ್ನಾಕಿದೆ
ಮತ್ತು ಇಡೀ ಮನೆಯನ್ನು ಅಟ್ಟದವರೆ,
ದುಬಾರಿ ತೊಲೆಗಳನಿಟ್ಟು ಕಟ್ಟಿದೆ.
ಭದ್ರ ಬಾಗಿಲನ್ನು ನಿರ್ಮಿಸಿದೆ,
ಅಂತೇಯೇ ಮನೆಯ ಸುತ್ತಲೂ ಅಂಗಣವನ್ನು ಕೂಡ.
ಓ ನನ್ನ ತಂದೆಯೇ, ನಿನ್ನೆ
ಹಾಸಿಗೆಯಲ್ಲಿದ್ದೆ ಸ್ವಾಸ್ಥ್ಯವಿಲ್ಲದೆ;
ಮತ್ತು ಇಂದು ಸ್ವರ್ಗ ಮತ್ತು ಭೂಮಿಗಳ
ಒಡೆಯನ ಪಾದಗಳ ಬಳಿ;
ಮತ್ತು ನಾಳೆ ಸೂರ್ಯ
ಮೋಡ ಮುಚ್ಚಿದ ಅಗಸದಲ್ಲಿ ಅಸ್ತಮಾನವಾಗುವಂತೆ,
ನೀನು ಗೋರಿಯೊಳಕ್ಕೆ ಜಾರಿಕೊಳ್ಳುವೆ.
ಓ ನನ್ನ ತಂದಯೇ, ನೀನು ನಮ್ಮನಗಲಿದೆ
ಅಯ್ಯೋ ದುರದೃಷ್ಟವೇ! ನನ್ನ ತಂದೆ ಎಂದೆಂದಿಗೂ ದೂರವಾದನೆ

ಎಂದು ಮೃತರ ಸಂಬಂಧಿಕರು ಆ ವ್ಯಕ್ತಿಯ ಜೀವಮಾನದ ಸಾಧನೆಯ ಗುಣಗಾನ ಮಾಡುತ್ತಾ ವಿಧಿಯನ್ನು ದೂಷಿಸುತ್ತಾ ದುಃಖಿಸುವ ಸಂದರ್ಭ ಇದಾಗಿದೆ.

ಕೊಡವರ ಸಂಪ್ರದಾಯದಲ್ಲಿ ವಿಧವಾ ವಿವಾಹಕ್ಕೆ ಪ್ರೋತ್ಸಾಹವಿದೆ. ಹೊಸ ಬದುಕನ್ನು ಕಲ್ಪಿಸುವ ನಿಟ್ಟಿನಲ್ಲಿ ಎಲ್ಲಾ ಮಾನ್ಯತೆಯನ್ನು ಹಿರಿಯರು ವಿಧವೆಯರಿಗೆ ನೀಡುತ್ತಾರೆ. ಇತರ ಸಮುದಾಯದವರು ಕೂಡಾವಳಿ ಮಾಡುತ್ತಿದ್ದರೂ ಸಹ ಇತ್ತೀಚೆಗೆ ಕೊಡವರಲ್ಲಿ ವಿಭಿನ್ನತೆಯನ್ನು ವಿಧವಾ ವಿವಾಹದಲ್ಲಿ ಕಾಣಬಹುದಾಗಿದೆ.

ಕೆಲ್ಲಟಿ

ಸಾವಿನ ಮನೆಗೆ ಬರುವಾಗ ಸಂಬಂಧಿಕರು ವಾದ್ಯ, ಕೋವಿ, ಬೇಕಾಗುವ ಬಿಳಿಬಣ್ಣದ ಹೊಸ ಬಟ್ಟೆ ಸಮೇತ ಬರುವುದಕ್ಕೆ "ಕೆಲ್ಲಟಿ" ಎಂದು ಹೆಸರು. ವಾದ್ಯಗಾರರಲ್ಲಿ ಕೊಂಬು ಹಿಡಿಯುವವರಿಗೆ ಒಂದು ಹಣ, ಬೇರೆ ವಾದ್ಯಗಾರರಿಗೆ ಒಂದು ಹಣ, ಮತ್ತು ಮೇದನಿಗೆ ಒಂದು ಹಣ ಹೀಗೆ ಮೂರು ಹಣ ಕೊಡಬೇಕಾಗುವುದು. ಕೆಂಪು ರೇಷ್ಮೆ ಒಲ್ಲಿಯನ್ನು ಕೆಲ್ಲಟಿಯ ಜೊತೆಯಲ್ಲಿ ತಂದರೆ ಅದಕ್ಕೆ 'ಕೆಂದನೊಲ್ಲಿ ಕೆಲ್ಲಟಿ' ಎಂದು ಹೆಸರು. ಈ ಒಲ್ಲಿಯನ್ನು ಸೋದರಳಿಯ ಅಥವಾ ಸೊಸೆಯು ಮಾತ್ರ ತರಬೇಕು. ಅಳಿಯನು ಕೆಂದನೊಲ್ಲಿಯನ್ನು ಹೆಗಲಿನ ಮೇಲೂ, ಸೊಸೆಯಾದರೆ ತಲೆಯ ಮೇಲಿಟ್ಟ 'ಮುರಿ' ಯ ಮೇಲೂ ಇಟ್ಟುಕೊಳ್ಳಬೇಕು. 'ಮುರಿ' ಎಂದರೆ ಹಚ್ಚಡದ ಅಥವಾ ಬಿಳಿ ಬಟ್ಟೆಯನ್ನು ಶವಕ್ಕೆ ಹೊದಿಸಲು ಅಥವಾ ದಾನ ಮಾಡಲು ತರುವ ಹೊದಿಕೆ ಈ ಬಿಳಿ ಬಟ್ಟೆ ಸುಮಾರು ೧೦ ಮೊಳ ಇರಬೇಕು. ಹೆಂಗಸರು ಮಾತ್ರ ಈ ಬಟ್ಟೆ ತರುತ್ತಾರೆ. ಮುರಿಯನ್ನು ಹೊತ್ತು ತಂದ ಹೆಂಗಸಿನ ತಲೆ ಮೇಲಿನಿಂದ ತಕ್ಷಣ ಪಕ್ಕದ ಹೆಂಗಸು ಮುರಿಯನ್ನು ಇಳಿಸಿ ಸಾವಿನ ತಲೆಯ ಪಕ್ಕದಲ್ಲಿಡುವುದು ಪದ್ಧತಿ.

ಕೆಲ್ಲಟಿ ತಂದವರಾಗಲಿ ಅಥವಾ ಕೆಲ್ಲಟಿ ತರದೆ ಬಂದವರಾಗಲಿ ಅಥವಾ ಸತ್ತ ವ್ಯಕ್ತಿಗಿಂತ ಕಿರಿಯರು ಶವದ ಮನೆ ತಲುಪುತಿದ್ದ ಹಾಗೆ ಗಂಡಸರು ಬಿಳಿ ಪಂಚೆ ಮತ್ತು ಹೆಗಲಿಗೆ ಬಿಳಿ ವಸ್ತ್ರವನ್ನು ಹಾಕಿಕೊಳ್ಳುತ್ತಾರೆ. ಹೆಂಗಸರು ಬಿಳಿ ವಸ್ತ್ರವನ್ನು ಭುಜಕ್ಕೆ ಕಟ್ಟಿಕೊಳ್ಳುವರು. ಕೊಡವರು ಇದನ್ನು 'ನಿಪ್ಪ್‌ತುಣಿ' ಕಟ್ಟುವುದೆನ್ನುತ್ತಾರೆ. ಪ್ರತಿಯೊಬ್ಬರೂ ಬಿಳಿ ಬಟ್ಟೆಯನ್ನೇ ಧರಿಸಿ ಶವದ ಮನೆಗೆ ಬರುವುದು ಕೊಡವರ ಸಂಪ್ರದಾಯವಾಗಿದೆ.

ಹತ್ತಿರದ ಸಂಬಂಧಿಕರು 'ಮುರಿಯನ್ನು' ಹೊತ್ತು ಶವದ ಮನೆಗೆ ತಲುಪುತಿದ್ದ ಹಾಗೆ ಜೋಡಿ ಗುಂಡನ್ನು ಹಾರಿಸಬೇಕು. ಪ್ರತಿ ಬಾರಿಯೂ ಸಂಬಂಧಿಕರು ಬರುತ್ತಿದ್ದ ಹಾಗೆ ಜೋಡಿ ಗುಂಡನ್ನು ಹಾರಿಸಬೇಕು. ವಾದ್ಯದವರು ವಾದ್ಯ ನುಡಿಸುತ್ತಿರುತ್ತಾರೆ.

ಶವಕ್ಕೆ ನಮಸ್ಕರಿಸುವುದು

ಕೊಡವರಲ್ಲಿ ಸಾವಿಗೆ ಬಂದ ಪ್ರತಿಯೊಬ್ಬರೂ ಮೃತರ ಕಾಲಿಗೆ ನಮಸ್ಕರಿಸಿ ಪಕ್ಕದಲ್ಲಿರುವ ತುಳಸಿಯಿಂದ ತೆಂಗಿನಕಾಯಿ ನೀರನ್ನು ಮೃತರ ಬಾಯಿಗೆ

ಪ್ರೋಕ್ಷಿಸುತ್ತಾರೆ. ಶವಕ್ಕೆ ನಮಸ್ಕರಿಸುವಾಗ ಕಾಲಿನಲ್ಲಿ ಪಾದರಕ್ಷೆ ಅಥವಾ ತಲೆಯಲ್ಲಿ ವಸ್ತ್ರವಾಗಲೀ ಇರಬಾರದು. ರುಮಾಲು ಕಟ್ಟಿಕೊಂಡು ಶವದ ಹತ್ತಿರ ಹೋಗಬಾರದು. ಶವವನ್ನು ನೋಡಿದ ನಂತರ ಪಕ್ಕದಲ್ಲಿರುವ ತಟ್ಟೆಗೆ ಹಣ ಹಾಕುವುದನ್ನು ಚಾವುಪಣ (ಸಾವಿನ ಹಣ) ಅಥವಾ 'ಗೆಲಾಟೆ' ಹಾಕುವುದು ಎನ್ನುತ್ತಾರೆ. ಅವರ ಶಕ್ತ್ಯಾನುಸಾರ ಹಾಕಬೇಕಾಗುತ್ತದೆ. ಇಲ್ಲಿ ಶೇಖರಣೆಯಾದ ಹಣವನ್ನು ಶವ ಸಂಸ್ಕಾರ ಮಾಡಿದ ದಿನದ ಖರ್ಚು ವೆಚ್ಚ ಭರಿಸಲು ಬಳಸುತ್ತಾರೆ. ತಟ್ಟೆಹಣ ಶೇಖರಣೆಯಿಂದಾಗಿ ಬಡ ಕುಟುಂಬದ ಶವ ಸಂಸ್ಕಾರ ನಡೆಸಲು ಬಹಳ ಉಪಕಾರಿಯಾಗುವುದು.

ಅಂಗಕಳಿ: (ವಿಶೇಷ ಕುಣಿತ)

ಕೊಡವರಲ್ಲಿ 'ಒಕ್ಕ'ದ ಅಂದರೆ ಕುಟುಂಬದ ಪಟ್ಟೆದಾರರು ಮೃತರಾದರೆ ಅಥವಾ ಕುಟುಂಬದ ಹಿರಿಯ ವ್ಯಕ್ತಿ ತುಂಬಾ ವಯಸ್ಸಾಗಿ ಮೃತಪಟ್ಟಲ್ಲಿ 'ಅಂಗಕಳಿ' ಎಂಬ ಕುಣಿತ ಮಾಡಿಸುತ್ತಾರೆ. ಊರಿನಲ್ಲಿರುವ ದಲಿತರನ್ನು ಆಹ್ವಾನಿಸಿ ಮನೆಯಾಚೆ ಅಂಗಳದಲ್ಲಿ ಈ ಕುಣಿತವನ್ನು ಮಾಡಿಸುತ್ತಾರೆ. ಮಣೆಯ ಮೇಲೆ ಕೈ ಎಣ್ಣೆ ದೀಪ ಇಟ್ಟು ಇದರ ಪಕ್ಕದಲ್ಲಿ 'ಪುತ್ತರಿ ಪಚ್ಚೆ' (ಬಿದಿರಿನಲ್ಲಿ ನೇಯ್ದ ಕುಕ್ಕೆ)ಯಲ್ಲಿ ಭತ್ತವನ್ನು ತುಂಬಿಟ್ಟು, ಇನ್ನೊಂದರಲ್ಲಿ ಅಕ್ಕಿ, ತೆಂಗಿನಕಾಯಿಯನ್ನಿಟ್ಟು, ಅಕ್ಕಿ ಮೇಲೆ ಕಬ್ಬಿಣದ ಸಣ್ಣ ಸಲಾಕೆ ಚುಚ್ಚಲಾಗುತ್ತದೆ.

'ಅಂಗಕಳಿ' ಆಡುವ ಹೊಲೆಯರಲ್ಲಿ ಒಬ್ಬನಿಗೆ 'ಮುಂಡು' (ಬಿಳಿಪಂಚೆ) ಕೊಡಬೇಕು. ಆ 'ಮುಂಡು' ಬಟ್ಟೆಯನ್ನು ಸುತ್ತಿಕೊಂಡು ಸಾವಿಗೆ ಕೈ ಕೊಡುವಂತೆ ಮಾಡಿ 'ಕೆಟ್ಟಿರೋ ಆದನೆ, ಬೊಳ್ಳ', ಅಥವಾ 'ಕೆಟ್ಟಿರೀ ಅಬ್ಬಯೆ'[೩೬] ಎಂದು ಮೂರು ಬಾರಿ ಶವದ ಕೈ ಹಿಡಿದು ದೀಪದ ಸುತ್ತಲೂ ಮಾಲೆ ಪೊಯಿತ್ ಹೊಡೆಯುತ್ತಾ ಡೋಲಿಗೆ ತಕ್ಕಂತೆ ವಿಶೇಷವಾದ ಕುಣಿತವನ್ನು ಕುಣಿಯುತ್ತಾನೆ.

ಅಂಗಕಳಿ ಮಾಡುವ ದಲಿತ ವ್ಯಕ್ತಿಯು ಸತ್ತ ವ್ಯಕ್ತಿಗಿಂತ ಕಿರಿಯವನಾದರೆ ಆತ ಕೊಡವರಂತೆಯೇ ಮೇಂಗತೆ ಇರಬೇಕು. ಮೇಂಗತೆ ಎಂದರೆ ಕೊಡವರ ಸಂಪ್ರದಾಯದಂತೆ ವಿಧಿವಿಧಾನಗಳು ಮುಗಿಯುವ ತನಕ ಹಲವು ಶಿಸ್ತುಬದ್ಧ ಕಟ್ಟುಪಾಡನ್ನು ಪಾಲಿಸುವುದು. ಅಂಗಕಳಿ ಮುಗಿಸಿ ಆತ ಹೋಗುವಾಗ ಕುಕ್ಕೆಯಲ್ಲಿ ಅಕ್ಕಿ, ತೆಂಗಿನಕಾಯಿ, ಉಪ್ಪು,ಮಾಂಸ, ಎಣ್ಣೆಯ ಜೊತೆಗೆ ಬಿಳಿ ಕುಪ್ಪಸಕ್ಕೆ ಬೇಕಾಗುವಷ್ಟು ಹಚ್ಚಡ (ಬಿಳಿಬಟ್ಟೆ) ಕೊಡಬೇಕು.

ಹೆಂಗಸರು ಮೇಂಗತೆ ಇದ್ದರೆ ಸತ್ತದಿನ 'ನಿಪ್ಪ್‌ತುಣಿ'ಗೆ ಬಿಳಿ ಬಟ್ಟೆ ಕೊಡಬೇಕು. ಒಂದು ಸೀರೆಗೆ ಬೇಕಾದಷ್ಟು ಹಚ್ಚಡ (ಬಿಳಿಬಟ್ಟೆ) ಕೊಡಬೇಕಾಗುತ್ತದೆ.

'ಕೇಕಳ ಅಥವಾ ತೂಟ್‌ಂಗಳ' (ಸ್ಮಶಾನ)

ಸ್ಮಶಾನದಲ್ಲಿ ಶವವನ್ನು ಹೂಳುವ ಅಥವಾ ಸುಡುವ ಸ್ಥಳಕ್ಕೆ 'ಕೇಕಳ' ಅಥವಾ 'ತೂಟ್‌ಂಗಳ' ಎನ್ನುತ್ತಾರೆ. ಮದುವೆಯಾಗದಿರುವವರನ್ನು ಕೇಕಳದಲ್ಲಿ ಹೂಳುತ್ತಾರೆ. ಮದುವೆಯಾದವರನ್ನು 'ತೂಟ್‌ಂಗಳ'ದಲ್ಲಿ ಸುಡುತ್ತಾರೆ. ಸ್ಮಶಾನಕ್ಕೆ ಗುಂಡಿ ತೆಗೆಯಲು ಅಥವಾ ಸೌದೆ ಕಡಿಯಲು ಊರವರು ಹೋಗುತ್ತಾರೆ.

ಸ್ಮಶಾನಕ್ಕೆ ಹೋಗುವ ಮೊದಲು ಗುದ್ದಲಿ,ಕತ್ತಿ ಮಚ್ಚುಗಳನ್ನು ಮೆಟ್ಟುಕಲ್ಲಿನ ಮೇಲಿಟ್ಟು ನಂತರ ತೆಗೆದುಕೊಂಡು ಹೋಗುತ್ತಾರೆ. ಶವವನ್ನು ಹೂಳಲು ಗುಂಡಿ ತೆಗೆದು, ಕಾರಣಾಂತರದಿಂದ ಸ್ಥಳ ಬದಲಾಗಿ ಬೇರೆ ಗುಂಡಿ ತೆಗೆದಾಗ ಆ ಮನೆತನದಲ್ಲಿ ಇನ್ನೊಂದು ಮೃತ್ಯು ಸಂಭವಿಸಬಹುದೆಂದು, ಈ ಅನಾಹುತ ತಪ್ಪಿಸಲು ಕೋಳಿ ಮರಿಯನ್ನು ಕೊಂದು ಗುಂಡಿಗೆ ಎಸೆಯುವ ಪದ್ಧತಿ ಇದೆ. ಶವವನ್ನು ಸುಡಲು ಸೌದೆಯನ್ನು ಕಡಿದು ಕಾರಣಾಂತರದಿಂದ ಉಪಯೋಗಿಸ ದಿದ್ದರೆ ಕೋಳಿ ಮರಿಯನ್ನು ಕೊಂದು ಸುಡುತ್ತಾರೆ.

ಸ್ಮಶಾನಕ್ಕೆ ಗುಂಡಿ ತೆಗೆಯಲು ಅಥವಾ ಸೌದೆ ಕಡಿಯಲು ಹೋದವರು ಹಿಂತಿರುಗಿ ಬಂದ ತರುವಾಯ ಮೃತರ ಬಾಯಿಗೆ ತುಳಸಿಯಿಂದ ನೀರು ಕೊಟ್ಟು, ನಮಸ್ಕರಿಸಬೇಕು. ಸ್ಮಶಾನದಿಂದ ಇವರು ಬಂದ ಕೂಡಲೇ ಗುಂಡು ಹಾರಿಸುತ್ತಾರೆ. ಶವವನ್ನು ಸುಡುವ ಮೊದಲು ಬಾಳೆಯ ದಿಂಡಿನ ತಟ್ಟೆಗಳನ್ನು ಹೆಣೆದು ಮನೆಯ ಮುಂದೆ ಅಂಗಳದಲ್ಲಿ ಅದರ ಮೇಲೆ ಭತ್ತದ ಹೊಟ್ಟನ್ನು (ಉಮ್ಮಿ) ಹಾಕಿ, ಬೆಂಕಿ ಕೆಂಡ ಹಾಕಿ 'ಮೂಡೆ' ಮಾಡುವುದನ್ನು 'ಕತ್‌ಮೂಡೆ' ಎನ್ನುತ್ತಾರೆ. ಇದನ್ನು ಮೊದಲು ಸ್ಮಶಾನದಲ್ಲಿ ಸುಡುವ ಜಾಗಕ್ಕೆ ಅರುವನು ತೊಟ್‌ಂಗಳಕ್ಕೆ ತೆಗೆದುಕೊಂಡು ಹೋದ ಅನಂತರ ಶವವನ್ನು ತೆಗೆಯಬೇಕು.

ಶವ ಕೂರಿಸಿದ ಮೇಲ್ಕಟ್ಟನ್ನು (ಕೆಂಪು ಬಟ್ಟೆಯ ಕಟ್ಟು) ಬಿಚ್ಚಿ ಆ ಬಟ್ಟೆಯನ್ನು ಶವ ಹೊತ್ತುಕೊಂಡು ಹೋಗುವ ಕುರ್ಚಿ ಅಥವಾ ಮಂಚಕ್ಕೆ ಚಪ್ಪರದಂತೆ ಕಟ್ಟುವರು. ಈ ಮೇಲ್ಕಟ್ಟಿನ ಮೂಲೆಗಳಿಗೆ 'ಕಾಡು ಕರಿಮೆಣಸಿ'ನ ಎಲೆಯನ್ನು ಕಟ್ಟುವುದರ ಜೊತೆಗೆ ತೂತು ಮಾಡಿದ 'ಕಜ್ಜಾಯ'ವನ್ನು ಕಟ್ಟುತ್ತಾರೆ.

ಶವವನ್ನು ಹೊರುವವರು ಪಾದರಕ್ಷೆಯನ್ನಾಗಲಿ ಅಥವಾ ತಲೆಗೆ ವಸ್ತ್ರವನ್ನಾಗಲಿ ಧರಿಸುವಂತಿಲ್ಲ. ನೆಲ್ಲಕ್ಕಿ ನಡುಬಾಡೆಯಿಂದ ಶವವನ್ನು ಎತ್ತಿದ ಕೂಡಲೇ ಅಂಗಳದಲ್ಲಿ ಎಲ್ಲರೂ ಕೈಗೂಡಿಸಿ ಶವವನ್ನು ಭುಜದ ಮೇಲೆ ಹೊತ್ತುಕೊಂಡು ವಾದ್ಯದೊಂದಿಗೆ ಒಂದೆರಡು ಕುಣಿತದ ಹೆಜ್ಜೆಯನ್ನು ಹಾಕುತ್ತಾರೆ. ಕಂಚಿನ ತಟ್ಟೆಯಲ್ಲಿ ತೆಂಗಿನಕಾಯಿ ಒಡೆದು ನೀರಿಟ್ಟು ಆ ತಟ್ಟೆಗೆ ಗರಿಕೆ ಮತ್ತು ತುಳಸಿಯನ್ನಿಟ್ಟು ತಟ್ಟೆಯನ್ನು ಹಿಡಿದುಕೊಂಡು ಅರುವ ನಿಲ್ಲುತ್ತಾನೆ. ಸ್ಮಶಾನಕ್ಕೆ ಹೋಗದಿರುವ ಹತ್ತಿರದ ಬಂಧುಗಳೆಲ್ಲರೂ ಶವದ ಬಾಯಿಗೆ ನೀರುಕೊಟ್ಟು ತಟ್ಟೆಗೆ ಹಣ ಹಾಕುತ್ತಾರೆ.

ಹಣ ಚೆಲ್ಲುವುದು

ಶವವನ್ನು ಎತ್ತಿದ ಕೂಡಲೆ ಅಂಗಳದಲ್ಲಿ ಮೂರು ಬಾರಿ ವಾದ್ಯದ ತಾಳಕ್ಕೆ ಕುಣಿಯುತ್ತಾ ಶವವನ್ನು ಹೊತ್ತು ಪ್ರದಕ್ಷಿಣೆ ಬರುತ್ತಾರೆ. ಸತ್ತ ವ್ಯಕ್ತಿಯ ಹತ್ತಿರದವರೆಲ್ಲರೂ ಪ್ರದಕ್ಷಿಣೆ ಬರುವಾಗ ಒಂದು ಕೈಯನ್ನು ಹಣ ಕೂರಿಸಿದ ಚಟ್ಟವನ್ನು ಮುಟ್ಟುತ್ತಾ ಹೆಜ್ಜೆ ಹಾಕುತ್ತಾರೆ. ಆಗ ಚಿಲ್ಲರೆ ನಾಣ್ಯಗಳನ್ನು ಅಂಗಳದಲ್ಲಿ ಚೆಲ್ಲುತ್ತಾರೆ. ಹೆಣವನ್ನು ಹೊತ್ತುಕೊಂಡು ಹೋಗುವಾಗ ಮನೆಯಿಂದ ಸ್ಮಶಾನದವರೆಗೂ ದಾರಿಯುದ್ದಕ್ಕೂ ಅರಿಶಿನ ಮಿಶ್ರಿತ ಅಕ್ಕಿ ಮತ್ತು ಚಿಲ್ಲರೆ ನಾಣ್ಯಗಳನ್ನು ಚೆಲ್ಲುತ್ತಾ ಹೋಗುತ್ತಾರೆ. ಈ ನಾಣ್ಯಗಳನ್ನು ಆಳುಗಳು ಅಥವಾ ಬಿಕ್ಷುಕರು ಆಯ್ದುಕೊಳ್ಳುತ್ತಾರೆ. ಸ್ಮಶಾನದಲ್ಲಿ ಮೃತರ ಗೌರವಾರ್ಥ 'ಮುರಿ'

ಕೊಡುವಾಗ ಬಂಧುಗಳು ತಂದ ಮುರಿಯ ಬಟ್ಟೆಯನ್ನು ತುಂಡರಿಸಿ ಚಿಲ್ಲರೆ ನಾಣ್ಯಗಳನ್ನು ಕಟ್ಟಿ ದಾನ ಕೊಡುತ್ತಾರೆ.

ಶವವನ್ನು ಸ್ಮಶಾನಕ್ಕೆ ಹೊತ್ತು ಕೊಂಡು ಹೋಗುವಾಗ ಬಿದಿರು ಕಡ್ಡಿಯಿಂದ ಮಾಡಿದ ಕೊಡೆಗೆ ಬಿಳಿ ಬಟ್ಟೆ ಹಾಕಿ ನೆರಳು ಮಾಡಬೇಕು. ಗಂಡಸು ಮೃತನಾಗಿದ್ದರೆ ಆ ಕೊಡೆಗೆ ನಿಡುತಂಡಿನ ಅಥವಾ ಓಟೆಯ (ಕಿರುಬಿದಿರು) ಕಾಲು ಮೂಡಿರಬೇಕು. ಕೊಡೆಗೆ ಕಾಡು ಮೆಣಸಿನ ಎಲೆ ಮತ್ತು ಕಜ್ಜಾಯ ಕಟ್ಟಿರಬೇಕು. ಶವವನ್ನು ಮೆರವಣಿಗೆ ಮಾಡುವಾಗ ಶವದ ಎದುರಿನಲ್ಲಿ ಹತ್ತಿರದ ಸಂಬಂಧಿಕರು 'ತೆಂಗೆತಿರಿ' ಹಿಡಿದಿರುತ್ತಾರೆ. ತೆಂಗಿನಕಾಯಿ ಒಡೆದು ಆ ಹೋಳಿನಲ್ಲಿ ತೆಂಗಿನ ಎಣ್ಣೆ ಸುರಿದು ಅದ್ದಿದ ಬತ್ತಿಯನ್ನು ದೀಪವನ್ನಾಗಿ ಉರಿಸುವುದೇ ತೆಂಗೆತಿರಿಯಾಗಿದೆ. ಈ ತೆಂಗೆತಿರಿಯನ್ನು ಬಿದಿರು ಅಥವಾ ಓಟೆಯ ಕೋಲಿನ ತುದಿಯಲ್ಲಿ ೮೫ ಹೋಳನ್ನಿಡಬೇಕಾಗುತ್ತದೆ.

ಶವವನ್ನು ದಾರಿಯಲ್ಲಿ ಮೆರವಣಿಗೆ ಮಾಡುವಾಗ ಜೊತೆಯಲ್ಲಿ ಅಳುತ್ತಾ ಹೋಗುವುದನ್ನು 'ಕಾಕಿ ಮೊರಡುವುದು' ಎನ್ನುತ್ತಾರೆ. 'ಕಾಕಿ ಮೊರಡು' ಎಂದರೆ 'ಕರೆದು ಅಳುವುದು' ಎಂದರ್ಥ. ದಾರಿಯುದ್ದಕ್ಕೂ 'ಮಂಜಲಕ್ಕಿ' ಚೆಲ್ಲುತ್ತಾ ಹೋಗಬೇಕು ಇದನ್ನು 'ಸಮೆಯ' ಎನ್ನುವರು ಈ ಸಮಯದಲ್ಲಿ ಹೆಂಗಸರು 'ಮಾಲೆ ಪೊಯಿತ್' ಹೊಡೆದು ಕೊಳ್ಳುತ್ತಾ ಶವದ ಜೊತೆ ಹೋಗಬೇಕು.

ಸಮೆಯವನ್ನು ಕೈಯಲ್ಲಿ ಚೆಲ್ಲುವುದರ ಬದಲಾಗಿ ಒಂದು ಗೋಣಿಚೀಲದಲ್ಲಿ ಹಾಕಿ ಗಾಡಿಯಲ್ಲಿ ಅಥವಾ ಒಂದು ಎತ್ತಿನ ಬೆನ್ನ ಮೇಲಿರಿಸಿ ಅದರ ಎರಡು ಬದಿಯಲ್ಲೂ ಚೀಲಕ್ಕೆ ತೂತು ಮಾಡಿ ದಾರಿಯುದ್ದಕ್ಕೂ ಚೆಲ್ಲುವಂತೆ ಮಾಡಲಾಗುತ್ತದೆ. ಶವಕ್ಕೆ 'ಸಮೆಯ' ಹೊತ್ತುಕೊಂಡು ಹೋದ ಎತ್ತನ್ನು ಮುಂದೆ ಭೂಮಿ ಉಳಲು ಅಥವಾ ಹೊರಲು ಉಪಯೋಗಿಸಬಾರದೆಂಬ ನಿಯಮವಿದೆ.

ಕೆಲವು ಕಡೆಯಲ್ಲಿ ಶವವನ್ನು ಕೂರಿಸಿದ ಕುರ್ಚಿ ಅಥವಾ ಮಂಚವನ್ನು ಮೂರು ಬಾರಿ ಕೆಳಗಿಳಿಸುತ್ತಾರೆ. ಆ ಸಂದರ್ಭದಲ್ಲಿ ಸತ್ತ ವ್ಯಕ್ತಿಯ ಗಂಡನಾಗಲಿ ಅಥವಾ ಹೆಂಡತಿಯಾಗಲಿ ಮೊಣಕಾಲೂರಿ, ಶವಕ್ಕೆ ಕೈ ಕೊಡುವ ಪದ್ಧತಿ ಇದೆ. ಇದನ್ನು ಕೊಡವರಲ್ಲಿ 'ಕಟ್ಟ ಮುರಿಯುವ' ಎನ್ನುವರು. ಶವ ಕೆಳಗಿಳಿಸಿದ ಮೂರು ಕಡೆಯಲ್ಲಿಯೂ ಗುರುಹಿರಿಯರಿಗೆ ಕಾರಣ ಕೊಡುವ ದಿನ ಎಡೆ ಇಡಬೇಕಾಗುತ್ತದೆ. ಇತ್ತೀಚೆಗೆ ಕೊಡವರು ಕೆಲವು ಮೂಲ ಪದ್ಧತಿಯನ್ನು ಕೈ ಬಿಡುತ್ತಿದ್ದಾರೆ.

ಶವವನ್ನು ಮನೆಯಿಂದ ಹೊರಗೆ ತೆಗೆದು ಸ್ಮಶಾನಕ್ಕೆ ಕೊಂಡೊಯ್ದ ಮೇಲೆ ಮನೆಯ ಅಂಗಳವನ್ನೆಲ್ಲಾ ಗುಡಿಸಿ, ಸಗಣಿ ನೀರು ಪ್ರೋಕ್ಷಿಸಬೇಕು. ಸಗಣಿ ಮತ್ತು ಗೋಮೂತ್ರ ಶುದ್ಧಿಕಾರಕವೆಂದು ಹಿಂದುಗಳಲ್ಲಿ ಇಂದಿಗೂ ನಂಬಿಕೆ ಇದೆ ಕೆಲವು ಜನರು ಗೋಮೂತ್ರವನ್ನು ಕುಡಿದರೆ ಸುಂದರರಾಗುತ್ತೇವೆಂದು ನಂಬಿದ್ದಾರೆ. ಹಿಂದಿನ ಕಾಲದಲ್ಲಿ ಊಟ ಮಾಡಿದ ಸ್ಥಳಕ್ಕೆ ಸಗಣಿ ಸಾರಿಸಿ ಸ್ಥಳವನ್ನು ಪವಿತ್ರವಾಗಿಸುತ್ತಿದ್ದರು. "ದಕ್ಷಿಣದದ ಶ್ರೀ ವೈಷ್ಣವ ಪಂಥಗಳಲ್ಲಿ ಯಾವುದಾದರೂ ಅಶುದ್ಧ ಶುದ್ಧವಾಗಬೇಕಾದರೆ 'ಪಂಚಗವ್ಯ' ತೆಗೆದುಕೊಳ್ಳುತ್ತಾರೆ.

ಇದಕ್ಕೆ ಐದು ಪದಾರ್ಥಗಳು ಸೇರುತ್ತವೆ. ಈ ಐದರಲ್ಲಿ ಗೋಮೂತ್ರವು ಸೇರುತ್ತದೆ."[೩೭]

ಶವವು ಸ್ಮಶಾನ ತಲುಪಿದೊಡನೆ ಗುಂಡಿಗೆ ಅಥವಾ ಸುಡುವ ಸೌದೆಗೆ ಪ್ರದಕ್ಷಿಣೆ ಹಾಕಿ ಶವದ ತಲೆಯನ್ನು ದಕ್ಷಿಣಾಭಿಮುಖವಾಗಿಡಲಾಗುತ್ತದೆ. ಗುಂಡಿ ತೆಗೆಯುವಾಗ ಉತ್ತರದಿಂದ ದಕ್ಷಿಣಕ್ಕೆ ತೆಗೆಯುತ್ತಾರೆ. ಸೌದೆಯನ್ನು ಇದೇ ರೀತಿ ಜೋಡಿಸುತ್ತಾರೆ. ಶವವನ್ನು ಸ್ಮಶಾನದಲ್ಲಿ ಕೆಳಗಿಳಿಸಿದ ನಂತರ ಮೃತ ವ್ಯಕ್ತಿಯ ಗಂಡ ಅಥವಾ, ಹೆಂಡತಿ, ಮಕ್ಕಳು ಹತ್ತಿರದ ಸಂಬಂಧಿಕರು ನೀರಿಗಿಳಿಯಬೇಕು. ಹತ್ತಿರದಲ್ಲಿ ನೀರಿಗಿಳಿಯಲು ಕೆರೆ ಅಥವಾ ಹೊಳೆ ಇಲ್ಲದಿದ್ದರೆ, ಕೈಕಾಲು ಮುಖ ತೊಳೆದು ಬಟ್ಟೆಯ ಒಂದು ಭಾಗವನ್ನು ಒದ್ದೆ ಮಾಡಿಕೊಳ್ಳಬೇಕು. ನಂತರ ಮೃತ ವ್ಯಕ್ತಿಯ ಗಂಡ ಅಥವಾ ಹೆಂಡತಿ ತಲೆಯ ಮೇಲೆ ಮಣ್ಣಿನ ಪಾತ್ರೆ ಇಡಬೇಕು.

ಹಿರಿಯ ಮಗನ ತಲೆಯ ಮೇಲೆ ತೆಂಗಿನಕಾಯಿಯನ್ನು, ಸೋದರಳಿಯನು 'ಕ್ಂಡಿಕೊಡ'ವನ್ನು (ತಾಮ್ರದ ಕಿಂಡಿ) ಹೊರುತ್ತಾರೆ. ಇವರೆಲ್ಲರ ಹಣೆಗೆ ಅರಿಶಿನ ಮಿಶ್ರ ಮಾಡಿದ ಅಕ್ಕಿಯನ್ನು ಹಚ್ಚಬೇಕು. ಅವರ ಕೈಬೆರಳಿಗೆ ಗರಿಕೆ ಹುಲ್ಲಿನ ಉಂಗುರ ಮಾಡಿ ತೊಡಿಸಬೇಕು. ಗಂಡ ಹೆಂಡತಿ ಮಕ್ಕಳು ಅಥವಾ ಅಳಿಯ ಇವರಾರೂ ಇಲ್ಲದಿದ್ದರೆ ಹತ್ತಿರದ ಬಂಧುಗಳು ಈ ಆಚಾರಗಳನ್ನು ನಡೆಸಬೇಕು[೩೮] ಕೊಡವರು ಗರಿಕೆ ಹುಲ್ಲನ್ನು ಹಾಗೂ ತುಳಸಿಯನ್ನು ಪವಿತ್ರ ಎಂದು ತಿಳಿದಿರುವುದರಿಂದ ಸಂಕಲ್ಪ ಮಾಡಲು, ಮತ್ತು ಶವದ ಬಾಯಿಗೆ ನೀರು ಕೊಡುವಾಗಲೂ ಗರಿಕೆ ಹುಲ್ಲು ಮತ್ತು ತುಳಸಿ ದಳವನ್ನು ಬಳಸುತ್ತಾರೆ.

'ಮೇಮಾಡಿ' (ಮೃತರ ದೇಹದ ಮೇಲ್ಕಟ್ಟಿನ ಹೊದಿಕೆಯ ಬಟ್ಟೆ)

"ನೀರು ತುಂಬಿದ ಕೊಡ ಮತ್ತು ತೆಂಗಿನಕಾಯಿಯನ್ನು ಹೊತ್ತು ಬರುವಾಗ ಮೃತರಿಗೆ ಮೇಲ್ಕಟ್ಟಿನ ಬಿಳಿ ಹಚ್ಚಡವನ್ನು ಹಿಡಿದಿರುವುದನ್ನು ಮೇಮಾಡಿ ಎನ್ನುತ್ತಾರೆ.[೩೯] ಈ ಬಟ್ಟೆಯು ಸುಮಾರು ಹತ್ತು ಮೊಳ ಉದ್ದವಿರುತ್ತದೆ. ಈ ಮೇಮಾಡಿಯನ್ನು ಕೊಡೆಯ ಮೇಲೆ ಬೀಳದಂತೆ ಕೋಲಿನಿಂದ ಮಧ್ಯದಲ್ಲಿ ಅರುವನು ಹಿಡಿದುಕೊಳ್ಳಬೇಕು. ಕೊಡದ ಒಳಗೆ ಮಾವಿನ ಎಲೆ ಹಾಕಿರಬೇಕು. ಕೊಡ ಹೊತ್ತುಕೊಂಡವರು ಮಾವಿನ ಎಲೆಯಿಂದ ನೀರು ಚೆಲ್ಲುತ್ತಾ ಬರಬೇಕು. ಬೇರೆ ಜನರು ದಾರಿ ಉದ್ದಕ್ಕೂ ಕಾಕಿ ಮೊರಡುತ್ತಾ (ಅಳುತ್ತಾ) ಮೃತರ ಮೆರವಣಿಗೆಯಲ್ಲಿ ಬರಬೇಕು.

ಕೊಡ ಹೊತ್ತವರು ಸ್ಮಶಾನಕ್ಕೆ ತಲುಪಿದ ನಂತರ ಮೇಮಾಡಿ ಸಮೇತವಾಗಿ ಶವಕ್ಕೆ ಮತ್ತು ಗುಂಡಿಗೆ ಅಥವಾ 'ಕಂಬೆ ಪುಳ್ಳಿ' (ಶವ ಸುಡಲು ನಾಲ್ಕು ದಿಕ್ಕಿನಲ್ಲಿ ಕಂಬ ನೆಟ್ಟಿರುವ ಸೌದೆ)ಗೆ ಪ್ರದಕ್ಷಿಣೆ ಬಂದು ಶವದ ಎಡಭಾಗದಲ್ಲಿ ಮೃತರ ಹೆಂಡತಿ ಅಥವಾ ಗಂಡ ಕಾಲಿನ ಬಳಿಯೂ, ಮಗ ಮತ್ತು ಮಗಳು ಶವದ ಬಲಭಾಗದಲ್ಲಿ ಅಳಿಯ ಅಥವಾ ಸೊಸೆ ನಿಂತಿರುತ್ತಾರೆ. ನಿಂತುಕೊಂಡ ಕೂಡಲೇ ಮೇಮಾಡಿ (ಮೃತರ ಮೇಲೆ ಮುಚ್ಚಿದ ಬಟ್ಟೆ)ಯನ್ನು ತೆಗೆದು ಮೇಲ್ಕಟ್ಟು ಬಟ್ಟೆಯನ್ನು ಬಿಚ್ಚಿದ ನಂತರ ಕೊಡಗಳ ನೀರನ್ನು ಸ್ವಲ್ಪ ಸ್ವಲ್ಪವಾಗಿ ಒಂದು ಕಂಚಿನ ಪಾತ್ರೆಗೆ ಹಾಕುತ್ತಾರೆ.

'ಕೊಡ ಕುಕ್ಕುವೂ' (ಕುಡಿಕೆ ಹೊಡೆಯುವುದು)

ಕೊಡ ಹೊತ್ತಿದ್ದವರು ಸಾವಿಗೆ ಕೈಕೊಟ್ಟು ಅರಿಶಿನ ಎಣ್ಣೆಯನ್ನು ಮೃತದೇಹಕ್ಕೆ ಹಚ್ಚಿ ಪ್ರದಕ್ಷಿಣೆ ಬಂದು ಮೊಣಕಾಲನ್ನೂರಿ ಹೆಂಡತಿ ಅಥವಾ ಗಂಡನು ಮೊದಲು ಮಣ್ಣಿನ ಕುಡಿಕೆಯನ್ನು ಶವವನ್ನು ಇಟ್ಟಿರುವ ಕುರ್ಚಿ ಅಥವಾ ಮಂಚದ ಕಾಲಿಗೆ ಹೊಡೆಯುವುದನ್ನು 'ಕೊಡ ಕುಕ್ಕುವೂ' ಎನ್ನುವರು. ಒಡೆದ ಚೂರುಗಳನ್ನು ಕುರ್ಚಿ ಅಥವಾ ಮಂಚದ ಕೆಳಗೆ ಹಾಕಬೇಕು. ಅಳಿಯನು ಮೃತರಿಗೆ ಮೀಯಿಸಿದ ಪಾತ್ರೆಯ ನೀರನ್ನು ಚೆಲ್ಲಿ ಆ ಪಾತ್ರೆಯನ್ನು ಮಗುಚಿ ಕುರ್ಚಿಯ ಕೆಳಗಿಡಬೇಕು.

'ಕೊಡ ಕುಕ್ಕು' ವಾಗ ಪ್ರತಿಒಬ್ಬರೂ 'ಕೆಟ್ಟಿರೊ'——ಎಂದು ಮೂರು ಬಾರಿ ಹೇಳಬೇಕು. ನಂತರ ಎಲ್ಲರೂ ದರ್ಬೆ, ತುಳಸಿದಳಗಳಿಂದ ಕಂಚಿನ ತಟ್ಟೆಯಲ್ಲಿರುವ ನೀರನ್ನು ಶವದ ಬಾಯಿಗೆ ಕೊಡುತ್ತಾರೆ ೫೦ ಗಂಡ ಸತ್ತರೆ ಹೆಂಡತಿ ಕರಿಮಣಿ, ಓಲೆ ಮುಂತಾದವುಗಳನ್ನು ಚೀಲದಲ್ಲಿ ಗಂಟುಕಟ್ಟಿ ಮೃತ ಗಂಡನ ಕುಪ್ಪಸದ ಮಡಿಲಲ್ಲಿ ಹಾಕಬೇಕಾಗುತ್ತದೆ. ಬಳೆಗಳನ್ನು ಒಡೆದು ಅಲ್ಲಿಗೇ ಹಾಕುತ್ತಾರೆ. ಹೆಂಡತಿ ಸತ್ತಿದ್ದರೆ ಗಂಡನು ಒಂದು ಚೀಲಕ್ಕೆ ಬೆಳ್ಳಿ ನಾಣ್ಯವನ್ನು ಹಾಕಿ ಹೆಂಡತಿಯ ಸೀರೆಗೆ ಕಟ್ಟುತ್ತಾನೆ.

ಹಿಂದೂಗಳ ಪದ್ಧತಿಯಂತೆ ಕೊಡವರಲ್ಲಿ ಗಂಡಸು ಸತ್ತರೆ ಮಗನೇ ಕೊಳ್ಳಿ ಇಡುತ್ತಾನೆ. ಶವವನ್ನು ಸುಡುವ ಸಂದರ್ಭದಲ್ಲಿ ಶವಕ್ಕೆ ಹಾಕಿದ ಬಟ್ಟೆಗಳನ್ನು ತೆಗೆದು ಬಿಳಿ ಬಟ್ಟೆಯನ್ನು ಸಂಪೂರ್ಣ ಮುಚ್ಚಿ ಆ ಬಟ್ಟೆಯ ಮೇಲೆ ತೆರಂಗ್ಯೆಯಲ್ಲಿ ಅರಿಶಿನ ಮಿಶ್ರಿತ ಎಣ್ಣೆ ಸವರಬೇಕು.ನಂತರ ಸೌದೆಯ ಮೇಲಿಟ್ಟು ಉರಿಯುತ್ತಿರುವ ಕೊಳ್ಳಿಯನ್ನು 'ತೆರಂಗೊಳ್ಳಿ' ಯಾಗಿ ಒಟ್ಟಿದ ಸೌದೆಯಡಿಗಿಡಬೇಕು.

ಶವವನ್ನು ಹೂಳುವುದಾದರೂ ಹೊದಿಸಿದ ಬಿಳಿ ಬಟ್ಟೆಗೆ ಎಣ್ಣೆ ಸವರಿ ಗುಂಡಿಯಲ್ಲಿಟ್ಟು, ಉಪ್ಪು ಹಾಕಬೇಕು. ವಿಭೂತಿ ಪುಡಿಮಾಡಿ ಹಾಕಬೇಕು. ನಂತರ ತೆರಂಗ್ಯೆಯಿಂದ ಮೂರು ಹಿಡಿ ಮಣ್ಣು ತೆಗೆದು ಗುಂಡಿಗೆ ಹಾಕಬೇಕು. ಮೃತನ ಹೆಂಡತಿ ಏಳು ತಿಂಗಳ ಗರ್ಭಿಣಿಯಾಗಿದ್ದರೆ ಅಥವಾ ಕಾಯಿಲೆಯಿಂದ ಸ್ಮಶಾನಕ್ಕೆ ಹೋಗಲು ಆಗದಿದ್ದರೆ, ಮನೆಯಲ್ಲಿಯೇ ಆಕೆಯಿಂದ ನೀರು ಕೊಡಿಸಿ, ಬಳೆ ಒಡೆದು, ಆಭರಣಗಳನ್ನು ಬಿಚ್ಚಬೇಕು. ಅದೇ ರೀತಿ ಗಂಡಸು ಕಾಯಿಲೆಯಿಂದ ನರಳುತ್ತಿದ್ದರೆ ಮನೆಯಲ್ಲೇ ಕ್ರಿಯೆಗಳನ್ನು ಮಾಡಬಹುದಾಗಿದೆ.

ಶವಕ್ಕೆ ಧರಿಸಿದ ಕುಪ್ಪಸ, ಸೀರೆಯನ್ನು ಆಳುಗಳಿಗೆ ದಾನ ಮಾಡುವ ಪದ್ಧತಿ ಇದೆ. ಇದರ ಜೊತೆ ಶವಕ್ಕೆ ತಂದ ಮುರಿಯನ್ನು ಕೊಡುತ್ತಾರೆ. ಶವವು ಸಂಪೂರ್ಣ ಬೇಯುವವರೆಗೂ ಊರಿನವರು ಮನೆಗೊಬ್ಬರಂತೆ ಅಲ್ಲೇ ಕಾದು ಕುಳಿತು ಶವ ಬೆಂದ ನಂತರ ಮನೆಗೆ ತೆರಳುತ್ತಾರೆ. ಶವವನ್ನು ಗುಂಡಿಯಲ್ಲಿ ಹೂತರೆ ಆ ಮಣ್ಣಿನ ಮೇಲೆ ಮುಳ್ಳನ್ನು ಹಾಕಿ ನಾಯಿ, ನರಿ ಎಳೆಯದಂತೆ ಎಚ್ಚರವಹಿಸುತ್ತಾರೆ.

ಶವದ ಜೊತೆಗೆ ತೆಗೆದುಕೊಂಡು ಹೋದ ಬುತ್ತಿಯನ್ನು ಸಂಸ್ಕಾರ ಮಾಡಿದ ಶವದ ತಲೆಭಾಗದಲ್ಲಿಟ್ಟು ಒಂಟಿ ಗುಂಡು ಹಾರಿಸುವ ಪದ್ಧತಿ ಇದೆ. ಸ್ಮಶಾನದಿಂದ ಹಿಂದಿರುಗುವಾಗ ತಾವು ಬಂದ ದಾರಿಗೆ ಅಡ್ಡವಾಗಿ ಮುಳ್ಳು ಹಾಕಿ "ನೀನ್ ಪೋಪ ಬಟ್ಟೆಲ್ ದಾರೂ ಬಕ್ಕತನ್ನಕ್ಕೆ ಇನ್ನನೇ ಕಲ್ಲ್ ಮುಳ್ಳ್ ಇಟ್ಟಂಡ್

ಮೋ" (ನೀನು ಹೋದ ದಾರಿಯಲ್ಲಿ ಯಾರು ಬಾರದಂತೆ ಕಲ್ಲು ಮುಳ್ಳು ಹಾಕಿಕೊಂಡು ಹೋಗು) ಎಂದು ಹೇಳಿ ಬರುತ್ತಾರೆ. ಸ್ಮಶಾನದಿಂದ ಬಂದ ನಂತರ 'ತೆಳ್ ನೀರ್'[೪೦] (ಶುದ್ಧವಾದ ನೀರು) ಪ್ರೋಕ್ಷಣೆ. ಮತ್ತು ಸಗಣಿ ನೀರನ್ನು ಪ್ರೋಕ್ಷಿಸಿ ಮನೆಯ ಒಳಕ್ಕೆ ಬರುವ ಪದ್ಧತಿ ಇಂದಿಗೂ ಮುಂದುವರಿದಿದೆ.

ಎಲ್ಲಾ ಹಿಂದೂಗಳ ಪದ್ಧತಿಯಂತೆ ಕೊಡವರು ಸ್ಮಶಾನದಿಂದ ಬಂದ ತಕ್ಷಣ ಬಟ್ಟೆಗಳನ್ನು ಹೊರಗಡೆ ಕಳಚಿ ಸ್ನಾನ ಮಾಡಿ ಶುದ್ದವಾದ ನಂತರ ಒಳಗೆ ಬರುತ್ತಾರೆ.

ಕೊಡವರು ಶವವನ್ನು ನೋಡಲು ಬರುವಾಗ ತಂದಿದ್ದಂತಹ ಬ್ರೆಡ್ ಮತ್ತು ಹಣ್ಣಿನಜಾಮ್‌ಗಳನ್ನು ಸ್ಮಶಾನದಿಂದ ಬಂದ ಕೂಡಲೇ ತಿನ್ನಲು ಕೊಡುತ್ತಾರೆ. ಇದರ ಜೊತೆ ಕರಿ ಕಾಫಿಯನ್ನು (ಹಾಲು ಹಾಕದೆ ಇರುವ) ಕುಡಿಯಲು ಕೊಡುತ್ತಾರೆ. ಹತ್ತಿರದ ಸಂಬಂಧಿಕರು ಇದನ್ನು ಸೇವಿಸಿದ ನಂತರ ತಮ್ಮ ಮನೆಗೆ ತೆರಳುತ್ತಾರೆ.

ಚಾತ ಪುಕ್ಕುವೊ (ಬಾಳೆ ಬೇಯಿಸುವುದು)

ಶವ ಸಂಸ್ಕಾರವಾದ ನಂತರ ಮನೆಗೆ ಬಂದ ಕೂಡಲೇ ಅರುವನು ಬಾಳೆಗೊನೆಯನ್ನು ಕಡಿದು ಅದರ ಕಾಯಿಯ ಸಿಪ್ಪೆ ತೆಗೆದು ಉರುಟಾಗಿ ಕತ್ತರಿಸಿ ಅರುವನ ಮನೆಗೆ ಹೆಂಗಸರಿಗೆ ಕೊಡಬೇಕು. ಅವರು ಅದನ್ನು ಬೇಯಿಸಿ ಸತ್ತ ವ್ಯಕ್ತಿಯ ಹೆಂಡತಿ ಅಥವಾ ಗಂಡನಿಗೆ ತಿನ್ನಲು ಕೊಡಬೇಕು. ಹೆಂಡತಿ ಅಥವಾ ಗಂಡ ಇಲ್ಲದಿದ್ದರೆ ಹತ್ತಿರದ ಸಂಬಂಧಿಕರು ತಿನ್ನಬೇಕು. ಇದಕ್ಕೆ 'ಚಾತ ಪುಕ್ಕುವೊ'[೪೧] (ಬಾಳೆ ಬೇಯಿಸು) ಎಂದು ಹೆಸರು.

ಕೊಡವರಲ್ಲಿ ಬಾಳೆಗೊನೆಯನ್ನು ಮಧ್ಯಾಹ್ನದೊಳಗೆಕಡಿಯಬೇಕೆಂಬ ನಿಯಮವಿದೆ. ಸತ್ತ ದಿನದಂದು ಮಾತ್ರ ಮಧ್ಯಾಹ್ನದ ಒಳಗೆ ಬಾಳೆಗೊನೆ ಕಡಿದಿರುತ್ತಾರೆ. ಸತ್ತ ಮನೆಯಲ್ಲಿ ಶವ ಸಂಸ್ಕಾರದವರೆಗೆ ಅಡುಗೆಯನ್ನು ಮಾಡದ ಕಾರಣ ಊರಿನ ನೆರೆ ಮನೆಯವರು ಊಟದ ವ್ಯವಸ್ಥೆಯನ್ನು ಮಾಡುತ್ತಾರೆ.

ಶವವನ್ನು ಸುಟ್ಟ ಮಾರನೆಯ ದಿನ ಬೆಳಗ್ಗೆ ಅರುವನು ಮತ್ತು ಮೃತನ ಮನೆಯವರು ಆತನ ಸಂಬಂಧಿಕರು ಸ್ಮಶಾನಕ್ಕೆ ಹೋಗಿ ಚಿತಾಭಸ್ಮವನ್ನು ತಂದು ನದಿಯಲ್ಲಿ ಬಿಡುತ್ತಾರೆ. ಇಲ್ಲದಿದ್ದರೆ ಹಾಲು ಬರುವ ಮರದ ಬುಡಕ್ಕೆ ಹಾಕುತ್ತಾರೆ. ಶವವನ್ನು ಸುಟ್ಟ ಸ್ಥಳ ತಂಪಾಗಲು ತುಂಬಾ ನೀರು ಹಾಕುತ್ತಾರೆ. ಆ ಸ್ಥಳಕ್ಕೆ ಹಾಲನ್ನು ಹುಯಿದು, ಬತ್ತ, ಸಾಸುವೆಯನ್ನು ಬಿತ್ತನೆ ಮಾಡುತ್ತಾರೆ. ಬಿತ್ತಿದ ಬತ್ತ ಮತ್ತು ಸಾಸಿವೆ ಮೊಳಕೆಯೊಡೆದರೆ ಸತ್ತವರ ಹೃದಯ ತಂಪಾಗುವುದೆಂದು ಕೊಡವರ ನಂಬಿಕೆ ಸುಟ್ಟ ಸ್ಥಳದಲ್ಲಿ ಗಿಡ ಬೆಳೆಸುವ ಪದ್ಧತಿಯನ್ನು ಅನೇಕ ಹಿಂದೂ ಪಂಗಡಗಳಲ್ಲೂ ಕಾಣಬಹುದಾಗಿದೆ.

ಮೃತನ ಅಂತ್ಯಕ್ರಿಯೆ ಮುಗಿದ ಮಾರನೇ ದಿನದಿಂದಲೇ ಸಾಂತ್ವನ ಹೇಳಲು ಬರುವವರು ಮೃತನ ಗುಣಗಾನ ಮಾಡುತ್ತಾರೆ. ಇದರಿಂದ ಮೃತರ ಮನೆಯವರು ಮತ್ತಷ್ಟು ದುಃಖಿಸಿ ಮನಸ್ಸು ಹಗುರ ಮಾಡಿಕೊಳ್ಳುವರು. ತಿಥಿಯ ದಿನದವರೆಗೂ ಈ ಸಾಂತ್ವನ ಹೇಳುವ ಪದ್ಧತಿಯನ್ನು 'ತಕ್ಕ್‌ಪರಿಚಿಡುವೋ' (ಮಾತಾಡಿಸಲಿಕ್ಕೆ

ಬರುವುದು) ಎನ್ನುತ್ತಾರೆ. ಇದು ಸಂಬಂಧವನ್ನು ಹತ್ತಿರಗೊಳಿಸುವ ಕೊಡವರ ವಿಶೇಷ ಗುಣಗಳಲ್ಲೊಂದಾಗಿದೆ.

ಮಕ್ಕಳ ಶವ ಸಂಸ್ಕಾರ

ಕೊಡವರಲ್ಲಿ ಮಗು ಹುಟ್ಟಿದ ಅರವತ್ತು ದಿನದ ಒಳಗೆ ಮಗು ಮೃತ ಪಟ್ಟರೆ ಅದನ್ನು ತಕ್ಷಣ ಮನೆಯ ಹತ್ತಿರದ ತೋಟ ಅಥವಾ ಮಕ್ಕಳ ಸ್ಮಶಾನದಲ್ಲಿ ಸಂಸ್ಕಾರ ಮಾಡಬೇಕು. ಮಕ್ಕಳು ಸತ್ತಾಗ ಯಾವುದೇ ಆಡಂಬರವಿಲ್ಲದೆ ಅಂತ್ಯಕ್ರಿಯೆಯನ್ನು ನಡೆಸಲಾಗುತ್ತದೆ. ಮಕ್ಕಳ ಸಾವಿನ ಸುದ್ದಿಯನ್ನು ಊರಿಗೆ ತಿಳಿಸುವ ಅಗತ್ಯವಿಲ್ಲ. ಶವ ಸಂಸ್ಕಾರ ಮಾಡಿದ ನಂತರ ಅಲ್ಲಿ ತಲೆಯ ಭಾಗದಲ್ಲಿ ತೆಂಗಿನಕಾಯಿ ಚಿಪ್ಪು ಅಥವಾ ಮಣ್ಣಿನ ಬಟ್ಟಲಿನಲ್ಲಿ ತಾಯಿಯ ಎದೆ ಹಾಲನ್ನು ಇಡಬೇಕು. ಮಗುವು ಹುಟ್ಟಿದ ಅರವತ್ತು ದಿನದ ನಂತರ ಮೃತಪಟ್ಟರೆ ಶವವನ್ನು ಸ್ನಾನ ಮಾಡಿಸಿ, ಹಣೆಗೆ ವಿಭೂತಿ ಧರಿಸಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗುತ್ತಾರೆ. ಶವದ ಜೊತೆಗೆ ಹಾಲು ಅಥವಾ ಮಜ್ಜಿಗೆ ಹಾಕಿ ಬುತ್ತಿ ಕಲೆಸಿ ಸಂಸ್ಕಾರದ ನಂತರ ಆ ಬುತ್ತಿಯನ್ನು ತಲೆಯ ಹತ್ತಿರ ಇಡುತ್ತಾರೆ. ಮಕ್ಕಳು ಎಲ್ಲಾ ಪದಾರ್ಥಗಳನ್ನು ತಿನ್ನುತ್ತಿರುವರಾದರೆ ದೊಡ್ಡವರು ಮೃತಪಟ್ಟಾಗ ತರುವ ಬುತ್ತಿಯನ್ನೇ ತರಬೇಕಾಗುತ್ತದೆ. ಮಗುವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋದನಂತರ ತಾಯಿಯು ಸ್ನಾನ ಮಾಡಿ ಮಡಿಬಟ್ಟೆ ಹಾಕಿಕೊಳ್ಳುತ್ತಾಳೆ. ಹೆಂಗಸರು ಸ್ಮಶಾನಕ್ಕೆ ಹೋಗಬಾರದೆಂಬ ನಿಯಮವಿದೆ. ಮಕ್ಕಳು ಸತ್ತಾಗ ಸುಡಬಾರದೆಂಬ ನಿಯಮವಿರುವುದರಿಂದ ಕೊಡವರಲ್ಲಿ ಮಕ್ಕಳು ಸತ್ತಾಗ ಮಣ್ಣಿನಲ್ಲಿ ಹೂಳುತ್ತಾರೆ.

ಮಹಿಳೆಯರ ಶವ ಸಂಸ್ಕಾರ

ಕೊಡವರಲ್ಲಿ ವಿವಾಹಿತ ಮಹಿಳೆ ಮೃತಪಟ್ಟಲ್ಲಿ ನವವಧುವಿನಂತೆ ಮುತ್ತೈದೆಯ ರೀತಿಯಲ್ಲಿ ಅಲಂಕಾರ ಮಾಡುತ್ತಾರೆ. ಶವವನ್ನು ಮಂಚದ ಮೇಲೆ ಮಲಗಿಸಬೇಕು. ಇದನ್ನು 'ಚಾವುಕೂಟ್' ಎನುತ್ತಾರೆ. ಮೃತಳ ಪತಿಯು ಒಂದು ಚೀಲದಲ್ಲಿ ಬೆಳ್ಳಿಯ ನಾಣ್ಯವಿಟ್ಟು ಹೆಂಡತಿಯ ಸೀರೆಯ ಸೆರಗಿಗೆ ಕಟ್ಟಬೇಕು. ಮೃತ ಹೆಣ್ಣಿನ ತವರು ಮನೆಯಿಂದ ಒಂದು ತೆಂಗಿನಕಾಯಿ ಸ್ವಲ್ಪ ತೆಂಗಿನ ಎಣ್ಣೆ, ಹುರುಕಲು (ಭತ್ತದ ಪುರಿ) ಮಾಂಸ ಅಥವಾ ಕೋಳಿ ಸಾರು ಮಾಡಿ ಒಂದು ಬಾಳೆ ಎಲೆಯಲ್ಲಿ ಬುತ್ತಿ ಕಟ್ಟಿಕೊಂಡು ಬರುತ್ತಾರೆ.

ತವರಿನಿಂದ ತಂದ ಬುತ್ತಿಯನ್ನು ಶವ ಸಂಸ್ಕಾರ ಮಾಡುವ ಸ್ಥಳಕ್ಕೆ ತೆಗೆದುಕೊಂಡು ಹೋಗಬೇಕು. ಹರಳೆಣ್ಣೆಯಲ್ಲಿ ಮಾಡಿದ ಮೂರು ಕಜ್ಜಾಯ ಮತ್ತು ಅರಿಶಿನ ಮಿಶ್ರ ಮಾಡಿದ ಅಕ್ಕಿ (ಮಂಜಲಕ್ಕಿ) ಯನ್ನು ತವರಿನಿಂದ ತರುತ್ತಾರೆ. ಇದನ್ನು 'ಸಮೆಯ' ಎನ್ನುತ್ತಾರೆ. ಈ ಸಮಯವನ್ನು ಸತ್ತ ಮನೆಯಲ್ಲಿಯೂ ತಯಾರಿಸುತ್ತಾರೆ.

ಕೊಡವರಲ್ಲಿ ಶವಕ್ಕೆ ಶೃಂಗಾರ ಮಾಡಿ, ಕರ್ಪೂರ ದೂಪ, ಗಂಧದ ಕಡ್ಡಿ ಹಚ್ಚಬೇಕು. ಶವದ ಪಕ್ಕದಲ್ಲಿ ದೀಪ ಉರಿಯುತ್ತಿರಬೇಕು. ಬೈನೆ ಮರದ ಬೀಸಣಿಗೆಯಿಂದ ನೊಣ ಕೂರದ ಹಾಗೆ ಗಾಳಿ ಬೀಸುತ್ತಿರಬೇಕು. ಶವ ನೋಡಲು

ಬಂದವರು ತಟ್ಟೆಗೆ ಹಣ ಹಾಕಿ ನಮಸ್ಕರಿಸಿ ತುಳಸಿ ಗರಿಕೆಯಿಂದ ಬಾಯಿಗೆ ನೀರು ಕೊಡಬೇಕು. ತಟ್ಟೆಯ ಹಣದಿಂದ ಶವ ಸಂಸ್ಕಾರದ ಖರ್ಚನ್ನು ಭರಿಸುತ್ತಾರೆ. ಆರ್ಥಿಕವಾಗಿ ಸಹಾಯವಾಗುವ ತಟ್ಟೆ ಹಣ ಸಂಪ್ರದಾಯವನ್ನು ಕೊಡವರು ಇಂದಿಗೂ ಉಳಿಸಿಕೊಂಡಿದ್ದಾರೆ. ಗಂಡಸರ ಶವ ಸಂಸ್ಕಾರದಲ್ಲೂ ಮಾಡಬೇಕು. ಕೊಡವರಲ್ಲಿ ವಿಧವೆಯು ಮೃತಪಟ್ಟಲ್ಲಿ ಬಿಳಿ ವಸ್ತ್ರವನ್ನೇ ಧರಿಸುತ್ತಾರೆ. ಮೃತ ಮಹಿಳೆಯು ಮದುವೆಯಾಗದಿದ್ದಲ್ಲಿ ಸುಡುವ ಬದಲು ಹೂಳುತ್ತಾರೆ.

ಚಾವು ಪೊಲೆ (ಮೃತಪಟ್ಟ ವ್ಯಕ್ತಿಯ ಬೂದಿಯ ಸಂಸ್ಕಾರ)

ಮೃತ ವ್ಯಕ್ತಿಯ ತನ್ನ ಸ್ವಂತ ಮನೆಯಲ್ಲಿ ಸಾವನ್ನಪ್ಪದೆ, ದೂರದ ಊರಿನಲ್ಲಿ ಕೊನೆಯುಸಿರೆಳೆದರೆ, ಅಲ್ಲೇ ಯಾವ ರೀತಿಯ ಆಡಂಬರವಿಲ್ಲದೆ ಸಂಸ್ಕಾರ ಮಾಡಿ, ಸತ್ತವರ ಕೈಕಾಲುಗಳ ಉಗುರು ತಲೆ ಕೂದಲು ಮತ್ತು ಶವವನ್ನು ಹೂತ ಸ್ಥಳದ ಮಣ್ಣು, ಸುಟ್ಟಿದ್ದರೆ ಚಿತಾಭಸ್ಮ ಮುಂತಾದವುಗಳನ್ನು ಆತನ ಸ್ವಂತ ಮನೆಗೆ ತರುವುದನ್ನು ಚಾವುಪೊಲೆ ಎನ್ನುತ್ತಾರೆ.

ಚಾವುಪೊಲೆಯನ್ನು ನೇರವಾಗಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗಬೇಕು. ಸಾವಿಗೆ ಮಾಡಬೇಕಾದ ಎಲ್ಲಾ ಕ್ರಿಯೆಯನ್ನು ಚಾವುಪೊಲೆಗೆ ಮಾಡಬೇಕಾಗುತ್ತದೆ. ಚಾವುಪೊಲೆಯನ್ನು ಮನೆಯೊಳಗೆ ತರುವಂತಿಲ್ಲ. 'ಚಾವುಪೊಲೆ' ತರುವವರು ದಾರಿಯಲ್ಲಿ ರಾತ್ರಿ ಉಳಿಯುವ ಸಂಭವವಿದ್ದರೆ ಹತ್ತಿರದ ಮರವೊಂದಕ್ಕೆ ಅದನ್ನು ತೂಗುಹಾಕಿ ಮರುದಿನ ತೆಗೆದುಕೊಂಡು ಹೋಗಬೇಕು. 'ಚಾವುಪೊಲೆ' ತರುವವರು ತಾವು ತಂಗುವ ಮನೆಯಲ್ಲಿ ಹೊರಗೆ ಹಜಾರದಲ್ಲಿ ಮಲಗಬೇಕು. ಶವಕ್ಕೆ ಕೊಡುವ ಗೌರವನ್ನೇ ಚಾವುಪೊಲೆಗೆ ಕೊಡಬೇಕಾಗುತ್ತದೆ.

ಮೃತ ವ್ಯಕ್ತಿಯು ಮಾರಕ ಅಂಟುರೋಗದಿಂದ ದೂರದ ಊರಿನಲ್ಲಿ ಸತ್ತಿದ್ದರೆ ಅಂತಹವನ ಚಾವುಪೊಲೆ ತರಕೂಡದು. ಅಂತಹ ಸಮಯದಲ್ಲಿ ಅಂಟುರೋಗದಿಂದ ಸತ್ತವನ ಪ್ರತೀಕವಾಗಿ ಹುಲ್ಲಿನ ಬೊಂಬೆ ಮಾಡಿ ಅದಕ್ಕೆ ಶವಸಂಸ್ಕಾರ ಮಾಡಿ ಸುಟ್ಟುಹಾಕಬೇಕು. ಇಂತಹ ವ್ಯಕ್ತಿಯನ್ನು ಬೇರೆ ಸ್ಮಶಾನದಲ್ಲಿ ಸಂಸ್ಕಾರ ಮಾಡಬೇಕು. ರೋಗ ಊರಿಗೂ ಹರಡುವುದೆಂಬ ಬೀತಿ ಅಥವಾ ವೈಚಾರಿಕ ಪ್ರಜ್ಞೆ ಇದರ ಹಿಂದೆ ಇದೆ.

ಮೃತ ವ್ಯಕ್ತಿಯ ಹತ್ತಿರದ ಕಿರಿಯ ಕೊಡವರಲ್ಲಿ ಸೂತಕ ಬಿಟ್ಟು ಹೋಗಿದೆ. ಸಂಬಂಧಿಕರೆಲ್ಲರೂ ಗಂಡಸರು ದೀಕ್ಷೆಯ ಗುರುತಿಗಾಗಿ ತಲೆ ಕೂದಲು, ಗಡ್ಡ ಮೀಸೆಗಳನ್ನು ಚಾವುಪೊಲೆ ತೆಗೆದೊಡನೆ ಬೋಳಿಸಬೇಕು. ಯಾವುದೇ ಆಭರಣ ಧರಿಸುವಂತಿಲ್ಲ, ಕೆಂಪು ಬಟ್ಟೆ ಹಾಕುವಂತಿಲ್ಲ. ತಿಥಿ ಮುಗಿಯುವವರೆಗೂ ಕ್ಷೌರ ಮಾಡಕೂಡದೆಂಬ ನಿಯಮವಿದೆ. ಕುಪ್ಪಸ, ಚೇಲೆ ಮುಂತಾದ ಮದುವೆಯುಡುಗೆಗಳನ್ನು ಧರಿಸುವಂತಿಲ್ಲ.ಕೊಡವ ಮಹಿಳೆಯರೂ ದೀಕ್ಷೆ ಮುಗಿಯುವವರೆಗೆ ಯಾವುದೇ ಆಭರಣಗಳನ್ನು ಧರಿಸುವಂತಿಲ್ಲ. ಇತರ ದೀಕ್ಷೆ ಇದ್ದವರು ಹೆಗಲಿಗೆ ಬಿಳಿ ಬಟ್ಟೆ ಕಟ್ಟಿಕೊಳ್ಳಬೇಕು. ಹಾಲು, ಜೇನು, ಮಾಂಸ. ಮೀನು,ಅಣಬೆ,ಎಲೆ ಅಡಿಕೆ ಮುಂತಾದ ಪದಾರ್ಥಗಳನ್ನು ತಿನ್ನುವಂತಿಲ್ಲ.

ಮನೆಯಲ್ಲಿ ತಿಥಿ ಮುಗಿಯುವರೆಗೆ ಒಗ್ಗರಣೆಗೆ ಸಾಸುವೆ ಹಾಕಬಾರದು, ಮಾಂಸದ ಅಡುಗೆ ಮಾಡುವಂತಿಲ್ಲ ಮತ್ತು ಯಾವುದೇ ಶುಭ ಸಮಾರಂಭಗಳಲ್ಲಿ ಭಾಗವಹಿಸಕೂಡದೆಂಬ ನಿಯಮವಿದೆ.

'ಕುಳಿಕ್ ನಿಪ್ಪೊ' (ತಿಥಿ ಮಾಡಲು ಸ್ನಾನದ ಕಟ್ಟುಪಾಡಿಗೊಳಪಡುವಿಕೆ)

ವೃತ ವ್ಯಕ್ತಿಯ ಹೆಂಡತಿ ಅಥವಾ ಸತ್ತ ಹೆಂಡತಿಯ ಗಂಡ ಇವರು ಕಡ್ಡಾಯವಾಗಿ 'ಕುಳಿಕ್' ನಿಲ್ಲಬೇಕು. ಸತ್ತ ವ್ಯಕ್ತಿಗಿಂತ ವಯಸ್ಸಿನಲ್ಲಿ ಕಿರಿಯರಾದವರು 'ಕುಳಿಕ್' ನಿಲ್ಲಬೇಕು. ಇವರ ಹತ್ತಿರದ ಸಂಬಂಧಿಕರು ಕುಳಿಕ್ ಪದ್ದತಿಗೆ ಬದ್ಧರಾಗಬೇಕು. ಕುಳಿಕ್ ನಿಂತವರು ಗಂಡಸರಾದರೆ ತಿಥಿ ಮುಗಿಯವರೆಗೂ ಒಜ್ಜೋಡಿ ಕುಪ್ಪಸ ಅಥವಾ ಬಿಳಿ ಪಂಚೆ ಉಟ್ಟುಕೊಳ್ಳುಬೇಕು ಮತ್ತೊಂದು ಪಂಚೆಯನ್ನು ಹೊದ್ದುಕೊಳ್ಳಬೇಕು. ಹೆಂಗಸರು ಬೆನ್ನಿಗೆ ಬಿಳಿಬಟ್ಟೆ ಅಂದರೆ 'ನಿಪ್ಪ್‌ತುಣಿ' ಯನ್ನು ಕಟ್ಟಿಕೊಳ್ಳಬೇಕು.

ಕುಳಿಕ್ ನಿಂತವರು ಪ್ರತಿದಿನ ಪೂರ್ವಾಹ್ನ ಸ್ನಾನ ಮಾಡಿದ ನಂತರ ತಾವೇ ಅಡಿಗೆ ತಯಾರಿಸಿ ಒಂದೇ ಹೊತ್ತು ಊಟ ಮಾಡಬೇಕು. ರಾತ್ರಿ ಸಮಯದಲ್ಲಿ ಲಘು ಫಲಾಹಾರವನ್ನು ತೆಗೆದುಕೊಳ್ಳಬೇಕು. ಬಾಳೆ ಎಲೆಯಲ್ಲೇ ಊಟಮಾಡಬೇಕೆಂಬ ನಿಯಮವಿದೆ. ಮಣೆಯಲ್ಲಿ ಕೂರಬಾರದು, ಚಾಪೆಯಲ್ಲಿ ಮಲಗಬೇಕೆಂಬ ಹಲವಾರು ಕಟ್ಟು ನಿಟ್ಟಾದ ಪದ್ಧತಿಗಳನ್ನು ಇಂದಿಗೂ ಆಚರಿಸಿಕೊಂಡು ಬರುತ್ತಿದ್ದಾರೆ. 'ಕುಳಿಕ್' ನಿಂತವರು ಕೈಗೆ ಬೆಳ್ಳಿಯ ಸರಪಣಿ ಸುತ್ತಿಕೊಂಡು ಕೈಯಲ್ಲಿ ಒಂದು ಚಾಕನ್ನು ಹಿಡಿದು ಕೊಂಡಿರಬೇಕು. ಇವರು ಹೊಳೆ ಇಳಿದು ದಾಟಬಾರದೆಂಬ ಹಲವಾರು ನಿಯಮಗಳು ಕೊಡವರಲ್ಲಿದೆ.

ವಿಧಿವಶದ ಘಳಿಗೆ ನೋಡುವುದು (ಚತ್ತನಾಳ್ ನೋಟುವೋ)

ಕೊಡವರಲ್ಲಿ ಇದನ್ನು 'ಚತ್ತ ನಾಳ್ ನೋಟುವೋ' ಎನ್ನುತ್ತಾರೆ. ಸತ್ತ ಮನೆಗೆ ಅರುವನು ಕಣಿಯನನ್ನು ಅಥವಾ ಜೋತಿಷ್ಯನನ್ನು ಕರೆಸಿ ಸತ್ತ ಘಳಿಗೆಯನ್ನು ನೋಡಿ ಏನಾದರೂ ತೊಂದರೆ ಕಂಡುಬಂದರೆ ಕೇಡಾಗದಂತೆ ಮುನ್ನೆಚ್ಚರಿಕೆಯನ್ನು ವಹಿಸುತ್ತಾರೆ. ಜೋತಿಷ್ಯನು ಸೂಚಿಸಿದ ಹಾಗೆ ಮನೆಗೆ ತೊಂದರೆಯಾದಲ್ಲಿ 'ಕುಳಿಯ ನೀಕುವ' (ಗುಳಿಗ ನಿವಾರಣೆ) ಎಂಬ ಪರಿಹಾರಗಳನ್ನು ಮಾಡುತ್ತಾರೆ. ಸತ್ತ ವ್ಯಕ್ತಿಯ ಮನೆಯಲ್ಲಿದ್ದುಕೊಂಡು ತೊಂದರೆ ಕೊಡುವನೆಂದು, ಅದನ್ನು ಮನೆಯಿಂದ ಹೊರಗೆ ಓಡಿಸಲು 'ಕುಳಿಯ ನೀಕುವ' ಪದ್ಧತಿ ನಡೆದು ಬಂದಿದೆ. ಮನೆಯ ಸುತ್ತು 'ಮುಂಡ್ರತ' ಎಂಬ ಮುಳ್ಳಿನ ಬಳ್ಳಿಯನ್ನು ಬಿಳಿ ನೂಲಿನ ಜೊತೆಯಲ್ಲಿ ಮನೆಯಸುತ್ತು ಸುತ್ತಿ 'ಕುಳಿಯನೀಕಿ'ದ ನಂತರ ಎರಡು ತುದಿಯನ್ನು ಕಟ್ಟಿ ಮನೆಗೆ ಭದ್ರತೆ ಮಾಡುತ್ತಾರೆ.

ಮೃತ ವ್ಯಕ್ತಿಯ ಮನೆಯಲ್ಲಿ ದೀಕ್ಷೆ ಅಥವಾ ಕುಳಿಕ್ ನಿಂತವರು ತಾವು ದೀಕ್ಷೆ ನಿಂತ ಮೂರು ದಿನಗಳವರೆಗೆ ಹತ್ತಿರದ ಕೆರೆ ಅಥವಾ ಬಾವಿಗೆ ಹೋಗಿ ಅಲ್ಲಿಯ ಮೀನುಗಳಿಗೆ ಅಕ್ಕಿ ಹಾಕುವುದನ್ನು ನೀರ್‌ಬೆಲಿ, ಮೀನ್‌ಕ್

ಅಕ್ಕಿ ಇಡವೊ' (ಮೀನಿಗೆ ಅಕ್ಕಿ ಹಾಕುವುದು) ಎನ್ನುತ್ತಾರೆ. 'ಕುಳಿಕ್' ನಿಂತವರು ನಾಲ್ಕನೇ ದಿನದಿಂದ ಏಳನೇ ದಿನಗಳವರೆಗೆ 'ನೀರ್‌ಬೆಲಿ' ಮಾಡಿದ ಕೆರೆ ಅಥವಾ ಬಾವಿಯ ದಂಡೆಯಲ್ಲಿ ಮೂರು ಚಿಕ್ಕ ಕಲ್ಲುಗಳ ಒಲೆಯನ್ನು ಮಾಡಿ ಅದರ ಮೇಲೆ ಒಡೆದ ಮಣ್ಣಿನ ಪಾತ್ರೆಯನ್ನಿಟ್ಟು ಅದರಲ್ಲಿ ಸ್ವಲ್ಪ ಅಕ್ಕಿ ಹಾಕಿ ಅನ್ನ ಬೇಯಿಸುವಂತೆ ಮಾಡಿ, ಆ ಅನ್ನವನ್ನು ಬಾಳೆಯ ತುದಿ ಎಲೆಯಲ್ಲಿ ಹಾಕಿಡುವದನ್ನು 'ಕೆರಬೆಲಿ' ಅಥವಾ 'ನೀರ್ ಬೆಲಿ' ಎಂದು ಕರೆಯುತ್ತಾರೆ., ಈ ಪದ್ಧತಿಯನ್ನು ಸ್ನಾನ ಮಾಡಿ ಪರಿಶುದ್ಧವಾಗಿ ಮಾಡುತ್ತಾರೆ.

ಕಾಗೆಗೆ ಅನ್ನ ಹಾಕುವುದು (ಕಾಕೆಕ್ ಕೂಳ್ ಬೆಪ್ಪೊ)

ಕೊಡವರು ಕಾಗೆಯನ್ನು ಕಾಕೆ ಎಂದೂ ಅನ್ನವನ್ನು 'ಕೂಳ್' ಎಂದು ಕರೆಯುತ್ತಾರೆ. ಸತ್ತ ಏಳನೇ ದಿನದಲ್ಲಿ ಅರುವನು ಮನೆಯ ಹತ್ತಿರದಲ್ಲಿ ಒಂದು ಅಥವಾ ಮೂರು ಕಂಬಗಳನ್ನು ನೆಟ್ಟು ಅವುಗಳ ತುದಿಯಲ್ಲಿ ಒಂದು ಹಲಗೆಯನ್ನು ಜೋಡಿಸುತ್ತಾರೆ.ಇದಕ್ಕೆ 'ಬೆಲಿ ಮರ' ಎನ್ನುತ್ತಾರೆ.

ಸತ್ತವನ ಹೆಂಡತಿ ಅಥವಾ ಗಂಡನು ಏಳನೇ ದಿನದಿಂದ ಹನ್ನೊಂದನೆ ದಿವಸದರೆಗೆ ತಾನು ಊಟ ಮಾಡುವ ಮೊದಲು ಒಂದು ಎಲೆಗೆ ತಮಗೆ ಮಾಡಿದಂತಹ ಅನ್ನ ಮತ್ತಿತರ ಭಕ್ಷ್ಯಗಳನ್ನು ಹಾಕಿ 'ಬೆಲಿಮರ' ದ ಮೇಲಿಟ್ಟು ಕೈ ಚಪ್ಪಾಳೆ ಹೊಡೆದು 'ಕಾ,ಕಾ' ಎಂದು ಮೂರು ಬಾರಿ ಕರೆಯಬೇಕು. ಈ ಪದ್ಧತಿಯನ್ನು ಕೊಡವರು 'ಕಾಕೆಕ್ ಕೂಳ್ ಬೆಪ್ಪೊ' (ಕಾಗೆಗೆ ಅನ್ನ ಹಾಕುವುದು) ಎನ್ನುತ್ತಾರೆ. ಕಾಗೆ ಬಂದು ಈ ಅನ್ನವನ್ನು ತಿಂದರೆ ಮೃತನಾದವನಿಗೆ ಅನ್ನವು ತೃಪ್ತಿ ನೀಡಿದೆ ಎಂದು ಭಾವಿಸುತ್ತಾರೆ. ಇತರ ಪಂಗಡಗಳಲ್ಲೂ ಪಿಂಡ ಹಾಕುವ ಪದ್ಧತಿ ಇದೆ.

'ತಿಥಿ' (ಮಾದ) : ಕೊಡವರಲ್ಲಿ ಮೃತಪಟ್ಟ ಹನ್ನೊಂದನೇ ದಿನದಂದು ತಿಥಿ ಕರ್ಮಾಂತರವನ್ನು ಮಾಡುತ್ತಾರೆ. ಹಿಂದೆ 'ಪನ್ನಂದ್ ಕೈಯಿಪೊ' 'ಕುಳಿ ಚುಂಬದ್' 'ಮಾದ' ಎಂಬ ರೂಪದಲ್ಲಿ ಮೃತರಾದವರ ಉತ್ತರ ಕ್ರಿಯೆ ನಡೆಯುತ್ತಿತ್ತು. ಹನ್ನೊಂದನೇ ದಿನದಂದು ಪನ್ನೊಂದನ್ನು, ತಮ್ಮ ಅನುಕೂಲದ ಮೇರೆಗೆ ನಿಶ್ಚಯಿಸಿದ ದಿನದಂದು 'ಮಾದ' ವನ್ನು (ತಿಥಿಯನ್ನು) ಅದಕ್ಕೆ ಒಂದು ದಿನ ಮೊದಲು 'ಕುಳಿ ಚುಂಬದ್'ನ್ನು ಏರ್ಪಡಿಸುತ್ತಿದ್ದರು. ಈಗ ಇವೆಲ್ಲವನ್ನೂ ಒಂದೇ ದಿನ ಅಂದರೆ ಸತ್ತ ದಿನದಿಂದ ಹನ್ನೊಂದನೇ ದಿನದಂದು ಆಚರಿಸುತ್ತಾರೆ. ಕುಟುಂಬದಲ್ಲಿ ಮೊದಲೇ ಶುಭಕಾರ್ಯಗಳು ನಿಶ್ಚಯಿಸಲ್ಪಟ್ಟರೆ, ಅಕಸ್ಮಾತ್ ಮರಣ ಸಂಭವಿಸಿದರೆ ಐದು ದಿನಗಳಲ್ಲಿ ಅಥವಾ ಏಳು ದಿನಗಳಲ್ಲಿ ತಿಥಿ ಕರ್ಮಾಂತರಗಳನ್ನು ಅದರ ಅನುಕೂಲಕ್ಕೆ ತಕ್ಕಂತೆ ಮಾಡಿದ ನಂತರ ಶುಭಕಾರ್ಯಗಳು ನೆರವೇರುತ್ತವೆ. ಶ್ರಾದ್ಧ ಕರ್ಮ ಮಾಡುವ ದಿನ 'ಮೆಂಗತೆ' (ಸತ್ತವನಿಗಾಗಿ ಎಡೆಹಾಕಲು ಪಾಲಿಸುವ ಕಟ್ಟುಪಾಡು). ಇರುವವರು ಮತ್ತು 'ಕುಳಿಕ್' (ಸ್ನಾನ) ನಿಂದವರು ಸ್ನಾನ ಮಾಡಿ ಹೊಸ ದೀಕ್ಷಾ ವಸ್ತ್ರ ಧರಿಸುತ್ತಾರೆ. ಚಾಪೆಯನ್ನು ಹಾಸಿ ಅದರ ಮೇಲೆ ಬಾಳೆ ಎಲೆಯ ಅಗ್ರ ಭಾಗದ ತುಂಡನ್ನಿ

ಡುತ್ತಾರೆ. ಒಂದು ಪಾತ್ರೆಯಲ್ಲಿ ಅನ್ನ, ಮೊಸರು, ಬಾಳೆಹಣ್ಣು, ತುಪ್ಪ ಮಿಶ್ರಮಾಡಿ ಡುತ್ತಾರೆ. ಮತ್ತೊಂದು ಪಾತ್ರೆಯಲ್ಲಿ ಗರಿಕೆ ಹುಲ್ಲು ನೀರು ಇಡುತ್ತಾರೆ. ದೀಕ್ಷಾಕಾರ ಸ್ನಾನ ಮಾಡಿ ಮುಡಿಯುಟ್ಟು ಅನ್ನವನ್ನು ಎಲೆಗೆ ಹಾಕಿ ನೀರಿನಲ್ಲಿ ಪರಿವೇಷ ಮಾಡಿ ಎಲೆಯನ್ನು ತೆಗೆದುಕೊಂಡು ಹೋಗಿ 'ಬೆಲಿ' ಮರದಲ್ಲಿಡಬೇಕು. ದೀಕ್ಷಾಕಾರನು ಎಲ್ಲರಿಗೂ ಎಡೆ ಹಾಕಿ ಕೊಡುತ್ತಾನೆ. ದೀಕ್ಷಾಕಾರರೆಲ್ಲರೂ ಕಾಗಗೆ ಅನ್ನವನ್ನಾಕುತ್ತಾರೆ. ಇದನ್ನು 'ಕಾಕೆಕ್ ಕೂಳ್ ಬೆಪ್ಪೊ' ಎನ್ನುತ್ತಾರೆ. ಮೇಂಗತೆ ಇರುವವರು ಎಲೆ ಅಡಿಕೆಗಳನ್ನು ಬಾಯಿಗೆ ಹಾಕಿ ಮನೆಯ ಮೇಲೆ ಎಸೆಯುತ್ತಾರೆ.. ಎಲೆ ಅಡಕೆ ತಿಂದ ನಂತರ ಅವರ ದೀಕ್ಷೆ ಮುಕ್ತಾಯವಾಗುತ್ತದೆ.

ತಿಥಿಯ ದಿನ ಅರುವ ಮತ್ತು ಕುಳಿಕ್ ನಿಂತವರು ಹಾಗೂ ಅವರ ಜೊತೆ ಇನ್ನೊಬ್ಬರು ಶವವನ್ನು ಸುಟ್ಟು ಅಥವಾ ಹೂತ ಸ್ಥಳಕ್ಕೆ ಅಂದರೆ 'ತೂಟ್‌ಂಗಳ'ಕ್ಕೆ ಬಂದು ತಟ್ಟೆಯಲ್ಲಿ ಬಾಳೆಯ ತುದಿ ಎಲೆಯನ್ನಿಟ್ಟು ಇಟ್ಟು ಅದರಲ್ಲಿ ಆ ದಿನ ಮಾಡಿದ ಭಕ್ಷ್ಯ ಪದಾರ್ಥಗಳನ್ನಿಟ್ಟು, ಹಲಸಿನ ಮರದ ಎಲೆಯ ಮೂರು ದೊನ್ನೆಗಳನ್ನು ಮಾಡಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗಬೇಕು. ಹೋಗುವಾಗ ಹಿಂದೆ ಶವವನ್ನು ಕೊಂಡು ಹೋಗುವಾಗ ಅದನ್ನು ದಾರಿಯಲ್ಲಿಟ್ಟ ಜಾಗದಲ್ಲೆಲ್ಲಾ ನೀರು ಪ್ರೋಕ್ಷಿಸಿ ಎಲೆಯ ದೊನ್ನೆಯಲ್ಲಿ ಎಡೆಯಿಡುತ್ತಾರೆ.

ಸ್ಮಶಾನದಲ್ಲಿ ಕುಳಿಕ್ ನಿಂತವರು ಶವದ ತಲೆಯಲ್ಲೂ ಇಟ್ಟ ಸ್ಥಳದಲ್ಲಿ ನೀರು ಪ್ರೋಕ್ಷಿಸಿ ಬಾಳೆ ಎಲೆಯ ಮೂರು ತುದಿ ಎಲೆಯನ್ನಿಟ್ಟು ಅದರ ಹತ್ತಿರ ಹಲಸಿನ ಎಲೆಯಿಂದ ಮಾಡಿದ ದೊನ್ನೆಗಳನ್ನಿರಿಸಿ ಒಂದು ದೊನ್ನೆಯಲ್ಲಿ ಅಡಕೆ ಮತ್ತೊಂದರಲ್ಲಿ ನೀರು, ಇನ್ನೊಂದರಲ್ಲಿ ಸ್ವಲ್ಪ ಮಾದಕ ಪಾನೀಯವನ್ನಿರಿಸಿ ಮನೆಗೆ ಬಂದ ನಂತರ ಇವರಿಗೆ 'ತೆಳ್ ನೀರ್' ಪ್ರೋಕ್ಷಿಸಬೇಕು. ಎಲೆ ಅಡಕೆ ಜಗಿದು ಮನೆಯ ಮೇಲೆ ಎಸೆಯಬೇಕು .ಕೈಗೆ ಸುತ್ತಿದ ಬೆಳ್ಳಿಯ ಸರಪಣಿಯನ್ನು ಬಿಚ್ಚಿ ತಳಿಯಕ್ಕಿ ಬೊಳಕಿಗೆ (ದೀಪ) ಹಾಕಬೇಕು. ತಳಿಯಕ್ಕಿ ಬೊಳಕಿನ ಹತ್ತಿರ ಒಂದು ದೋಸೆ, ಮೂರು ವೀಳ್ಯದೆಲೆಗಳನ್ನು ಮತ್ತು ಮೂರು ಅಡಕೆ ಇಡಬೇಕು. ನಂತರ ತೀರ್ಥಯಾತ್ರೆ ಮಾಡಬೇಕು.ಕೊಡವರು ಮುಖ್ಯವಾಗಿ ತಲಕಾವೇರಿ, ಭಾಗಮಂಡಲಕ್ಕೆ ಹೋಗುತ್ತಾರೆ. ತಲಕಾವೇರಿಯಲ್ಲಿ ಪಿಂಡ ಪ್ರದಾನ ಮಾಡಿದ ನಂತರ ಅವರ ದೀಕ್ಷೆ ಮುಕ್ತಾಯವಾಗುತ್ತದೆ.

'ಪೊಡಿ ಬ್ಬಾಳೆ' (ಅಕ್ಕಿಹಿಟ್ಟು, ಬಾಳೆ ಹಣ್ಣು)

ತಿಥಿಯ ದಿನ 'ಪೊಡಿಬಾಳೆ' ತರುವ ವಿಶೇಷ ಪದ್ಧತಿ ಇದೆ. ಈ ಪೊಡಿಬಾಳೆಯನ್ನು ತಂಬಿಟ್ಟು ಮಾಡಲು ತರುತ್ತಾರೆ. ಹುರಿದ ಅಕ್ಕಿ ಹಿಟ್ಟಿನೊಂದಿಗೆ ಬಾಳೆಹಣ್ಣು ಕಲಸಿ ಮಾಡುವ ಈ ಪದಾರ್ಥಕ್ಕೆ ಪೊಡಿಬಾಳೆಯನ್ನು(ಅಕ್ಕಿ ಹಿಟ್ಟು) ತರುತ್ತಾರೆ. ಕೊಡವರಲ್ಲಿ ಗಂಡಸು ಮೃತ ಪಟ್ಟಲ್ಲಿ ಆತನ ಸೋದರ ಮಾವನ ಮನೆಯಿಂದ 'ಪೊಡಿಬಾಳೆ' ತರುವ ಸಂಪ್ರದಾಯವಿದೆ. ಹೆಂಗಸು ಮೃತಪಟ್ಟಲ್ಲಿ ಆಕೆಯ ತವರು ಮನೆಯಿಂದ ತರುತ್ತಾರೆ.

ಒಂದು ಕುಕ್ಕೆಯಲ್ಲಿ ಅಕ್ಕಿ, ಬಾಳೆಹಣ್ಣು ಮತ್ತು ಐದು ತೆಂಗಿನಕಾಯಿಗಳನ್ನು ತರುತ್ತಾರೆ. ಇದರ ಜೊತೆ ಕೆಲವರು ಬೆಲ್ಲವನ್ನು ತರುವ ಪದ್ಧತಿ ಇದೆ. 'ಮೊಡಿಬಾಳೆ' ತಂದಿರುವ ಕುಕ್ಕೆಯನ್ನು ಹಿಂತಿರುಗಿಸುವಾಗ ಮಾಂಸ, ಎಲೆ, ಅಡಕೆ ಹಾಕಿ ಕಳುಹಿಸಬೇಕು. ಈ 'ಮೊಡಿಬಾಳೆ' ಹೊತ್ತು ತಂದವರ ತಲೆಗೆ ತಂಪಾಗಿರಲೆಂದು ಎಣ್ಣೆ ಸವರುವ ಪದ್ಧತಿ ಇದೆ.

ಕೊಡವರಲ್ಲಿ ತನ್ನ ಮರಣಾನಂತರ ತಿಥಿಕರ್ಮ ಮಾಡಲು ಯಾರೂ ಇಲ್ಲದಿದ್ದರೆ ಅಂಥವರು ಜೀವಿಸಿರುವಾಗಲೇ ತಿಥಿ ಮಾಡುವ ಪದ್ಧತಿಕ್ರಮ ಇದೆ. ಇದನ್ನು 'ದುಡಿ ಬಾಯಿ ಕೆಟ್ಟುವೊ' ಎಂದು ಕರೆಯುವರು. ಕೊಡವರಲ್ಲಿ ಇನ್ನೂ ಕೆಲವರು ತಮ್ಮನ್ನು ಇಂತಹ ಸ್ಥಳದಲ್ಲೇ ಭೂಗತ ಮಾಡಿಕೊಳ್ಳಬೇಕೆಂದು ಬಯಸಿ ತಾವು ಜೀವಂತವಿರುವಾಗಲೇ ಗೋರಿ ಅಥವಾ ಸಮಾಧಿ ಕಟ್ಟಿಕೊಳ್ಳುವ ಪದ್ಧತಿ ಹಿಂದೆ ಇತ್ತು. ತಿಥಿಕರ್ಮ ಮುಗಿಯುವವರೆಗೆ ಸತ್ತ ಸೂತಕದ ಮನೆಯನ್ನು 'ತೀಕೆಮನೆ' ಅಥವಾ ದೀಕ್ಷಾಬದ್ಧ ಮನೆಯೆಂದು ಕರೆಯುತ್ತಾರೆ. ಇಂತಹ ಮನೆಯಲ್ಲಿ ಯಾವುದೇ ಶುಭಕಾರ್ಯಗಳು ನಡೆಯುವ ಹಾಗಿಲ್ಲ, ಸಮಾರಂಭಗಳಿಗೂ ಹೋಗುವಂತಿಲ್ಲ. ಸೂತಕದ ಮನೆಯವರಿಗೆ ಕಾಲು ಮುಟ್ಟಿ ನಮಸ್ಕರಿಸುವಂತಿಲ್ಲ. ಆದರೂ ಬೇರೆಯವರ ಕಾಲು ಮುಟ್ಟಿ ನಮಸ್ಕರಿಸಬಾರದೆಂಬ ಸಂಪ್ರದಾಯವಿದೆ.

ಕೊಡವರು ಆಚರಿಸುವ ಬಹುತೇಕ ಪದ್ಧತಿಗಳು ಹಿಂದೂ ಸಂಪ್ರಾದಾಯ ಗಳಾಗಿವೆ. ಸಂಪ್ರೋಕ್ಷಣೆ, ಕಾಕಬಲಿ, ಪಿಂಡಪ್ರದಾನ ಮುಂತಾದುವುಗಳೆಲ್ಲವನ್ನೂ ತರ್ಪಣ ಮಾಡಿದರೆ ಪಿತೃಗಳಿಗೆ ಸದ್ಗತಿ, ಮೋಕ್ಷ ಸಿಗುತ್ತದೆ ಎಂದು ಶಾಸ್ತ್ರಗಳು ತಿಳಿಸುವ ಕಾರಣ ಕೊಡವರು ಕೆಲವು ಮೂಲ ಸಂಪ್ರದಾಯಗಳನ್ನು ಇಂದಿಗೂ ಆಚರಿಸಿಕೊಂಡು ಬರುತ್ತಿದ್ದಾರೆ.

ಪೊಲಚಿ ಪಾಟ್ (ಮೃತರ ಗುಣಗಾನದ ಹಾಡು)

ಸತ್ತವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಅವರ ಜೀವನ ವಿಧಾನವನ್ನು ಹೊಗಳಿ ಹಾಡಿ, ಸತ್ತವರನ್ನು ಹಾಡಿನ ಮೂಲಕ ಸ್ವರ್ಗ ಸೇರಿಸುವುದೇ ಪೊಲಚಿ ಪಾಟ್‌ನ ಉದ್ದೇಶವಾಗಿದೆ. ಕೊಡವರು ಮೃತಪಟ್ಟ ೧೧ನೇ ದಿನದಂದು ತಿಥಿ (ಮಾದ) ಕಾರ್ಯ ಮಾಡುತ್ತಾರೆ. ಮಂಗತೆ ಇದ್ದವರು ತಿಥಿಯ ದಿನ ಮೌತರಿ (ಹೆಸರುಬೇಳೆ) ಪಾಯಸವನ್ನು ಕುಡಿದು ನೆಲ್ಲಕ್ಕಿಯಲ್ಲಿ ದೇವರಿಗೆ ಅಕ್ಕಿ ಹಾಕಿ, ಹಾಡುವವರಿಗೆ ಕಾಣಿಕೆ ಕೊಟ್ಟು ದುಡಿ ಮತ್ತು ತಾಳವನ್ನು ಬಡಿಯುತ್ತಾರೆ. ಪೊಲಚಿ ಪಾಡುವವರು ಸತ್ತವರ ಗುಣಗಾನ ಮಾಡುತ್ತ ಹಾಡುತ್ತಿರುತ್ತಾರೆ. ಆ ಸಮಯದಲ್ಲಿ ಅಕ್ಕಿಪುಡಿಯನ್ನು ಕಲಸಿ ಎಣ್ಣೆ ಹಾಕದೆ ದೋಸೆ ಉಯ್ಯುತ್ತಾರೆ. ಆ ದಿನ ಸಂಜೆಯವರೆಗೂ ಆ ಹಾಡು ಮುಂದುವರೆ ಯುತ್ತದೆ. ಇದಾದ ನಂತರ ೪೦ನೇ ದಿನದಲ್ಲಿ ತಲಕಾವೇರಿಯಲ್ಲಿ ಪಿಂಡ ಪ್ರಧಾನ ಮಾಡಿ ಕಾವೇರಿ ಕುಂಡಿಕೆಗೆ 'ಆಳ್‌ರೂಪ' (ಬೆಳ್ಳಿಯ ಪ್ರತಿಮೆ)

ವನ್ನು ಬಿಟ್ಟ ನಂತರ ಸತ್ತವರಿಗೆ ಮೋಕ್ಷ ಸಿಗುತ್ತದೆ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಇವರ ಸಂಸ್ಕಾರಗಳು ಇಂದಿಗೂ ಮುಂದುವರೆದುಕೊಂಡು ಬರುತ್ತಿವೆ.

ಚೆಲ್ಲ್ ಮೋಲೆ ಚೇರೋಡೆ
ಚಕ್ಕೊತ್ತ ಸರಂಬೋಲೆ
ಒಪ್ಪೋಡೆ ಪೊರ್‌ಲೋಡೆ
ಒಪ್ಪ್‌ಕ್‌ಟ್ಟೆಳೆಪೋಲೆ

ಈ ನಾಡ್‌ರ ನಡುವುಲ್
ನಾಡ್‌ಪಾದಿ ಊರಾಪ
ಆ ಊರ್ ನಡುವುಲ್
ಉರ್‌ಪಾರಿ ಒಕ್ಕಳೊ

(ಈ ಹಾಡಿನ ಸಂಪೂರ್ಣ ಭಾಗವನ್ನು ಅನುಬಂಧ-೨ ರಲ್ಲಿ ನೀಡಲಾಗಿದೆ)

'ಪೊಲಿಚಿ ಪಾಟ್' ನ ಕನ್ನಡದ ಸಾರಂಶ ಈ ರೀತಿ ಇದೆ.

ವಾಕ್ಯದೊಳಗಿನ ಶಬ್ದಗಳಂತೆ, ಸರಣಿಯಕೊಂಡಿಗಳಂತೆ ಬಟ್ಟೆಯದಾರದಂತೆ ವಿವಿಧರಂಗಿನ ರತ್ನಗಂಬಳಿಯ ಚಿತ್ರದಂತೆ, ಹೂತೋಟದ ವಿವಿಧ ರೀತಿಯ ಹೂವಿನಂತೆ, ಕಿರಣ ವಿನ್ಯಾಸದಂತೆ, ಆಕಾಶದಲ್ಲಿನ ತಾರೆಯಂತೆ ನಾವಿಲ್ಲಿ ಸೇರಿದವರು ಒಂದೇ ಕುಟುಂಬದ ಮಕ್ಕಳು. ಈ ಕುಟುಂಬದ ಈ ಹಲವು ಮಕ್ಕಳಲ್ಲಿ ನಾವು ನಾಲ್ಕು ಜನರು ಹಾಡಲಿಕ್ಕಾಗಿ ನಾವೇ ನಮ್ಮನ್ನು ಆರಿಸಿಕೊಂಡೆವು. ಹಾಡಲಿಕ್ಕೆ ಯೋಗ್ಯವಾದ ವಿಚಾರವಾವುದೆಂದು ಚಿಂತಿಸಿ ನೋಡಿದಾಗ ಈ ವಿಶಾಲ ಪ್ರಪಂಚದಲ್ಲಿ ಹೊನ್ನನಾಡು ಕೊಡಗು ಹಾಡಿ ಹರಸಲು ಯೋಗ್ಯವೆಂದು ಕಂಡುಬಂತು . ಈ ನಾಡಿನಲ್ಲಿ ಗ್ರಾಮ, ಗ್ರಾಮದಲ್ಲಿ, ಕುಟುಂಬವು ಸ್ಮರಣೆಗೆ ಯೋಗ್ಯವಾದುದು. ಆ ಕುಟುಂಬದಲ್ಲಿ ಇಂದು ನಮಗೆ ಸಮಯವೂ ಅಲ್ಲ ಮದುವೆಯ ಸಮಯವೂ ಅಲ್ಲ.; ಆದರೂ ಮೇಲಿನ ಶಬ್ದ ಕೇಳುತ್ತದೆ.ಕಾರಣವೇನು?

ನನ್ನ ಗೆಳೆಯನೇ ಕೇಳು, ಬಹುಶ ನೀನು ಮೃತಪಟ್ಟಿದ್ದೀಯೆ, ಕೊಡವ ಪದ್ಧತಿಯಂತೆ ಹನ್ನೊಂದನೆ ದಿನದ ಆಚಾರ ಪದ್ಧತಿ ಈ ತಿಥಿ ಕರ್ಮಾಂತರಕ್ಕೆ ಹೆಚ್ಚು ಸಂಖ್ಯೆಯಲ್ಲಿ ಬಂದಿರುವ ನೆಂಟರನ್ನೂ, ಗ್ರಾಮಸ್ಥರನ್ನೂ ನೋಡು, ನಾವು ನಾಲ್ಕು ಜನರು ಹಸುವಿನ ಕೆಚ್ಚಲಿನ ನಾಲ್ಕು ಮೊಲೆಗಳಂತೆ ಒಂದಾಗಿ ಸತ್ತ ಪುಣ್ಯ ಪುರುಷನ ಆತ್ಮವನ್ನು ಹೊಗಳಿ ಹಾಡುತ್ತೇವೆ. ಕೇಳು ಗೆಳೆಯಾ, ಹನ್ನೊಂದು

ದಿನಗಳ ದೀಕ್ಷೆ ಅವಧಿಯು ಮುಗಿದು ಇಂದು ತಿಥಿ ನಡೆಯುತ್ತದೆ. ನೆಂಟರು ಇಷ್ಟಮಿತ್ರರು, ಗ್ರಾಮಸ್ಥರು, ಬ್ರಾಹ್ಮಣರು ಮುಂತಾದ ಎಲ್ಲಾ ಜನರಿಗೂ ಭಕ್ಷ್ಯಭೋಜನಗಳ ಸತ್ಕಾರ ನಡೆಯುತ್ತದೆ.

ಮೃತ ವ್ಯಕ್ತಿಯು ಕೀರ್ತಿಪ್ರದ ಜೀವನವನ್ನು ನಡೆಸಿ ಗೂಡನ್ನು ಬಿಟ್ಟು ದಾರಿ ಹೋಗುವ ಹಕ್ಕಿಯಂತೆ ತನ್ನ ಶರೀರರವನ್ನು ಬಿಟ್ಟು ಹೊರಟು ಹೋದನು. ಆತನ ಹೆಂಡತಿ ಮಕ್ಕಳು ದು:ಖ ಭಾರದಿಂದ ಬಳಲಿದರು. ನೆಂಟರು ಹಿತೈಷಿಗಳು ಈ ಕೆಳಗಿನಂತೆ ಅವರಿಗೆ ಬುದ್ಧಿವಾದಗಳನ್ನು ಹೇಳಿ ದು:ಖ ಶಮನ ಮಾಡಿದ್ದಾರೆ.

"ಮಕ್ಕಳೇ ಕೇಳಿ ಸತ್ತವರಿಗಾಗಿ ಅಳುವುದು, ದು:ಖಿಸುವುದೂ ಪ್ರಯೋಜನವಿಲ್ಲ. ಇಡೀ ಆಕಾಶವೇ ಬೀಳುತ್ತಿರುವಾಗ ಅಂಗೈ ಅದನ್ನು ತಡೆದು ನಿಲ್ಲಿಸದು.ಕಾಲಡಿಯ ಭೂಮಿಯೇ ಜಾರುತ್ತಿರುವಾಗ ಕಾಲು ಅದನ್ನು ಹಿಡಿದು ನಿಲ್ಲಿಸದು. ದೇವರ ಇಚ್ಛೆಗೆ ವಿರುದ್ಧವಾಗಿ ನಾವೇನು ಮಾಡಲಾರೆವು. ಆತನ ಇಚ್ಛೆಗೆ ಬಾಗಿ ನಡೆಯಬೇಕು. ಈ ಜಗತ್ತಿನಲ್ಲಿ ಜನನ ಮರಣಗಳು ಸಾಮಾನ್ಯ. ಅವು ನಮಗೆ ವಿಶೇಷವಾದುಗಳಲ್ಲ."

ಬದುಕಿನ ನೋವು-ನಲಿವನ್ನು ಸಮಚಿತ್ತದಿಂದ ತೆಗೆದುಕೊಳ್ಳುವ ಮನೋಭಾವ ಈ ಹಾಡಿನಲ್ಲಿದೆ. ಸತ್ತವನ ಆತ್ಮಕ್ಕೆ ಶಾಂತಿ ಸಿಗಲಿ ಎಂಬ ಅಂಶ ಇಲ್ಲಿ ವೇದ್ಯವಾಗುತ್ತದೆ. ಹಾಗೆಯೇ ಸತ್ತವರ ಒಳ್ಳೆಯ ಗುಣ ಮುಂದೆ ಬದುಕಿರುವ ಇತರರಿಗೂ ಮಾದರಿಯಾಗಲಿ ಎಂಬ ಆಶಯವೂ ಇದಾಗಿದೆ.

ಈ ಪೊಲಚಿಪಾಟಿನಲ್ಲಿ ಕೊಡವರ ಆಚಾರ ವಿಚಾರಗಳ ಜೊತೆಗೆ ಸರಳತೆಯ ಸುಂದರ ಗುಣಗಳು ಅಭಿವ್ಯಕ್ತವಾಗುತ್ತವೆ. ಇಂತಹ ಹಾಡುಗಳ ಮೂಲಕ ಕೊಡವರು ಮೂಲ ಸಂಸ್ಕಾರಗಳನ್ನು ಎತ್ತಿಹಿಡಿದಿದ್ದಾರೆ. ಒಟ್ಟಿನಲ್ಲಿ ಕೊಡವರ ಶವ ಸಂಸ್ಕಾರವು ಇತರ ಸಮುದಾಯಗಳ ಶವಸಂಸ್ಕಾರಕ್ಕಿಂತ ಭಿನ್ನವಾಗಿದೆ.

ಕೊನೆ ಟಿಪ್ಪಣಿಗಳು

೧) ಶಿವಾನಂದ ಗುಬ್ಬಣ್ಣನವರ, **ಲಿಂಗಾಯಿತ ಸಂಸ್ಕಾರಗಳು,** ೧೯೮೧, ಪು.೪೨

೨) ಅದೇ ಪು. ೧೬

೩) ಬಿ.ಡಿ ಗಣಪತಿ, **ಕೊಡವರು,** ಪು. ೨೨-೨೪

೪) **ಮನಸ್ಮೃತಿ** ಅ.೨ ಶ್ಲೋಕ ೩೦, ಪುಟ ೨೨೯

೫) ಪಿ.ಎಸ್ ರಾಮನುಜಂ, **ಕೊಡವರು,** ೧೯೭೫, ಪುಟ ೬೮

೬) ಬಿ.ಡಿ.ಗಣಪತಿ, **ಕೊಡವರು,** ಕೊಡಗು ಪ್ರೆಸ್, ಮಡಿಕೇರಿ, ೧೯೬೭, ಪು.೬೮.

೭) ಅದೇ, ಪು.೨೬.

೮) ಪಿ.ಎಸ್.ರಾಮಾನುಜಂ, **ಕೊಡವರು,** ೧೯೭೫, ಪು.೭೦

೯) ಬಿ.ಡಿ.ಗಣಪತಿ, **ಕೊಡವರ ಸಂಪ್ರದಾಯ ಮತ್ತು ಪದ್ಧತಿಗಳು,** ೧೯೬೭, ಪು.೭೭

೧೦) ಅದೇ.

೧೧) ಪಿ.ಎಸ್.ರಾಮಾನುಜಂ, **ಕೊಡವರು,** ಪ್ರಸಾರಂಗ, ಮೈಸೂರು, ೧೯೭೫, ಪು.೭೧.

೧೨) ಬಿ.ಡಿ.ಗಣಪತಿ, **ಕೊಡವರು,** ೧೯೬೭, ಪು.೧೨೩.

೧೩) ಪಿ.ಎಸ್.ರಾಮಾನುಜಂ, **ಕೊಡವರು,** ಪ್ರಸಾರಂಗ, ಮೈಸೂರು, ೧೯೭೫, ಪು.೭೧.

೧೪) ನಡಿಕೇರಿಯಂಡ ಚಿಣ್ಣಪ್ಪ, **ಪಟ್ಟೋಲೆಪಳಮೆ,** ಪ್ರಸಾರಂಗ, ಮೈಸೂರು, ೧೯೭೫, ಪು.೧೩೩.

೧೫) ಬಿ.ಡಿ.ಗಣಪತಿ, ಕೊಡವರು, ೧೯೬೭, ಪು.೭೨.

೧೬) ನಡಿಕೇರಿಯಂಡ ಚಿಣ್ಣಪ್ಪ, **ಪಟ್ಟೋಲೆಪಳಮೆ,** ೧೯೭೫, ಪು.೧೩೬.

೧೭) ಪಿ.ಎಸ್.ರಾಮಾನುಜಂ, **ಕೊಡವರು,** ಪ್ರಸಾರಂಗ, ಮೈಸೂರು, ೧೯೭೫, ಪು.೭೩.

೧೮) ಅದೇ.

೧೯) ಅದೇ ಪು.೭೬

೨೦) **ಮನುಸ್ಮೃತಿ,** ಅಧ್ಯಾಯ-೯, ಶ್ಲೋಕ ೫೯, ಪು.೩೫೦.

೨೧) ಅದೇ ಪು.

೨೨) ಕೆರೋಟಿರ ಶಶಿ, **ನಮ್ಮ ಸಂಸ್ಕೃತಿ,** ಕನ್ನಡ ಸಾಹಿತ್ಯ ಪರಿಷತ್ತು, ೨೦೧೪, ಪು.೨೦

೨೩) ಬಿ.ಡಿ.ಗಣಪತಿ, **ಕೊಡವರು,** ೧೯೬೭, ಪು.೮೦

೨೪) ಅದೇ, ಪು.೮೩

೨೫) ಅದೇ, ಪು.೮೨

೨೬) ಅದೇ, ಪು.೮೪

೨೭) ಅದೇ, ಪು.೮೩

೨೮) ಪಿ.ಎಸ್.ರಾಮಾನುಜಂ, **ಕೊಡವರು,** ಪ್ರಸಾರಂಗ, ಮೈಸೂರು, ೧೯೭೫, ಪು.೮೫

೨೯) ಬಿ.ಡಿ.ಗಣಪತಿ, **ಕೊಡವರು,** ೧೯೬೭, ಪು.೮೫

೩೦) ಪಿ.ಎಸ್.ರಾಮಾನುಜಂ, **ಕೊಡವರು,** ಪ್ರಸಾರಂಗ, ಮೈಸೂರು, ೧೯೭೫, ಪು.೯೦

೩೧) ನಡಿಕೇರಿಯಂಡ ಚಿಣ್ಣಪ್ಪ, **ಪಟ್ಟೋಲೆಪಳಮೆ,** ೧೯೭೫, ಪು.೧೨೬.

೩೨) ಅದೇ, ಪು.೧೫೧

೩೩) ಪಿ.ಎಸ್.ರಾಮಾನುಜಂ, **ಕೊಡವರು,** ಪ್ರಸಾರಂಗ, ಮೈಸೂರು, ೧೯೭೫, ಪು.೧೨೫

೩೪) ಬಿ.ಡಿ.ಗಣಪತಿ, **ಕೊಡವರು,** ೧೯೬೭, ಪು.೧೪೩

೩೫) ಅದೇ.

೩೬) ನಡಿಕೇರಿಯಂಡ ಚಿಣ್ಣಪ್ಪ, **ಪಟ್ಟೋಲೆಪಳಮೆ,** ೧೯೭೫, ಪು.೧೮೦.

೩೭) ಪಿ.ಎಸ್.ರಾಮಾನುಜಂ, **ಕೊಡವರು,** ಪ್ರಸಾರಂಗ, ಮೈಸೂರು, ೧೯೭೫, ಪು.೧೨೫

೩೮) ಬಿ.ಡಿ.ಗಣಪತಿ, **ಕೊಡವರು,** ೧೯೬೭, ಪು.೪೩

೩೯) ನಡಿಕೇರಿಯಂಡ ಚಿಣ್ಣಪ್ಪ, **ಪಟ್ಟೋಲೆಪಳಮೆ,** ೧೯೭೫, ಪು.೧೮೫.

೪೦) ಅದೇ, ಪು.೧೮೮

೪೧) ಅದೇ.

೫ | ಅಧ್ಯಾಯ

ಕೊಡವರ ಧಾರ್ಮಿಕ ವ್ಯವಸ್ಥೆ

ಕೊಡವರ ಧಾರ್ಮಿಕ ಪದ್ಧತಿಗಳಲ್ಲಿ ಅನೇಕ ವೈಶಿಷ್ಟ್ಯಗಳಿವೆ. ಇವರಲ್ಲಿ ಯಾವುದೇ ಮಠಗಳಾಗಲಿ, ಗುರುಗಳಾಗಲಿ ಕಂಡು ಬರುವುದಿಲ್ಲ. ಹಾಲೇರಿ ಮನೆತನದ ಕಾಲದಲ್ಲಿ ಅವರು ಕೊಡಗಿನಲ್ಲಿದ್ದ ೨೧೨ ಲಿಂಗಾಯಿತ ಮಠಗಳ ಗುರುಗಳ ನಿರ್ದೇಶನದ ಕೆಳಗೆ ಬರದೆ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿದ್ದಾರೆ. ಯಾವ ಗುರುವನ್ನೂ ತಮಗಾಗಿ ಇಟ್ಟುಕೊಳ್ಳದೆ ಯಾವ ಧಾರ್ಮಿಕ ಪದ್ಧತಿಗಳಿಗೂ ಗುರುವಿನ ಆಸರೆ ಪಡೆಯದೆ ನಡೆದುಕೊಂಡು ಬಂದಿದ್ದಾರೆ. ಕೊಡವರ ಧಾರ್ಮಿಕ ಪದ್ಧತಿಗಳ ಮೇಲೆ ಕೇರಳದ ಪ್ರಭಾವವಿರುವುದನ್ನು ಕಾಣಬಹುದು. ಪರ್ವತ ಪ್ರದೇಶದ ಏಕಾಂತತೆಯಲ್ಲಿ ಮತ್ತು ಹೊರಗಿನವರ ಸಂಪರ್ಕದಲ್ಲಿ, ವೃತ್ತಿ ವಾತಾವರಣದ ಪ್ರಭಾವದಲ್ಲಿ ಕೆಲವು ಧಾರ್ಮಿಕ ವಿಧಿಗಳು ಸಂಪೂರ್ಣ ನಾಶವಾಗಿವೆ. ಸುತ್ತಮುತ್ತಲಿನ ಇತರ ವಿವಿಧ ಪಂಗಡಗಳ ಜನರ ಸಂಪರ್ಕದಿಂದ ಆಯಾಯ ಪದ್ಧತಿಗಳು ತಮ್ಮ ಪ್ರಭಾವವನ್ನು ಬೀರಿವೆ. ಕೊಡವರು ಪ್ರಕೃತಿಯನ್ನು ದೇವರೆಂದು ನಂಬಿದ್ದಾರೆ. ಕೊಡವರಲ್ಲಿ ಮಾತೃವಿಗೆ ಪ್ರಮುಖ ಸ್ಥಾನಮಾನ. ಅದ್ದರಿಂದಲೇ ಕಾವೇರಿಯು ಮಾತೃದೇವತೆಯಾಗಿದೆ. ಹರಪ್ಪನಾಗರಿಕತೆ, ಮೊಹೆಂಜೊದಾರೋ, ಈಜಿಪ್ಟ್ ನಾಗರಿಕತೆಯಲ್ಲಿ ಪ್ರಕೃತಿಯನ್ನು ಶಕ್ತಿಯ ಮೂಲವೆಂದು ಪೂಜಿಸುತ್ತಿದ್ದರು. ಸೂರ್ಯ, ನದಿಮೂಲವನ್ನು ಆರಾಧಿಸುತ್ತಿದ್ದರು. ಈ ಪ್ರಭಾವ ಕೊಡವರಲ್ಲಿ ಮುಂದುವರೆದಿರಬಹುದಾಗಿದೆ.

ಕೊಡವರ ಪ್ರತಿಯೊಂದು ಕೆಲಸಕಾರ್ಯಗಳು ಕಾವೇರಿ ಮಾತೆಯ ಪ್ರಾರ್ಥನೆಯಿಂದ ಪ್ರಾರಂಭಗೊಂಡು, ಕಾವೇರಿ ಸ್ತುತಿಯಲ್ಲೇ ಅಂತ್ಯವನ್ನು ಕಾಣುತ್ತವೆ.

ಶ್ರೀ ಕಾವೇರಿ ಮಾತೆಯ ನಂಬಿಕೆ ಆಚರಣೆಗಳು

ಪ್ರಪಂಚದ ಎಲ್ಲಾ ಧರ್ಮಗಳಲ್ಲಿಯೂ ಧಾರ್ಮಿಕ ಆಚರಣೆಗಳಿವೆ. ಇಂದಿಗೂ ಈ ಆಚರಣೆಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಹಿಂದೂ ಧರ್ಮದಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಆಚರಣೆಗಳಿಗೆ ವಿಶಿಷ್ಟವಾದ ಮಹತ್ವವನ್ನು ನೀಡಲಾಗಿದೆ. ಇತರ ಧರ್ಮಗಳಲ್ಲಿ ಕೆಲವು ಆಚರಣೆಗಳನ್ನು ಆ ಧರ್ಮದವರು ಕಡ್ಡಾಯವಾಗಿ ಮಾಡಲೇಬೇಕೆಂದು ನಿರ್ಬಂಧವಿರುತ್ತದೆ. ಅದಕ್ಕಾಗಿ ನಿರ್ದಿಷ್ಟ ದಿನ ಹಾಗೂ ಸಮಯವನ್ನು ಗೊತ್ತುಪಡಿಸಲಾಗಿರುತ್ತದೆ. ಹಿಂದೂ ಧರ್ಮದಲ್ಲಿ ಅಂತಹ ಕಟ್ಟುಪಾಡುಗಳಿಲ್ಲ. ಇಲ್ಲಿ ಮುಕ್ತವಾಗಿ ದೇವರ ದರ್ಶನ, ಪೂಜೆ, ಪುನಸ್ಕಾರಗಳನ್ನು, ಹಬ್ಬ ಹರಿದಿನಗಳಲ್ಲಿ ಎಲ್ಲರೂ ಸೇರಿ ಜಾತ್ರೆ ಉತ್ಸವಗಳನ್ನು ಆಯಾ ಕ್ಷೇತ್ರಗಳಲ್ಲಿ ಸ್ವಯಂ ಪ್ರೇರಿತರಾಗಿ ಮಾಡುತ್ತಾರೆ.

ಯಾವುದೇ ಒಂದು ಕ್ಷೇತ್ರದ ಚಾರಿತ್ರಿಕ ಘಟನೆಗಳನ್ನು ಕಟ್ಟಿಕೊಡಲು ಲಿಖಿತ ಆಧಾರಗಳನ್ನು ಒದಗಿಸಿಕೊಡುವುದರ ಜೊತೆಗೆ ಪುರಾಣಗಳಿಂದಲೂ ಮಾಹಿತಿ ಒದಗಿಸಬಹುದು. ಪುರಾಣ ರಚನೆಯು ಒಂದು ಸೃಜನಶೀಲ ಪ್ರಕ್ರಿಯೆ. ಲಿಖಿತ ಆಧಾರಗಳನ್ನು ಸಂಗ್ರಹಿಸಿ, ರಕ್ಷಿಸುವವರು ಕಡಿಮೆ ಇರುವುದರಿಂದ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಲ್ಲಿಯ ನಿವಾಸಿಗಳು ದೇವರುಗಳ ಬಗ್ಗೆ ಧಾರ್ಮಿಕ ಕಥೆಗಳ ರೂಪದಲ್ಲಿ ತಮ್ಮ ಕಲ್ಪನೆಗೆ ನಿಲುಕಿದಂತೆ, ಭಕ್ತಿ ಭಾವನೆಗಳು ಮೂಡುವಂತೆ ಅಲ್ಲಿಯ ಪವಿತ್ರ ಕ್ಷೇತ್ರದ ಬಗ್ಗೆ ಪುರಾಣಗಳನ್ನು ನಿರೂಪಿಸುತ್ತಾರೆ.

ಭೂಲೋಕವೆಂಬ ಈ ಚಿಕ್ಕ ಗ್ರಹದ ಜೀವಿಗಳಾಗಿರುವ ನಾವು, ನಮ್ಮ ಪರಂಪರೆ, ಚರಿತ್ರೆ, ತತ್ವಜ್ಞಾನ, ಸಾಹಿತ್ಯ, ಸಂಸ್ಕೃತಿ, ಕಲೆವಿದ್ಯೆ, ವಿಜ್ಞಾನ ಮತಧರ್ಮಗಳಿಂದ ಯಾವ ಶಕ್ತಿಯನ್ನು ಪಡೆದಿರುತ್ತೇವೆಯೋ ಹಾಗೆಯೇ ನಮ್ಮ ದೇವಸ್ಥಾನ, ಮಸೀದಿ, ಮಂದಿರ, ಇಗರ್ಜಿ ಗುರುದ್ವಾರಗಳಲ್ಲಿ ಯಾರನ್ನು ಪೂಜಿಸುತ್ತೇವೋ, ಮತ್ತು ನಮ್ಮ ಜಪ, ತಪ, ಅರ್ಚನೆ, ಪೂಜೆ, ಪ್ರಾರ್ಥನೆಗಳಿಂದ ಯಾರನ್ನು ಪಡೆಯಲು ಬಯಸಿರುವೆವೋ ಯಾವ ಶಕ್ತಿ ಹಿರಿದು, ಕಿರಿದು ಚರಾಚರ ವಸ್ತುವಿನ್ಯಾಸಗಳೆಲ್ಲದರಲ್ಲೂ ಬಿಂಬಿತವಾಗಿ ಏಕವೂ ಅನೇಕವೂ, ವೈವಿಧ್ಯ ಪೂರ್ಣವೂ ವಿಸ್ಮಯಕರವೂ ಆದ ಈ ಸೃಷ್ಟಿ ಎನಿಸಿರುವುದೋ ಆ ವಿಶ್ವಚೇತನ ,ಜಗತ್ ಶಕ್ತಿ, ಜಗನ್ಮಾತೆಯಾದ ಕಾವೇರಿ, ಕೊಡವರ ಕುಲದೇವತೆಯಾಗಿದ್ದಾಳೆ. ಕಾವೇರಿ ಮಾತೆಯು ಲೌಕಿಕ ದೃಷ್ಟಿಯಿಂದ ಸರ್ವೋಪಕಾರಿಣಿ, ಸದಾ ದಾನಶೀಲೆಯಾಗಿ ಕಂಗೊಳಿಸಿದ್ದಾಳೆ. ಆಧ್ಯಾತ್ಮಿಕ ದೃಷ್ಟಿಯಿಂದ ಭವತಾರಿಣಿ, ಭದ್ರಂಕರಿ, ಭಗವತಿ ಎಂಬುದಾಗಿ ಬೆಳಗುತ್ತಿದ್ದಾಳೆ.

ಕಾವೇರಿ ಬಹು ಪುರಾತನ ಕಾಲದಿಂದಲೂ ಜನಮನದಲ್ಲಿ ನೆಲೆಸಿದ್ದಾಳೆ. ಅಸಂಖ್ಯಾತ ಭಕ್ತರು ಸ್ನಾನ ಪೂಜೆಗಳನ್ನು ಮಾಡಿ 'ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ! ನರ್ಮದೇ ಸಿಂಧು, ಕಾವೇರಿ ಜಲೆ ಅಸ್ಮಿನ್ ಸನ್ನಿಧಿಂ ಕುರು" ಎಂದು ಪ್ರಾರ್ಥಿಸುತ್ತಾರೆ. ಕಾವೇರಿಯ ಸ್ಮರಣೆಯಿಂದ ಸಕಲ ಪಾಪ ನಿವಾರಣೆಯಾಗುತ್ತೆಂದು ನಂಬಿ, ಭಕ್ತರು ತಮ್ಮ ಬಾಳಿನಲ್ಲಿ ಕಾವೇರಿಯ ಮಹಿಮೆಯನ್ನು ಕಂಡು ಧನ್ಯರಾಗಿದ್ದಾರೆ.

ಕಾವೇರಿಯು ಸಂಪತ್ತಿನ ವರಲಕ್ಷ್ಮಿಯಾಗಿ, ಲಕ್ಷಾಂತರ ಎಕರೆ ಬಂಜರು ಭೂಮಿಯನ್ನು ಫಲವತ್ತಾಗಿಸಿದ್ದಾಳೆ. ಕಾವೇರಿಯ ಜಲದಿಂದ ವಿದ್ಯುತ್ ಬೆಳಕು ಹರಿದು ಮನೆ ಮನೆಗಳಲ್ಲಿ ಬಂಗಾರದ ನದಿಯಾಗಿ ಪ್ರಸಿದ್ಧಿ ಪಡೆದಿದ್ದಾಳೆ. ಬ್ರಹ್ಮಗಿರಿಯ ತಪ್ಪಲಿನಲ್ಲಿ ಮೈ ತಳೆದು ನಿಂತ ಕಾವೇರಿ ಕವೇರ ಮುನಿಗಳ ಮಗಳಾಗಿ ಬೆಳೆದು, ಬ್ರಹ್ಮಗಿರಿಯಲ್ಲಿ ಅಗಸ್ತ್ಯರನ್ನು ವರಿಸಿ ಲೋಕ ಕಲ್ಯಾಣಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡಬೇಕೆಂದು ಬಯಸಿದ ಕಾವೇರಿ ಮುಂದೆ ಎರಡು ರೂಪಗಳನ್ನು ತಳೆದಿದ್ದಾಳೆ. 'ಲೋಪಾಮುದ್ರೆ' ಯಾಗಿ, ಅಗಸ್ತ್ಯರ ಪತ್ನಿಯಾಗಿ ಉಳಿದ ಕಾವೇರಿ ನದಿಯಾಗಿ ಹರಿದು 'ಲೋಕಪಾವನೆ' ಎಂದು ಪ್ರಖ್ಯಾತಳಾಗಿದ್ದಾಳೆ.

ಕೊಡವರ ಕುಲದೇವತೆ, ನಾಡದೇವತೆಯಾದ ಕಾವೇರಿ ಬ್ರಹ್ಮಕುಂಡಿಕೆಯಿಂದ ನದಿರೂಪ ತಳೆದು ಹರಿಯುತ್ತಾ 'ಬಲಮುರಿ' ಎಂಬ ಊರನ್ನು ತಲುಪಿದ

ಸಂದರ್ಭದಲ್ಲಿ ಕೊಡಗಿನ ಕದಂಬ ವಂಶದ ರಾಜನಾದ ದೇವಕಾಂತರಾಜ ಮತ್ತು ಭಕ್ತರು ಕಾವೇರಿಯನ್ನು ಎದುರುಗೊಂಡು ಸ್ತುತಿಸಿ ಅಡ್ಡಗಟ್ಟಿದಾಗ, ನದಿಯ ನೀರು, ಹರಿಯುವ ರಭಸದಿಂದಾಗಿ ಅಲ್ಲಿ ನೆರದಿದ್ದ ಸ್ತ್ರೀಯರ ನರಿಗೆಗಳು ಹಿಂದೆ ಸರಿದವು. ತಾನು ನದಿಯಾಗಿ ಹರಿದುದರ ನೆನಪಿಗಾಗಿ ನಿತ್ಯ ಜೀವನದಲ್ಲಿ ಈ ಭಾಗದ ನಾರಿಯರು ಅದೇ ರೀತಿ 'ಹಿಂದೆ ನೆರಿಗೆ' ಜೋಡಿಸಿ ಉಡುಪು ಧರಿಸಲೆಂದು ಹರಿಸಿದ ಪರಿಣಾಮವಾಗಿ ಕೊಡವ ಮಹಿಳೆಯರು ಇಂದಿಗೂ ಹಿಂದಕ್ಕೆ ನೆರಿಗೆ ಇಟ್ಟು ಸೀರೆ ಉಡುವ ಪದ್ಧತಿ ಮುಂದುವರೆದಿರಬಹುದು. ಪೌರಾಣಿಕವಾಗಿ ಬೆಳೆದು ಬಂದ ಕಥಾಪರಂಪರೆ ಇದು.

ಶ್ರೀ ಕಾವೇರಿ ಕೊಡವರ ಗೃಹದೇವತೆ ಮಾತ್ರವಲ್ಲ, ಸರ್ವ ಜೀವಕೋಟಿಯ ಆಧಾರ ಮೂರ್ತಿ ವಿಶ್ವಮಾತೆಯಾಗಿದ್ದಾಳೆ. ಆಕೆಯನ್ನು ವಿಶ್ವ ರಚನೆಯ ಆದಿಶಕ್ತಿಯಾಗಿ ಚಿತ್ರಿಸಲಾಗಿದೆ. ಸೃಷ್ಟಿ ಶಕ್ತಿ ಸ್ತ್ರೀ ಪ್ರತೀಕವಾದುದು. ಈ ಸ್ತ್ರೀ ಪ್ರತೀಕವನ್ನು ಗುರುತಿಸಿ ಜಗನ್ಮಾತೆಯೆಂದು ಕರೆಯಾಲಾಗಿದೆ. ವ್ಯಕ್ತಿ ರೂಪದಲ್ಲಿ ಎಲ್ಲರಂತೆ ಹುಟ್ಟಿದ ಕಾವೇರಿ ಜೀವನದಾಯಕ, ಸರ್ವ ಪೋಷಕ ನದಿಯಿಂದ ಜ್ಞಾನ ಪಡೆದು ನದಿಯಲ್ಲೇ ಲೀನಳಾಗಿ ನದಿರೂಪದಲ್ಲಿ ಅಮರಳಾಗಿರುವ, ಕಲ್ಪನೆಯಲ್ಲಿ ವೈದಿಕ ಧರ್ಮದ ಸಾರಸರ್ವಸ್ವವಿದೆ. ಇಲ್ಲಿ ಚಿತ್ರಿತವಾಗಿರುವ ಪೌರಾಣಿಕ ಕಥೆ ಕಾವೇರಿಯ ವ್ಯಕ್ತಿತ್ವದಲ್ಲಿ ವೈಜ್ಞಾನಿಕವಾದ ,ತರ್ಕ ಸಮ್ಮತವಾದ ಹೊಸತನವಿರುವಂತೆ ಹಿಂದಿನ ಪೌರಾಣಿಕ ಕಾವೇರಿಯ ಕಥೆಯೂ ಮಾರ್ಪಡುಗೊಂಡಿದೆ. ಈ ಮಾರ್ಪಡು ಹಿಂದಿನ ಪೌರಾಣಿಕ ಕಥೆಗೆ ಅಪಚಾರ ಮಾಡುವ ಉದ್ದೇಶದಿಂದಲ್ಲ.ಬದಲಾಗಿ ಇಂದಿನ ಆಧುನಿಕ ವ್ಯವಸ್ಥೆಯ ದೃಷ್ಟಿಕೋನಕ್ಕೆ ಸಂಗತವಾಗಿರಬೇಕೆಂದಾಗಿದೆ.

ಕಾವೇರಿಯನ್ನು ಕುರಿತ ಕಥೆ ಇಂತಿದೆ

ಬ್ರಹ್ಮನ ವರಪುತ್ರಿಯಾದ ಕಾವೇರಿ ಸಾಮಾನ್ಯ ಮಾನವ ಜೀವಿಯಂತೆ ಜನ್ಮತಾಳಿ ಕವೇರನ ಮಗಳಾಗುತ್ತಾಳೆ. ಇತರ ಮಕ್ಕಳಂತೆಯೇ ತಂದೆಯ ಮಾರ್ಗದರ್ಶನದಿಂದ ತೃಪ್ತಳಾಗದೆ ಸ್ವತಂತ್ರ ದಾರಿ ತುಳಿಯುತ್ತಾಳೆ. ಜೀವನದ ಅರ್ಥವನ್ನು ತಿಳಿಯುವ ಉದ್ದೇಶದಿಂದ ಸರ್ವತ್ಯಾಗ ಮಾಡಿ ಧಾರ್ಮಿಕ ಸಂಪ್ರದಾಯದಂತೆ ಸನ್ಯಾಸಿಯಾಗಿ ದೇಹ ದಂಡನೆ ಮಾಡುತ್ತಾಳೆ.

ಕಾವೇರಿಗೆ ಸ್ವಂತ ಪ್ರಯತ್ನದಿಂದ ತನ್ನ ಕಾಲ ಮೇಲೆ ತಾನು ನಿಲ್ಲಬೇಕೆಂಬ ಅರಿವು ಮೂಡುತ್ತದೆ. "ಬೋಧನೆಗಳಿಗೂ, ಕ್ರಿಯಾತ್ಮಕ ಅನುಭವಕ್ಕೂ ಇರುವ ಅಂತರವನ್ನು ಅರಿತು ಯಾರು ಯಾರಿಗೂ ಅನುಭವವನ್ನು, ಜೀವನದ ಪ್ರತ್ಯಕ್ಷ ಜ್ಞಾನವನ್ನು ನೀಡಲಾರರು ಎಂಬ ಹಳೆಯದನ್ನು ತೀರ್ಮಾನಕ್ಕೆ ಬರುತ್ತಾಳೆ. ಮಾತ್ರವಲ್ಲ ಭೂತಕಾಲದ ಕಳೆದುಹೋದ ಅಪ್ಪಿಹಿಡಿದು ಬರಲಿರುವ ಅನಿಶ್ಚಿತ ಭವಿಷ್ಯವನ್ನು ಆಶಿಸಿ ಜೀವಿಸುವುದು ಬದುಕಲ್ಲ. ಪ್ರಕೃತ ವರ್ತಮಾನದಲ್ಲಿ ತನ್ಮಯಳಾಗಿ ಬಾಳುವುದೇ ಜೀವನ, ಅದೇ ಬಾಳಿನ ಮಾಹಾಗೋಪುರದ ಇಟ್ಟಿಗೆಯೆಂಬ ತತ್ವವನ್ನು ಬದುಕಿ ತೋರುತ್ತಾಳೆ"[೧]

ತಲಕಾವೇರಿ ಕ್ಷೇತ್ರ

ಕೊಡಗಿನ 'ಬ್ರಹ್ಮಗಿರಿ' ಬೆಟ್ಟ ಸಮುದ್ರ ಮಟ್ಟದಿಂದ ಅತ್ಯಂತ (೧೪೮೦ ಮೀಟರ್ ೪೪೪೦ ಅಡಿ) ಎತ್ತರದಲ್ಲಿದೆ. ಈ ಕ್ಷೇತ್ರವು ಹೆಚ್ಚು ಸಸ್ಯ ಸಂಪತ್ತಿನಿಂದ ಕೂಡಿದ್ದು, ದಟ್ಟವಾದ ಅರಣ್ಯವನ್ನು ಹೊಂದಿದೆ. ವರ್ಷದಲ್ಲಿ ಆರು ತಿಂಗಳು ಮಳೆ ಬೀಳುವ ಈ ಭಾಗದಲ್ಲಿ ಮಳೆ, ಚಳಿಯ ಜೊತೆ ಸಮಶೀತೋಷ್ಣದಿಂದ ಕೂಡಿರುವ ಭೌಗೋಳಿಕ ಲಕ್ಷಣಗಳನ್ನು ನದಿಗಳ ಉಗಮಕ್ಕೂ ಕಾರಣವಾಗಿದೆ.

ಬ್ರಹ್ಮಗಿರಿಯ ತಳಭಾಗದಲ್ಲಿ ಕಾವೇರಿ ನದಿಯ ಉದ್ಭವಿಸುವ ಈ ಕ್ಷೇತ್ರವನ್ನು ತಲಕಾವೇರಿ ಎಂದು ಕರೆಯಲಾಗುತ್ತದೆ. ಕ್ಷೇತ್ರದ ಸಮತಟ್ಟಾದ ಭೂಪ್ರದೇಶದಲ್ಲಿ ಕೆಲವು ದೇವಾಲಯಗಳು ಅಶ್ವಥ ವೃಕ್ಷ ಕಂಡುಬರುತ್ತವೆ. ಈ ಭಾಗದಲ್ಲಿ ಕಂಡುಬರುವ ಧಾರ್ಮಿಕ ಸ್ಥಳವನ್ನು ಕಾವೇರಿಯ 'ತೀರ್ಥಸ್ನಾನದ ಕೊಳ' (ತೀರ್ಥಸರೋವರ) ಎನ್ನುವುದು. ಕೊಳದ ಪಶ್ಚಿಮ ಭಾಘಕ್ಕೆ ಒಂದು ಅಡಿ ಅಗಲ, ಒಂದು ಅಡಿ ಉದ್ದದ ಇನ್ನೊಂದು ಪುಟ್ಟ ಕೊಳವಿದೆ. ಇದನ್ನು ನದಿಯ 'ಮೂಲಸ್ಥಾನ' (ಬ್ರಹ್ಮಕುಂಡಿಕೆ) ಎಂದು ಕರೆಯುತ್ತಾರೆ. ಪಶ್ಚಿಮಕ್ಕೆ ಮೆಟ್ಟಿಲುಗಳನ್ನು ಹತ್ತಿ ಸಾಗಿದರೆ ಎಡಭಾಗದಲ್ಲಿ ಗಣಪತಿ ದೇವಸ್ಥಾನ ಅದರ ಹಿಂದೆ ಚಾಮುಂಡೇಶ್ವರಿ, ಬಲಭಾಗದಲ್ಲಿ ಅಗಸ್ತ್ಯರಿಂದ ಸ್ಥಾಪಿಸಲ್ಪಟ್ಟ ಶಿವನ ದೇವಾಲಯವಿದೆ. ಅದರ ಮುಂದೆ ಅಶ್ವಥ್ಥ ವೃಕ್ಷವಿದ್ದು, ಉತ್ತರದಲ್ಲಿ ಎತ್ತರವಾದ ಬ್ರಹ್ಮಗಿರಿ ಪರ್ವತ ಕಂಡುಬರುತ್ತದೆ.

"ಬ್ರಹ್ಮಗಿರಿ ಬೆಟ್ಟದ ಪೂರ್ವಕ್ಕೆ ಮೈಸೂರು ಜಿಲ್ಲೆ, ಪಶ್ಚಿಮದಲ್ಲಿ ಕೇರಳ ರಾಜ್ಯ ಕಾಣುತ್ತದೆ. ಬ್ರಹ್ಮಗಿರಿಯನ್ನು 'ಮೂಡ್ಯಗಿರಿ' ಎಂದೂ ಕರೆಯುತ್ತಾರೆ. ಇಲ್ಲಿ ಅಗಸ್ತ್ಯ ಮಹರ್ಷಿಗಳು ಶಿವನನ್ನು ತಪಸ್ಸುಮಾಡಿ ಸ್ಥಾಪಿಸಿದ ಶ್ರೀ ಅಗಸ್ತ್ಯರ (ಶಿವಲಿಂಗ) ದೇವಾಲಯ , ಹಾಗೂ ಅಗಸ್ತ್ಯ ಮುನಿಗಳು ನೀರು ಪಡೆಯಲು ಮಾಡಿದ ಅಗಸ್ತ್ಯಕುಂಡವಿದೆ. ಕಾವೇರಿಯ ಮೂಲಸ್ಥಾನದ ಪಕ್ಕದಲ್ಲಿ ಇರುವ ಅಶ್ವತ್ಥ ಸ್ಥಳವನ್ನು ವೃಕ್ಷವನ್ನು 'ಅಶ್ವಥನಾರಾಯಣ ಕಟ್ಟೆ' ಎಂದೂ ಕರೆಯುತ್ತಾರೆ. ಇದು ಈ ಕ್ಷೇತ್ರದ ಅತ್ಯಂತ ಪ್ರಾಚೀನ 'ಅಶ್ವತ್ಥ ವೃಕ್ಷ'ವಾಗಿದೆ. ಅಗಸ್ತ್ಯ ಮುನಿಗಳಿಗೆ ತ್ರಿಮೂರ್ತಿಗಳ ದರ್ಶನವಾದದ್ದು, ಈ ವೃಕ್ಷದ ಕೆಳಗೆ ಎಂಬುದಾಗಿ ಧಾರ್ಮಿಕ ಕಥೆಗಳಿವೆ."[೨]

ಈ ಕ್ಷೇತ್ರದಲ್ಲಿ ಅಗಸ್ತ್ಯ ಮುನಿಗಳು ಮರಳಿನಿಂದ ಲಿಂಗ ಪ್ರತಿಷ್ಠಾಪನೆ ಮಾಡಿದುದರಿಂದ ಇದನ್ನು ಅಗಸ್ತ್ಯೇಶ್ವರ ಲಿಂಗವೆಂದು ಕರೆಯುತ್ತಾರೆ. ಉತ್ತರಭಾರತದಿಂದ ತಪೋವನಕ್ಕೆ ಬಂದ ಅಗಸ್ತ್ಯರು ಶಿವ ಭಕ್ತರಾಗಿದ್ದರು. ಅವರನ್ನು ವಿವಾಹವಾದ ಕಾವೇರಿಯು ಪರಮೇಶ್ವರನ ಭಕ್ತಳಾಗಿದ್ದಳು. ಕಾವೇರಿ ತಾನು ನದಿಯಾಗಿ ಹರಿಯುವ ಸ್ಥಳದಲ್ಲೆಲ್ಲಾ ಶಿವನದರ್ಶನ ಮಾಡಲು ಹಾಗೂ ದೇವರ ಪಾದ ತೊಳೆಯಲು ದೇವಾಲಯಗಳನ್ನು ಪ್ರತಿಷ್ಠಾಪಿಸುವಂತೆ ಅಗಸ್ತ್ಯರಿಂದ ವಚನ ಪಡೆದಳಂತೆ. ಅದರಂತೆ ಹಿಂಬಾಲಿಸಿದ ಅಗಸ್ತ್ಯರು ನದಿಯ ತೀರದಲ್ಲಿ ಅವರು ಉಳಿದುಕೊಂಡ ಕಡೆಯಲೆಲ್ಲಾ ಶಿವಲಿಂಗವನ್ನು ಪ್ರತಿಷ್ಠಾಪನೆ ಮಾಡಿರ ಬಹುದಾಗಿದೆ.

ಕಾವೇರಿಯ ಉಗಮ ಸ್ಥಾನ

ವಿಶಾಲವಾದ ತೀರ್ಥಕೊಳದ ಪಶ್ಚಿಮದ ವಾಯುವ್ಯ ದಿಕ್ಕಿನಲ್ಲಿ ಸುಮಾರು ಒಂದು ಅಡಿ ಅಗಲ, ಒಂದು ಅಡಿ ಉದ್ದದ ಒಂದು ಪುಟ್ಟ ಕೊಳವಿದೆ. ಇದನ್ನು 'ಬ್ರಹ್ಮಕುಂಡಿಕೆ' ಎಂದು ಕರೆಯುತ್ತಾರೆ. ಈ ಸ್ಥಳವೇ ಕಾವೇರಿ ನದಿ ಹುಟ್ಟುವ ಮೂಲ ಸ್ಥಾನ.

ಹಿಂದೆ ಅಗಸ್ತ್ಯ ಮಹರ್ಷಿಗಳು ತಮ್ಮ ವಿವಾಹದ ಸಂದರ್ಭದಲ್ಲಿ ತಾನು ಮೂರು ನಿಮಿಷಗಳು ನಿನ್ನನ್ನು ಬಿಟ್ಟಿರುವುದಿಲ್ಲವೆಂಬ ವಚನವನ್ನು ಕಾವೇರಿಗೆ ನೀಡುತ್ತಾರೆ. ಅದರಂತೆ ಒಂದು ದಿನ ಸಂಧ್ಯಾವಂದನೆಗೆಂದು ಹೋಗುವಾಗ ಕಾವೇರಿಯನ್ನು ಜಲವಾಗಿ ಪರಿವರ್ತಿಸಿ ತಮ್ಮ ಕಮಂಡಲದಲ್ಲಿಟ್ಟು ಶಿಷ್ಯ ವೃಂದದವರಿಗೆ ತಿಳಿಸಿ ಹೊರಡುತ್ತಾರೆ. ಜಲವಾಗಿ ಪರಿವರ್ತನೆಗೊಂಡಿದ್ದ ಕಾವೇರಿ ಇದೇ ಸೂಕ್ತ ಸಮಯವೆಂದು ತಿಳಿದು ಬ್ರಹ್ಮ ಮೂಹೂರ್ತದ ಶುಭಸಂದರ್ಭದಲ್ಲಿ ಲೋಕ ಕಲ್ಯಾಣಕ್ಕಾಗಿ ಹರಿಯಲು ನಿಶ್ಚಯಿಸಿ ಕಮಂಡಲದಿಂದ ಹೊರಬಂದು ಈ ಕೊಳದಲ್ಲಿ ನದಿಯಾಗಿ ಹರಿಯಲು ಪ್ರಾರಂಭಿಸುತ್ತಾಳೆ. ಆದ್ದರಿಂದ ಈ ಕ್ಷೇತ್ರವನ್ನು ಬ್ರಹ್ಮ ಕುಂಡಿಕೆ (ಮೂಲಸ್ಥಾನ) ಎಂದು ಕರೆಯುತ್ತಾರೆ.

ಬ್ರಹ್ಮ ಕುಂಡಿಕೆಯಿಂದ ಉದ್ಭವಿಸಿದ ಕಾವೇರಿಯು ಹರಿದು ಹರಡಿರುವ ಕೊಳವನ್ನು 'ತಿರ್ಥ ಸರೋವರ' ಎಂದು ಕರೆಯುತ್ತಾರೆ. ತುಲಾಮಾಸದ ಪ್ರಾರಂಭದ ಮೂರು ದಿನಗಳು ಇಲ್ಲಿ ವಿಶೇಷ ತೀರ್ಥ ಸ್ನಾನವಿರುತ್ತದೆ.

ತುಲಾಮಾಸದಲ್ಲಿ ಕಾವೇರಿ ನದಿ ಸಪ್ತನದಿಗಳಲ್ಲೇ ಶ್ರೇಷ್ಠವಾದ ಗಂಗಾ ನದಿಯೊಡನೆ ಸಮ್ಮಿಲನವಾಗಿ ಉದ್ಭವವಾಗುವುದರಿಂದ ತುಲಾ ಸಂಕ್ರಮಣವು (ಕಾವೇರಿ ಸಂಕ್ರಮಣ) ಕೊಡಗಿನಲ್ಲಿ ಬಹಳ ವಿಶೇಷವಾಗಿರುತ್ತದೆ. ಈ ಕೊಳದಲ್ಲಿ ತೀರ್ಥಸ್ನಾನ ಮಾಡಿದರೆ ಪಾಪ ಪರಿಹಾರವಾಗಿ ಪುಣ್ಯ ಲಭಿಸುತ್ತದೆಂಬ ನಂಬಿಕೆ ಇದೆ. ತುಲಾ ಮಾಸದ ಕಾವೇರಿ ಸಂಕ್ರಮಣದಂದು ಭಕ್ತರು ಪವಿತ್ರ ಕೊಳದಲ್ಲಿ ಸ್ನಾನ ಮಾಡಿ, ತೀರ್ಥವನ್ನು ತೆಗೆದುಕೊಂಡು ಹೋಗುತ್ತಾರೆ.

ಕೊಡಗಿನ ಜನರ ಸಾಂಸ್ಕೃತಿಕ, ಧಾರ್ಮಿಕ ಹಾಗೂ ಆರ್ಥಿಕ ಬದುಕಿಗೆ ಆಧಾರವಾಗಿರುವ 'ಕಾವೇರಿ ನದಿ' ಯನ್ನು ಜೀವನದಿಯಾಗಿ ಪರಿಗಣಿಸಿ ಅದಕ್ಕೆ ದೇವತೆಯ ಸ್ಥಾನ ನೀಡಿ ಪೂಜಿಸಿ ಗೌರವಿಸುವುದನ್ನು ನಾವು ಇಲ್ಲಿ ಕಾಣಬಹುದು.

ಶ್ರೀ ಕಾವೇರಿ ಮಾತೆಯ ಧಾರ್ಮಿಕ ಹಿನ್ನೆಲೆ

ಭಾರತದ ವಿಂದ್ಯ ಪರ್ವತಗಳು ದಿನೇ ದಿನೇ ಬೆಳೆಯುತ್ತಾ ಹೋದಂತೆ ಇತ್ತ ದಕ್ಷಿಣ ಪ್ರಸ್ಥಭೂಮಿ ವಾಲುತ್ತಾ ಸಮುದ್ರದೊಳಗೆ ಮುಳುಗುವುದನ್ನು ಕಂಡ ದೇವಾನುದೇವತೆಗಳು ಸಮಾಲೋಚನೆ ಈ ಪರ್ವತಗಳ ಬೆಳವಣಿಗೆಯನ್ನು ತಡೆಯಲು ಭೂಮಂಡಲದ ಅಗಸ್ತ್ಯ ಮಹರ್ಷಿಗಳು ಸಮರ್ಥರು ಎಂದು ತಿಳಿದು ಅವರು ಉತ್ತರದ ಹಿಮಾಲಯದಿಂದ ದಕ್ಷಿಣದ ಕಡೆಗೆ ಪ್ರಯಾಣಿಸಬೇಕು ಎಂಬುದಾಗಿ ಹೇಳುತ್ತಾರೆ. ದೈವಲೀಲಾನುಸಾರವಾಗಿ ಅಗಸ್ತ್ಯರು ಉತ್ತರ ಭಾರತದಿಂದ ದಕ್ಷಿಣದ ಕಡೆಗೆ ಹೋಗುವ ಸಂದರ್ಭದಲ್ಲಿ ವಿಂದ್ಯಾಪರ್ವತವನ್ನು ಹಾದು ಹೋಗಲು ಸಾಧ್ಯವಾಗದೆ ಪರ್ವತ ರಾಜನಿಗೆ ನಮಸ್ಕರಿಸಿ ನಾನು

ದಕ್ಷಿಣಭಾರತದ ಕಡೆಗೆ ತೀರ್ಥಯಾತ್ರೆಗೆಂದು ಹೋಗುತ್ತಿದ್ದೇನೆ; ನಾನು ಬರುವರೆಗೆ ನೀನು ಬೆಳೆಯಬಾರದು ಎಂಬುದಾಗಿ ವಚನ ಪಡೆದು ದಕ್ಷಿಣದ ಕಡೆಗೆ ಪ್ರಯಾಣ ಬೆಳೆಸುತ್ತಾರೆ.

"ಬ್ರಹ್ಮಗಿರಿ ಬೆಟ್ಟದಲ್ಲಿ 'ಕವೇರ'ನೆಂಬ ಮುನಿಯು ತನಗೆ ಸಂತತಿ ಇಲ್ಲದ ಕಾರಣ ಬ್ರಹ್ಮದೇವನನ್ನು ಕುರಿತು ತಪಸ್ಸು ಮಾಡುತಿದ್ದನು. ತಪಸ್ಸನ್ನು ಮೆಚ್ಚಿದ ಬ್ರಹ್ಮನು ಕವೇರನಿಗೆ 'ನಿನ್ನ ಪೂರ್ವಜನ್ಮದ ಪಾಪದ ಫಲದಿಂದ ನಿನಗೆ ಪುತ್ರ ಸಂತತಿ ಇಲ್ಲ' ವೆಂದು ತಿಳಿಸಿ, ಈ ಜನ್ಮದಲ್ಲಿ ಮಕ್ಕಳಾಗದಿರುವ ಕಾರಣ ತನ್ನ ಮಾನಸ ಪುತ್ರಿಯಾದ 'ಲೋಪಾಮುದ್ರೆ' ಯನ್ನು ದತ್ತು ಪುತ್ರಿಯಾಗಿ ಕವೇರನಿಗೆ ನೀಡಿದನು.

ಉತ್ತರ ಭಾರತದಿಂದ ದಕ್ಷಿಣಕ್ಕೆ ಬಂದ ಅಗಸ್ತ್ಯ ಮುನಿಗಳು ತಪೋವನ ವಾದ ಬ್ರಹ್ಮಗಿರಿಯಲ್ಲಿ ಕವೇರ ಮುನಿಗಳಿಂದ ಆತಿಥ್ಯ ಸ್ವೀಕರಿಸಿ, ದಿವ್ಯಕಾಂತಿ ಯಿಂದಲೂ, ತೇಜಸ್ವಿನಿಂದಲೂ ಕೂಡಿರುವ ಕಾವೇರಿಯನ್ನು ಕಂಡು ವಿವಾಹವಾಗುವ ತಮ್ಮ ಬಯಕೆಯನ್ನು ವ್ಯಕ್ತಪಡಿಸುತ್ತಾನೆ. ಇದಕ್ಕೆ ಒಪ್ಪಿದ ಕಾವೇರಿಯು "ತನ್ನನ್ನು ಯಾವ ಕಾಲಕ್ಕೂ ಉಪೇಕ್ಷಿಸಿ ಹೊರಟು ಹೋಗಬಾರದು, ಒಂದು ವೇಳೆ ಹೋದರೆ ನಾನು ಆ ಕ್ಷಣದಿಂದ ನದಿಯಾಗಿ ಹರಿದು ಸಮುದ್ರ ಸೇರುತ್ತೇನೆ"[೩] ಎಂದು ಅಗಸ್ತ್ಯ ಮುನಿಗಳಿಂದ ವಚನ ಪಡೆಯುತ್ತಾಳೆ.

ಅಗಸ್ತ್ಯ ಕಾವೇರಿಯ ವಿವಾಹದ ಗೃಹಸ್ಥ ಜೀವನದ ಕೆಲವು ದಿನಗಳ ಅನಂತರ ಅಗಸ್ತ್ಯರು ಬ್ರಹ್ಮಗಿರಿಯ ಉತ್ತರದಲ್ಲಿ ಉದ್ಭವಿಸುವ ಕನ್ನಿಕ ನದಿಯಲ್ಲಿ ಸ್ನಾನ ಮಾಡಿ ತೆರಳುವ ಮುನ್ನ ಶಿಷ್ಯರಿಗೆಲ್ಲಾ ಜಾಗೃತೆಯಿಂದ ಕಾಯ್ದುಕೊಳ್ಳುವಂತೆ ಹೇಳಿ ಹೊರಡುತ್ತಾರೆ. ಲೋಕಪಾವನಿಯಾಗಿ ಹರಿದು ಲೋಕ ಉದ್ಧಾರ ಮಾಡಲು ಭೂಮಿಗೆ ಬಂದಕಾವೇರಿ ಇದೇ ಶುಭ ಸಂದರ್ಭವನ್ನು ನಿರೀಕ್ಷಿಸುತ್ತಿದ್ದರಿಂದ ಹಾಗೂ ಪತಿಯು ವಿವಾಹದ ಮುನ್ನ ನೀಡಿದ್ದ ವಚನವನ್ನು ಉಲ್ಲಂಘಿಸಿದ್ದರಿಂದ, ಬ್ರಾಹ್ಮಿಮೂರ್ಹತದಲ್ಲಿ ಕಮಂಡಲದಿಂದ ಹೊರಬಂದ ಕಾವೇರಿ ಬ್ರಹ್ಮಕುಂಡಿಕೆಯಲ್ಲಿ ಜಲರೂಪ ತಾಳಿ ನದಿಯಾಗಿ ಹರಿದು ಹೋಗುತ್ತಾಳೆ.

"ಕಾವೇರಿಯನ್ನು ತಡೆಯಲು ಶಿಷ್ಯರು ಪ್ರಯತ್ನಪಟ್ಟರೂ ನಿಲ್ಲದೆ ಗುಪ್ತಗಾಮಿನಿಯಾಗಿ ಹರಿಯುತ್ತಾಳೆ. ಸ್ನಾನಕೆಂದು ಹೊರಟು ಹಿಂದಿರುಗಿದ ಋಷಿಗಳು ವಿಷಯ ತಿಳಿದು ಕಾವೇರಿಯನ್ನು ಹಿಂದಿರುಗಲು ಕೇಳಿಕೊಂಡಾಗ 'ನಾನು ಲೋಕ ಕಲ್ಯಾಣಕ್ಕಾಗಿ ನದಿರೂಪ ತಳೆದು ಹೊರಟಿರುವೆನೆಂದು ಹೇಳುತ್ತಾಳೆ. ಅಗಸ್ತ್ಯರು ತಮ್ಮ ಶಿಷ್ಯರೊಂದಿಗೆ ಕಾವೇರಿ ಹರಿಯುವುದನ್ನು ಹಿಂಬಾಲಿಸುತ್ತಾರೆ. ನಾಗಲೋಕದವರು ಕಾವೇರಿಯನ್ನು ಸುತ್ತಿ ನದಿಯಾಗಿ ಹರಿದು ಹೋಗುವುದನ್ನು ತಡೆಯುತ್ತಾರೆ. ಅವರನ್ನು ಸುತ್ತಿ ಹರಿಯುವ ಕ್ಷೇತ್ರವನ್ನು 'ನಾಗತೀರ್ಥ' ಎಂದು ಕರೆಯುತ್ತಾರೆ."[೪]

ಭಾಗಮಂಡಲದಲ್ಲಿ ಪೂರ್ವಕ್ಕೆ ಹರಿಯುವ ಮತ್ತೊಂದು ನದಿ ಕನ್ನಿಕ ಮತ್ತು ಅಂತರ್ಗಾಮಿನಿ ಸುಜ್ಯೋತಿಯೊಡನೆ, ಕಾವೇರಿಸೇರಿ ತ್ರಿವೇಣಿ ಸಂಗಮವನ್ನು ನಿರ್ಮಿಸುತ್ತಾಳೆ. ಅಲ್ಲಿಂದ ಪೂರ್ವಾಭಿ ಮುಖವಾಗಿ ಹರಿದು 'ಹರಿಶ್ಚಂದ್ರ'

'ಪಾಲೂರುಗಳನ್ನು ದಾಟಿ' 'ಬಲಮುರಿ' (ವಲಯುರಿ) ಯಲ್ಲಿ ಹರಿಯುವಾಗ ಕೊಡವರು ಕಾವೇರಿಯು ನದಿಯಾಗಿ ಹರಿಯುವುದನ್ನು ತಡೆಯುತ್ತಾರೆ. ನದಿಯ ನೀರು ರಭಸದಿಂದ ಹರಿಯುವಾಗ ಅಲ್ಲಿ ನೆರೆದಿದ್ದ ಕೊಡವ ಸ್ತ್ರೀಯರ ಸೀರೆ ನೆರಿಗೆಗಳು ಹಿಂದಕ್ಕೆ ಸರಿಯುತ್ತವೆ.

ಶ್ರೀಮಾತೆ ಕಾವೇರಿಯು ಅಲ್ಲಿದ್ದವರನ್ನು ಹರಸಿ ತಾನು ನದಿಯಾಗಿ ಹರಿದುದರ ಸ್ಮರಣಾರ್ಥ ಕೊಡವ ಮಹಿಳೆಯರಿಗೆ ಸೀರೆ ನೆರಿಗೆಗಳನ್ನು ಅದೇ ರೀತಿ ಹಿಂಭಾಗದಲ್ಲಿಯೇ ಇಳಿಬಿಟ್ಟು ಸದಾ ಧರಿಸುವಂತಾಗಲಿ ಎಂದು ಹರಸಿ, ಅಲ್ಲಿಗೆ ಬಂದ ದೇವಕಾಂತ ಮಹಾರಾಜ ಮತ್ತು ಪ್ರಜೆಗಳಿಗೆ ದಿವ್ಯದರ್ಶನ ನೀಡಿದ ಕಾವೇರಿಯನ್ನು ಪೂಜಿಸಿ 'ನನ್ನ ವಂಶ ಬೆಳೆಯಬೇಕು, ಸಕಲ ಪ್ರಜೆಗಳು ನನ್ನ ರಾಜ್ಯದಲ್ಲಿ ಸುಖ ಶಾಂತಿಯಿಂದ ಇರಬೇಕು' ಎಂದು ಕಾವೇರಿಯನ್ನು ಕೇಳಿಕೊಂಡರು. ಆಗ ಕಾವೇರಿಯು ರಾಜನಿಗೆ ವರವನ್ನು ನೀಡಿ ಮುಂದೆ ಸಾಗುತ್ತಾಳೆ.

ತಲಕಾವೇರಿಯಿಂದ ಕಾವೇರಿಯುನ್ನು ಹಿಂಬಾಲಿಸಿದ ಅಗಸ್ತ್ಯರು ಭಾಗಮಂಡಲ, ಪಾಲೂರು, ಹರಿಶ್ಚಂದ್ರ, ಬಲಮುರಿಗಳಲ್ಲಿ ಶಿವಲಿಂಗಗಳನ್ನು ಪ್ರತಿಷ್ಠಾಪನೆ ಮಾಡುತ್ತಾ ಹಿಂಬಾಲಿಸುತ್ತಾರೆ. ಅಗಸ್ತ್ಯರ ಸಮ್ಮುಖದಲ್ಲಿ ಮುನಿಗಳೆಲ್ಲ ಕಾವೇರಿಯನ್ನು ತಡೆಯಲು 'ಗುಹ್ಯಾ'ದಲ್ಲಿರುವ ದೊಡ್ಡ ಅಶ್ವತ್ಥ ವೃಕ್ಷದ ಕೆಳಗೆ ಸಮಾಲೋಚಿಸುವಾಗ ಗಾಳಿಯ ರಭಸದಿಂದ ಭೋರ್ಗರೆಯುವ ವೃಕ್ಷವು ಅವರ ಸಮಾಲೋಚನೆಗೆ ಅಡಚಣೆ ಮಾಡುತ್ತಿದ್ದುದ್ದರಿಂದ ಅಗಸ್ತ್ಯ ಮುನಿಯು ವೃಕ್ಷದ ಕಡೆ ಮುಖಮಾಡಿ, 'ನಿಶಬ್ದ'! ಎಂದು ಕೂಗುತ್ತಾರೆ. ಅಂದಿನಿಂದ ಈ ಕ್ಷೇತ್ರವು ನಿಶಬ್ದವಾಗಿರುತ್ತದೆ ಎಂಬ ಪ್ರತೀತಿ ಇದೆ.

ಕಾವೇರಿ ತನ್ನ ಮೂಲಸ್ಥಾನದಿಂದ ಅಂತ್ಯದವರೆಗೆ ಸುಮಾರು ಎಂಟೂನೂರ ಐದು(೮೦೫) ಕಿಲೋಮೀಟರ್ ಉದ್ದಗಲಕ್ಕೂ ವಿವಿಧ ಪಾತ್ರಗಳಲ್ಲಿ ಹರಿಯುತ್ತಾ ಕೋಟ್ಯಾಂತರ ಜೀವರಾಶಿಗಳ ಜೀವಧಾರೆಯಾಗಿ ತನ್ನದೇ ಆದ ವೈಭವಯುತ ಚರಿತ್ರೆಯನ್ನು ಜಗತ್ತಿಗೆ ಸಾರಿದ್ದಾಳೆ.

"ಕಾವೇರಿಯ ಬಗ್ಗೆ ಉಲ್ಲೇಖವಿರುವ ಮೊದಲನೇ ಗ್ರಂಥ 'ಕವಿರಾಜಮಾರ್ಗ'. ಕಾವೇರಿ ಉದ್ಭವಿಸಿದ ಕೊಡಗಿನಲ್ಲಿ ವೈಭವದಿಂದ ಆಡಳಿತ ಮಾಡಿದ ಹಾಲೇರಿ ಒಡೆಯರ ವಂಶದ ಚರಿತ್ರೆ ಕ್ರಿ.ಶ ೧೬೦೬ರಿಂದ ಪ್ರಾರಂಭವಾಗಿ ೧೮೩೪ರವರೆಗೆ ಮುಂದುವರೆಯುತ್ತದೆ. ಈ ವಂಶದ ದೊಡ್ಡವೀರರಾಜೇಂದ್ರನು ಕ್ರಿ.ಶ ೧೭೮೧ರಿಂದ ೧೮೦೯ರವರೆಗೆ ಆಡಳಿತ ನಡೆಸಿದ್ದಾರೆ." (ಕೊಡಗು ಜಿಲ್ಲಾ ಗ್ಯಾಸೆಟಿಯರ್, ೧೯೯೨, ಸೂರ್ಯನಾಥ್ ಯು. ಕಾಮತ್)

ಕಾವೇರಿ ಮಹಾತ್ಮೆ ಕೃತಿಯನ್ನು ಸಂಸ್ಕೃತದಿಂದ ಕನ್ನಡಕ್ಕೆ ತಂದವರು ಮೈಸೂರು ಒಡೆಯರ ಕಾಲದ ಕವಿಗಳು. ೧೯ನೇ ಶತಮಾನದ ಆದಿಯಲ್ಲಿ ಸಿ. ಶಿವಶಂಕರಶಾಸ್ತ್ರಿ, ಚ.ರಾಮಚಂದ್ರಶಾಸ್ತ್ರಿ ಎಂಬುವವರು 'ಕಾವೇರಿ ಮಹಾತ್ಮೆ' ಯನ್ನು, ನರಸಿಂಹಚಾರ್ಯರ 'ಕಾವೇರಿ ಪುರಾಣ', ನಡಿಕೇರಿಯಂಡ ಚಿಣ್ಣಪ್ಪನವರ 'ಪಟ್ಟೋಲೆ ಪಳಮೆ', ಭಾಗಮಂಡಲದ ಯದುರ್ಕಳ ಶಂಕರನಾರಾಯಣ ಭಟ್

ಅವರ 'ಶ್ರೀ ಕಾವೇರಿ ವೈಭವ', ವೈ.ಸಿ ಭಾನುಮತಿಯವರು ಸಂಪಾದಿಸಿರುವ 'ಸಹ್ಯಾದ್ರಿ ಖಂಡ' ದಲ್ಲಿಯೂ ಕಾವೇರಿಯನ್ನು ಕುರಿತ ಪೌರಾಣಿಕ ಕಥೆ ದೀರ್ಘವಾಗಿ ಬಂದಿದೆ. ಎಂ.ಪಿ ಮಂಜಪ್ಪಶೆಟ್ಟಿ ಮಸಗಲಿ ಅವರು ಸಂಪಾದಿಸಿರುವ 'ಕಾವೇರಿ ಮಹಾತ್ಮ್ಯೆ' ಎಂಬ ಕಾವ್ಯದಲ್ಲಿ ಪ್ರಮುಖವಾಗಿ ಕಾವೇರಿಯ ಮಹತ್ವವನ್ನು ಉಲ್ಲೇಖಿಸಿರುವುದು ಕಂಡು ಬರುತ್ತದೆ. ವಿ.ಎಸ್.ರಾಮಕೃಷ್ಣ ಅವರು 'ಕಾವೇರಿ ಮಹಾತ್ಮ್ಯೆ' ಎಂಬ ಕೊಡವ ಭಾಷಾ ಕೃತಿಯನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾರೆ.

ಕೃಷಿಗೆ ಅನುಕೂಲವಾಗಲು ಕಾವೇರಿ ನದಿಗೆ ಹಾಕಿರುವ ಅಣೆಕಟ್ಟಗಳು ಇಂದಿಗೂ ಸಾಕ್ಷಿಯಾಗಿವೆ. ಶಿವನ ಸಮುದ್ರದಲ್ಲಿ ಕಾವೇರಿಯ ಜಲಪಾತದಿಂದ ಉತ್ಪನ್ನವಾಗುವ ವಿದ್ಯುತ್ತು ಬೃಹತ್ ನಗರಗಳನ್ನು ಬೆಳಗಿಸಿದೆ. ಈ ಎಲ್ಲ ಕಾರಣಗಳಿಗಾಗಿಯೇ ಈ ನದಿಗೆ "ಕಲಿ ಕಲ್ಮ ನಾಶಿನಿ" ಎಂಬ ಬಿರುದು ಬಂದಿರಬಹುದು. ಉತ್ತರದ ಜನರಿಗೆ ಗಂಗಾನದಿಯು ಪವಿತ್ರವಾಗಿರುವಂತೆ ದಕ್ಷಿಣ ಭಾಗದವರಿಗೆ ಕಾವೇರಿ ನದಿ 'ದಕ್ಷಿಣ ಗಂಗೆ' ಯಾಗಿದೆ.

ಶ್ರೀ ಕಾವೇರಿಯು ಲೌಕಿಕ ದೃಷ್ಟಿಯಿಂದ ಸರ್ವೋಪಕಾರಿಣಿ, ದಾನಶೀಲೆ, ಆಧ್ಯಾತ್ಮಿಕ ದೃಷ್ಟಿಯಿಂದ ಭವತಾರಿಣಿ. ಕಾವೇರಿಯನ್ನು ಬಹು ಹಿಂದಿನ ಕಾಲದಿಂದಲೂ ಜನರು ಆರಾದಿಸುತ್ತಿದ್ದಾರೆ. ಕಾರಣ ಕಾವೇರಿಯು ಕೊಡವರ ಕುಲದೇವತೆಯಾಗಿದ್ದು, ಕೊಡವರ ಬದುಕಿನಲ್ಲಿ ಪ್ರಭಾವ ಬೀರಿದ್ದಾಳೆ. ಹುಟ್ಟಿನಿಂದ ಸಾವಿನ ತನಕ ಇವರು ನಡೆಸುವ ವಿವಿಧ ಕ್ರಿಯೆಗಳ ಸಂಬಂಧವಾಗಿ ಪೂಜಿಸುತ್ತಾರೆ. ಮುಖ್ಯವಾಗಿ ಮರಣೋತ್ತರ ಕ್ರಿಯೆಯಲ್ಲಿ ಕಾವೇರಿಯ ಪುಣ್ಯಜಲದಲ್ಲಿ ಸ್ನಾನ ಮಾಡಿ ಪಿತೃಗಳಿಗೆ ತೃಪ್ತಿಯನ್ನುಂಟುಮಾಡುವ ಧಾರ್ಮಿಕ ವಿಧಿಕ್ರಿಯೆಗಳಿವೆ.

ಮಗುವು ಹುಟ್ಟಿ ಬೆಳೆದಂತೆ ಅದಕ್ಕೆ ಮೊದಲು ತಲೆಕೂದಲನ್ನು ಮುಡಿ ಕೊಡಲು, ಮಗುವಿನ ನಾಮಕರಣ ಮಾಡಲು, ವಿದ್ಯಾಭ್ಯಾಸ, ಉದ್ಯೋಗ ಪ್ರಾಪ್ತಿ, ವಿವಾಹ ಮುಂತಾದ ಕಾರ್ಯಗಳಲ್ಲೂ ಶ್ರೀ ಕಾವೇರಿ ಮಾತೆಯನ್ನು ಪ್ರಾರ್ಥಿಸುವುದು ರೂಢಿ. ಕೊಡವರಲ್ಲಿ ವಿವಾಹವಾದ ನಂತರ ಮದು ಮಕ್ಕಳು ಒಂದು ವರ್ಷದ ಒಳಗೆ ಕಾವೇರಿ ಕ್ಷೇತ್ರದ ತ್ರಿವೇಣಿ ಸಂಗಮ ಮತ್ತು ತಲಕಾವೇರಿಯ ಕುಂಡಿಕೆಗಳಲ್ಲಿ ತೀರ್ಥಸ್ನಾನ ಮಾಡಲೇಬೇಕೆಂಬ ನಿರ್ಬಂಧ ಮತ್ತು ಆಚರಣೆ ಇದೆ. ಹಾಗೆಯೇ ಕಾವೇರಿ ತೀರ್ಥೋದ್ಭವದ ಸಂದರ್ಭದಲ್ಲಿ ಪ್ರತಿ ವರ್ಷ ತೀರ್ಥಸ್ನಾನ ಮಾಡುವುದು, ಪವಿತ್ರ ಧಾರ್ಮಿಕ ಕಾರ್ಯವಾಗಿದೆ. ಕಾವೇರಿ ಜಾತ್ರೆಗೆ ಹೋಗಲು ತಪ್ಪಿದರೆ ತುಲಾ ಮಾಸದಲ್ಲಿ ಬಂದು ತೀರ್ಥಸ್ನಾನ ಮಾಡುತ್ತಾರೆ.

ಕೊಡವರು ಮರಣೋತ್ತರ ಕ್ರಿಯೆಗಳಲ್ಲಿ ಕಾವೇರಿ ಮಾತೆಗೆ ವಿಶೇಷ ಸ್ಥಾನ ಕೊಡುತ್ತಾರೆ. ತಮ್ಮವರು ಮೃತರಾದಗ ಉತ್ತರ ಕ್ರಿಯೆ ಮಾಡುವಾಗ, ಕಾವೇರಿ ಕ್ಷೇತ್ರಕ್ಕೆ ಬಂದು ಚಿತಾಭಸ್ಮವನ್ನು ಕಾವೇರಿಗೆ ನದಿಯುಲ್ಲಿ ವಿಸರ್ಜಿಸಿ ಪಿಂಡತರ್ಪಣಗಳನ್ನು ಅರ್ಪಿಸುತ್ತಾರೆ. ನಂತರ ಭಾಗಮಂಡಲದಲ್ಲಿ ವೈಕುಂಠ ಸಮಾರಾಧನೆ ಮಾಡುತ್ತಾರೆ.

ನದಿರೂಪ ತಳೆದ ಆದಿಸ್ಥಳವಾದ ತಲಕಾವೇರಿ ಕ್ಷೇತ್ರದಲ್ಲಿ ತುಲಸಂಕ್ರಮಣ ಜಾತ್ರೆಯಲ್ಲಿ ಹಲವಾರು ಭಕ್ತರು ತೀರ್ಥ ಸ್ನಾನ ಮಾಡಿ ಸಂತೃಪ್ತರಾಗುತ್ತರೆ. ಕಾವೇರಿ ಮಾತೆ ಸುಮಂಗಲೆಯರಿಗೆ ಸ್ಫೂರ್ತಿ ನೀಡುವ ಮಂಗಳಗೌರಿಯಾಗಿದ್ದಾಳೆ. ಮುತ್ತೈದೆ ಕಾವೇರಿಗೆ ಮುತ್ತೈದೆ ಭಾಗ್ಯ ಕರುಣಿಸಲು ಕುಂಕುಮಾರ್ಚನೆ ಮಾಡಿಸುತ್ತಾರೆ. ಕಾವೇರಿಯ ಪೂಜೆಗೆ ಬಳೆ, ಬಿಚ್ಚೋಲೆ, ಕರಿಮಣಿಯನ್ನು ಇಟ್ಟು ವಿಶೇಷ ಪೂಜೆ ಮಾಡಲಾಗುತ್ತದೆ. ಸಂತಾನಪ್ರಾಪ್ತಿಗಾಗಿ ಹರಕೆ ಹೊತ್ತವರು ತೀರ್ಥಸ್ನಾನ ಮಾಡಿ, ತಾವು ಹರಕೆ ಮಾಡಿಕೊಂಡ ಲೋಹದ ತೊಟ್ಟಿಲನ್ನು ಕೊಳದಲ್ಲಿ ಹಾಕುವ ಮೂಲಕ ಹರಕೆ ತೀರಿಸುತ್ತಾರೆ. ರೋಗಬಾದೆ ನಿವಾರಣೆಗಾಗಿ ದೇಹದ ಅಂಗಾಂಗಳ ರೂಪದಲ್ಲಿರುವ ಲೋಹದ ಪ್ರತಿರೂಪವನ್ನು ಕೊಳಕ್ಕೆ ಹಾಕುತ್ತಾರೆ. ತಲಕಾವೇರಿಯಲ್ಲಿ ಸ್ನಾನ ಮಾಡಿ ಅರಿಸಿನ ಕುಂಕುಮ, ಪುಷ್ಪಗಳನ್ನು ಅರ್ಪಿಸಿದರೆ ಭಕ್ತಿಯೋಗದ ಸಾಧನೆಯಾಗುತ್ತದೆ. ಕಾವೇರಿ ತೀರದಲ್ಲಿ ಆಧ್ಯಾತ್ಮಿಕ ಸಾಧನೆ ಮಾಡಿದರೆ ಸಿದ್ಧಿ ಲಭಿಸುತ್ತದೆ ಮುಂತಾದ ನಂಬಿಕೆ ಇವರಲ್ಲಿದೆ. ಕಾವೇರಿ ತೀರದಲ್ಲಿ ಒಂದು ಕ್ಷಣ ತಂಗಿದರೆ ಪಾಪಗಳು ಪರಿಹಾರವಾಗುವುದೆಂಬ ನಂಬಿಕೆಯಿದೆ. ಕಾವೇರಿ ನದಿ ತೀರದಲ್ಲಿ ಉಪನಯನ, ವಿವಾಹ ಮೊದಲಾದ ಸಂಸ್ಕಾರ ಕಾರ್ಯಗಳು ಆರಾಧನಾ ಕಾರ್ಯಗಳು ನಡೆಯುತ್ತಿರುತ್ತವೆ.

ಕಾವೇರಿ ತೀರ್ಥೋದ್ಭವದ ಸಂದರ್ಭದಲ್ಲಿ ನೆರೆದಂತಹ ಭಕ್ತರು ಕಾವೇರಿ ತೀರ್ಥಕೊಳದಲ್ಲಿ ತೀರ್ಥಸ್ನಾನ ಮಾಡಿ, ದೇವರಿಗೆ ಹಣ್ಣುಕಾಯಿ ಮಾಡಿಸಿ, ಬ್ರಹ್ಮ ಕುಂಡಿಕೆಯಿಂದ ಪವಿತ್ರವಾದ ಕಾವೇರಿ ಜಲವನ್ನು ತೆಗೆದುಕೊಂಡು ಹೋಗುತ್ತಾರೆ. ಈ ತೀರ್ಥಕ್ಕೆ ಗಂಗಾಜಲದಷ್ಟೆ ಮಹತ್ವ ನೀಡಿ ಭಕ್ತಿಯಿಂದ ಪೂಜಿಸುತ್ತಾರೆ. ತೀರ್ಥವನ್ನು ಕುಡಿದ ನಂತರ ಅಡುಗೆಗೂ ಪ್ರೋಕ್ಷಿಸಿ ದೇವರಿಗೆ ನೈವೇದ್ಯವನ್ನಿಡುತ್ತಾರೆ.

ಗಂಗಾ, ಕಾವೇರಿ ಸಮ್ಮಿಲನದ ತೀರ್ಥವಾದ ಇದನ್ನು ಮರಣದ ಸಮಯದಲ್ಲಿ ಕುಡಿಸುತ್ತಾರೆ. ಕಾವೇರಿಯ ಪುಣ್ಯ ತೀರ್ಥವು ಸಮಸ್ತ ಪಾಪಗಳನ್ನು ನಿವಾರಣೆ ಮಾಡುತ್ತದೆಂದು ಸತ್ತ ಮೇಲೆ ಸ್ವರ್ಗ ಪ್ರಾಪ್ತಿಯಾಗುತ್ತದೆಂಬ ನಂಬಿಕೆ ಇದೆ. ಕೊಡಗಿನ ಜನರು ಕಾವೇರಿ ತೀರ್ಥವನ್ನು ವಿವಾಹ ಕರ್ಮಕಾರ್ಯ, ಹರಕೆ, ತೀರ್ಥಸ್ನಾನ ಮುಂತಾದ ಕಾರ್ಯದಲ್ಲಿ ಬಳಸುತ್ತಾರೆ. ಹೀಗೆ ದಿವ್ಯಾನುಗ್ರಹದ ಸಂಕೇತದ ಮೂಲಕ ನಿತ್ಯ ವೈಭವದಿಂದ ಕಾವೇರಿ ಹೆಸರು ಚಿರಸ್ಥಾಯಿಯಾಗಿದೆ.

ಕಾವೇರಿ ಜಾತ್ರೆ ಮತ್ತು ವಿಶೇಷ ಉತ್ಸವಗಳು

ಕಾವೇರಿ ಜಾತ್ರೆ ಪ್ರತಿ ವರ್ಷ ಆಕ್ಟೋಬರ್ ತಿಂಗಳ ೧೫, ೧೬ ಅಥವಾ ೧೭ನೇ ರ‍ಂ ಮೂರು ದಿನ ನಡೆಯುತ್ತದೆ. ಸೂರ್ಯನು ತುಲಾ ರಾಶಿಗೆ ಪ್ರವೇಶಿಸುವ ಪುಣ್ಯ ಮುಹೂರ್ತವೇ ಕಾವೇರಿ ಜಾತ್ರೆ, ಇದನ್ನು ತುಲಾ ಸಂಕ್ರಾಂತಿ, ತುಲಾ ಸಂಕ್ರಮಣ, ಕಾವೇರಿ ಸಂಕ್ರಮಣ ಎಂದೂ ಕರೆಯುತ್ತಾರೆ. ಕಾವೇರಿ ಜಾತ್ರೆಗೆ ಸಹಸ್ರಾರು ಭಕ್ತರು ಆಗಮಿಸಿ ಪುಣ್ಯತೀರ್ಥದಲ್ಲಿ ಸ್ನಾನ ಮಾಡುತ್ತಾರೆ.

ತಮಿಳುನಾಡಿನ ಜನರಿಗೆ ಕಾವೇರಿಯು ಬಂಗಾರ ಲಕ್ಷ್ಮಿಯಾಗಿರುವುದರಿಂದ ಅಲ್ಲಿಯ ಭಕ್ತಾದಿಗಳು ಜಾತ್ರೆಗೆ ಹೆಚ್ಚು ಬರುತ್ತಾರೆ. ಭಾಗಮಂಡಲ–ತಲಕಾವೇರಿ ಎರಡು ಸ್ಥಳಗಳಲ್ಲಿ ನಡೆಯುವ ಧಾರ್ಮಿಕ ಆಚರಣೆಯ ವಾರ್ಷಿಕೋತ್ಸವವನ್ನು 'ಕಾವೇರಿ ಜಾತ್ರೆ' ಎನ್ನುತ್ತಾರೆ. ತುಲಾಸಂಕ್ರಮಣದಂದು ಜರುಗುವ ಜಾತ್ರೆಯನ್ನು "ದೊಡ್ಡ ಸಂಕ್ರಮಣ ಜಾತ್ರೆ", 'ದೊಡ್ಡ ಜಾತ್ರೆ' ಎಂದೂ 'ವೃಶ್ಚಿಕ ಸಂಕ್ರಮಣ'ದಂದು ನಡೆಯುವ ಜಾತ್ರೆಯನ್ನು 'ಕಿರಿ ಸಂಕ್ರಮಣ ಜಾತ್ರೆ', 'ಕಿರಿ ಜಾತ್ರೆ' ಎಂದೂ ಕರೆಯುತ್ತಾರೆ.

ಭಾಗಮಂಡಲದಲ್ಲಿ ಇರುವ ತ್ರಿವೇಣಿ ಸಂಗಮ –ಪ್ರೇತಾರಣ್ಯ, ತಲಕಾವೇರಿ ಯಲ್ಲಿನ ಬ್ರಹ್ಮಕುಂಡಿಕೆ ಇವುಗಳಲ್ಲಿ ಪರಸ್ಪರ ಧಾರ್ಮಿಕವಾದ ಸಂಬಂಧವಿದೆ. ತ್ರಿವೇಣಿ ಸಂಗಮದಲ್ಲಿ ಸ್ನಾನ, ಪ್ರೇತಾರಣ್ಯದಲ್ಲಿ ಪಿತೃಗಳಿಗೆ ಶ್ರಾದ್ಧತರ್ಪಣಾದಿ ಕ್ರಿಯೆ ನಡೆಸುವಿಕೆ, ನಂತರ ತಲಕಾವೇರಿಯಲ್ಲಿ ತೀರ್ಥಸ್ನಾನ ಮುಂತಾದ ಕರ್ಮಗಳನ್ನು ಭಕ್ತಾದಿಗಳು ಅನುಸರಿಸುತ್ತಾರೆ.

ಕಾವೇರಿ ಜಾತ್ರೆಯ ಧಾರ್ಮಿಕ ಕಾರ್ಯಕ್ರಮಗಳು

೧) ದೇವರ ಪತ್ತಾಯಕ್ಕೆ ಅಕ್ಕಿ ಹಾಕುವುದು.

ಕನ್ಯಾಮಾಸದ ಹತ್ತನೇ ದಿನದಂದು ಅಂದರೆ ತುಲಾಸಂಕ್ರಮಣಕ್ಕೆ ಇಪ್ಪತ್ತು ದಿನಗಳ ಮೊದಲು ಭಾಗಮಂಡಲ ಶ್ರೀ ಭಗಂಡೇಶ್ವರ ದೇವಾಲಯದ ಉಗ್ರಾಣದಲ್ಲಿರುವ 'ಪತ್ತಾಯ'ಕ್ಕೆ ಪ್ರಥಮವಾಗಿ ಅಕ್ಕಿಯನ್ನು ದೇವಾಲಯದ ಗೌರವ 'ತಕ್ಕರು' ಎಂದರೆ ಜನಪ್ರತಿನಿಧಿ ಮುಖ್ಯಸ್ಥರು ಸುರಿಯುತ್ತಾರೆ. ನಂತರ ಇತರರು ಅಕ್ಕಿಯನ್ನು ಪತ್ತಾಯಕ್ಕೆ ಸುರಿಯುತ್ತಾರೆ. ಜಾತ್ರೆಗೆ ಬರುವ ಯಾತ್ರಾರ್ಥಿಗಳಿಗೆ ಊಟಕ್ಕೆ ಅನುಕೂಲವಾಗಲೆಂದು ಈ ರೀತಿ ಶೇಖರಣೆ ಮಾಡಲಾಗುತ್ತದೆ.

ಆಜ್ಞಾಗೊನೆ ಕಡಿಯುವುದು : ಕಾವೇರಿ ಜಾತ್ರೆಯ ಮುನ್ನ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ನೆರೆದು ಜಾತ್ರೆಯ ಕಾರ್ಯಕ್ರಮಗಳೆಲ್ಲ ಚ್ಯುತಿ ಇಲ್ಲದೆ ಸಾಂಗವಾಗಿ ನೆರವೇರಲಿ ಎಂದು ಪ್ರಾರ್ಥಿಸಿ, ದೇವಾಲಯದ 'ತಕ್ಕ' (ಮುಖ್ಯಸ್ಥರು) ಸಮೀಪ ಇರುವ ಬಾಳೆ ತೋಟದಿಂದ ಎರಡು ಬಾಳೆಗೊನೆಗಳನ್ನು ಕಡಿದುಕೊಂಡು ಬರುವುದನ್ನು ಅಜ್ಞಾ ಗೊನೆ ಕಡಿಯುವುದೆಂದು ಕರೆಯುತ್ತಾರೆ.

ಶ್ರೀ ದುರ್ಗಾದೇವಿ ಮತ್ತು ನಂದಾದೀಪ ಆರಾಧನೆ : ಕಾವೇರಿ ಜಾತ್ರೆಯ ಕೆಲಸಕಾರ್ಯಗಳು ಸುಗಮವಾಗಿ ನೆರವೇರಲು ಶ್ರೀ ದುರ್ಗಾದೇವಿಯನ್ನು ಭಗಂಡೇಶ್ವರ ದೇವಾಲಯದಲ್ಲಿ ಮೂಲ ಭಂಡಾರ ಇಡುವ ಉಗ್ರಾಣದ ಕೊಠಡಿಯಲ್ಲಿ ಶಾಸ್ತ್ರೋಕ್ತವಾಗಿ ನಂದಾದೀಪವಿಟ್ಟು ಪಂಚಜ್ಯೋತಿಯನ್ನು ಬೆಳಗಿಸಿ ಪೂಜೆ ಮಾಡುತ್ತಾರೆ. ಆ ದಿನ ಹಚ್ಚಿದ ದೀಪವು ಒಂದು ತಿಂಗಳವರೆಗೆ ಸದಾ ನಂದದ ಜ್ಯೋತಿಯಾಗಿ ಉರಿಯುವಂತೆ ನೋಡಿಕೊಳ್ಳಲಾಗುತ್ತದೆ. ಜಾತ್ರೆಯ ಕಾರ್ಯಕ್ರಮಗಳು ಹಾಗೂ ಜಾತ್ರೆಗಾಗಿ ಬರುವ ಭಕ್ತಾದಿಗಳ ರಕ್ಷಣೆಗಾಗಿ ಪ್ರಾರ್ಥಿಸಿ ಜಾತ್ರೆ ತಿಂಗಳಿಡೀ ಬೆಳಗಿಸುವ ಈ ನಂದಾದೀಪಕ್ಕೆ 'ಭದ್ರ ನಂದಾದೀಪ' ಎಂದು ಕರೆಯುತ್ತಾರೆ.

ಅಕ್ಷಯ ಪಾತ್ರೆ ಇಡುವುದು : ಕಾವೇರಿ ಜಾತ್ರೆಯ ಸಂದರ್ಭದಲ್ಲಿ ಕ್ಷೇತ್ರಕ್ಕೆ ಬರುವ ಸಹಸ್ರಾರು ಮಂದಿ ಯಾತ್ರಿಕರಿಗೆ ಅಕ್ಕಿಯ ಧರ್ಮಪಡಿ ನೀಡಲು ಅಕ್ಕಿಯ ಪಾತ್ರೆಯನ್ನು ಬಳಸುತ್ತಾರೆ. ಕನ್ಯಾಮಾಸದ ೨೮ರಂದು ಬೆಳಗ್ಗೆ ಶ್ರೀ ದುರ್ಗಾದೇವಿಯ ಆರಾಧನೆ ಆದನಂತರ ಸುಮೂರ್ಹತದಲ್ಲಿ ಅಕ್ಷಯ ಪಾತ್ರೆಯನ್ನು ದೇವಾಲಯದ ಉಗ್ರಾಣದಲ್ಲಿಟ್ಟು ವಿಧಿಯುಕ್ತವಾಗಿ ದೇವರ ಪತ್ತಾಯದಿಂದ ಅಕ್ಕಿಯನ್ನು ಸುರಿಯುತ್ತಾರೆ. ನಂತರ ಅಲ್ಲಿ ನೆರೆದವರಿಗೆಲ್ಲಾ 'ಅಕ್ಷಯಪಾತ್ರೆ' ಯಿಂದ ಅಕ್ಕಿಯನ್ನು ತೆಗೆದು ಪ್ರಸಾದವಾಗಿ ಹಂಚುತ್ತಾರೆ. ಜಾತ್ರೆಗೆ ಎಷ್ಟು ಜನ ಬಂದರೂ ಅಕ್ಕಿಯನ್ನು ಧರ್ಮಪತಿಯಾಗಿ ಹಂಚುವುದರಿಂದ ಈ ಪಾತ್ರೆಗೆ 'ಅಕ್ಷಯ ಪಾತ್ರೆ'ಎಂಬ ಹೆಸರು ಬಂದಿದೆ.

೨) **ದೇವರ ಭಂಡಾರದ ಡಬ್ಬಿ ಇಡುವುದು:** ಅಕ್ಷಯ ಪಾತ್ರೆ ದಿನದಂದು ಭಂಡಾರ ಡಬ್ಬಿಗಳನ್ನು ಉಗ್ರಾಣದಿಂದ ಹೊರತೆಗೆದು ಮೊಹರು ಮಾಡಿ ವಾದ್ಯಘೋಷಣೆಗಳೊಂದಿಗೆ ದೇವಾಲಯದ ವಿವಿಧ ಭಾಗದಲ್ಲಿ ಇಡುತ್ತಾರೆ.

೩) **ಶ್ರೀ ಮಹಾಗಣಪತಿಗೆ ಅಪ್ಪಕಜ್ಜಾಯ ಸೇವೆ :** ಜಾತ್ರೆಗೆ ಸಂಬಂಧಿಸಿದ ಸಿದ್ಧತಾ ಕಾರ್ಯಗಳು ಮುಗಿದಾ ನಂತರ ಜಾತ್ರೆಯ ಸುಗಮವಾಗಿಲ್ಲ ನಡೆಯಲು ಸಕಲ ವಿಘ್ನನಿವಾರಕ ಮಹಾಗಣಪತಿಗೆ ವಿಶೇಷ ಪೂಜೆ ಸಲ್ಲಿಸಿ, ಅಪ್ಪ ಕಜ್ಜಾಯಗಳನ್ನು (ಅಕ್ಕಿಯಲ್ಲಿ ತಯಾರಿಸುವ ಖಾದ್ಯ) ಸಮರ್ಪಿಸುತ್ತಾರೆ. ಪೂಜೆ ಸಲ್ಲಿಸಿದ ನಂತರ ಅಪ್ಪಕಜ್ಜಾಯವನ್ನು ನೆರೆದಿರುವ ಭಕ್ತರಿಗೆ ಹಂಚುತ್ತಾರೆ. ಶ್ರೀ ಕಾವೇರಿ ಸಂಕ್ರಮಣದ ದಿನ ಭಾಗಮಂಡಲದ ದೇವಾಲಯದಲ್ಲಿ ವಿಶೇಷ ಪೂಜೆಗಳು ನಡೆಯುತ್ತದೆ. ಸಂಕ್ರಮಣದ ಮುಹೂರ್ತಕ್ಕೆ ಮೊದಲು ಭಾಗಮಂಡಲದಲ್ಲಿ ಶ್ರಾದ್ಧ, ತರ್ಪಣ ಕ್ರಿಯೆಗಳು ನಡೆಯುತ್ತಿರುತ್ತವೆ. ಸಂಕ್ರಮಣದ ಮುಹೂರ್ತದ ವೇಳೆಗೆ ಯಾತ್ರಿಕರು ತಲಕಾವೇರಿಯ ತೀರ್ಥಸ್ನಾನಕ್ಕೆ ತೆರಳುತ್ತಾರೆ.

ಶ್ರೀ ಪೊಲಿಂಕಾನ ಉತ್ಸವ : ಆಟಿ (ಆಷಾಡ) ತಿಂಗಳ ಅಮವಾಸ್ಯೆಯ ದಿನದಂದು ಕಾವೇರಮ್ಮನನ್ನು ನೆನೆದು ಭಗಂಡೇಶ್ವರ ದೇವಾಲಯದಲ್ಲಿ ಪೊಲಿಂಕಾನ ಉತ್ಸವ (ಮಳೆಗಾಲದಲ್ಲಿ) ಮಾಡುತ್ತಾರೆ. ಬಾಳೆ ಕಂದುಗಳಿಂದ ವಿಶಿಷ್ಟವಾದ ರೀತಿಯಲ್ಲಿ ಅಲಂಕರಿಸಿ ಮಂಗಳಜ್ಯೋತಿಯನ್ನು ಬೆಳಗಿಸಿ, ಮಂಗಳದ್ರವ್ಯ, ತಾಳಿ, ಕುಂಕುಮ, ಕರಿಮಣಿ, ಬಿಚ್ಚೋಲೆಯನ್ನು ಇಟ್ಟು ಪೂಜಿಸುತ್ತಾರೆ. ಮಳೆಯಿಂದಾಗಿ ಉಂಟಾಗುವ ಪ್ರವಾಹಗಳಿಂದ ತೊಂದರೆ ಆಗದಿರಲಿ ಎಂದು ಕಾವೇರಿ ಮಾತೆಯನ್ನು ಶ್ರೀ ಪೊಲಿಂಕಾನ ಪೂಜೆ ಪ್ರಾರ್ಥನೆಯೊಡನೆ ಅರ್ಚಕರು ಕಾವೇರಿಗೆ ಅರ್ಪಿಸುತ್ತಾರೆ. ನೀರಿನ ಪ್ರವಾಹದಲ್ಲಿ ಪೊಲಿಂಕಾನ ಮಂಟಪವು ದಿವ್ಯಜ್ಯೋತಿ ಸಹಿತವಾಗಿ ತೇಲಿಕೊಂಡು ಮುಂದೆ ಸಾಗುತ್ತದೆ. (ಕ್ಷೇತ್ರಕಾರ್ಯದಿಂದ ತಿಳಿದ ಮಾಹಿತಿ)

ಪದಿನೆಟ್ಟಾಂ ಪೆರುಕು–ಹದಿನೆಂಟರ ಹಬ್ಬ : ಆಟಿ ತಿಂಗಳ (ಜುಲೈಯಿಂದ–ಆಗಸ್ಟ್) ಹದಿನೆಂಟರಂದು ಈ ಹಬ್ಬವು ನಡೆಯುವುದರಿಂದ ಇದನ್ನು ಹದಿನೆಂಟರ ಹಬ್ಬ ಎಂದೂ ತಮಿಳಿನಲ್ಲಿ 'ಪದಿನೆಟ್ಟಾಂ ಪೆರುಕು' ಎಂದೂ ಕರೆಯುವರು. ತಮಿಳುನಾಡಿನಲ್ಲಿ ಕಾವೇರಿ ಜಾತ್ರೆಯ ದಿನ ಕಾವೇರಿ ನದಿಯು ಹರಿದಲ್ಲೆಲ್ಲಾ ಭಕ್ತರು ತೀರ್ಥಸ್ನಾನ, ಅರ್ಚನೆ, ಮುಂತಾದ ಧಾರ್ಮಿಕ ಕಾರ್ಯಗಳನ್ನು

ಮಾಡುತ್ತಾರೆ. ತಲಕಾವೇರಿಯಿಂದ ಪೊಂಪುಹಾರಿನವರೆಗೆ ಭಕ್ತಾಧಿಗಳು ವಿವಿಧ ರೀತಿಯಲ್ಲಿ ಆಚರಿಸುತ್ತಾರೆ.

ತಮಿಳುನಾಡಿನ ಜನರು ಕಾವೇರಿ ಮಾತೆಯನ್ನು ಸಿರಿದೇವಿ ಎನ್ನುತ್ತಾರೆ. ಧಾನ್ಯದ ಸಿರಿಸಂಪತ್ತಿಗೆ ಜಲವನ್ನು ನೀಡಿರುವ ಕಾವೇರಿಯನ್ನು ಇವರು ಹೊನ್ನಿನ ದೇವಿ, ಅನ್ನಪೂರ್ಣೆ ಎಂದೂ ಪೂಜಿಸಿ ಈ ಹಬ್ಬವನ್ನು ಆಚರಿಸುತ್ತಾರೆ. ಕಾವೇರಿ ನದಿ ತೀರದಲ್ಲಿ ಊರಿನವರೆಲ್ಲರೂ ತೀರ್ಥಸ್ನಾನ ಮಾಡಿ , ಕಾವೇರಿಯ ಪ್ರತಿಮೆ ಮಾಡಿ, ಕುಂಕುಮ ಅರಿಸಿನ, ಧೂಪ,ದೀಪಗಳನಿಟ್ಟು ಪೂಜೆ ಮಾಡಿ, ನದಿಗೆ ಕರಿಮಣಿ, ಫಲ–ಪುಷ್ಪಗಳನ್ನು ಅರ್ಪಿಸುತ್ತಾರೆ. ಆ ದಿನ 'ಕಪ್ಪರಿಸಿ' ಎಂಬ ವಿಶೇಷ ಖಾದ್ಯವನ್ನು ನದಿಗೆ ಅರ್ಪಿಸುತ್ತಾರೆ. (ಕ್ಷೇತ್ರಕಾರ್ಯದಿಂದ ದೊರೆತ ಮಾಹಿತಿ)

ಆಟಿ ಹದಿನೆಂಟರ ಹಬ್ಬದಂದು ನವ ದಂಪತಿಗಳು ಅರಿಸಿನ ವರ್ಣದ ದಾರವನ್ನು ಧರಿಸಿ ಅದನ್ನು ಪರಸ್ಪರ ಗಂತಿಕ್ಕಿ ಆ ದಿನ ಕಾವೇರಿ ಪೂಜೆ ಮುಗಿಯುವರೆಗೆ ಜೋಡಿಸಿಕೊಂಡಿರುವ ಧಾರ್ಮಿಕ ಸಂಪ್ರಾದಾಯದ ವಿಶಿಷ್ಟವಾಗಿದೆ. ಹಾಗೆಯೇ ತಮ್ಮ ಮದುವೆಯ ಪುಷ್ಪಾಹಾರಗಳನ್ನು ಕಾವೇರಿ ನದಿಗೆ ಅರ್ಪಿಸಿದರೆ ನದಿಯ ಪ್ರವಾಹದಂತೆ ತಮ್ಮ ದಾಂಪತ್ಯದಲ್ಲೂ ಪ್ರೀತಿ, ವಿಶ್ವಾಸ, ಸಂಪತ್ತಿನ ಪ್ರವಾಹ ಹರಿಯುತ್ತದೆ ಎಂದು ಭಾವಿಸಿದ್ದಾರೆ.

ಭಾಗಮಂಡಲ ಶ್ರೀ ಭಗಂಡೇಶ್ವರ ವಾರ್ಷಿಕ ಉತ್ಸವ : ಈ ಉತ್ಸವವನ್ನು ಶ್ರೀಭೂತಬಲಿಉತ್ಸವವೆಂದು ದೇವರ ಬಲಿ ಹೊರಗಾಗುವುದೆಂದೂ ಕರೆಯುತ್ತಾರೆ. ಅಕ್ಟೋಬರ್–ನವೆಂಬರ್ ತಿಂಗಳಿನ ವೃಶ್ಚಿಕ ಮಾಸದಲ್ಲಿ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ತ್ರಿಮೂರ್ತಿಗಳ ಮಂದಿರಗಳಲ್ಲಿ ಬ್ರಹ್ಮಕಲಶ ತೀರ್ಥಪ್ರೇಕ್ಷಣೆಗಳು ನಡೆಯುತ್ತವೆ. ಈ ಉತ್ಸವವು ಮೂರು ದಿನ ನಡೆಯುತ್ತದೆ. ಪ್ರಥಮ ದಿನ ಶ್ರೀ ಭಗಂಡೇಶ್ವರ ಸ್ವಾಮಿ ಎಡರಡನೇ ದಿನ ಶೀ ಸುಬ್ರಮಣ್ಯ ಸ್ವಾಮಿ, ಮೂರನೇಯ ದಿನ ಶ್ರೀ ಮಹಾವಿಷ್ಣು ಸ್ವಾಮಿ ಉತ್ಸವ ನಡೆಯುತ್ತದೆ. ಈ ಉತ್ಸವದ ಸಂದರ್ಭದಲ್ಲಿ ಶ್ರೀ ಕಾವೇರಿ ನದಿಯ ದಂಡೆಯಲ್ಲಿ ಅಗಸ್ತ್ಯೇಸ್ವರ ಕಟ್ಟೆಯಲ್ಲಿ ದೀಪಾರಾಧನೆ ಸೇವೆಗೆ ದೇವಾಲಯದಿಂದ ವಿಗ್ರಹವನ್ನು ಹೊತ್ತು ತೆರಳಿ ದೀಪಾರಾಧನೆಯ ನಂತರ ದೇವಸ್ಥಾನಕ್ಕೆ ವಾಪಸಾಗುತ್ತಾರೆ. ಇದರ ಜೊತೆಗೆ ಶ್ರೀ ಸುಬ್ರಹ್ಮಣ್ಯ ಷಷ್ಠಿ ಉತ್ಸವ, ಶ್ರೀ ಶಿವರಾತ್ರಿ ಉತ್ಸವ, ಶ್ರೀ ರಾಮನವಮಿ ಉತ್ಸವವೂ ವಿಶೇಷವಾಗಿ ನಡೆಯುತ್ತದೆ. (ಕ್ಷೇತ್ರಕಾರ್ಯದಿಂದ ತಿಳಿದ ಮಾಹಿತಿ)

ಗುಹ್ಯ ಜಾತ್ರೆ : ಪ್ರತಿ ವರ್ಷ ತುಲಾ ಮಾಸದಲ್ಲಿ ಅಂದರೆ ನವಂಬರ್ ತಿಂಗಳಲ್ಲಿ ದೀಪಾವಳಿ ಅಮವಾಸ್ಯೆಯ ಹಿಂದಿನ ದಿವಸದಂದು ಈ ಜಾತ್ರೆ ನಡೆಯುತ್ತದೆ. ಶ್ರೀ ಕಾವೇರಿಯು ಹರಿದು ಕೊಡಗಿನ ಸಿದ್ದಾಪುರದ ಬಳಿ ಇರುವ ಕಾವೇರಿ ದಡದಲ್ಲಿ ಎತ್ತರದ ನೆಲೆಯಲ್ಲಿರುವ ಅಗಸ್ತ್ಯೇಶ್ವರ ಸ್ವಾಮಿಯ ಸನ್ನಿಧಿಯ 'ಗುಹ್ಯ' ಎಂಬಲ್ಲಿ ಈ ಜಾತ್ರೆ ನಡೆಯುತ್ತದೆ. ಕಾವೇರಿ ನದಿ ತಲಕಾವೇರಿ ಭಾಗಮಂಡಲ, ಶ್ರೀರಂಗಪಟ್ಟಣ, ತಲಕಾಡು, ಭವಾನಿ, ಶ್ರೀರಂಗಂ, ತಂಜಾವೂರು, ಕುಂಭಕೋಣಂ, ಸ್ವಾಮಿಮಲೈ, ಗೋವಿಂದಪುರಂ, ಮಾಯೂರಮ್, ಕಾವೇರಿ

ಪೂಂಪುಹಾರ್ ಮುಂತಾದ ಸ್ಥಳ ಮೂಲಕ ಹರಿಯುತ್ತಿದ್ದಂತೆ ಭಕ್ತಾದಿಗಳು ಅರಿಸಿನ, ಕುಂಕುಮ ಪುಷ್ಪಾದಿಗಳನ್ನು ಹಾಕಿ ಪೂಜಿಸುತ್ತಾರೆ. ಎಷ್ಟೋ ಜನರು ಅವಳನ್ನು ನೆನೆದು, ಪುಣ್ಯಜಲವನ್ನು ಮಿಂದು ಪಾಪ ವಿಮುಕ್ತರಾಗಿದ್ದಾರೆ ಎನ್ನುವರು.

ಜನ್ಮ ತಳೆದ ಪ್ರತಿಯೊಬ್ಬ ಮಾನವನು ಜೀವನರಂಗದಲ್ಲಿ ಹಲವು ಹಂತಗಳಲ್ಲಿ ಹೋರಾಡಿ ಕೊನೆ ಹಂತದಲ್ಲಿ ಮುಕ್ತಿ ಪಡೆಯುತ್ತಾನೆ. ಇಂತಹ ಶ್ರದ್ಧೆ ಭಕ್ತಿಗಳಿಂದ ಕೂಡಿದವರಿಗೆ ಸಾರ್ಥಕ ಫಲವನ್ನು ನೀಡುವ ಶ್ರೀ ಕಾವೇರಿಯ ಪವಿತ್ರ ಹೆಸರಿನ ಬಗ್ಗೆ ಇರುವ ಶ್ಲೋಕ ಈ ಕೆಳಗಿನಂತಿದೆ.

"ಕಾ ಕಾರೋಕುಲುಷಂ ಹಂತಿ ಪ್ರೇ ಕಾರೋ ವಾಂಧಿತ ಪುದ
ಎ ಕಾರೋ ಮೋಕ್ಷದೋ ವೃಣಾಂ ಕಾವೇರೀತ್ಯವಧಾರಯ"
'ಕಾ' ಎಂಬ ವರ್ಣವು ಕಲುಷಗಳ ನಿವಾರಣೆಯನ್ನುಂಟುಮಾಡುವುದು.
'ವೇ' ವರ್ಣವು ಇಷ್ಟಾರ್ಥ ಸಿದ್ಧಿಗಳನ್ನು ದೊರಕಿಸುವುದು
'ರಿ' ವರ್ಣವು ಮೋಕ್ಷ ನೀಡುವುದು.
"ಕಾವೇರಿ ನಾನಾ ತೀರ್ಥಾಧಿ ದೇವತೆ !
ಕಾಮಿತಾರ್ಥ ಫಲಪ್ರದಾತೆ !
ಅವಳು ಅಗಸ್ತ್ಯ ಮುನಿ ನಾಯಕಿ – ಶರಣಾಗತರಕ್ಷಕಿ !
ಕಾವೇರಿ ನಿತ್ಯ ಪ್ರವಾಹೆ!
ಅವಳ ಕಥೆ ಮುಗಿಯದ ಪುಣ್ಯ ಕಥೆ!
ಅವಳ ವೈಭವ ಚ್ಯುತಿ ಇಲ್ಲದ ನಿತ್ಯ ವೈಭವ!" (ಕಾವೇರಿ ವೈಭವ – ಎದುರ್ಕಳ ಶಂಕರನಾರಾಯಣ ಭಟ್)

ದಕ್ಷಿಣ ಗಂಗೆಯಾದ ಶ್ರೀ ಕಾವೇರಿ ಮಾತೆ ಅನಂತಗುಣ ಗಂಭೀರಳು, ಅಮೃತ ಸ್ವಾದುಸಲಿಲಳು, ನಿತ್ಯ ಶಕ್ತಳು, ನಿತ್ಯ ಪೂಜನೀಯಳಾಗಿ ಭಕ್ತ ಜನೋದ್ಧಾರಿಣಿಯಾಗಿ ಕೋಟಿ ಜನರ ಮನಸ್ಸಿನಲ್ಲಿ ವಿರಾಜಮಾನಳಾಗಿದ್ದಾಳೆ. ಆಧುನಿಕ ಕನ್ನಡದ ಕವಿಗಳಾದ ಪಂಜೆ ಮಂಗೇಶರಾಯರು ಕೊಡಗಿನ ಬಗ್ಗೆ ಬರೆದ 'ಹುತ್ತರಿ ಹಾಡಿನಲ್ಲಿ' ಕಾವೇರಿಯನ್ನು ಮುಗಿಲಿನಲ್ಲಿ ಮಿಂಚು ಹೊಳೆಯುವಂತೆ ಹೊಳೆಯುವವಳೆಂದು ಬಣ್ಣಿಸಿದ್ದಾರೆ. (ಕನ್ನಡ ಬಾವುಟ ಕ.ಸ.ಪ. ೧೯೩೮, ಪು. ೧೧೯

ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ
ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ
ಎಲ್ಲಿ ನೆಲವನು ತಣಿಸಿ, ಜನಮನ ಹೊಲದ ಕಳೆಕಳೆ ಕಳೆವಳೋ
ಅಲ್ಲಿ ಆ ಕಡೆ ನೋಡಲಾ!
ಅಲ್ಲಿ ಕೊಡಗರ ನಾಡಲ್ಲಾ !
ಅಲ್ಲಿ ಕೊಡವರ ಬೀಡಲಾ !

ಬ್ರಹ್ಮಗಿರಿಯಲ್ಲಿ ಕಿರಿದಾಗಿ ಹುಟ್ಟಿ ಗುಪ್ತಗಾಮಿನಿಯಾಗಿ ಲೋಕಕಲ್ಯಾಣಕ್ಕಾಗಿ ಹರಿದು ಜನಕೋಟಿಯ ಪಾಲಿಗೆ ದೇವತೆಯಾಗಿ, ಧರ್ಮ ಸಂಸ್ಕೃತಿಗಳ ಬಗ್ಗೆ

ಸಂಬಂಧ ಸಂಸ್ಕಾರವನೇ ನೀಡುವ ಒಂದು ಪವಿತ್ರ ಶಕ್ತಿಯ ಸಂಕೇತವಾಗಿ ಶ್ರೀ ಕಾವೇರಿ ಬೆಳಗುತ್ತಿದ್ದಾಳೆ.

ಕೊಡವ ಹಬ್ಬಗಳು : "ಸಾಮಾನ್ಯವಾಗಿ ಪ್ರತಿವರ್ಷ ಸಾಮಾಜಿಕ ಕ್ಷೇಮಕ್ಕಾಗಿ ವಿಶೇಷ ಸಂದರ್ಭದಲ್ಲಿ ಆಚರಿಸುವ ಜಾನಪದ ಸಂಗತಿಗಳ ಮತ್ತು ಸಂಪ್ರದಾಯದಗಳ ಸಮ್ಮಿಶ್ರ ಜಟಿಲ ಘಟಕವೇ ಹಬ್ಬ. ಹಬ್ಬದ ಆಚರಣೆಯ ಮುಖ್ಯ ಉದ್ದೇಶ ಜೀವನದ ಕಷ್ಟ ನಷ್ಟ ನಿವಾರಣೆಗೆ ಮನಸ್ಸನ್ನು ಸಜ್ಜುಗೊಳಿಸುವುದು. ಲೌಕಿಕದ ಅನೇಕ ಆಸೆಗಳಿಗೆ ಬಲಿಯಾಗಿ ವ್ರತ ನಿಯಮಗಳನ್ನು ಆಚರಿಸಲು ಎಲ್ಲಾ ದಿನಗಳಲ್ಲೂ ಸಾಧ್ಯವಾಗದೇ ತೊಳಲಾಡುವುದರಿಂದ ಇಂತಹ ವಿಶೇಷ ದಿನಗಳಲ್ಲಿ ದೇವರನ್ನು ಪೂಜಿಸಿ, ಧ್ಯಾನಿಸಿ ಲೌಕಿಕ ಮತ್ತು ಅಲೌಕಿಕ ಸುಖ ಪಡೆಯಲು ಅನುಕೂಲವಾಗಂದು ಹಬ್ಬಗಳನ್ನು ಜನಪದರು ಸೃಷ್ಟಿಸಿಕೊಂಡರೆನಿಸುತ್ತದೆ."

ಹಬ್ಬವೆಂದರೆ ಉಂಡು-ಉಟ್ಟು ನಲಿವುದಷ್ಟೇ ಅಲ್ಲ, ದುಡಿಮೆಗೆ ಅವರ ಕಷ್ಟ ಕಾರ್ಪಣ್ಯಗಳಿಗೆ ಒಂದಿಷ್ಟು ವಿರಾಮ ಕೊಟ್ಟು, ಮನಸ್ಸಿಗೆ ನೆಮ್ಮದಿ ಶಾಂತಿಯನ್ನು ನೀಡುವ ದಿನವಾಗಿ ಪರಿಣಮಿಸಿದೆ. ಇದೇ ಹಬ್ಬದ ಮುಖ್ಯ ಉದ್ದೇಶ. ಮನುಷ್ಯನ ವರ್ತನೆ, ನಡವಳಿಕೆಗಳು ಉತ್ತಮಗೊಂಡು, ಸಮಾಜದಲ್ಲಿ ಐಕ್ಯ ಭಾವನೆ ಬೆಳೆಯಲು, ಹಾಗೂ ನಾಡಿನಲ್ಲಿ ಶಾಂತಿ ಕಾಪಾಡಲು, ದುಡಿಮೆಯ ಶ್ರಮವನ್ನು, ಜೀವನದ ಬೇಸರವನ್ನು ಪರಿಹರಿಸಿ ಮನಸ್ಸಿಗೆ ಆನಂದವನ್ನುಂಟು ಮಾಡುವಲ್ಲಿ ಹಬ್ಬಗಳು ಸಹಕಾರಿಯಾಗುತ್ತದೆ. ಧಾರ್ಮಿಕತೆಗೂ ಹಬ್ಬಗಳಿಗೂ ಅನ್ಯೋನ್ಯ ಸಂಬಂಧವಿರುತ್ತವೆ. ಧಾರ್ಮಿಕತೆ ಶಿಸ್ತು ಸಂಯಮದ ನಡವಳಿಕೆಯನ್ನು ರೂಢಿಸುತ್ತದೆ. ಲವಲವಿಕೆ, ಚೈತನ್ಯ ಉತ್ಸಾಹ, ಉಲ್ಲಾಸ, ಹಬ್ಬಗಳ ಮೂಲಗುಣ ವಾಗಿದೆ. ಬಹುಪಾಲು ಹಬ್ಬಗಳಲ್ಲಿ ಉಪವಾಸ ಆಚರಣೆ ಇರುತ್ತದೆ. ಆರೋಗ್ಯದ ದೃಷ್ಟಿಯಿಂದ ಇದು ಉಚಿತವಾದ ಕ್ರಮ. ಅಲ್ಲದೆ ಹಬ್ಬಗಳಿಂದ ಪರಿಸರ ನೈರ್ಮಲ್ಯವೂ ಸಾಧಿತವಾಗುತ್ತದೆ.

ಪ್ರತಿಯೊಂದು ಹಬ್ಬಕ್ಕೂ ರಂಪರಾಗತವಾದ ಹಿನ್ನೆಲೆ ಇರುತ್ತದೆ. ಹಿಂದಿನ ಕಾಲದಿಂದ ರೂಪುಗೊಂಡ ಹಲವಾರು ಸಂಸ್ಕಾರಗಳನ್ನು ಉಳಿಸಿ, ಬೆಳೆಸಿ, ಅವುಗಳ ಸಾಮಾಜಿಕ, ಧಾರ್ಮಿಕ, ಪೌರಾಣಿಕ, ಚಾರಿತ್ರಿಕ ಮತ್ತು ವೈಚಾರಿಕ ಹಿನ್ನೆಲೆಯಿಂದ ಪ್ರಭಾವಿತವಾಗಿ ಜನರ ಜೀವನದ ಮೇಲೆ ಪ್ರಭಾವ ಬೀರುತ್ತದೆ.

ಕೊಡವರು ಹಬ್ಬ ಜಾತ್ರೆಗಳನ್ನು ಪರಂಪರಾಗತವಾಗಿ ಯಾವುದೇ ಪ್ರತಿಫಲ ಅಪೇಕ್ಷೆಯನ್ನಿಟ್ಟುಕೊಳ್ಳದೇ ಇಂದಿಗೂ ಉಳಿಸಿಕೊಂಡು ಬರುತಿದ್ದಾರೆ. ಕೊಡವರ ಹಬ್ಬಗಳು ಕೊಡಗಿನ ಜೀವನ ಮತ್ತು ಸಂಸ್ಕಾರ, ಸಂಸ್ಕೃತಿಯನ್ನು ಸಮರ್ಪಕವಾಗಿ ಪರಿಚಯ ಮಾಡಿಕೊಡುತ್ತವೆ. ಆದರೆ ಎಲ್ಲಾ ಭಾರತೀಯ ಹಬ್ಬಗಳನ್ನು ಆಚರಿಸುವುದಿಲ್ಲ.

ಕೃಷಿ ಪ್ರಧಾನವಾದ ಕೊಡಗಿನಲ್ಲಿ ಕೊಡವರು ಆಚರಿಸುವ ಹಬ್ಬಗಳೆಲ್ಲವೂ ಇತರೆಡೆಗಳಲ್ಲಿ ಆಚರಿಸುವ ಹಬ್ಬಗಳಿಗಿಂತ ಭಿನ್ನವಾಗಿ, ವೈಶಿಷ್ಟ್ಯಪೂರ್ಣವಾಗಿರುತ್ತವೆ. ಇಲ್ಲಿಯ ಹಬ್ಬಗಳ ಆಚರಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದರೆ ಪ್ರತಿಯೊಂದು

ಹಬ್ಬವೂ ಬತ್ತದ ಕೃಷಿಗೆ ಅನುಗುಣವಾಗಿ ಆಚರಣೆಗೆ ಬಂದಿರುವುದು ಗೋಚರಿಸುತ್ತದೆ. ಇವರ ಎಲ್ಲಾ ಹಬ್ಬಗಳಲ್ಲಿ ಶೂರತ್ವ, ಕ್ರೀಡೆಯ ಹಿನ್ನೆಲೆ, ಸಂಪ್ರದಾಯದ ಕಾಂತಿ, ಸಂಭ್ರಮ, ಉಲ್ಲಾಸ ಎದ್ದು ಕಾಣುತ್ತದೆ.

ಕೊಡವರು ಅವರದೆ ಆದ ಹಬ್ಬಗಳನ್ನು ಆಚರಿಸುತ್ತಾರೆ. ಪ್ರಮುಖ ಹಬ್ಬಗಳಾದ ಕೈಲು ಪೊಳ್ದ್, (ಆಯುಧ ಪೂಜೆ) ಕಾವೇರಿ ಸಂಕ್ರಮಣ, ಹುತ್ತರಿಹಬ್ಬಗಳು ಕೊಡವರ ಜೀವನದ ತಳಹದಿಯನ್ನು ಮತ್ತು ಧಾರ್ಮಿಕ ಬೆಳೆವಣಿಗೆಯನ್ನು ಸಾರುತ್ತವೆ.

೧. ಕೈಲು ಮುಹೂರ್ತ(ಕೈಲ್ ಪೊಳ್ದ್)

ಸುರಿಯುವ ಮಳೆ ಕೊರೆಯುವ ಚಳಿಯಲ್ಲಿ ಕೆಸರುಗದ್ದೆಯ 'ನಾಟಿ' ಕೆಲಸ ಮುಗಿಸಿದ ಸಂದರ್ಭದಲ್ಲಿ ಕೆಲಸದಿಂದ ದೇಹವನ್ನು ದಂಡಿಸಿದವರು ಹೊಟ್ಟೆ ತುಂಬಾ ಉಂಡು, ಕುಡಿದು, ಸಂಭ್ರಮಿಸುವ ಹಾಗೂ ಮೈದಾನದಲ್ಲಿ ವಿವಿಧ ಕ್ರೀಡೆಗಳನ್ನು ಪ್ರದರ್ಶಿಸುವ 'ಕೈಲು ಮುಹೂರ್ತ' ಕೊಡವರ ಪ್ರಮುಖ ಹಬ್ಬಗಳಲ್ಲೊಂದಾಗಿದೆ. (ಛಾಯಾಚಿತ್ರವನ್ನು ಅನುಬಂಧ-೬ರಲ್ಲಿ ನೀಡಲಾಗಿದೆ)

ಈ ಹಬ್ಬವನ್ನು ಕೊಡವ ಭಾಷೆಯಲ್ಲಿ 'ಕೈಲ್ ಪೊಳ್ದ್' ಎಂದು ಕರೆಯುತ್ತಾರೆ. 'ಕೈಲ್' ಎಂದರೆ ಆಯುಧ 'ಪೊಳ್ದ್' ಎಂದರೆ ಹಬ್ಬ. ಇದು ಸಂಭ್ರಮದ ಮುಹೂರ್ತವಾಗಿದೆ. ಈ ಹಬ್ಬವು ಕೊಡವರ ಆಯುಧ ಪೂಜೆ. ಈ ಹಬ್ಬವು ಕೊಡವರ ಲೆಕ್ಕದ ಪ್ರಕಾರ 'ಚಿನ್ಯಾರ್' ತಿಂಗಳ ಹದಿನೆಂಟನೇ ತಾರೀಕಿನಂದು ಬರುತ್ತದೆ. ಅಂದರೆ ಪ್ರತಿ ವರ್ಷ ಸೆಪ್ಟಂಬರ್ ೨ ರಂದು ಅದನ್ನು ಆಚರಿಸುತ್ತಾರೆ.

ಕೈಲು ಮುಹೂರ್ತ ದಿನದಿಂದು ಊರ ಮೈದಾನದಲ್ಲಿ ವಿವಿಧ ಕ್ರೀಡಾಕೂಟ, ಪ್ರತಿ ಮನೆಗಳಲ್ಲಿ ಅಕ್ಕಿ ಕಡುಂಬುಟ್ಟು (ಕಡುಬು) ಹಂದಿಮಾಂಸದ ಸಾರು, ಜೊತೆಗೆ ಮದ್ಯ ಹಾಗೂ ಕುಣಿತಗಳು ಸಂತೋಷ ಮನರಂಜನೆಯನ್ನು ನೀಡುತ್ತವೆ. ಕೆಲವೂ ಸಾಂಪ್ರದಾಯಿಕ ವಿಶೇಷ ಆಚರಣೆಗಳು ಮನಸೂರೆಗೊಳ್ಳುತ್ತವೆ. ಹಬ್ಬದ ದಿನದಂದು ತಮ್ಮೊಂದಿಗೆ ಹೆಗಲು ಕೊಟ್ಟು ದುಡಿದ ಎತ್ತುಗಳನ್ನು ಶುಭ್ರವಾಗಿ ತೊಳೆದು ನೊಗ ನೇಗಿಲು ಗಳನ್ನು ಪೂಜೆ ಮಾಡುತ್ತಾರೆ. ಎತ್ತುಗಳಿಗೆ ಎಣ್ಣೆ ಅರಿಸಿನವನ್ನು ಹಚ್ಚಿ ಕುತ್ತಿಗೆಗೆ ನೊಗವನ್ನಿಟ್ಟು ಪ್ರಾರ್ಥಿಸುತ್ತಾರೆ. ಈ ಸಂದರ್ಭದಲ್ಲಿ ಅಕ್ಕಿಯಿಂದ ಮಾಡಿದ ವಿಶೇಷ ತಿಂಡಿಯನ್ನು ಸೇವಿಸಲಾಗುತ್ತದೆ. ಇದು 'ಸಂಕ್ರಾಂತಿ' ಹಬ್ಬದ ಆಚರಣೆಯನ್ನು ಹೋಲುತ್ತದೆ.

ಈ ದಿನ ಮುಂಜಾನೆ ಮನೆಯ ಒಡೆಯನ ಪರಿಶುದ್ಧವಾಗಿ 'ಕುತ್ತರ್ಚಿ' ಎಂಬ ಮರದ ಕೊಂಬೆಯನ್ನು ತಂದು ನೇರಳೆ ಮರದ ರೆಂಬೆಯೊಂದಿಗೆ ಜೋಡಿಸಿ ಬಿಲ್ಲು ಬಾಣ ತಯಾರಿಸಿ ಹಾಲು ಬರುವ ಮರಕ್ಕೆ ಸಿಕ್ಕಿಸುತ್ತಾರೆ. ಇದನ್ನು ಕೊಡವರು 'ಆಪ್ ಪತರ್' ಎಂದು ಕರೆಯುತ್ತಾರೆ. ತದನಂತರ 'ಕೋವಿ' ಯನ್ನು ದೇವರಕೋಣೆಯಲ್ಲಿ, ವಿಶೇಷ ಹೂವಾದ 'ಕೋವಿ ಹೂ' (ತೋಕ್‌ಪೂ) ಇಟ್ಟು 'ತಳಿಯಕ್ಕಿ ಬೊಳ್‌ಕ್' (ಅಕ್ಕಿ ತುಂಬಿದ ತಟ್ಟೆಯದೀಪ)ನ್ನು ಹೊತ್ತಿಸಿ ಪ್ರಾರ್ಥಿಸುತ್ತಾರೆ.

ಸಾಂಪ್ರದಾಯಿಕ ಉಡುಪಾದ 'ಕುಪ್ಪಿಚೇಲೆ'ಯನ್ನು ಧರಿಸಿ ಹಿರಿಯರನ್ನು ಪ್ರಾರ್ಥಿಸಿ ದೀಪಕ್ಕೆ ಅಕ್ಕಿ ಹಾಕಿ ಕುಟುಂಬದ ರಕ್ಷಣೆ ಕೋರುತ್ತಾರೆ. ಹಬ್ಬದ ದಿನದಂದು ಮಾಡಿದ ಭಕ್ಷ್ಯ ಭೋಜನ ಹಾಗೂ ಮದ್ಯವನ್ನು 'ಗುರುಕಾರಣ'ರಿಗೆ ಎಡೆಯಿಟ್ಟು ಅನಂತರ ಹಿರಿಯರ ಕಾಲಿಗೆ ನಮಸ್ಕರಿಸುತ್ತಾರೆ. ಪೂಜೆ ಮಾಡಿದ ಕೋವಿಯನ್ನು ಹೆಗಲಿಗೇರಿಸಿಕೊಂಡು ಬೇಟೆಯಾಡಿ ಮಾಂಸವನ್ನು ತರುತಿದ್ದರಿಂದ ಈ ಹಬ್ಬದಲ್ಲಿ ಮಾಂಸಕ್ಕೆ ಪ್ರಾಧಾನ್ಯತೆ ಇದೆ. ವ್ಯವಸಾಯದ ಕೆಲಸ ಕಾರ್ಯಗಳು ಮುಗಿದ ನಂತರ ಕೈಲ್‌ಪೊಳ್ದ್ ನಿಯಮದ ಪ್ರಕಾರ ಧಾರಣ ಮಾಡಬೇಕು. ಆಯುಧ ಇಡುವಾಗ ಕೆಲವು ನಿಯಮ ಸಂಪ್ರದಾಯ ಅನುಸರಣೆಯನ್ನು 'ಕೈಲ್ ಪೊಳ್ದ್‌ಕಟ್ಟ್' ಎನ್ನುತ್ತಾರೆ. ಕೊಡಗು ಬೆಟ್ಟ ಗುಡ್ಡರಿಂದ ಆವೃತ್ತವಾಗ ಮತ್ತು ಕೃಷಿ ಪ್ರಧಾನ ಬೇಸಾಯ ಭೂಮಿಯನ್ನು ಹೊಂದಿರುವ ಕಾರಣ, ಕೊಡವರು ತಮ್ಮ ಬೆಳೆಯನ್ನು ರಕ್ಷಿಸಲು ಹಾಗೂ ವನ್ಯ ಮೃಗಗಳನ್ನು ಬೇಟೆಯಾಡಲು ಆಯುಧವನ್ನು ಬಳಸುತ್ತಾರೆ. ಪೂಜಿಸಿದ ಆಯುಧಗಳನ್ನು ಎತ್ತಿ ಹಿಡಿದ ಹಿರಿಯ ವ್ಯಕ್ತಿ ಹೀಗೆ ಹಾಡುತ್ತಾನೆ.

"ನರಿನೋ ಪಂದಿನೋ ಬಟ್ಟೆ ಬುಟ್ಟ್ ಪಣಂಗ್
ಶತ್ರುರ್‌ನ ಎಣಂಗತೆ, ಶತ್ರುರ್‌ನ ಎಣಂಗುವೇಂಗಿ ಬಟ್ಟೆ ಕೆಟ್ಟ ಪಣಂಗ್
ಮಿತ್ತುರುಕ್ ತೋಣೆಯಾಯಿತ್ ನಿಲ್ಲ್, ರಾಜಂಗ್ ಮಿನಿಯತೆ ದೇವರ್ ಮರೆಯತೆ"[೬]

ಎಂದು ಹೇಳಿ ನಿಂತಿರುವವರಲ್ಲಿ ಹಿರಿಯ ವ್ಯಕ್ತಿಗೆ ಕೊಡುತ್ತಾನೆ. ಅದನ್ನು ತೆಗೆದುಕೊಂಡು ಆ ವ್ಯಕ್ತಿ ಪಾದಮುಟ್ಟಿ ನಮಸ್ಕರಿಸಿ ಆ ದಿನವೇ ಬೇಟೆಯಾಡುವ ದಿನವನ್ನು ನಿಶ್ಚಯ ಮಾಡುತ್ತಾನೆ.[೭] ಆದರೆ ಇತ್ತೀಚೆಗೆ ಹಳೆಯ ಪದ್ಧತಿಗಳು ಬದಲಾವಣೆಯಾಗಿವೆ.

ಕೊಡಗಿನ ಕೈಲ್ ಪೊಳ್ದ್ ಹಬ್ಬದ ಬಗ್ಗೆ ಜನಪದ ಸಾಹಿತ್ಯದಲ್ಲಿ ಕೊಡವ ಭಾಷೆಯ ಹಾಡು ಈ ಕೆಳಗಿನಂತಿದೆ.

"ಪನ್ನಿರಂಡ್ ಕಾಲೋಳ
ವನವಾಸ ಕಯಿಕೊಂಡ
ಪಂಚ ಪಾಂಡೊಗಂಜಾಲೊ
ಅಜ್ಞಾತವಾಸ ಕಾಯಿ
ವಿರಾಟನಗರಕೊ
ತಂಗೆಲ್ಲಾರು ಪೋಷಕ
ತಾಂದಾನ್ ಪುಡಿಪ್ಪಾಂಜ
ಮುಂಬುಡಿಚಿ ಪೋನಾನ
ಕತ್ತಿಮುಕ್ಕಿ ತೆಳ್‌ಕಿತೊ
ತೇರ್‌ತ ತೆಳ್ ಚಿತೊ
ಆರತಿ ಪುಡಿಚಿತೊ
ಚನ್ನಣ ಕುರಿಯಿಟ್

ಚೋಂದಪೂವ್ ಚೂಡಿತೊ
ನೆಯಿವೇದ್ಯಾವಡೆ ನೀಡಿ
ಪಂಚಾರತಿ ಮುಡಿ ಚಿತೊ
ಆಯುಧ ಪೂಜೆ ಮಾಡ್ವಾಂಗೊ, ಕೈದುಪೊಳ್ದರಿದಣ್ಣುವದೊ.."[೭]

೧೯ ಹಾಡಿನಲ್ಲಿ ಪಾಂಡವರು ಅಜ್ಞಾತವಾಸದಲ್ಲಿ ಶಸ್ತ್ರಗಳನ್ನು ರಹಸ್ಯವಾಗಿಟ್ಟು ಅಜ್ಞಾತವಾಸ ಕಳೆದ ಮೇಲೆ ಆ ಶಸ್ತ್ರಗಳನ್ನು ಗೋಗ್ರಹಣ ಕಾಲದಲ್ಲಿ ತೆಗೆದುಕೊಂಡ ವಿಚಾರವಿದೆ. ಕೊಡವರು ಕ್ಷತ್ರಿಯ ವಂಶಸ್ಥರಾದ್ದರಿಂದ ಅದನ್ನು ಅನುಸರಿಸುತ್ತಾರೆಂಬ ಅಭಿಪ್ರಾಯ ವ್ಯಕ್ತವಾಗಿದೆ. ಕೊಡವರು ಆಚರಿಸುವ ಆಯುಧ ಪೂಜೆ ಮೈಸೂರಿನ ರಾಜ ಮನೆತನದಲ್ಲೂ ಕಾಣುತ್ತದೆ. ಇದು ಕೊಡವರು ಕ್ಷತ್ರಿಯ ಮೂಲ ದವರೆಂಬುದನ್ನು ಪುಷ್ಟೀಕರಿಸುತ್ತದೆ.

ಇತ್ತೀಚೆಗೆ ಕೊಡವರ ಹಬ್ಬಗಳಲ್ಲಿ ಬದಲಾವಣೆ ಕಂಡುಬಂದಿದೆ. 'ಬೇಟೆ' ಯನ್ನು ನಿಷೇಧಿಸಿರುವ ಕಾರಣ ಹಬ್ಬಕ್ಕಾಗಿ ಮನೆಯಲ್ಲಿಯೇ ಹಂದಿ ಸಾಕಾಣೆ ಮಾಡುತ್ತಿದ್ದಾರೆ. ಜಿಲ್ಲೆಯಾದ್ಯಂತ ಹಲವು ವಿವಿಧ ಕ್ರೀಡಾಕೂಟಗಳು ನಡೆಯುತ್ತವೆ. ಸಂತೋಷ ಕೂಟಗಳನ್ನು ಏರ್ಪಡಿಸುತ್ತಾರೆ ಹಬ್ಬಕ್ಕೆ ಆಗಮಿಸುವ ಅತಿಥಿಗಳನ್ನು, ನೆಂಟರಿಷ್ಟರನ್ನು, ಬಂಧುಬಾಂಧವ್ಯದವರನ್ನು ಆತ್ಮೀಯವಾಗಿ ನಡೆಸಿಕೊಳ್ಳುತ್ತಾರೆ. ಇದು ಆತ್ಮೀಯ ಸಂಬಂಧ ಬೆಸೆಯುತ್ತದೆ.

೨. ತುಲಾಸಂಕ್ರಮಣ (ಕಾವೇರಿ ಚಂಗ್ರಾಂದಿ) : ತುಲಾ ಸಂಕ್ರಮಣದ ದಿನದಂದು ಕಾವೇರಿಯು ಉದ್ಭವಗೊಂಡು ಕನ್ನಿಕೆ ಮತ್ತು ಸುಜ್ಯೋತಿ ನದಿಗಳೊಡನೆ ಸಂಗಮಿಸಿ ಹರಿಯುತ್ತಾಳೆ. 'ತಲಕಾವೇರಿ'ಯಲ್ಲಿ ಅಕ್ಟೋಬರ್ ತಿಂಗಳ ೧೫-೧೮ ರ ಸುಮಾರಿಗೆ ತೀರ್ಥೋದ್ಭವವಾಗುತ್ತದೆ. ಈ ಸ್ಥಳವನ್ನು 'ಬ್ರಹ್ಮ ಕುಂಡಿಕೆ' 'ಕಾವೇರಿ ಕುಂಡಿಕೆ', ಪವಿತ್ರ 'ಪುಷ್ಕರಿಣಿ', 'ದೇವಿಕೊಳ' ಎಂದು ಕರೆಯುತ್ತಾರೆ. ತೀರ್ಥೋದ್ಭವವನ್ನು ಕುರಿತು 'ಶ್ರೀ ಕಾವೇರಿ ಅಷ್ಟಕ'ದಲ್ಲಿ ಬರುವ ಆಕೆಯ ಸ್ತೋತ್ರ ಇಂತಿದೆ.

"ತುಲಾಮಾಸೇತು ಕಾವೇರಿ ಸರ್ವ ತೀರ್ಥಾಶ್ರೀತಾ ನದೀ
ಪಂಚಪಾತಕ ಸಂಪತ್ರೀರ್ ವಾಜಿಮೇಧ ಫಲಪ್ರದಾ
ಭಕ್ತಾನುಕಂಪೇ ಮುನಿಭಾಗ್ಯಲಕ್ಷ್ಮೀ ನಿತ್ಸೇ ಜಗನ್ಮಂಗಲ ದಾನಶೀಲೆ
ನಿರಂಜನೇ ದಕ್ಷಿಣದೇಶ ಗಂಗೇ ಕಾವೇರಿ ಕಾವೇರಿ ಮಮಪ್ರಸೀದ".

ಹರದಾಸ ಅಪ್ಪಚ್ಚು ಕವಿ ಕಾವೇರಿಯನ್ನು ಹೀಗೆ ಸ್ತುತಿಸುತ್ತಾರೆ.

"ಕಾವೇರಮ್ಮ –ದೇವಿ ತಾಯಿ ಕಾಪಡೆಂಗಳಾ
ಬಾಳಂಡೊಂದ್ ದೇಶಕ್ಕೆಲ್ಲ ನಲ್ಲದ್ ಮಾಡೀ।
ಕೇಳಪಟ್ಟ ಪಾಕಡಕ್ ಪೋಯಿ ಸೇರಿಯಾ ॥
ಈ ಲೋಕಕ್ ಮನುಷ್ಯಕೆಜ್ಜ ಕರ್ಮಡೆಲ್ಲ ನೀ।
ಆಳ್‌ಭೇದ ಕಾಣತೆಯೋ ಪಾಪತ್ ಪಿಯಾ॥
ಮಾಯತುಳ್ಳದೇವಿ ನೀಡ ಪಾದರ್ ಬುವಾ।
ಚಾಯಿಗೊಂಬ್ ಎಂದು ನೀನು ಕಾಪಾಡ್ ದೇವಿ॥".

ಎಂದು ದೇಶಕ್ಕೆಲ್ಲ ಒಳ್ಳೆಯದನ್ನು ಮಾಡಿ ಮನುಷ್ಯ ಕುಲ ಸುಖವಾಗಿ ಬಾಳಲೆಂದು ಹರಸಿ ಹಾಲ್ಗಡಲಿಗೆ ಹೋಗಿ ಸೇರಿದ ಕಾವೇರಿ ತಾಯಿಯ ಪಾದಕ್ಕೆ ನಾನು ಅಡ್ಡ ಬೀಳುವೆ, ಮಾಯಾವಿ ದೇವಿ ನಮ್ಮನ್ನು ಕಾಪಾಡು ಎಂದು ಬೇಡಿಕೊಳ್ಳುತ್ತಾರೆ.

'ತಲಾಕಾವೇರಿ'ಗೆ ಹೋಗಿ ಅಲ್ಲಿನ 'ಪುಷ್ಕರಿಣಿ'(ಕೊಳ) ಯಲ್ಲಿ ಪವಿತ್ರ ಸ್ನಾನಮಾಡಿ ಅಗಸ್ತ್ಯೇಶ್ವರನಿಗೆ ಪೂಜೆ ಸಲ್ಲಿಸುತ್ತಾರೆ. ಆ ದಿನ ತಲಕಾವೇರಿಯ ಪವಿತ್ರ 'ತೀರ್ಥ ಕುಂಡಿಕೆ' ಯಲ್ಲಿ ತೀರ್ಥ ಉಕ್ಕಿ ಗುಪ್ತಗಾಮಿನಿಯಾಗಿ ಹರಿದು ಕಾವೇರಿಯನ್ನು ಸೇರುವುದು ಅಂದಿನ ವಿಶೇಷತೆ.

ಕಾವೇರಿ ತೀರ್ಥೋದ್ಭವದ ಅಂಗವಾಗಿ ಕೊಡವರು ತಮ್ಮ ಬತ್ತದ ಗದ್ದೆ ಹಾಗೂ ತೋಟಕ್ಕೆ "ಬೊತ್ತ್" (ನಿಶಾನೆ) ಹಾಕಬೇಕು. ಬಿದಿರನ್ನು ಒಡೆದು ಸುಮಾರು ನಾಲ್ಕಡಿ ಉದ್ದದ ದಬ್ಬೆಗಳಾಗಿ ಮಾಡಿ ಅಂತಹ ಎರಡು ದಬ್ಬೆಗಳ ತುದಿಯನ್ನು ಒಡೆದು ಗದ್ದೆಯ ಮಧ್ಯದಲ್ಲಿ ಅವುಗಳನ್ನು ಕತ್ತರಿ ರೂಪದಲ್ಲಿ ಚುಚ್ಚಬೇಕಾಗುತ್ತದೆ.

ಅದರ ಮೇಲ್ಭಾಗದ ತುದಿಗೆ 'ಕೈಬಳ್‌ಬಳ್ಳಿ' (ಒಂದು ಜಾತಿಯ ಬಳ್ಳಿ) ಯನ್ನು ವೃತ್ತಾಕಾರವಾಗಿ ಸುತ್ತಬೇಕು. ಇದನ್ನು 'ಬೊತ್ತೆಲೆ' ಎನ್ನುತ್ತಾರೆ. ಈ ನಿಶಾನೆಗಳನ್ನು ಪ್ರತಿ ಕುಟುಂಬದ ಆಸ್ತಿಗಳಾದ ಗದ್ದೆ, ಭಾವಿ, ಕೆರೆ, ದನದಕೊಟ್ಟಿಗೆ, ತೋಟ ಮನೆಗಳ ಮುಂದೆ ನಿಲ್ಲಿಸುತ್ತಾರೆ. ತೋಟಗಳಲ್ಲಿ 'ಬೊತ್ತು' ಹಾಕುವಾಗ "ಪಾಂಡವ ಕೌರವ ಬೊತ್ತ್ರೋ, ನೆರಳೋ, ಕಾಂಡೋ, ಕದರೋ, ಕ್ಲೋ.........ಕ್ಲೋ.........ಕ್ಲೋ..... ಎಂದು ಉದ್ಗರಿಸುತ್ತಾರೆ. ಪಾಂಡವರ ಭೂಮಿಯಲ್ಲಿ ನಮ್ಮ ಭೂಮಿ ಎಂದು ಮೂರು ಬಾರಿ ಹೇಳಿದ ನಂತರ ಬಾಳೆಎಲೆಯಲ್ಲಿ ದೋಡೆ ಮತ್ತು ಅಕ್ಷತೆಯನ್ನು ಹಾಕಿ ಕಾವೇರಿ ಮಾತೆಯನ್ನು ಪ್ರಾರ್ಥಿಸುತ್ತಾರೆ. ತೀರ್ಥೋದ್ಭವದ ಮಾರನೇದಿನ ಗದ್ದೆಗಳಲ್ಲಿ ಮನೆ ಮುಂದೆ "ದೋಸೆ, ಸಿಹಿಕುಂಬಳ ಸಾರು"ನ್ನು ಎಡೆ ಇಡುವ ಪದ್ಧತಿ ಈ ಹಬ್ಬದಲ್ಲಿ ಕಂಡುಬರುತ್ತದೆ.

ತೀರ್ಥೋದ್ಭವದ ದಿನ ಅಥವಾ ಮರುದಿನ ಬೆಳಗ್ಗೆ ಪ್ರತಿಮನೆಯಲ್ಲಿ 'ಕಣಿ ಪೂಜು' (ಕಣಿಪೂಜೆ) ಮಾಡುತ್ತಾರೆ. ಸೌತೆಕಾಯಿ ಅಥವಾ ತೆಂಗಿನಕಾಯಿಯನ್ನು ಬಳಸಿ ಸಂಕ್ರಮಣ ಹೂ ಎಂದೇ ಬಿಂಬಿತವಾದ 'ಚೌತಿ ಪೂ' (ಸೇವಂತಿಗೆ ಹೂವಿನರೂಪ)ನಿಂದ ಅಲಂಕರಿಸಿ ಶ್ರೀ ಕಾವೇರಿ ಪ್ರತಿ ರೂಪವನ್ನು ಮಾಡುತ್ತಾರೆ. ಕೆಂಪು ರೇಷ್ಮೆ ವಸ್ತ್ರವನ್ನು ತ್ರಿಕೋನಾಕಾರದಲ್ಲಿಟ್ಟು ಆ ಪ್ರತಿಮೆಗೆ ಆಭರಣತೊಡಿಸಿ ವೀಳ್ಯೆ ಇಟ್ಟು ಅಕ್ಕಿ ತುಂಬಿದ ತಟ್ಟೆಯ ಮೇಲಿಟ್ಟು, 'ನೆಲ್ಲಕ್ಕಿ ನಡುಬಾಡೆ'ಯಲ್ಲಿ ಪ್ರತಿಷ್ಠಾಪಿಸಿದ ಮೂರ್ತಿಗೆ ಪೂಜೆ ಮಡುತ್ತಾರೆ. 'ತಳಿಯಕ್ಕಿ ಬೊಳ್‌ಕು'(ಅಕ್ಕಿ ತುಂಬಿದದೀಪ)ನಿಂದ ಮುತ್ತೈದೆಯರು ದೀಪ ಬೆಳಗುತ್ತಾರೆ. ಈ ಕಣಿಪೂಜೆಗೆ ಮನೆಯವರೆಲ್ಲರೂ ದೀಪ ಬೆಳಗಿ ಅಕ್ಕಿ ಪ್ರೋಕ್ಷಿಸಿ ಮೂರು ದಿನಗಳವರೆಗೆ ಪೂಜಿಸುವರು. ತೌರಿಗೆ ಬಂದ ಹೆಣ್ಣುಮಕ್ಕಳು ಬಂದುಗಳು ಈ ಪ್ರತಿಮೆದರ್ಶನ ಮಾಡಿ ಹಿರಿಯರ ಕಾಲಿಗೆ ನಮಸ್ಕರಿಸುವುದು ಕೊಡವರಲ್ಲಿ ಕಡ್ಡಾಯವಾಗಿದೆ.

ಪೂಜೆಯ ನಂತರ ಹಾಲು ಬರುವ ಮರ ಅಥವ ಹೊಳೆಯಲ್ಲಿ ಪ್ರತಿರೂಪವನ್ನು ವಿಸರ್ಜಿಸುತ್ತಾರೆ. ಕಾವೇರಿ ಸಂಕ್ರಮಣದಂದು ಕಾವೇರಿಮಾತೆ ನಾಡನ್ನು ನೋಡಲು ಬಂದಾಗ 'ಬೊತ್ತ್'ನಲ್ಲಿಟ್ಟಿದ್ದ ನೈವೇದ್ಯನೋಡಿ ಸಂತೋಷದಿಂದ, ತಮ್ಮ ಕೆರೆ, ಬಾವಿ ಕಟ್ಟೆಗಳಲ್ಲಿ ಉಕ್ಕುತ್ತಾಳೆ ಎಂಬ ನಂಬಿಕೆ ಕೊಡವರಲ್ಲಿದೆ. ಕಾವೇರಿ ಈ ಲೋಕವನ್ನೆಲ್ಲಾ 'ಬೊತ್ತ್'ನ ವೃತ್ತಾಕಾರವಂತೆ ಬಳಸಿ ಸಮೃದ್ಧಗೊಳಿಸಲಿ ಎಂಬ ಆಶಯವೂ ಇಲ್ಲಿದೆ. ಇಂತಹ ವಿಶಿಷ್ಟ ಪದ್ಧತಿ ಇಂದಿಗೂ ಕೊಡವರಲ್ಲಿ ಕಂಡುಬರುತ್ತಿದೆ.

ಹುತ್ತರಿ ಹಬ್ಬ

ಇದು ಕೊಡಗಿನಲ್ಲಿ ಸುಗ್ಗಿ ಆಚರಣೆಯ ಹಬ್ಬವೆಂದೇ ಬಿಂಬಿತವಾಗಿದೆ. ನವಂಬರ್ ಅಥವಾ ಡಿಸೆಂಬರ್ ತಿಂಗಳಿನಲ್ಲಿ ಪೂರ್ಣಿಮೆಯ ದಿನ ಹುತ್ತರಿ ಹಬ್ಬ ಬರುತ್ತದೆ. ನವಂಬರ್ ತಿಂಗಳಿನಲ್ಲಿ ಆಚರಿಸುವ ಹುತ್ತರಿಯನ್ನು 'ಹಸಿ ಹುತ್ತರಿ' ಎನ್ನುತ್ತಾರೆ. ಗದ್ದೆಯಲ್ಲಿ ಬೆಳೆದ ಹೊಸ ಬತ್ತವನ್ನು ಮನೆಗೆ ತರುವ ಸಂಭ್ರಮವೇ ಈ ಹಬ್ಬದ ಸಂಕೇತವಾಗಿರುತ್ತದೆ. 'ಹುತ್ತರಿ' ಎಂಬ ಪದ ಕೊಡವ ಭಾಷೆಯ 'ಪುತ್ತರಿ' ಎಂಬ ಪದದಿಂದ ಬಂದಿದೆ. 'ಪುತ್ತರಿ' ಎಂದರೆ ಹೊಸ ಅಕ್ಕಿ ಎಂದರ್ಥ. ಅರಿ ಎಂದರೆ ಮಲೆಯಾಳ ಮತ್ತು ತಮಿಳಿನ ಭಾಷೆಗಳಲ್ಲಿ ಅಕ್ಕಿ. 'ಪುದಿ ಅರಿ' ಎಂದರೆ 'ಹೊಸ ಅಕ್ಕಿ'ಲ ಇದೇ ಪುತ್ತರಿಯಾಗಿ ಕ್ರಮೇಣ ಹುತ್ತರಿ ಎಂದಾಗಿದೆ.

ಹುತ್ತರಿ ಎಂದರೆ ರೈತರು ತಾವು ವರ್ಷಪೂರ್ತಿ ಬೆಳೆದ ಧಾನ್ಯಲಕ್ಷ್ಮಿಯನ್ನು ಮನೆಗೆ ತಂದು ಪೂಜಿಸುವ ಒಂದು ಆಚರಣೆ. ಧಾನ್ಯಲಕ್ಷ್ಮಿಯ ಪೂಜೆಯನ್ನು ವಿವಿಧ ಪ್ರದೇಶಗಳಲ್ಲಿ ಬೇರೆ ಬೇರೆ ಪದ್ಧತಿಗಳಿಂದ, ಕ್ರಮಗಳಿಂದ, ಆಚಾರ-ವಿಚಾರಗಳಿಂದ, ಬೇರೆ ಬೇರೆ ಕಾಲಗಳಲ್ಲಿ ಆಚರಿಸಲಾಗುತ್ತದೆ. ಕೊಡಗಿನಾದ್ಯಂತ ಏಕಕಾಲಕ್ಕೆ ನವೆಂಬರ್ ಅಥವಾ ಡಿಸೆಂಬರ್ ತಿಂಗಳಿನಲ್ಲಿ ರೋಹಿಣಿ ನಕ್ಷತ್ರವಿರುವ ಹುಣ್ಣಿಮೆಯಂದು ಆಚರಿಸುತ್ತಾರೆ.

ಹುತ್ತರಿ ಹಬ್ಬ ಅತೀ ವಿಜೃಂಭಣೆಯಿಂದ ೧೦-೧೨ ದಿನಗಳ ಕಾಲ ನಡೆಯುತ್ತದೆ. ಕೊಡವರಲ್ಲಿ ಹಬ್ಬವನ್ನು ನಿಗದಿಪಡಿಸುವ ಒಂದು ವಿಶೇಷ ಕ್ರಮವಿದೆ. ಕೊಡಗಿನ ಕುಲದೈವವೆಂದೇ ಪ್ರಸಿದ್ಧಿ ಪಡೆದ ಪಾಡಿ ಶ್ರೀ ಇಗ್ಗುತ್ತಪ್ಪ ದೇವಸ್ಥಾನದಲ್ಲಿ ಸಂಪ್ರದಾಯದದಂತೆ ಹುತ್ತರಿ ಹಬ್ಬಕ್ಕೆ ೧೫ ದಿನ ಮುಂಚಿತವಾಗಿ ನಿಗದಿಪಡಿಸಿದ ದಿನದಂದು ಹಿಂದಿನ ಆಚರಣೆಯಂತೆ ಅದಕ್ಕೆ ಸಂಬಂಧಿಸಿದ ಕುಟುಂಬಸ್ಥರಿಂದ ಗುರುತಿಸಲ್ಪಟ್ಟವರು ಪಾಡಿ ಶ್ರೀ ಇಗ್ಗುತ್ತಪ್ಪ ದೇವಳದಲ್ಲಿ ಜೋತಿಷ್ಯಶಾಸ್ತ್ರ ದಿನ, ಸಮಯ ನೋಡಿ ಘಳಿಗೆಯನ್ನು ನಿಶ್ಚಯಿಸುತ್ತಾರೆ. ಅದರಂತೆ ಆ ದಿನ ಸಮಯಕ್ಕೆ ಸರಿಯಾಗಿ ಮೊದಲು ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ ಹುತ್ತರಿ 'ಕಲ್ಯಾಡ್ಚ ಹಬ್ಬ'ವನ್ನು ನಡೆಸಲಾಗುತ್ತದೆ. ಅನಂತರ ನಿಗದಿತ ಸುಮುಹೂರ್ತದಲ್ಲಿ ರೈತರು ಬೆಳೆದ ಬತ್ತದ ತೆನೆಯನ್ನು ಶ್ರದ್ಧಾಭಕ್ತಿಯಿಂದ ಪೂಜಿಸಿ ಕತ್ತರಿಸಿ ತಂದು ದೇವಸ್ಥಾನದಲ್ಲಿಟ್ಟು ಪೂಜಿಸುತ್ತಾರೆ.

ಇಗುತ್ತಪ್ಪ ದೇವಾಲಯದಲ್ಲಿ ಪೂಜಿಸಿದ ಅನಂತರ ನಿಗದಿಪಡಿಸಿದ ಸಮಯದಲ್ಲಿ ಗ್ರಾಮಸ್ಥರು ತಮ್ಮ ತಮ್ಮ ಮನೆಗಳಲ್ಲಿ ಹಬ್ಬದ ಆಚರಣೆಯಲ್ಲಿ ತೊಡಗುತ್ತಾರೆ. ಮನೆಯ ಯಜಮಾನ ಸಾಂಪ್ರದಾಯಿಕ ಉಡುಪು ಧರಿಸಿ, ಕುಪ್ಪಸ ತೊಟ್ಟು ರೇಷ್ಮೆಯ ನಡುಪಟ್ಟಿ ಬಿಗಿದು ಪೀಚೆ ಕತ್ತಿಯನ್ನು ಸಿಕ್ಕಿಸಿ, ರಾಜ ಗಾಂಭೀರ್ಯದಿಂದ ಇಷ್ಟ ದೇವತೆಗಳನ್ನು ಪ್ರಾರ್ಥಿಸುತ್ತಾನೆ. ಅನಂತರ ಮಾವು, ಅಶ್ವತ್ಥ, ಗೇರು ಸೇರಿ ೫ ಮರದ ಎಲೆ ಹಾಗೂ ನಿರ್ದಿಷ್ಟ ಜಾತಿಯ ಮರದಿಂದ ಸಿಗುವ ನಾರನ್ನು ತಂದು ನೆರೆ (ಸುರುಳಿ) ಕಟ್ಟುತ್ತಾರೆ. ಇದಾದ ನಂತರ ನೆಲ್ಲಕ್ಕಿಬಾಡೆ (ಮನೆಯ ನಡು ಕೋಣೆ) ಯಲ್ಲಿ ಮನೆ-ಮಂದಿಯೆಲ್ಲ ಸೇರಿ ಕುಲದೇವರನ್ನು ಆರಾಧಿಸಿ ಬತ್ತದ ಗದ್ದೆಗೆ ತೆರಳುತ್ತಾರೆ. ಪ್ರಥಮ ಕುಯ್ಲಿಗೆಂದು ಮೀಸಲಿಟ್ಟ ಗದ್ದೆಯಲ್ಲಿ ಕುಟುಂಬದ ಹಿರಿಯನು ಬತ್ತದ ಪೈರನ್ನು ಪೂಜಿಸಿ ಅದಕ್ಕೆ ಹಣ್ಣು ಕಾಯಿ, ಹಾಲು-ಜೇನು ಮುಂತಾದವುಗಳನ್ನು ಸಮರ್ಪಿಸುತ್ತಾರೆ. “ಪೊಲಿ ಪೊಲಿ ದೇವಾ” ಎಂಬ ಏರಿದ ದನಿಯಲ್ಲಿ ಕೂಗುತ್ತ ಶಾಸ್ತ್ರೋಕ್ತವಾಗಿ ಬತ್ತದ ತೆನೆಗಳನ್ನು ಕತ್ತರಿಸಿ ತಂದು ಮನೆಯಲ್ಲಿಟ್ಟು ಪೂಜಿಸಿ ತೆನೆಯಲ್ಲಿದ್ದ ಬತ್ತವನ್ನು ಸುಲಿದು ಪಾಯಸಕ್ಕೆ ಹಾಕಿ ಎಲ್ಲರೂ ಸೇರಿ ಸವಿಯುಣ್ಣುವದೇ ಹುತ್ತರಿ ಹಬ್ಬದ ಪ್ರಮುಖ ಅಂಶ.

ಕೊಡಗಿನಲ್ಲಿ ಆಚರಿಸಲಾಗುವ ಕೆಲವು ಹಬ್ಬಗಳು ಪ್ರತ್ಯೇಕ ಜಾತಿ, ಧರ್ಮ, ಜನಾಂಗಕ್ಕೆ ಮಾತ್ರ ಸೀಮಿತವಾಗಿರುವದನ್ನು ಕಾಣಬಹುದಾಗಿವೆ. ಆದರೆ ಹುತ್ತರಿ ಹಬ್ಬ ಯಾವುದೇ ಜಾತಿ, ಧರ್ಮ, ಜನಾಂಗ ಭೇದವಿಲ್ಲದೆ ಎಲ್ಲರೂ ಒಗ್ಗಟ್ಟಿನಿಂದ ಬೆರೆತು ಆಚರಿಸುವ ಹಬ್ಬ.

ಹುತ್ತರಿ ಹಬ್ಬಕ್ಕೆ ಮೊದಲು ಗ್ರಾಮದ ಜನರು ನಿಶ್ಚಿತ ದೇವಸ್ಥಾನ ಅಥವಾ ‘ಮಂದ್’ ನಲ್ಲಿ ಸೇರಿ ನಡೆಸುವ ಕೋಲಾಟವನ್ನು ‘ಈಡ್’ ಎಂದು ಕರೆಯುತ್ತಾರೆ. ಕೋಲಾಟದ ಅಭ್ಯಾಸವನ್ನು ಎಲ್ಲಾ ಕೊಡವ ಸಮುದಾಯದವರೂ ಸೇರಿ ಮಾಡುತ್ತಾರೆ. ಕೋಲಾಟವು ಊರಿನ ‘ಮಂದ್’ನಲ್ಲಿ ನಡೆಯುತ್ತದೆ. ಈ ಸಂಭರ್ಧದಲ್ಲಿ ವಾದ್ಯವಾಗುತ್ತಿರುತ್ತದೆ. ಕೋಲುಗಳಿಗೆ ಗೆಜ್ಜೆ ಕಟ್ಟಿರುತ್ತಾರೆ. ಅದರ ಝುಣ ಝುಣತ್ಕಾರವು ಕೇಳುತ್ತಿರುತ್ತದೆ. ವಿವಿಧ ರೀತಿಯ ಕೋಲಾಟಗಳು ಇರುತ್ತವೆ. ಕೋಲಾಟದ ಹಾಡು ಪದ್ಯದ ಧಾಟಿಯಲ್ಲಿ ಒಂದು ಒಕ್ಕಣೆಯ ಕೊನೆಯಲ್ಲಿ ಪೊಯಿಲೇ ಪೊಯಿಲೇ (ಕೋಲು ಹೊಡೆಯಿರಿ) ಎಂದು ಹೇಳುತ್ತಿರುತ್ತಾರೆ. ಕೋಲಾಟದ ನಿರ್ದೇಶಕನು ಒಂದು ಆಟ ಮುಗಿದು ಇನ್ನೊಂದು ಕೋಲಾಟ ಆರಂಭವಾಗುವಾಗ ‘ಕೂಹಾ’ ಎಂದು ಕೂಗುತ್ತಾನೆ.

ಕೋಲಾಟದ ಹಾಡೊಂದು ಹೀಗೆ ಬರುತ್ತದೆ.

“ಕೊಟ್ಟ್‌ಡಾ ಮೇದ ನೀ ಊದ್ ಪೊಲೆಯಾ ಪೊಯಿಲೇ ಪೊಯಿಲೆ
ಊರ್‌ಡ ಮಂದಲ್ ಕೋಲ್ ಕಳಿಂಜ ಪೊಲೆಯಾ ಪೊಯಿಲೇ ಪೊಯಿಲೆ
ನಾಡ್ ಪರಂಬ್‌ಲ್ ಕೋಲ್ ಕಳಿಂಜ ಪೊಲೆಯಾ ಪೊಯಿಲೇ ಪೊಯಿಲೆ
ಇಗ್ಗ್‌ತಪ್ಪಂಡ ಕೋಲಾಟ ಕೊಪ್ಪ್ ಪೊಲೆಯಾ ಪೊಯಿಲೇ ಪೊಯಿಲೆ

ಮಾದೇರಪ್ಪಂಡ ಕೋಲಾಟ ಕೋಪ್ಪ್ ಪೋಲೆಯಾ ಪೊಯಿಲೇ ಪೊಯಿಲೆ
ಬಯತೂರಪ್ಪಂಡ ಕೋಲಾಟ ಕೊಪ್ಪ್ ಪೋಲೆಯಾ ಪೊಯಿಲೇ ಪೊಯಿಲೆ
....
....
....
ತಂಬುಟ್ಟ್ ಮುದ್ದೆಕ್ ತೇನಾಂಡು ಬಾಲ
ಏತ್‌ಕ್ ಪೊತ್‌ಕ್ ಪರೆಯಂತೆ ಬಾಲ
ಬಪ್ಪಕ ಪುತ್ತರಿ ಬಣ್ಣತೆ ಬಾತ್
ಪೋಪಕ ಪುತ್ತರಿ ಎಣ್ಣತೆ ಪೋಚಿ
ದಮ್ಮಯ್ಯ ಪುತ್ತರಿ ಒಮ್ಮಲೂ ಪೋತೆ".[೯]

ಕನ್ನಡ ಅನುವಾದ

"ಹೇ ಮೇದ, ಡೋಲನ್ನು ಚೆನ್ನಾಗಿ ಬಾರಿಸು, ಹೇ ಕೊಂಬಿನವನೇ ಕೊಂಬನ್ನು ಚೆನ್ನಾಗಿ ಊದು. ಕೋಲನ್ನಿಡಿದು ಕುಣಿಯುವವರೇ ಸಮರಸವಾಗಿ ಕೋಲು ಹೊಡೆಯಿರಿ, ನಾವು ಗ್ರಾಮದ ಮೈದಾನದಲ್ಲಿ ಕುಣಿಯುತಿದ್ದೇವೆ. ವ್ಯವಸಾಯದ ಅಧಿದೇವತೆ ಇಗ್ಗುತಪ್ಪನ ಹಬ್ಬದಲ್ಲಿ ಕುಣಿಯುತ್ತಿದ್ದೇವೆ. ಮಹದೇವನ ಹೆಸರನ್ನು ಮನದಲ್ಲಿ ತಳೆದು ನರ್ತಿಸುತ್ತಿದೇವೆ, ವಾದ್ಯ ಹೃದಯಂಗಮವಾಗಿ ಮೋರ್ಗರೆಯುತ್ತಿದೆ. ಕುಣಿಯುವ ರಭಸಕ್ಕೆ ಆತನ ಕುಪ್ಪಸ ಗಾಳಿಯಲ್ಲಿ ಹಾರುತ್ತದೆ. ಕುಣಿತವ ರಭಸ ಕೋಲು ಹೊಡೆತದ ವೇಗದಲ್ಲಿ ಕೊಡಗಿನ ಫಲವತ್ತಾದ ನೆಲದಲ್ಲಿ ಬೆಳೆದ ಕೋಲು ಮುರಿಯಿತು. ಕುಣಿಯುವ ಯುವಕನ ನಡುಪಟ್ಟಿಯ ಸೊಬಗನ್ನು ನೋಡಿರಿ.

ಈ ಉತ್ಸವದ ಆಹ್ವಾನಕ್ಕೆ 'ಓ ಗೊಡದೆ ಹೋಗುವೆ ಏಕೆ? ನಿನ್ನ ಬಾಯಲ್ಲಿ ಹುತ್ತರಿ ತಂಬಿಟ್ಟು ತುಂಬಿದೆಯೇನು? ತಂಬಿಟ್ಟು ಹೆಚ್ಚು ರುಚಿಯಾಗಲು ಜೇನು ಸೇರಿಸುಬೇಕು. ಯದ್ವಾತದ್ವ ಮಾತಾಡದಿರು ಬರುವಾಗ ಹುತ್ತರಿಯ ಬಹು ಸಡಗರದಿಂದ ಬಂದಿತು. ಹೋಗುವಾಗ ಯಾರಿಗೂ ಹೇಳದೆ ಹೋಗುತ್ತಿದೆ. ಆದರೆ ನಮ್ಮ ಮಮತೆಯ ಹುತ್ತರಿಯೇ? ! ಎಂದೂ ಕೂಡ ನಮ್ಮನ್ನು ಬಿಟ್ಟು ಹೋಗದಿರು. ಕೋಲಾಟದ ಸವಿಯನ್ನು ಕುರಿತು ಅದ್ಭುತವಾಗಿ ಜನಪದ ಕವಿಯು ಮೇಲಿನ ಹಾಡಿನಲ್ಲಿ ಕಟ್ಟಿಕೊಟ್ಟಿದ್ದಾನೆ."

ಕೋಲಾಟ ಮುಗಿದ ನಂತರ ವಿಶಿಷ್ಟವಾದ ಒಂದು ಕುಣಿತವಿರುತ್ತದೆ. ಅದನ್ನು 'ಪಡೆಕಳಿ ಅಥವಾ ಪರಿಯಕಳಿ ಎಂದು ಕರೆಯುತ್ತಾರೆ. ಈ ನೃತ್ಯವು ಯುದ್ಧವನ್ನು ನೆನಪಿಸುತ್ತದೆ. ಕೈಯಲ್ಲಿ ಗುರಾಣಿ ಮತ್ತು ಕೋಲು ಹಿಡಿದು ಪ್ರತಿಸ್ಪರ್ಧಿಯನ್ನು ಯುದ್ಧಕ್ಕೆ ಆಹ್ವಾನಿಸುತ್ತಾನೆ. "ನಾನ್ ಬಾಳ, ನೀನ್‌ಬಾಳ್, ಏಡ ಕೂಡ ಇಳಿಯುವ ಚಂಜೌದಿ ಬಾಳ್ ಇಗ್ಗ್‌ತಪ್ಪ ಬಾಳ್, ಬಯತೂರಪ್ಪ ಬಾಳ್, ಬಾಳ್ ಬಾಳ್‌ರೇಬಾಳ್") ಎಂದು ಯುದ್ಧಕ್ಕೆ ಆಹ್ವಾನಿಸುತ್ತಾನೆ. ಯಾರಾದರು ಒಬ್ಬರು ಗೆಲ್ಲುವ ತನಕ ಇಬ್ಬರೂ ಹೊಡೆದಾಡುತ್ತಾರೆ. ನಂತರ ಆಟವನ್ನು ನಿಲ್ಲಿಸುತ್ತಾರೆ.

ಪುತ್ತರಿ ಪೊಳ್ದ್ ದಿವಸ ದನಕರುಗಳಿಗೆಲ್ಲಾ ಶೃಂಗಾರ ಮಾಡುತ್ತಾರೆ. ಮನೆಗೆಲ್ಲಾ ತೋರಣ ಕಟ್ಟುತ್ತಾರೆ. ಆ ದಿನ ಹುತ್ತರಿಕುಕ್ಕೆ, ಹುತ್ತರಿಚಾಪೆ, ಹುತ್ತರಿಕುಡಿಕೆ, ಹುತ್ತರಿಕತ್ತಿಗಳು ಸಿದ್ಧವಾಗುತ್ತದೆ.

ಹುತ್ತರಿ ಹಬ್ಬಕ್ಕೆ ಬೇಕಾದ ಎಲ್ಲಾ ವಸ್ತುಗಳನ್ನು ಒದಗಿಸಿಕೊಟ್ಟವರಿಗೆ ಅಕ್ಕಿ, ಬೆಲ್ಲ, ಬಾಳೆ, ಉಪ್ಪು ಮೆಣಸು, ತೆಂಗಿನೆಣ್ಣೆ, ಎಳ್ಳು, ತೆಂಗಿನಕಾಯಿ, ಹುತ್ತರಿಗೆಣಸು ಮುಂತಾದವನ್ನು ಕೊಡಬೇಕಾಗುತ್ತದೆ. ಊರಿನ ದೇವಸ್ಥಾನದ ಅರ್ಚಕನು ಮನೆಮನೆಗೆ ಹೋಗಿ ಪುಣ್ಯತೀರ್ಥವನ್ನು ಪ್ರೋಕ್ಷಿಸಬೇಕು. ಅರ್ಚಕನಿಗೂ ಯಥೋಚಿತ ಸತ್ಕಾರ ಮಾಡಬೇಕು.

ನೆಲ್ಲಕ್ಕಿ ನಡುಬಾಡೆಯನ್ನು ಶುದ್ಧಗೊಳಿಸಿ ತೂಗುದೀಪದ ಕೆಳಗೆ ಚಾಪೆಯನ್ನು ಹಾಸಿ, ಅದರ ಮೇಲೆ 'ಪುತ್ತರಿ ಪಚ್ಚೆ'ಯಲ್ಲಿ ಮಾವಿನ ಎಲೆ, ಅಶ್ವತ್ಥ ಎಲೆ ಇತ್ಯಾದಿಯನ್ನು ಹಾಕುತ್ತಾರೆ. ಪುತ್ತರಿ ಕುಕ್ಕೆಯ ತುಂಬ ಬತ್ತ ತುಂಬಿಸುತ್ತಾರೆ. ಅದರ ಮೇಲೆ ಒಂದು ಬಳ್ಳದಲ್ಲಿ ಬತ್ತ, ಅದರ ಮೇಲೆ ಅರ್ಧಸೇರಿನಲ್ಲಿ ಅಕ್ಕಿ ತುಂಬಿಸಿಡುತ್ತಾರೆ. ಪುತ್ತರಿ ಕುಡಿಕೆಯಲ್ಲಿ ತಂಬಿಟ್ಟು, ಹಾಲು, ಜೇನುನ್ನು ಇಡುತ್ತಾರೆ. ನಂತರ ಕದಿರು ತೆಗೆಯುವ ಸಮಾರಂಭವಿರುತ್ತದೆ. ಒಬ್ಬವ್ಯಕ್ತಿಯು ಕದಿರನ್ನು ಕುಯ್ಯುವ ಕತ್ತಿಯನ್ನು ಹಿಡಿದು ನಿಂತಿರುತ್ತಾನೆ. ಕನ್ಯೆಯೊಬ್ಬಳು 'ತಳಿಯಕ್ಕಿ ಬೊಳಕ'ನ್ನು ಹಿಡಿದು ನಿಂತಿರುತ್ತಾಳೆ. (ತಟ್ಟೆಯಲ್ಲಿ ಅಕ್ಕಿ ಹಾಕಿ ಅದರ ಮೇಲೆ ದೀಪ ಇಡುವುದು) ವಾದ್ಯ ಸಮೇತ ಗದ್ದೆಗೆ ತೆರಳಿ, ತಂದಿರುವ ಹಾಲು, ಜೇನನ್ನು ಕದಿರನ ಬುಡಕ್ಕೆ ಸುರಿದು, ನೆರೆಯನ್ನು ಕದಿರಿನ ಬುಡಕ್ಕೆ ಕಟ್ಟುತ್ತಾರೆ. ನಂತರ ಒಂದು ಗುಂಡನ್ನು ಹಾರಿಸುತ್ತಾರೆ. ಎಲ್ಲರೂ 'ಪೊಲಿ ಪೊಲಿ ದೇವ' (ದೇವರೇ ಬೆಳೆಯು ಹೆಚ್ಚಲಿ) ಎಂದು ಹಾಡುತ್ತಾರೆ. (ಪುತ್ತರಿ ಪಚ್ಚೆಯ ಛಾಯಾಚಿತ್ರವನ್ನು ಅನುಬಂಧ-೬ರಲ್ಲಿ ನೀಡಲಾಗಿದೆ)

ಕದಿರನ್ನು ತಂದು ಕೈಮಡ, ಸಮಾಧಿ, ಮನೆಯ ಬಾಗಿಲಿಗೆ ತೋರಣ ಕಟ್ಟುತ್ತಾರೆ. ಎಲ್ಲರೂ ಕದಿರನ್ನು ಮುಚ್ಚಿ ನಮಸ್ಕಾರ ಮಾಡಬೇಕು, ಗದ್ದೆಯಿಂದ ತಂದ ಹೊಸ ಅಕ್ಕಿಯ ಪಾಯಸವನ್ನು ತಯಾರಿಸಬೇಕಾಗುತ್ತದೆ. ಹೊಸ ಬೆಳೆ ಬಂದ ಸಂತೋಷದಲ್ಲಿ ಊರವರೆಲ್ಲಾ ಕೂಡಿ ಕೋಲಾಟ ನಡೆಸುವರು. ಹೆಂಗಸರು, ಗಂಡಸರು ಎಲ್ಲಾ ಜಾತಿಯವರು 'ಕೋಲಾಟ' ಅಥವಾ 'ಪರಿಯಕಳಿ'ಯನ್ನು ನಡೆಸುತ್ತಾರೆ. ಮನೆ ಮನೆಗೆ ಹೋಗಿ ಹಾಡನ್ನು ಹಾಡಿ ಅವರಿಂದ ಕಾಣಿಕೆ ಪಡೆಯುವ ಪದ್ಧತಿ ಇದೆ. ಸಂಗ್ರಹವಾದ ಹಣದಿಂದ 'ಊರೊರ್ಮೆ' ನಡೆಸುತ್ತಾರೆ. ಹೊಸದಾಗಿ ಮದುವೆಯಾದ ಮದುಮಕ್ಕಳು ಅಥವಾ ನೆಂಟರನ್ನು ಹೊಗಳಿ ಹಾಡುವುದು ಈ ಹಬ್ಬದ ವಿಶೇಷಗಳಲ್ಲೊಂದು. ಈ ಕುರಿತು ಬರುವ ಹಾಡು ಇಂತಿದೆ.

"ಹುತ್ತರಿ ಹಾಡು
ಬಾಳೋ ಬಾಳೋ ಚಂಜ್ಞಾದಿ
ಪುತ್ತರಿರ ಜೊಲ್ಲಾಲೆ
ನಾಲ್ ಮೂಂದ್ ಪಾಡನ

ಅಲ್ಲಿತೊಂದ್ ಅಲ್ಲಲ್ಲಿ" (ಮುಂದುವರಿದ ಭಾಗವನ್ನು ಅನುಬಂಧ೨ ರಲ್ಲಿ ನೀಡಲಾಗಿದೆ)

(ಮಾಹಿತಿ ನಾಣಯ್ಯ, ೭೫ ವರ್ಷ, ವಿರಾಜಪೇಟೆ)

ಹುತ್ತರಿ ಹೇಗೆ ಆರಂಭವಾಯಿತೆಂದು ಇಲ್ಲಿ ವಿವರಿಸಲಾಗಿದೆ.ಬೆಳೆ ಹುಲುಸಾಗಿ ಬಂದು ಕದಿರು ಬಿಟ್ಟು ಕದಿರು ಹಣ್ಣಾಗತೊಡಗಿತು. ಆದ್ದರಿಂದ ಬೆಳೆದ ಬತ್ತವನ್ನು ಸಾಂಪ್ರದಾಯಿಕವಾಗಿ ಮನೆಗೆ ತರುವ ಸುಮುಹೂರ್ತ ನಿಶ್ಚಯಿಸಲು ಎಲ್ಲರೂ ಸಭೆ ಸೇರಿದರು. ಕೊಡಗಿನವರೆಲ್ಲರ ಪರವಾಗಿ ಇಗ್ಗುತಪ್ಪದೇವರು ಮಲಬಾರಿಗೆ ಹೋಗಿ ತನ್ನ ಅಣ್ಣ ಬೇಂದ್ರು ಕೋಲಪ್ಪನನ್ನು ಕಂಡು ಈ ವಿಚಾರ ಪ್ರಸ್ತಾಪಿಸಿದನು. ಬೇಂದ್ರು ಕೋಲಪ್ಪನು ಕೇರಳದಲ್ಲಿ ಪ್ರಚಲಿತವಿರುವ ಓಣದ ರೀತಿಯಲ್ಲಿ ಕೊಡಗಿನಲ್ಲೂ ತಕ್ಕ ಉತ್ಸವದ ಏರ್ಪಾಡು ಮಾಡುವುದೆಂದು ಹೇಳಿ ತನ್ನ ಆಶೀರ್ವಾದದ ಸಂಕೇತವಾಗಿ ಬೆಳೆ ಕೊಯ್ಯುವ ಕುಡುಗೋಲು ಇತ್ಯಾದಿಗಳನ್ನು ಕೊಟ್ಟನು. ಇಗ್ಗುತಪ್ಪನು ಅಮ್ಮಂಗೇರಿಯಲ್ಲಿರುವ ತನ್ನ ದೇವಸ್ಥಾನಕ್ಕೆ ಬಂದು ಈ ಕತ್ತಿಯನ್ನು ಅಲ್ಲಿಟ್ಟನು.

ನವೆಂಬರ್ ತಿಂಗಳಿನಲ್ಲಿ ಕೊಡಗಿನವರು ಪ್ರತಿಕುಟುಂಬಕ್ಕೆ ಒಬ್ಬರಂತೆ ನೈವೇದ್ಯಕ್ಕೆ ಅಕ್ಕಿ ಹಾಲು ಸಮೇತ ಇಗ್ಗುತಪ್ಪ ದೇವಸ್ಥಾನದಲ್ಲಿ ಸೇರಿದರು. ದೇವಸ್ಥಾನದ ಅರ್ಚಕರು ಶುದ್ಧ ಕಲಶ ಮಾಡಿ ದೇವಸ್ಥಾನದ ಬಾಗಿಲು ತೆರೆದಾಗ ದೇವಸ್ಥಾನದೊಳಗಿನ ಕುಡುಗೋಲು ಇತ್ಯಾದಿಯನ್ನು ಓಣಂ ತಾಯಿಯನ್ನು ಕಂಡು ಜನರಿಗೆ ವಿಶೇಷವನ್ನು ತಿಳಿಸಿದನು. ದೇವತಕ್ಕರುಗಳ ಮುಖ್ಯಸ್ಥನಾದ ಪರದಂಡತಕ್ಕನನ್ನು, ಜ್ಯೋತಿಷಿಯನ್ನು ಕರೆಸಿ ಇಗ್ಗುತಪ್ಪ ದೇವರ ಕೃಪೆಯಿಂದ ಓಣಂ ತಾಯಿ ತಮ್ಮನ್ನು ಹರಸಿರುವುದರಿಂದ ಕೊಡಗಿನಲ್ಲಿ ಹೊಸ ಬತ್ತವನ್ನು ಕುಯ್ಯಲು ಶುಭದಿನ ನಿಶ್ಚಯಿಸಬೇಕೆಂದು ಕೇಳಿಕೊಂಡ ನಂತರ ದಿನ ನಿಶ್ಚಯಿಸಲಾಯಿತು."[೧೦] ಹೀಗೆ ಹಬ್ಬದ ವೈಶಿಷ್ಟ್ಯತೆಯನ್ನು ಈ ಕಥೆ ಕಣ್ಣಿಗೆ ಕಟ್ಟುವಂತೆ ಹೇಳಿದೆ.

ಸಂಪತ್ತಿನ ದೇವಿ ಧಾನ್ಯಲಕ್ಷ್ಮಿಯನ್ನು ಮನೆಗೆ ಬರಮಾಡಿಕೊಂಡು ಆರಾಧಿಸುವ ಹುತ್ತರಿ ಹಬ್ಬದ ಊಟ ವಿಶೇಷತೆಯಿಂದ ಕೂಡಿರುತ್ತದೆ. ಏಳಕ್ಕಿ ಓಟ್ಟು, ತಂಬಿಟ್ಟು, ತಿಂಡಿಗಳನ್ನು ತಯಾರಿಸಿ ನೆಲ್ಲಕ್ಕಿ, ನಡುಬಾಡೆಯಲ್ಲಿ ಗೋಡೆಗೆ ಪತ್ತಾಯ, ಮನೆಬಾಗಿಲು ದನದ ಕೊಟ್ಟಿಗೆ ಇಲ್ಲೆಲ್ಲಾ ಚಿತ್ರ ಬೀಳುವಂತೆ ಕೈಯನ್ನು ಒತ್ತುವುದಕ್ಕೆ 'ಹುತ್ತರಿಕೈಕುರಿ' ಎನ್ನುತ್ತಾರೆ.

ಕೆಲವು ಕಡೆಗಳಲ್ಲಿ ಮನೆಗೆ ಹೊಸ ಕದಿರು ಬಂದ ಸಂತೋಷಕ್ಕೆ ಮನೆಯ ಮುಂದೆ ಅಂಗಳದಲ್ಲಿ ಒಂದು ತೆಂಗಿನ ಕಾಯಿಯನ್ನು ಇಟ್ಟು ಅದಕ್ಕೆ ಗುರಿ ಇಟ್ಟು ಗುಂಡು ಹಾರಿಸುವ ಪದ್ಧತಿ ಇದೆ. ಹುತ್ತರಿ ಕದಿರು ಮುಹೂರ್ತದ ರಾತ್ರಿ ಪ್ರತಿಯೊಬ್ಬರೂ 'ಏಳಕ್ಕಿ ಹಿಟ್ಟು' ಹುತ್ತರಿ ಪಾಯಸವನ್ನು ಊಟ ಮಾಡುವುದು ಕೊಡವರ ಸಂಪ್ರದಾಯವಾಗಿದೆ. ಏಲಕ್ಕಿ ಹಿಟ್ಟಲ್ಲಿರುವ ಶಾಸ್ತ್ರದ ಕಲ್ಲುಚೂರು ಯಾರಿಗೆ ಸಿಗುವುದೋ ಅವರಿಗೆ 'ಕಲ್ಲಾಯುಷ್ಯ'ವಿದೆ ಎಂದು ನಂಬುತ್ತಾರೆ. ಇಲ್ಲಿಯೂ ಕೋಲಾಟ, ಮಹಿಳೆಯರ ಉಮ್ಮತ್ತಾಟ್ ಮುಂತಾದ ಮನೋರಂಜನೆ ಇರುತ್ತದೆ. ೠ ಎಲ್ಲಾ ಆಟಗಳು ಕೊಡವರ ಪರಸ್ಪರ ಪ್ರೀತಿ ಒಗ್ಗಟ್ಟುಗಳ

ಬಾಂಧವ್ಯವ ಸಂವರ್ಧನೆಯಾಗಿ ಕಂಡುಬರುತ್ತದೆ. ಕೊಡವರು ಹಬ್ಬ ಆಚಾರ-ವಿಚಾರ, ಪದ್ಧತಿ ಪರಂಪರೆಗಳನ್ನು ಉಳಿಸಿಕೊಂಡು ಬಂದಿರುವುದು ಅವರು ಸಂಸ್ಕೃತಿ ಸಂಸ್ಕಾರ ಸಂಪನ್ನರು ಎಂಬುದಕ್ಕೆ ಸಾಕ್ಷಿಯಾಗಿದೆ.

ಕೊಡವರ ಇತರ ಹಬ್ಬಗಳು

ಇಗ್ಗುತಪ್ಪ ದೇವರ ಹಬ್ಬ : ಪಾಡಿ ಇಗ್ಗುತ್ತಪ್ಪರನ್ನು ಆರಾಧ್ಯದೈವವಾಗಿ, ಮಳೆದೇವರಾಗಿ ಕೊಡವರು ಪೂಜಿಸುತ್ತಾರೆ. ಕೃಷಿಯು ಪ್ರಧಾನವಾಗಿರುವ ಇಲ್ಲಿಯ ಜನರು ಮಳೆಗಾಗಿ ಇಗ್ಗುತಪ್ಪನನ್ನು ಪ್ರಾರ್ಥಿಸುತ್ತಾರೆ. ಮಡಿಕೇರಿ ತಾಲೂಕಿನ ಕಕ್ಕಬ್ಬೆಯಿಂದ ಸುಮಾರು ಮೂರು ಕಿ.ಮೀ. ದೂರ ಸಾಗಿದರೆ ನಿಸರ್ಗದ ಚೆಲುವಿನಲ್ಲಿ ಕಂಗೊಳಿಸುವ ಇಗ್ಗುತಪ್ಪನ ಪವಿತ್ರ ಸನ್ನಿಧಿ ಅಲ್ಲಿಯ ಸುತ್ತಲಿನ ನಿಸರ್ಗ ವೈಭವ ಹಿನ್ನೋಟಕ್ಕೆ ರಮಣೀಯ 'ತಡಿಯಂಡ ಮೋಳ್' ಪರ್ವತ ಸಾಲುಗಳ ಮನಕ್ಕೆ ಮುದ ನೀಡುತ್ತವೆ.

ಶ್ರೀ ಇಗ್ಗುತಪ್ಪದೇವರನ್ನು ಭಕ್ತರು ಈಶ್ವರ ಇಗ್ಗುತಪ್ಪ, ಸುಬ್ರಾಯದೇವ, ಸುಬ್ರಹ್ಮಣ್ಯೇಶ್ವರ, ಸುಬ್ಬಪ್ಪ ಎಂದು ಕರೆಯುತ್ತಾರೆ. ಇಗ್ಗುತಪ್ಪ ಎಂದರೆ ಇಕ್ಕುವ ಅಪ್ಪ .... ಅಂದರೆ ಜೀವನಕ್ಕೆ ಅತ್ಯವಶ್ಯಕವಾದ ಅನ್ನಶಕ್ತಿ, ಆರ್ಥಿಕಶಕ್ತಿ ಧರ್ಮಶಕ್ತಿಗಳನ್ನು ಕೊಡುವ ತಂದೆ ಎಂದು ಕೊಡವರು ಭಾವಿಸಿದ್ದಾರೆ. ಹಾಗಾಗಿಯೇ ಇಲ್ಲಿನ ಭಕ್ತಾದಿಗಳಿಗೆ ಪ್ರತಿದಿನ ಅನ್ನ ಸಂತರ್ಪಣೆ ನಡೆಯುತ್ತದೆ.

ಪಾಡಿ ಇಗ್ಗುತಪ್ಪನಿಗೆ ಭವ್ಯಸೂರು ನಿರ್ಮಾಣಗೊಂಡ ಬಗ್ಗೆ ಐತಿಹ್ಯ ಇದೆ.

"ಕ್ರಿ.ಶ. ೧೮೧೦ ಕೊಡಗು ರಾಜರ ಆಡಳಿತದಲ್ಲಿದ್ದ ಸಮಯದಲ್ಲಿ ಆಗಿನ ರಾಜನಾದ ಲಿಂಗರಾಜೇಂದ್ರನು ತನ್ನ ಸೈನಿಕರೊಂದಿಗೆ ಈಗಿನ ನಾಪೊಕ್ಲು ಎಂಬ ಊರಿಗೆ ಬೇಟೆಗಾಗಿ ಬಂದಿದ್ದ. ಸುತ್ತಲಿನ ಕಾಡಿನಲ್ಲಿ ಯಾವ ಪ್ರಾಣಿಯೂ ಬೇಟೆಗೆ ಸಿಗದಿದ್ದ ಕಾರಣ ಅರಸನು ಕೋಪಗೊಂಡು ಇಂತಹ ಕಾಡಿಗೆ ತನ್ನನ್ನು ಬೇಟೆಗೆ ಕರೆತಂದುದಕ್ಕೆ ಶಿಕ್ಷೆಯಾಗಿ ಸೈನಿಕರ ಶಿರಚ್ಛೇದ ಮಾಡುವ ಆಜ್ಞೆ ಹೊರಡಿಸಿದ." (ಮಾಹಿತಿ, ಬೊಪ್ಪೇರ ಕಾವೇರಪ್ಪ, ನಾಪೋಕ್ಲು)

ಅರಸನ ಆಜ್ಞೆಗೆ ತತ್ತರಿಸಿದ ಸೈನಿಕರು ಅರಸನಿಂದ ಸಮಯಾವಕಾಶ ಕೋರಿ ಹೇಗಾದರೂ ಮಾಡಿ ಪ್ರಾಣಿಗಳನ್ನು ಹಿಡಿದು ತರಲು ಅಡ್ಡಾಡತೊಡಗಿದರೂ ಒಂದು ಪ್ರಾಣಿಯೂ ಗೋಚರಿಸಲಿಲ್ಲ. ಹತಾಶರಾದ ಸೈನಿಕರು ತಮ್ಮ ಕುಲದೈವ ಇಗ್ಗುತಪ್ಪನನ್ನು ಸ್ಮರಿಸತೊಡಗಿದರು. ಭಕ್ತರಿಗಾಗಿ ಇಗ್ಗುತ್ತಪ್ಪನು ತನ್ನ ಮಹಿಮೆಯಿಂದ ಹಲವು ಪ್ರಾಣಿಗಳನ್ನು ಗೋಚರಿಸಿದನು. ಲಿಂಗರಾಜೇಂದ್ರ ಅರಸ ಇಳ ಸಿಂಹದ ಮರಿಗಳನ್ನು ಸೆರೆಹಿಡಿದು ಅರಮನೆಗೆ ಹಿಂತಿರುಗಿದ. ಸಂತಸಗೊಂಡ ಲಿಂಗರಾಜೇಂದ್ರ ಪಾಡಿಯ ಇಗ್ಗುತಪ್ಪನಿಗೆ ಭವ್ಯ ಸೂರನ್ನು ನಿರ್ಮಿಸಿದನು. ಬೇಟೆಯ ಸಂದರ್ಭದಲ್ಲಿ ತಾನು ತೋರಿದ ಪರಾಕ್ರಮದ ಸಂಕೇತಕ್ಕಾಗಿ ಬೆಳ್ಳಿಯ ಆನೆಯೊಂದನ್ನು ದೇವಾಲಯಕ್ಕೆ ದಾನವಾಗಿ ನೀಡಿದನು. ಈ ದೇವಾಲಯದ ಗರ್ಭಗೃಹವು ಚೌಕವಾಗಿದ್ದು ಒಳಗೆ ಪ್ರಾಚೀನ ಪಾಣಿ ಪೀಠದ ಮೇಲೆ ಇಗ್ಗುತಪ್ಪನ ಶಿಲಾವಿಗ್ರಹವಿದೆ.

"ಮೂಲವಿಗ್ರಹಕ್ಕೆ ಅತ್ಯಂತ ಸೂಕ್ಷ್ಮ ಕೆತ್ತನೆಯುಳ್ಳ ಬೆಳ್ಳಿಯ ಪ್ರಭಾವಳಿ ಹಾಗೂ ಮೇಲ್ಭಾಗದಲ್ಲಿ ತನ್ನ ಐದು ಹೆಡೆ ಎತ್ತಿರುವ ಸುಂದರ ನಾಗಶಿಲ್ಪದ ಕೆತ್ತನೆಯಿದೆ. ಪಾಣಿಪೀಠದ ಮೂಲಭಾಗದಲ್ಲಿ ಹಂಸ ಹಾಗೂ ಹೂಬಳ್ಳಿಗಳ ಕೆತ್ತನೆಯು ಸುಂದರ ಅಲಂಕಾರವಿರುವ ಬೆಳ್ಳಿಯ ತಗಡಿನ ಕವಡವು ಆಕರ್ಷಕವಾಗಿವೆ." (ಕ್ಷೇತ್ರಕಾರ್ಯದಿಂದ ತಿಳಿದು ಬಂದ ಮಾಹಿತಿ)

ಶ್ರೀ ಇಗ್ಗುತಪ್ಪನು ಕೇರಳದಲ್ಲಿ ಅವತರಿಸಿ, ಕೊಡಗಿನ ರಾಜಮಹಾರಾಜರಿಂದ ಆರಾಧನೆ ಪಡೆದ ದೇವನಾಗಿ, ಸಪ್ತಋಷಿಗಳಿಂದ ಪೂಜಿಸಲ್ಪಟ್ಟು ಕೇರಳದಿಂದ ಕೊಡಗಿಗೆ ಬಂದು ಭಕ್ತಿ, ಶಕ್ತಿ, ಸೌಭಾಗ್ಯವನ್ನು ಕರುಣಿಸಿದ್ದಾನೆ ಎಂದು ಹಿರಿಯರು ಹೇಳುತ್ತಾರೆ.

ಪುರಾತನ ಕಥೆಯ ಪ್ರಕಾರ ಭಗವಂತನ ದಿವ್ಯ ಮಾಯಾ ಪ್ರಭಾವದಿಂದ ಕೇರಳ ರಾಜ್ಯದಲ್ಲಿ ಒಂದೆಡೆ ಸುವರ್ಣ ಶಂಖವೊಂದರಿಂದ ಆರು ಮಂದಿ ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು ಜನ್ಮ ತಳೆದರು. ಈ ಏಳು ಮಂದಿ 'ಎವ್ವಮಕ್ಕ ದೇವರು' ಅಂದರೆ ದೇವರ ಮಕ್ಕಳು ಎಂದು ಕೊಡವರಲ್ಲಿ ಪ್ರಖ್ಯಾತಿ ಪಡೆದಿದ್ದಾರೆ. ಕಾಂಞರಾಟಪ್ಪ, ತಿರುಚಂಬೀರಪ್ಪ, ಬೇಂದ್ರುಕೋಲಪ್ಪ, ಇಗ್ಗುತಪ್ಪ ಎಂದೂ ಪಾಲೂರಪ್ಪ ಮತ್ತು ತಿರುನೆಲ್ಲಿ ಪೆಮ್ಮಯ್ಯ ಇವರೇ ಕನ್ನಡ ಮಂದಿ ಪ್ರಸಿದ್ಧರಾದರು. ಇವರೆಲ್ಲರ ತಂಗಿ, ತಂಗಮ್ಮ ಕೊನೆಗೆ ಪನ್ನಂಗಾಲತಮ್ಮೆ ಎಂದು ಪ್ರಖ್ಯಾತಳಾದಳು.

ಕೊಡವರು ಕೊಡಗಿನ ಪ್ರಮುಖ ಪ್ರವಾಸಿಸ್ಥಳವಾದ ಇರ್ಪುವಿನಲ್ಲಿ ಪ್ರತಿವರ್ಷ 'ಶಿವರಾತ್ರಿ' ದಿನ 'ಇರ್ಪು ಜಾತ್ರೆ' ಆಚರಿಸುತ್ತಾರೆ. ಇಲ್ಲಿ ಶ್ರೀ ರಾಮನ ದೇವಸ್ಥಾನವಿದೆ. ಹಾಗೆಯೇ ಮಡಿಕೇರಿ ಸಮೀಪದ ಪಾಲೂರಿನಲ್ಲಿರುವ ಮಹಾಲಿಂಗೇಶ್ವರನ ಜಾತ್ರೆಯ ಪ್ರತಿವರ್ಷ ಏಪ್ರಿಲ್ ತಿಂಗಳಲ್ಲಿ ನಡೆಯುತ್ತದೆ. ಇದನ್ನು 'ಪಾಲೂರಪ್ಪ ಜಾತ್ರೆ' ಎಂದೂ ಕರೆಯುತ್ತಾರೆ.

"ಕೊಡವರು ಸುಬ್ರಮಣ್ಯ ಷಷ್ಠಿ, ಶಿವರಾತ್ರಿಉತ್ಸವ, ಗಣೇಶ ಚತುರ್ಥಿ, ಹೊಸವರ್ಷದ ಯುಗಾದಿಯನ್ನು ಆಚರಿಸುತ್ತಾರೆ. 'ಮಲೆ ತಂಬಿರಾನ್'. ಪೊನ್ನು ಮುತ್ತಪ್ಪ'ರ ಪೂಜೆಯನ್ನು ಮಾಡುತ್ತಾರೆ. ಪ್ರತಿಗ್ರಾಮದಲ್ಲಿರುವ 'ಭಗವತಿ', 'ಪೊವ್ವದಿ' ಹಾಗೂ 'ಅಯ್ಯಪ್ಪ' ದೇವರ ಹಬ್ಬಗಳನ್ನು ಪ್ರತಿವರ್ಷ ಆಚರಿಸುತ್ತಾರೆ. 'ಬನ'ದಲ್ಲಿ ಕೋಳಿ ಹಾಗೂ ಹಂದಿಯನ್ನು ಬಲಿ ಕೊಡುವ ಪದ್ಧತಿ ಇದೆ. ಮಾರ್ಚ್ ೧೫ ರಿಂದ ಏಪ್ರಿಲ್ ೧೫ರ ಅವಧಿಯನ್ನು ಶೂನ್ಯಮಾಸ ಎಂದು ಕರೆಯುತ್ತಾರೆ. ಇದನ್ನು 'ದೇವರ ಮದುವೆ' ಎಂದೂ ಕರೆಯುವುದುಂಟು."[೧೧]

ಕೊಡವರು ತಮ್ಮ ಒಡೆತನದಲ್ಲಿರುವ 'ಕುಳಿಯ', 'ಚಾಮುಂಡಿ', 'ಕುರ್ತಿ', 'ಪೂಟ', 'ಅಂಗಾರ', 'ಬೀರ' ಬೋಟೆಮಣಿ (ಬೇಟೆ) ಹಾಗೂ ಮನೆಯೊಳಗೆ ಕಾರೋಣ, 'ಕಲ್ಲುರ್ಟಿ' ಕುಳಿಯ ಎಂಬ ದೇವರುಗಳಿಗೆ ವಿಶೇಷವಾಗಿ ಪೂಜೆ ಮಾಡುತ್ತಾರೆ.

ಕೆಲವು ದೈವಗಳನ್ನು ತೋಟದ ನಿರ್ಧರಿತ ಸ್ಥಳದಲ್ಲಿ ಮದ್ಯ, ಹಂದಿ ಅಥವಾ ಕೋಳಿ ಬಲಿಯೊಡನೆ ಪೂಜಿಸುತ್ತಾರೆ. 'ಕಾರೋಣ' ಎಂದರೆ ಕುಟುಂಬದ ಹಿರಿಯರನ್ನು ಶೂರರನ್ನು ಪೂಜಿಸುವುದು. ಪ್ರತಿ ಕುಟುಂಬದಲ್ಲೂ ಕಾರೋಣ

ಇರುವುದರಿಂದ ಕಾರೋಣತೆರೆ ಅಥವಾ ಕೈಮತವನ್ನು ಮನೆಯ ಮುಂದೆ ಕಟ್ಟಿರುತ್ತಾರೆ. ಈ ಮಂದಿರಗಳು ಪೂರ್ವಭಿಮುಖವಾಗಿ ಇರುತ್ತವೆ.

ಕುಟುಂಬದ ಹಿರಿಯರು ಸತ್ತಮೇಲೂ ಜೀವಿಸುವರೆಂಬ ನಂಬಿಕೆ ಇರುವ ಕಾರಣ ಹಬ್ಬ, ಉತ್ಸವ, ಮದುವೆ ಮುಂತಾದ ಶುಭ ಸಂಧರ್ಭಗಳಲ್ಲಿ ತಯಾರಿಸಿದ ವಿಶೇಷ ಅಡಗೆಯನ್ನು 'ಮೀದಿ'(ಎಡೆ ನೈವೇದ್ಯ) ಯಾಗಿ ಅರ್ಪಿಸುತ್ತಾರೆ. ಎಲ್ಲಾ ಕುಟುಂಬಸ್ಥರು ವರ್ಷಕ್ಕೊಮ್ಮೆ ಸೇರಿ ಹಿರಿಯರಗೆ ಎಡೆ ಇಟ್ಟು ನೆನೆಸಿಕೊಳ್ಳುತ್ತಾರೆ. ಇದನ್ನು ಕೊಡವರು 'ಮೀದಿಬೆಪ್ಪೊ' ಮತ್ತು 'ಕಾರೊಣ ಕೊಡಪ' ಎನ್ನುತ್ತಾರೆ.

ಕೊಡವನು ತನ್ನ ಕುಟುಂಬದ ಪ್ರಮುಖ ಸದಸ್ಯನಾಗಿ ಹಿತವನ್ನು ಕಾಯುವುದರಿಂದ ಆತನ ಜೀವನವು ಹಲವು ಧಾರ್ಮಿಕ ವಿಶ್ವಾಸಗಳಿಂದ ಮತ್ತು ಆಚರಣೆಯಿಂದ ಕೂಡಿದ್ದು, ಕುಟುಂಬದ ಐಕ್ಯತೆಗಾಗಿ ಎಲ್ಲಾ ಪೂರ್ವಜರೂ 'ಕಾರೋಣ' ರೂಪದಲ್ಲಿ ಸಮಾನವಾಗಿ ಪಾಲುದಾರರಾಗಿರುತ್ತಾರೆ. ಆದ್ದರಿಂದ ಅವರು ಯಾವ ಧಾರ್ಮಿಕ ಪಂಥಕ್ಕೂ ಒಲಿಯದೆ ತಮ್ಮದೇ ಆದ ವಿಶಾಲ ಮನೋಭಾವನೆಯನ್ನು ಹೊಂದಿರುವ ವಿಶ್ವಧರ್ಮವೊಂದನ್ನು ರೂಪಿಸಿಕೊಂಡಿದ್ದಾರೆ.

ಬೋಡ್ ನಮ್ಮೆ (ಬೇಡು ಹಬ್ಬ)

ಕೊಡಗಿನಲ್ಲಿ ಮಳೆಗಾಲ ಪ್ರಾರಂಭವಾಗುವ ಮೊದಲು ಆಯಾಯ ಗ್ರಾಮದ ಜನರು ಅವರ ಅನುಕೂಲಕ್ಕೆ ತಕ್ಕಂತೆ ಈ ಹಬ್ಬವನ್ನು ಆಚರಿಸುತ್ತಾರೆ. ಇದು ಹಾಸ್ಯ ಭರಿತವಾದ ಹಬ್ಬ. ಗಂಡಸರು ವಿಚಿತ್ರ ವೇಷಗಳನ್ನು ಹಾಕಿಕೊಂಡು ವಿವಿಧ ರೀತಿಯ ನಟನೆ ಮಾಡುತ್ತಾ ಮನೆ ಮನೆಗೆ ತೆರಳುತ್ತಾರೆ.

ಈ ಹಬ್ಬದಲ್ಲಿ ಪಾಲುಗೊಳ್ಳುವವರು ವಿವಿಧ ಸಮುದಾಯದ ರೀತಿ, ನೀತಿ, ವೇಷಭುಷಣಗಳನ್ನು ಅನುಕರಿಸುತ್ತಾರೆ. ಮಾಪಿಳ್ಳೆ, ಬಡ್ಡ, ಸನ್ಯಾಸಿ,ಜೋಗಿ, 'ಚೂಳೆ' (ನೃತ್ಯಗಾತಿ) ಮೊದಲಾದ ವೇಷಗಳನ್ನು ಧರಿಸಿ ಹಾಸ್ಯ ಮಾಡುತ್ತಾರೆ. ರಾತ್ರಿಯಿಡೀ ಮನೆ, ಮನೆ ಸುತ್ತಿ ಬೆಳಿಗ್ಗೆ 'ಊರ್ ಮಂದ್'ನಲ್ಲಿ ಸೇರುತ್ತಾರೆ. ಕೆಲವರ ಮೇಲೆ ಗ್ರಾಮದೇವರುಗಳ ಆವೇಶ ಬರುತ್ತಿರುತ್ತದೆ. ಕೆಲವು ಯುವಕರು ಹೆಂಗಸರ ಉಡುಗೆ ತೋಟ್ಟು 'ದೇವದಾಸಿ'ಯರಂತೆ ನರ್ತಿಸುತ್ತಾರೆ. ಕೆಲವರು ತಾವು ಮಾಡಿಕೊಂಡ ಹರಕೆಯನ್ನು ಎತ್ತುಗಳ ಮೇಲೆ ಅಕ್ಕಿ ಹೊರಿಸಿ ದೇವರಿಗೆ ಅರ್ಪಿಸುತ್ತಾರೆ. ಕುದುರೆಯನ್ನು ಬಿದಿರಿನಿಂದ ನೆಯ್ದು ಅಲಂಕಾರ ಮಾಡಿ ವ್ಯಕ್ತಿಯ ಸೊಂಟಕ್ಕೆ ಕಟ್ಟಲಾಗುತ್ತದೆ. ಇದು ಕುದುರೆ ಸವಾರಿ ಮಾಡಿದಂತೆ ಕಾಣುತ್ತದೆ. (ಮಾಹಿತಿ, ರಮೇಶ್ ಐರಿ ಪತ್ರಿಕಾ ವರದಿಗಾರರು, ನಾಪೋಕ್ಲು)

ಈ ಹಬ್ಬದ ಮತ್ತೊಂದು ವಿಶೇಷವೆಂದರೆ ತೆಂಗಿನಕಾಯಿ ಹೋರಾಟ. ದೇವಸ್ಥಾನದ ಮುಖ್ಯಸ್ಥರು ಎಣ್ಣೆ ಹಾಕಿ ನಯಗೊಳಿಸಿದ ತೆಂಗಿನಕಾಯನ್ನು ಕೈಯಲ್ಲಿ ಹಿಡಿದೊಡನೆಯೇ ಗ್ರಾಮದ ಯುವಕರು ಆತನ ಸುತ್ತು ನಿಲ್ಲುತ್ತಾರೆ. ಆತ ತೆಂಗಿನಕಾಯಿಯನ್ನು ಮೇಲಕ್ಕೆಸಿಯುತ್ತಾನೆ. ಯುವಕರು ಮೇಲಕ್ಕೆಸೆದ ಮೇರೆ ಯುವಕರು ಮೇಲಕ್ಕೆಸೆದ ತೆಂಗಿನಕಾಯಿಯನ್ನು ಹಿಡಿದು ದೇವರ ಕಲ್ಲಿಗೆ

ಒಡೆಯಲು ಪ್ರಯತ್ನಿಸುತ್ತಾರೆ. ತೆಂಗಿನಕಾಯಿ ಒಡೆದವನು ಸಮರ್ಥನೆಂದು ಗೌರವಿಸಲ್ಪಡುತ್ತಾನೆ.

ಬೊಟ್ಟಲಪ್ಪ ದೇವರ ನಾಡಿನಲ್ಲಿ ಅಥವಾ ಬೋಟ್‌ಲೀಶ್ವರ ಬೊಟ್ಟನ್ ನಾಡಿನಲ್ಲಿ ಕಾವೇರಿ ತುಲಾ ಸಂಕ್ರಮಣದಂದು ಕಾವೇರಿ ತೀರ್ಥವನ್ನು ತಂದು, ಬೊಟ್‌ಲಪ್ಪ ದೇವಸ್ಥಾನಕ್ಕೆ ಕುದುರೆ ಹತ್ತಿಸುತ್ತಾರೆ. ಇದು ಕೊಡಗಿನ ಆರಂಭದ ಬೇಡು (ಬೋಡು) ಹಬ್ಬ, ಕುದುರೆ ಹಬ್ಬ. ಕೊಡಗಿನ ೩೩ ನಾಡಿನವರು ಮೇ ತಿಂಗಳ ೧೩–೧೪ ನೇ ತಾರೀಖಿನಂದು ಈ ಹಬ್ಬ ಆಚರಿಸುತ್ತಾರೆ.

"ಬೆಳ್ಳಿ ಕುದುರೆಗೆ 'ಕೆಂಬಟ್ಟು' ಸುತ್ತಿ ಬೆಳ್ಳಿಯ ಆಭರಣಗಳನ್ನು ಧರಿಸಿ ಗ್ರಾಮಸ್ಥರು, ತಕ್ಕ ಮುಖ್ಯಸ್ಥರು ಮನೆಯ ನೆಲ್ಲಕ್ಕಿ ನಡುಬಾಡೆಯಲ್ಲಿ ಬೆಳ್ಳಿ ಕುದುರೆಯನ್ನು ನಂದಾದೀಪ ಇಟ್ಟು ಆ ಕುಟುಂಬದ ಶಿವಲಿಂಗ ದೇವರಿಗೆ ನಮಸ್ಕರಿಸಿ, ಹಿಂದಿರುಗುವಾಗ ಎಲ್ಲರೂ ಈ ಕೆಳಗಿನಂತೆ ಹಾಡುತ್ತಾ ದೇವರನ್ನು ಬೇಡುತ್ತಾರೆ. ಆದ್ದರಿಂದ ಇದು ಬೇಡು (ಬೋಡು) ಹಬ್ಬ ಎಂದು ಪ್ರಸಿದ್ಧಿಯಾಗಿದೆ.

"ಕಮ್ಮರಟ ಪ್ಪಂಡ ಪಾರಣ ಬೋಡು
ಒರಂಡೇಕೋರಮ್ಮ ಪಾರಣ ಬೋಡ್
ಒಪ್ಪಕಾ ಪಾರಾಣ ಬಣ್ಣತೇ ಪೋಪ
ದಮ್ಮೆಯಾ ಪಾರಾಣ ಒಮ್ಮಲು ಪೋತೆ
ಕಮ್ಮರಾಟಪ್ಪಂಡ ಬೊಳ್ಳಿ ಕುದುರೆ
ಇಡೀ ಕೊಡಗಿನಲ್ಲಿ ಬೋಡು ನಮ್ಮೇಲ್
ಕುಂದತ್ ಬೊಟ್ಟ್‌ಲ್ ನೇಂದ ಕುದುರೆ
ಪಾರಣ ಮಾನಿತ್ ಅಳ್‌ಂಜ ಕುದುರೆ"[೧೨]

'ಭದ್ರಕಾಳಿ' ಗ್ರಾಮದೇವತೆ ಹಬ್ಬ

ಕೊಡಗಿನಲ್ಲಿ ಪ್ರತಿ ಹಳ್ಳಿಗಳೂ ಆಚಾರ, ವಿಚಾರ, ಹಬ್ಬ ಹರಿದಿನಗಳನ್ನು ಆಚರಿಸುವಲ್ಲಿ ವಿಭಿನ್ನತೆಯನ್ನು ಹೊಂದಿವೆ. ಮಡಿಕೇರಿ ಸಮೀಪದ 'ಇಬ್ಬನಿಒಳವಾಡಿ' ಪೊರಮಲೆನಾಡು, ಕಾಟಗೇರಿ, ಹಾಲೇರಿ, ಮಕ್ಕಂದೂರು, ಮಡಿಕೇರಿ ಮರುಂದಲೆನಾಡು, ಹೆಬ್ಬಾಲೆ ಮುಂತಾದ ಗ್ರಾಮಗಳಲ್ಲಿ ಭದ್ರಕಾಳಿ ಗ್ರಾಮದೇವತೆಯಾಗಿದೆ.

ಈ ಹಬ್ಬ ಪ್ರಾರಂಭವಾಗುವ ಹದಿನೈದು ದಿನದ ಮೊದಲು ಭದ್ರಕಾಳಿ ದೇವರಿಗೆ 'ಕಟ್ಟು ಹಾಕುವ ಪದ್ಧತಿಯಿದೆ'. ದೇವಸ್ಥಾನದ ಹತ್ತಿರದ ಬನದಲ್ಲಿರುವ ಅಯ್ಯಪ್ಪ ದೇವರಿಗೆ ಪೂಜೆ ಸಲ್ಲಿಸಿ ಕೋಳಿಯನ್ನು ಬಲಿಕೊಟ್ಟು, ಭದ್ರಕಾಳಿಯನ್ನು ತನ್ನ ನೆಲೆಯಿಂದ ಬೇರೆಡೆಗೆ ಹೋಗದಂತೆ ತಡೆಯಲು ಅಯ್ಯಪ್ಪನನ್ನು ಪ್ರಾರ್ಥಿಸಿ ಬರುತ್ತಾರೆ. ಗ್ರಾಮದಲ್ಲಿ ಕುರಿ, ಕೋಳಿ ಮುಂತಾದ ಪ್ರಾಣಿಗಳ ಹತ್ಯೆ ಮಾಡಬಾರದು, ಹಸಿ, ಮರವನ್ನು ಕಡಿಯಬಾರದು ಮತ್ತು ಎಲ್ಲೂ ಗುಂಡನ್ನು ಹಾರಿಸಬಾರದೆಂದು ನಿಯಮವಿದೆ.

'ಕಟ್ಟು ಹಾಕುವ ಪದ್ಧತಿಯ ನಂತರ 'ಕರಿಬೊಟ್ಟು ಹಾಕುವ' ಮತ್ತೊಂದು ಸಮಾರಂಭದಲ್ಲಿ ಊರಿನ ಪ್ರತಿಯೊಬ್ಬರೂ ಭಾಗವಹಿಸುತ್ತಾರೆ. ದೇವಸ್ಥಾನದ

ಮುಂದಿನ 'ದೀಪದ ಕಪ್ಪನ್ನು' ಹಣೆಗೆ ಹಚ್ಚಿ ಉತ್ಸವದ ಸಮಯಲ್ಲಿ ಜನಪದ ನೃತ್ಯಗಳಲ್ಲಿ ಭಾಗವಹಿಸುತ್ತಾರೆ. ಈ ಸಮಯದಲ್ಲಿ ಎಂಟು ದಿನಗಳನ್ನು ದೇವರಿಗೆ ಮೀಸಲಿಡುತ್ತಾರೆ. ಈ ಅವಧಿಯಲ್ಲಿ ಮಾಂಸ ಮದ್ಯ ಸೇವಿಸಬಾರದು.

ಕರಿಬೊಟ್ಟು ಕಾರ್ಯಕ್ರಮದ ದಿನ 'ತಕ್ಕ ಮುಕ್ಕಾಟಿ' ಯ ಮನೆಯಲ್ಲಿ (ದೇವಸ್ಥಾನದ ಪಾರುಪತ್ತೇಗಾರ) ಅಂದು ಆತನ ಮನೆಯಿಂದ ದೇವಸ್ಥಾನಕ್ಕೆ ತರುವ ಸಂದರ್ಭದಲ್ಲಿ ಪೂಜಾರಿ ಮತ್ತು ಕರಿಬೊಟ್ಟು ಹಾಕಿಕೊಂಡವರು ಮಾತ್ರ ಭಾಗವಹಿಸುತ್ತಾರೆ. ಇದೇ ದಿನ ದೇವರ ಪ್ರತಿಮೆಗೆ ಅಭಿಷೇಕ ಮಾಡುವ 'ದ್ಯಾವಜಳಕ' ಮಹೋತ್ಸವ ನಡೆಯುತ್ತದೆ. ಬೆಳ್ಳಿಯ ದೇವಿಯ ವಿಗ್ರಹವನ್ನು ಪೂಜಿಸುತ್ತಾರೆ. ಇದೇ ದಿನ 'ತೆಂಗೆಪೋರು' ಎಂಬ ಮನರಂಜನಾ ಕಾರ್ಯಕ್ರಮವಿರುತ್ತದೆ. ಕರಿಬೊಟ್ಟು ಹಾಕಿದವನು ತೆಂಗಿನಕಾಯಿಯನ್ನು ಭದ್ರವಾಗಿ ಕೈಯಲ್ಲಿ ಕಾಯಿ ಹಿಡಿದುಕೊಳ್ಳುತ್ತಾನೆ ಎಂಟು ಜನ ಕರಿಬೊಟ್ಟು ಹಾಕಿದವರು ಅದೇ ತೆಂಗಿನಕಾಯಿಯ ಒಂದೊಂದು ಭಾಗವನ್ನು ಹಿಡಿಯುತ್ತಾರೆ. ಅವರಲ್ಲಿ ತೆಂಗಿನಕಾಯನ್ನು ಪಡೆಯಲು ಸ್ಪರ್ಧೆ ನಡೆಯುತ್ತದೆ. ಅದು ನಾಲ್ಕಾರು ಜನರ ಕೈಯಾಟ. ಯಾರು ಬಲಶಾಲಿ ಯಾಗಿರುತ್ತಾರೋ ಅವರ ಕೈಯಲ್ಲಿ ಉಳಿಯುತ್ತದೆ. ಈ ಸಮಾರಂಭಕ್ಕೆ 'ಬೋಡು' ಎಂದು ಕರೆಯುತ್ತಾರೆ. ಹಬ್ಬದ ದಿನ ಅಭಿಷೇಕ ಆರತಿ ಮುಂತಾದ ಪೂಜೆಗಳ ನಡೆಯುತ್ತವೆ. ದೇವರ ಹೆಸರಿನಲ್ಲಿ ಕೊಡಿ ಆಟ್, ಪೀಲಿಆಟ್, ಕೊಂಬಾಟ್, ಚಾರಿ ಆಟ್‌ಗಳು ನಡೆಯುತ್ತವೆ. ದೇವರನ್ನು ಕುರಿತು ಲಾವಣಿ ಹಾಡುತ್ತಾ ದುಡಿಯನ್ನು ಬಾರಿಸುತ್ತಾರೆ.

ಮೊದಲ ದಿನದ ಹಬ್ಬವನ್ನು ದೊಡ್ಡ ಹಬ್ಬ ಬಲನಮ್ಮೆವೆಂದೂ ಎರಡನೆಯ ದಿನದ ಹಬ್ಬವನ್ನು ಸಣ್ಣ ಹಬ್ಬ ಚೆರಿಯನಮ್ಮೆವೆಂತಲೂ ಕರೆಯುತ್ತಾರೆ. ಸಣ್ಣ ಹಬ್ಬದ ದಿನ 'ಕೊಂಬಾಟ್' ಮತ್ತು 'ಚೌರಿ' ಆಟಗಳನ್ನು ಮಾತ್ರ ಪ್ರದರ್ಶಿಸುತ್ತಾರೆ. ದೊಡ್ಡ ಹಬ್ಬದ ದಿನ ದೇವಬನದಲ್ಲಿ ದೇವರಿಗೆ ಕುರಿ ಬಲಿಯನ್ನು ಕೊಡುತ್ತಾರೆ.

ಕುರಿಯ ತಲೆ ಮತ್ತು ತೊಡೆಯ ಭಾಗವನ್ನು ಉಳಿಸಿಕೊಂಡು ಮಿಕ್ಕ ಮಾಂಸವನ್ನು ಭಕ್ತರಿಗೆ ಪ್ರಸಾದ ರೂಪದಲ್ಲಿ ಹಂಚುತ್ತಾರೆ. ತಲೆ ಮತ್ತು ತೊಡೆಯಭಾಗವನ್ನು ಅಡುಗೆ ಮಾಡಿ ಸಣ್ಣ ಹಬ್ಬದ ರಾತ್ರಿ ಕರಿಬೊಟ್ಟು ಹಾಕಿದ್ದ ಮಂದಿಯೆಲ್ಲರೂ ಊಟ ಮಾಡುತ್ತಾರೆ. ಈ ಎಲ್ಲಾ ಬಲಿ ಹಾಗೂ ಅಡುಗೆಯ ಕಾರ್‍ಯಕ್ರಮ ನಡೆಯುವುದು ದೇವಬನದಲ್ಲಿ. ದೇವಸ್ಥಾನದಲ್ಲಿ ಬ್ರಾಹ್ಮಣರು ಪೂಜೆ ಮಾಡುವುದರಿಂದ ಮಾಂಸಾಹಾರ ನಿಷೇಧಿಸಿದೆ. ತೆಂಗಿನಕಾಯಿಗೆ ಗುಂಡು ಹಾರಿಸಿ ಹಾಕಿದ ಕಟ್ಟನ್ನು ಬಿಚ್ಚುತ್ತಾರೆ. ಅಂದಿನಿಂದ ಮಾಂಸಾಹಾರ, ಮದ್ಯಪಾನ ಸೇವಿಸಬಹುದು. ಈ ಹಬ್ಬದಲ್ಲಿ 'ತಿರಳಕಾರ' ಎಂಬ ವಿಶೇಷ ವಂಶದವರ ಮೇಲೆ ದೇವತೆ ಮೈ ಮೇಲೆ ಕಾಣಿಸಿಕೊಂಡು ಮಲೆಯಾಳ ಮತ್ತು ಕೊಡವ ಭಾಷೆಗಳಲ್ಲಿ ಮಾತನಾಡುತ್ತಾರೆ. ಇದರಿಂದ ಕೊಡವ ಭಾಷೆ ಮೇಲೆ ಮಲೆಯಾಳ ಭಾಷೆಯ ಪ್ರಭಾವವನ್ನು ಗುರುತಿಸಬಹುದು.

ಪನ್ನಂಗಾಲ ತಮ್ಮೆ

ಪನ್ನಂಗಾಲ ತಮ್ಮೆ ದೈವಶಕ್ತಿಯಾಗುವ ಜೊತೆಗೆ ದಿಟ್ಟೆ, ಬುದ್ಧಿವಂತಿಕೆ, ಶಕ್ತಿವಂತೆಯಾಗಿದ್ದಾಳೆ. ಈ ಕತೆಯಲ್ಲಿ ದಲಿತರ ಶ್ರೇಷ್ಠತೆ ಹಾಗೂ ನೋವಿನ

ಅರಿವಾಗುತ್ತದೆ. ಭಾವುಕನಾದ ಇಗ್ಗುತಪ್ಪನಿಗೆ ತನ್ನ ತಂಗಿಯ ಬಗ್ಗೆ ಪ್ರೀತಿ ಇದ್ದರೂ, ಸಂಪ್ರದಾಯ, ಜಾತಿಬೇಧದ ಸಂಕೋಲೆಯಿಂದ ಬಂಧಿತನಾಗಿ ಅಸಹಾಯಕನಾಗುತ್ತಾನೆ. ಈ ಕತೆಯು ಕರುಣಾರಸದ ಪ್ರತೀಕದಂತಿದೆ.

ಬಹಳ ವರ್ಷಗಳ ಹಿಂದೆ ಇಗ್ಗುತಪ್ಪ ಅಣ್ಣ ತಮ್ಮಂದಿರೂ ಉತ್ತರ ಮಲಯಾಳದಲ್ಲಿ ಒಬ್ಬ ಪ್ರೀತಿಯ ತಂಗಿಯೊಡನೆ ಜನಿಸಿದರು. ಜನರಿಗೆ ಉಪಕಾರಮಾಡಿ ಅವರಲ್ಲಿ ನೆಲೆನಿಂತು ಅವರಿಂದ ಪೂಜೆಯನ್ನು ಕೈಗೊಂಡು, ದೇವರ ಮೇಲೆ ಭಕ್ತಿಯನ್ನುಂಟು ಮಾಡುವುದೇ ಅವರ ಮುಖ್ಯ ಉದ್ದೇಶವಾಗಿತ್ತು.

ಕಾಇರಾಟ್ ತಿರ್‌ಚಂದ್ರಪ್ಪ ಮತ್ತು ಬೆಂದ್ರುಕೋಲಪ್ಪ ಈ ಮೂವರು ಕೇರಳದಲ್ಲಿಯೇ ನೆಲೆಸಿದರು. ಮಿಕ್ಕ ಮೂರು ದೇವತೆಗಳು ಕೊಡಗಿಗೆ ಕಾಲ್ನಡಿಗೆಯಿಂದ ಪ್ರಯಾಣ ಮಾಡುವ ಸಂದರ್ಭದಲ್ಲಿ, 'ನಾಲ್ಕುನಾಡು' ಬೆಟ್ಟದ ಹತ್ತಿರ ತಲುಪುವುದರಲ್ಲಿ ತಂಗಿಗೆ ಆಯಾಸವಾಯಿತು. ಆಗ ಅವರು ತಮ್ಮ ಸಾಮರ್ಥ್ಯವನ್ನು ಪರೀಕ್ಷಿಸಲು ಅಲ್ಲಿಂದ ಬಾಣಗಳನ್ನು ಬಿಟ್ಟರು. ತಂಗಿಯರು ಹೂಡಿದ ಬಾಣ ಪನ್ನಂಗಾಲವೆಂಬ ಗ್ರಾಮಕ್ಕೆ ನಂತರ ಅನಾಪೋತ್ಲು ಸಮೀಪದ ಕಕ್ಕಬ್ಬೆ ಗ್ರಾಮದ ಬಳಿಗೆ ಬಂದು ಹೊಳೆಯ ನಿಂತಿತು ದಡದಲ್ಲಿ ಅವರೆಲ್ಲರೂ ತಂಗಿದರು.

ಅಣ್ಣಂದಿರಿಗೆ 'ಬೆಂಕಿ ಇಲ್ಲದೆ ನಿಮಗೆ ಅಡುಗೆ ಮಾಡಿ ಬಡಿಸುತ್ತೇನೆಂದೂ' ತಾವು ಅಕ್ಕಿಯನ್ನು ತಂದುಕೊಡಿ ಎಂದು ಹೇಳಿ ತಾವು ಉಪ್ಪಿಲ್ಲದೆ ಊಟ ಮಾಡಬೇಕೆಂದು ತಿಳಿಸಿದಳು.

ತಂಗಿಯ ಹತ್ತಿರದ 'ಪರದಂಡ್ರ ಮನೆಯ ಒಂದು ಹಸುವಿನಿಂದ ಹಾಲು ಕರೆದು ಅದರಿಂದ ಅನ್ನವನ್ನು ತಯಾರಿಸಿದಳು. ಆಕೆ ಊಟ ಬಡಿಸಲು ಪರದಂಡ್ರ ಮನೆಯ ಬಾಳೆಯ ಎಲೆಯನ್ನು ಕುಯ್ಯುವಾಗ ಆ ಮನೆಯ ಉಮ್ಮವ್ವ ಆಕೆಯನ್ನು ಬಯ್ಯುವಳು. ಆಗ ಪರದಂಡ್ರ ಮನೆಯವರ ತೋಟದಲ್ಲಿ ಬಾಳೆ ಬೆಳೆಯದೆ ಹೋಗಲಿ ಎಂದು ಶಾಪಕೊಟ್ಟು ಮುತ್ತುಗದ ಎಲೆಯಲ್ಲಿ ಊಟ ಬಡಿಸುತ್ತಾಳೆ. ಮನೆಯ ತೋಟದಲ್ಲಿ ಬಾಳೆಗಿಡ ಬೆಳೆಯದ ಇರುವುದಕ್ಕೆ ಶಾಪ ಕಾರಣವಾಗಿದೆ ಎಂಬ ನಂಬಿಕೆ ಕೊಡವರಲ್ಲಿದೆ.

"ಶಾಪವನ್ನು ತಿಳಿದ ಆ ಮನೆಯ ಯಜಮಾನ ಶಾಪ ವಿಮೋಚನೆಗೆ ಅಂಗಲಾಚುತ್ತಾನೆ. ಆಗ ಹಿರಿಯವನಾದ ಇಗ್ಗುತಪ್ಪನು "ಕೊಟ್ಟ ಶಾಪವನ್ನು ಹಿಂತೆಗೆದುಕೊಳ್ಳಲಾಗುವುದಿಲ್ಲ, ಆದರೆ ಇನ್ನು ಮುಂದೆ ಆ ಸ್ಥಳದಲ್ಲೇ ನೆಲೆಸುವೆನು, ನೀವೆಲ್ಲರೂ ನನಗೆ ಕಟ್ಟಿಸುವ ದೇವಸ್ಥಾನಕ್ಕೆ ಪರದಂಡ್ರ ಮನೆಯವರೇ ತಕ್ಕ ಮುಖ್ಯಸ್ಥರಾಗಿ ಇರುವಂತಾಗಲಿ, ನನ್ನ ನೈವೇದ್ಯದ ಅನ್ನಕ್ಕೆ ನಿಮ್ಮ ಒಂದೆಲೇ ಸಣ್ಣಕ್ಕಿ ಬರುವಂತಾಗಲಿ" ಎಂದನು.

ಸಹೋದರರೆಲ್ಲರೂ ತಂಗಿಯ ಜೊತೆ ಊಟಕ್ಕೆ ಕುಳಿತರು. ಎಲ್ಲರೂ ಊಟ ಮಾಡುವಾಗ ಉಪ್ಪಿಲ್ಲದೆ ಊಟ ಬಾಯಿಂದ ಹೊಟ್ಟೆಗೆ ಹೋಗುವುದು ಕಷ್ಟವಾಯಿತು. ಆಗ ಇಗ್ಗುತಪ್ಪನು ಅನ್ನವನ್ನು ಮೇಲಕ್ಕೆ ಚೆಲ್ಲಿ, "ಅಗೋ ಆನಿಕಲ್ಲು ಬೀಳುತ್ತಿದೆ" ಎಂದನು. ಇದನ್ನು ನೋಡಿದ ತಂಗಿಯು ಸಿಟ್ಟಾಗಿ ಸಟ್ಟುಗವನ್ನು ತೆಗೆದು ಮೂವರ ಬೆನ್ನಮೇಲೆ ಬಡಿದು "ಇಗೋ ಮಳೆಗಾಲದ ಗುಡುಗು"

ಎಂದಳು ಇಗ್ಗುತಪ್ಪನು ಕೋಪಗೊಂಡಾಗ ಪಾಲೂರಪ್ಪನು ಸಮಾಧಾನ ಗೊಳಿಸಿದನು.[೧೩]

ಊಟದ ನಂತರ ಎಲೆ ಅಡಿಕೆ ಹಾಕಿಕೊಂಡ ಪಾಲೂರಪ್ಪನು "ಯಾರ ತಾಂಬೂಲ ಕೆಂಪಗಿದೆ" ಎಂದನು. ಎಲ್ಲರೂ ತಮ್ಮ ಎಡಗೈಯಲ್ಲಿ ಉಗುಳಿ ತೋರಿಸಿದರು. ಮತ್ತೆ ಉಗುಳಿದುದನ್ನು ಮರಳಿ ಬಾಯೊಳಗೆ ಹಾಕುವವರಂತೆ ಎಲ್ಲರೂ ಕೈಯೆತ್ತಿದ್ದರು. ಆದರೆ ಸಹೋದರರು ಉಗುಳಿದುದನ್ನು ಬೆನ್ನಹಿಂದೆ ಹಿಂದಕ್ಕೆ ಎಸೆದರು.. ತಂಗಿಯು ಗೊತ್ತಿಲ್ಲದೆ ಪುನಃ ಬಾಯಿಗೆ ಎಸೆದುಕೊಂಡಳು. ಇದರಿಂದಾಗಿ ತಂಗಿಯ ಜಾತಿ ಹೋಯಿತೆಂದು ಇನ್ನು ಮುಂದೆ ತಮ್ಮ ಜೊತೆ ಇರಬಾರದೆಂದು ಎಂದಾಗ ತಂಗಿಯು ಇಗ್ಗುತಪ್ಪನನ್ನು ಪ್ರಾರ್ಥಿಸಿದಳು. ಆಗ ಇಗ್ಗುತಪ್ಪನು ನಿನ್ನ ಬಾಣವು ಎಲ್ಲಿಗೆ ಹೋಗಿ ನಾಟಿದೆಯೋ ಅಲ್ಲಿ ಹೋಗಿ ನೆಲಸು ಎಂಜಲನ್ನು ತಿಂದ ನಿನ್ನನ್ನು ಹೊಲೆಯರು ಪೂಜಿಸುತ್ತಾರೆಂದೂ, ನಾನಾದರೂ ಇದೇ ಬೆಟ್ಟದಲ್ಲಿದ್ದು, ನಿನ್ನನು ಯಾವಾಗಲೂ ನೋಡುತ್ತೇನೆಂದನು.

ಅದರೆ ತಂಗಿ ಕೊಕ್ಕರೆಯ ರೂಪತಾಳಿದಳು. ಪನ್ನಂಗಾಲ ಗ್ರಾಮದ 'ಕರ್ತಂಡಿ' ಮನೆಯವರ ಗದ್ದೆಯಲ್ಲಿ ಹಾರುತ್ತಿರುವಾಗ ಒಬ್ಬ ಹೊಲೆಯ ಅದನ್ನು ಹಿಡಿಯಲೆತ್ನಿಸಿದಳು. ನಂತರ ಒಬ್ಬ ಹೊಲೆಯನು ಮುಂದೆ ಬಂದು ಹಿಡಿದಾಗ ತಂಗಿಯು ಪನ್ನಂಗಾಲ ಎಂಬ ಸ್ಥಳದಲ್ಲಿ ನೆಲಸಿದಳು. ಆದುದ್ದರಿಂದ 'ಪನ್ನಂಗಾಲ ತಮ್ಮೆ' ಎಂಬ ಹೆಸರು ಬಂತು. ಒಬ್ಬ ಸಹೋದರನು ಪಾಲೂರಿನಲ್ಲಿ ನೆಲಸಿ ಪಾಲೂರಪ್ಪನೆಂದೂ, ಇನ್ನೊಬ್ಬ ತಿರುವಳ್ಳಿಯಲ್ಲಿ 'ತಿರುವಳ್ಳಪ್ಪ' ಎಂದು ಪ್ರಸಿದ್ಧಿಪಡೆದನು. ಇಂದಿಗೂ ಪನ್ನಂಗಾಲದಲ್ಲಿ ಹೊಲೆಯರೇ ಪೂಜೆಯನ್ನು ಮಾಡುತ್ತಿದ್ದಾರೆ.

ಪನ್ನಂಗಾಲತಮ್ಮೆಯ ಹಬ್ಬದ ಎತ್ತುಪೊರಟ ಆಚರಣೆ

ಎತ್ತಿನ ಮೇಲೆ ದೇವರ ಹಬ್ಬಕ್ಕೆ ಹರಕೆಯ ವಸ್ತುಗಳನ್ನು ಹೇರಿಕೊಂಡು ಹೋಗಿ ದೇವರಿಗೆ ಒಪ್ಪಿಸುವುದು, ಇದರ ಆಚಾರವಾಗಿದೆ. ಎತ್ತನ್ನು ಸ್ನಾನಮಾಡಿಸಿ ಐನ್‌ಮನೆ ಅಂಗಳದ ಕಲ್ಲುಬೋಟಿಗೆ ಕಟ್ಟುತ್ತಾರೆ. ಎರಡೂ ಕಡೆ ಸಮಭಾಗವಾಗಿ ಚೀಲಭಾಗಗಳು ಬರುವಂತಿರುವ ಗೋಣಿಚೀಲ 'ಕವುಂದಿ'ಯನ್ನು ಎತ್ತಿನ ಮೇಲೆ ಹೊದಿಸುತ್ತಾರೆ. ಅದರ ಮೇಲೆ ಹುಲ್ಲು ಹಾಸುತ್ತಾರೆ. ಎತ್ತಿಗೂ ಹುಲ್ಲು ಮೇವು ಹಾಕುತ್ತಾರೆ. ಹುಲ್ಲಿನ ಮೇಲೆ ಕೆಂಪುವಸ್ತ್ರ ಇಟ್ಟು, ಕೊಂಬಿಗೆ ಕೆಂಪುಬಣ್ಣ ಬಳಿದು ಹೂವು ಹಾರಕಟ್ಟಿ ಕೊರಳಿಗೆ ಗಂಟೆ ಮಣಿ ಅಲಂಕರಿಸುತ್ತಾರೆ. ಉಟ ಉಪಚಾರ ಆದ ಮೇಲೆ ಅಕ್ಕಿ ಬೆಲ್ಲ ತೆಂಗು ಸೇರಿಸಿ 'ಪೋರ್' ತುಂಬಿಸುತ್ತಾರೆ. ಅಂದರೆ ಎತ್ತಿನ ಮೇಲಿನ ಇಬ್ಬದಿ ಚೀಲಗಳಲ್ಲಿ ತಲಾ ೫ ಸೇರು ಅಕ್ಕಿ, ಒಂದು ತೆಂಗು, ಒಂದು ಬೆಲ್ಲ ಕೆಲವೆಡೆ ಬರಿ ಅಕ್ಕಿ ಹಾಕಿ ತುಂಬುತ್ತಾರೆ. ನಂತರ ನೆಲ್ಲಕ್ಕಿ ನಡುಬಾಡೆಯಲ್ಲಿ ದುಡಿ ಬಾರಿಸುತ್ತ ಪ್ರಾರ್ಥಿಸಿ ಪದ ಹೇಳುತ್ತ ಮೆಟ್ಟಿಲಿಳಿದು ಕಲ್ಲುಬೋಟಿ (ಕಲ್ಲುಕಂಬ) ಬಳಿ ಬರುತ್ತಾರೆ. ಅಲ್ಲಿ ಎತ್ತಿನ ಸಹಿತ ಮೂರು ಸುತ್ತು ಬಂದು ಪದ ಹಾಡಿಕೊಂಡ ದೇವಸ್ಥಾನಕ್ಕೆ ಎತ್ತೂ ಪೊರಟ ಹೋಗುತ್ತಾರೆ. ಅಲ್ಲಿ ಹೋಗಿ ಹರಕೆಯ ಸಾಮಾನುಗಳನ್ನು ಒಪ್ಪಿಸುತ್ತಾರೆ. ಇದು ಕೆಂಬಟ್ಟಿ

ಹಾಗು ಕೊಡವರು ಇಬ್ಬರಲ್ಲಿಯೂ ಆಚರಣೆಯಲ್ಲಿದೆ. ಇವರಲ್ಲದೆ ಹರಕೆ ಇದ್ದವರು ಯಾರೇ ಹೋಗಿ ಒಪ್ಪಿಸಬಹುದು. ದೇಗುಲದ ಸುತ್ತ ಮೂರು ಸುತ್ತು ಬಂದು ಒಪ್ಪಿಸಬೇಕು. ಹೀಗೆ ಹಬ್ಬದ ಆಚರಣೆಯ ನಂತರ ದೇಗುಲದಲ್ಲಿ ಊಟ ಮಾಡಿ ದೇವರ ಆಶೀರ್ವಾದ ಪಡೆದು ಹೊರಡುತ್ತಾರೆ.

ಕೆಂಬಟ್ಟಿಗಳು ಬೆತ್ತ ಮತ್ತು ಬಿದಿರುಗಳಿಂದ ಕುದುರೆಯನ್ನು ತಯಾರಿಸುತ್ತಾರೆ. ಅದಕ್ಕೆ ಬಣ್ಣದ ಬಟ್ಟೆ ಹೂವಿನ ಹಾರ ಹಾಕಿ, ಕೀಲು ಕುದುರೆಯಂತೆ ಹೊತ್ತು ಕೊಂಡು ಹಬ್ಬದಲ್ಲಿ ಕುಣಿಯುತ್ತಾರೆ. ಈ ಕಳಿ (ವೇಷದಾಟ)ಯನ್ನು ಕುದುರೆ ಕಳಿ ಆಡುವುದು ಎನ್ನುವರು.

'ಕುಂದ ಬೊಟ್ಟಲ್ ನೇಂದ ಕುದುರೆ, ಪಾರಣಮಾನಿಲ್ ಅಳಂಜ ಕುದುರೆ' – ತುಲಾಸಂಕ್ರಮಣದಲ್ಲಿ ಕುಂದಬೆಟ್ಟದಲ್ಲಿ ಎದ್ದು ಆಡಿದ ಕುದುರೆ ಜೂನ್ ೧–೨ನೇ ತಾರೀಖು ಜೇಷ್ಠದಲ್ಲಿ ಪಾರಣಮಾನಿಯಲ್ಲಿ ಬಿದ್ದು ಹೋಗುತ್ತದೆ. ತುಲಾಮಾಸದಿಂದ ಆರಂಭಿಸಿ ವೃಷಭಮಾಸದವರೆಗೆ ಆಡಿ ಪಾರಣಮಾನಿ ಎಂಬಲ್ಲಿ ಕುದುರೆ ಕಡಿಯುವುದರ ಮೂಲಕ ಈ ಕಳಿ ವರ್ಷಕ್ಕೆ ಮುಕ್ತಾಯವಾಗುತ್ತದೆ (ಡಾ. ಎಂ.ಜಿ. ನಾಗರಾಜ್ ರವರ ಸಂದರ್ಶನದಿಂದ ತಿಳಿದು ಬಂದ ಮಾಹಿತಿ).

'ಮಕ್ಕಿ ಸಾಥ್ರಾವು' ಸನ್ನಿಧಿಯ ಮಣ್ಣಿನ ನಾಯಿ ಹರಕೆ ಒಪ್ಪಿಸುವ ಹಬ್ಬ

ಕೊಡಗಿನ ನಾಪೊಕ್ಲು ಸಮೀಪದ ಬೇತು ಗ್ರಾಮದಲ್ಲಿ ಪ್ರಸಿದ್ಧವಾದ 'ಮಕ್ಕಿ ಸಾಥ್ರಾವು' ಎಂಬ ದೇವಾಲಯವಿದೆ. ಈ ಸನ್ನಿಧಿಯಲ್ಲಿ ವಂಷಂಜಕಇಖರಂಡಂಂ ಬಾರಿ ವಿಶೇಷ ಹಬ್ಬ ನಡೆಯುತ್ತದೆ. ಮೊದಲನೇ ಹಬ್ಬ ಡಿಸೆಂಬರ್ ತಿಂಗಳ ಕೊನೇ ವಾರದಲ್ಲಿ, ಎರಡನೇ ಹಬ್ಬ ತಿಂಗಳ ಮೊದಲ ವಾರದಲ್ಲಿ ಆಚರಿಸಲ್ಪಡುತ್ತದೆ. ಮಣ್ಣಿನ ನಾಯಿ ಒಪ್ಪಿಸುವುದು, ಎತ್ತೇರಾಟ್ ಮನೆಯಿಂದ, (ಕುಟ್ಟಂಜೆಟ್ಟಿರ ಒಕ್ಕದ ಸಮುದಾಯದವರಿಂದ ದೇವರಿಗೆ ಎತ್ತಿನ ಮೂಲಕ ಅಕ್ಕಿಯನ್ನು ಅರ್ಪಿಸುವುದು) ದೀಪಾರಾಧನೆ, ಅಜ್ಜಪ್ಪ ಮತ್ತು ವಿಷ್ಣುಮೂರ್ತಿ ಕೋಲಗಳು ಇಲ್ಲಿನ ಮುಖ್ಯ ಆಚರಣಾ ಪದ್ಧತಿಯಾಗಿವೆ. ಕಲ್ಯಾಟಂಡ ಪೊನ್ನಪ್ಪನು (ಕಲ್ಯಾಟಜ್ಜಪ್ಪ) ಕರ್ಣಂಬಾಹುಪಡೆ ಬಂದಾಗ ಮಹಡಿಯಿಂದ ಜಿಗಿದು ಕಾಲು ಮುರಿದುಕೊಂಡ ಸಂದರ್ಭದಲ್ಲಿ ಮಕ್ಕಿ ಸಾಥ್ರಾವಿನ ರಕ್ಷಣೆಯನ್ನು ಕೇಳಿದಾಗ ಕುಂಟನಾದ ಕಲ್ಯಾಟಜ್ಜಪ್ಪನಿಗೆ ಸಾಥ್ರಾವು ರಕ್ಷಣೆ ನೀಡಿದ ಮಾಹಿತಿಯೂ ಇದೆ.

ಕೆಂಪು ಬಣ್ಣ ಬರುವವರೆಗೆ ಹಬ್ಬದ ಹರಕೆ ಒಪ್ಪಿಸಲು ಹದಿನೈದು ದಿನದ ಮೊದಲೇ 'ಮಣ್ಣಿನ ನಾಯಿ' ತಯಾರಿಸಿ ಕೆಂಪುಬಣ್ಣ ಬರುವವರೆಗೆ ಸುಟ್ಟು ಹದ ಮಾಡುತ್ತಾರೆ. ಹಬ್ಬದ ದಿನ ಬೆಳಗಿನ ಜಾವ ಯಾರೂ ಕಾಣದಂತೆ 'ಬೇತು'ವಿನ ಮಂದ್ ಸಮೀಪದ 'ಕರ್ಪತಜ್ಜನ್ ನಡೆ' ಎಂಬ ಸ್ಥಳಕ್ಕೆ ಹರಕೆ ಹೊತ್ತವರು ಮುಖ್ಯಸ್ಥರೊಡನೆ ತೆರಳಿ ಮಣ್ಣಿನ ನಾಯಿಗಳಿಗೆ ಹೂ, ಗಂಧಗಳ ಲೇಪನಗಳಿಂದ ಪೂಜಿಸಿ ದೇವಾಲಯಕ್ಕೆ ಹೊತ್ತು, ತರುತ್ತಾರೆ. ಈ ಸಂದರ್ಭದಲ್ಲಿ ಯಾರೂ ಇವರ ಎದುರು ಕಾಣಿಸಿಕೊಳ್ಳಬಾರದು ಎಂದು ಅಲ್ಲಿನ ಗ್ರಾಮಸ್ಥರು ಸುಳಿದಾಡುವುದನ್ನು ನಿಷೇಧಿಸಿರುತ್ತಾರೆ. (ಮಾಹಿತಿ: ಪ್ರಭಾಕರ್, ಪತ್ರಿಕಾ ವರದಿಗಾರರು, ವಿಜಯ ಕರ್ನಾಟಕ, ನಾಪೋಕ್ಲು)

ಹರಕೆ ನಾಯಿಗೆ ರೊಟ್ಟಿ ನೈವೇದ್ಯ ಅರ್ಪಿಸುವ ವಿಶಿಷ್ಟ ಆಚರಣೆಯನ್ನು ಇಲ್ಲಿ ನೋಡಬಹುದಾಗಿದೆ. ನಾಯಿ ಒಪ್ಪಿಸುವ ಒಂದು ದಿನ ಮುಂಚಿತವಾಗಿ ನಿಗದಿತ ಕುಟುಂಬದ ಪುರುಷರು ದೇವಾಲಯದ ಸಮೀಪ ಕಲ್ಲಿನ ಒಲೆ ನಿರ್ಮಿಸಿ ಸೌದೆ ಸಂಗ್ರಹಿಸಿಡುತ್ತಾರೆ. ಕುಟುಂಬದ ಮಹಿಳೆಯರು ದೇವಾಲಯದ ಸಮೀಪ ನಿಗದಿತ ಮನೆಯಲ್ಲಿ ರಾತ್ರಿ ತಂಗಿ ಮುಂಜಾನೆ ತಣ್ಣೀರು ಸ್ನಾನಮಾಡಿ ಅಕ್ಕಿರೊಟ್ಟಿ ತಯಾರಿಸಿ ಯಾರಿಗೂ ಕಾಣದಂತೆ ಬಾಳೆ ಎಲೆ ಚೂರಿನ ಜೊತೆ ರೊಟ್ಟಿ ಹಾಕಿ ನೈವೇದ್ಯ ಅರ್ಪಿಸುತ್ತಾರೆ.

"ಕೊಡವರು ತಮ್ಮ ಸಾಕು ಪ್ರಾಣಿಗಳಿಗೆ ತೊಂದರೆ ಉಂಟಾದರೆ ತೋಟ, ಗದ್ದೆಯ ಫಸಲು ಹೆಚ್ಚಿಸಲು, ತಮ್ಮ ಇತ್ಯಾರ್ಥ ಸಿದ್ಧಿಯಾಗುತ್ತದೆಂದು ಮಕ್ಕಿ ಸಾರ್ಥಾವು ದೇವರಿಗೆ ಈ ಹರಕೆ ಒಪ್ಪಿಸುವರು ಪ್ರತಿವರ್ಷ ದಟ್ಟ ಕಾನನದದಲ್ಲಿ ಐದು ಅಡಿ ಎತ್ತರದ ವೃತ್ತಾಕಾರದ ಕಟ್ಟೆಯ ನಡುವೆ ತ್ರಿಶೂಲಧಾರಿ ಶಿಲಾಮೂರ್ತಿ ಸಾರ್ಥಾವು ಸನ್ನಿಧಿಯ ಸುತ್ತ ಹಲಸಿನ ಮರ, ಮತ್ತು ಹರಕೆ ಮಣ್ಣಿನ ನಾಯಿಗಳು ಕಂಡುಬರುತ್ತವೆ. ಈ ಹಬ್ಬದ ರಾತ್ರಿ ೧೦ ಗಂಟೆಗೆ ಅಂದಿಬೊಳ್ಕ್, ದೀಪಾರಾಧನೆ ಕರಿಬಾಳೆ, ಕುಟ್ಟಿಚಾಟ್, ನುಚ್ಚುಟ್ಟೆ ಕೋಲಗಳು ನಡೆಯುತ್ತವೆ. ಮರುದಿನ ಅಜ್ಜಪ್ಪ ಕೋಲ ಹಾಗೂ ವಿಷ್ಣುಮೂರ್ತಿ ಕೋಲಗಳು ಏರ್ಪಡುತ್ತವೆ. ಒಟ್ಟಿನಲ್ಲಿ ಕೊಡವರ ಅಯ್ಯಪ್ಪ ದೇವರ ಜಾತ್ರೆ ಇಂದಿಗೂ ಶ್ರದ್ಧೆ ಭಕ್ತಿಯ ಪ್ರಮುಖ ಆಚರಣೆಗಳಲ್ಲೊಂದಾಗಿದೆ. (ಮಕ್ಕಿಸಾರ್ಥವಿನ ಛಾಯಾಚಿತ್ರವನ್ನು ಅನುಬಂಧ-೬ರಲ್ಲಿ ನೀಡಲಾಗಿದೆ)

ಕೊಡಗಿನ ಪ್ರಮುಖ ಧಾರ್ಮಿಕ ಸ್ಥಳಗಳು

ಸಂಸ್ಕಾರ ಸಂಸ್ಕೃತಿಯ ಒಂದು ಭಾಗ. ಮಾನವನನ್ನು ಆವರಿಸಿರುವ ಅರಿಷಡ್ವರ್ಗಗಳು ನಿಯಂತ್ರಣದಲ್ಲಿರಲು ಮತ್ತು ಮಾನವನು ನೀತಿ, ರೀತಿ, ಪ್ರೀತಿ ವಿಶ್ವಾಸಗಳಿಂದ ನಡೆದುಕೊಳ್ಳುವಲ್ಲಿ ಧಾರ್ಮಿಕ ಕೇಂದ್ರಗಳ ಪಾತ್ರ ಬಹುಮುಖ್ಯವಾದದ್ದು. ಧಾರ್ಮಿಕ ಸ್ಥಳಗಳ ವೀಕ್ಷಣೆಯಿಂದ ಮಾನವನಲ್ಲಿ ಸಹಜವಾಗಿರುವ ತಾಮಸ ಗುಣ ಕಡಿಮೆಯಾಗಿ ಸಾತ್ವಿಕ ಗುಣ ಹೆಚ್ಚುತ್ತದೆ ಎಂಬುದು ಜನಪದರ ನಂಬಿಕೆ. ಈ ಹಿನ್ನೆಲೆಯಲ್ಲಿ ಕೊಡಗಿನ ವಲಯದಲ್ಲಿ ಕಂಡುಬರುವ ಪ್ರಮುಖ ದೇವಾಲಯಗಳನ್ನು ಇಲ್ಲಿ ಪರಿಚಯಿಸಲಾಗಿದೆ ಮತ್ತು ಪ್ರಸ್ತುತ ಕೃತಿಯಲ್ಲಿ ಸಮಾಜೋ ಸಾಂಸ್ಕೃತಿಕ ವ್ಯವಸ್ಥೆಯನ್ನು ಅರಿಯಲು ಇವುಗಳು ಸಹಾಯಕವಾಗಿವೆ.

ಶ್ರೀ ಓಂಕಾರೇಶ್ವರ ದೇವಾಲಯ : ಮಂಜಿನ ನಗರಿ ಮಡಿಕೇರಿಯ ಮಧ್ಯಭಾಗದಲ್ಲಿ ಓಂಕಾರೇಶ್ವರ ದೇವಾಲಯವಿದೆ. ಕ್ರಿ.ಶ. ೧೮೨೦ ರಲ್ಲಿ ಅಂದು ಕೊಡಗನ್ನು ಆಳುತ್ತಿದ್ದ ಎರಡನೇ ಲಿಂಗರಾಜೇಂದ್ರ ಅರಸ ಈ ದೇವಾಲಯವನ್ನು ನಿರ್ಮಿಸಿದ್ದು, ಈ ದೇವಾಲಯವು ಇಂಡೋ ಸಾರ್ಸನಿಕ್ ಶೈಲಿಯಲ್ಲಿ ನಿರ್ಮಾಣವಾಗಿದೆ. ವೃತ್ತಾಕಾರವಾದ ಶಿಖರ, ನಾಲ್ಕು ಮೂಲೆಗಳಲ್ಲಿ ನಾಲ್ಕು ಮಿನಾರ್‌ಗಳಿವೆ. ವಿಶಾಲವಾದ ಕಟ್ಟಡ ಹಾಗೂ ಪ್ರಾಂಗಣವಿದೆ. ದೇವಾಲಯದ ಎದುರಿಗೆ ದೊಡ್ಡದಾದ ಕಲ್ಯಾಣಿಯಿದ್ದು, ಮಧ್ಯದಲ್ಲೊಂದು ಉತ್ಸವ ಮಂಟಪವಿದೆ.

ದೇವಾಲಯದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಜೊತೆಯಲ್ಲಿ ಶ್ರೀ ಸುಬ್ರಹ್ಮಣ್ಯ ಹಾಗೂ ಗಣಪತಿ ದೇವರ ವಿಗ್ರಹಗಳಿವೆ. ಇಲ್ಲಿ ಪ್ರತಿನಿತ್ಯ ಪೂಜೆ ನಡೆಯುತ್ತದೆ.

ತಲಕಾವೇರಿ: ಭಾಗಮಂಡಲದಿಂದ ೮ ಕಿ.ಮೀ. ದೂರದಲ್ಲಿ ಕರ್ನಾಟಕದ ಜೀವನದಿಯಾಗಿರುವ ಕಾವೇರಿಯ ಉಗಮಸ್ಥಾನ ತಲಕಾವೇರಿ ಕ್ಷೇತ್ರವಿದೆ. ಇಲ್ಲಿರುವ ಪುಟ್ಟ ಕುಂಡಿಕೆಯಲ್ಲಿ ಕಾವೇರಿ ಉಗಮಿಸುತ್ತಾಳೆ. ತುಲಾ ಸಂಕ್ರಮಣದಂದು ಕಾವೇರಿ ಉದ್ಭವವಾಗುವುದರ ಪ್ರತ್ಯಕ್ಷ ಅನುಭವವಾಗುತ್ತದೆ. ಕ್ಷೇತ್ರಕ್ಕೆ ಸಂಜೆ ೬ ಗಂಟೆ ಬಳಿಕ ಪ್ರವೇಶವಿಲ್ಲ. ವಸ್ತ್ರ ಸಂಹಿತೆ ಜಾರಿಯಲ್ಲಿದೆ. ಕ್ಷೇತ್ರದಲ್ಲಿ ಪ್ರಾಮುಖ್ಯತೆ ಪಡೆದಿರುವ ಮಹರ್ಷಿ ಅಗಸ್ತ್ಯ ಪ್ರತಿಷ್ಠಾಪಿತ ಶ್ರೀ ಅಗಸ್ತ್ಯೇಶ್ವರ ದೇವಾಲಯ ನೆಲೆಗೊಂಡಿದೆ. ಇಲ್ಲಿ ಶ್ರೀ ಮಹಾಗಣಪತಿಯ ಪ್ರತ್ಯೇಕ ಸನ್ನಿಧಾನವೂ ಇದೆ. ಬ್ರಹ್ಮಗಿರಿ ಬೆಟ್ಟ ಕೂಡ ಇಲ್ಲಿನ ಪ್ರಮುಖ ಆಕರ್ಷಣೆಯಾಗಿದೆ.

ಭಾಗಮಂಡಲ: ಕೊಡಗಿನ ಪ್ರಸಿದ್ಧ ತೀರ್ಥಕ್ಷೇತ್ರ ಹಾಗೂ ಹೆಸರಂತ ಪ್ರವಾಸಿ ತಾಣ ಭಾಗಮಂಡಲ. ಇದು ಮಡಿಕೇರಿಯಿಂದ ದಕ್ಷಿಣಕ್ಕೆ ಸುಮಾರು ೩೦ ಕಿ.ಮೀ. ದೂರದಲ್ಲಿದೆ. ಭಾಗಮಂಡಲದಲ್ಲಿ ಹಾದುಹೋಗುವ ಕಾವೇರಿ ಮಾತೆ ಕನ್ನಿಕಾ ಮತ್ತು ಸುಜ್ಯೋತಿ ನದಿಗಳೊಂದಿಗೆ ಸಂಗಮಗೊಳ್ಳುತ್ತಾಳೆ. ದಕ್ಷಿಣ ಭಾರತದ ಮೂಲೆಮೂಲೆಗಳಿಂದ ಜನರನ್ನು ತನ್ನತ್ತ ಸೆಳೆಯುವ ಭಾಗಮಂಡಲದಲ್ಲಿ ಭಗಂಡೇಶ್ವರ, ಸುಬ್ರಹ್ಮಣ್ಯ ಮತ್ತು ಗಣಪತಿ ದೇವಾಲಯಗಳಿವೆ. ಜಿಲ್ಲೆಯಲ್ಲಿ ಅತೀ ಹೆಚ್ಚು ಮಳೆ ಬೀಳುವುದರಿಂದ ಇದು ಕೊಡಗಿನ ಆಗುಂಬೆ ಎಂದು ಗುರುತಿಸಿಕೊಂಡಿದೆ. ಸವಿಯಾದ ಜೇನಿಗೂ ಭಾಗಮಂಡಲ ಪ್ರಸಿದ್ಧಿ ಪಡೆದಿದೆ.

ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯ: ಕೊಡಗಿನ ಪವಿತ್ರ ಧಾರ್ಮಿಕ ಕ್ಷೇತ್ರಗಳಲ್ಲಿ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯ ಕೂಡಾ ಪ್ರಮುಖ. ಮಡಿಕೇರಿ ತಾಲೂಕಿನ ಕಕ್ಕಬೆಯಿಂದ ಸುಮಾರು ೩ ಕಿ.ಮೀ. ದೂರ ಸಾಗಿದರೆ ನಿಸರ್ಗದ ಚೆಲುವಿನಲ್ಲಿ ಕಂಗೊಳಿಸುವ ಇಗ್ಗುತ್ತಪ್ಪ ದೇವಾಲಯವನ್ನು ಸೇರಬಹುದು. ಸುತ್ತಲಿನ ನಿಸರ್ಗ ವೈಭವ ಹಿನ್ನೋಟಕ್ಕೆ ರಮಣೀಯ ತಡಿಯಂಡಮೋಳ್ ಪರ್ವತ ಸಾಲುಗಳಿವೆ.

ಎಮ್ಮೆಮಾಡು: ಮಡಿಕೇರಿಯಿಂದ ೩೦ ಕಿ.ಮೀ. ದೂರದಲ್ಲಿರು ಎಮ್ಮೆಮಾಡು ಸೂಫಿ ಸಂತರ ದಿವ್ಯ ಸಾನಿಧ್ಯದಿಂದಾಗಿ ಪ್ರಸಿದ್ಧಿ ಪಡೆದಿದೆ. ಸೂಫಿ ಶಹೀದ್ ಎಂಬ ಹೆಸರಿನ ದೈವಭಕ್ತ, ಪವಾಡಪುರುಷರೊಬ್ಬರು ಸಮಾಧಿ ಹೊಂದಿ ವಿಶ್ರಾಂತಿ ಪಡೆಯುತ್ತಿರುವ ಇಲ್ಲಿನ ದರ್ಗಾ ಷರೀಫ್‌ನಲ್ಲಿ ಈ ಸಂತರ ಹೆಸರಿನಲ್ಲಿ ವರ್ಷಂಪ್ರತಿ 'ಉರೂಸ್' ಹಬ್ಬ ನಡೆಯುತ್ತದೆ.

ಸ್ವರ್ಣ ದೇವಸ್ಥಾನ (ಗೋಲ್ಡನ್ ಟೆಂಪಲ್) – ಪದ್ಮ ಸಂಭವ ಬೌದ್ಧ ವಿಹಾರ: ಮಡಿಕೇರಿಯಿಂದ ೩೬ ಕಿ.ಮೀ. ದೂರ, ಕುಶಾಲನಗರದಿಂದ ೬ ಕಿ.ಮೀ. ಅಂತರದಲ್ಲಿನ ಬೈಲುಕುಪ್ಪೆಯಲ್ಲಿ ಟಿಬೇಟಿಯನ್ನರು ನೆಲೆಸಿದ್ದಾರೆ. ಚೀನಾದಿಂದ ಹೊರಬಂದ ಇವರು ಸ್ವತಂತ್ರ ಟಿಬೆಟ್‌ಗಾಗಿ ಹೋರಾಟ ಮಾಡುತ್ತಿದ್ದಾರೆ. ಅವರ ಧರ್ಮಗುರು ಪರಮ ಪೂಜ್ಯ ಪೆನೋರ್ ರಿಂಪೋಚೆಯವರು ಇಲ್ಲಿ ೧೯೯೫ ರಲ್ಲಿ ಸ್ವರ್ಣ ದೇಗುಲ ನಿರ್ಮಿಸಿದರು.

ಸಂತ ಆನ್ಸ್ ಚರ್ಚ್ : ವಿರಾಜಪೇಟೆಯಲ್ಲಿರುವ ಕೊಡಗು ಜಿಲ್ಲೆಯ ಪ್ರಮುಖ ಚರ್ಚ್ ಸಂತ ಆನ್ಸ್ ರಾಜ್ಯದ ಹಳೆಯ ಮತ್ತು ಮುಖ್ಯ ಕ್ರೈಸ್ತ ಧಾರ್ಮಿಕ ಕೇಂದ್ರಗಳಲ್ಲಿ ಒಂದಾಗಿದೆ. ೧೭೯೨ ರಲ್ಲಿ ಅಸ್ತಿತ್ವಕ್ಕೆ ಬಂದ ಈ ಚರ್ಚ್‌ನನ್ನು ೧೮೬೮ರಲ್ಲಿ ಸ್ವಾಮಿ ಗಿಲೋನ್ ಎಂಬುವವರು ಗೋಥಿಕ್ ಮಾದರಿಯಲ್ಲಿ ಸುಂದರವಾಗಿ ರೂಪಿಸಿದರು. ೧೫೦ ಅಡಿ ಎತ್ತರದ ಸುಂದರ ಗೋಪುರ ಇರುವ ಈ ಚರ್ಚ್ ವತಿಯಿಮದ ೧೭೦ ವರ್ಷಗಳ ಹಿಂದೆಯೇ ಶಾಲೆಯನ್ನು ಕೂಡ ಆರಂಭಿಸಲಾಯಿತು. ಆಕರ್ಷಕ ವಾಸ್ತು ವಿನ್ಯಾಸದ ಸಂತ ಆನ್ಸ್ ಚರ್ಚ್ ಗೆ ಮಡಿಕೇರಿಯಿಂದ ೩೨ಕಿ.ಮೀ. ದೂರವಿದೆ.

ಕೊನೆ ಟಿಪ್ಪಣಿಗಳು

೧. ಬಿ.ಡಿ.ಗಣಪತಿ, **ಕನ್ನಿ ಕಾವೇರಿ,** ಜ್ಯೋತಿ ಪ್ರಕಟಾಲಯ, ಮಡಿಕೇರಿ, ಪುಟ-೨೧.

೨. ಎದುರ್ಕಳ.ಕೆ ಶಂಕರನಾರಾಯಣ್‌ಭಟ್, **ಶ್ರೀಕಾವೇರಿ ವೈಭವ,** ರಾಮಕೃಷ್ಣ ಪ್ರಕಾಶನ, ಭಾಗಮಂಡಲ, ೧೯೭೮, ಪುಟ-೩೪೧.

೩. ಅದೇ, ಪು.೩೪೧.

೪. ಅದೇ, ಪು.೧೯.

೫. ಮೋಹನ್ ಗುತ್ತಿ, **ದೀವರ ಮಕ್ಕಳು,** ೨೦೦೯, ಪು.೧೦೬.

೬. ಬಿ.ಡಿ.ಗಣಪತಿ, **ಕೊಡವರು,** ೧೯೬೭, ಪು.೫೫.

೭. ಡಾ.ಪಿ.ಎಸ್.ರಾಮಾನುಜಂ, **ಕೊಡವರು,** ೧೯೭೫, ಪು.೧೧೨.

೮. ಅದೇ, ಪು.೧೧೪.

೯. ಬಿ.ಡಿ.ಗಣಪತಿ, **ಕೊಡವರು,** ೧೯೬೭, ಪುಟ.೫೮

೧೦. ಡಾ. ಎಸ್.ರಾಮಾನುಜಂ, **ಕೊಡವರು,** ೧೯೭೫, ಪು.೧೦೭.

೧೧. ಭೀಮಂಡ ಕುಶಾಲಪ್ಪ, **ಕೊಡಗು,** ೧೯೯೩, ಪು.೫೨

೧೨. **ಕೊಡಗುಧ್ವನಿ ವಾರಪತ್ರಿಕೆ,** ಸೋಮವಾರ ಮೇ ೨೧, ೨೦೧೨.

೧೩. ಕೆ.ಪಿ.ಮುತ್ತಣ್ಣ, **ಜಗತ್ತಿಗೊಂದೇ ಕೊಡಗು,** ಪ್ರೀಮಿಯರ್ ಪ್ರೆಸ್, ಬೆಂಗಳೂರು, ೧೯೬೯, ಪು.೩೦

೭ | ಅಧ್ಯಾಯ

ಕೊಡವರ ಸಾಮಾಜಿಕ ವ್ಯವಸ್ಥೆ

ಕೊಡವರ ಐನ್‌ಮನೆ

ಸಮೃದ್ಧ ಸಂಸ್ಕಾರಗಳನ್ನು ಹೊಂದಿರುವ ಕೊಡವರ ಸಾಮಾಜಿಕ ವ್ಯವಸ್ಥೆ ಕುತೂಹಲವನ್ನು ಉಂಟುಮಾಡುತ್ತದೆ. ಕೊಡವ ಸಂಸ್ಕೃತಿಯ ಸಾಮರಸ್ಯದ ಬದುಕಿನ ಪ್ರಮುಖ ಅಂಗವಾದ 'ಐನ್‌ಮನೆ' ಒಗ್ಗಟ್ಟಿನ ಸಂಕೇತವಾಗಿದೆ. ಸಾಂಸ್ಕೃತಿಕವಾಗಿ ಒಂದುಗೂಡಲು, ಕೃಷಿ-ಕೃಷಿಯೇತರ ಚಟುವಟಿಕೆಗಳಲ್ಲಿ ಕುಟುಂಬದವರ ಸಹಕಾರವನ್ನು ಪಡೆಯಲು ಸಾಮಾಜಿಕವಾಗಿ ನೆರವಾಗಲು ಪ್ರಮುಖ ಕೊಂಡಿಯಂತಿದೆ. ಕುಟುಂಬದ ಮೂಲ ಪುರುಷರು, ಹಿರಿಯರು ಕಟ್ಟಿದ ಮನೆಗೆ 'ಅಯ್ಯನ ಮನೆ' ಎನ್ನಲಾಗಿದೆ. ಇದೇ ಉಚ್ಚರಣೆಯಲ್ಲಿ 'ಐನ್‌ಮನೆ' ಎಂದಾಗಿದೆ. 'ಅಯ್ಯ' ಎಂದರೆ ಹಿರಿಯಜ್ಜ. ಮುಂದಿ ನವರ ವಾಸಕ್ಕೆ ಅನುಕೂಲಕರವಾಗಲೆಂದು ಅಜ್ಜ 'ಐನ್‌ಮನೆ' ಕಟ್ಟಿದರೆ, ಆ ಹಿರಿಯನಿಗೆ ಮೂಲ ವಂಶಿಕರು 'ಕೈಮಡ'ವನ್ನು ಸ್ಮಾರಕವಾಗಿ ಕಟ್ಟಿರುತ್ತಾರೆ. ಹಿಂದೆ ಕೊಡವರಲ್ಲಿ ಅವಿಭಕ್ತ ಕುಟುಂಬ ಪದ್ಧತಿ ಇದ್ದ ಕಾರಣ ಕುಟುಂಬಸ್ಥರೆಲ್ಲರೂ 'ಐನ್‌ಮನೆ'ಯಲ್ಲಿ ವಾಸಿಸುತ್ತಿದ್ದರು. ಇಂದು ಅವರ ಮೂಲ ಕುಟುಂಬಗಳ ಲೊಬ್ಬರು ಮಾತ್ರ ಅಲ್ಲಿ ವಾಸ ಮಾಡುತ್ತಿದ್ದಾರೆ. ಇವರ ಎಲ್ಲಾ ಶುಭಸ ಮಾರಂಭಗಳು ಐನ್ ಮನೆಯಲ್ಲಿ ನಡೆಯುತ್ತವೆ.

'ಐನ್' ಎಂದರೆ ಮುಖ್ಯ, ಅಯ=ಅಯ್ಯ ಐಯ್ಯ ಎಂದೆಲ್ಲಾ ರೂಪವನ್ನು ಹೊಂದಿರುವ ಈ ಶಬ್ದದ ಅರ್ಥ, ಶ್ರೇಷ್ಠ. ಅದೃಷ್ಟ, ಶುಭವಿಧಿ, ಜಂಗಮ ಎಂಬ ಅರ್ಥಗಳನ್ನು ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ಅಯ್ಯ ಕಟ್ಟಿದ 'ಶುಭದ ಮನೆ', 'ಅದೃಷ್ಟ ತರುವ ಮನೆ' 'ಚೈತನ್ಯ ತುಂಬುವ ಮನೆ', 'ಗುರುಮನೆ' ಎಂಬರ್ಥಗಳು ಬರುತ್ತವೆ.

ಕೊಡಗಿನಲ್ಲಿ ಪ್ರಮುಖವಾಗಿ ಕೊಡವರು, ಗೌಡ ಜನಾಂಗ, ಅಮ್ಮಕೊಡವರು, ಕೊಯುವ, ಹೆಗ್ಗಡೆ, ಗೊಲ್ಲ, ಐರಿ, ಕಾಪಳ, ಕೆಂಬಟ್ಟಿ, ಜಮ್ಮ ಮಾಪಿಳ್ಳೆ ಮುಂತಾದ ಸಮುದಾಯದವರಲ್ಲಿ ಐನ್‌ಮನೆಗಳಿವೆ. ತಮ್ಮ ಮೂಲ ಹಿರಿಯರ ಮನೆಗಳಿಗೆ ಇವರು ಕೂಡ ಕೊಡವರಂತೆ 'ಐನ್‌ಮನೆ' ಎಂಬ ಹೆಸರನ್ನು ಬಳಸುತ್ತಾರೆ.

ಐನ್‌ಮನೆಯು ಬೃಹತ್ ಗಾತ್ರದ್ದಾಗಿರುವ ಕಾರಣ 'ಬಲ್ಯ ಮನೆ' ಎಂದೂ (ದೊಡ್ಡಮನೆ) ಹೆಸರು ಪಡೆದಿದ್ದು ಇದು ಕೊಡವರ ಜೀವಾನಾದರ್ಶ ಸಂಸ್ಕೃತಿಯ ಪ್ರತೀಕವಾಗಿ ಬಿಂಬಿತವಾಗಿದೆ.

ಮುತ್ತಜ್ಜ ಕಟ್ಟಿದ, ಅಜ್ಜ-ಅಜ್ಜಿಯರು ಬಾಳಿ ಬದುಕಿದ ಈ ಐನ್‌ಮನೆಯನ್ನು ಒಂದೊಂದೆಡೆ ಒಂದೊಂದು ಹೆಸರಿನಿಂದ ಕರೆಯುತ್ತಾರೆ. ತೊಟ್ಟಿಮನೆ, ಚೌಕಿಮನೆ,

ಅಯ್ಯನ ಮನೆ, ತಳುವಾರು, ಸುತ್ತಪಡ್ವಿರೆ ಮುಂತಾಗಿ ನೋಡಬಹುದು.

ಐನ್‌ಮನೆಯೆಂದರೆ ಕುಟುಂಬಕ್ಕೆ ಸಂಬಂಧಿಸಿದ ದೇವಸ್ಥಾನದಂತೆ. ಮನೆಯನ್ನು ಹೊಕ್ಕತ್ತಿದ್ದಂತೆ ಜಗಲಿ, ಐಮರ, ಕೈಯಾಲೆ, ಬಾಡೆ, ಕೋಂಬರೆ, ನೆಲ್ಲಕ್ಕಿದೀಪ, ಅಡುಗೆಮನೆ, ಅಟ್ಟ(ಮಹಡಿ) ಮುಂತಾದವುಗಳನ್ನು ಕಾಣಬಹುದು. 'ಐಮರ'ವು ನ್ಯಾಯಪೀಠದಂತೆ ಕಾರ್ಯನಿರ್ವಹಿಸುತ್ತಿದ್ದು, ಎಷ್ಟೋ ಪ್ರಮುಖ ತೀರ್ಮಾನಗಳು ಐಮರದಲ್ಲೆ ಆಗುತ್ತವೆ.

ಕುಟುಂಬದ ಎಲ್ಲರೂ ತಿಂಗಳಿಗೆ ಒಂದು ಬಾರಿಯಾದರೂ ಐನ್‌ಮನೆಯಲ್ಲಿ ಸೇರಬೇಕು. ಪ್ರತಿ ಕುಟುಂಬದವರು ಮನೆಯನ್ನು ಮಾಡಿಕೊಂಡಿದ್ದು, ವರ್ಷಕ್ಕೆ ನಾಲ್ಕೈದು ಬಾರಿ ಸಭೆ ಸೇರಿ ಚರ್ಚಿಸುತ್ತಾರೆ. ಐನ್‌ಮನೆಯ ಅಭಿವೃದ್ಧಿ ಕಾರ್ಯಗಳಾಗಲಿ, ವ್ಯಾಜ್ಯಗಳಾಗಲಿ, ಕುಟುಂಬದ ಸಮಸ್ಯೆಗಳಾಗಲಿ ಈ ಸಭೆಯಲ್ಲಿ ತೀರ್ಮಾನ ಮಾಡುತ್ತಾರೆ. ಕುಟುಂಬದಲ್ಲಿ ವಿಶೇಷ ಸಾಧನೆಗೈದವರನ್ನು ಐನ್‌ಮನೆಯಲ್ಲೇ ಗೌರವಿಸುತ್ತಾರೆ.

ಐನ್ ಮನೆಯ ವೈಭವೀಕೃತಕೃತರೂಪ ಹಾಲೇರಿ ಅರಸರ ಅರಮನೆಗಳು ಎನ್ನುವುದುಂಟು. ಉದಾಹರಣೆಗೆ ಮಡಿಕೇರಿ ಅರಮನೆ, ನಾಲ್ನಾಡು ಅರಮನೆಯ ವಾಸ್ತುರೂಪ ನೋಡಿದರೆ ಇದು ತಿಳಿಯುತ್ತದೆ. "ಎಂ.ಎನ್. ಶ್ರೀನಿವಾಸ್ ಅವರು "Coorgs who were in the Employment of the lingayat Raj's borrowed the customs, manners and rituals of their ruler"[೧] ಎಂಬ ಮಾತು ಇದೆ. ಇಲ್ಲಿ borrowed ಎನ್ನುವುದನ್ನು ಪ್ರಭಾವಿತ ಎಂಬರ್ಥದಲ್ಲಿ ನೋಡಬಹುದಾಗಿದೆ.

ಕೊಡವರ ಐನ್‌ಮನೆಗಳಲ್ಲಿ ಇಂದಿಗೂ ಮೂಲ ಪುರುಷನ ವಂಶಿಕರು ವಾಸಮಾಡುತ್ತಾರೆ. ಇಂದಿನ ಸಾಮಾಜಿಕ, ಆರ್ಥಿಕ ಸ್ಥಿತ್ಯಂತರದ ನಡುವೆಯೂ ಹಲವಾರು ಐನ್‌ಮನೆಗಳು ತಮ್ಮ ಮೂಲ ಸ್ವರೂಪಗಳನ್ನು ಉಳಿಸಿಕೊಂಡು ಬಂದಿರುವುದು ಗಮನಿಸಬೇಕಾದ ಅಂಶವಾಗಿದೆ.

ಮಲೆನಾಡಿನ ಕಾಡಿನ ಪರಿಸರಕ್ಕೆ ತಕ್ಕಂತೆ ಐನ್‌ಮನೆ ವಾಸ್ತು ಕಂಡು ಬರುತ್ತದೆ. "ಕೈಮಡ ಕಕ್ಕಟ್ಟು, (ಇಬ್ಬದಿಕಲ್ ಭಿತ್ತಿಯ ಓಣಿ) ಅಂಗಳ, ಕಲ್ಲುಬೋಟಿ (ಅಲಂಕೃತ ಕಳಶದ ಶಿಲಾಸ್ತಂಭ) ಆಲೆಪರೆ–ಒತ್ತೆಡರೆ (ಹೊರಮನೆ) ಪತ್ತಾಯ(ಭತ್ತದ ಕಣದ) ಬಟ್ಟಗಲ್ಲು, ಭಾವಿ, ಹಿತ್ತುಕೊಟ್ಟಿಗೆ, ತೋಟ, ತೆಂಗಿನ ಮರ, ಬಕ್ಕಪರೆ, ಬಕ್ಕಬಾಗಿಲು (ಮಣ್ಣು ದಿನ್ನೆಯ ಕೋಟೆ ಬಾಗಿಲು) ಮೊಟ್ಟಕಡಂಗ (ಕಿರ್ ಗುಡ್ಡೋಣಿ) ಗೂಳಿಗ (ಭೂಮಿ ರಕ್ಷಣೆ) ನೆಲೆ , ನಾತ (ನಾಗ)ನ ನೆಲೆ, ಪೂದ (ದೈವ) ನೆಲೆ, ಜಮ್ಮ ಗದ್ದೆ , ಗೆರೆಕಾಡು –ಬಾಣೆ (ಮೈದಾನ) ಕಿರುಗುಂಡಿ ಅಥವಾ ಕೆರೆ ಈ ಸಂಕೀರ್ಣವ್ಯೂಹ ಐನ್ ಮನೆಯದ್ದಾಗಿದೆ."[೨]

ಐನ್‌ಮನೆಗಳ ಮುಂಬದಿ ಅಂಗಳದಲ್ಲಿ ಅಥವಾ ಬತ್ತದ ಕಣಜಗಳಲ್ಲಿ ಕಂಡುಬರುವ ಕಲ್ಲಿನ ಕಂಬಗಳನ್ನು 'ಕಲ್ಲುಬೋಟಿ' ಎನ್ನುತ್ತಾರೆ.

"ಪಟ್ಟಿಕ್ ಚಿಂಗಾರ ಕಲ್‌ಬೋಟಿ
ಮಾಣಿಕ್ಯ ಕಲ್ಲೊಂಡ್ ಕೆಜ್ಜಪಣಿಯೋ
ಚೋಮನ ತಳಕುವ ಕಗ್ಗಲ್ಲ್ ಬೋಟಿ"

ಎಂಬ ಜನಪದ ಹಾಡಿನ ಅರ್ಥ ಇಂತಿದೆ. ಮನೆಯ ಅಂಗಳದಲ್ಲಿ ಶೃಂಗಾರಮಯವಾಗಿ ನಿಂತ ಕಲ್ಲ್‌ಬೋಟಿಯೇ ನೀನು ಮಾಣಿಕ್ಯ ಮುತ್ತಿನ ಕಲ್ಲಿಂದ ಮಾಡಿದ ಕಲ್ಲ್‌ಬೋಟಿಯ ಹಾಗೆ ಕಾಣುತ್ತಿದ್ದು, ಚೋಮನೆಂಬ ಗೂಳಿಯನ್ನು ಪಳಗಿಸಲು ನಿನ್ನ ಉಪಯೋಗ ಬಹಳವಿದೆ ಎಂಬ ಅರ್ಥವನ್ನು ಸಾರುತ್ತದೆ.

ಕೊಡವರ ಐನ್‌ಮನೆಯು ಹಳೆಯ ಕೋಟೆಗಳ ಮಾದರಿಯಲ್ಲಿ ಇರುತ್ತದೆ. ಪ್ರಾಚೀನ ಕಾಲದಲ್ಲಿ ಐನ್‌ಮನೆ ಎತ್ತರದ ಸ್ಥಳಗಳಲ್ಲಿ ಕಟ್ಟುತ್ತಿದ್ದರು. ಐನ್‌ಮನೆಗೆ ಕಿರಿದಾದ ಓಣಿಗಳು ಇರುತ್ತವೆ. ಈ ಮನೆಯ ಸುತ್ತಲೂ ಆಯಾಯ ಕುಟುಂಬಕ್ಕೆ ಸೇರಿದ ಆಸ್ತಿ, ಎದುರು ಗದ್ದೆ, ಕಾಫಿ ತೋಟಗಳು ಇರುತ್ತವೆ.

ಕೊಡವರ ಕುಟುಂಬ ವ್ಯವಸ್ಥೆ ಅವಿಭಕ್ತ ಕುಟುಂಬ ಪದ್ಧತಿಯಾಗಿತ್ತು. ವಾಸಿಸಲು ಅನುಕೂಲಕರವಾಗುವಂತೆ ಬೃಹದಾಕಾರದ ಐನ್‌ಮನೆಯನ್ನು ನಿರ್ಮಿಸಲಾಗಿದೆ. ಮನೆಯು ಚೌಕಾಕಾರವಾಗಿದ್ದು, ಕೇರಳ ಮೂಲದ ನಾಯಕರ ಮನೆಯನ್ನು ಹೋಲುತ್ತದೆ. ಈ ಮನೆಯನ್ನು 'ನಾಲ್‌ಕಟ್ಟ್' ಮುಂದ್ ಮನೆಗಳೆಂದು ಕರೆಯುತ್ತಾರೆ. ಈ ಮನೆಯ ಸುತ್ತಲೂ ಕೋಟೆಯ ರೀತಿ ಗೋಡೆ ನಿರ್ಮಿತ ವಾಗಿರುತ್ತದೆ. ಮನೆಗೆ ಪ್ರವೇಶಿಸಲು ಎತ್ತರವಾಗಿ ಕಲ್ಲನ್ನು ಕಡೆದು ರೂಪಿಸಿದ ವಿವಿಧ ಕಲಾಕೃತಿಯ ಮೆಟ್ಟಿಲೇರಿದೊಡನೆ ವಿಶಾಲವಾದ 'ಕಯ್ಯಾಲೆ' ಎಂಬ ವರಾಂಡವಿರುತ್ತದೆ. 'ಕಯ್ಯಾಲೆ'ಯ ಮೇಲ್ಛಾವಣಿಯನ್ನು ಎತ್ತಿ ಹಿಡಿದಿರುವ ಮುಂದಿನ ಕಂಬಕ್ಕೆ ಹೊಂದಿಕೊಂಡು ಬೆಂಚಿನಲ್ಲಿರುವ ಮರವನ್ನು 'ಐಮರ' ಎನ್ನುತ್ತಾರೆ. ಇದರ ಮುಂದ ಚೌಕಾಕಾರವಾದ ದೊಡ್ಡ ಪಡಸಾಲೆ ಇರುತ್ತದೆ. ('ಐಮರ'ದ ಛಾಯಚಿತ್ರವನ್ನು ಅನುಬಂಧದಲ್ಲಿ ನೀಡಲಾಗಿದೆ).

ಕೊಡವ ಐನ್‌ಮನೆ (ಬಲ್ಯಮನೆ) ಮಾದರಿ ಚಿತ್ರ



ಪಡಸಾಲೆಯ ಮಧ್ಯಭಾಗವು ಚೌಕಾಕಾರವಾಗಿ ತೆರಿದಿದ್ದು, ಮಳೆ ಬೆಳಕು ಒಳಗೆ ಪ್ರವೇಶಿಸುತ್ತದೆ. ಇದನ್ನು ಒಳಕೈಯ್ಯಾಲೆ ಎನ್ನುತ್ತಾರೆ. ಇಲ್ಲಿರುವ ತೊಟ್ಟಿಯನ್ನು 'ಮುಂದು' ಎಂದು ಕರೆಯುತ್ತಾರೆ. ಒಳಕಯ್ಯಾಲೆಯ ಸುತ್ತಲೂ ಆನೇಕ ಕೋಣೆಗಳಿತ್ತವೆ. ಕೋಣೆಯು ಸ್ಥಾನಮಾನಕ್ಕೆ ತಕ್ಕಂತೆ ಇರುತ್ತದೆ. ಯಜಮಾನನ ಕೋಣೆ, ಮಕ್ಕಳ ಕೋಣೆ, ಅತಿಥಿಗಳ ಕೋಣೆ ಮತ್ತು ಪ್ರಾರ್ಥನಾ ಕೋಣೆಯಿಂದ 'ಕನ್ನಿಕೋಂಬರೆ'. ಪ್ರತ್ಯೇಕ ಐನ್‌ಮನೆಯಲ್ಲಿ ಪ್ರತಿನಿತ್ಯ ಪ್ರಾರ್ಥನೆ, ಹಬ್ಬಹರಿದಿನಗಳಲ್ಲಿ ಕುಟುಂಬದ ಮೂಲ ಪುರುಷರಿಗೆ ಕಾರೊಣರಿಗೆ ಎಡೆ (ಮೀದಿ) ಇಟ್ಟು ದೀಪ ಹಚ್ಚುವುದು ಖಡ್ಡಾಯ. ಈ ಮನೆಯ ಕಿಟಕಿಗಳು ವಿಶೇಷ ವಿನ್ಯಾಸದಿಂದ ಕೂಡಿರುತ್ತವೆ. ಈ ವಿಶೇಷ ಕಿಟಕಿಗಳಿಂದ ದೂರದ ವೈರಿ ಪಡೆಯನ್ನು ಗುರುತಿಸಬಹುದಾಗಿದೆ.

ಐನ್ ಮನೆಯ ಪ್ರತಿಭಾಗವೂ ಕೊಡವರ ಶಿಸ್ತು ಮತ್ತು ಸಭ್ಯತೆಯನ್ನು ಸಂಸ್ಕಾರವನ್ನು ವ್ಯಕ್ತಪಡಿಸುತ್ತದೆ. ಅಡುಗೆ ಮನೆಯು ಕೊಡವರಲ್ಲಿ ಪವಿತ್ರ ಸ್ಥಾನ ಪಡೆದಿದೆ. ಪೂರ್ವಭಿಮುಖವಾಗಿ ಅಡುಗೆ ಮಾಡಲು ಒಲೆಗಳಿರುತ್ತವೆ. ತೊಟ್ಟಿಯ ಸುತ್ತಲೂ ಕಂಬಗಳಿಗೆ ತಾಗುವಂತೆ ಹಾಸಿರುವ ನಾಲ್ಕು ಮರಗಳನ್ನು 'ಐಮರ'ಗಳೆಂದು ಕರೆಯುತ್ತಾರೆ. ಐಮರವು ಪವಿತ್ರ ಸ್ಥಳವಾಗಿದ್ದು ಸ್ತ್ರೀಯರು ಅದರ ಮೇಲೆ ಕೂರಬಾರದು ಎಂಬ ನಿಯಮವಿದ್ದರೂ ಮದುವೆಯ ದಿನ ಮಾತ್ರ ಕುಳಿತುಕೊಳ್ಳಲು ಅವಕಾಶವಿದೆ. ಸ್ತ್ರೀಯರು ಮನೆಯ ಹಿರಿಯರು ಮತ್ತು ಗಂಡಸರು ಬರುವಾಗ ಎದ್ದು ಗೌರವ ನೀಡಬೇಕು.

ಐನ್‌ಮನೆಯ ಯಜಮಾನನಿಗೆ ಸ್ತ್ರೀಯರು ಕೊಡುತ್ತಿದ್ದ ಗೌರವದ ಪ್ರತೀಕವಾಗಿ ಇದು ಕಂಡುಬಂದರೂ ಇದು ತವರು ಮನೆಯ ಹೆಣ್ಣು ಮಕ್ಕಳಿಗೆ ಅನ್ವಯಿಸುವುದಿಲ್ಲ. ನಡುಬಾಡೆಯ ಪಶ್ಚಿಮದ ಗೋಡೆಯ ಒಂದು ಮೂಲೆಯಲ್ಲಿ ಗೂಡನ್ನು ಮಾಡಿ ಪೂರ್ವಾಭಿಮುಖವಾಗಿ ದೀಪವನ್ನು ತೂಗಿರುತ್ತಾರೆ. ಇದನ್ನು 'ನೆಲ್ಲಕ್ಕಿ ಬೊಳಿಚ' ಎನ್ನುತ್ತಾರೆ. ಈ ನೇತಾಡುವ ದೀಪ 'ತೂಕುಂಬೊಳಿಚ'. (ತೂಕುಂಬೊಳಿಚ ದ ಛಾಯಚಿತ್ರವನ್ನು ಅನುಬಂಧದಲ್ಲಿ ನೀಡಲಾಗಿದೆ.) ಪ್ರತಿ ದಿನ ಬೆಳಿಗ್ಗೆ ಮತ್ತು ಸಾಯಂಕಾಲ ಸ್ತ್ರೀಯರು ಈ ದೀಪವನ್ನು ಹಚ್ಚಿ ನಮಸ್ಕರಿಸುತ್ತಾರೆ. ಎಲ್ಲಾ ಶುಭ ಸಮಾರಂಭಗಳಲ್ಲಿ ತೂಕ್ ಬೊಳಿಚದ ಮುಂದೆ ಪ್ರಾರ್ಥನೆ ಸಲ್ಲಿಸಿ ಮುಂದಿನ ಕೆಲಸ ಕಾರ್ಯಗಳನ್ನು ಮಾಡಲಾಗುತ್ತದೆ. ಇಂದಿಗೂ ಈ ಐನ್‌ಮನೆಗಳು ಕೊಡವರ ಪೂರ್ವಿಕರ ಪವಿತ್ರ ಸಂಕೇತವಾಗಿ ತನ್ನ ವೈಶಿಷ್ಟ್ಯತೆಯನ್ನು ಉಳಿಸಿಕೊಂಡು ಬರುತ್ತಿವೆ.

ನೆರೆಮನೆಯುವ ಮುಖ ಪರಿಚಯುವೇ ಇಲ್ಲದಂತೆ ಸಂಬಂಧಕ್ಕೆ ಅರ್ಥವಿಲ್ಲದಿರುವ ಇಂದಿನ ಕಾಲದಲ್ಲಿ ಕೊಡವರ 'ಐನ್‌ಮನೆ' ಗಳಲ್ಲಿ ಎಲ್ಲಾ ಸಮಾರಂಭಗಳನ್ನು ಮಾಡಿ ಹೊರ ಊರಿನಲ್ಲಿ ನೆಲೆ ನಿಂತಿರುವ ಎಲ್ಲರನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿದೆ. ವರ್ಷಕ್ಕೊಮ್ಮೆಯಾದರೂ ಐನ್‌ಮನೆಗೆ ಬಂದು ಆ ಕೋಣೆಗಳಲ್ಲಿ ಉಳಿದುಕೊಳ್ಳುವ ಪರಿಪಾಠವಿದೆ.

ದೈವಿಕ ನೆಲೆಯಾಗಿರುವ ಐನ್‌ಮನೆಯ ಸಾಮರಸ್ಯದ ಬದುಕಿನ ಆಗರ. ನಂಬಿಕೆಗಳು, ಆಚರಣೆಗಳು, ಪ್ರೀತಿ ವಿಶ್ವಾಸವನ್ನು ಇಂದಿಗೂ ಬೆಸೆದುಕೊಂಡು

ಬರುತ್ತಿವೆ. ಗುರುಕಾರಣರಿಗೆ ಎಡೆ ಹಾಕುವುದು ಹಬ್ಬಹರಿದಿನಗಳನ್ನು ಆಚರಿಸುವುದು, ಮದುವೆ ಶಾಸ್ತ್ರಗಳು, ತಿಥಿ ಕಾರ್ಯಗಳನ್ನು ಆಚರಿಸಿಕೊಂಡು ಬರುತ್ತಿರುವ ಒಬ್ಬ ವ್ಯಕ್ತಿ ಹುಟ್ಟಿನಿಂದ ಸಾಯುವವರೆಗೂ ಹಾಗೂ ಸತ್ತ ನಂತರವೂ ಗುರುಕಾರಣರ ಹೆಸರಿನಲ್ಲಿ ಈ ಐನ್‌ಮನೆಗೆ ಸಂಬಂಧ ಹೊಂದಿರುತ್ತಾನೆ.

ವಿವಾಹವಾಗಿ ಗಂಡನ ಮನೆಗೆ ಹೋದ ಹೆಣ್ಣುಮಕ್ಕಳು ಹಬ್ಬ ಹರಿದಿನಗಳಲ್ಲಿ, ಗುರುಕಾರಣಕ್ಕಿಡುವ ಸಂದರ್ಭದಲ್ಲಿ ಅಥವಾ ತವರು ಮನೆಗೆ ಬಂದಾಗ ಐನ್‌ಮನೆಯ 'ನೆಲ್ಲಕ್ಕಿ ದೀಪ' ಹಚ್ಚಿ ಕೈ ಮುಗಿದು ಹೋಗುವ ಈ ಪದ್ಧತಿ ವೈಶಿಷ್ಟ್ಯಪೂರ್ಣವಾದದ್ದು.

ಐನ್‌ಮನೆ ಲಕ್ಷಣಗಳನ್ನು ಕೊಡಗು ಭಾಷೆಯ ಜನಪದ ಗೀತೆಯಲ್ಲಿ ಈ ರೀತಿ ವಿವರಿಸಲಾಗಿದೆ.

'ಅಯ್ಯೋರ್ ತಕ್ಕಂಡ ಓಣಿ ಪಣಿಯೋ ತಾನಿಲೆಲ್ಲೋ
ಆ ಕಾಡ್‌ಕಲ್ಲ್‌ಗೊಂಡ್ ಕ್ಕಟ್ಟ್ ಕಟ್ಟ್ ತಾನಿಲೆಲ್ಲೋ
ಆ ಮುನ್ನೂರ್ ಕಲ್ಲೊಂಡ್ ಮೂವಾಂಡ್‌ಕೆಜ್ಜತಾನಿಲೆಲ್ಲೋ
ಇನ್ನೂರ್ ಕಲ್ಲೊಕಂಡ್ ಇಯಾಂಡ್ ಕೆಜ್ಜತಾನಿಲೆಲ್ಲೋ
ಆನ್ನನೆ ತಕ್ಕಂಡ ಓಣಿಪಣಿಯೋ ತಾನಿಲೆಲ್ಲೋ
ಅಯ್ಯೋರ ತಕ್ಕಂಡ ಬಕ್ಕಪಣಿಯೋ ತಾನಿಲೆಲ್ಲೋ
ಆ ಬಯ್ಯ ಮರಂಗೊಂಡ್ ಬಕ್ಕಪಣಿಯೋ ತಾನಿಲೆಲ್ಲೋ
ಆಯ್ಯೋರ್ ತಕ್ಕಂಡ ಆ ಪಟ್ಟಿಪಣಿಯೋ ತಾನಿಲೆಲ್ಲೋ
ಪಾಂಡವ ಕಲ್ಲೊಂಡ್ ಪಟ್ಟಿಪಣಿಯೋ ತಾನಿಲೆಲ್ಲೋ
ಅಯ್ಯೋರ್ ತಕ್ಕಂಡ ಆ ಮೊಟ್ಟ ಪಣಿಯೋ ತಾನಿಲೆಲ್ಲೋ
ಆ ಮಾಣಿಕ್ಕಯ ಕಲ್ಲಂಡ್ ಮೊಟ್ಟ ಪಣಿಯೋ ತಾನಿಲೆಲ್ಲೋ
ಆ ತಾವರೆ ಕಾಲೊಂಡ್ ಮೊಟ್ಟ್ ನಡೆಪ ತಾನಿಲೆಲ್ಲೋ
ಆ ಸೂರಿಯ ಕೈಯಾಲೇ ಆ ಮೊಟ್ಟ್ ನಡೆಪ ತಾನಿಲೆಲ್ಲೋ
ತಾಳಟ್ಟ್‌ತಾ ಪಡಿ ನೀ ತೊರ ತಾಯೋ ತಾನಿಲೆಲ್ಲೋ

ನೀ ತೊರಕಪೋನ ನಾ ಮೊಟ್ಟ ತೋರಪೋ ತಾನಿಲೆಲ್ಲೋ
ನಾ ಬಪ್ಪಕೆಕ್ಕಲು ನಮ್ಮ ಸಕುನ ತಾನಿಲೆಲ್ಲೋ
ಆ ಚಿತ್ರ ನೇಲೆಲ್ ಪೊನ್ನ ಬೊಳ್‌ಚೋ ತಾನಿಲೆಲ್ಲೋ
ಆ ಪೊನ್ನಬೊಳ್‌ಚತಿ ಎನ್ನೆಲ್ಲ ಕಂಡ? ತಾನಿಲೆಲ್ಲೋ
ಪೈಯ್ಯುಳ ನೆಯ್ಯುಲ ಪರ್ತ್ತಿತಿರಿಯೋ ತಾನಿಲೆಲ್ಲೋ
ಆ ತಿರಿ ಬೊಳ್ ಚಲ್ ಎನ್ನೆಲ್ಲ ಕಂಡ? ತಾನಿಲೆಲ್ಲೋ
ನೆಲ್ಲಕ್ಕಿ ಬಾಡೆಲ್ ಎನ್ನಲ್ಲ ಕಂಡ? ತಾನಿಲೆಲ್ಲೋ
ಬೊಳ್ಳೋಟ್ ಮುಕ್ಕಾಲಿ ಆ ಬೊಳ್ಳಿತಳಿಯೊ ತಾನಿಲೆಲ್ಲೋ
ಆ ಬೊಳ್ಳಿತಳಿಯತ್ ಎನ್ನೆಲ್ಲ ಕಂಡ? ತಾನಿಲೆಲ್ಲೋ
ಆ ಬೊಳ್ಳಿತಳಿಯತ್ ಸಣ್ಣಕ್ಕಿ ಕಂಡ ತಾನಿಲೆಲ್ಲೋ
ಆ ಸಣ್ಣಕ್ಕಿ ಮೀದಲ್ ಮಡಿ ತುಣಿ ಕಂಡ ತಾನಿಲೆಲ್ಲೋ

ಮಡಿ ತುಣಿ ಮೀದಲ್ ಆ ಪೊನ್ನ ಬೊಳ್‌ಚೋ ತಾನಿಲೆಲ್ಲೋ
ಆ ತಿರಿ ಬೊಪ್ಪ್‌ಕ್ (ಬೊಳ್‌ಚಲ್) ಎರಂಗ್‌ವೋ ತಾನಿಲೆಲ್ಲೋ

ಆ ಕುಂದ್‌ಕ್ ಆ ಜಾಗ ಆ ಪಾಡ್‌ಂಜಿ ತುಂಡೋ ತಾನಿಲೆಲ್ಲೋ
ಕೋಕೇರಿ ಕ್ಯವತ್‌ಲ್ ಎನ್ನಲ್ಲ ಕಂಡ ತಾನಿಲೆಲ್ಲೋ
ರಾಮಂಡ ಸೀತೇರ ಫೋಟೋಲ್ ಕಂಡ ತಾನಿಲೆಲ್ಲೋ
ಕೂಗುವ ಕೋಳಿಡ ಕೊಕ್ಕೊಂದ್ ಕಂಡ ತಾನಿಲೆಲ್ಲೋ
ಪಾರುವ ಪಕ್ಷೀರ ರೂಪೊಂದ್ ಕಂಡ ತಾನಿಲೆಲ್ಲೋ
ಕುಂದ್‌ರ ನೇಪಲ ಅಣ್ಣಂಗಳ ಕಂಡ ತಾನಿಲೆಲ್ಲೋ
ಕುಂದ್‌ರ (ಮೇಪೋರ್) ಮೇಕೊರ್ ಎನ್ನೆಲ್ಲ ಕಂಡ ತಾನಿಲೆಲ್ಲೋ
ಮಚ್ಚಿಟ್ಟ ಬುಟ್ಟ ಮೋಪೊರ್ ಕಂಡ ತಾನಿಲೆಲ್ಲೋ
ಮೇಪೋರ್ ಮೀದಲ್ ಚಂಬೋಡ್ ಕಂಡ ತಾನಿಲೆಲ್ಲೋ
ಚಂಬೋಡ್ ಮೀದಲ್ ಪಟ್ಟ್‌ಪೊದೆ ಕಂಡ ತಾನಿಲೆಲ್ಲೋ
ನಾಲ್ ಕಟ್ಟ್ ಐಮರ ಚಿತ್ರ ಕಂಡ ತಾನಿಲೆಲ್ಲೋ .
ಚಿತ್ರ ಕಂಬ್‌ಲ್ ಎನ್ನೆಲ್ಲ ಕಂಡ ತಾನಿಲೆಲ್ಲೋ
ಪಕ್ಷಿ ಎಳ್ತುಂಡ್ ಪಾಂಬ್‌ಲ್ ಉಂಡ್ ತಾನಿಲೆಲ್ಲೋ
ಅನ್ನನೆ ತಕ್ಕಂಡ ಕುಂದ್‌ತ್‌ಲ್ ಒರಮೆ ತಾನಿಲೆಲ್ಲೋ
ಕುಂದ್‌ಕ್ ಆಚಾರ ಪಾಡ್‌ಚೋ ನಂಗ ತಾನಿಲೆಲ್ಲೋ
ತಕ್ಕಂಡ ತಕ್ಕಾಮೆ ಎನ್ನನೇ ಅರಿವೋ ? ತಾನಿಲೆಲ್ಲೋ
ಬಪ್ಪಂಗ್ ಪೋಪಂಗ್ ಕೂದ್‌ನಾಕಜ್ಜ ತಾನಿಲೆಲ್ಲೋ
ಬಪ್ಪಂಗ್ ಪೋಪಂಗ್ ಆಚಾರ ಮಾಡೋಂಜಿ ತಾನಿಲೆಲ್ಲೋ
ಆ ಜೋಯಿಕ್ ಡೊಂಬಂಗ್ ಅಕ್ಕಿಪಡಿಯೋ ತಾನಿಲೆಲ್ಲೋ
ತಕ್ಕಂಡ ಒಕ್ಕಾಮೆ ಎನ್ನನೆ ಅರಿವೋ? ತಾನಿಲೆಲ್ಲೋ
ಕೈಪಕ್ಕೆ ಪೋಲೆ ಕೈಮಕ್ಕಳೋ ಕಂಡ ತಾನಿಲೆಲ್ಲೋ
ಕುಂಬಳ ಪೂಪೋಲೆ ಏಂಡಜ್ಜೀನ ಕಂಡ ತಾನಿಲೆಲ್ಲೋ
ಆ ಕೆಂಬತಿ ಪೂಪೋಲೆ ಆ ಪೊಂಗಳ ಕಂಡ ತಾನಿಲೆಲ್ಲೋ
ಅನ್ನನೆ ತಕ್ಕಂಡ ಒಕ್ಕ ಬದಕು ತಾನಿಲೆಲ್ಲೋ
ಕುಂದ್‌ಕ್ ಆಚಾರ ಪಾಡ್‌ಚೋ ನಂಗ ತಾನಿಲೆಲ್ಲೋ

ಜ್ಯೋತಿಕ್ ತೊತ್ತ್ ಫಲತ್ ಪಿರಿಯ
ಮನೆ ಜನ ಎಲ್ಲ ತಣ್ಣನೆ ಬಾಳೋ

ಈ ಜನಪದಗೀತೆಯ ಕನ್ನಡ ಭಾವಾನುವಾದ ಕೆಳಗಿನಂತಿದೆ.
ತಕ್ಕರಾದ ಅವರಾ ಓಣಿಯೆ ಚಂದ ತಾನಿಲೆಲ್ಲೋ
ಕಾಡಿನ ಗಟ್ಟಿಕಲ್ಲಲಿ ಕಟ್ಟಿದ ಕಲ್ಲೋಣಿ ತಾನಿಲೆಲ್ಲೋ
ಮುನ್ನೂರು ಕಲ್ಲಲಿ ಮೂಬರಿಸದಿ ಮಾಡಿದ ಓಣಿ ತಾನಿಲೆಲ್ಲೋ
ಇನ್ನೂರು ಕಲ್ಲಲಿ ಈ ಬರಿಸದಿ ಮುಗಿಸಿದ ಓಣಿ ತಾನಿಲೆಲ್ಲೋ

ಹಾಗಿದೆ, ಅಂದದಿ ತಕ್ಕರ ಕಲ್ಲೋಣಿಯ ಕೆಲಸ ತಾನಿಲೆಲ್ಲೋ
ಓಣಿಯ ಸಾಗಲು ಕಾಂಬುದು ಬಾಗಿಲ ಕೆಲಸ ತಾನಿಲೆಲ್ಲೋ
ಬಯ್ಯ ಮರದಲಿ ಮಾಡಿದ ಕೆಲಸವು ಅಂದ ತಾನಿಲೆಲ್ಲೋ
ಬಯ್ಯ ಮರದಲಿ ಮಾಡಿದ ಕೆಲಸವು ಅಂದ ತಾನಿಲೆಲ್ಲೋ
ತಕ್ಕರ ಮನೆ ಜಗತಿಯ ಕೆಲಸವು ಚೆಂದ ತಾನಿಲೆಲ್ಲೋ
ದಪ್ಪನೆ ಕಲ್ಲಿನ ಚಪ್ಪಡಿ ತಂದು ಮಾಡಿದ ಕೆಲಸ ತಾನಿಲೆಲ್ಲೋ
ತಕ್ಕರ ಮನೆಯ ಮೆಟ್ಟಲ ಕೆಲಸವು ಅಂದ ತಾನಿಲೆಲ್ಲೋ
ಮಾಣಿಕ ಕಲ್ಲನು ಜೋಡಿಸಿ ತೋರಿದೆ ಚಂದ ತಾನಿಲೆಲ್ಲೋ
ಹಿಮ್ಮಡಿ ಕೆಂಪಿನ ಕಾಲಲಿ ಮೆಟ್ಟಿಲ ಏರುವ ತಾನಿಲೆಲ್ಲೋ
ಸೂರ್ಯನ ಕಿರಣವು ಬೀಳುವ ಕೈಯಾಲೆಯ ಸಾರುವ ತಾನಿಲೆಲ್ಲೋ
ಹೀಗೆಲ್ಲವೂ ತಕ್ಕರ ಮನೆ ನಿಮ್ಮದು ತಾಯಿ ತಾನಿಲೆಲ್ಲೋ
ನಾವೆಲ್ಲರು ಬಂದಿರೆ ಬಾಗಿಲ ತೆರೆಯಿರಿ ತಾಯಿ ತಾನಿಲೆಲ್ಲೋ
ಬಾಗಿಲ ತೆರೆಯದೆ ನಿಂತರೆ ನೂಕುತ ತೆಗೆವೆವು ತಾಯೆ ತಾನಿಲೆಲ್ಲೋ
ಬಂದಿರೆ ನಮಗೆಂದಿಗು ಕಾಣಲಿ ಒಳ್ಳೆಯ ಶಕುನ ತಾನಿಲೆಲ್ಲೋ
ತೂಗಿಹ ಹೊನ್ನಿನ ದೀಪದಿ ಶಿಲ್ಪವು ಇಹುದು ತಾನಿಲೆಲ್ಲೋ
ಹೊನ್ನಿನ ಆ ದೀಪದಿ ಏನೆಲ್ಲವು ಇಹುದು? ತಾನಿಲೆಲ್ಲೋ
ಹಸುವಿನ ತುಪ್ಪದಿ ಅದ್ದಿದ ಬತ್ತಿಯ ಉರಿ ಬೆಳಕಿದೆ ತಾನಿಲೆಲ್ಲೋ
ಆ ದೀಪದಿ ಬೆಳಕಲಿ ಕಂಡುದುದೇನು? ತಾನಿಲೆಲ್ಲೋ
ನೆಲ್ಲಕ್ಕಿಬಾಡೆಯ ನೆಲೆಯಲಿ ಕಂಡುದುದೇನು? ತಾನಿಲೆಲ್ಲೋ
ಮಣೆ ಮುಕ್ಕಾಲಿಯ ಪೀಠದಿ ಬೆಳ್ಳಿಯ ತಟ್ಟೆ ತಾನಿಲೆಲ್ಲೋ
ಆ ಬೆಳ್ಳಿಯ ತಟ್ಟೆಲಿ ಕಂಡುದುದೇನು? ತಾನಿಲೆಲ್ಲೋ
ಬೆಳ್ಳಿಯ ತಟ್ಟೆಲಿ ತುಂಬಿದೆ ಸಣ್ಣಕ್ಕಿಯ ರಾಶಿ ತಾನಿಲೆಲ್ಲೋ
ಸಣ್ಣಕ್ಕಿಯ ಮೇಲಿದೆ ಮಡಿ ವಸ್ತ್ರದ ಮಡಿಕೆ ತಾನಿಲೆಲ್ಲೋ
ಮಡಿವಸ್ತ್ರದ ಮಡಿಕೆಯ ಮೇಲಿದೆ ಹೊನ್ನಿನ ದೇಪ ತಾನಿಲೆಲ್ಲೋ
ಆ ದೀಪದ ಬೆಳಕಲಿ ಸಾರ್ದೆವು ಮನೆ ಒಳಗು ತಾನಿಲೆಲ್ಲೋ
ಆ ದೀಪದ ಬಳಿಯಲಿ ಮನೆಯೊಳಗಾಗೆ ತಾನಿಲೆಲ್ಲೋ
ಬೇಡುವ ಹಾಡನು ಹೇಳುತ ನಿಂತೆವು ತಾನಿಲೆಲ್ಲೋ
ಆ ಮನೆ ಗೋಡೆಯ ಮೇಲಲಿ ಏನದು ಇಹುದು? ತಾನಿಲೆಲ್ಲೋ
ಅಲ್ಲಿಯ ರಾಮರ ಸೀತೆಯ ಚಿತ್ರವ ಕಂಡೆವು ತಾನಿಲೆಲ್ಲೋ
ಕಾಡಿನ ಹುಂಜದ ತಲೆಹೂವಿನ ಚಿತ್ರ ಕಂಡೆವು ತಾನಿಲೆಲ್ಲೋ
ಹಾರುವ ಹಕ್ಕಿಯ ಬರೆದಿಹ ರೂಪದ ಕಂಡೆವು ತಾನಿಲೆಲ್ಲೋ
ಮನೆ ನೆಂಟರು ಅಣ್ಣಂಗಳ ಚಿತ್ರವ ಕಂಡೆವು ತಾನಿಲೆಲ್ಲೋ
ಮನೆಗಿಹ ಮಾಡಿನ ಮೇಲೋಳು ಏನದು ಕಂಡೆವು? ತಾನಿಲೆಲ್ಲೋ
ಮರದಕಂಬ ಮೇಲೆ ಹಲಗೆಯಪಟ್ಟಿ ಎಲ್ಲ ಕಂಡೆವು ತಾನಿಲೆಲ್ಲೋ
ಮಾಡು ಮೇಲೆ ತಾಮ್ರದ ತಗಡ ಹೊದಿಕೆಯ ಕಂಡೆವು ತಾನಿಲೆಲ್ಲೋ
ಒಳಗೆ ನಾಲುಕಟ್ಟು ಐಮರ ತೊಟ್ಟಿ ಕಂಡೆವು ತಾನಿಲೆಲ್ಲೋ

ತೊಟ್ಟಿ ಕಂಬದ (ನಾಲ್ಕು) ಮೇಲೆ ಚಿತ್ರವದೇನು ಕಂಡೆವು? ತಾನಿಲೆಲ್ಲೋ
ಹಕ್ಕಿ ಚಿತ್ರ, ಹಾವಿನ ಚಿತ್ರದ ಬರೆಹವ ಕಂಡೆವು ತಾನಿಲೆಲ್ಲೋ
ಅಂತೆ ಮನೆಯ ಮಂದಿಯೆಲ್ಲ ಒಂದೆ ಆಗಿ ಕಂಡರು ತಾನಿಲೆಲ್ಲೋ
ಅಯ್ಯನ ಮನೆಯ ಆಚಾರದಂತೆ ಹಾಡು ನಮ್ಮದು ತಾನಿಲೆಲ್ಲೋ
(ತಕ್ಕನಾ ತಕ್ಕಮೆ ತಿಳಿವ ಬಗೆ ಹೇಗೆ ಎನ್ನಲು? ತಾನಿಲೆಲ್ಲೋ
ತಕ್ಕ ಮುಖ್ಯನವನ ಸ್ಥಾನ ಹೇಗೆ ತಿಳಿವುದು? ತಾನಿಲೆಲ್ಲೋ
ಬಪ್ಪಗೆಲ್ಲ ಪೋಪಗೆಲ್ಲ ಬಾವಣಿಕೆಯೆ ತುಂಬಿಡೆ ತಾನಿಲೆಲ್ಲೋ
ಬಪ್ಪಗೆಲ್ಲ ಪೋಪಗೆಲ್ಲ ಆಚಾರವೆ ಸಂದಿದೆ ತಾನಿಲೆಲ್ಲೋ
ಜೋಗಿಗೆ ಡೋಲಿನವಗೆ ಅಕ್ಕಿಪಡಿಯು ಸಂದಿದೆ ತಾನಿಲೆಲ್ಲೋ
ತಕ್ಕಮುಖ್ಯನವನ ಕುಟುಂಬ ಹೇಗಿದೆ? ತಾನಿಲೆಲ್ಲೋ
ಹಾಗಲ ಹೂವ ಹೊಂಬಣ್ಣದಂತ ಮಕ್ಕಳಾ ಕಂಡೆವಲ್ಲಿ ತಾನಿಲೆಲ್ಲೋ
ಕುಂಬಳ ಹೂಬಣ್ಣದಂತ ತಲೆನರೆತ ಅಜ್ಜಿಯಾ ಕಂಡೆವಲ್ಲಿ ತಾನಿಲೆಲ್ಲೋ
ಕೆಂಪು ದಾಸವಾಳದಂತ ಚೆಲುವಾಂತ ಹುಡುಗೀರ ಕಂಡೆವಲ್ಲಿ ತಾನಿಲೆಲ್ಲೋ
ಮನೆ, ತೋಟ, ತುಡಿಕೆ, ಒಕ್ಕ ಬದುಕು ಹಾಗಿದೆ ತಾನಿಲೆಲ್ಲೋ
ಅಂತ ಮನೆಯ ಆಚಾರದಂತೆ ಹಾಡು ನಮ್ಮದು ತಾನಿಲೆಲ್ಲೋ
ಬೆಳಗು ಜ್ಯೋತಿಗೆಂದು ಕೈಯ ಮುಗಿದು ಹರಸಿ ಸಾರ್ದೆವು ತಾನಿಲೆಲ್ಲೋ
ಇಂತ ಮನೆಯ ಜನವೆ ನೆಮ್ಮದಿಗಿರಲೆಂದು ಹಾಡು ನಮ್ಮದು ತಾನಿಲೆಲ್ಲೋ"

(ಲಲಿತ.ಕೆ.ಪಿ. ವಿರಾಜಪೇಟೆ ತಾಲ್ಲೋಕು ದರ್ಶನ, ಪಿಎಚ್.ಡಿ ಮಹಾಪ್ರಬಂಧ, ಅಪ್ರಕಟಿತ)

ಈ ಮೇಲಿನ ಜನಪದ ಗೀತೆಯಲ್ಲಿ 'ಐನ್‌ಮನೆ'ಯ ವಿಶಿಷ್ಟ ಪೂರ್ಣ ಸಂಸ್ಕೃತಿಯ ಚಿತ್ರ ನಮ್ಮ ಕಣ್ಣ ಮುಂದೆ ಬರುತ್ತದೆ. ಕಣ್ಮನ ಸೆಳೆಯುವ ಈ ಐನ್ ಮನೆಯಲ್ಲಿ ಪುಟ್ಟ ಮಕ್ಕಳಿಂದ ಹಿಡಿದು ವಯೋವೃದ್ಧರ ತನಕ ಎನ್ನುವ ಸಾಲುಗಳಲ್ಲಿ ಎಲ್ಲರೂ ಒಟ್ಟಿಗೆ ಕೂಡಿ ಬಾಳುವ ಅವಿಭಕ್ತ ಕುಟುಂಬದ ಚಿತ್ರಣವನ್ನು ಕಾಣಬಹುದು.

ಕೊಡವರ ಕೈಮಡಗಳು

ಕೊಡವರಲ್ಲಿ ದೇವರ ಸ್ಥಾನದಲ್ಲಿ ಹಿರಿಯರನ್ನು ಪೂಜಿಸುತ್ತಿದ್ದಾರೆಂಬುದಕ್ಕೆ 'ಕೈಮಡ' ಸಾಕ್ಷಿಯಾಗಿದೆ. ಹಿರಿಯರಿಗೆ ಸತ್ತಮೇಲೆ ವಿಶೇಷ ಸ್ಥಾನ ನೀಡುವ ಪರಿಕಲ್ಪನೆ ಇಂದಿಗೂ ಇದೆ. "ಕೊಡವ ಭಾಷೆಯಲ್ಲಿ 'ಕೈಮಾತ್' ಎಂದರೆ ಸಣ್ಣ ಮಗು ಎಂಬ ಅರ್ಥವಿದೆ. 'ಕೈಮಠ' ಎಂದರೆ ಸಣ್ಣ 'ಮಠ' ಮಠದಲ್ಲಿ ಗುರುವಿನ ನೆಲೆ. ದೇವನ ನೆಲೆ ಇರುವುದರಿಂದ 'ಕೈ ಮಠವು' ಸಣ್ಣ ಸ್ಮಾರಕ ಕಟ್ಟಡ ಎಂದು ಅರ್ಥೈಸಬಹುದಾಗಿದೆ. ಕೈಮಠ ಶಬ್ದವು ಕೊಡವ ಭಾಷೆಯಲ್ಲಿ 'ಟ'ಕಾರ 'ಡ'ಕಾರ ವ್ಯತ್ಯಾಸವಾಗಿ 'ಕೈ ಮಡ' ವಾಗಿದೆ. ಎಂ.ಜಿ. ನಾಗರಾಜ್ ಅವರು 'ಕೊಡಗಿನ ಕೈಮಡಗಳು' ಎಂಬ ಕೃತಿಯಲ್ಲಿ ಸ್ಮಾರಕವನ್ನು ಇತಿಹಾಸದ ಗತಸಾಂಸ್ಕೃತಿಕ ಕೃತಿಯಾಗಿ ನೋಡುವುದಕ್ಕಿಂತ ಸಮಕಾಲೀನ ಭೌತಿಕ ಸಾಕ್ಷಿಯಾಗಿ ಗಮನಕ್ಕೆ ತೆಗೆದುಕೊಳ್ಳುವುದು ಸೂಕ್ತವೆನಿಸುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

ಕೈಮಡಗಳು ಮತ್ತು ಐನ್‌ಮನೆಗಳು ಕೊಡವ ಸಮುದಾಯಕ್ಕೆ ಮಾತ್ರ ಸೀಮಿತವಾಗಿಲ್ಲ ಹಲವಾರು ಕೊಡವೇತರರ ಮನೆತನಗಳಲ್ಲಿ ಕಂಡು ಬರುತ್ತವೆ."[೩]

"ಕೊಡವರ ಕೈಮಡವು ಪೂರ್ವಾಭಿಮುಖವಾಗಿ ಕಟ್ಟಲ್ಪಟ್ಟಿದ್ದು, ಅವುಗಳ ಹೆಸರೇ ಸೂಚಿಸುವಂತೆ ಕೈಮಠ ಕುಟುಂಬದ ಮಕ್ಕಳ ಪ್ರಥಮ ಶಿಕ್ಷಣಾ ಕೇಂದ್ರಗವಾಗಿರುತ್ತದೆ. ಇವರ ಮೂಲ ಪುರುಷನು ಆಯಾಯ ಮನೆತನಕ್ಕೆ ಗುರು ಕಾರೊಣ, ಕುಲದೈವ, ಆದಿಗುರು, ಸನ್ನಿಧಿ ಪುರುಷ ಆಗಿರುತ್ತಾನೆ."[೪] ಈ ಸ್ಮಾರಕ ನೆಲೆಯು ಮನೆತನದ ಇತಿಹಾಸದ ಗುಡಿಯಂತಿದೆ. ಆ ವಂಶದ ಪರಂಪರೆಯಲ್ಲಿ ಬಂದ ಧಾರ್ಮಿಕ ಸಂಪ್ರದಾಯಗಳನ್ನು ಸಾಂಸ್ಕೃತಿಕ, ಜನಪದ ಆಚರಣೆಗಳನ್ನು ಎಲ್ಲಾ ಅಗತ್ಯಗಳನ್ನು ಕೊಡವರು ಈ ಸ್ಮಾರಕದ ಒಳಭಾಗದಲ್ಲಿ ನೆರವೇರಿಸುತ್ತಾರೆ. ಪ್ರಮುಖವಾಗಿ ಅಮ್ಮಕೊಡವ–ಕೊಡವರಲ್ಲಿರುವಂತೆ ಇತರ ಸಮುದಾಯಗಳಾದ ಕೊಯವ, ಐರಿ, ಹೆಗ್ಗಡೆ, ಗೊಲ್ಲ, ಕಾಪಳರಲ್ಲಿ ದಲಿತವರ್ಗದ ಕೆಂಬಟ್ಟಿಗಳಲ್ಲಿ, ಅರೆಗೌಡ ಮತ್ತು ಜಮ್ಮ–ಮಾಪಿಳ್ಳೆಯಲ್ಲಿ ಇಂತವೇ ಕೈಮಡಗಳಿವೆ.

ಕೈಮಡ ವಿಕಾಸದಲ್ಲಿ ಪ್ರಮುಖವಾಗಿ ಹಾಲೇರಿ ಅರಸರ ಪ್ರಭಾವವಿದೆ. ೧೫೮೬–೧೬೦೦ರ ಸುಮಾರಿನಲ್ಲಿ ಇಕ್ಕೇರಿಯಲ್ಲಿ ಕೌಟುಂಬಿಕ ಸಂಘರ್ಷದ ಕಾರಣ ಜಂಗಮ ವೇಷಧಾರಿಯಾಗಿ ಹಾಲೇರಿಗೆ ವಲಸೆ ಬಂದ ಇಕ್ಕೇರಿಯ ರಾಜಕುಮಾರ ವೀರರಾಜ ಮೊದಲು ಕೈಮಡವನ್ನು ವ್ಯವಸ್ಥೆ ಮಾಡಿ ಮಕ್ಕಳಿಗೆ ವಿದ್ಯಾದಾನ ಮಾಡಿದ. ಗುರುನಾಯಕ ಎಂದು ಹೆಸರು ಪಡೆದ ಈ ಹಾಲೇರಿ ರಾಜಕುಮಾರನ ಅಂದರೆ ಮೊದಲು ಅರಸನ ಸಮಕಾಲೀನನಾದ ಕಲ್ಯಾಟಜಪ್ಪನ ಹೆಸರಿನಲ್ಲಿ ಆರಂಭವಾಯಿತು. (ಕಲಿಯಾಟಂಡ ಪೊನ್ನಪ್ಪ) ಅಂದಿನಿಂದ ಬೇತುಗ್ರಾಮದ ಕೈಮಡದಲ್ಲಿಯೂ ವಿದ್ಯಾದಾನದ ಪರಂಪರೆ ನಡೆದು ಬಂದಿದೆ.

ಕೆಲವು ಕೈಮಡಗಳಲ್ಲಿ ಮಾತ್ರ ದೀಪದ ಗೂಡುಗಳು ಇರುತ್ತವೆ. ಕೆಲವಡೆ ಸಮಾಧಿಗಳನ್ನು ಮತ್ತು ಸಮಾಧಿಯ ಸಾಂಕೇತಿಕ ಮಾದರಿ ಇರುತ್ತವೆ. ಈ ದೀಪದ ಗೂಡುಗಳು ಅಥವಾ ಲಿಂಗರೂಪಿ ಶಿಲೆಗಳ ಸಾಲು ಹಿರಿಯರ ಸ್ಮಾರಕವಾಗಿ ತೆರೆದ ಆವರಣದಲ್ಲಿದ್ದು, ಇದನ್ನು 'ಕಲ್ಲಂದರೆ' ಎನ್ನುತ್ತಾರೆ.

ಕೊಡವರಲ್ಲಿ ವೀರಸನ್ನಿದಿ, ವೀರಗಲ್ಲು, ವೀರಮಾಸ್ತಿಗಲ್ಲುಗಳು (ಮಾಚಂಗಳ, ಕನ್ನಂಡ) ಪ್ರಮುಖ ಆರಾಧನಾ ಸ್ಥಳಗಳಾಗಿರುತ್ತವೆ. ವಿಶೇಷವಾಗಿ 'ಅಜ್ಜಪ್ಪನ ಕಲ್ಲು' ಎಂಬ ಸ್ಮಾರಕವನ್ನು ಕೊಡವರು ಆರಾಧಿಸುತ್ತಾರೆ. ಜನಪದರ ಭೂತಾರಾಧನೆಯನ್ನು ಮೀರಿದ 'ಕಾರೊಣ ತೆರೆ' ದೈವತ್ವದ ಸ್ಥಾನವನ್ನು ಪಡೆದಿರುತ್ತದೆ. ಹಿರಿಯರ ಈ ಸ್ಮಾರಕದಲ್ಲಿ ದೇವರ ನೆಲೆಯನ್ನು ಕಾಣುವ ಗುಣ ಕೊಡವರದ್ದಾಗಿದೆ. ಕೊಡವರಿಗೆ ಸೇರಿದ ಕೈಮಡಗಳನ್ನು ಹೆಚ್ಚಾಗಿ ವಿರಾಜಪೇಟೆ ಮತ್ತು ಮಡಿಕೇರಿ ತಾಲ್ಲೂಕಿನಲ್ಲಿ ಕಾಣಬಹುದು. ಸೋಮವಾರಪೇಟೆ ತಾಲ್ಲೂಕಿನಲ್ಲಿ ವಿರಳವಾಗಿ ಕಂಡುಬರುತ್ತವೆ.

ಕೊಡವರಲ್ಲಿ ಮೊದಲು ಕುಟುಂಬದಿಂದ ಅನಂತರ ಗ್ರಾಮದ ದೇವತೆಗಳ ಹಿತಚಿಂತನೆಯಿಂದ ಧಾರ್ಮಿಕ ಭಾವನೆ ವಿಸ್ತಾರಗೊಳ್ಳುತ್ತದೆ. ಕುಟುಂಬದ ಸದಸ್ಯನ ವಿಶ್ವಾಸ, ಅನುಭೂತಿ, ಆಚರಣೆಗೆ ಅನೂಕೂಲವಾಗುವಂತೆ ಕುಟುಂಬ ಗೃಹದಲ್ಲಿ

'ಕನ್ನಿ ಕೋಂಬರೆ' (ದೇವರ ಕೋಣೆ) ಇದ್ದು ಅಲ್ಲಿ ಆತನು ತನ್ನ ಕಾರೋಣ ಮತ್ತು ಹಿರಿಯರಿಗೆ ಗೌರವ ಸಲ್ಲಿಸುತ್ತಾನೆ. (ಕೈಮಡದ ಛಾಯಾಚಿತ್ರವನ್ನು ಅನುಬಂಧ-೦೬ರಲ್ಲಿ ನೀಡಲಾಗಿದೆ.)

'ಗುರು ಕಾರೋಣ' ಮತ್ತು ತೆರೆ ಕಟ್ಟುವುದು

ಕೊಡವರ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳು ವೈವಿಧ್ಯತೆಯನ್ನು ಪಡೆದಿವೆ. ಧಾರ್ಮಿಕ ಕಲ್ಪನೆಗಳ ಜೊತೆಗೆ, ಮೂರ್ತಿ ಪೂಜೆ ಭೂತಾರಾಧನೆಯನ್ನು ಮಾಡುತ್ತಾರೆ. ಮಿ. ರ್‍ಯಾಡ್‌ಕ್ಲಿಫ್ ಮತ್ತು ಶ್ರೀನಿವಾಸ್ ಅವರು 'ಕೊಡವರ ಧರ್ಮ ಮತ್ತು ಸಮಾಜ' ಎಂಬ ಗ್ರಂಥದ ಮುನ್ನುಡಿಯಲ್ಲಿ "ಕೊಡವರ ಧಾರ್ಮಿಕ ಪದ್ಧತಿಯು ವಿಶೇಷ ಆಸಕ್ತಿಯ ವಸ್ತು ಮತ್ತು ಅಮೂಲ್ಯವಾದುದು. ಅವರ ಧಾರ್ಮಿಕ ಕಲ್ಪನೆಯಲ್ಲಿ ಮೂರು ಹಂತಗಳಿದ್ದು, ಪ್ರತಿ ಹಂತಕ್ಕೂ ಅವರದೇ ಧಾರ್ಮಿಕ ಪದ್ಧತಿ ಮತ್ತು ವಿಶಿಷ್ಟತೆಗಳಿದ್ದು ಅವು ಒಂದಕ್ಕೊಂದು ಪೂರಕವಾಗಿವೆ."[೫] ಎಂದು ಹೇಳಿದ್ದಾರೆ.

ವಾಸ್ತವದಲ್ಲಿ ಕಾವೇರಮ್ಮ ಕೊಡವರ ಕುಲದೇವತೆಯಾಗಿದೆ. ವಂಶದ ಮೂಲ ಪುರುಷನೇ ಕುಲಗುರು ತಮ್ಮ ಅಸ್ತಿತ್ವಕ್ಕೆ ಕಾರಣರಾದ ವಂಶದ ಪೂರ್ವಜರನ್ನು ದೈವೀಕರಿಸಿ ಪೂಜಿಸುವುದು ಇಲ್ಲಿನ ಸಂಸ್ಕಾರದ ವಿಶೇಷ. ಆದರೆ ಗುರುವನ್ನು ದೇವರ ಸಮನವಾಗಿ ಕೊಡವರು ಕಾಣುತ್ತಾರೆ. ತಮ್ಮ ಕುಲಗುರುವಾಗಿ, ಮೂಲ ಪುರುಷನಾಗಿ ಕಾರೂಣನನ್ನು ಕಾಣುತ್ತಾರೆ. ಇಲ್ಲಿ ಬೇರೆ ಪೂಜಾರಿಗೆ ಅವಕಾಶವಿಲ್ಲ. ಕಾರೋಣ ತೆರೆಯ ಮೂಲಕ ಪೂಜೆ ಸಲ್ಲಿಸುವುದು ಕೊಡವರ ಪಿತೃಪ್ರಧಾನ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ. ಈ 'ಕಾರೋಣ' ಆಚರಣೆಗಳು, ಕೊಡವರಲ್ಲದೆ, ಅಮ್ಮಕೊಡವ, ಅರೆಗೌಡ, ಹೆಗ್ಗಡೆ, ಕಣಿಯ, ಐರಿ, ಗೊಲ್ಲ, ಕಾಪಳರು, ಕೆಂಬಟ್ಟಿ ಮುಂತಾದ ಸಮುದಾಯಗಳಲ್ಲಿಯೂ ಕಂಡುಬರುತ್ತವೆ.

ಸಾಮಾನ್ಯವಾಗಿ ಮನೆತನವನ್ನು ಸ್ಥಾಪಿಸುವ ಅಥವಾ ಕುಟುಂಬವನ್ನು ಎತ್ತಿ ನಿಲ್ಲಿಸಿದ ಮೂಲ ಹಿರಿಯನಿಗೆ ಕಾರೋಣ ಎಂಬ ಹೆಸರು ಬಂದಿದೆ. ಕೊಡವರು ಅವನನ್ನು 'ಗುರು ಕಾರೊಣ' ಎನ್ನುತ್ತಾರೆ. ಕಾರೊಣರ ಆರಾಧನೆ ಎಂದರೆ ದೈವಾಂಶ ಸಂಭೂತರೆನಿಸಿರುವ ಮನೆತನದ ವ್ಯಕ್ತಿಗಳ ಆರಾಧನೆ ಆಗಿರುತ್ತದೆ. ವರ್ಷಕೊಮ್ಮೆ ಮನೆತನಕ್ಕೆ ಒಳಿತು ಮಾಡುವುದಕ್ಕಾಗಿ ಐನ್‌ಮನೆಯಲ್ಲಿ ಎಡೆಹಾಕುವ ಪದ್ಧತಿ ಕೊಡವರಲ್ಲಿದೆ. ಇದೇ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವಂತಹ 'ಗುಳಿಗ' ಕೊಡುವುದು, ಪಾಷಣಮೂರ್ತಿ ಪೂಜೆಯನ್ನು ಅಗೋಚರ ಶಕ್ತಿಯೆಂದು ಆರಾಧಿಸುತ್ತಾರೆ. ಈ ಅಗೋಚರ ಶಕ್ತಿಯು ದೈವಾಂಶ ಪುರುಷರಾಗಿರುತ್ತಾರೆ. ಈ ಆರಾಧನೆಯು ಕೈಮಡದಲ್ಲಿ ಕಂಡುಬರುತ್ತದೆ.

ಎಂ.ಜಿ. ನಾಗರಾಜ್‌ರವರು "ಕೊಡಗಿನ ಕೈಮಡಗಳು" ಎಂಬ ಕೃತಿಯಲ್ಲಿ ಕೆಲವು ಮನೆತನಗಳಲ್ಲಿ ಕೈಮಡದಲ್ಲಿ ಎಡೆ ಇಡುವ ಸಮಯದಲ್ಲಿ (ಮೀದಿ ಎಂದರೆ ಮನೆತನದಲ್ಲಿ ಸಂದು ಹೋದ ವ್ಯಕ್ತಿಗಳ ಆರಾಧನೆ) ಆ ಮನೆತನದ ಆಪ್ತರಿಗೆ, ಸಹಾಯ ಮಾಡಿದವರಿಗೆ, ಉಚ್ಛ, ನೀಚ ಎಂದು ತೋರದಿರುವುದು ಗಮನಾರ್ಹ. ಉದಾ: ಹಳ್ಳಿಗಟ್ಟು ಗ್ರಾಮದ ಅಡ್ಡಂಡ ಮನೆಯವರು ಜಮ್ಮ

ಮಾಪಿಳ್ಳೆ ಆಲೀರ ಮೈದುವಿಗೆ ಹಾಗೂ ಕೆಲಸದವಳಾಗಿದ್ದ ದಲಿತ ಎರವನಿಗೂ ಎಡೆ ಇಡುತ್ತಿರುವುದು, ಹಾಗೆಯೇ ಬೇಂಗೂರು ಗ್ರಾಮದ ಕಲ್‌ಮಾಡಂಡ ಕುಟುಂಬದವರು ಒಡೆಯನ ಅನ್ನದ ಋಣ, ನೇಹದ ಋಣ ತೀರಿಸಿದ ಮನೆಯಾಳು ದಲಿತ ಕೆಂಬಟ್ಟಿ ಕುಡಿ 'ಅಚ್ಚುಕೊಟ್ಟಿ ಚಾಂಡಾಳ'ನಿಗೆ ಎಡೆ ಇಡುವುದು, ಕೂಟಜ್ಜಪ್ಪ ಎಂಬ ಹೆಸರಿನಿಂದ ಪ್ರಖ್ಯಾತವಾಗಿರುವ ಕಲ್ಯಾಟಂಡ ಪೊನ್ನಪ್ಪನನ್ನು ಕರ್ಣೀಬಾಹು ಎಂಬ ನಾಯಕ ವಂಚಿಸಿ ಕೊಂದಾಗ ಪೊನ್ನಪ್ಪನ ಜೊತೆಯಾಳು ದಲಿತ 'ಕಾಟಾಳು ಬೊಳ್ತು' ಆತ್ಮ ಬಲಿದಾನ ಮಾಡಿಕೊಂಡಿದ್ದ. ಕಲ್ಯಾಣಜ್ಜಪ್ಪನನ್ನು ನೆನಪಿಸಿ ಪೂಜಿಸುವ ಸಂದರ್ಭಗಳು ಕಾಟಾಳು ಬೊಳ್ತುವಿಗೂ ಎಡೆ ಇಡಲಾಗುತ್ತಿದೆ".

ಕೊಡವರು ಗುರು ಕಾರೋಣರ ಸಂದರ್ಭದಲ್ಲಿ ಜಾತಿ ಭೇದವಿಲ್ಲದೆ ತಮ್ಮ ಕುಟುಂಬಕ್ಕೆ ಸಹಾಯ ಮಾಡಿದ ಎಲ್ಲರನ್ನೂ ಸ್ಮರಿಸಿ ಎಡೆ ಹಾಕುತ್ತಾರೆ. ಇಲ್ಲಿ 'ಕಾರೋಣ'ಗಳಿಗೆ ಯಾವುದೇ ರೀತಿಯ ಕಟ್ಟಡಗಳಿರುವುದಿಲ್ಲ. ಆದರೆ ಈಗ ಶ್ರೀಮಂತ ಕುಟುಂಬಗಳು ಕೆಲವು ರೀತಿಯ ಮಂದಿರಗಳನ್ನು ಕಟ್ಟಿಸಿದ್ದಾರೆ. 'ಕಲಿಯ', 'ಕಾರೋಣ ಬಾರಣೆ' (ಕಾರಣನಿಗೆ ಬಲಿ ಕೊಡುವುದು) ಯನ್ನು ವರ್ಷಕೊಮ್ಮೆ ಆಚರಿಸಿ ವಿಶೇಷ ಔತಣ ನೀಡಿ ಹಿರಿಯರನ್ನು ಸಂತೈಸುವರು. ಇದನ್ನು 'ಕಾರೋಣ ಕೊಡುಪೊ' 'ಕೋಲಕಟ್ಟುವೊ' ಎನ್ನುತ್ತಾರೆ. ಈ ಸಂದರ್ಭದಲ್ಲಿ ಮೃತ ವೀರನ ಶೌರ್ಯ, ವೀರಗುಣಗಳನ್ನು ಹಾಡಿ ಹೊಗಳುವುದುಂಟು.

ಪಣಿಕರು, ಬಣ್ಣರು, ಕಾರೋಣದಲ್ಲಿ ಆವೇಶ ಬರುವಾಗ 'ತೆರೆ' (ವಿಶಿಷ್ಟ ವೇಷ) ಕಟ್ಟುವರು. ಇವರನ್ನು ತಿರುವಳಕಾರ ಎಂದು ಕರೆಯುತ್ತಾರೆ. ಈ ತೆರೆಯು ಹಿರಿಯರ ಮಾತು, ನಿಲುವು, ನಡೆಗಳನ್ನು ಅನುಕರಿಸುತ್ತದೆ. ಕೆಲವು ಕುಟುಂಬಗಳಲ್ಲಿ ಕಾರೋಣ (ಅಜ್ಜಪ್ಪನನ್ನು) ಕರೆಸಿ ತೆರೆ ಕಟ್ಟಿ ಕಷ್ಟ ನಿವಾರಿಸಿಕೊಳ್ಳುತ್ತಾರೆ. ವಂಶದ ಹಿರಿಯರ ಆವೇಶವನ್ನು ತಮ್ಮ ಮೈಮೇಲೆ ಆವಾಹಿಸಿಕೊಂಡು, ಈ ಸಂದರ್ಭದಲ್ಲಿ ಹಿರಿಯರ ರೀತಿನೀತಿಯನ್ನು ಅನುಸರಿಸಿ ವೇಷ ಧರಿಸಿ ಕುಣಿಯುವುದೇ ತೆರೆ. ಈ ಪದ್ಧತಿಯು ಸಹ ಕೊಡವರು ಹಿರಿಯರಿಗೆ ನೀಡುವ ಮರ್ಯಾದೆಯನ್ನು ತಿಳಿಸುತ್ತದೆ.

ಕೊಡವರು ಕೆಲವು ವಿಶೇಷವಾದ ತೆರೆಗಳನ್ನು ಕಟ್ಟುತ್ತಾರೆ. ಅವುಗಳಲ್ಲಿ ಪ್ರಮುಖವಾದವು ಪಾಷಾಣ ಮೂರ್ತಿ ಭದ್ರಕಾಳಿ, ಕುಳಿಯ, ಪಂಜರುಳಿ, ನುಚ್ಚುಟ್ಟೆ, ಪತ್ತ್‌ಕೂಟ್ ಪಾತಾಳ ಮೂರ್ತಿ (ಹತ್ತು ಕೋಲ) ಮುಂತಾದವು ಭೂತಾರಾಧನೆಯ ಮೂಲಕ ತನ್ನ ವಂಶದ 'ಕಾರೋಣ' ನಿಗೆ ರಕ್ಷಣೆ ನೀಡುತ್ತಾರೆ. ಮೊದಲು ತೆರೆ ಕಟ್ಟಿದ ನಂತರವೇ ದೇವಿ ಪೂಜೆಯನ್ನು ಮಾಡಿ ತೆರೆಯ ಮೂಲಕ ಸಂತೃಪ್ತಿಪಡಿಸಿ ಮೂಲ ಗುರುವನ್ನು ರಕ್ಷಿಸುತ್ತಾರೆ.

ಕೊಡವರ ಈ ಹಾಡು ಧರ್ಮದ ನಿಲುವನ್ನು ಚಿತ್ರಿಸುತ್ತದೆ.

"ಪೊಮ್ಮಾಲೆ ಕೊಡವುಲ್ ಎನ್ನುತ್ತ ನೆಲೆಯಾಪ
ದೇಶಕೋರ್ ಮಾದೇವಿ ಕಾವೇರಮ್ಮೆ ಮಾತಾಯಿ

ನಾಡ್‌ಕೋರ್ ಮಾದೇವ ಊರ್‌ಕೊರ್ ಪೊವ್ವದಿ
ಕೇರಿಕೋರ್ ಅಯ್ಯಪ್ಪ, ಒಕ್ಕಕೋರ್ ಕಾರಣ

ಒಡಕೋರ್ ನಾಥನೂ, ಓಣಿಕೋರ್ ಪೊದನು ಇನ್ನುತ್ತ ನೆಲೆಯಾಪ" (ಮಾಹಿತಿ : ಬೊಪ್ಪೆರ ಕಾವೇರಪ್ಪ, ೮೦ ವರ್ಷ, ನಾಪೋಕ್ಲು)

(ಹೊನ್ನಿನ ರಾಜ್ಯ ಕೊಡಗಿನಲ್ಲಿ, ಇಡೀ ದೇಶಕ್ಕೆ ಮಾತೆ ಕಾವೇರಿಯೂ, ನಾಡಿಗೆ ಮಹದೇವನೂ, ಗ್ರಾಮಕ್ಕೆ ಭಗವತಿಯೂ, ಕೇರಿಗೆ ಅಯ್ಯಪ್ಪನೂ, ಓಡೆಗೆ ನಾಥನೂ, ಓಣಿಗೆ ಪೂದನೂ ಹಾಗೂ ಪ್ರತಿ ಕುಟುಂಬಕ್ಕೆ ಕಾರಣನೂ ಧರ್ಮದ ನೆಲೆಯಾಗಿದೆ.)

ಕೊಡವರು ಕುಲದೇವತೆ ಕಾವೇರಿ ಮಾತೆ, ವ್ಯವಸಾಯದ ಅಧಿದೇವತೆ ಇಗ್ಗುತಪ್ಪನ ಜೊತೆಗೆ ತಮ್ಮ ವಂಶದ ಗುರುಕಾರೊಣನನ್ನು ನೆನೆದು ದಿನ ನಿತ್ಯದ ಕಾರ್ಯಗಳನ್ನು ನಿರ್ವಹಿಸುತ್ತಾರೆ.

ಕೊಡವರಲ್ಲಿ ಆಧುನಿಕ ಗೃಹ ನಿರ್ಮಾಣ ಪದ್ಧತಿ

ಇಂದು ಕೊಡವ ಆಧುನಿಕ ಜೀವನ ಕ್ರಮ ಮತ್ತು ಬದಲಾದ ಜೀವನ ಪದ್ಧತಿ, ನಾಗರಿಕತೆಯ ಒತ್ತಡ ಹಾಗೂ ಶ್ರೀಮಂತಿಕೆಯ ತೋರ್ಪಡಿಕೆಗಳಿಂದ ಕೂಡಿದ್ದಾಗಿದೆ. ಐನ್‌ಮನೆಯನ್ನು ಬಿಟ್ಟು ತಮ್ಮ ಪಾಲಿನ ಆಸ್ತಿಪಾಸ್ತಿಗಳನ್ನು ಪಡೆದು ತಮ್ಮದೇ ಮನೆ ಮಠಗಳನ್ನು ಕಟ್ಟಿಕೊಂಡು ಬೇರೆ ವಾಸಿಸಲು ಪ್ರಾರಂಭಿಸಿದ್ದಾರೆ. ಕಾಫಿ ಪ್ಲಾಂಟರ್‌ಗಳು ತೋಟದ ಮಧ್ಯದಲ್ಲಿ ಕಾಂಕ್ರಿಟ್ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.

ಯಾವುದೇ ಸರ್ಕಾರಿ ನೌಕರಿ, ಸೇನೆ, ವ್ಯಾಪಾರ ವಾಣಿಜ್ಯದಲ್ಲಿ ತೊಡಗಿದ್ದರೂ ಎಲ್ಲಾ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಹಳೇ ಪದ್ಧತಿಯ ಪ್ರಕಾರ ಐನ್‌ಮನೆಯ ಹತ್ತಿರ ಅದಕ್ಕಿಂತ ಎತ್ತರವಾಗಿ ತಮ್ಮ ಮನೆ ಕಟ್ಟಿಕೊಳ್ಳಬಾರದು. ಯಾವ ಶುಭ ಕಾರ್ಯಗಳಾದರೂ ಅವು ಐನ್‌ಮನೆಯಲ್ಲೇ ನಡೆಯಬೇಕು. ಕೊಡಗಿನ ವ್ಯಕ್ತಿ ಹೊರಗೆ ಎಲ್ಲೇ ಮೃತನಾದರೂ ಶವ ಸಂಸ್ಕಾರ ಕುಟುಂಬದ ಸ್ಮಶಾನದಲ್ಲೇ ನಡೆಯಬೇಕು ಇಂಥ ಹಲವಾರು ನಿಯಮಗಳನ್ನು ಪಾಲಿಸ ಬೇಕಾಗುತ್ತದೆ.

ಕೊಡವರ ಆಧುನಿಕ ಮನೆಗಳು ಅತ್ಯಾಕರ್ಷಕವಾಗಿರುತ್ತವೆ. ಕಾಫಿ ತೋಟ ವಿವಿಧ ಹೂಗಳ ಉದ್ಯಾನವನದ ನಡುವೆ ಈ ಮನೆಯು ಸೂರ್ಯ ದೇವನನ್ನು ಸ್ವಾಗತಿಸುವಂತೆ ಪೂರ್ವಾಭಿಮುಖವಾಗಿಯೇ ಕಟ್ಟಲ್ಪಟ್ಟಿರುತ್ತದೆ. ಮನೆಯ ಸುತ್ತ ಮುತ್ತ ಕಾಂಕ್ರಿಟ್‌ನಿಂದ ಮಾಡಿದ ಹೊರಾಂಗಣವಿರುತ್ತದೆ. ಬಹಳ ಶುಚಿಯಾದ ಈ ಮನೆಯಲ್ಲಿ ಪ್ರತಿದಿನ ಬೆಳಿಗ್ಗೆ ಸಂಜೆ ನೆಲ್ಲಕ್ಕಿ ನಡುಬಾಡೆಯಲ್ಲಿ ಒಳಪ್ರಾಂಗಣದ ಗೋಡೆಯಲ್ಲಿ "ತೂಕ್‌ಬೊಳಿಚ" ಎಂಬ ದೀಪವನ್ನು ಹಚ್ಚಿ ಪ್ರಾರ್ಥಿಸುತ್ತಾರೆ. ಮನೆ ಹೊಸ ವಿನ್ಯಾಸದ್ದಾದರೂ 'ಬಾಡೆ' (ನಡುಮನೆ)ಯಲ್ಲಿ ದೀಪ ಹಚ್ಚಲೇಬೇಕು. ಮನೆ ಮಾದರಿ ಹೊಸದಾದರು ಹಳೆ ಸಂಪ್ರದಾಯಗಳನ್ನು ಅನುಸರಿಸುತ್ತಿರುವುದು ಇಲ್ಲಿ ಗೋಚರವಾಗುತ್ತದೆ.

ಮನೆಕಟ್ಟುವ ಜಾಗದಲ್ಲಿ ನೀರು ಬರುವ ಸ್ಥಳವನ್ನು ಕಂಡುಕೊಂಡು 'ಪಾಯ' (ಕುತ್ತಿ) ಹಾಕುತ್ತಾರೆ. 'ಪತ್ತಲೋದಿ' ಅಂದರೆ ಕಾವೇರಿ ತೀರ್ಥ ಬಂದ ಹತ್ತು ದಿನ ಶುಭವೆಂದು ಭಾವಿಸಿ ಈ ಸಮಯದಲ್ಲಿ ಕುತ್ತಿ ಹಾಕುತ್ತಾರೆ. ಬಾವಿಯನ್ನು ಮನೆಯ ಮುಂದೆ ನಿರ್ಮಿಸುವುದಾದರೆ, ಎಡ ಭಾಗದಲ್ಲಿ, ಮನೆಯ ಹಿಂದೆಯಾದರೆ ಬಲಭಾಗದಲ್ಲಿ ಮನೆ ಇರಬೇಕೆಂಬ ನಿಯಮವಿದೆ.

ಮನೆ ಕೆಲಸವನ್ನು ಕರಾರನ್ನು ವಹಿಸಿಕೊಂಡ 'ಮೊಂಬಣಿಕಾರ' (ಗಾರೆಕೆಲಸ)ನು 'ಕುತ್ತಿ' (ಪಾಯ) ಹಾಕಿದ ಜಾಗದಲ್ಲಿ ಕೆಲಸ ಪ್ರಾರಂಭಿಸುವ ಮೊದಲು ಒಂದು ತೆಂಗಿನಕಾಯಿಯನ್ನು ಒಡೆದು ಅದರ ನೀರನ್ನು ಸುತ್ತಲೂ ತಣಿಸಿ, ಸೂರ್ಯನಿಗೆ ಎದುರಾಗಿ ನಿಂತು ಮೂರು ಬಾರಿ ಗುದ್ದಲಿಯುಲ್ಲಿ ಅಗೆಯುತ್ತಾನೆ. ಕುಶಲಕರ್ಮಿಗಳಿಗೆ ಅಥವಾ ಇತರೆ ಕೆಲಸಗಾರರಿಗೆ ಅವರ ಕೆಲಸ ಮುಗಿದ ಅನಂತರ ಎಲೆ ಅಡಕೆ, ಬಾಳೆಹಣ್ಣು, ತೆಂಗಿನಕಾಯಿ, ಗಂಧದಕಡ್ಡಿ ಮತ್ತು ಕೋಳಿಯನ್ನು ಕೊಡುವ ಪದ್ಧತಿ ಇದೆ. ಮನೆಯ ಮುಂದಿನ ಬಾಗಿಲಿನ ಹೊಸ್ತಿಲನ್ನು ನಿಲ್ಲಿಸುವಾಗ ಒಳ್ಳೆ ದಿನವನ್ನು ನೋಡಿ ಹೊಸ್ತಿಲಿನ ಕೆಳಗೆ ಒಂದು ಚೂರು ಚಿನ್ನವನ್ನು ಹಾಕಿ, ಹೊಸಲು ನಿಲ್ಲಿಸುವುದುಂಟು.

ಗೃಹಪ್ರವೇಶದ ಮುನ್ನಾ ದಿನ ಮನೆಯೊಳಗೆ ಹಸುವನ್ನು ಕಟ್ಟಿಹಾಕುತ್ತಾರೆ. ಯಾವುದೇ ರೀತಿಯ ಪೀಡೆ, ಪಿಶಾಚಿ ವಾಸ ಮಾಡುತ್ತಿದ್ದರೆ ಹಸುವಿನ ಗೋಮೂತ್ರದಲ್ಲಿ ಶುದ್ಧ ಮಾಡಿದರೆ ಒಳ್ಳೆಯದೆಂಬ ನಂಬಿಕೆ ಇವರಲ್ಲಿದೆ. ಮನೆಯ ಮರಗೆಲಸ ಮಾಡಿದ ಕುಶಲಕರ್ಮಿಗೆ ಕರಾರಿನ ಹಣವನ್ನು ಸರಿಯಾಗಿ ನೀಡಬೇಕು. ಹಣ ಕೊಡುವಾಗ ಒಂದು ಪಂಚೆ, ಚೊಂಬಿನ ತುಂಬಾ ಹಾಲು, ಎಲೆ ಅಡಕೆ, ಬಾಳೆಹಣ್ಣು ತರಕಾರಿ, ಮತ್ತು ಒಂದು ಪವನ್ ಚಿನ್ನವನ್ನು ಕೊಟ್ಟು ಆತನ ಬಾಯಿಂದ ಮೂರು ಬಾರಿ "ನನಗೆ ಎಲ್ಲಾ ಸಿಕ್ಕಿದೆ ಸಂತೃಪ್ತಿಯಿದೆ" ಎಂದು ಹೇಳಿಸುತ್ತಾರೆ. ಅನಂತರ ಆತನನ್ನು ಗೌರವದಿಂದ ಕರೆದುಕೊಂಡು ಹೋಗಿ ಓಣಿಯ ತನಕ ಬಿಡುತ್ತಾರೆ. ಕೊಡವರ ಗೃಹ ಪ್ರವೇಶದಲ್ಲಿ 'ಗಣಪತಿ ಹೋಮ' ಮಾಡುತ್ತಾರೆ. ಹೋಮ ಮಾಡಿದ ಅನಂತರ ಸತ್ಯನಾರಾಯಣ ಪೂಜೆ ಮಾಡಿಸುತ್ತಾರೆ. ಸತ್ಯನಾರಾಯಣ ಪೂಜೆ ಪ್ರಾರಂಭಿಸುವ ಸಮಯದಲ್ಲಿ ಹೆಣ್ಣು ಮಗಳು ತಳಿಯಕ್ಕಿ ಬೊಳ್‌ಚ (ಅಕ್ಕಿ ತಟ್ಟೆಯಲ್ಲಿ ದೀಪ) ಹಿಡಿದು ನಿಲ್ಲುತ್ತಾಳೆ, ಹಾಗೆಯೇ ಮನೆಯ ಯಜಮಾನರು ಕೊಡವರ ಸಾಂಪ್ರದಾಯಿಕ ಉಡುಗೆಗಳಾದ ಕುಪ್ಯಚೇಲೆ, ಪೀಚೆಕತ್ತಿ, ಮಂಡೆಕ್ (ತಲೆ) ತುಣಿಯನ್ನು ಕಟ್ಟಿರುತ್ತಾರೆ. ಕೈಯಲ್ಲಿ ತೋಕ್ (ಕೋವಿ) ನ್ನು ಹಿಡಿದಿರುತ್ತಾರೆ. ಮನೆಯ ಯಜಮಾನತಿ 'ಹಣದ ಪೆಟ್ಟಿ' (ಪಣ ಪೊಟ್ಟಿ)ಯನ್ನು ತಲೆ ಮೇಲಿಟ್ಟು ನಿಂತಿರುತ್ತಾಳೆ. ಮತ್ತೊಬ್ಬ ಹೆಣ್ಣುಮಗಳು ತೊಟ್ಟಿಲು, ಮಗುವನ್ನು ಎತ್ತಿಕೊಂಡು ನಿಲುತ್ತಾಳೆ. ಹೆಣ್ಣು ಮಗು ಕಿಂಡಿಯಲ್ಲಿ ಹಾಲು ಹಿಡಿದು ನಿಂತರೆ, ಇನ್ನೊಬ್ಬರು 'ಪುತ್ತರಿ ಪಚ್ಚಿ'ಯಲ್ಲಿ ಅಕ್ಕಿಯನ್ನು, ಬತ್ತವನ್ನು, ತರಕಾರಿಯನ್ನು, ಚೊಂಬಿನಲ್ಲಿ ನೀರನ್ನು ಹಿಡಿದು ಇವರೆಲ್ಲರೂ ಕೂಡಿ ಮನೆಯ ಬಲಭಾಗದಿಂದ ಮೂರು ಸುತ್ತು ಬರುತ್ತಾರೆ. ನೆಲ್ಲಕ್ಕಿ ನಡುಬಾಡೆಯಲ್ಲಿ ಇವುಗಳನ್ನಿಟ್ಟು ದೀಪಕ್ಕೆ ಅಕ್ಕಿ ಹಾಕಿ ದೊಡ್ಡವರ ಕಾಲು ಮುಟ್ಟಿ ನಮಸ್ಕರಿಸುತ್ತಾರೆ. ಸತ್ಯನಾರಾಯಣ ಪೂಜೆ ಮುಗಿದ ಬಳಿಕ

ಪ್ರಸಾದ ನೀಡಿ ಊಟ ಬಡಿಸುತ್ತಾರೆ. ಹೊಸ ಮನೆಯಲ್ಲಿ ಅಂದಿನ ದಿನ (ದಂಪತಿ ಸಮೇತವಾಗಿ) ರಾತ್ರಿ ತಂಗಬೇಕು ಎಂಬ ನಿಯಮವಿದೆ.

ಕೊಡವರ ಬೇಟೆ ಪದ್ಧತಿ

ಆದಿಮಾನವ ತನ್ನ ಉಳಿವಿಗಾಗಿ ಮತ್ತು ಆಹಾರಕ್ಕಾಗಿ ಕಲಿತ ಪ್ರಥಮ ಪಾಠವೇ ಬೇಟೆ. ಅಂದು ಗೆಡ್ಡೆ ಗೆಣಸುಗಳ ಜೊತೆಗೆ ಮಾಂಸವನ್ನು ಬೇಟೆಯ ಮೂಲದಿಂದ ಪಡೆಯಬೇಕಾದ ಅನಿವಾರ್ಯತೆ ಇತ್ತು. ಮಾನವನ ಸಾಂಸ್ಕೃತಿಕ ಇತಿಹಾಸದ ಮೊದಲ ಹೆಜ್ಜೆ ಬೇಟೆಯಾಗಿದೆ. ಆರಂಭದಲ್ಲಿ ಜೀವನದ ಅಂಗವಾಗಿದ್ದ ಬೇಟೆ ಅನಂತರದಲ್ಲಿ ಬಲಾಢ್ಯರ ಸಿರಿವಂತರ ವಿನೋದವಾಗಿ, ಕ್ರೀಡೆಯಾಗಿ, ಯುದ್ಧಕಲೆಯಾಗಿ, ಮನೋರಂಜನೆಯಾಗಿ, ವಿವಿಧ ಆಯಾಮಗಳನ್ನು ಪಡೆದುಕೊಂಡಿತು.

ಬೇಟೆ ಅಥವಾ ಶಿಕಾರಿ ಶಬ್ದಗಳು ಪ್ರಾಣಿಗಳನ್ನು ವಿವಿಧ ತಂತ್ರಗಾರಿಕೆಯಿಂದ ಸೆರೆ ಹಿಡಿಯುವ ಸಮಾನಾರ್ಥಕ ಶಬ್ದವಾದರೂ 'ಬೇಟೆ' ಎಂಬ ಪದ ಹೆಚ್ಚು ಪ್ರಾಚೀನ ಹಾಗೂ ಸಾಹಿತ್ಯ ದಾಖಲೆ ಪಡೆದಿದೆ. ಬೇಟೆ ಕಾವ್ಯ ಸಂಪ್ರದಾಯದ ಅಂಗವಾಗಿದ್ದುದರಿಂದ ಪ್ರಾಚೀನ ಕನ್ನಡ ಕಾವ್ಯಗಳಲ್ಲೂ ಸ್ಥಾನ ಪಡೆದಿದೆ. ಹಿಂದೆ ರಾಜನು ವಿನೋದಕ್ಕಾಗಿ ಜನರೊಂದಿಗೆ ಬೇಟೆಗೆ ಹೋಗುವ ಸಂಪ್ರದಾಯವಿತ್ತು. ಆದರೆ ಇಂದು ಬೇಟೆ ಕಾನೂನಿನ ದೃಷ್ಟಿಯಲ್ಲಿ ಅಪರಾಧವಾಗಿರುವುದರಿಂದ ಬೇಟೆಯನ್ನು ಕೈ ಬಿಟ್ಟಿದ್ದಾನೆ. ಆದರೂ ನಾಲಿಗೆಯ ರುಚಿಗಾಗಿ ಮೋಸದಿಂದ ವಿವಿಧ ತಂತ್ರಗಳನ್ನು ಉಪಯೋಗಿಸಿ ನಿಸರ್ಗದಲ್ಲಿ ಸಿಗುವ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದಾನೆ. ರಾಘವಾಂಕನು ಬೇಟೆಯ ವರ್ಣನೆಯನ್ನು ತನ್ನ ಕಾಲದ ಬಳಕೆಯಲ್ಲಿದ್ದ ಭಾಷಿಕ ಪದಗಳನ್ನು ಬಳಸಿ ಹಲವು ರೀತಿಯ ಬಲೆಗಳನ್ನು ದಾಖಲಿಸಿದ್ದಾನೆ.

"ತಡೆಕೆವಲೆ ತಟ್ಟಿವಲೆ ಹಾಸುವಲೆ ಬೀಸುವಲೆ
ಕೊಡತಿವಲೆ ಕೋಲುವಲೆ ತಳ್ಳಿವಲೆ ಬಳ್ಳಿವಲೆ
ತೊಡಕುವಲೆ ತೋಱವಲೆ ತೊಟ್ಟವಲೆ ಗೂಟವಲೆ ಕಣ್ಣಿವಲೆ ಕಾಲುವಲೆಯ
ಸಿಡಿವವಲೆ ಸಿಲುಕುವಲೆ ಹಾಱವಲೆ, ಜಾಱುವಲೆ
ಬಡಿಗೆವಲೆ ಚಾಚುವಲೆ ಗಾಢವಲೆ ಗೂಢವಲೆ
ಮಡಿಕೆವಲೆ ಮಂದಸಿನವಲೆಯ ಹೊಱಗಳ ಬೇಡವಡೆ
ನೆರೆದು ದೇನೆಂಬೆನು"[೬]

ಬೇಟೆಯ ವರ್ಣನೆ ಪ್ರಾಚೀನ ಕೃತಿಗಳಲ್ಲೇ ವಿವರವಾಗಿ ಬಂದಿದೆ. ನಂಜುಂಡ ರಾಮ ಚರಿತ್ರೆಯಲ್ಲೂ ಹೆಬ್ಬಲೆ, ತೆರೆಸೀಲೆ, ಬೆಳ್ಳಾರ, ಕುಡುಗೋಲು, ಕತ್ತಿ, ಕೊಡಲಿ, ಹೇರಿಟ್ಟಿ, ಬಡಿಗೋಲು, ಇಡುಕ್ಕೈದು ಗೂಡಾರ, ಸರಾತಿ, ಪೆಟ್ಟಿಗೆ ಗಿಂಡಿ, ಪಡಿನ, ಮಂಚ ಮುಂತಾದ ಸಾಧನಗಳ ಬಳಕೆಯ ವಿವರವಿದೆ. ಮಾನವ ಭೌಗೋಳಿಕ ಹಿನ್ನೆಲೆಯಲ್ಲಿ ಹೊಸತನವನ್ನು ಹುಡುಕುತ್ತಾನೆ. ತನ್ನ ಅವಿಭಾಜ್ಯ ಅಂಗವಾದ ಪ್ರಕೃತಿಯಲ್ಲಿ ಸಂತೋಷ ಕಾಣುತ್ತಾನೆ. ಗುಡ್ಡ, ಅರಣ್ಯ, ಕೊರೆವ ಚಳಿ, ಸುರಿವ ಮಳೆಯ ನಡುವೆ ಜೀವನದ ಒಂದು ಭಾಗವಾಗಿ ಬೇಟೆ ಕಂಡುಬರುತ್ತದೆ.

ಕೊಡಗು ಬೆಟ್ಟ ಗುಡ್ಡಗಳಿಂದ, ದಟ್ಟವಾದ ಅರಣ್ಯಗಳ ಜೊತೆಗೆ ದುಬಾರೆ, ನಾಗರಹೊಳೆ, ತಡಿಯಂಡಮೋಳ್‌ಬೆಟ್ಟ, ಬ್ರಹ್ಮಗಿರಬೆಟ್ಟ, ಬೇಂಗುನಾಡು ಮುಂತಾದ ಅನೇಕ ಪರ್ವತಶ್ರೇಣಿಗಳನ್ನು ಒಳಗೊಂಡಿದ್ದು ಕಾಡು ಪ್ರಾಣಿಗಳಿಗೆ ಆಶ್ರಯ ತಾಣವಾಗಿದೆ. ಇಂತಹ ದಟ್ಟವಾದ ಅರಣ್ಯಗಳಲ್ಲಿ ಹುಲಿಗಳು, ಆನೆ ಚಿರತೆಗಳು ಕಾಡು ಹಂದಿಗಳು ವಾಸ ಮಾಡುತ್ತಿವೆ.

ಕೊಡವರು ಗುಡ್ಡಗಾಡು ಪ್ರದೇಶದಲ್ಲಿ ನೆಲೆಸಿರುವುದೇ ಅವರ ಹೋರಾಟದ ಮನೋಭಾವನೆ ವೀರ ಯೋಧರ ಪರಂಪರೆಯನ್ನು ಸಾರುತ್ತದೆ. ಇವರು ಬೇಟೆಗೆ ಹೊರಟಾಗ ಕೋವಿ, ಕೋಲುಗಳನ್ನು ಹಿಡಿದು ನರ್ತಿಸುವ ಪ್ರತಿ ನರ್ತನವು ವೀರಾವೇಶವನ್ನು ಸಾರುತ್ತದೆ. ಕೊಡವರು ಕಾಫಿ ತೋಟ, ಗದ್ದೆಗಳಿಗೆ ಹಾನಿಮಾಡುವ ಪ್ರಾಣಿಗಳನ್ನು ತಮ್ಮ ವ್ಯವಸಾಯ ರಕ್ಷಣೆಗಾಗಿ ಕೊಲ್ಲುತ್ತಿದ್ದರು. ಮುಖ್ಯವಾಗಿ ಕಾಡು ಹಂದಿ, ಮೊಲ, ಜಿಂಕೆ, ಉಡ ಮುಂತಾದ ಪ್ರಾಣಿಗಳನ್ನು ಆಹಾರಕ್ಕಾಗಿ ಬಳಸುತ್ತಿದ್ದರು.

ಕೊಡವರ ಬೇಟೆಯ ಸಿದ್ಧತೆ

ಕೊಡವರಲ್ಲಿ ಬಹಳ ಹಿಂದಿನಿಂದಲೂ ಬೇಟೆಗೆ ಪ್ರಾಧಾನ್ಯತೆ ಇದೆ. ಕೊಡವರ ಪ್ರತಿ ಮನೆಯಲ್ಲಿಯೂ ಬಂದೂಕು (ಕೋವಿ) ಇರುತ್ತದೆ. ಈ ಕೋವಿಗಳನ್ನು ಯುದ್ಧಕ್ಕೂ ಬೇಟೆಗೂ ಆತ್ಮರಕ್ಷಣೆಗೂ, ಮನೆಮಠಗಳ ರಕ್ಷಣೆಗೂ ಬಳಸುತಿದ್ದರು. 'ತಿರಿ ತೋಕ್' (ಬತ್ತಿ ಕೋವಿ) ನೆರ್‌ಪತೋಕ್, (ಮದ್ದು ತುಂಬಿಸುವ ಕೋವಿ), ಒತ್ತೆಕೊಳ(ಒಂಟಿ ನಳಿಗೆ) ಜೋಡ್‌ಕೊಳ (ಜೋಡಿ ನಳಿಗೆ-double Barrel) ಪಿಸ್ತೂಲು, ತೋಟತೋಕ್ ಮುಂತಾದ ಬಂದೂಕುಗಳಿದ್ದವು.

ಕೊಡವರು ಬೇಟೆಗೆಂದೇ ನಾಯಿಗಳನ್ನು ಸಾಕುತ್ತಾರೆ. ಕೋವಿಯ ಜೊತೆಯಲ್ಲಿ ಭರ್ಜಿ, ಈಟಿ, ಕತ್ತಿ, ಖಡ್ಗ, ಕಠಾರಿಗಳನ್ನು ಬೇಟೆಗೆ ಉಪಯೋಗಿಸುತ್ತಿದ್ದರು. ಬ್ರಿಟಿಷರಿಂದ ಪಡೆದ ಕುದುರೆಗಳನ್ನು, ಮದ್ದು ಗುಂಡುಗಳನ್ನು, ಫಿರಂಗಿಗಳನ್ನು ಬೇಟೆಗೆ ಬಳಸುತಿದ್ದರು.

'ಕೈಲು ಮುಹೂರ್ತ' ಹಬ್ಬದ ಸಮಯದಿಂದ ಸೆಪ್ಟಂಬರ್ ತಿಂಗಳಿನಿಂದ ಡಿಸೆಂಬರ್ ತಿಂಗಳ ಅಂದರೆ ಹುತ್ತರಿ ಹಬ್ಬದವರೆಗೆ ಬೇಟೆಯಾಡಲು ಯುಕ್ತ ಸಮಯವಾಗಿದ್ದು ಈ ಸಮಯದಲ್ಲಿ ರಾತ್ರಿ ವೇಳೆ ಬತ್ತದ ಗದ್ದೆಗೆ ಮೊಲ, ಕಾಡುಹಂದಿ, ಮುಳ್ಳುಹಂದಿಗಳು ಬೆಳೆಗಳನ್ನು ತಿನ್ನಲು ಬರುತಿದ್ದ ಕಾರಣ ಗದ್ದೆ ಬಯಲಿನಲ್ಲೇ ಬೇಟೆಯಾಡಿ ಗದ್ದೆಯನ್ನು ರಕ್ಷಣೆ ಮಾಡುತ್ತಿದ್ದರು. ಬೇಟೆಗಾರ ಅಯ್ಯಪ್ಪ, ಬೋಟೆ ಚವುಂಡಿ (ಬೇಟೆ ಚಾಮುಂಡಿ) ದೇವತೆಗಳಿಗೆ 'ಕೋಲ ಕಟ್ಟಿಸಿ ಬೇಟೆಗಾರರು ಈ ದೇವತೆಗಳ ರಕ್ಷಣೆ ಕೋರಿ ಬೇಟೆಗೆ ಹೋದರೆ ಒಳ್ಳೆಯ ಬೇಟೆಸಿಗುತ್ತದೆಂದು 'ಕೋಲ' ಕಟ್ಟಿಸಿ ಈತ ಯಾವ ದಿಕ್ಕನ್ನು ಸೂಚಿಸುತ್ತಾನೋ ಆ ದಿಕ್ಕಿಗೆ ಬೇಟೆಗೆ ಹೊರಡುತ್ತಿದ್ದರು.

ಬೇಟೆಯ ದೇವರು : ಬೇಟೆಗೆ ಹೊರಡುವ ಮುನ್ನ ದೇವರಿಗೆ ಪ್ರಾರ್ಥಿಸಿ ಯಾವುದೇ ಅಡ್ಡ ಆತಂಕಗಳು ಬಾರದಿರಲೆಂದು, ಕೊಡವರ ಬೇಟೆಯ

ಅಧಿದೇವತೆಯಾದ "ಅಯ್ಯಪ್ಪ ದೇವರ"ನ್ನು 'ಬೋಟೆಕಾರ ಅಯ್ಯಪ್ಪ' ಅಥವಾ 'ಸಾರ್ಥಾವು' (ಅಯ್ಯಪ್ಪ) ಎಂಬ ಪ್ರಾದೇಶಿಕ ದೇವರನ್ನು ಬೇಡುತ್ತಾರೆ. ಇನ್ನು ಕೆಲವು ಕಡೆ "ಬೇಟೆ ಚಾವುಂಡಿ" ಎಂಬ ಸ್ತ್ರೀ ದೇವತೆಯನ್ನು ಆರಾಧಿಸುತ್ತಾರೆ. ಕಾಡಿನ ಕೆನ್ನಾಯಿಗಳು ಈ ದೇವತೆಗಳ ಬೇಟೆ ನಾಯಿಗಳೆಂಬ ನಂಬಿಕೆ ಇದೆ. ಬಿಲ್ಲು ಬಾಣಗಳು ದೇವತೆಯ ಆಯುಧಗಳು. ಬುಧವಾರ ಮತ್ತು ಶನಿವಾರ ಈ ದೇವರ ಪವಿತ್ರ ದಿನಗಳಾದ್ದರಿಂದ ಕೊಡವರು ಈ ದಿನಗಳಂದು ಬೇಟೆಯಾಡುವುದಿಲ್ಲ. ಬೇರೆ ದಿನಗಳಲ್ಲಿ ಬೇಟೆಗೆ ಹೊರಡುವ ಮುನ್ನ ಪ್ರಾರ್ಥಿಸಿ ಹರಕೆ ಹೊತ್ತು ಬೇಟೆಗೆ ಹೊರಡುತ್ತಾರೆ. ಆ ಸಮಯದಲ್ಲಿ ಕೊಂಬು, ಕಹಳೆ, ವಾದ್ಯ ಡೋಲುಗಳ ಸಮೇತ ಹೊರಡುತ್ತಾರೆ. 'ಮೇದ' ಸಮುದಾಯ ಈ ಕೆಲಸವನ್ನು ನಿರ್ವಹಿಸುತ್ತದೆ.

ಬೇಟೆಯ ಮೃಗಗಳು

ಬಹಳ ಹಿಂದೆ ದಟ್ಟವಾದ ಅರಣ್ಯಗಳಲ್ಲಿ ಬಿದಿರು ಮೆಳೆಗಳು, ಕುರುಚಲು ಗಿಡಗಳು ಹೇರಳವಾಗಿದ್ದು ಇಲ್ಲಿ ಹುಲಿ, ಆನೆ, ಸಿಂಹ, ಕರಡಿ, ಜಿಂಕೆ ಕಾಡುಕೋಣ, ಮೊಲ ಚಿರತೆಗಳು, ಕಪಿ, ಕಾಡುಕುರಿಗಳು ಕಾಡುಬೆಕ್ಕು, ಕಾಡುಹಂದಿ, ಮುಳ್ಳುಹಂದಿ, ಪಾರ್‌ಬೆಕ್ಕು (ಹಾರುವ ಬೆಕ್ಕು) ಎಪ್ಪಂದಿ ಅಥವಾ ಚೆಳ್ಳವ (ಚಿಪ್ಪು ಹಂದಿ) ಕೇಮ (ಕಾಡುಕುರಿ) ಕಡ್‌ಮ (ಕಡವೆ) ಕೊಂಬ (ಸಾರಂಗ) ಒಂಟಿಗ (ಸಲಗ) ಗಳನ್ನು ಕೊಡವರು ಬೇಟೆಯಾಡುತ್ತಾರೆ. ಕಾಡೆಮ್ಮೆ, ಕಾಡುಕೋಣಗಳನ್ನು ಗುಂಡಿಕ್ಕಿ ಕೊಲ್ಲುತ್ತಿದ್ದರು.

ಹುಲಿಯನ್ನು ಕೊಂದ ಕೊಡವನಿಗೆ 'ಹುಲಿ ಮದುವೆ' 'ನರಿಮಂಗಲ' ಮಾಡಿಸುತ್ತಿದ್ದರು. ಹುಲಿಯ ಚರ್ಮವನ್ನು ಕತ್ತರಿಸಿ ಒಣಗಿದ ಬತ್ತದ ಹೊಟ್ಟು, ಹುಲ್ಲು ತುಂಬಿಸಿ ಹುಲಿ ರೂಪ ಮಾಡಿ ಹುಲಿ ಕೊಂದಾತನನ್ನು ಮದುಮಗನಂತೆ ಅಲಂಕರಿಸುತ್ತಾರೆ. ಕೊಂಬು, ಕಹಳೆ, ಡೋಲು, ದುಡಿಯ ಸಮೇತ "ನಾಡುಮಂದ್" ನಲ್ಲಿ (ಹುತ್ತರಿ ಮೈದಾನ) ಎಲ್ಲರೂ ಸೇರಿ, ಬಿಳಿಕುಪ್ಪಸ, ಕೆಂಪು ರೇಷ್ಮೆ ಚೇಲೆ, (ದಟ್ಟಿ) ಬಿಳಿರುಮಾಲು, ಸೊಂಟಕ್ಕೆ ಬೆಳ್ಳಿ–ಬಂಗಾರದ ಪೀಚೆಕತ್ತಿ (ಕಠಾರಿ) ಸೊಂಟಕ್ಕೆ ಸುತ್ತಿದ ಒಡ್ಯಾಣ, ಒಡಿಕತ್ತಿಯನ್ನು ಸಿಕ್ಕಿಸಿ, ಕೈಲಿ 'ಬಂದೂಕು' ಹಿಡಿದ ಮದುಮಗನು ತನ್ನ ಮನೆಯಿಂದ 'ಗುರುಕಾರಣ' (ಪಿತೃದೇವತೆ) ನಮಿಸುತ್ತಾ ದಾರಿಯಲ್ಲಿ ಮೆರವಣಿಗೆ, ಆರತಿಯ ಜೊತೆ ತನ್ನ ಹೆಂಡತಿಯನ್ನು ಕರೆದುಕೊಂಡು ಹೋಗುವನು. ಮದುವೆ ಮಂಟಪದಲ್ಲಿ ಹೆಂಡತಿಯ ಬದಲು ಹುಲಿಯನ್ನು ನಿಲ್ಲಿಸಿ ಎಲ್ಲರೂ ಅಕ್ಷತೆ ಹಾಕಿ ಉಡುಗೊರೆ ನೀಡಿದ ಮೇಲೆ ಅವನು 'ಹುಲಿ ಕೊಂದ ವೀರ'ನೆಂಬ ಬಿರುದನ್ನು ಪಡೆದು ಅಂದಿನಿಂದ 'ಗಲ್ಲಮೀಸೆ' ಬಿಡಲಾರಂಭಿಸುತ್ತಾನೆ. ಇದು ಕೊಡಗಿನ ಪುರುಷರ ವೀರತನದ ಸಂಕೇತ.

ಬೇಟೆಯ ವಿಧಗಳು

ಬೇಟೆಯಾಡುವ ಪ್ರಮುಖ ವಿಧಗಳೆಂದರೆ,

೧) ಒಳಿಬೋಟೆ(ಅಡಗಿ ಕುಳಿತಿರುವ ಬೇಟೆ)

೨) ಕೂಡ್ ಬೋಟೆ (ಗುಂಪು ಬೇಟೆ)

೩) ಕೆಣಿಬೋಟೆ (ತಂತ್ರದ ಬೇಟೆ)

೪) ಇರ್ ಬೋಟೆ (ಕತ್ತಲಲ್ಲಿ ಬೇಟೆ)

೧. ಒಳಿಬೋಟೆ:– ಬೇಟೆಗಾರರು ತಮ್ಮ ಅನುಕೂಲಕ್ಕೆ ತಕ್ಕಂತೆ ನಿರ್ದಿಷ್ಟಾವಧಿಯಲ್ಲಿ ಹೊಂಚು ಹಾಕಿ ಪ್ರಾಣಿಯನ್ನು ಹೊಡೆಯುವುದರಿಂದ 'ಹೊಂಚುಬೇಟೆ' 'ಒಳಿಬೋಟೆ' ಎಂಬ ಹೆಸರು ಬಂದಿದೆ. ಇದು ಮೊರಸು ಬೇಟೆಯನ್ನು ಹೋಲುತ್ತದೆ. ಪ್ರಾಣಿಗಳು ಸಂಚರಿಸುವ ವೇಳೆ, ಸ್ಥಳಗಳನ್ನು ಅರಿತು ಬೇಟೆಗಾರ ಮರಹತ್ತಿ ಕುಳಿತುಕೊಂಡು ತನಗೆ ಬೇಕಾದ ಪ್ರಾಣಿಯನ್ನು ಕಂಡ ಕೂಡಲೇ ಗುಂಡುಹಾರಿಸುತ್ತಾನೆ. ಕಾಡು ಹಂದಿ ಕುರಿ, ಹಕ್ಕಿಗಳನ್ನು ಈ ರೀತಿ ಬೇಟೆಯಾಡುವನು.

೨. ಕೂಡ್ ಬೋಟೆ (ಗುಂಪು ಬೇಟೆ): ಸುಮಾರು ಹತ್ತರಿಂದ ಹದಿನೈದು ಜನರ ಗುಂಪು ಕತ್ತಿ, ಕೋವಿ, ಬಿಲ್ಲುಗಳನ್ನು ಹಿಡಿದು, ಬೇಟೆನಾಯಿಗಳ ಜೊತೆಗೆ ಡೋಲು, ತಮ್ಮಟೆ, ಕೊಂಬು, ಕಹಳೆಯನ್ನೂದಿಕೊಂಡು 'ಬೋಟೆಕಾರ ಅಯ್ಯಪ್ಪದೇವರ'ನ್ನು ಪ್ರಾರ್ಥಿಸಿ ಬೇಟೆಗೆ ಹೊರಡುತ್ತಾರೆ. ಇವರ ಜೊತೆ ಕಾಡು ಕುರುಬರು ಇರುತ್ತಾರೆ. ಗುಂಡೇಟು ಬಿದ್ದ ಪ್ರಾಣಿಯನ್ನು ಬೇಟೆ ನಾಯಿ ಪತ್ತೆ ಹಚ್ಚಿ ಯಜಮಾನರಿಗೆ ತೋರಿಸುವ ಕೆಲಸ ಮಾಡುತ್ತದೆ. ಸಿಳ್ಳೆ ಹಾಕುವ ಸೂಚನೆಯ ಮೇರೆಗೆ ಪ್ರಾಣಿಗಳ ಧ್ವನಿಯನ್ನು ಅನುಕರಣೆ ಮಾಡಿ ಅವು ಇರುವ ನೆಲೆ ಕಂಡುಕೊಳ್ಳುತ್ತಾರೆ. ಇಂತಹ ನಿಯಮ ಕ್ರಮಕ್ಕೆ 'ಮುಂಗುಡು' ಮತ್ತು 'ಬೈಕಡು' ಎನ್ನುತ್ತಾರೆ.

ಕೆಣಿ ಬೋಟೆ (ತಂತ್ರ ಬೇಟೆ)

ಪ್ರಾಣಿಗಳು ಸಂಚರಿಸುವ ಜಾಗಗಳನ್ನು ಪತ್ತೆ ಹಚ್ಚಿ, ಜಾಡನ್ನು ಗುರುತಿಸಿ ಐದರಿಂದ ಆರು ಮಂದಿ ಬೇಟೆ ನಾಯಿಗಳ ಜೊತೆ ಮರ, ಬಂಡೆಕಲ್ಲು, ಪೊದೆಗಳ ಮಧ್ಯೆ ಕುಳಿತು ಹೊಂಚು ಹಾಕುತ್ತಿರುತ್ತಾರೆ. ಪ್ರಾಣಿಗಳು ಎಂದಿನಂತೆ ಬರುವ ಜಾಗದಲ್ಲಿ ಗುಂಡಿಗಳನ್ನು ತೋಡಿ ಕಡ್ಡಿ, ಸೊಪ್ಪುಗಳನ್ನು ಹರಡಿ ಮುಚ್ಚಿರುತ್ತಾರೆ. ಪ್ರಾಣಿಗಳು ಗುಂಡಿಗೆ ಬಿದ್ದಾಗ ಬಲೆ ಬೀಸಿ ಹಿಡಿಯುತ್ತಾರೆ. ಕೆಲವೊಮ್ಮೆ ಹಗ್ಗದಿಂದ ಉರುಲುಮಾಡಿ ಬೇಲಿಗಳಿಗೆ ಕಟ್ಟುತ್ತಾರೆ. ಪ್ರಾಣಿಗಳು ಬೇಲಿಯನ್ನು ಹಾರಲು ಬಂದಾಗ ಸಿಕ್ಕಿದರೆ ಸೆರೆ ಹಿಡಿಯುತ್ತಾರೆ.

ಕೆಲವು ಸಂದರ್ಭದಲ್ಲಿ ಮದ್ದುಗುಂಡು ತುಂಬಿದ ಕೋವಿಯ ಬಾಯಿಯ ಎದುರಿಗೆ ಸತ್ತ ಪ್ರಾಣಿಗಳ ಮಾಂಸ ಇಟ್ಟಿರುತ್ತಾರೆ. ಮಾಂಸಕ್ಕೆ ಬಾಯಿ ಹಾಕಿದ ಪ್ರಾಣಿಯು ಬಂದೂಕಿನ ಕುದುರೆಗೆ ಸಿಕ್ಕಿಸಿದ ಹಗ್ಗವನ್ನು ಜಗ್ಗಿದಾಗ ಗುಂಡು ಸಿಡಿದು ಪ್ರಾಣಿ ಸಾಯುತ್ತದೆ. ಮಾಲಿ, ಕಾಡುಹಂದಿ, ಮುಳ್ಳುಹಂದಿ, ಚಿಪ್ಪುಹಂದಿ, ಜಿಂಕೆಯನ್ನು ಈ ರೀತಿ ಬೇಟೆಯಾಡುತ್ತಾರೆ.

ಇರ್ ಬೇಟೆ (ಕತ್ತಲಲ್ಲಿ ಬೇಟೆಯಾಡುವುದು) : ಇರ್‌ಬೇಟೆ ಎಂದರೆ ಇರುಳುಬೇಟೆ (ಇರುಳು–ರಾತ್ರಿ) ರಾತ್ರಿ ಸಮಯದಲ್ಲಿ ಬೇಟೆಯಾಡುವ ಕ್ರಮವೇ 'ಇರ್‌ಬೇಟೆ', ಹಣೆಗೆ ಹೆಡ್‌ಲೈಟ್ ಕಟ್ಟಿಕೊಂಡು, ಕೈಯಲ್ಲಿ ಟಾರ್ಚ್ ಹಿಡಿದು ಬೇಟೆಯಾಡಿ ಪ್ರಾಣಿ ಪಕ್ಷಿಗಳ ಕಣ್ಣುಗಳಿಗೆ ಗುರಿ ಇಟ್ಟು ಗುಂಡು ಹೊಡೆಯುತ್ತಾರೆ.

ಕತ್ತಲಲ್ಲಿ ಕೆಲವು ಪ್ರಾಣಿಗಳಿಗೆ ಸಂಚರಿಸುವುದು ಕಷ್ಟಕರವಾದ್ದರಿಂದ ಮೊಲ, ಕಡವೆ, ಹಂದಿ ಮುಂತಾದ ಪ್ರಾಣಿಗಳು ಗದ್ದೆಗೆ ನೀರು ಕುಡಿಯಲು ಬೆಳೆಯನ್ನು ನಾಶಪಡಿಸಲು ಬಂದಾಗ 'ಇರಬೇಟೆ'ಗೆ ಹೊರಡುತ್ತಾರೆ.

"ಯಾವುದೇ ಮೃಗವನ್ನು ಬೇಟೆಯಾಡಲು ಗುಂಡು ಹೊಡೆದು ಸಾಯಿಸಿದವನಿಗೆ ಆ ಪ್ರಾಣಿಯ ಬೆನ್ನು ಹುರಿಯ ಮಾಂಸ ಕೊಡುವ ಪದ್ಧತಿ ಇದೆ. ಸತ್ತ ಪ್ರಾಣಿಯನ್ನು ಕಂಡು ಹಿಡಿದ ಮೊದಲಿಗನಿಗೆ ಒಂದು ತೊಡೆಯ ಮಾಂಸವನ್ನು ಬಹುಮಾನವಾಗಿ ಕೊಡುವ ಪದ್ಧತಿ ಕೊಡವರಲ್ಲಿದೆ. ಗುರಿ ಇಟ್ಟು ಗುಂಡು ಹೊಡೆದವನನ್ನು ಕೊಡವ ಭಾಷೆಯಲ್ಲಿ 'ಬಟ್ಟ್‌ಕಾರ' (ಗುರಿಕಾರ) ಎನ್ನುತ್ತಾರೆ."[೭]

೪. ಊರು ಬೇಟೆ: ಹುತ್ತರಿ ಹಬ್ಬದ ಸಡಗರದ ನಂತರ ಊರವರೆಲ್ಲಾ ಸೇರಿ 'ಊರು ಪತ್ತಿ' (ವನ ಭೋಜನ) ಅಥವಾ 'ಊರೊರ್ಮೆ'ಯನ್ನು ಏರ್ಪಡಿಸುತ್ತಾರೆ. ಈ ಸಂದರ್ಭದಲ್ಲಿ "ಊರ ಕೆಲವು ಜನ ಬೇಟೆಯಾಡಿ ಬರುವುದನ್ನು 'ಊರೊರ್ಮೆ ಬೋಟೆ"[೮] (ವನ ಭೋಜನದ ಬೇಟೆ) ಎನ್ನುತ್ತಾರೆ.

ಕೈಲು ಮುಹೂರ್ತ ಹಬ್ಬದ ದಿನ ಆಯುಧ ಪೂಜೆ ಮಾಡದೆ ಬೇಟೆಗೆ ಹೋಗುವಂತಿಲ್ಲ. ಮದುವೆ ಹಿಂದಿನ ದಿನ 'ಊರ್ ಕೊಡುವ' ದಿನಕ್ಕೆ ಬೇಟೆಯಾಡಿ ಮಾಂಸ ತರುವುದಕ್ಕೆ 'ಮಂಗಲ ಬೋಟೆ' (ಮದುವೆ ಶಿಕಾರಿ) ಎನ್ನುತ್ತಾರೆ.

ಊರ ಹಬ್ಬದಲ್ಲಿ 'ದೇವಕ್‌ಟ್ಟ್' (ಹಬ್ಬದ ನಡವಳಿಕೆ) ಹಾಕಿದಾಗ ಹಬ್ಬ ಮುಗಿಯುವವರೆಗೂ ಶಿಕಾರಿಗೆ ಹೋಗುವಂತಿಲ್ಲ. ಗುಂಡೇಟು ತಗುಲಿ ಸತ್ತ ಪ್ರಾಣಿಯನ್ನು ನೋಡಿ 'ಅಯ್ಯೋ ಪಾಪ!' ಎಂದು ಉದ್ಗರಿಸಿದರೆ ಆತನನ್ನು ಬೇಟೆಯ ಗುಂಪಿನಿಂದ ಮತ್ತು ಭೋಜನ ಕೂಟದಿಂದ ಹೊರಹಾಕುತ್ತಾರೆ. ಬೇಟೆಯಿಂದ ತಂದ ಮಾಂಸವನ್ನು ನೆರೆ ಹೊರೆಯವರಿಗೆ ಹಂಚಿ ತಿನ್ನುವ ಸಂಸ್ಕಾರ ಇವರದು.

ಇತರ ಬೇಟೆ

೧) ಹಕ್ಕಿಬೇಟೆ ೨) ಜೇನುಬೇಟೆ ೩) ಮೀನುಬೇಟೆ ೪) ಏಡಿಬೇಟೆ

ಕೊಡವರು ಕೊಡಗಿನ ಬೆಟ್ಟಗುಡ್ಡ, ತೋಟ ಗದ್ದೆಗಳ, ಕಾನನದ ಮಡಿಲಲ್ಲಿ, ನೀರ ತಡಿಯಲ್ಲಿ ಗಿಡ ಮರದ ಪೊದರುಗಳಲ್ಲಿ ಜೀವನ ಸಾಗಿಸುತ್ತಿರುವ ಹಕ್ಕಿ ಪಕ್ಷಿಗಳನ್ನು ಹಿಡಿದು ಆಹಾರ ರೂಪದಲ್ಲಿ ಬಳಸುತ್ತಾರೆ. ಬೇಟೆಯಾಡಿದ ಹಕ್ಕಿಗಳನ್ನು ಕಾಡಿನಲ್ಲಿಯೇ ಸುಟ್ಟು ತಿಂದರೆ, ಕೆಲವನ್ನು ಔಷಧಿಯ ರೂಪದಲ್ಲಿ ಉಪಯೋಗಿಸುವರು.

ಕೊಡಗಿನಲ್ಲಿ ಕಂಡುಬರುವ ಹಕ್ಕಿಯ ಪ್ರಭೇಧಗಳು ಗಮನ ಸೆಳೆಯುತ್ತವೆ. "ಕೊಡಗಿನ ಹಳ್ಳಿ ಪ್ರದೇಶದಲ್ಲಿ ಕಾಣೆ, ಕೋಗಿಲೆ, ಗಿಳಿ, ಕೆಂಬೂತ, ಪಾರಿವಾಳ ಗುಬ್ಬಿ, ಗೊರವಂಕ ಮುಂತಾದವುಗಳಿವೆ. ಕಾಡಿನಲ್ಲಿ ನವಿಲು, ಕಾಡುಕೋಳಿ ಕರ್‌ಂಕೋಳಿ, ಕೆದಕೋಳಿ, ಕಾಡುಬಾತು, ಗೂಬೆ, ಕುಟ್ಟುಮ (ಸಣ್ಣಜಾತಿ ಗೂಬೆ), ಕರಿಕರ್‌ಂಗೊಟ್ಟೆ (ಗಿಡುಗ), ಕಿರ್ಕಟ (ಹದ್ದು), ಪೆರ್ ಕಿರ್ಕಟ(ಗರುಡ),ಅಡೆ ಪದ್ದ್ (ರಣಹದ್ದು),

ಕರ್ತ ಪೋಳೆ(ಕಪ್ಪು ಕೊಕ್ಕರೆ), ಮಂಜಪೋಳೆ(ಹಳದಿ ಕೊಕ್ಕರ), ಪುಂಡಕೋಳಿ (ಬಿದಿರುಕಾಡಿನ ಕೋಳಿ), ಕೆಂಗೊಳಕ, ಉಪ್ಪು ತೀತಿಪಕ್ಷಿ, ಮಳೆ ಪಕ್ಷಿ(ಜಾತಕ ಪಕ್ಷಿ) ಮೀಂಗೊತ್ತಿ (ಮಿನ್ಚುಳ್ಳಿ) ನೀರ್‌ಕಾಗೆ, ನೀರ್ಕೋಳಿ (ಕೆರೆಬಾತು), ಹೆಬ್ಬಾತು, ಮಣಿತೋರೆ(ಸೋರೆಹಕ್ಕಿ), ಪೈಂದೋರೆ, ಓಣಿಕುಯಿಕ, ಚಿಟ್ಟೆ ಪಕ್ಷಿ, ನೊಜೆ ಪಕ್ಷಿ, ಕುರುಡ ಪಕ್ಷಿ, ಭೀಮರಾಜ ಪಕ್ಷಿ, ಮಡಿವಾಳ ಪಕ್ಷಿ, ಬಾಲಾಟ ಚೆಂಬೆ, ಮರಕೊಟ್ಟ(ಮರ ಕುಟ್ಟಿಗ), ಕೊಟ್ಟ್‌ಮುಡಿಚ, ಕೋಂಬಕ್ಷಿ(ಕಾಡುಪರಿಮಳ), ಕಿತೋಳ ಪಕ್ಷಿ(ಕೆಂಪು ಹಕ್ಕಿ) ಮಂಜಕೊಟ್ಟ, ಕುಡಕ್‌ಪಕ್ಷಿ, ಕುಟ್ರುಪಕ್ಷಿ, ಜಡ್ಡ್‌ಕುರುಳಿ(ಸತ್ತ ಪ್ರಾಣಿಗಳನ್ನು ಕಾಗೆ ಹದ್ದುಗಳ ಜೊತೆಗೂಡಿ ತಿನ್ನುವ ಹಕ್ಕಿ), ತೊಂಬಕೆ ಪಕ್ಷಿ, ಕಾನ(ಕಾಳಿಂಗ ಹಕ್ಕಿ), ಪಡ್‌ಚಿ ತೋರ್(ಕಾಡುಸೋಕಿ ಹಕ್ಕಿ), ಗೀಜಗನಹಕ್ಕಿ, ಮಲೇರಪ್ಪ ಹಕ್ಕಿ, ತಿತ್ತಕಂಡ ಪಕ್ಷಿ, ಬೊತ್ತ್‌ಲಳ್‌ಪ ಪಕ್ಷಿ, ತೊಟ್ಟಿಲು ಗೂಬೆ, ತನ್ನರಿ ಕೊಟ್ಟ, ಮೊಟ್ಟೆ ಕಣ್ ಪಕ್ಷಿ, ಕಲಾಯಿಕಾರ ಹಕ್ಕಿ ಮುಂತಾದ ಬಗೆಗಳಿವೆ.”[೯]

ಕೊಡಗಿನಲ್ಲಿ ಪ್ರಾಣಿ ಬೇಟೆಯಲ್ಲಿ ಇರುವಷ್ಟು ಆಸಕ್ತಿ ಪಕ್ಷಿ ಬೇಟೆಯಲ್ಲಿ ಇದ್ದಂತಿಲ್ಲ. ದನ ಮೇಯಿಸುವ ಹುಡುಗರು, ಕೆಲವು ಪಕ್ಷಿಗಳನ್ನು ರಬ್ಬರ್ ಬಿಲ್ಲಿನಿಂದ ಒಡೆದು ಕೊಲ್ಲುತ್ತಾರೆ. ಕಾಡಿನಲ್ಲಿ ಗೆಡ್ಡೆ ಗೆಣಸನ್ನು ಹುಡುಕುವ ಕುರುಬರು, ಎರವರು ಕುಡಿಯರು ಹೆಚ್ಚು ಪಕ್ಷಿ ಬೇಟೆಯಾಡುತ್ತಾರೆ. ಕೆಲವರು ಮೋಜಿಗಾಗಿ ಹಕ್ಕಿಗಳನ್ನು ಬೀಳಿಸಿ ಸುಟ್ಟು ತಿನ್ನುತ್ತಾರೆ. 'ಗೂಬೆ'ಯ ಮಾಂಸ ಮತ್ತು ತುಪ್ಪವನ್ನು ತಿನ್ನುವುದರಿಂದ 'ಇರುಳು ಕುರುಡು' (ಟಿರ್ಘಣ–ಛಟುಟಿಜಟಿಛ) ಹೋಗುತ್ತದೆಂದು, 'ಕೆಂಬೂತ' (ಚೊಂಬುಕ) ತಿಂದರೆ ಪಿತ್ತಜನಕಾಂಗದ ಕಾಯಿಲೆ ವಾಸಿಯಾಗುತ್ತವೆಂದು ಬೇಟೆಯಾಡುತ್ತಾರೆ.

ಕಾಡಿನ ಒಡೆಯ 'ಅಯ್ಯಪ್ಪ ದೇವರು' ವನದೇವತೆಯನ್ನು ಮದುವೆಯಾದಾಗ ಹಕ್ಕಿಗಳು ಈ ರೀತಿ ವಾದ್ಯ ನುಡಿಸಿವೆ ಎಂಬುದನ್ನು ಈ ಕೆಳಗಿನ ಹಾಡಿನಲ್ಲಿ ಗುರುತಿಸಬಹುದು.

“ಮರಕೊಟ್ಟ ಪಕ್ಷಿ ಚಂಡೆ ಕೊಟ್ಟ್‌ಚಿ,
ಕಾನ ಪಕ್ಷಿ ಚೀನಿ ಉರ್ ಪ್‌ಚಿ
ಕೊಟ್ಟ್ ಮುಡ್‌ಚ ತಡಂಬು ಎಡತತ್
ಬಾಲಾಟಿ ಚೆಂಜಿಕ್ ತಿರೋಳ ಬಾತ್
ದೇವತೆಯಡ ಮಂಗಲ ಗೌಜಲಾಚಿ”

ಜೇನು ಬೇಟೆ

ಮಾನವ ತನ್ನ ಜೀವನಕ್ಕೆ ಅನೇಕ ತರಹದ ಪ್ರಾಣಿಗಳ ಜೊತೆಗೆ ಸಿಹಿಯಾದ ಜೇನನ್ನು ಬಳಸಿಕೊಂಡಿದ್ದಾನೆ, ಕೊಡಗಿನಲ್ಲಿ ಜೇನುಬೇಟೆ ಪ್ರಧಾನವಾಗಿಲ್ಲದಿದ್ದರೂ ಉಪ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಕೊಡಗಿನ ಅರಣ್ಯಗಳಲ್ಲಿ ಹೆಜ್ಜೇನುಗಳು ಗೂಡುಕಟ್ಟುತ್ತವೆ.

ಜೇನುಗಳಲ್ಲಿ ತೊಡವೆ ಹೆಜ್ಜೇನು, ಕೋಲುಜೇನು, ದಂಬೆಕೋಲು ಜೇನು, ಮಿಸರಿ ಅಥವಾ ಮುಜೆಂಟಿ ಜೇನು, ಪೆಟ್ಟಿಗೆ ಜೇನು, ಮಡಿಕೆ ಜೇನು, ಹುತ್ತಜೇನು, ಎಂಬ ಬಗೆಗಳಿವೆ. ಹೆಜ್ಜೇನು ಮರಗಳಲ್ಲಿ, ಪೊಟರೆಗಳಲ್ಲಿ ಕೋಲುಜೇನು ಇರುತ್ತವೆ.

ಇವುಗಳ ಗೂಡು ಅರ್ಧ ಚಂದ್ರಾಕಾರವಾಗಿರುತ್ತವೆ. ಮುಜೆಂಟೆ ಜೇನು ಮನೆ ಗೋಡೆ ಸಂಧಿಯಲ್ಲಿರುತ್ತದೆ. ಮಡಕೆಜೇನು ಮಣ್ಣಿನ ಮಡಕೆಯೊಳಗೆ ಗೂಡು ಕಟ್ಟಿದರೆ, ಹುತ್ತ ಜೇನುಹುತ್ತದ ಸುತ್ತು ಕಟ್ಟುತ್ತವೆ.

ಜೇನುಗೂಡಿನಿಂದ ಜೇನು ಕಸಿಯಲು ಅನುಭವ ಬೇಕಾಗುತ್ತದೆ. ಜೇನು ಬೇಟೆಯನ್ನು ಮಲೆಕುಡಿಯರು, ಜೇನುಕುರುಬರು ಚೆನ್ನಾಗಿ ಮಾಡುತ್ತಾರೆ. ಜೇನು ಬೇಟೆಯಾಡುವಾಗ ಪರಿಶುದ್ಧತೆ ಮುಖ್ಯವಾಗಿರುತ್ತದೆ. ಬೆವರಿನ ವಾಸನೆ ಇದ್ದರೆ ಜೇನು ನೊಣಗಳು ಹೆಚ್ಚಾಗಿ ಕಡಿಯುತ್ತವೆ. ಹಗ್ಗ, ಏಣಿ, ದೀಪ, ಒಣಗಿದ ಹುಲ್ಲು, ಕಾವಂಗ(ಎರಡು ಹಿಡಿಯಿರುವ ಪಾತ್ರೆ) ಮುಂತಾದ ಪರಿಕರಗಳು ಜೇನು ಬೇಟೆಗೆ ಅತ್ಯವಶ್ಯಕವಾಗಿವೆ. ಕೋಲಿನ ತುದಿಗೆ ಹುಲ್ಲನ್ನು ಸುತ್ತಿ ಹೊಗೆಯಾಡುವ ರೀತಿ ಬೆಂಕಿ ಹತ್ತಿಸಿ ಜೇನುಗೂಡಿನ ಬಳಿ ಹಿಡಿಯಾಗುತ್ತಾರೆ ಇದಕ್ಕೇ 'ದಂದಿ' ಎಂದು ಕರೆಯುತ್ತಾರೆ.

ಹೊಗೆಯ ಘಾಟಿಗೆ ನೊಣಗಳು ಹಾರುತ್ತವೆ. ಆ ಸಮಯದಲ್ಲಿ ಗೂಡನ್ನು ಕತ್ತರಿಸಿ ಪಾತ್ರೆಯಲ್ಲಿ ಇಟ್ಟು ಹಗ್ಗದಿಂದ ಕೆಳಗಿಳಿಸುತ್ತಾರೆ. ಹಾರಿದ ನೊಣಗಳು ಕೆಲ ಸಮಯ ಅಲ್ಲೇ ಚುಚ್ಚಲು ಬರುತ್ತವೆ. ಕೆಲವು ಜೇನು ನೊಣಗಳು ತಮ್ಮ ರಾಣಿ ಜೇನನ್ನು ಸುತ್ತುವರೆದು ಈ ಎಲ್ಲಾ ನೊಣಗಳು ಒಂದಡೆ ಸೇರಿ ತಮ್ಮ ಮುಂದಿನ ಹೊಸ ನೆಲೆಯನ್ನು ಹುಡುಕುತ್ತವೆ.

ಕೊಡಗಿನಲ್ಲಿ ಹಿಂದೆ ಮಡಿಕೆಗಳಲ್ಲಿ ಜೇನು ಸಾಕುತ್ತಿದ್ದರು. ಇತ್ತೀಚೆಗೆ ಪೆಟ್ಟಿಗೆಯಲ್ಲಿ ಜೇನು ಸಾಕಣೆ ಮಾಡುತಿದ್ದಾರೆ. ಕೊಡಗಿನ ಭಾಗಮಂಡಲದಲ್ಲಿ ಜೇನು ಕೃಷಿ ಹೆಚ್ಚು ಕಂಡುಬರುತ್ತದೆ. ಮಳೆಗಾಲದ ಸಮಯವನ್ನು ಬಿಟ್ಟು ಕೊಡಗಿನಲ್ಲಿ ಎಲ್ಲಾ ಕಾಲದಲ್ಲಿ ಜೇನು ಬೇಟೆ ಮಾಡುತ್ತಾರೆ. ಹೆಜ್ಜೇನು ವರ್ಷಕ್ಕೊಮ್ಮೆ ಮಾತ್ರ ದೊರೆಯುತ್ತದೆ. 'ಮಲೆ ತಮ್ಮಚ್ಚ' ಎಂಬ ಬೇಟೆ ದೇವರಿಗೆ ಬಿಲ್ಲು ಬಾಣ, ಮಾಂಸದ ನೈವೇದ್ಯ ಮಾಡಿ, ವರ್ಷಕ್ಕೊಮ್ಮೆ ಹಂದಿ, ಕೋಳಿ ಬಲಿ ಕೊಡುವುದರ ಮೂಲಕ ಶಾಂತಿ ಪೂಜೆ ಮಾಡಿ ಜೇನು ಬೇಟೆಯಾಡುವುದು ರೂಢಿ. ಕೊಡಗಿನ ಜೇನು ರುಚಿಕರವಾಗಿದ್ದು ವೈದ್ಯಕೀಯ ಗುಣವನ್ನು ಹೊಂದಿದೆ. ಶೀತ, ಕೆಮ್ಮು ಮತ್ತು ಹಬ್ಬದ ನೈವೇದ್ಯಕ್ಕೆ ಉಪಯೋಗಿಸುತ್ತಾರೆ.

ಈಗ ಜೇನು ಕೃಷಿ ತೋಟಗಾರಿಕಾ ಇಲಾಖಾ ವ್ಯಾಪ್ತಿಗೆ ಸೇರಿದೆ. ಕಾಫಿ ಬೆಳೆಯಿಂದಾಗಿ ಕಾಡು ನಾಶವಾಯಿತು. ಕಟ್ಟೆರೋಗ ಹಾಗೂ ಬೆಲೆ ಕುಸಿತದಿಂದ ಏಲಕ್ಕಿ ಕೃಷಿಯೂ ಸೊರಗಿತು. ಇದರಿಂದಾಗಿ ಮತ್ತು ಜೇನು ಹುಳುಗಳು ಕೆಲವು ವೈರಸ್‌ನಿಂದ ನಾಶ ಹೊಂದಿದ ಕಾರಣ ಇಂದು ಜೇನು ಉತ್ಪಾದನೆ ತೀವ್ರವಾಗಿ ಕುಸಿದಿದೆ. ಮೇಲಿನ ಎರಡು ಸಹಕಾರ ಸಂಘಗಳು ಮತ್ತು ತೋಟಗಾರಿಕಾ ಇಲಾಖೆ ಜೇನು ಕೃಷಿಯನ್ನು ಪುನಶ್ಚೇತನಗೊಳಿಸಲು ತೀವ್ರ ಪ್ರಯತ್ನ ನಡೆಸುತ್ತಿವೆ. ಕೊಡಗಿನ ಜೇನಿಗೆ ಭಾರಿ ಬೇಡಿಕೆ ಇದೆ. ಆದರೆ ಪೂರೈಕೆ ಇಲ್ಲದ ಕಾರಣ ಈ ಸಹಕಾರ ಸಂಘಗಳು ಹೊರ ರಾಜ್ಯಗಳಿಂದ ಜೇನನ್ನು ತರಿಸುತ್ತಿವೆ.

ರಾಜ್ಯದ ಏಕೈಕ ಜೇನು ಕೃಷಿ ತರಬೇತಿ ಕೇಂದ್ರ ಭಾಗಮಂಡಲದಲ್ಲಿದೆ. ಇಲ್ಲಿ ತರಬೇತಿಯ ಜೊತೆಗೆ ರೈತರಿಗೆ ಮತ್ತು ಪ್ರವಾಸಿಗರಿಗೆ ಜೇನು ಕೃಷಿಯ ಬಗ್ಗೆ

ತಾಂತ್ರಿಕ ಮಾಹಿತಿ ನೀಡಲಾಗುತ್ತಿದೆ. ಈಲ್ಲೆಯ ಕೋರಂಗಾಲ, ಭಾಗಮಂಡಲ, ಗಾಳಿಬೀಡು, ಕರಿಕೆ, ಕೋಪಟ್ಟಿ, ಶಾಂತಳ್ಳಿ, ಮಾದಾಪುರ, ಜಕ್ಕನಳ್ಳಿ, ಬಿರುನಾಣಿ ಕೆದಮುಳ್ಳೂರು ಮತ್ತು ಬಿ.ಶೆಟ್ಟಿಗೇರಿ ಗ್ರಾಮಗಳಲ್ಲಿ ಒಟ್ಟು ೧೧ ಜೇನು ಮಧುವಿನ ಕೇಂದ್ರಗಳನ್ನು ಹೊಂದಿದ್ದು, ಇಲ್ಲಿ ರೈತರಿಗೆ ಜೇನು ಕೃಷಿಯ ಬಗ್ಗೆ ಪ್ರಾತ್ಯಕ್ಷತೆ ಘಟಕಗಳನ್ನು ಏರ್ಪಡಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದ ಜನ ಜೇನು ಸಾಕಾಣಿಕೆಯನ್ನು ಉಪ ಕಸುಬಾಗಿ ಸ್ವೀಕರಿಸಿದರೆ ಅವರ ಆರ್ಥಿಕ ಮಟ್ಟ ವೃದ್ಧಿ ಆಗಲು ಸಾಧ್ಯ.

ಮೀನುಬೇಟೆ

ಪುರಾಣ ಕಾಲದಿಂದಲೂ ಮೀನು ಮಾನವನಿಗೆ ಪರಿಚಿತವಾದ ಜಲಚರ ಶ್ರೀಮನ್ ನಾರಾಯಣ ಮತ್ಸ್ಯಾವತ್ತಾರ ಎಂಬ ಉಲ್ಲೇಖ ಪುರಾಣಗಳಲ್ಲಿದೆ. ಕೆರೆ, ಕುಂಟೆ ಗದ್ದೆ ಬಾವಿ, ನದಿ, ಸಮುದ್ರ ಎಲ್ಲೆಡೆ ಮೀನುಗಳಿರುತ್ತವೆ. ಮಳೆಗಾಲ ಆರಂಭವಾಗುತಿದ್ದಂತೆ ಮೀನು ಬೇಟೆಗೆ ಚಾಲನೆ ದೊರೆಯುತ್ತದೆ. ಕೊಡವರು ಮೂಲತಃ ಕೃಷಿಕರಾದ್ದರಿಂದ ಗದ್ದೆಗಳಲ್ಲಿ ಏಡಿ, ಮೀನನ್ನು ಹಿಡಿದು ಆಹಾರಕ್ಕೆ ಉಪಯೋಗಿಸುತ್ತಾರೆ. ಕೊಡವರು ಊಟಕ್ಕೆ ಉಪ್ಪಿನಕಾಯಿ ಯಂತೆ ಮೀನನ್ನು ಬಳಸುತ್ತಾರೆ. ಹಸಿಮೀನು ದೊರೆಯದಿದ್ದರೆ ಒಣಗಿಸಿಟ್ಟ ಮೀನನ್ನು ಸುಟ್ಟಾದರೂ ಊಟಕ್ಕೆ ನೆಂಚುತ್ತಾರೆ. ಮಳೆಗಾಲದಲ್ಲಿ ಗದ್ದೆಯಲ್ಲಿ ಹೇರಳವಾಗಿ ಸಿಗುವ ಮೀನನ್ನು ಹಲವಾರು ತಂತ್ರದ ರೂಪದಲ್ಲಿ ಹಿಡಿಯುತ್ತಿದ್ದರು. ಗದ್ದೆಯಲ್ಲಿ ಸಿಗುವ ಕೊಯಿಲೆ ಮೀನು ಅತ್ಯಂತ ರುಚಿಯಾಗಿದ್ದು, ಇತ್ತೀಚೆಗೆ ರಾಸಾಯನಿಕ ಗೊಬ್ಬರ, ಕ್ರಿಮಿಕೀಟನಾಶಕಗಳ ಬಳಕೆಯಿಂದ ಮೀನುಗಳು ಕಣ್ಮರೆಯಾಗುತ್ತಿವೆ.

ಕೂಳಿ ಹಾಕುವುದು

ಗದ್ದೆಯಲ್ಲಿ ಮೀನು ಹಿಡಿಯುವಾಗ ನೀರು ಬರುವ ಜಾಗದಲ್ಲಿ ಕೂಳಿಯನ್ನಿಡುತ್ತಾರೆ. 'ಕೂಳಿ' ಎಂಬುದು ವಾಡಿಕೆಯಲ್ಲಿ 'ಕುಣಿ' ಎಂದಾಗಿದೆ. ಕೂಳಿಯಲ್ಲಿ 'ಏರುಗೂಳಿ' ಮತ್ತು 'ಇಳಿಗೂಳಿ' ಎಂಬ ಬಗೆಗಳಿವೆ. ಗದ್ದೆಗೆ ಮಳೆಗಾಲದಲ್ಲಿ ಹೊಸ ನೀರು ಬಂದಾಗ ಮೀನುಗಳು ಹೆಚ್ಚಾಗಿ ಬರುತ್ತವೆ. ಒಮ್ಮೆ ಕೂಳಿಯಲ್ಲಿ ಸೇರಿದ ಮೀನುಗಳು ಹೊರಕ್ಕೆ ಬರಲಾಗುವುದಿಲ್ಲ. ಗಂಟೆಗೊಮ್ಮೆ ಕೂಳಿಯಲ್ಲಿ ಸಿಲುಕಿರುವ ಮೀನನ್ನು ಶೇಖರಿಸುತ್ತಾರೆ. ಕೂಳಿ ಬೇಟೆ ವಿಧಾನವು ಸುಲಭದ ಮೀನು ಶಿಕಾರಿಯಾಗಿದೆ.

ಬಲೆ ಹಾಕುವುದು : ನದಿ, ಕೆರೆ, ಕಟ್ಟೆಗಳ ವಿಸ್ತಾರ ನೋಡಿ ಬಲೆಯನ್ನು ನೆಯ್ದು ನೈಪುಣ್ಯತೆಯಿಂದ ಉಪಯೋಗಿಸುತ್ತಾರೆ. ಬಲೆಯು ನೀರಿನಲ್ಲಿ ಅರ್ಧ ಚಂದ್ರಾಕಾರದಲ್ಲಿ ಹರಡಿಕೊಂಡಿರುವಂತೆ ಬೀಸಬೇಕು, ಬೀಸಿದ ಬಲೆಯ ಎದುರು ಭಾಗದಿಂದ ನೀರನ್ನು ಬಡಿಯುತ್ತಾ ಮೀನುಗಳು ಬಲೆಯ ಕಡೆ ಬಂದಾಗ ತಕ್ಷಣ ಅರ್ಧ ಚಂದ್ರಾಕಾರವಾಗಿದ್ದ ಬಲೆಯನ್ನು ವೃತ್ತಾಕಾರಕ್ಕೆ ಮಡಚುತ್ತಾರೆ. ಬಲೆಯೊಳಗೆ ಸಿಲುಕಿದ ಮೀನುಗಳು ಹೊರ ಬರದಂತೆ ಬಲೆಯನ್ನು ಎಳೆದು ದಂಡೆಗೆ ತಂದು ಸಿಕ್ಕ ಮೀನನ್ನು ಬುಟ್ಟಿಗೆ ತುಂಬುತ್ತಾರೆ. 'ಬೀಸುಬಲೆ' ಎಂಬ ವಿಧಾನದಲ್ಲಿ ಒಬ್ಬರೇ ಬಲೆ ಬೀಸಿ ಮೀನು ಬೇಟೆಯಾಡಬಹುದು.

ಗಾಳ ಹಾಕುವುದು

ಕೆರೆ ಕಟ್ಟೆ, ನದಿಯ ತಡಿಯಲ್ಲಿ ಕುಳಿತು ಗಾಳಕ್ಕೆ ಎರೆಹುಳುಗಳನ್ನು ಸಿಕ್ಕಿಸಿ ನೀರಿನೊಳಕ್ಕೆ ಬಿಡುತ್ತಾರೆ. ದಾರದ ಒಂದು ತುದಿಗೆ ಗಾಳವಿರುತ್ತದೆ. ಮತ್ತೊಂದು ತುದಿಯನ್ನು ಬಿದಿರಿನ ಕಡ್ಡಿಗೆ ಕಟ್ಟಿರುತ್ತಾರೆ. ಗಾಳವಿರುವ ಕಡೆಯಿಂದ ಒಂದೂವರೆ ಅಡಿ ಅಥವಾ ಎರಡು ಅಡಿ ಮೇಲಕ್ಕೆ ಬೆಂಡನ್ನು ಕಟ್ಟಿರುತ್ತಾರೆ. ಗಾಳಕ್ಕೆ ಸಿಕ್ಕಿಸಿರುವ ಎರೆ ಹುಳುವನ್ನು ತಿನ್ನಲು ಬಂದ ಮೀನನ್ನು ಗಾಳ ಹಿಡಿದು ಜಗ್ಗುತ್ತದೆ. ಹೀಗೆ ಬಹಳ ನೈಪುಣ್ಯತೆಯಿಂದ ಗಾಳ ಹಾಕಿ ಮೀನು ಶಿಕಾರಿ ಮಾಡಬೇಕಾಗುತ್ತದೆ.

ತೋಟ ಹಾಕುವುದು: ನದಿಗಳಲ್ಲಿ ಮೀನುಗಳು ಹೆಚ್ಚು ಇರುವ ಸಂದರ್ಭದಲ್ಲಿ ನೀರು ಕಡಿಮೆಯಾದಾಗ ಸಿಡಿಮದ್ದನ್ನು ಹಾಕುತ್ತಾರೆ. ಇದನ್ನು 'ತೋಟ' ಹಾಕುವುದು ಎನ್ನುವರು. ತೋಟಕ್ಕೆ ಬೆಂಕಿಕೊಟ್ಟು ಹೊಳೆಗೆ ಎಸೆದ ತಕ್ಷಣ ಗುಂಡು ಸಿಡಿದು ಮೀನುಗಳು ಸಾಯುತ್ತವೆ. ಅನಂತರ ಹೊಳೆಯಲ್ಲಿ ಮುಳುಗಿ ಮೀನುಗಳನ್ನು ಶೇಖರಿಸುತ್ತಾರೆ. ಅತಿ ದೊಡ್ಡ ಮೀನುಗಳಿಗೆ ಕೋವಿಯಿಂದ ಗುಂಡು ಹೊಡೆದು ಬೇಟೆಯಾಡುವ ಪದ್ಧತಿ ಕೊಡವರಲ್ಲಿದೆ.

ಗೋರಿ ಹಾಕುವುದು : ಮಕ್ಕಳು ಈ ತೋಡುಗಳಲ್ಲಿ ಮೀನು ಹಿಡಿಯುತ್ತಾರೆ. ಬೆತ್ತದಿಂದ ಮಾಡಿದ ಗೋರಿಗಳನ್ನು ಉಪಯೋಗಿಸಿ ಸಣ್ಣ ಕಾಲುವೆ, ತೋಡುಗಳಲ್ಲಿ ಮೀನು ಹಿಡಿಯುತ್ತಾರೆ. ಮೀನುಗಳಲ್ಲಿ ಒಂದೇ ಕಡೆ ಸೇರಿ ಗೋರಿಗಳಿಗೆ ಸಿಲುಕಿದಾಗ ಮೇಲಕ್ಕೆತ್ತಿ ಮೀನುಗಳನ್ನು ತುಂಬಿಕೊಳ್ಳುತ್ತಾರೆ. ಇತ್ತೀಚೆಗೆ ಗದ್ದೆಯಲ್ಲಿ ನೀರಿನ ಪ್ರಮಾಣ ತೋಡುಗಳು ಮಾಯವಾಗಿ, ಸಮಯದ ಅಭಾವದಿಂದ ಕೆಲವು ಬೇಟೆಗಳು ಅವನತಿಯತ್ತ ಸಾಗುತ್ತಿದೆ.

ಕೊಡಗಿನಲ್ಲಿ ಮೀನುಗಾರಿಕೆಗೆ ವಿಫುಲವಾದ ಅವಕಾಶವಿದೆ. ಜಿಲ್ಲೆಯಲ್ಲಿ ಹರಿಯುವ ಕಾವೇರಿ, ಲಕ್ಷ್ಮಣತೀರ್ಥ, ಬರಪೊಳೆ, ಕೂಟುಹೊಳೆ ನದಿಗಳು ಸಹಾಯಕವಾಗಿವೆ. ಜಿಲ್ಲೆಯಲ್ಲಿ ಎರಡು ಜಲಾಶಯಗಳಿದ್ದು, ಹಾರಂಗಿ ೧೮೮೬ (ಹೆ) ಜಲವಿಸ್ತೀರ್ಣ ಹಾಗೂ ಚಿಕ್ಲಿ ಹೊಲೆ ೧೦೫ (ಹೆ) ಜಲ ವಿಸ್ತೀರ್ಣ, ಇವುಗಳ ಮೀನು ಪಾಶೂವಾರು ಹಕ್ಕನ್ನು ಇಲಾಖೆಯೇ ವಿಲೇವಾರಿ ಮಾಡುತ್ತಿದೆ. ಅಲ್ಲದೇ ಜಿಲ್ಲೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಸೇರಿದ ಒಟ್ಟು ೫೭೧ ಕೆರೆಗಳಿದ್ದು, ೩೭೩ (ಹೆ) ಜಲ ವಿಸ್ತೀರ್ಣ ಹೊಂದಿದೆ. ಅಂದಾಜು ೨೫೦೦ ಖಾಸಗಿ ಕೆರೆಗಳಿದ್ದು, ೨೪೮ (ಹೆ) ಜಲ ವಿಸ್ತೀರ್ಣ ಹೊಂದಿದೆ.

ಇಲಾಖೆಯಿಂದ ವಾರ್ಷಿಕ ಅಂದಾಜು ೩೦ ಲಕ್ಷ ವಿವಿಧ ತಳಿಗಳ ಮೀನುಮರಿಗಳನ್ನು ವಿತರಿಸಲಾಗುತ್ತಿದೆ. ವರ್ಷದ ಅಂತ್ಯಕ್ಕೆ ೮೦೦ ಟನ್ ಮೀನ್ ಉತ್ಪಾದನೆಯಾಗುತ್ತಿದೆ. ಜಿಲ್ಲೆಯಲ್ಲಿ ೩೯೫ ಪೂರ್ಣಕಾಲಿಕ ಮೀನುಗಾರರ ಕುಟುಂಬವಿದ್ದು, ೧೩೭೪ ಅರೆಕಾಲಿಕ ಮೀನುಗಾರರ ಕುಟುಂಬ ವಾಸಿಸುತ್ತಿವೆ. ಜಿಲ್ಲೆಯಲ್ಲಿ ಇಲಾಖೆಯ ಮೂರು ಮೀನುವರಿ ನರ್ಸರಿ ಕೇಂದ್ರಗಳಿದ್ದು, ಹಾರಂಗಿಯನ್ನು ಮೀನುಮರಿ ಉತ್ಪಾದನಾ ಕೇಂದ್ರವಿದೆ. ಮೀನು ಮರಿಗಳ ಬೇಡಿಕೆಯನ್ನು ಸದರಿ ಕೇಂದ್ರಗಳ ಮೂಲಕ ಪೂರೈಕೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಒಟ್ಟು ೨೬ ಮಾರುಕಟ್ಟೆಗಳಿವೆ. ಮೀನುಗಾರಿಕೆ ಹಾಗೂ ಮೀನು ಕೃಷಿಕರ ಜೀವನ ಮಟ್ಟವನ್ನು ಅಭಿವೃದ್ಧಿಪಡಿಸಲು ಇಲಾಖೆಯಿಂದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಏಡಿ ಬೇಟೆ : ಏಡಿಯನ್ನು 'ನಳ್ಳಿ' ಕೊಡವ ಭಾಷೆಯಲ್ಲಿ 'ನೆಂಡ್' ಎಂದು ಕರೆಯುತ್ತಾರೆ. ಗದ್ದೆ ಏರಿಗಳಲ್ಲಿ ನಳ್ಳಿ ಹಿಡಿಯುವುದನ್ನು 'ನೆಂಡ್ ಪುಡಿಪೊ' (ನಳ್ಳಿ ಹಿಡಿಯುವುದು) ಎನ್ನುವರು. ಏಡಿಗಳಲ್ಲಿ ಕಲ್ಲೇಡಿ, ಹುಲ್ಲೇಡಿ, ಹಾಲೇಡಿ, ಮುಂಡೇಡಿ ಎಂಬ ನಾಲ್ಕು ಬಗೆಗಳಿದ್ದು ಕಲ್ಲೇಡಿ, ಹುಲ್ಲೇಡಿಗಳನ್ನು ಮಾತ್ರ ತಿನ್ನುತ್ತಾರೆ. ಜುಲೈನಿಂದ ಜನವರಿವರೆಗೆ ಗದ್ದೆಯ ಬಯಲು ಜೌಗು ಪ್ರದೇಶದಲ್ಲಿ ಕೆರೆ ಏರಿಯ ಸಂದು ಗೊಂದುಗಳಲ್ಲಿ ಇವು ವಾಸಿಸುತ್ತವೆ. ಕಲ್ಲೇಡಿಗಳು ಕೆರೆ, ನದಿಗಳಲ್ಲಿ, ಏರಿಯ ಸಂದುಗಳಲ್ಲಿ ಇರುತ್ತವೆ. ಹುಲ್ಲೇಡಿಯು ಗದ್ದೆಯ ಬಯಲಿನ ಬಿಲದಲ್ಲಿರುತ್ತವೆ. ಏಡಿಯನ್ನು ಬರಿಕೈಯಲ್ಲಿಯೇ ಹಿಡಿಯಬಹುದು. ದಪ್ಪನಾದ ಏಡಿಗಳು ಸ್ವಲ್ಪ ಗಟ್ಟಿಯಾಗಿ ಕೊಂಡಿಯಲ್ಲಿ ಹಿಡಿದುಕೊಳ್ಳಬಹುದು. ಆ ಸಮಯದಲ್ಲಿ ಬೇಟೆಗಾರ ಏಡಿಯ ಕೋಡನ್ನು ಮುರಿಯುತ್ತಾನೆ. ಗದ್ದೆಯ ಪಕ್ಕದ ಬಿಲವನ್ನು ಅಗೆದಾಗ ಏಡಿ ಹೊರಕ್ಕೆ ಬರುತ್ತದೆ. "ಏಡಿ ಹೆಚ್ಚಿದ ಕೆರೆ ಹಾಳು ಹೆಣ್ಣೆಚ್ಚಿದ ಮನೆಹಾಳು" ಎಂಬ ಗಾದೆ ಮಾತಿನಂತೆ ಏರಿಯನ್ನು ಕೊರೆದು ಹಾಳುಮಾಡುತ್ತವೆ. ಏಡಿಯನ್ನು ಹುರಿದು ಸುಟ್ಟು ತಿನ್ನುವ ವಾಡಿಕೆ ಕೊಡವರಲ್ಲಿದೆ.

ಕೊಡವರ ಬೇಟೆ ಪದ್ಧತಿಯನ್ನು ಪರಿಶೀಲಿಸಿದಾಗ ಈ ಕೆಳಗಿನ ಮೂರು ಅಂಶಗಳು ಗೋಚರಿಸುತ್ತವೆ.

ಕೊಡವರಲ್ಲಿ ಬೇಟೆ ವಿಧಾನದಲ್ಲಿ ಮೂರು ಬಗೆಯನ್ನಾಗಿ ವಿಂಗಡಿಸಬಹುದು.

೧. ಮನರಂಜನೆಗಾಗಿ ಮತ್ತು ಮಾಂಸಕ್ಕಾಗಿ ಬೇಟೆಯಾಡುತ್ತಿದ್ದ ಪ್ರಾಚೀನ ಕಾಲದ ಪದ್ಧತಿ.

೨. ವ್ಯವಸಾಯದ ರಕ್ಷಣೆಗಾಗಿ ಬಂದೂಕು ಮತ್ತು ಇತರ ಸ್ಸಾಧನಗಳಿಂದ ಬೇಟೆಯಾಡಿ ಮಾಂಸವನ್ನು ಆಹಾರವಾಗಿ ಪಡೆಯುವ ಪದ್ಧತಿ.

೩. ನಾಲಿಗೆಯ ರುಚಿಗಾಗಿ ಹಕ್ಕಿ, ಮೀನು, ಏಡಿ, ಜೇನು ಇತ್ಯಾದಿಗಳನ್ನು ಬೇಟೆಯಾಡುವುದು.

ಯಾವುದೇ ಬೇಟೆಯಾಗಲಿ ಅವರದೇ ಉದ್ದೇಶ, ವಿಧಾನಗಳನ್ನು ಇಟ್ಟುಕೊಂಡಿರುವ ಕೊಡವರು ಬೇಟೆ ಸಂಪ್ರದಾಯವನ್ನು ಕಾನೂನಿನ ಚೌಕಟ್ಟಿನ ನಡುವೆಯೂ ಉಳಿಸಿಕೊಂಡು ಬಂದಿರುವುದನ್ನು ಗುರುತಿಸಬಹುದು. ಹೊಸ ತಂತ್ರ ವಿಧಾನವನ್ನು ಬಳಸಿಕೊಂಡು ನಿಸರ್ಗದಲ್ಲಿ ಸಿಕ್ಕುವ ವಸ್ತುಗಳನ್ನು ಆಹಾರಕ್ಕಾಗಿ ಬಳಸುತ್ತಿದ್ದಾರೆ. ಹಿಂದಿನ ತಲೆಮಾರು, ಸಂಪ್ರದಾಯಗಳಿಂದ ಬಂದಂತಹ ಬೇಟೆ ಪ್ರವೃತ್ತಿ, ವೃತ್ತಿಯಾಗಿ ಬೆಳೆದಂತೆಲ್ಲಾ ಮನುಷ್ಯನ ಬುದ್ಧಿ ಶಕ್ತಿಯೂ ಹೆಚ್ಚಾಗುತ್ತಿದೆ. ಬೇಟೆ ಕೊಡಗಿನ ಪರಿಸರದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವನ್ನು ಕಂಡುಕೊಂಡು ಇಂದಿಗೂ ಚಾಲ್ತಿಯನ್ನುಳಿಸಿಕೊಂಡಿದೆ.

ವ್ಯವಸಾಯ

ಕೊಡವರು ಪ್ರಧಾನವಾಗಿ ಕೃಷಿಕರು. ವ್ಯವಸಾಯವೇ ಇವರ ಮುಖ್ಯ ಕಸುಬು, ಇವರ ಬದುಕಿನಲ್ಲಿ ಪ್ರತಿಹಂತದಲ್ಲೂ ಒಂದಲ್ಲಾ ಒಂದು ರೀತಿಯ ಸಂಸ್ಕಾರವು ಅಡಗಿರುವುದನ್ನು ಕಾಣುತ್ತೇವೆ. ಇಲ್ಲಿರುವ ಕೃಷಿ ಸಂಪ್ರದಾಯಗಳು ಕುತೂಹಲವನ್ನುಂಟುಮಾಡುತ್ತವೆ. ಕೊಡವರ ವ್ಯವಸಾಯದ ಅಧಿದೇವತೆ 'ಇಗ್ಗುತಪ್ಪ'

ದೇವರ ಜೊತೆಗೆ, ಭೂಮಿಕಾಣಿಕೆಗಳ ರಕ್ಷಕ ದೇವತೆ 'ಗುಳಿಗರಾಜ'ನಿಗೆ ಆರಿದ್ರ ಮಾಸದಲ್ಲಿ ಆಹಾರ ಬಲಿಯನ್ನು ಕೊಟ್ಟು ವ್ಯವಸಾಯವನ್ನು ಪ್ರಾರಂಭಿಸುತ್ತಾರೆ. ಕೊಡವರ ಗಂಡಸರೂ ಹೆಂಗಸರು ಸೇರಿದಂತೆ ಎಲ್ಲರೂ ತೋಟಗಳಲ್ಲಿ ಗದ್ದೆಗಳಲ್ಲಿ ದುಡಿಯುತ್ತಾರೆ.

ಕೊಡಗಿನ ಕಪ್ಪು ಮಣ್ಣು ವ್ಯವಸಾಯಕ್ಕೆ ಯೋಗ್ಯವಾಗಿದ್ದು, ಪಶ್ಚಿಮ ಘಟ್ಟ ಗುಡ್ಡಗಾಡು ಪ್ರದೇಶವಾಗಿರುವ ಕಾರಣ ವಾರ್ಷಿಕ ಮಳೆ ಸರಾಸರಿ ೨೭೧೭ ಮಿ.ಮೀ ಆಗುತ್ತದೆ. ಜಿಲ್ಲೆಯ ವಿಸ್ತೀರ್ಣದ ಶೇ ೭೫ ರಷ್ಟು ಮಳೆ ಆಧಾರಿತ ಬೆಳೆಯನ್ನು ಬೆಳೆಯುತ್ತಾರೆ. ತೋಟಗಾರಿಕೆಯ ಪ್ರಮುಖ ಬೆಳೆಗಳೆಂದರೆ ಕಾಫಿ, ಕರಿಮೆಣಸು ಕಿತ್ತಳೆ, ಏಲಕ್ಕಿ, ಬಾಳೆ, ಬತ್ತ, ಶುಂಠಿ ತಂಬಾಕು ಎಣ್ಣೆ ಕಾಳುಗಳು, ವೆನಿಲ್ಲಾ, ಆಂಥೋರಿಯಂ ಮುಂತಾದವುಗಳು. ಶೇ.೬ ರಷ್ಟು ಆಹಾರದ ಬೆಳೆಯ ಜೊತೆಗೆ ಶೇ.೨ರಷ್ಟು ಆಹಾರೇತರ ಬೆಳೆಗಳನ್ನು ಬೆಳೆಯುತ್ತಾರೆ.

ಕೊಡಗು ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೪,೧೦,೭೭೫ ಹೆಕ್ಟೇರ್. ಅಂಕಿ ಅಂಶಗಳ ಪ್ರಕಾರ ಅರಣ್ಯ ಪ್ರದೇಶವು ೧೩,೪೫,೯೭ ಹೆಕ್ಟೇರ್. ಬಂಜರು ಮತ್ತು ವ್ಯವಸಾಯಕ್ಕೆ ಯೋಗ್ಯವಲ್ಲದ ಪ್ರದೇಶ ೫೪,೯೭೧ ಹೆಕ್ಟೇರ್. ಸಾಗುವಳಿಗೆ ಯೋಗ್ಯವಾದ ಬಂಜರು ಖಾಯಂ ಗೋ ಮಾಳ ಮತ್ತು ವೃಕ್ಷ ಹಾಗೂ ತೋಪುಗಳು ೬೧ ೫೯೭ ಹೆಕ್ಟೇರ್, ಬೀಳು ಭೂಮಿ ೭,೮೬೧ ಹೆಕ್ಟೇರ್ ಆಗಿದೆ. ಕೊಡಗಿನಲ್ಲಿ ಕಾವೇರಿ ನದಿಯು ಬತ್ತ ಮತ್ತು ಕಾಫಿ ತೋಟಗಳಿಗೆ ನೀರನ್ನು ಒದಗಿಸುತ್ತದೆ. ವ್ಯವಸಾಯಕ್ಕೆ ಬೇಕಾದ ನೈಸರ್ಗಿಕ ಸಂಪನ್ಮೂಲಗಳು ಹೇರಳವಾಗಿವೆ.

ಬತ್ತ

ಬಿತ್ತನೆ ಮಾಡಿದ ಪೈರನ್ನು ಕಕ್ಕಡ ಮಾಸ (ಆಟ) ಅಂದರೆ ಜುಲೈಯಿಂದ ಆಗಸ್ಟ್‌ವರೆಗಿನ ಆಷಾಡ ಮಾಸದಲ್ಲಿ ನಾಟಿಯನ್ನು ಮಾಡಲಾಗುತ್ತದೆ. ಸಮಯದಲ್ಲಿ 'ಒಯ್ಯಕಾಕುವ' ಎಂಬ ಸಾಂಪ್ರದಾಯಿಕ ಹಾಡನ್ನು ಹಾಡುತ್ತಾರೆ. ಈ ಹಾಡಿನಲ್ಲಿ ನಾಟಿಕಾಲದ ಸಿದ್ಧತೆ, ಮಳೆ ಬಿದ್ದ ಮೇಲೆ ಉತ್ತು ಬಿತ್ತುವ ಬಗೆ, ನಾಟಿಯ ರೀತಿ ನೀತಿಗಳು, ನಾಟಿ ಓಟದ ಸ್ಪರ್ಧೆ, ನಾಟ ನೆಟ್ಟಿದ್ದಕ್ಕೆ ಫಲಶ್ರುತಿ, ಬೆಳೆಯ ಬಗ್ಗೆ ನಿರೀಕ್ಷೆ, ಇಗ್ಗುತಪ್ಪ, ಕಾವೇರಮ್ಮನ ಪ್ರಾರ್ಥನೆ, ಗಣಪತಿ ಪ್ರಾರ್ಥನೆ, ಇರುತ್ತದೆ. ಮನೆ, ಸಮಾಜ ಹಾಗೂ ದೇಶಕ್ಕೆ ಬೆಳೆದ ಬೆಳೆಯಲ್ಲಿ ಭಾಗ ನೀಡಬೇಕಾದ ಕರ್ತವ್ಯ, ನಾಟಿಕಾರರಿಗೆ ಬಡಿಸುವ ಬಗೆಬಗೆಯ ಅಡುಗೆಯ ವಿವರಗಳು, ನಾಟಿಗೆ ಉಪಯೋಗಿಸುವ ಬತ್ತದ ಮಾದರಿಗಳು ಹಾಗೂ ನಂಜುಂಡ 'ಒಯ್ಯಕಾಕುವ' ಹಾಡಿನಲ್ಲಿ ಹಾಡುತ್ತಾರೆ. ಅವು ಬೀಜ ಬಿತ್ತನೆಯಿಂದ ಹಿಡಿದು ಕುಯಿಲಿನವರೆಗೂ ಹಂತಹಂತವಾಗಿ ಪ್ರಕಟಗೊಳ್ಳುತ್ತವೆ. ಇಲ್ಲಿನ 'ಹುತ್ತರಿ' ಮುಂತಾದ ಹಬ್ಬಗಳೂ ಸಹ ಕೃಷಿಯನ್ನೇ, ಮೂಲಾಂಶವಾಗಿ ಸ್ವೀಕರಿಸಿ ಹುಟ್ಟಿದಂತಹವು. ಈ ಸಂದರ್ಭಗಳಲ್ಲಿ ಕೃಷಿಗೆ ಸಂಬಂಧಿಸಿದ ಹಾಡುಗಳನ್ನು ನಾಟಿಮಾಡುವಾಗ ಕುಯ್ಯಲು ಮಾಡುವಾಗ, ಒಕ್ಕಣೆ ಮಾಡುವಾಗ, ಶ್ರಮ ಮರೆಯಲು, ಸಂಸ್ಕಾರವನ್ನು ಮೆರೆಯಲು ಮತ್ತು ಸಂಘಟನೆಯ ಮೂಲಕ ಸಂತೋಷವನ್ನು ಪರಸ್ಪರ ಹಂಚಿಕೊಳ್ಳಲು ಈ ಹಾಡುಗಳಲ್ಲಿ ಸಾಕಷ್ಟು ಅಂಶಗಳು ಗೋಚರಿಸುತ್ತವೆ.

ಹಾಡು ಜನಪದ ಬದುಕಿನ ಅನುಭವ ಒಡನಾಟವನ್ನು ನೆನಪಿಸುತ್ತದೆ. "ಓವಯ್ಯ, ವಯ್ಯಕರ ಅಣ್ಣಂಗ ಎಲ್ಲರೂ ಅಣ್ಣಿ"[೧೦] ಅಂದರೆ ನಾಟಿಯಲ್ಲಿ ಭಾಗವಹಿಸಿದವರೆಲ್ಲರೂ ಹೇಳಿ; ಹಾಡುತ್ತ ಕೆಲಸ ಮುಗಿಸೋಣ ಒಂದೇ ದನಿಯಲ್ಲಿ ಎಲ್ಲರೂ ಹಿಮ್ಮೇಳಕೊಡಿ ಎಂದು ನಾಟಿಕಾರರು ಕೇಳಿಕೊಂಡಾಗ ಹಿಮ್ಮೇಳದ ರೂಪದಲ್ಲಿ ಈ ಹಾಡು ಮುಂದೆ ಸಾಗುತ್ತದೆ.

"ತಿಂಗಲತ್ ತಿಂಗಲತ್ತಲೆ ಎಡಿಮ್ಯಾರ್ ತಿಂಗತ್ತಲೆ ನಾರಯಂಡ ಸ್ವಾಮಿ ಓವಯ್ಯ, ಗಾಳಿತ್‌ಡ್ ಅಡಚತಿ ಆಲಿಮಳೆ ಬುದ್ದತ್ ಓವಯ್ಯ ಬೆಲ್ಲಪೋಲ ಭೂಮಿಯೆಲ್ಲ ಪಾಪೋಲೆ ಪಡಬುದ್‌ಓವಯ್ಯ"[೧೧] ಮತ್ತು ತಮ್ಮ ನಾಡಿನಲ್ಲಿರುವ ಕಾಡು ಮರಗಳ ಬಗ್ಗೆಯು ಹೇಳಿದ್ದಾರೆ.

"ಆ ನಾಡಕೇ ಮೇಲು ಬೊಟ್ಟಿಯೆತ್ ನಾಡು ಓ (ಹೋ)ವಯ್ಯ!
ಒಕ್ಕಕೇ ಮೇಲ್ ......ಆಳಕೇ ಮೇಲ್ ಓವಯ್ಯ!
ಕಾಡ್‌ಕೇ ಮೇಲ್ ದೇವರಕಾಡು ಓವಯ್ಯ
ಮರಕೇ ಮೇಲ್ ಚಪ್ಪೆಯ ಮರ ಓವಯ್ಯ!
ಪೊನಕೇ ಮೇಲ್ ಭಟ್ಟಪೋಗೆ ಓವಯ್ಯ!"

ಬೊಟ್ಟಿಯತ್‌ನಾಡು ತುಂಬಾ ಹಿರಿಮೆ ಪಡೆದ ನಾಡು, ಅಂತಹ ನಾಡಿನ ಶ್ರೇಷ್ಠ ಕುಟುಂಬ ತಮ್ಮದು. ಅದರಲ್ಲಿ ಪ್ರಸಿದ್ಧ ಕಾಡಿನ ಈ ತರುಣ ನಾಟಿಕಾರ ದೇವರ ಕಾರ್ಯಕ್ಕೆ ಮೀಸಲಾದ ದೇವರಕಾಡು ತಮ್ಮಲ್ಲಿದೆ. ಇಂತಹ ಕಾಡಿನಲ್ಲಿ 'ಸಂಪಿಗೆ ಮರ' ಹೆಂಡ ಇಳಿಸುವ 'ದೊಡ್ಡಪೋನೆ' ಮರಗಳಿವೆ. ರೀತಿಯಾಗಿ ನಾಟಿ ಕೆಲಸದ ಎಲ್ಲಾ ಸಿದ್ಧತೆಯನ್ನು ಹಾಡಿನ ಮೂಲಕ ಮೇಲಿನಂತೆ ವಿವರಿಸುತ್ತಾರೆ.

ಕೊಡಗಿನ ಧಾರಾಕಾರ ಮಳೆಯಲ್ಲೂ ನಾಟಿ ಕೆಲಸ ನಡೆಯುತ್ತದೆ. ಮೂರು ಎಕರೆ ಮೀರಿದ ಗದ್ದೆಗೆ ಸುಮಾರು ೩೦ ರಿಂದ ೩೦೦ರವರೆಗೆ ನಾಟಿಕಾರರು ನಾಟಿ ಹಾಕುತ್ತಾರೆ. ನಾಟಿಯಲ್ಲಿ 'ಕೊಡಿನಾಟಿ' (ಧಾರೆನಾಟಿ, ಅಥವಾ ಸಾಲುನಾಟಿ) 'ಕರೆನಾಟಿ' ಎಂಬ ಎರಡು ಬಗೆಗಳಿವೆ. ಪರಂಪರೆಯಿಂದಲೂ ನಡೆಸಿಕೊಂಡು ಒಂದುಕೊಂಡು ಬಂದಂತಹ 'ಧಾರೆನಾಟಿ'ಯ ಸರಳ ರೇಖೆಗಳು ನಡುವಿನ ಹಾದಿಯಂತೆ ಕಾಣಿಸುವ, ಕೌಶಲ್ಯದ ಲೋಕದಲ್ಲಿ ಸೃಷ್ಟಿಸಿದ ಕಲೆಯಂತಿರುತ್ತದೆ. ಈ ಸಂಪ್ರದಾಯ ಕೊಡಗಿನ ಸಂಸ್ಕೃತಿಯ ಪ್ರಸಕ್ತ ಕೇಂದ್ರವಾದ ನಾಪೊಕ್ಲು ಸರಹದ್ದಿನಲ್ಲಿ ಪ್ರಾಮುಖ್ಯತೆ ಪಡೆದಿದೆ. ಇಂದಿಗೂ ಇಲ್ಲಿಯ ಸುತ್ತು ಮುತ್ತು 'ನಾಟಿ ಓಟ' (ಓಟ್‌ನಾಟಿ) ಸ್ಪರ್ಧೆಗಳು ನಡೆಯುತ್ತವೆ. ಬಯಲು ಸೀಮೆಯ ಭಾಗದಲ್ಲಿ ದಾರ, ಹಗ್ಗದ ಸಹಾಯವಿಲ್ಲದೆ ನೇರವಾಗಿ ನಾಟಿನೆಡುವುದರಿಂದ 'ದಾರನಾಟಿ' ಎನ್ನುತ್ತಾರೆ.

'ಕೊಡಿನಾಟಿ'ಯು ಮೂರು ಸಾಲುಗಳಲ್ಲಿ ಬರುತ್ತದೆ. ಅನುಭವವಿರುವ ನಾಟಿಕಾರರು ಈ ನಾಟಿ ನೆಡುತ್ತಾರೆ. ಪೈರಿನ ತುದಿಯನ್ನು ಮಟ್ಟಕ್ಕೆ ಮುರಿದು, ಒಂದೇ ಎತ್ತರಕ್ಕೆ ಕಾಣುವಂತೆ ಮೊದಲೆರಡು ಸಾಲುಗಳನ್ನು ನೆಟ್ಟು, ಅನಂತರ ಆದರ ನೇರದತ್ತ ಗಮನವಿಟ್ಟು ಮುಂದಿನ ನಾಟಿಯನ್ನು ಸಾಲಾಗಿ ನೆಡುತ್ತಾರೆ.

'ಓಟ್‌ನಾಟಿ'ಗೆ ಅನುಕೂಲವಾಗುವಂತೆ, ಚತುರ್ಭುಜ ಕರ್ಣ ನೇರದಲ್ಲಿ ಬರುತ್ತದೆ. ಏರಿಯಕರೆಯಲ್ಲಿ (ತುದಿ) ಹಾಕುವ ನಿಧಾನಿ ನಾಟಿಕಾರರನ್ನು 'ಅಂಡನಾಟಿಕಾರ' ಎನ್ನುತ್ತಾರೆ. 'ಕೊಡಿನಾಟಿಕಾರ'ನ ಸಹಾಯಕನಂತೆ 'ಅಂಡನಾಟಿಕಾರ'ನು ಕೆಲಸ ನಿರ್ವಹಣೆ ಮಾಡುತ್ತಾನೆ. ಇದರ ಬಗ್ಗೆ ಈ ರೀತಿ ಹೇಳುತ್ತಾರೆ.

"ಆಕತೆಂವತ್ ನೇರ್ ಇಟ್ಟ್ ಚೆಲ್ಲಿ!
ಅಂಡನಾಟಿಕಾರ ತುಂಡ್ ಇಟ್ಟ್ ಪುಡಿಚಿ
ಓಟ್ ನಾಟಿಕಾರ ಕೊಡಿನಾಟಿಕಾರ ಜೊತೆಲೂ ಪುಡಿಚಿ"[೧೨] ಓವಯ್ಯ

ಕೊಡವರ ನಾಟಿ ಗದ್ದೆಯಲ್ಲಿ ಸರಸ, ಹಾಸ್ಯದ ಚಟಾಕಿಗಳು ಈ ರೀತಿ ಇರುತ್ತದೆ.

'ಎಂತ ಮೊಂಗಡ ಪುಡಿಯೋ ಚಾಯಿಲ್ಲೆ ಎಚ್ಚಿಕ್
ಒಂಡಂದ್‌ತಿಲ್ಲೆ! ಎಂತ್ ಪುಡಿಯಪ್ಪ ನಾಟಿಕ್ ಚಾಯಿಲ್ಲೆ ..
ಓವಯ್ಯ'

ಎಂತಹ ಹೆಣ್ಣು ಹುಡುಗಿಯರಪ್ಪ, ಸಿಕ್ಕು ಬಿಡಿಸದೆ ಪೈರುಗಳನ್ನು ಕಟ್ಟಿದರೆ ನಾಟಿ ಹಾಕಲು ಚೆನ್ನಾಗುವುದೇ? ಎಂದು ಸರಸದ, ಹಾಸ್ಯದ ಚಟಾಕಿ ಹಾರಿಸುತ್ತಾರೆ. ಹುಡುಗಿಯರಿಗೆ ಕೆಲಸದ ಅರಿವು ಇಲ್ಲದಿರುವ ಕಾರಣ ನಿಧಾನಗತಿಯಾಗುತ್ತದೆ ಎನ್ನುವ ಅರ್ಥ ಇಲ್ಲಿದೆ. ಹಿಂದೆ ಬಿದ್ದ ನಾಟಿಕಾರನನ್ನು ಚುರುಕುಗೊಳಿಸಲು ಉತ್ಸಾಹ; ಸಲಹೆ ನೀಡುತ್ತ ಹುರಿದುಂಬಿಸುವ ಹಾಡು ಈ ಕೆಳಗಿನಂತಿದೆ.

"ಓ ನಾಟಿ ಓವಯ್ಯ ಬೆರಿಯ ತುಂಬಡ್ ನಾಟಿ
ನೇರ್ ಪುಡಿ ಚಾಯಿಲ್ಲೆ ಓವಯ್ಯ ಚುರುಕ್‌ಲ್ ನಡಕೊಂಡು ನಾಟಿ ಓವಯ್ಯ!
ಏರಿದ ಕರೆಕಾಲೆಕಾರ್ ತಂಡ ಮೊಟ್ಟ್ ಓವಯ್ಯ!
ಓಟ್ ನಾಟಿಕಾರ ಕೈಪುಡಿ ಕುತ್ ಚಿ ಓವಯ್ಯ ಕೊಡಿನಾಟಿಕಾರ, ಅಂಡನಾಟಿಕಾರ ಓವಯ್ಯ!
ಗುದ್ದತ್ ಬುದ್ದತ್ ಓವಯ್ಯ!"

ಈ ರೀತಿ ಬೇಗನೆ ನಾಟಿ ಮುಗಿಸಿ ಬಾ ಎಂದು ಉತ್ಸಾಹ ತುಂಬುತ್ತಾರೆ.

ನಾಟಿಯ ಹಂತದ ಈ ಸಾಲು ಪ್ರಾರ್ಥನಾ ಗೀತೆಯಂತಿದೆ. ಗಣಪತಿ, ಕಾವೇರಿ ಮಾತೆಯ ಸ್ತುತಿ, ನಾಟಿಕಾರ ಹುಟ್ಟಿ ಬೆಳೆದು ಬದುಕುತ್ತಿರುವ ನೆಲೆ. ಇರುವ ಕುಟುಂಬಗಳು, ಮಳೆಗಾಲ ಬರುವ ರೀತಿ, ವ್ಯವಸಾಯಕ್ಕೆ ತೊಡಗಲು ಪ್ರಕೃತಿ ನೀಡುವ ಸಂಕೇತಗಳು, ಅದಕ್ಕಾಗಿ ರೈತರ ಸಿದ್ಧತೆ ನಾಟಿಯ ಕ್ರಮಗಳು, ನಾಟಿ ನೆಟ್ಟವರಿಗೆ ಹಾಲು ಅನ್ನ ಉಣಿಸೆಂಬ ಅರಿಕೆ ಈ ಹಾಡಿನಲ್ಲಿ ಕಂಡು ಬರುತ್ತವೆ. ಕೊಡಗಿನ ಮಳೆಗಾಲದ ಜನಪದ ಸಹಜ ಚೈತನ್ಯ ಈ ಹಾಡಿನಲ್ಲಿದೆ.

"ಕ್‌ಪ್ಪಣಿ ಮೆಪ್ಪಣೆ! ವೊತ್ತ್ ಬೊಳಂದಾ।ಯೇರಿಕು ಬಾರಿಕ್।
ಬುದ್ದ್ ಬೊಳ್‌ಂದ ಆಯಂಗು ದೇವಂಗು। ಪಾಲುಂಗೂಳಾಯಿ।
ಪತ್ತಾಯ ದುಂಬಿ। ಮೊಲಿಯಡ್ ನೆಲ್ಲೋ ನೇಡ ಕೂಳುಂಡ್,
ಮೊಲಂಡ್ ಜೆನಾ। ಹೋವಯ್ಯ । ನಂಜುಂಡದೇವಾ.
ನಟ್ಟೈಂಗಡ ಬಾಯಿಕ್ ಪಾಲುಕೂಳ್ ಕೊಡ್ ನಾಟಿಯೇ

ಕದ್ದವಂಡ ಬಾಯಿಕ್ ನಂಜಿ ಮರಂಜಿ ಪೋಡುನಾಟಿಯೇ।"[೧೩]

ಎಂದು ದೇವರನ್ನು ಪ್ರಾರ್ಥಿಸಿ ಫಲಶ್ರುತಿಯನ್ನು ಹೇಳುತ್ತಾರೆ. 'ನಾಟಿ ನೆಟ್ಟವರಿಗೆ ಹಾಲು ಅನ್ನ, ಪೈರುಕದ್ದವರಿಗೆ ನಂಜಿನ ಊಣಿಸು' ಎಂಬ ವಾಕ್ಯವು ಕಾಯಕ ಶೀಲತೆಗೆ ಕೊಟ್ಟಿರುವ ಮರ್ಯಾದೆಯಾಗಿರಬಹುದೆಂದು ಊಹಿಸಬಹುದು, ಈ 'ಒಯ್ಯಕಾಕುವ'ವನ್ನು ಕಕ್ಕಡ ಮಾಸ (ಜುಲೈ-ಆಗಸ್ಟ್) ಕೊಡವರ ಆಷಾಢ ಮಾಸದಲ್ಲಿ ಹಾಡಬೇಕೆಂಬ ನಿಯಮವಿದೆ.

ಹಿಂದೆ ಬತ್ತದ ಕಣಜವಾಗಿದ್ದ ಕೊಡಗು, ಇದೀಗ ಅಕ್ಕಿಯನ್ನು ಮಾರುಕಟ್ಟೆಗಳಿಂದ ಖರೀದಿಸುವ ಸ್ಥಿತಿ ತಲುಪಿದೆ. ಹೆಕ್ಟೇರ್‌ಗಟ್ಟಲೇ ಬತ್ತ ಬೆಳೆಯುತ್ತಿದ್ದ ಕೃಷಿಕರು ಭತ್ತದ ಬೇಸಾಯಕ್ಕೆ ಬದಲಾಗಿ ತಮ್ಮ ಗದ್ದೆಗಳನ್ನು ಕಾಫಿ ತೋಟವನ್ನಾಗಿ ಪರಿವರ್ತಿಸಿದ್ದಾರೆ. ಕೇರಳದವರು ಕೊಡಗಿಗೆ ಬಂದು ಗದ್ದೆಗಳಲ್ಲಿ ಶುಂಠಿ ಬೆಳೆಯುತ್ತಿದ್ದಾರೆ. ಆದ್ದರಿಂದ ಬತ್ತ ಕೆಲವೆಡೆಗಳಲ್ಲಿ ಮಾತ್ರ ಉತ್ಪಾದನೆಯಾಗುತ್ತಿದೆ.

ಕಾಫಿ:- ಕೊಡಗಿನಲ್ಲಿರುವ ಕಾಫಿಯ ಮೂಲ ಇಥಿಯೋಪಿಯ ರಾಷ್ಟ್ರದ ಕಫ ಎನ್ನುವ ಪ್ರದೇಶ. ಕ್ರಿ.ಶ. ೧೬೦೦ ರಲ್ಲಿ ಬಾಬಾ ಬುಡಾನ್ ಎನ್ನುವ ಮುಸ್ಲಿಂ ಯಾತ್ರಿಕನೊಬ್ಬ 'ಯಮನ್'ನಿಂದ ಕೆಲವು ಕಾಫಿ ಬೀಜಗಳನ್ನು ತಂದು ಚಿಕ್ಕಮಗಳೂರು ಜಿಲ್ಲೆಯ ಚಂದ್ರದ್ರೋಣ ಪರ್ವತ ಶ್ರೇಣಿಯಲ್ಲಿ ಬೆಳೆಸಿದ. ' ಅದೇ ಈಗ ಬಾಬಾಬುಡನ್‌ಗಿರಿಯಾಗಿದೆ. ಕಾಫಿ ಬೆಳೆಯು ಕೊಡಗು ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಕೊಡಗು ಜಿಲ್ಲೆಯಾದ್ಯಂತ ಕಲವು ದಾಖಲೆಗಳಲ್ಲಿ ೧೦೪೨೩೦ ಹೆಕ್ಟೇರ್‌ಗಳು ಪ್ರದೇಶದಲ್ಲಿ ಕಾಫಿ ಬೆಳೆ ಇದೆ. "ಕಾಫಿ ತಳಿಯಲ್ಲಿ ರೊಬಸ್ಟ್, ಅರೇಬಿಕಾ, ಕಾವೇರಿಕಾಫಿ, ಕಾಟಿಮೋರ್, ಕಾಂಜನ್ಸಿಸ್, ಎಸ್-೨೭೪, ಮುಂತಾದ ವಿವಿಧ ರೀತಿಯ ತಳಿಗಳಿವೆ. ಈ ಬೆಳೆಗೆ ಸಾವಯವ ಹಾಗೂ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸುತ್ತಾರೆ."[೧೪]

೧೮೩೪ ರಲ್ಲಿ ಬ್ರಿಟೀಷರ ಆಡಳಿತ ಪ್ರಾರಂಭವಾದ ಮೇಲೆ ಕಾಫಿ ಬೆಳೆ ಪ್ರಗತಿ ಕಂಡಿತು. ೧೮೫೬ ರಲ್ಲಿ ಸುಮಾರು ೨೦೦ ಯೂರೋಪಿಯನ್ನರು ಸುಮಾರು ೧೧೩೩೧ ಎಕರು ಪ್ರದೇಶದಲ್ಲಿ ಕಾಫಿ ಕೃಷಿ ಮಾಡಿದ್ದರು. ದಿ.ಕರ್ನಾಟಿಕ್ ಕಾಫಿ ಕಂಪನಿ ಲಿ. ಇದು ೧೮೭೦ ರಲ್ಲಿ ೧೨೦೦ ಎಕರೆ ಕಾಫಿ ತೋಟ ಹೊಂದಿತ್ತು. ಇದು ಕಾಫಿ ಬೆಳೆಸಿದ ಮೊದಲ ಕಂಪನಿಯಾಗಿದೆ.

ಈಗ ಕಾಫಿ ಬೆಳೆಗಾರರು ಭೂಮಿಯನ್ನು ಮಟ್ಟ ಮಾಡಲು ಜೆ.ಸಿ.ಬಿ. ಯಂತ್ರಗಳನ್ನು ಉಪಯೋಗಿಸುತ್ತಾರೆ. ಗಿಡ ನೆಡಲು ಗುಂಡಿ ತೋಡುವ ಕಾರ್ಯ, ಕಳೆ ಕತ್ತರಿಸುವ ಕಾರ್ಯ, ಮರಗಳನ್ನು/ಕೊಂಬೆಗಳನ್ನು ಕತ್ತರಿಸಲು, ರೋಗ ನಿಯಂತ್ರಕ ಔಷಧಗಳನ್ನು ಸಿಂಪಡಿಸಲು, ಕುಯಿಲು ಮಾಡಿದ ಕಾಫಿಯನ್ನು ಸಾಗಿಸಲು, ಇರಿಗೇಷನ್ ಮಾಡಲು ಯಂತ್ರೋಪಕರಣಗಳನ್ನು, ಟ್ರ್ಯಾಕ್ಟರ್, ಟಿಲ್ಲರ್‌ಗಳನ್ನು ಬಳಸುತ್ತಿದ್ದಾರೆ. ಇದರ ಜೊತೆಗೆ ಇತ್ತೀಚೆಗೆ ಕಾಫಿ ಕುಯಿಲು ಮಾಡಲು ಬ್ಯಾಟರಿ ನಿಯಂತ್ರಿತ ಹಾರ್ವೆಸ್ಟರ್‌ಗಳು ಹಾಗೂ ಕಾಫಿ ಒಣಗಿಸುವ ಯಂತ್ರಗಳು ಬಂದಿವೆ.

ಕಾಫಿ ಬೆಳೆಗೆ ನೀರು ಬಸಿದು ಹೋಗುವ ಸಮೃದ್ಧ ಸಾವಯವ ಮತ್ತು ಆಮ್ಲೀಯ ರಸಸಾರವಿರುವ ಮರಳುಗೋಡು ಅಥವಾ ಜಂಬಿಟ್ಟಿಗೆ ಮಣ್ಣು ಸೂಕ್ತವಾದದ್ದು. ಮಳೆ, ಉಷ್ಣಾಂಶ, ಆರ್ದ್ರತೆ, ಸಮುದರಮಟ್ಟದಿಂದ ಇರುವ ಎತ್ತರ, ನೆರಳು, ಕಾಫಿಯ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇತ್ತೀಚೆಗೆ ಕಾಫಿ ಬೆಳೆಗೆ ಉತ್ತಮ ಬೆಲೆ ದೊರೆಯುವ ಕಾರಣ ಎಲ್ಲಾ ಖಾಲಿ ಜಾಗಗಳನ್ನು ಕಾಫಿ ತೋಟ ಮಾಡಿದ್ದಾರೆ. ಕೊಡವ ಮಹಿಳೆಯರು ಗೃಹ ಕೃತ್ಯಗಳ ಜೊತೆಗೆ ಕಾಫಿ ತೋಟದ ಕೆಲಸವನ್ನೂ ನಿರ್ವಹಿಸುತ್ತಾರೆ. ಕಾಫಿ ಚಿಗುರು ತೆಗೆಯುವುದು, ಕಪಾತ್ ಮಾಡುವುದು, ಅಗತೆ, ಕಚ್ಚಡ ದಬ್ಬೆಕಚ್ಚಡ (ಕಾಫಿ ಗಿಡದ ಕಳೆಯನ್ನು ಕತ್ತಿಯಿಂದ ಕತ್ತರಿಸಿ ಸ್ವುಟಗೊಳಿಸುವಿಕೆ) ಮುಂತಾದ ಕೆಲಸಗಳನ್ನು ಮಾಡುತ್ತಿದ್ದಾರೆ.

ಕರಿ ಮೆಣಸು :– ಕೊಡಗಿನಲ್ಲಿ ಕರಿಮೆಣಸು ಬೆಳೆ ಅತ್ಯಂತ ಸಂಪತ್ಭರಿತ ವಾದದ್ದು. ಕಾಫಿಗಿಂತ ಕರಿಮೆಣಸು ಹೆಚ್ಚು ಲಾಭ ನೀಡುವ ಕಾರಣ ಅದಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಇದನ್ನು 'ಸಂಬಾರು ಬೆಳೆಗಳ ರಾಜ' ಎನ್ನುವರು. ಸುಮಾರು ೧೦೬೪೩ ಹೆಕ್ಟೇರ್ ಪ್ರದೇಶದಲ್ಲಿ ಕರಿಮೆಣಸನ್ನು ಬೆಳೆಯಲಾಗುತ್ತಿದೆ. ಕರಿಮೆಣಸಿನ ಬೆಳೆಗೆ ಫಲವತ್ತಾದ ಹೆಚ್ಚು ಸಾವಯವ ಪದಾರ್ಥಗಳಿಂದ ಕೂಡಿದ ನೀರು ಬಸಿದುಹೋಗುವಂತಹ ಮಣ್ಣು ಸೂಕ್ತ. ಇದನ್ನು ಪಶ್ಚಿಮ ಘಟ್ಟದ ಉಷ್ಣ ಮತ್ತು ಆದ್ರತೆಯಿಂದ ಕೂಡಿದ ಬೆಟ್ಟ ಪ್ರದೇಶದಲ್ಲಿ ಹಾಗೂ ಬಯಲು ಪ್ರದೇಶದಲ್ಲಿ ಬೆಳೆಸಬಹುದು. ಇದರಲ್ಲಿ ಗಿರಿಮುಂಡ, ತೇವಮ್, ಶ್ರೀಕರ, ಪಂಚಮಿ, ಪನಿಯಾರ್, ಉದರಕೋಟೆ ಮುಂತಾದ ಬಗೆಗಳಿವೆ. ಈ ಬಳ್ಳಿಗಳನ್ನು ಮರಕ್ಕೆ ಹಬ್ಬಿಸಿ, ಗೊಬ್ಬರವನ್ನು ಉಪಯೋಗಿಸಿ ಉತ್ತಮ ಇಳುವರಿ ಪಡೆಯುತ್ತಾರೆ. ಒಂದು ವರ್ಷ ಬಿಟ್ಟು ಇನ್ನೊಂದು ವರ್ಷ ಇಳುವರಿ ಹೆಚ್ಚಾಗಿರುತ್ತದೆ. 'ತೇವರಿ' ಮತ್ತು 'ಶಕ್ತಿ' ಎಂಬ ಮಿಶ್ರ ತಳಿಗಳು ಉತ್ತಮ ಇಳುವರಿ ಕೊಡುತ್ತವೆ. ಈ ತಳಿಗೆ ರೋಗ ಕಡಿಮೆ. ಒಟ್ಟಿನಲ್ಲಿ ಹಳೆಯ ಮೆಣಸಿನ ಕೃಷಿ ಪದ್ಧತಿ ಉತ್ತಮವಾದದ್ದಾಗಿದೆ.

ಮಳೆಯ ಪ್ರಮಾಣ ಹೆಚ್ಚಾದರೆ ಕರಿಮೆಣಸು ಸಂಪೂರ್ಣ ಕೊಳೆತು ನಾಶವಾಗುತ್ತದೆ. 'ಸೊರಗು' ರೋಗ ಬಾಧಿಸುತ್ತಿದ್ದಾಗ ಇಳುವರಿ ಕ್ಷೀಣಿಸುತ್ತದೆ. ಜಿಲ್ಲೆಯಲ್ಲಿ ಒಟ್ಟು ೧೫೩೫೨ ಟನ್‌ಗಳಷ್ಟು ವಾರ್ಷಿಕ ಉತ್ಪಾದನೆಯಾಗುತ್ತದೆ.

ಕಿತ್ತಳೆ : ಕಿತ್ತಳೆ ಬೆಳೆಯೂ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆ. ಕೊಡಗಿನ ತಂಪಾದ ಹವೆ. ಆರ್ಥಿಕ ಮಳೆಯ ಕಾರಣ ಆಕಾರ ಮತ್ತು ಬಣ್ಣಗಳು ಸಿಹಿ ಮತ್ತು ಆಮ್ಲೀಯ ಅಂಶಗಳು ಚೆನ್ನಾಗಿ ಬೆರೆತಿರುತ್ತವೆ. 'ರೂಟೇಸಿ' ಕುಟುಂಬಕ್ಕೆ ಸೇರಿದ 'ಸಿಟ್ರಸ್' ಎಂಬ ವೈಜ್ಞಾನಿಕ ಹೆಸರಿನ ಜಾತಿಯ 'ರೆಟಿಕ್ಯುಲೇಟ' ಪ್ರಭೇದಕ್ಕಿರುವ ಸಾಮಾನ್ಯ ಬಳಕೆಯ ಹೆಸರು ಕಿತ್ತಳೆ. ಇದನ್ನು 'ಮ್ಯಾಂಡರಿನ್ ಆರೆಂಜ್' ಎಂದು ಕರೆಯುತ್ತಾರೆ. ಇತ್ತೀಚೆಗೆ ಕಿತ್ತಳೆ ಮರಗಳಿಗೆ ರೋಗ ಕಾಣಿಸಿಕೊಳ್ಳುತ್ತಿರುವ ಕಾರಣ ಬೆಳೆಯು ಕ್ಷೀಣಿಸುತ್ತಿದೆ. ಕಿತ್ತಳೆ ಬೆಳೆಯ ಪುನಶ್ಚೇತನಕ್ಕಾಗಿ ರೈತರಿಗೆ ಕಿತ್ತಳೆ ಗಿಡ, ಟ್ರೈಕೋಡರ್ಮ, ಬೇವಿನ ಹಿಂಡಿ ಮತ್ತು ಔಷಧಿಯನ್ನು ತೋಟಗಾರಿಕೆ ಇಲಾಖೆಯಲ್ಲಿ ನೀಡಲಾಗುತ್ತಿದೆ.

ಏಲಕ್ಕಿ

'ಏಲಕ್ಕಿಯನ್ನು ಸಂಬಾರ ಪದಾರ್ಥಗಳ ರಾಣಿ' ಎಂದೇ ಹೇಳಲಾಗುತ್ತಿದೆ. ಕೊಡಗು ರಾಜರ ಆಡಳಿತಕ್ಕೆ ಒಳಪಟ್ಟಿದ್ದಾಗಲೇ ಜಿಲ್ಲೆಯಲ್ಲಿ ಏಲಕ್ಕಿ ಬೆಳೆ ಇತ್ತು. ಘಟ್ಟ ಪ್ರದೇಶಗಳಲ್ಲಿ 'ಜಮ್ಮಮಲೆ' ಎಂದು ಕರೆಯಲ್ಪಡುವ ಪ್ರದೇಶದಲ್ಲಿ ಹೆಚ್ಚಿನ ಏಲಕ್ಕಿಯನ್ನು ಬೆಳೆಸಲಾಗುತ್ತಿತ್ತು.

'ಎಲಿಟೇರಿಯ ಕಾರ್ಡಮಮ್' ಎಂಬ ವೈಜ್ಞಾನಿಕ ಹೆಸರಿನಿಂದ ಕರೆಯಲ್ಪಡುವ ಏಲಕ್ಕಿ ಕೊಡಗಿನ ಪ್ರಮುಖ ಬೆಳೆಯಾಗಿದ್ದು. ಅತಿ ಹೆಚ್ಚು ಬೆಲೆ ಬಾಳುವ ಸಾಂಬಾರ ಪದಾರ್ಥವೆನಿಸಿದೆ. ಈ ಗಿಡದ ಕಾಂಡವು ಮಣ್ಣಿನ ಒಳಗೆ ಹೊರಗೆ ಕಾಣದಂತಿರುತ್ತದೆ. ಎಲೆಗಳು ಹಸಿರು ಬಣ್ಣದಿಂದ ಕೂಡಿದ್ದು ಉದ್ದವಾಗಿರುತ್ತವೆ. ಬುಡದ ಬೇರಿನಲ್ಲಿ ಗೊಂಚಲಿನ ರೂಪದಲ್ಲಿ ಏಲಕ್ಕಿ ಕಂಡುಬರುತ್ತದೆ. ಸರಾಸರಿ ೧೫೦ ರಿಂದ ೬೫೦ ಸೆ.ಮೀ ವಾರ್ಷಿಕ ಮಳೆ ಬೀಳುವ ಪ್ರದೇಶದಲ್ಲಿ ಏಲಕ್ಕಿ ಚೆನ್ನಾಗಿ ಬೆಳೆಯುತ್ತದೆ. ರಾಸಾಯನಿಕ ಗೊಬ್ಬರ, ಹಾಗೂ ನೆಲ್ಲಿಸೊಪ್ಪನ್ನು ಗೊಬ್ಬರ ರೂಪದಲ್ಲಿ ಬಳಸಿದರೆ ಹೆಚ್ಚು ಫಸಲನ್ನು ಬಿಡುತ್ತದೆ. ಒಂದು ಗಿಡ ೧೫ ವರ್ಷದ ತನಕ ಫಸಲು ನೀಡುತ್ತದೆ. ಇಂದು ರಾಸಾಯನಿಕ ಗೊಬ್ಬರಗಳ ಉಪಯೋಗದಿಂದಾಗಿ ಏಲಕ್ಕಿಗೆ ಕಟ್ಟೆರೋಗ, ಎಲೆ ಚುಕ್ಕೆರೋಗ, ಕೊಳೆರೋಗ, ಕಾಯಿಕೊರೆಯುವ ಹುಳು, ಕಂಬಳಿಹುಳು ಹಾಗೂ ಇಲಿ ಮತ್ತು ಅಳಿಲುಗಳ ಹಾವಳಿಯಿಂದ ಬೆಳೆಗಾರರು ನಷ್ಟ ಅನುಭವಿಸುತ್ತಿದ್ದಾರೆ. ಕಾಫಿ ಬೆಳೆಯಿಂದ ಏಲಕ್ಕಿ ಗಿಡಕ್ಕೆ ನೆರಳಿನ ಕೊರತೆ ಉಂಟಾಗಿ ಕ್ರಮೇಣ ನಶಿಸುತ್ತಿದೆ. ಆದರೂ ಇಂದು ಸು ೫೧೬ ಟನ್‌ಗಳಷ್ಟು ಏಲಕ್ಕಿ ವಾರ್ಷಿಕವಾಗಿ ಉತ್ಪಾದನೆ ಆಗುತ್ತಿದೆ.

ರಬ್ಬರ್ ಬೆಳೆ: ಜಿಲ್ಲೆಯಲ್ಲಿ ೨೮೧೪ ಹೆಕ್ಟೇರ್ ಪ್ರದೇಶದಲ್ಲಿ ರಬ್ಬರ್ ಬೆಳೆ ಇದೆ. ಬ್ರಿಟೀಷರ ಆಡಳಿತದ ಅವಧಿಯಲ್ಲಿ ವಿರಾಜಪೇಟೆ ತಾಲೂಕಿನ ಮಾಕುಟ್ಟ ರಬ್ಬರ್ ತೋಟ, ಮಡಿಕೇರಿ ತಾಲೂಕಿನ ಕಡಮಕಲ್ ರಬ್ಬರ್ ತೋಟ, ಸಾಂಪಾಜೆ ರಬ್ಬರ್ ತೋಟ ಮತ್ತು ಗ್ಲೆನ್ ಕೂರ್ಗ್ ರಬ್ಬರ್ ತೋಟಗಳು ಪ್ರಾರಂಭವಾಗಿದ್ದವು. ಆ ಕಾಲದಲ್ಲಿ ಎಲ್ಲ ತೋಟಗಳು ಬ್ರಿಟೀಷರ ಮಾಲಿಕತ್ವದಲ್ಲಿದ್ದವು. ಆಗ ಈ ಜಮೀನನ್ನು ರಬ್ಬರ್ ಬೆಳೆಸಲು ೯೯ ವರ್ಷಗಳಿಗೆ ಲೀಸ್‌ಗೆ ನೀಡಲಾಗಿತ್ತು. ಸಂಪಾಜೆ, ಪೆರಾಜೆ ವ್ಯಾಪ್ತಿಯ ಅನೇಕ ಬತ್ತ ಬೆಳೆಗಾರರು ಹಾಗೂ ಅಡಕೆ ಬೆಳೆಗಾರರು ರಬ್ಬರ್ ಬೆಳೆಯಲ್ಲಿ ಹೆಚ್ಚು ಲಾಭ ಗಳಿಸಬಹುದು ಎನ್ನುವ ಕಾರಣಕ್ಕಾಗಿ ಬತ್ತದ ಗದ್ದೆಗಳನ್ನು, ಅಡಕೆ ತೋಟಗಳನ್ನು ರಬ್ಬರ್ ತೋಟವನ್ನಾಗಿ ಪರಿವರ್ತಿಸಿದ್ದಾರೆ.

ಟೀ: ಕೊಡಗು ಜಿಲ್ಲೆಯಲ್ಲಿ ೪೪೭ ಹೆಕ್ಟೇರ್ ಪ್ರದೇಶದಲ್ಲಿ ಟೀ ಬೆಳೆ ಇದೆ. ಗ್ಲೆನ್ ಲೋರ್ನ ಟೀ ತೋಟ ಇದು ಟಾಟಾ ಕಾಪಿ ಕಂಪನಿಯ ಮಾಲೀಕತ್ವದಲ್ಲಿದೆ. ಟಿ.ಶೆಟ್ಟಿಗೇರಿಯಿಂದ ಬಾಡಗರಕೇರಿ ಗ್ರಾಮದಲ್ಲಿರುವ ಮೃತ್ಯುಂಜಯ್ಯ ಸ್ವಾಮಿ ದೇವಸ್ಥಾನಕ್ಕೆ ಹೋಗುವ ರಸ್ತೆಯ ಬದಿಯಲ್ಲಿದೆ. ಇದು ಕೂಡ ಬ್ರಿಟಿಷರ ಆಡಳಿತದ ಅವಧಿಯಲ್ಲಿ ೯೯ ವರ್ಷಗಳಿಗೆ ಲೀಸ್‌ಗೆ ನೀಡಲಾದ ಜಮೀನು. ಮಡಿಕೇರಿ ತಾಲೂಕಿನ ತಾಳಿಬೀಡಿನಲ್ಲಿ ಅರಣ್ಯ ಇಲಾಖೆಯಿಂದ ಟೀ ತೋಟ ಮಾಡಲಾಗಿತ್ತು. ಆದರೆ ಕಾರ್ಮಿಕರ ಅಭಾವ ಕುಯಿದ ಸೊಪ್ಪನ್ನು ಸಮಯದಲ್ಲಿ

ತಾಂತ್ರಿಕವಾಗಿ ಒಣಗಿಸಿ ಟೀ ತಯಾರಿಸುವ ಮೂಲಭೂತ ಸೌಕರ್ಯಗಳು ಲಭ್ಯವಿಲ್ಲದ ಕಾರಣ ಟೀ ತೋಟ ಮಾಡಿದ್ದ ೨-೩ ಜನ ಕೃಷಿಕರು ಕೈ ಸುಟ್ಟುಕೊಂಡು ಅದರಿಂದ ದೂರ ಉಳಿದಿದ್ದಾರೆ.

ಕೊಡಗಿನಲ್ಲಿ ವೈಜ್ಞಾನಿಕ ತಂತ್ರಜ್ಞಾನ, ಮಾರುಕಟ್ಟೆ ವ್ಯವಸ್ಥೆ, ಕೃಷಿ ಯಂತ್ರೋಪಕರಣಗಳು, ಸಕಾಲದಲ್ಲಿ ದೊರೆಯುವ ಬೀಜ ಗೊಬ್ಬರ ವ್ಯವಸ್ಥೆ, ಕಡ್ಡಾಯವಾದ ಮಣ್ಣು ಪರೀಕ್ಷೆ, ಕೃಷಿ ಪರಿಸರ ವಿತರಣಾ ವ್ಯವಸ್ಥೆ, ಕಾರ್ಯಾಗಾರಗಳ ಮೂಲಕ ಹಲವಾರು ಕಾರ್ಯಗಳನ್ನು ಏರ್ಪಡಿಸಿ, ಅಭಿವೃದ್ಧಿಯ ವ್ಯವಸಾಯಕ್ಕೆ ಸಹಕರಿಸುವ ನಿಟ್ಟಿನಲ್ಲಿ ಕೃಷಿ ಸಾಲ ಒದಗಿಸುವತ್ತ ಸರ್ಕಾರ ಕ್ರಮ ಕೈಗೊಂಡಿದೆ.

ಕೊಡಗು ಜಿಲ್ಲೆಯ ಎಲ್ಲಾ ಮೂಲನಿವಾಸಿಗಳು ಕೃಷಿಕರೇ ಆಗಿದ್ದಾರೆ. ಯಾವುದೇ ಒಂದು ಸಂಸ್ಕೃತಿ ಅಲ್ಲಿನ ಜನರೊಂದಿಗೆ, ಮಣ್ಣಿನೊಂದಿಗೆ, ಭಾಷೆಯೊಂದಿಗೆ ಬೆರೆತಿರುತ್ತದೆ. ಇಲ್ಲಿನ ಮೂಲನಿವಾಸಿಗಳು ಮಣ್ಣಿನ ಸಂಬಂಧ ಕಳೆದುಕೊಂಡರೆ ಅವರ ಸಂಸ್ಕೃತಿ ನಾಶವಾಗುತ್ತದೆ. ಕೃಷಿ ಎನ್ನುವುದೇ ಒಂದು ಸಂಸ್ಕೃತಿ. ಕೃಷಿ ಎಲ್ಲಾ ಸಂಸ್ಕೃತಿಗಳ, ಹಬ್ಬಗಳ, ಉತ್ಸವಗಳ ತಾಯಿ ಎನ್ನಬಹುದು. ಕಾರ್ಮಿಕರ ಅಭಾವದಿಂದಾಗಿ ಮುಂದಿನ ಕೆಲವು ವರ್ಷಗಳಲ್ಲಿ ಕೊಡಗಿನ ಕೃಷಿಗೆ ಬಾರಿ ತೊಂದರೆ ಉಂಟಾಗಿ, ಕೃಷಿ ಜಮೀನು ಪಾಳುಬೀಳಲಿದೆ.

ಇಲ್ಲಿನ ಕೃಷಿಕರು ಈಗಾಗಲೇ ತಮ್ಮ ಜಮೀನುಗಳನ್ನು ಮಾರಾಟ ಮಾಡಿದ್ದು ಹೊರ ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಹಾಗೂ ಜಿಲ್ಲೆಯಲ್ಲಿ ವಾಸಿಸುತ್ತಿರುವ ಕೃಷಿ ಕುಟುಂಬದವರು, ತೋಟ ಗದ್ದೆಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿಲ್ಲ. ಸರ್ಕಾರದ ಕೆಲವೊಂದು ತೀರ್ಮಾನಗಳಿಂದಾಗಿ ಇಲ್ಲಿನ ಕೃಷಿಕರು ಚಿಂತಾಕ್ರಾಂತರಾಗಿದ್ದಾರೆ. ಪಶ್ಚಿಮ ಘಟ್ಟಗಳನ್ನು ವಿಶ್ವಪಾರಂಪರಿಕ ತಾಣವೆಂದು ಪರಿಗಣಿಸಿರುವುದು, ಆ ಪ್ರದೇಶವನ್ನು ಪರಿಸರ ಸೂಕ್ಷ್ಮವಲಯವೆಂದು ಘೋಷಿಸುವುದು, ವ್ಯವಸಾಯಕ್ಕೆ ಒಳಪಟ್ಟಿರುವ ಜಾಗದಲ್ಲಿರುವ ಮರಗಳ ಒಡೆತನ ಆ ಕೃಷಿಕನಿಗೆ ಇಲ್ಲ ಎನ್ನುವುದು ತಮ್ಮ ಕೃಷಿಕರ ಸ್ವಾಧೀನದಲ್ಲಿರುವ ಬಾಣೆಯನ್ನು ಸರ್ಕಾರದ ಆಸ್ತಿ ಎನ್ನುತ್ತಿರುವುದು ಮತ್ತು ಅದನ್ನು ಡೀಮ್ಡ್ ಫಾರೆಸ್ಟ್ ಎಂದು ಪರಿಗಣಿಸಿರುವ ತಜ್ಞರ ವರದಿ ಮುಂತಾದ ನೂರೆಂಟು ಸಮಸ್ಯೆಗಳು ಕೊಡಗಿನ ಕೃಷಿಕರ ಮೇಲೆ ಪರಿಣಾಮ ಬೀರಿ ಕೃಷಿಯಲ್ಲಿ ಅಭಿವೃದ್ಧಿ ಸಾಧಿಸಲು ಅಡಚಣೆಯಾಗುತ್ತಿದೆ.

ಕೊಡವರ ವೈದ್ಯ ಪದ್ಧತಿ

ಕೊಡವರು ಮೂಲತಃ ಪ್ರಕೃತಿ ಪ್ರಿಯರು. ನಿಸರ್ಗದಿಂದ ದೊರೆಯುವ ಗಿಡಮೂಲಿಕೆಗಳನ್ನು ಬಳಸಿಕೊಂಡು ದೇಸಿ ಔಷಧಿಯನ್ನು ತಯಾರಿಸುವ ಇವರ ಸಂಸ್ಕೃತಿ ವಿಶೇಷವಾದದ್ದು. ಮನುಷ್ಯರಿಗಷ್ಟೇ ಅಲ್ಲ ಪ್ರಾಣಿ ಪಕ್ಷಿ, ಮರಗಿಡಗಳಿಗೂ ಒಂದಲ್ಲ ಒಂದು ಕಾಯಿಲೆ ಬಂದೇ ಬರುತ್ತದೆ. ಇಂತಹ ಕಾಯಿಲೆಗಳನ್ನು ಶೂಶ್ರೂಷೆ ಮಾಡಲು ಮನುಷ್ಯ ಪ್ರಕೃತಿಯಲ್ಲೇ ದೊರೆಯುವ ಹಲವು ರೀತಿಯ ಸಸ್ಯಗಳನ್ನು ಅವಲಂಬಿಸಿ ತನ್ನ ಅನುಭವದಿಂದ ಕಂಡುಕೊಂಡ ಪ್ರಾಕೃತಿಕ ಔಷದಿಯ ಭಂಡಾರ ಬಹು ದೊಡ್ಡದು. ರೋಗ ರುಜಿನಗಳಿಂದ ಆವರಿಸಿರುವ ದೇಹರಕ್ಷಣೆಗಾಗಿ ಎಲ್ಲಾ

ಜೀವಿಗಳು ಹೋರಾಟ ಮಾಡುತ್ತವೆ. ಮಾನವ ತೆರೆದ ಕಣ್ಣುಗಳಿಂದ ನೋಡಿ ತನ್ನ ದೇಹಪ್ರಕೃತಿಗೆ ಒಗ್ಗುವಂತೆ ವೈದ್ಯವನ್ನು ಕಂಡುಕೊಂಡಿದ್ದಾನೆ.

ಮಾನವ ತನ್ನ ರೋಗ ನಿವಾರಣೆಗೆ ಗಿಡ,ಗೆಡ್ಡೆ, ಕಾಡಿನ ಸಸ್ಯಗಳು, ಅರಣ್ಯ ಉತ್ಪನ್ನಗಳನ್ನು ಹಾಗೂ ಕಾಂಡಗಳ ರಸ ಬಳಸಿ ಸೊಪ್ಪು ತಿಂದು ಜೀರ್ಣಿಸಿಕೊಂಡು ರೂಪಗೊಂಡ ಈ ಸಂಸ್ಕೃತಿ ನಮ್ಮ ಋಷಿಮುನಿಗಳ ಕಾಲವನ್ನು ನೆನಪಿಸುತ್ತದೆ.

ತನ್ನ ಸುತ್ತ ಮುತ್ತ ಸಿಗುವ ಅರಳಿ, ಮುಳ್ಳಿನಗಿಡ, ಬೇವು, ತುಳಸಿ, ತೆಂಗು, ಶುಂಠಿ, ನಿಂಬೆ, ವೀಳ್ಯದೆಲೆ, ಏಲಕ್ಕಿ, ಈರುಳ್ಳಿ, ಬೆಳ್ಳುಳ್ಳಿಯಂತಹ ಪೂರ್ಣ ಕೈಗೆ ಸಿಗುವ ಪ್ರಕೃತಿಯ ಸಂಜೀವಿನಿಯನ್ನು 'ಜನಪದ ವೈದ್ಯ'ವೆಂದು ಹೆಸರಿಸಿ ಅನೇಕ ಉಪಯೋಗ ಪಡೆದುಕೊಂಡನು. ಈ ಜನಪದ ವೈದ್ಯವು ಪ್ರಾಚೀನ ಸಹಜ ಮಾರ್ಗ. ಗಾಯ ಅಥವಾ ರೋಗಗಳನ್ನು ಅತೀ ಶೀಘ್ರವಾಗಿ ವಾಸಿಮಾಡಿಕೊಳ್ಳುತ್ತಿದ್ದರು. ಹೀಗೆ ಗ್ರಾಮೀಣ ಜನರ ಬದುಕು ಪೂರ್ಣವಾಗಿ ನೈಸರ್ಗಿಕವಾದ ಔಷಧಿಯನ್ನೇ ಸಂಜೀವಿನಿಯಾಗಿ ಮಾಡಿಕೊಂಡಿತ್ತು.

ಆಯುರ್ವೇದಕ್ಕೂ ಜನಪದ ವೈದ್ಯಕ್ಕೂ ನಿಕಟ ಸಂಬಂಧವಿದೆ. ಜನಪದದ ಮುಂದಿನ ಕ್ರಮವೇ ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿ ಆಯುರ್ವೇದದಲ್ಲಿ ಬಳಸಲಾಗಿದೆ. ಹಳ್ಳಿ ಮದ್ದನ್ನು ತೀರ ಉಪೇಕ್ಷೆಯಿಂದ ಕಾಣುತಿದ್ದ ಕಾಲ ಒಮ್ಮೆ ತೀವ್ರವಾಗಿತ್ತು. ಆದರೆ ಆಧುನಿಕ ವೈದ್ಯ ಪದ್ಧತಿಯಿಂದ ಉಂಟಾಗುವ ಉಪವ್ಯಾಧಿಗಳಿಂದ ಇತ್ತೀಚೆಗೆ ಆಯುರ್ವೇದ, ಹಳ್ಳಿ ಮದ್ದಿನತ್ತ ನಗರ ಪ್ರದೇಶಗಳ ಜನರು ಆಕರ್ಷಣೆಯಾಗುತ್ತಿದ್ದಾರೆ.

ಆಯುರ್ವೇದ, ಹೋಮಿಯೋಪತಿ, ಅಲೋಪತಿ ಮುಂತಾದ ಎಲ್ಲಾ ವೈದ್ಯ ಪದ್ಧತಿಗಳು ಜಾನಪದದ ಸಹಾಯ ಪಡೆದಿವೆ. ಜನಪದರು ಸಸ್ಯಸಂಪತ್ತನ್ನು ಎಷ್ಟರ ಮಟ್ಟಿಗೆ ಪ್ರೀತಿಸುತ್ತಾರೆಂದು ಈ ತ್ರಿಪದಿ ಹೇಳುತ್ತದೆ.

'ತೋಟಕ್ಕೆ ಹೋದಣ್ಣ, ಊಟಕ್ಕೆ ಬರಲಿಲ್ಲ
ತೋಟದ ಹೂವ ತಲೆ ತುಂಬ ಮುಡಕೊಂಡು
ಊಟದ ಹಂಬಲ ಮರೆತಾನ'

ನಾಟಿ ವೈದ್ಯದ ಪ್ರಾಚೀನತೆ

ಸಾಹಿತ್ಯಿಕವಾಗಿ ನಮಗೆ ದೊರೆಯುವ ಮೊತ್ತ ಮೊದಲ ಆಧಾರವೆಂದರೆ "ಕ್ರಿ.ಪೂ ೩ನೇ ಶತಮಾನದ ಅಶೋಕನ ಎರಡನೇ ಶಾಸನ. ಇದರಲ್ಲಿ ಜನರಿಗೆ ಪಶುಗಳಿಗೆ ಔಷಧಿಗಾಗಿ ಉಪಯೋಗವಾಗುವ ಗಿಡ ಮೂಲಿಕೆಗಳನ್ನು ದೇಶ ವಿದೇಶಗಳಿಂದ ಅಶೋಕನು ತರಿಸಿ ನೆಡಿಸಿದ್ದ ಎಂಬ ಮಾತು ನಾಟಿ ವೈದ್ಯಕ್ಕೆ ಆಗ ದೊರೆಯುತ್ತಿದ್ದ ಮನ್ನಣೆಯನ್ನು ತಿಳಿಸುತ್ತದೆ."[೧೫]

"ವೈದ್ಯ ಗ್ರಂಥ ಬರೆದ ಕ್ರಿಶ -೧೧೦೦ ರ ಕೀರ್ತಿ ವರ್ಮನ ಗೋವೈದ್ಯವೇ ಭಾರತೀಯ ಸಾಹಿತ್ಯದಲ್ಲಿ ಮೊಟ್ಟಮೊದಲು ದೊರಕುವ ಲಿಖಿತ ಪುರಾತನ ವೈದ್ಯ ಗ್ರಂಥ. ಅನಂತರ ಕ್ರಿಶ ೧೨೦೦ರ ದೇವೇಂದ್ರ ಮುನಿಯ ಬಾಲಗ್ರಹ ಚಿಕಿತ್ಸೆ ಕ್ರಿಶ ೧೫೦೦ರ ಬಾಚರಸನ ಅಶ್ವವೈದ್ಯ, ಕ್ರಿಶ ೧೨೬೦ ರ ಮಂಗರಾಜನ ಖಗೇಂದ್ರ ಮಣಿದರ್ಪಣ ಮುಂತಾದ ಕೆಲವು ಮುಖ್ಯ ವೈದ್ಯ ಗ್ರಂಥಗಳು ಪ್ರಮುಖವಾದವು"[೧೬]

೧೫೦೦ ರ ಬಾಚರಸ ಅಶ್ವವೈದ್ಯದಲ್ಲಿ "ಶಂಗಿಯ ಬೇರುಂ ವಾಣಿಜದಿಂಗುಂ ಬೆಳ್ಳುಳ್ಳಿ ತಿಗಡೆ ಸೈಂಧದಮಿ, ಪಂಚಾಗಮುಮಂ ಸಮನಾಗಿ ತುರಂಗಕ್ಕಿಕ್ಕುವುದು ಸರ್ವಶೂಲಾಪಹಾರ"[೧೭] ಎಂಬ ಚಿಕಿತ್ಸಾ ವಿಧಾನವನ್ನು ಹೇಳಿವೆ.

೧೫೦೦ ರಲ್ಲಿ ಶ್ರೀಧರ ದೇವನ "ವೈದ್ಯಾಮೃತ" ದಲ್ಲಿ ಮೂಲವ್ಯಾದಿಗೆ "ಅರಿಶಿಣಮುಂ ಚೂರ್ಣಂ ಮಾಡಿ, ಕಳ್ಳಿಯ ಹಾಲು ಕಲೆಸಿ ಎಣ್ಣೆಯು ಪೂಸಿ ಪೊಸುಗೆ ಮೊಳೆ ಕರಗುವುದು" ಎಂಬ ಚಿಕಿತ್ಸೆಗಳು ಹಿಂದಿನಿಂದಲೇ ನಾಟಿವೈದ್ಯದಲ್ಲಿ ಬಳಕೆಗೊಂಡು ಇಂದಿಗೂ ವೈದ್ಯಲೋಕಕ್ಕೆ ಪ್ರೇರಣೆಯಾಗಿದೆ. ಕೊಡವರು ಮೂಲತಃ ಪ್ರಕೃತಿಪ್ರಿಯರು ಪ್ರಕೃತಿ ಒಡನಾಡಿಗಳು, ಇವರು ತಮ್ಮದೇ ಆದ ದೇಸಿ ಔಷಧಿಯನ್ನು. ಕಂಡುಕೊಂಡಿದ್ದಾರೆ. ಕೊಡವರು ಸಮತೋಲನ ಕಾಪಾಡುವ, ಆಹಾರ ದೇಹದ ಆರೋಗ್ಯ ವೃದ್ಧಿಸುವ ಪೌಷ್ಠಿಕಾಂಶದ ಆಹಾರವನ್ನು ಸೇವಿಸುವುದರ ಜೊತೆಗೆ ನಾಟಿ ವೈದ್ಯ ಪದ್ಧತಿಯನ್ನು ಉಪಯೋಗಿಸಿ, ಪ್ರಕೃತಿ ಜನ್ಯ, ಹಸುರು ಔಷಧಿ ಬಳಸಿ ಅನೇಕ ಕಾಯಿಲೆಗಳನ್ನು ವಾಸಿಮಾಡಿಕೊಳ್ಳುತ್ತಾರೆ. ಅಲೊಪತಿ ವೈದ್ಯದ ಆಗಮನದಿಂದಾಗಿ ಜನಪದ ವೈದ್ಯ ಮಸುಕಾದರೂ ಕೊಡಗಿನ ಹಳ್ಳಿಗಳಲ್ಲಿ ಇಂದಿಗೂ ನಾಟಿ ಔಷಧ ಬಳಕೆ ಆಧುನಿಕ ಪದ್ಧತಿಗೆ ಸವಾಲೊಡ್ಡುತ್ತಿದೆ. ಪ್ರಸ್ತುತ ಕೊಡವರ ಜನಪದ ವೈದ್ಯ ಪದ್ಧತಿಯನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅನುಭವಿ ವಕ್ತೃಗಳು ನೀಡಿದ ಅಮೂಲ್ಯ ಔಷಧಿಗಳ ಉಪಯೋಗಗಳನ್ನು ಕುರಿತು ಇಲ್ಲಿ ಮಾನವ ವೈದ್ಯ, ಪಶುವೈದ್ಯ ಎಂದು ವಿಂಗಡಿಸಿ ವಿವರಿಸಲಾಗಿದೆ.

ಮಾನವ ವೈದ್ಯ

ಕೆಮ್ಮು: ಕೊಡಗಿನಲ್ಲಿ ಅಧಿಕ ಮಳೆ ಹಾಗೂ ಚಳಿಯಿಂದಾಗಿ ಶೀತ ಮೂಲದ ಕೆಮ್ಮು ಎಲ್ಲರಿಗೂ ಬರುತ್ತದೆ. ತಮ್ಮ ಮನೆಯಲ್ಲಿಯೇ ಕೆಮ್ಮಿಗೆ ಔಷಧಿಯನ್ನು ತಯಾರಿಸುತ್ತಾರೆ.

೧) ಕಪ್ಪು ತುಳಸಿಯ ರಸವನ್ನು ಜೇನಿನಲ್ಲಿ ಬೇರಿಸಿ ಕರಿಮೆಣಸು ಪುಡಿಯನ್ನು ಕಲಸಿ ಸೇವಿಸುತ್ತಾರೆ.

೨) ತುಂಬೆರಸವನ್ನು ಜೇನಿನ ಜೊತೆ ಮಿಶ್ರಣ ಮಾಡಿ ಕುಡಿಸುತ್ತಾರೆ.

೩) ಜೇನಿನ ಜೊತೆ ಒಂದು ಚಮಚ ಬ್ರಾಂದಿ, ಬಿಸಿನೀರು ಬೆರೆಸಿ ಕುಡಿಸುತ್ತಾರೆ.

೪) ಕರಿಮೆಣಸಿನ ಪುಡಿಯ ಜೊತೆ ಜೇನನ್ನು ಕಲಸಿ ತಿನ್ನಿಸುತ್ತಾರೆ.

ಭೇದಿ

೧) ಆಹಾರದ ವ್ಯತ್ಯಾಸದಿಂದಾಗಿ ಹೊಟ್ಟೆ ಕೆಟ್ಟು ಭೇದಿಯಾದಾಗ ಜಾಯಿಕಾಯಿ ದಾಳಿಂಬೆಯ ಬೀಜವನ್ನು ಮಣ್ಣಿನ ಮಡಿಕೆಯಲ್ಲಿಟ್ಟು ಬಾಯಿ ಕಟ್ಟಿ ಕೆಮ್ಮಣ್ಣನನ್ನು ಮೆತ್ತಿ ಬೆಂಕಿ ಕೆಂಡದ ಮೇಲೆ ಇಟ್ಟು ಕಾಯಿಸುತ್ತಾರೆ. ಕುಡಿಕೆಯೊಳಗಿನ ಔಷಧಿಯನ್ನು ನುಣ್ಣಗೆ ಅರೆದು ಮಜ್ಜಿಗೆ ಜೊತೆ ಬೆರೆಸಿ ಕುಡಿಸಿದಾಗ ತಕ್ಷಣ ಭೇದಿ ನಿಲ್ಲುತ್ತದೆ.

೨) ಕಚ್ಚುಂಡೆರಸ (ಸಣ್ಣದಾದ ಕಹಿ ಸುಂಡೆಕಾಯಿ)ವನ್ನು ಜಂತು ಹುಳುಗಳ ನಾಶಕ್ಕಾಗಿ ಖಾಲಿ ಹೊಟ್ಟೆಗೆ ಕುಡಿಸಿತ್ತಾರೆ.

೩) ದಾಳಿಂಬೆ ಹಣ್ಣಿನ ಸಿಪ್ಪೆಯನ್ನು ನೀರಿನ ಜೊತೆ ಕುದಿಸಿ ಆರಿದ ಮೇಲೆ ಗಟ್ಟಿಮೊಸರು ಬೆರೆಸಿ ಕುಡಿಸುತ್ತಾರೆ.

೪) ಕಾಡು ಮಾವಿನ ಮರದ ಚೆಕ್ಕೆ, ನೆಲ್ಲಿಕಾಯಿ ಬೀಜವನ್ನು ಅರೆದು ಹೊಕ್ಕಳಿನಭಾಗಕ್ಕೆ ಮಂದವಾಗಿ ಸವರುತ್ತಾರೆ.

೫) ಎಳೆ ಮಗುವಿಗೆ ಕಚ್ಚುಂಡೆ ರಸವನ್ನು ಎದೆಹಾಲಿನಲ್ಲಿ ಬೆರೆಸಿ ಕುಡಿಸುತ್ತಾರೆ.

೬) ಮಕ್ಕಳಿಗೆ ಹೊಟ್ಟೆ ನೋವು ಬಂದರೆ ವೀಳ್ಯದೆಲೆ ಬೆಳ್ಳುಳ್ಳಿ ಉಪ್ಪು ಬೆರೆಸಿ ರಸವನ್ನು ಕುಡಿಸುತ್ತಾರೆ. ಕಾಲು ದೂಳಿನಿಂದ ಹೊಟ್ಟೆನೋವು ಬಂದಿದ್ದರೆ ನಿಂಬೆಹಣ್ಣನ್ನು ಕುಯ್ದು ಬೆಳ್ಳುಳ್ಳಿ ಉಪ್ಪು ಮೆಣಸಿನಕಾಯಿಯನ್ನು ನಿವಾಳಿಸಿ ಇಷ್ಟದೇವರನ್ನು ನೆನೆದು ಎಸೆಯುತ್ತಾರೆ. ಮಕ್ಕಳಿಗೆ ದೃಷ್ಟಿಯಾದರೆ ನೀರು ಸುಣ್ಣ ಅರಿಸಿನ, ಇದ್ದಿಲು, ಅನ್ನದ ಅಗುಳನ್ನು ತಟ್ಟೆಗೆ ಬೆರೆಸಿ ಬತ್ತಿ ಅದ್ದಿಸಿ ನಿವಾಳಿಸಿ ಎರೆಚುತ್ತಾರೆ.

ಮೂಲವ್ಯಾಧಿ

'ಮುಟ್ಟಿದರೆ ಮುನಿ' ಸೊಪ್ಪಿನ ಬೇರನ್ನು ಚೆನ್ನಾಗಿ ತೊಳೆದು ಇದರ ಜೊತೆ ನುಚ್ಚಕ್ಕಿ ಹಾಕಿ ಬೇಯಿಸಿದ ರಸವನ್ನು ನಲವತ್ತು ದಿನ ಸೇವಿಸಿದರೆ ಮೂಲವ್ಯಾಧಿ ಗುಣವಾಗುತ್ತದೆ. ಸೊಪ್ಪನ್ನು ಅರೆದು ಪುಡಿಮಾಡಿ ಮೈಕೈ ಗಾಯಕ್ಕೆ ಕಟ್ಟಿದರೆ ರಕ್ತಸ್ರಾವ ನಿಂತು ಗಾಯ ವಾಸಿಯಾಗುತ್ತದೆ.

ಸೊಂಟ ನೋವು

ಕಾಕೆ ಪರಂಡಿ ಚಿಲಿಕಿಯ ಒಳಗಿನ ತಿರುಳಿಗೆ ಸಾಸಿವೆ ತೆಂಗಿನಕಾಯಿ ಸೇರಿಸಿ ಅರೆದು ರಸವನ್ನು ಕುಡಿದರೆ ಸೊಂಟನೋವು ಕಡಿಮೆಯಾಗುತ್ತದೆ.

ದಮ್ಮು: ಆಡುಲೋಡ ಸೊಪ್ಪಿನ (ಆಡು ಮುಟ್ಟದ ಸೊಪ್ಪು) ಸುಳಿಯ ಜೊತೆಗೆ ಬೆಲ್ಲ ಕರಿಮೆಣಸನ್ನು ಅರೆದು ಲೇಹದ ರೂಪದಲ್ಲಿ ಸೇವಿಸಿದರೆ ದಮ್ಮು ಕಡಿಮೆಯಾಗುತ್ತದೆ.

ಉಳುಕು: ಪಣಮದ್ದ್, ಗಾಳಿಸೊಪ್ಪು, ಬೆಳ್ಳುಳ್ಳಿಯನ್ನು ಜಜ್ಜಿ ರಸವನ್ನು ಸೀಮೆಎಣ್ಣೆಯ ಜೊತೆ ಬೆರೆಸಿ ಉಳುಕಿದ ಸ್ಥಳಕ್ಕೆ ಉಜ್ಜಿ ಮೇಲಿನಿಂದ ತಣ್ಣೀರನ್ನು ಹಾಕುತ್ತಾರೆ.

ಒತ್ತಲೆನೋವು: ಉತ್ತರಾಣಿ ಬೀಜವನ್ನು ಶುಂಠಿಜೊತೆ ಪುಡಿಮಾಡಿ ಕೆಂಪು ಕಲ್ಲುಸಕ್ಕರೆ ಬೆರೆಸಿ ಎರಡು ಹನಿ ಮೂಗಿಗೆ ಹುಯ್ಯುತ್ತಾರೆ. ಒಣಶುಂಠಿಯನ್ನು ಜಜ್ಜಿ ಆ ರಸವನ್ನು ಹಣೆಗೆ ತಿಕ್ಕಿ ಬಟ್ಟೆಯಿಂದ ಕಟ್ಟಿದರೆ ನೋವು ಶಮನವಾಗುತ್ತದೆ.

ಕೂದಲು ಉದುರುವಿಕೆ ತಡೆಗಟ್ಟುವಿಕೆ

ಎಳ್ಳೆಣ್ಣೆ, ತೆಂಗಿನೆಣ್ಣೆ, ಲೋಳಿಸರ, ಮೆಂತ್ಯ, ಬಿಳಿದಾಸವಾಳ ಸೊಪ್ಪು, ಕರಿಬೇವು, ಕರಿಜೀರಿಗೆ, ವನಗೊನ ಸೊಪ್ಪು, ನೆಲ್ಲಿಕಾಯಿ, ಮೆಹಂದಿಸೊಪ್ಪು, ಕರಿತೊಳಸಿ, ಕುರುಂದೋಟಿಬೇರು ಎಲ್ಲವನ್ನು ಸೇರಿಸಿ ಕುದಿಸಿ ಸೋಸಿದ ಎಣ್ಣೆಯನ್ನು ತಲೆಕೂದಲಿಗೆ ಹಚ್ಚುತ್ತಾರೆ.

ಹಲ್ಲುನೋವು : ಕಪ್ಪುತುಳಸಿ ಎಲೆ, ಕರಿಮೆಣಸು, ಲವಂಗವನ್ನು ಅರೆದು ಹಲ್ಲುನೋವಿನ ಭಾಗಕ್ಕೆ ಇಟ್ಟರೆ ನೋವು ಶಮನವಾಗುತ್ತದೆ.

ಕಫ: ತುಳಸಿ ರಸವನ್ನು ಜೇನು ತುಪ್ಪದೊಂದಿಗೆ ಬೆರೆಸಿ ಕುಡಿಸುತ್ತಾರೆ. 'ಕೈಹುಳಿ' ಸಿಪ್ಪೆಯ ಸೊನೆಯನ್ನು ಜೇನಿನೊಂದಿಗೆ ಸೇವಿಸುತ್ತಾರೆ. ಮತ್ತಿಮರದ

ಚೆಕ್ಕೆ ಮತ್ತು ಅಕ್ಕಿ ತೊಳದ ನೀರನ್ನು ಸೇರಿಸಿ ಚೆನ್ನಾಗಿ ರುಬ್ಬಿ ನುಣ್ಣಗಾದ ರಸಕ್ಕೆ ಕೆಂಪು ಕಲ್ಲುಸಕ್ಕರೆ ಬೆರೆಸಿ ಕಾಲಿ ಹೊಟ್ಟೆಗೆ ಕುಡಿಸುತ್ತಾರೆ.

'ಕೈಹುಳಿ' ಯನ್ನು ಸುಟ್ಟು ನೆತ್ತಿಗೆ ಮೂರು ದಿನ ಬೆಳಗಿನ ಜಾವ ಕಟ್ಟುವುದರಿಂದ ತಲೆಸುತ್ತು, ವಾಕರಿಕೆ ಕಡಿಮೆಯಾಗುತ್ತದೆ. ಹಾಗೆಯೇ ಖಾಲಿ ಹೊಟ್ಟೆಗೆ ಮೂರು ದಿನ ರಸವನ್ನು ಕುಡಿದರೆ ಪಿತ್ತ ಕಮ್ಮಿಯಾಗಬೇಕಿದೆ.

ಉರಿ ಮೂತ್ರ ಶಮನ: ಪಾಡಲೆ ಸೊಪ್ಪು (ಪಣೆಯ ಪುಟ್ಟು)ನ್ನು ಜೀರಿಗೆ ಜೊತೆ ಚೆನ್ನಾಗಿ ಅರೆದು ಕುಡಿಸುತ್ತಾರೆ. ಅಕ್ಕಿ ತೊಳೆದ ನೀರಿಗೆ ಎಳನೀರು, ಹಾಲು, ಶುಂಠಿರಸ ಮತ್ತು ಕಲ್ಲು ಸಕ್ಕರೆಯನ್ನು ಬೆರೆಸಿ ಒಂದು ವಾರ ಕುಡಿಸಿದರೆ ದೇಹದ ಉಷ್ಣತೆ ಕಡಿಮೆಯಾಗಿ ಉರಿಮೂತ್ರದ ಸಮಸ್ಯೆ ಶಮನವಾಗುತ್ತದೆ.

ಹುಳಿತೇಗು: (ಗ್ಯಾಸ್ಟ್ರಿಕ್ ಸಮಸ್ಯೆ) ಕಚ್ಚುಂಡೆ (ಕಹಿ ಸುಂಡೆಕಾಯಿ) ಗಿಡದ ಬೇರನ್ನು ಜಜ್ಜಿದ ರಸಕ್ಕೆ ಹಸುವಿನ ಹಾಲನ್ನು ಖಾಲಿ ಹೊಟ್ಟೆಗೆ ಏಳುದಿನ ಸೇವಿಸಿದರೆ ಹುಳಿತೇಗು ಹೊಟ್ಟೆ ಉಬ್ಬರ ಕಡಿಮೆಯಾಗುತ್ತದೆ.

ಕಿರು ನಾಲಿಗೆ ಸೋಕಿದಾಗ : ಶೀತ ಉಂಟಾಗಿ ಕಿರುನಾಲಿಗೆ ಸೋಕಿದಾಗ ಉಂಟಾದ ಕೆಮ್ಮಿಗೆ ಏಲಕ್ಕಿಯನ್ನು ಬೆಂಕಿ ಕೆಂಡದಲ್ಲಿ ಸುಟ್ಟು ಪುಡಿಮಾಡಿ ಜೇನಿನಲ್ಲಿ ಮಿಶ್ರಣಮಾಡಿ ಸೇವಿಸುತ್ತಾರೆ. ತುಂಬೆಸೊಪ್ಪು ಮತ್ತು ಸುಣ್ಣವನ್ನು ಅರೆದು ಕಿರುನಾಲಿಗೆಗೆ ಮುಟ್ಟಿಸಿದಾಗ ಕೆಮ್ಮು ಕಡಿಮೆಯಾಗುತ್ತದೆ.

ಬಾಯಿ ಹುಣ್ಣು : ಮಾದುಳಿ (ಗಜೆ ನಿಂಬೆ)ಯ ಮರದ ಚಕ್ಕೆಯನ್ನು ಜಜ್ಜಿ ಹಸುವಿನ ತುಪ್ಪದಲ್ಲಿ ಕುದಿಸಿ ನಾಲಿಗೆಗೆ ಸವರಿದರೆ ಬಾಯಿಹುಣ್ಣು ಕಡಿಮೆ ಆಗುತ್ತದೆ. ಬಳ್ಳಿ ಬಸಲೆ ಸೊಪ್ಪನ್ನು, ಕೊಟ್ಟೆ ಹಣ್ಣಿನ ಮರದ ಚಕ್ಕೆಯನ್ನು ಬೇಯಿಸಿ ರಸತೆಗೆದು ಗಂಜಿಯನ್ನು ಕಾಯಿಸಿ ಕುಡಿದರೆ ಬಾಯಿ ಹುಣ್ಣು ಗುಣವಾಗುವುದು.

ಸರ್ಪಸುತ್ತು : ಮೈ ಬೆನ್ನಹಿಂದೆ, ಕುತ್ತಿಗೆ ಭಾಗ ಸೊಂಟದ ಯಾವುದೇ ಭಾಗದಲ್ಲಿ ಹಾವಿನಾಕಾರದಲ್ಲಿ ಅಂಕುಡೊಂಕು ಸುತ್ತಿದಂತೆ ಕಾಣುತ್ತದೆ. ಇದು ಕಾಣಿಸುವ ಮೊದಲು ಜ್ವರ ಬರುತ್ತದೆ. ನವೆ, ಹಾಗೂ ಉರಿ ಹೆಚ್ಚಾಗಿರುತ್ತದೆ. ಮುತ್ತುಗ ಮರದ ಕಾಯಿಯನ್ನು ಒಣಗಿಸಿ ಅದರ ಪುಡಿಯಿಂದ ತಯಾರಿಸಿದ ಕಷಾಯವನ್ನು ಬೇಂಬುರ (ಬಜೆ) ಜೊತೆ ಮಿಶ್ರಣಮಾಡಿ ಮೈಗೆ ಹಚ್ಚಬೇಕು. ಏಳು ದಿನ ಸರ್ಪಸುತ್ತಿಗೆ ಈ ಔಷಧಿ ಹಚ್ಚಿದರೆ ಗುಣ ಕಾಣುತ್ತದೆ.ಈ ರೋಗ ಗುಣವಾಗುವವರೆಗೆ ಮಾಂಸಾಹಾರ, ಎಣ್ಣೆ, ತುಪ್ಪ, ಖಾರ ಹುಳಿ, ಉಪ್ಪು, ತ್ಯಜಿಸಬೇಕಾಗುತ್ತದೆ. ಶುದ್ಧವಾಗಿರುವುದುರಿಂದ ಈ ಕಾಯಿಲೆ ಉಪಶಮನ ವಾಗುವುದು.

ಸಕ್ಕರೆ ಕಾಯಿಲೆ (ಮದುಮೇಹ) : ಮಾನವ ದೇಹದಲ್ಲಿ ಸಕ್ಕರೆ ಅಂಶ ಹೆಚ್ಚಾಗಿ 'ಮದು ಮೇಹ' ಉಂಟಾಗುತ್ತದೆ. ಇತ್ತೀಚೆಗೆ ಸಾಮಾನ್ಯವಾಗಿ ಈ ಕಾಯಿಲೆ ಬರುವುದುಂಟು. ಆಧುನಿಕತೆಯ ಆಹಾರ ಪದ್ಧತಿ ಮಾನಸಿಕ ಒತ್ತಡದಿಂದಾಗಿ ಬರುವ ಈ ಕಾಯಿಲೆಗೆ ಮನೆಯಲ್ಲಿಯೇ ಕೆಲವು ಔಷಧಿಗಳನ್ನು ಮಾಡುತ್ತಾರೆ. ನೇರಳೆ ಹಣ್ಣಿನ ಬೀಜ, ಎಲಿಕೆಮಿಸೊಪ್ಪು(ಒಂದೆಲಗ) ಮೆಂತ್ಯಸೊಪ್ಪು, ಬೇವಿನಸೊಪ್ಪು, ಕರಿಬೇವಿನ ಸೊಪ್ಪು ಮುಂತಾದವುಗಳನ್ನು ಒಣಗಿಸಿ ಪುಡಿ ಮಾಡಿಟ್ಟುಕೊಂಡು ಪ್ರತಿದಿನ ಬೆಳಗ್ಗೆ ಖಾಲಿ ಹೊಟ್ಟೆಗೆ ಎರಡು ಚಮಚ

ಪುಡಿಯನ್ನು ಅರ್ಧ ಕಪ್ಪು ಹಾಲಿನ ಜೊತೆ ಮಿಶ್ರಣ ಮಾಡಿ ಒಂದು ತಿಂಗಳು ಕುಡಿದರೆ ಸಕ್ಕರೆ ಅಂಶ ಬೇಗ ನಿಯಂತ್ರಣಕ್ಕೆ ಬರುವುದು. ಕುಸುಬಲಕ್ಕಿ ಅನ್ನ, ಹಾಗಲಕಾಯಿ ಸೇವನೆ, ನೇರಳೆಹಣ್ಣಿನ ರಸವನ್ನು ಕುಡಿದರೆ ಸಕ್ಕರೆ ಕಾಯಿಲೆಯಿಂದ ಮುಕ್ತಿ ಪಡೆದು ನೆಮ್ಮದಿಯ ಜೀವನ ನಡೆಸಬಹುದು.

